Pandit Teaches the Bible Series

Let's Read OT Poetry and Wisdom books!

Part 1 (Job and Psalms)

Kannada Edition

Author: T. Pandit

Translator: R. Prakash Naik

ಕನ್ನಡ ಸತ್ಯವೇದದ ಪುಸ್ತಕಗಳ ಸರಣಿ

ಹಳೇ ಒಡಂಬಡಿಕೆಯ ಪದ್ಯ ಮತ್ತು ಜ್ಞಾನ ಪುಸ್ತಕಗಳನ್ನು ಓದೋಣ!

ಭಾಗ 1

ಪ್ರಧಾನ ಸಂಪಾದಕರು

ಟಿ. ಪಂಡಿತ್

ಲೇಖಕರು

ಟಿ. ಪಂಡಿತ್

ಅನುವಾದಕರು

ಆರ್ ಪ್ರಕಾಶನಾಯ್ಕ್

ಲೇಖಕರ ಪರಿಚಯ

ಓ ಪಂಡಿತ್ ರವರು ಒಬ್ಬ ಶಿಕ್ಷಣತಜ್ಞರಾಗಿಯೂ ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶುಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಆರ್. ಪ್ರಕಾಶ್ ನಾಯ್ಕ ರವರು ಒಬ್ಬ ಎಂ.ಎ ಮತ್ತು ಎಂ.ಡಿವ್ ಪದವೀದದರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೇ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನ ಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ.

ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಸೆಪ್ಟಂಬರ್ 2025

ಯೋಬ

ಯೋಬ ಪುಸ್ತಕಕ್ಕೆ ಪೀಠಿಕೆ

ಹೆಸರು, ಗ್ರಂಥಕರ್ತ ಮತ್ತು ಸಮಯ

ಈ ಪುಸ್ತಕದ ಶೀರ್ಷಿಕೆಯು ಇದರಲ್ಲಿನ ಮುಖ್ಯ ವ್ಯಕ್ತಿಯ ಮೇಲೆ ಆಧಾರವಾಗಿದೆ, ಯೋಬ ಎಂಬ ಇಸ್ರಾಯೇಲಿನಲ್ಲಿದ್ದ ವ್ಯಕ್ತಿಯು ಪ್ರಾಚೀನ ಕಾಲದಲ್ಲಿ ಪರಿಶುದ್ಧಭೂಮಿ ಮತ್ತು ಮೃತಸಮುದ್ರದ ದಕ್ಷಿಣ ಪೂರ್ವದಲ್ಲಿನ ಊಚ್ (ಎದೋಮ್) ಎಂಬ ಪ್ರಾಂತ್ಯದಲ್ಲಿ ವಾಸವಾಗಿದ್ದನು. ಇಬ್ರಿಯ ಕುಲಪತಿಗಳೊಂದಿಗೆ ಯೋಬನು ಪ್ರಚಲಿತ ಸಂಪರ್ಕದಲ್ಲಿದ್ದನೆಂದು ತೊರುತ್ತದೆ. ಅವರಂತೆ ಆತನ ಸಂಪತ್ತು ಸಹ ಆತನಿಗಿರುವ ಜಾನುವಾರುಗಳಲ್ಲಿ ಅಳೆಯಲ್ಪಟ್ಟಿದೆ ಮತ್ತು ಅವರಂತೆ ಆತನೂ ಸಹ ತನ್ನ ಕುಂಟುಂಬಕ್ಕಾಗಿ ಒಬ್ಬ ಯಾಜಕನಾಗಿ ಸೇವೆ ಮಾಡಿದನು .

ಯೋಬನ ಕುರಿತಾಗಿನ ಪುಸ್ತಕವು ಯೋಬನಿಂದ ಬರೆಯಲ್ಪಟ್ಟಿಲ್ಲ, ಆದರೆ ಒಬ್ಬ ಅನಾಮಿಕ ಇಸ್ರಾಯೇಲ್ಯನಿಂದ ಬರೆಯಲ್ಪಟ್ಟಿದೆ. ಗ್ರಂರ್ಥಕರ್ತನು ಯಾವಾಗ ಜೀವಿಸಿದ್ದನು ಎಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಇದು ಬಾಬೇಲಿನ ಸೆರೆಯ ಮೊದಲು ಅಥವಾ ನಂತರದಲ್ಲಿ ಯಾವ ಸಮಯದಲ್ಲಿ ಸಹ ಆಗಿರಬಹುದು.

ವಿಷಯಾಂಶ ಮತ್ತು ವಿಷಯವಸ್ತು

ಯೋಬನು ಫಕ್ಕನೆ ದುರಂತದಿಂದ ಹೊಡೆಯಲ್ಪಡುತ್ತಾನೆ. ದುರಂತಮಯ ಪರಿಸ್ಥಿತಿಗಳ ಮೂಲಕ ಆತನು ತನಗಿರುವ ಆಸ್ತಿ, ಜೀವನಾಂಶ, ಆತನ ಮಕ್ಕಳು ಮತ್ತು ತನ್ನ ಆರೋಗ್ಯ ಎಲ್ಲವನ್ನೂ ಕಳಕೊಳ್ಳುತ್ತಾನೆ. ದೇವರಿಗೆ ನಂಬಿಗಸ್ತನಾದ ಮತ್ತು ದೇವರಿಂದ ಆಶೀರ್ವದಿಸಲ್ಪಟ್ಟ, ನೀತಿವಂತ ಮತ್ತು ಯಥಾರ್ಥ ವ್ಯಕ್ತಿಯಾದ ತನಗೇ ಯಾಕೆ ಈ ದುರಂತ ಸಂಭವಿಸಿತೆಂದು ಸ್ವತಃ ಯೋಬನಿಗೆ ಅರಿವಾಗಲಿಲ್ಲ.

ಇಸ್ರಾಯೇಲ್ಯರ ಆತ್ಮೀಕ ಜ್ಞಾನದ ದೈವಶಾಸ್ತ್ರದ ಪ್ರಕಾರ ಬಾಧೆಪಡುವುದು ದೇವರ ಮುಂದೆ ಒಬ್ಬ ಮನುಷ್ಯನ ಅಪರಾಧದ ಫಲಿತಾಂಶವಾಗಿದೆ ಮತ್ತು ಆಶೀರ್ವಾದವು ದೇವರ ಮುಂದೆ ಒಬ್ಬ ವ್ಯಕ್ತಿಯ ನೀತಿವಂತಿಕೆಯ ಫಲವಾಗಿದೆ. ಇದನ್ನೇ ಯೋಬನು ನಂಬಿದ್ದನು. ಇದನ್ನೇ ಆತನ ಸ್ನೇಹಿತರು **"ದುಃಖಿತ ಸಮಾಧಾನ ಕರ್ತನು"** (16:2) ಆತನಿಗೆ ಜ್ಞಾಪಿಸುತ್ತಿದ್ದರು. ಹಾಗಾಗಿ ಕೆಲವು ಅರಿಕೆ ಮಾಡದೆ ಇರುವ ಪಾಪಗಳೇ ಯೋಬನ ಬಾಧೆಗೆ ಕಾರಣವೆಂದು ಅವರು ಹೇಳಿದರು.

ಆದರೆ ಅವರು ಹೇಳುವುದು ತಪ್ಪೆಂದು ಓದುಗರಿಗೆ ಈಗಾಗಲೇ ತಿಳಿದಿದೆ. ಆತನ ಪುಸ್ತಕದ ಪ್ರಸ್ತಾವನೆಯಲ್ಲೇ ಯೋಬನ ಬಾಧೆಗೆ ಕಾರಣವು ಆತನ ನೀತಿವಂತಿಕೆಯನ್ನು ಪರೀಕ್ಷಿಸುವುದಾಗಿತ್ತು ಎಂದು ಗ್ರಂಥಕರ್ತನು ತಿಳಿಸಿರುತ್ತಾನೆ. ಯೋಬನು ತನ್ನ ಸ್ವಾರ್ಥದ ನಿಮಿತ್ತ ನೀತಿವಂತನಾಗಿದ್ದನೆಂದು ಸೈತಾನನು ದೇವರ ಮುಂದೆ ದೂರುತ್ತಾನೆ. ಆತನು ನಿಜವಾಗಿಯೂ ನೀತಿವಂತನಲ್ಲ, ಆದರೆ ತನ್ನ ಭಕ್ತಿಯಿಂದ ದೇವರ ಆಶೀರ್ವಾದವನ್ನು ಲಾಭವಾಗಿ ಸಂಪಾದಿಸಿದ್ದಾನೆಂದು ದೂರಿದನು. ಸೈತಾನನು ಹೇಳಿದ್ದು ತಪ್ಪೆಂಬುವುದನ್ನು ಸಾಬೀತುಪಡಿಸಲು ದೇವರು ಯೋಬನನ್ನು ಪರೀಕ್ಷಿಸುವುದಕ್ಕೆ ಬಿಟ್ಟನು. ಯೋಬನು ಮೊದಲು ತನ್ನ ಆಸ್ತಿಯನ್ನೂ, ತನ್ನ ಮಕ್ಕಳ ಮತ್ತು ಸಮಾಜದಲ್ಲಿನ ತನ್ನ ಸ್ಥಾನಮಾನವೆಲ್ಲವನ್ನೂ ಕಳಕೊಳ್ಳುತ್ತಾನೆ. ಆ ನಂತರದ ಆತನು ತನ್ನ ಆರೋಗ್ಯವನ್ನೂ ಕಳಕೊಳ್ಳುತ್ತಾನೆ. ಆತನ ಆಶೀರ್ವದಿತ ಜೀವಿತವು ಫಕ್ಕನೆ ಶೋಕದ ಜೀವಿತವಾಗಿಬಿಡುತ್ತದೆ. ಅದು ಯಾಕೆ ಹಾಗಾಯಿತೆಂದು ಆತನಿಗೆ ತಿಳಿಸಲಾಗಲಿಲ್ಲ.

ಒಂದು ಹಂತದಲ್ಲಿ ಯೋಬನ ಪುಸ್ತಕವು ಬಾಧೆಪಡುವುದರ ಕುರಿತಾಗಿದೆ ಮತ್ತು ಒಳ್ಳೆಯ ಜನರಿಗೆ ಸಹ ಯಾಕೆ ಕೆಟ್ಟದ್ದು ಆಗುತ್ತದೆಂಬುದಕ್ಕೆ ಒಳನೋಟಗಳನ್ನು ಕೊಡುತ್ತದೆ. ಆದರೆ ಈ ಪುಸ್ತಕದ ಮುಖ್ಯ ನೋಟವು ಬೇರೆಯದಾಗಿದ್ದು ಇದು ನಾಟಕೀಯಕ್ಕಿಂತಲೂ ಹೆಚ್ಚಾಗಿ ಕ್ರಿಯಾತ್ಮಕವಾದದ್ದಾಗಿದೆ. ಇದು ಹೆಚ್ಚೂ ಕಡಿಮೆ ಪ್ರಾಥಮಿಕ ಚಿಕಿತ್ಸೆಯ ಕೈಪಿಡಿಯಂತಿದೆ. ಈ ರೀತಿಯ ಕೈಪಿಡಿಯು ನೀವು ಯಾಕೆ ನಿಮ್ಮ ಕೈಯನ್ನು ಮುರಿದು ಕೊಂಡಿರಿ ಎಂಬುದಕ್ಕೆ ವಿಭಿನ್ನವಾದ ಅನೇಕ ಕಾರಣಗಳ ಬಗ್ಗೆ ಹೇಳುವುದಿಲ್ಲ. ನಿಮ್ಮ ಕೈ ಮುರಿದು ಹೋದಾಗ ಏನನ್ನು ಮಾಡಬೇಕು ಎಂಬುದನ್ನು ವಿವರಿಸುವುದರಲ್ಲಿ ಇದು ಆಸಕ್ತಿಯುಳ್ಳದ್ದಾಗಿದೆ. ಅದೇ ರೀತಿ ಯೋಬನ ಪುಸ್ತಕವು ಬಾಧೆಯು ಯಾಕೆ ಉಂಟಾಗುತ್ತದೆಂಬುದಕ್ಕೆ ಕಾರಣಗಳ ಪಟ್ಟಿಯನ್ನು ಕೊಡುವದಿಲ್ಲ. ಬಾಧೆಗಳು ಸಂಭವಿಸುವಾಗ ನಾವು ದೇವರೆದುರು ಹೇಗೆ ಪ್ರತಿಕ್ರಿಯಿಸಬೇಕು ಎಂಬುದರ ಬಗ್ಗೆ ಇದು ಹೆಚ್ಚು ಗಮನ ಹರಿಸುತ್ತದೆ. ಯೋಬನ ಪುಸ್ತಕವು ನಾವು ಬಾಧೆಪಡವಾಗಲೂ ಹಿಂಬಾಲಿಸಲು ದೇವರು ಯೋಗ್ಯನಾ ಎಂಬ ಬಗ್ಗೆ ತಿಳಿಸುವ ಪುಸ್ತಕವಾಗಿದೆ, ಇದು ಆತನು ನಮ್ಮ ಜೀವನವನ್ನು ದುಃಖಮಯವಾಗಿ ಮಾಡುವಂತೆ ಕಾಣುವಾಗ ಆತನು ನಂಬಲು ಅರ್ಹನಾ ಎಂಬುದರ ಬಗೆಗಿನ ಪುಸ್ತಕವಾಗಿದೆ.

ಯೋಬನು ಪರೀಕ್ಷೆಯಲ್ಲಿ ಪಾಸಾದನು. ಆತನು ದೇವರನ್ನು ಪ್ರಶ್ನಿಸಿರಬಹುದು. ಆತನ ಎಲ್ಲಾ ಬಾಧೆಯ ಮೂಲಕ ಮತ್ತು ಆತನ ಬಾಧೆಯ ವೇಳೆಯಲ್ಲಿ ಆತನೊಂದಿಗೆ ದೇವರು ಮಾತನಾಡಿದ ನುಡಿಗಳ ಮೂಲಕ ಯೋಬನು ದೇವರು ಮತ್ತು ತನ್ನ ಬಗ್ಗೆ ಆಳವಾದ ತಿಳುವಳಿಕೆಯನ್ನು ಹೊಂದಿದನು. ಆತನು ದೇವರನ್ನು ಒಂದು ಹೊಸ ಬೆಳಕಿನಡಿಯಲ್ಲಿ ಕಂಡನು ಮತ್ತು ಈ ಒಂದು ಹೊಸ ತಿಳುವಳಿಕೆಯ ಫಲಿತಾಂಶವಾಗಿ ಆತನು ಪಶ್ಚಾತ್ತಾಪಪಟ್ಟನು. ತನ್ನ ಸ್ನೇಹಿತರಿಂದಲ್ಲ, ಬದಲಾಗಿ ತನ್ನ ಜೀವನದಲ್ಲಿ ದೇವರ ಪ್ರಸನ್ನತೆಯಿಂದ ಯೋಬನು ಆಧರಿಸಲ್ಪಟ್ಟನು.

ದೇವರು ಯೋಬನನ್ನು ಅತ್ಯಧಿಕವಾಗಿ ಮರುಸ್ಥಾಪಿಸುವುದರೊಂದಿಗೆ ಈ ಪುಸ್ತಕವು ಮುಕ್ತಾಯವಾಗುತ್ತದೆ.

ರಚನೆ ಮತ್ತು ಹೊರರೇಖೆ

ಯೋಬನ ಪುಸ್ತಕವು ಸ್ಯಾಂಡ್‌ವಿಚ್ ವಿನ್ಯಾಸವನ್ನು ಹೊಂದಿದೆ. ಇದು ಒಂದು ಚಿಕ್ಕ ಪ್ರಸ್ತಾವನೆ ಮುನ್ನುಡಿಯಿಂದ ಪ್ರಾರಂಭವಾಗಿ ಚಿಕ್ಕದಾದ ಹಿನ್ನುಡಿಯೊಂದಿಗೆ ಮುಕ್ತಾಯವಾಗುತ್ತದೆ (42:7–17), ಎರಡೂ ಸಹ ಗದ್ಯರೂಪದಲ್ಲಿ ಬರೆಯಲ್ಪಟ್ಟಿವೆ. ಸ್ಯಾಂಡ್‌ವಿಚ್‌ನ ನಡುವೆ ದೀರ್ಘವಾದ ಮಾತುಗಳನ್ನು ಒಳಗೊಂಡ ಪುಸ್ತಕದ ಮುಖ್ಯ ಭಾಗವನ್ನು ನಾವು ಕಾಣಬಹುದು. ಎಲ್ಲವೂ ಸಹ ಪದ್ಯರೂಪದಲ್ಲಿ ಬರೆಯಲ್ಪಟ್ಟಿದೆ. ಅದು ಈ ರೀತಿ:

1. ಮುನ್ನುಡಿ (ಅಧ್ಯಾಯ 1–2)
    ಅ. ಯೋಬ ಮತ್ತು ಆತನ ಆಶೀರ್ವಾದಗಳು (1:1–5)
    ಆ. ಯೋಬನು ಪರೀಕ್ಷಿಸಲ್ಪಟ್ಟದ್ದು, ಆತನನ್ನು ಆಧರಿಸಲು ಆತನ ಸ್ನೇಹಿತರಾದ ಎಲೀಫಜ, ಚೋಫರ ಮತ್ತು ಬಿಲ್ದದ ಬರುವುದು (1:6–2:13)
2. ಸಂಭಾಷಣೆ (ಅಧ್ಯಾಯಗಳು 3–27)
    ಅ. ಯೋಬನು ಪ್ರಲಾಪಿಸುವುದು (ಅಧ್ಯಾಯ 3)
    ಆ. ಮೊದಲ ಸುತ್ತಿನ ಮಾತುಗಳು (ಅಧ್ಯಾಯ 4–14)
    ಇ. ಎರಡನೇ ಸುತ್ತಿನ ಮಾತುಗಳು (ಅಧ್ಯಾಯ 15–21)
    ಈ. ಮೂರನೇ ಸುತ್ತಿನ ಮಾತುಗಳು (ಅಧ್ಯಾಯ 22–26)
    ಉ. ಯೋಬನು ವಾದವನ್ನು ಮುಗಿಸುವುದು (ಅಧ್ಯಾಯ 27)
3. ನಿಜವಾದ ಜ್ಞಾನ (ಅಧ್ಯಾಯ 28)
4. ಆತ್ಮಗತ ಸಂಭಾಷಣೆ (ಅಧ್ಯಾಯ 29–37)
    ಅ. ಯೋಬನು ಮೂರು ಮಾತುಗಳನ್ನಾಡುವುದು (ಅಧ್ಯಾಯ 29–31)
    ಆ. ಎಲೀಹು 4 ಮಾತುಗಳನ್ನಾಡುವುದು (32–37)
5. ದೇವರು ಮಾತನಾಡುವುದು: ಯೋಬನು ಪ್ರತಿಕ್ರಯಿಸುತ್ತಾನೆ ಮತ್ತು ಪಶ್ಚಾತ್ತಾಪಪಡುತ್ತಾನೆ (38:1–4,2:6)
6. ಹಿನ್ನುಡಿ/ಉಪಸಂಹಾರ (42:7–17)
    ಅ. ದೇವರ ತೀರ್ಪು (42:7–9)
    ಆ. ಯೋಬನು ಪುನರ್‌ಸ್ಥಾಪಿಸಲ್ಪಡುವುದು (42:10–12)

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಸುಲುಭವಾಗಿ ಮೇಲ್ಕಂಡ ಪಠ್ಯಗಳಲ್ಲಿ ಕಾಣಬಹುದು. ಆದರೆ ಅಲ್ಲಿ ನೋಡುವುದಕ್ಕಿಂತ ಮುನ್ನ ಉತ್ತರಿಸಲು ಪ್ರಯತ್ನಿಸಿದರೆ ನೀವು ಹೆಚ್ಚಾಗಿ ಕಲಿಯುವಿರಿ ಸಾಧ್ಯವಾದಷ್ಟು ನಿಮ್ಮದೇ ಮಾತಿನಲ್ಲಿ ಉತ್ತರಿಸಿದರೆ ಉತ್ತಮ.

1. ಯೋಬನ ಹಿನ್ನಲೆ ಬಗ್ಗೆ ನಮಗೇನು ತಿಳಿದಿದೆ?
2. ಯೋಬನ ಪುಸ್ತಕದ ಗ್ರಂಥಕರ್ತನ ಬಗ್ಗೆ ನಮಗೆ ಏನು ತಿಳಿದಿದೆ?
3. ಯೋಬ ಮತ್ತು ಆತನ ಸ್ನೇಹಿತರು ನಂಬಿದ **"ಬಾಧೆಪಡುವ ದೈವಶಾಸ್ತ್ರವನ್ನು"** ವಿವರಿಸಿರಿ.
4. ಯೋಬನಿಗೆ ತನ್ನ ಬಾಧೆಗೆ ತಿಳಿದಿದ್ದ ಕಾರಣಗಳೇನು? ಮತ್ತು ಈ ಬಗ್ಗೆ ಓದುಗನು ಏನೆಂದು ತಿಳಿದಿದ್ದಾನೆ?
5. ದೇವರನ್ನು ಪ್ರಶ್ನಿಸಿ ಸವಾಲು ಹಾಕಿದಾಗಲೂ ಯೋಬನು ಪರೀಕ್ಷೆಯಲ್ಲಿ ಉತ್ತೀರ್ಣನಾದದ್ದು ಏಕೆ?
6. ಯೋಬನಿಗೆ ಹೇಗೆ ಸಾಂತ್ವಾನ ಸಿಕ್ಕಿತು?
7. **"ಯೋಬ ಪುಸ್ತಕವು ಬಹುತೇಕ ಪ್ರಥಮ ಚಿಕಿತ್ಸಾ ಕೈಪಿಡಿಯಂತಿದೆ".** ಈ ಹೇಳಿಕೆಯನ್ನು ವಿವರಿಸಿ.
8. ಯೋಬ ಪುಸ್ತಕದ **"ಸ್ಯಾಂಡ್‌ವಿಚ್"** ರಚನೆಯನ್ನು ವಿವರಿಸಿ.
9. ಯೋಬ ಪುಸ್ತಕದಲ್ಲಿ ಗದ್ಯ ಮತ್ತು ಪದ್ಯದ ಬಳಕೆಯನ್ನು ವಿವರಿಸಿ.
10. ತನ್ನಷ್ಟಕ್ಕೆ ತಾನೇ ನಿಲ್ಲುವಂತ ಒಂದು ಅಧ್ಯಾಯವು ಈ ಪುಸ್ತಕದಲ್ಲಿದೆ. ಆ ಅಧ್ಯಾಯವು ಯಾವುದಾಗಿರಬಹುದು?

ಉಲ್ಲೇಖ

ಬಿರಿಗಾಳಿಯ ಕಣ್ಣು (ಯೋಬ) ಬ್ರಿಯಾನ್ ಸ್ಮಿತ್ (ಮತ್ತಾಯಸ್ ಮೀಡಿಯಾ 2008)

ಯೋಬ ಅಧ್ಯಯನ 1: ಒಳ್ಳೆಯ ಮತ್ತು ಕೆಟ್ಟ ಸಮಯ

ಪೀಠಿಕೆ

ಅನೇಕ ವರುಷಗಳ ಹಿಂದೆ ಯೋರ್ದನ್ ಹೊಳೆಯ ಪೂರ್ವದಲ್ಲಿರುವ ಊಚ್ ದೇಶದಲ್ಲಿ ಪ್ರಸಿದ್ಧ ವ್ಯಕ್ತಿಯೊಬ್ಬನು ಜೀವಿಸಿದ್ದನು. ಆತನ ಹೆಸರು ಯೋಬ ಮತ್ತು ಒಂದಕ್ಕಿಂತಲೂ ಹೆಚ್ಚು ವಿಧದಲ್ಲಿ ಆತನು ಪ್ರಸಿದ್ಧನಾಗಿದ್ದನು: ಆತನು ಅಗರ್ಭ ಶ್ರೀಮಂತನಾಗಿದ್ದನು, ಆತನು ಅತ್ಯಧಿಕವಾಗಿ ಗೌರವಾನ್ವಿತನಾಗಿದ್ದನು ಮತ್ತು ಆತನು ದೇವರಿಗೆ ಭಯಪಡುವವನಾಗಿದ್ದು ನೀತಿವಂತನೂ ನಿರ್ದೋಷಿಯೂ ಆಗಿದ್ದನು.

ಆದರೆ ಒಮ್ಮೆ ಎಲ್ಲವೂ ಅಯೋಮಯವಾಯಿತು ಮತ್ತು ಯೋಬನು ದುರಾದೃಷ್ಟ ಸುಳಿಗೆ ಸಿಲುಕಿದನು. ಮೊದಲು ಆತನು ತನ್ನ ಸಂಪತ್ತು ಮತ್ತು ಮಕ್ಕಳನ್ನು ಕಳಕೊಂಡನು. ನಂತರ ತನ್ನ ಆರೋಗ್ಯವನ್ನು ಕಳಕೊಂಡನು. ಆದರೆ ಒಂದು ಸಂಗತಿಯನ್ನು ಆತನು ಕಳಕೊಳ್ಳಲಿಲ್ಲ – ಅದು ದೇವರಲ್ಲಿನ ಆತನ ನಂಬಿಗಸ್ತಿಕೆ.

ಯಾಕೆ ಒಳ್ಳೆಯ ಸಮಯವು ಫಕ್ಕನೆ ಕೆಟ್ಟ ಸಮಯವಾಗಿ ಬದಲಾಯಿತೆಂದು ಯೋಬನಿಗೆ ತಿಳಿಯಲಾಗಲಿಲ್ಲ. ಆದರೆ ಆಗಿದ್ದೇನೆಂದು ಓದುಗ ತಿಳಿದಿದ್ದಾನೆ. ಸೈತಾನ (ಇದು ದೂಷಕ ಅಥವಾ ವಿರೋಧಿಗೆ ಇಬ್ರಿಯ ಪದವಾಗಿದೆ) ದೇವರ ಮುಂದೆ ಯೋಬನ ಬಗ್ಗೆ ದೂರು ಹೇಳುತ್ತಾನೆ ಮತ್ತು ಆತನಿಗೆ ವಿರುದ್ಧವಾಗಿ ದೇವರನ್ನು ಪ್ರೇರೇಪಿಸುತ್ತಾನೆ.

ಓದಿರಿ

ಯೋಬ ಅಧ್ಯಾಯಗಳು 1 ಮತ್ತು 2

ಪ್ರಶ್ನೆಗಳು

1. ಪುಸ್ತಕದ ಪ್ರಾರಂಭದಲ್ಲಿನ ಯೋಬನ ಭೌತಿಕ ಪರಿಸ್ಥಿತಿಗಳನ್ನು ವಿವರಿಸಿರಿ (1:1–5).
2. ಪುಸ್ತಕದ ಪ್ರಾರಂಭದಲ್ಲಿನ ಯೋಬನ ಗುಣಸ್ವಭಾವವನ್ನು ವಿವರಿಸಿ (1:1–5).
3. ಜ್ಞಾನೋಕ್ತಿ 3:1–4 ಮತ್ತು ಕೀರ್ತನೆ 1:1–3 ಮತ್ತು 6 ಅನ್ನು ಓದಿರಿ. ಈ ಪಠ್ಯಗಳ ಪ್ರಕಾರ ಯೋಬನ ಸಂಪತ್ತು ಮತ್ತು ಆತನ ನಿರ್ದೋಷತ್ವಗಳ ನಡುವಿನ ಸಂಬಂಧವೇನು?
4. ಇಲ್ಲಿಯವರೆಗೂ ಯೋಬನ ಬಗ್ಗೆ ನೀವು ಏನನ್ನು ಕಲಿತಿದ್ದೀರೆಂದು ಸಾರಾಂಶವನ್ನು ಬರೆಯಿರಿ (ನಿಮ್ಮ ಸತ್ಯವೇದದಲ್ಲಿ ಅಥವಾ ನಿಮ್ಮ ಟಿಪ್ಪಣಿಗಳಲ್ಲಿ ನೋಡಬೇಡಿರಿ). ಏನನ್ನೂ ಬರೆಯುವ ಅಗತ್ಯವಿಲ್ಲ
5. ಯೋಬನ ವಿರುದ್ಧವಾಗಿ ಸೈತಾನನ ದೂರು ಏನು (1:6–22)?
6. ಸೈತಾನನ ದೂರಿಗೆ ದೇವರು ಹೇಗೆ ಪ್ರತಿಕ್ರಿಯಿಸುತ್ತಾನೆ (1:6–22)?
7. ಈ ಭಾಗದಲ್ಲಿ (1:6–22) ದೇವರು ಮತ್ತು ಸೈತಾನನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
8. ಯೋಬನಿಗೆ ಏನಾಗುತ್ತದೆ? ಯೋಬನಿಗೆ ದುಃಖವನ್ನು ತರಲು ಸೈತಾನನು ಯಾವ ರೀತಿಯ ಘಟನೆಗಳನ್ನು ಉಪಯೋಗಿಸಿದನು (1:6–22)?
9. ಯೋಬನು ಹೇಗೆ ಪ್ರತಿಕ್ರಿಯಿಸುತ್ತಾನೆ (1:6–22)?
10. ಈ ವಾಕ್ಯಭಾಗದಲ್ಲಿ (1:6–22) ಯೋಬ, ದೇವರು ಮತ್ತು ಸೈತಾನನ ಬಗ್ಗೆ ನೀವು ಕಲಿತದ್ದನ್ನು ಸಾರಾಂಶಗೊಳಿಸಿರಿ. ನಿಮ್ಮ ಸತ್ಯವೇದದಲ್ಲಿ ಅಥವಾ ನಿಮ್ಮ ನೋಟ್ಸ್‌ನಲ್ಲಿ ನೋಡಬೇಡಿ. ಏನನ್ನೂ ಬರೆಯುವ ಅಗತ್ಯವಿಲ್ಲ.
11. ಅಧ್ಯಾಯ 2 ರಲ್ಲಿ ದೇವರು, ಸೈತಾನ ಮತ್ತು ಯೋಬನ ಬಗ್ಗೆ ನಾವು ಯಾವ ಹೆಚ್ಚುವರಿ ಸಂಗತಿಗಳನ್ನು ಕಂಡುಕೊಂಡಿದ್ದೇವೆ? ಪಟ್ಟಿಗಳನ್ನು ಮಾಡಿರಿ.

12. ಯೋಬನು ತನ್ನ ಹೆಂಡತಿಯನ್ನು ಮೂರ್ಖ ಮಹಿಳೆಯಂತೆ ಮಾತನಾಡುತ್ತಿದ್ದಾಳೆ ಎಂದು ಏಕೆ ಆರೋಪಿಸುತ್ತಾನೆ (ಅಧ್ಯಾಯ 2)?

13. ಯೋಬನು ತನ್ನ ಬಾಧೆಯ ಬಗ್ಗೆ ಏನು ಅರ್ಥಮಾಡಿಕೊಂಡಿದ್ದಾನೆ (ಅಧ್ಯಾಯ 2)?

14. ಯೋಬನನ್ನು ಬೇಟಿ ಮಾಡಲು ಯಾರು ಬರುತ್ತಾರೆ ಮತ್ತು ಅವರು ಏಕೆ ಬರುತ್ತಾರೆ (ಅಧ್ಯಾಯ 2)?

15. ನಾವು ಬಾಧೆಪಡುವಾಗ ಸಾಮಾನ್ಯವಾಗಿ ಯೋಬನು ಯಾವ ಕಾರಣದಿಂದ ಬಾಧೆಪಟ್ಟನೋ ಅದರಂತೆಯೇ ಇವೂ ಸಹ ಎಂದು ನೀವು ಎಣಿಸುವಿರಾ? ನಿಮ್ಮ ವಿಶ್ಲೇಷಣೆಯನ್ನು ಪಟ್ಟಿ ಮಾಡಿರಿ.

16. ಯೋಬನು ದೇವರಿಗಿಂತ ದೇವರು ಕೊಡುವ ವರಗಳ ಆಶೀರ್ವಾದಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾನೆಂದು ಸೈತಾನನು ಆರೋಪಿಸುತ್ತಾನೆ. ನಿಮಗೆ ಎಷ್ಟರ ಮಟ್ಟಿಗೆ ನಿಜ ಎನಿಸುತ್ತದೆ? ಈ ರೀತಿಯ ಬಲೆಗೆ ನಾವು ಸಿಕ್ಕಿಬೀಳದಂತೆ ಏನನ್ನು ಮಾಡಬಹುದು? ನಿಮ್ಮ ವಿಶ್ಲೇಷಣೆಯನ್ನು ಬರೆಯಿರಿ.

17. ಈ ಆರಂಭಿಕ ಅಧ್ಯಾಯಗಳಲ್ಲಿ ದೇವರ ಸಾರ್ವಭೌಮತ್ವವು ಯಾವ ವಿಧದಲ್ಲಿ ಪ್ರಕಟಿಸಲ್ಪಟ್ಟಿದೆ? ನಿಮ್ಮ ಸಾರಾಂಶವನ್ನು ಬರೆಯಿರಿ.

18. ದೇವರು ನಿಯಂತ್ರಣದಲ್ಲಿದ್ದಾನೆ ಎಂದು ನಂಬುವುದು ಯಾವಾಗ ಕಷ್ಟವೆನಿಸುತ್ತದೆ? ನಿಮ್ಮ ಸಾರಾಂಶವನ್ನು ಬರೆಯಿರಿ.

19. ನಾವು ಬಾಧೆಪಡುತ್ತಿರುವಾಗ ದೇವರು ನಿಯಂತ್ರಣದಲ್ಲಿದ್ದಾನೆ ಎಂಬುದನ್ನು ನೆನೆಸಿಕೊಳ್ಳುವುದು ಹೇಗೆ ಆದರಣೆಯಾಗುತ್ತದೆ? ನಿಮ್ಮ ಸಾರಾಂಶವನ್ನು ಬರೆಯಿರಿ.

ಯೋಬ ಅಧ್ಯಯನ 2: "ಸುಮ್ಮನೆ ಏನೂ ಬರುವುದಿಲ್ಲ"

ಪೀಠಿಕೆ

ನಮ್ಮ ಹಿಂದಿನ ಅಧ್ಯಯನದಲ್ಲಿ ಯೋಬನು ಬೂದಿಯಲ್ಲಿ ಕೂತುಕೊಂಡು ತನ್ನ ನಡುನೆತ್ತಿಯಿಂದ ಅಂಗಾಲಿನವರೆಗೆ ಆದ ಕೆಟ್ಟ ಕುರುಗಳನ್ನು ಬೋಕಿಯನ್ನು ತೆಗೆದುಕೊಂಡು ಕೆರೆದುಕೊಳ್ಳುವವರೆಗೆ ನೋಡಿಕೊಂಡೆವು. ಆತನ ಮೂವರು ಸ್ನೇಹಿತರು (ಎಲೀಫಜ, ಬಿಲ್ದದ, ಮತ್ತು ಚೋಫರ) ಯೋಬನ ದುರಾವಸ್ಥೆಯ ಬಗ್ಗೆ ಕೇಳಿ ಆತನನ್ನು ಸಮಾಧಾನಪಡಿಸಲು ಬರುತ್ತಾರೆ. ಮೊದಲು ಸ್ಥಿತಿಯನ್ನು ನೋಡಿ ಅವರು ದಿಗ್ಭ್ರಾಂತರಾಗಿ ಮೌನವಾಗಿ ಕೂತುಕೊಳ್ಳುತ್ತಾರೆ. ಕೊನೆಯಲ್ಲಿ ಒಂದು ವಾರದ ನಂತರ ಯೋಬನು ಈ ಮೌನವನ್ನು ಮುರಿಯುತ್ತಾನೆ. ಈಗ ಆ ಸ್ನೇಹಿತರು ತಾವೂ ಸಹ ಮಾತನಾಡಬಹುದೆಂದು ಭಾವಿಸುತ್ತಾರೆ. ಯೋಬನಿಗೆ ಈ ದುರಂತ ಯಾಕೆ ಸಂಭವಿಸಿತೆಂದು ಅವರು ವಾದಿಸುವಾಗ ಮುಂದಿನ 31 ಅಧ್ಯಾಯಗಳಲ್ಲಿ ಯೋಬ ಮತ್ತು ಆತನ ಸ್ನೇಹಿತರ ನಡುವೆ ದೀರ್ಘವಾದ ವಾದ ನಡೆಯುತ್ತದೆ.

ಪುಸ್ತಕದ ಈ ಹಂತದಲ್ಲಿ ಹೆಚ್ಚಿನ ಅಧುನಿಕ ಓದುಗರು ಆಸಕ್ತಿಯನ್ನು ಕಳಕೊಳ್ಳುತ್ತಾರೆ. ಯೋಬ ಮತ್ತು ಆತನ ಸ್ನೇಹಿತರ ನಡುವಿನ ಚರ್ಚೆಯು ಪುನರಾವರ್ತನೆ ಮತ್ತು ಬೇಸರ ತರುವಷ್ಟು ದೀರ್ಘವೆನಿಸುತ್ತದೆ. ಇದರ ಮಾದರಿ/ವಿಧವು ಯೋಬನು ಯಾಕೆ ಬಾಧೆಪಡುತ್ತಿದ್ದಾನೆಂಬುದನ್ನು ವಿವರಿಸಲು ಆತನ ಸ್ನೇಹಿತರು ಪ್ರತಿಯೊಬ್ಬರೂ ಸಹ ಅವಕಾಶ ತೆಗೆದುಕೊಳ್ಳುವುದಾಗಿದೆ. ಪ್ರತಿಸ್ನೇಹಿತನು ಮಾತನಾಡಿದ ಮೇಲೆ ಸ್ವತಃ ಯೋಬನು ಉತ್ತರಿಸುತ್ತಾನೆ. ಅನಂತರ ಇನ್ನೊಬ್ಬ ಸ್ನೇಹಿತ ಮಾತನಾಡುತ್ತಾನೆ. ಇದು ಇನ್ನೂ ಎರಡುಬಾರಿ ಪುನರಾವರ್ತನೆಯಾಗಿದೆ.

ಮೊದಲ ಸುತ್ತು		**ಅಧ್ಯಾಯಗಳು**
ಎಲೀಫಜ ಮಾತನಾಡುವುದು	ಯೋಬನು ಉತ್ತರಿಸುತ್ತಾನೆ	4–7
ಬಿಲ್ದದ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	8–10
ಚೋಫರ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	11–14
2 ನೇ ಸುತ್ತು		**ಅಧ್ಯಾಯಗಳು**
ಎಲೀಫಜ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	15–17
ಬಿಲ್ದದ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	18–19
ಚೋಫರ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	20–21
3 ನೇ ಸುತ್ತು		**ಅಧ್ಯಾಯಗಳು**
ಎಲೀಫಜ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	22–24
ಬಿಲ್ದದ ಮಾತನಾಡುತ್ತಾನೆ	ಯೋಬನು ಉತ್ತರಿಸುತ್ತಾನೆ	25–26
	ಯೋಬನು ಉತ್ತರಿಸುತ್ತಾನೆ	27

ಚರ್ಚೆಯು ಕೊನೆಯವರೆಗೂ ಮುಗಿಯುವುದನ್ನು ನಾವು ನೋಡಬಹುದು, ಆದರೆ ಚೋಫರನು ಮೂರನೇ ಮಾತನ್ನು ಆಡಲಿಲ್ಲ. ನಾವು ಇದಕ್ಕೆ ನಂತರ ಹಿಂತಿರುಗುತ್ತೇವೆ.

ಈ ಅಧ್ಯಯನದಲ್ಲಿ ಯೋಬನ ಸ್ನೇಹಿತರು ಏನನ್ನು ಹೇಳುತ್ತಾರೆ ಮತ್ತು ಆತನಿಗೆ ಯಾವ ರೀತಿಯ ಆದರಣಾ ನುಡಿಗಳನ್ನು ಅವರು ಕೊಡುತ್ತಾರೆಂಬ ಸಂಗತಿಗಳನ್ನು ನೋಡುತ್ತೇವೆ. ನಮ್ಮ ಮುಂದಿನ ಅಧ್ಯಯನದಲ್ಲಿ ಯೋಬನ ಪ್ರತಿಕ್ರಿಯೆಗಳನ್ನು ನಾವು ವಿಂಗಡಿಸಲಿದ್ದೇವೆ.

ಯೋಬನ ಪುಸ್ತಕದಲ್ಲಿನ ಮಾತುಗಳು ಪದ್ಯರೂಪದಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಿರಿ. ನಮ್ಮ ಸತ್ಯವೇದಗಳಲ್ಲಿ ಪಠ್ಯವು ಮುದ್ರಿಸಲ್ಪಟ್ಟ ರೀತಿಯಿಂದ ಇದನ್ನು ತಿಳುಕೊಳ್ಳಬಹುದು.

ಓದಿರಿ

ಕೆಳಕಂಡ ಪ್ರಶ್ನೆಗಳು ಈ ವಾಕ್ಯಭಾಗಗಳ ಮೇಲೆ ಆಧರಿತವಾಗಿವೆ:

- ಯೋಬ 2:11–13 (ಯೋಬನ 3 ಸ್ನೇಹಿತರು)
- ಯೋಬ ಅಧ್ಯಾಯ 3 (ಯೋಬನು ಮಾತನಾಡುತ್ತಾನೆ)
- ಯೋಬ ಅಧ್ಯಾಯ 4–5 (ಎಲೀಫಜ ಮಾತನಾಡುತ್ತಾನೆ) ಮತ್ತು ಅಧ್ಯಾಯ 22 (ಎಲೀಫಜನ ಮೂರನೇ ಮಾತು)
- ಯೋಬ 8:1–7 (ಬಿಲ್ದದ ಮಾತನಾಡುತ್ತಾನೆ)
- ಯೋಬ ಅಧ್ಯಾಯ 11 (ಚೋಫರ ಮಾತನಾಡುತ್ತಾನೆ)

ಪ್ರಶ್ನೆಗಳು

1. ಯೋಬನ ಬಾಧೆಗೆ ಪ್ರತ್ಯುತ್ತರವಾಗಿ ಆತನ ಮೂವರು ಸ್ನೇಹಿತರು ಏನನ್ನು ಮಾಡುತ್ತಾರೆ? ಆತನ ಸ್ನೇಹಿತರ ಬಗ್ಗೆ ಇದು ನಮಗೆ ಏನನ್ನು ಹೇಳುತ್ತದೆ (2:11–13)?
2. ಯೋಬನ ಮೊದಲ ಮಾತನ್ನು ನಿಮ್ಮದೇ ಪದಗಳಲ್ಲಿ ಸಾರಾಂಶಗೊಳಿಸಿರಿ (ಅಧ್ಯಾಯ 3). ಯೋಬನ ಭಾವನೆಯನ್ನು ನೀವು ಹೇಗೆ ವರ್ಣಿಸುವಿರಿ?
3. 3 ನೇ ಅಧ್ಯಾಯದಲ್ಲಿ ಯೋಬನು ತನ್ನ ಸ್ನೇಹಿತರಿಗೆ ತನ್ನ ಬಾಧೆಯ ಬಗ್ಗೆ ಹೇಳುವುದು ಸೈತಾನನು 2:5 ರಲ್ಲಿ ನುಡಿದಿರುವುದಕ್ಕೆ ಹೇಗೆ ಹೋಲಿಕೆಯಾಗುತ್ತದೆ?
4. ಎಲೀಫಜನ ಮಾತಿನ ಸ್ವರವನ್ನು ನೀವು ಹೇಗೆ ವಿವರಿಸುತ್ತೀರಿ (ಅಧ್ಯಾಯ 4–5)? ಆತನು ಬೆಂಬಲ ನೀಡುತ್ತಾನೆಯೇ? ಕ್ರೂರಿಯೇ? ಕಾಳಜಿವಹಿಸುತ್ತಾನೆಯೇ? ಅರ್ಥಮಾಡಿಕೊಳ್ಳುತ್ತಾನೆಯೇ? ವಿವರಿಸಿ.
5. ಯೋಬನ ಬಾಧೆಗಳಿಗೆ ಎಲೀಫಜನು ಏನು ಕಾರಣ ಎಂದು ಭಾವಿಸುತ್ತಾನೆ (4:7–8)?
6. ಯೋಬನ ಕುರಿತಾದ ತನ್ನ ಮೌಲ್ಯಮಾಪನದ ಬಗ್ಗೆ ಎಲಿಫಜನು ಏಕೆ ತುಂಬಾ ವಿಶ್ವಾಸ ಹೊಂದಿದ್ದಾನೆ (4:12–16)?
7. ಯೋಬನಿಗೆ ಎಲೀಫಜನು ನೀಡಿದ ಸಲಹೆ ಏನು (5:8–17)?
8. ಎಲೀಫಜನ ಮೂರನೇ ಮಾತನ್ನು (ಅಧ್ಯಾಯ 22) ಓದಿ. ಅವನು ಇನ್ನೂ ಅದೇ ವಿಷಯಗಳನ್ನು ಹೇಳುತ್ತಿದ್ದಾನೆಯೇ? ವಿವರಿಸಿ.
9. ಯೋಬನ ಬಾಧೆಗಳಿಗೆ ಬಿಲ್ದದನು ಏನು ಕಾರಣ ಎಂದು ಭಾವಿಸುತ್ತಾನೆ (8:1–11)?
10. ಯೋಬನು ತನ್ನ ಆಶೀರ್ವಾದವನ್ನು ಹಿಂಪಡೆಯಲು ಏನನ್ನು ಮಾಡಬೇಕೆಂದು ಬಿಲ್ದದನು ಭಾವಿಸುತ್ತಾನೆ (8:1–2)?
11. ಯೋಬನ ಬಗ್ಗೆ ಚೋಫರನ ಮೌಲ್ಯಮಾಪನವೇನು (11:1–6)?
12. ಯೋಬನು ತನ್ನ ಆಶೀರ್ವಾದಗಳನ್ನು ತಿರುಗಿ ಪಡೆಯಲು ಏನು ಮಾಡಬೇಕೆಂದು ಚೋಫರನು ಭಾವಿಸುತ್ತಾನೆ (11:13–20)?
13. ಯೋಬನ ಮೂವರ ಸ್ನೇಹಿತರ ಸಲಹೆಯನ್ನು ಹಿಂತಿರುಗಿ ನೋಡೋಣ:

    ಅ. ಯಾವುದರಲ್ಲಿ ಅವರೆಲ್ಲರೂ ಸಮಾನರಾಗಿದ್ದಾರೆ?

    ಆ. ಯಾವುದರಲ್ಲಿ ಅವರು ವಿಭಿನ್ನರಾಗಿದ್ದಾರೆ?
14. ಬಾಧೆಯ ಸಮಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವುದರ ಬಗ್ಗೆ ಯೋಬನ ಸ್ನೇಹಿತರರಿಂದ ನಾವು ಏನನ್ನು ಕಲಿಯಬಹುದು?

15. ಬಾಧೆಗೆ ಸಾಧ್ಯವಿರುವ ಸಂಭವನೀಯ ಕಾರಣಗಳ ಬಗ್ಗೆ ಕೆಳಕಂಡ ಹೊಸ ಒಡಂಬಡಿಕೆಯ ವಾಕ್ಯಭಾಗಗಳು ಏನು ಹೇಳುತ್ತವೆ?

    ಅ. ಕೊರಿಂಥ. 11:27–32

    ಆ. ಇಬ್ರಿಯ. 12:7–11

    ಇ. ಲೂಕ. 13:1–5

    ಈ. ಯೋಹಾನ. 9:1–3

16. ಒಬ್ಬ ಸ್ನೇಹಿತನೊಬ್ಬನು ಭಯಂಕರವಾದ ವೈಯಕ್ತಿಕ ದುಃಖ ಸನ್ನಿವೇಶವನ್ನು ಹಾದುಹೋಗುತ್ತಿದ್ದಾನೆಂದು ಎಣಿಸಿಕೊಳ್ಳಿರಿ. ಆತನ ಅರಿಕೆ ಮಾಡದ ಪಾಪವೇ ಈ ಬಾಧೆಗೆ ಕಾರಣವೆಂದು ಯಾರೋ ಒಬ್ಬರು ಆತನಿಗೆ ಹೇಳುತ್ತಾರೆ. ಈ ಆಲೋಚನೆಗೆ ಪ್ರತಿಯಾಗಿ ನೀವು ಏನು ಉತ್ತರಿಸುತ್ತೀರಿ?

17. "ನ್ಯಾಯವಾಗಿ ತೀರ್ಪುಮಾಡುವಾತನಿಗೆ ಒಪ್ಪಿಸಿಕೊಡು" (1 ಪೇತ್ರ 2:23) ಇದರ ಅರ್ಥವು ಏನಾಗಿರಬಹುದೆಂದು ನೀವು ಯೋಚಿಸುವಿರಿ? ಇದನ್ನು ಮಾಡಲು ನಾವು ಯಾವ ಪ್ರಾಯೋಗಿಕ ರೀತಿಯಲ್ಲಿ ಪರಸ್ಪರ ಸಹಾಯ ಮಾಡಬಹುದು?

ಯೋಬ ಅಧ್ಯಯನ 3: "ನನಗೇ ಯಾಕೆ?"

ಪೀಠಿಕೆ

"ಯಾಕೆ?" ತಮ್ಮ ಜೀವನದಲ್ಲಿ ದುರಂತವುಂಟಾದಾಗ ಹೆಚ್ಚಿನ ಜನರು ಕೇಳುವ ಪ್ರಶ್ನೆ ಇದಾಗಿದೆ. ಭಯಾನಕ ಕಾರು ಅಪಘಾತ ಯಾಕೆ ಉಂಟಾಗುತ್ತದೆ? ಪ್ರೀತಿ ಪಾತ್ರರು ಜೀವನದಲ್ಲಿ ಯಾಕೆ ಬೇಗನೆ ಸಾಯುತ್ತಾರೆ? ಯೌವನಸ್ಥ ಮಕ್ಕಳು ತಾಯಿಯಿಲ್ಲದೆ ಯಾಕೆ ಕೈ ಬಿಡಲ್ಪಡುತ್ತಾರೆ? ನಿಮ್ಮ ಜೀವನದಲ್ಲಿ ಬಾಧೆ ಸಂಭವಿಸಿದಾಗ ನೀವು ಇದೇ ರೀತಿಯ ಪ್ರಶ್ನೆಗಳನ್ನು ಕೇಳಿದ ಸಮಯವಿರಹಬಹುದು .

"ಯಾಕೆ?" ಎಂಬುದು ಯೋಬನ ಅಧ್ಯಾಯಗಳು 3–27 ರವರೆಗೂ ಯೋಬನು ದೇವರಿಗೆ ಕೇಳುವ ಪ್ರಶ್ನೆಯಾಗಿದೆ. ಈ ಅಧ್ಯಯನದಲ್ಲಿ ತನ್ನ ಸ್ನೇಹಿತರ ದೂಷಣೆಗಳಿಗೆ ಯೋಬನ ಪ್ರತಿಕ್ರಿಯೆಯನ್ನು ನಾವು ನೋಡಲಿದ್ದೇವೆ. ನಮ್ಮ ಹಿಂದಿನ ಅಧ್ಯಯನದಲ್ಲಿ ಯೋಬನ ಅರಿಕೆ ಮಾಡದ ಪಾಪದ ಫಲಿತಾಂಶವೇ ಆತನ ಬಾಧೆಗೆ ಕಾರಣವಾಗಿದೆಯೆಂದು ಆತನ ಮೂವರು ಸ್ನೇಹಿತರಾದ ಎಲೀಫಜ, ಬಿಲ್ದದ ಮತ್ತು ಚೋಫರನು ತಿಳಿದಿರುವರೆಂದು ನಾವು ಕಂಡುಕೊಂಡೆವು.

ಓದಿರಿ

ಕೆಳಗಿನ ಪ್ರಶ್ನೆಗಳು ಈ ವಾಕ್ಯಭಾಗಗಳ ಮೇಲೆ ಆಧರಿತಗೊಂಡಿವೆ.

- ಯೋಬ ಅಧ್ಯಾಯಗಳು 6–7 (ಎಲೀಫಜನ ಮೊದಲ ಮಾತಿಗೆ ಯೋಬನ ಪ್ರತ್ಯುತ್ತರ)
- ಯೋಬ 9 (ಬಿಲ್ದದನ ಮೊದಲ ಮಾತಿಗೆ ಯೋಬನ ಪ್ರತ್ಯುತ್ತರ)
- ಯೋಬ 13:20–27 (ಚೋಫರನ ಮೊದಲ ಮಾತಿಗೆ ಯೋಬನ ಉತ್ತರದ ಭಾಗ)
- ಯೋಬ 19:23–29 (ಚೋಫರನ ಎರಡನೇ ಮಾತಿಗೆ ಯೋಬನ ಪ್ರತ್ಯುತ್ತರದ ಭಾಗ)
- ಯೋಬ 25 (ಬಿಲ್ದದನ ಮೂರನೇ ಮಾತು) 27:1–6 (ತನ್ನ ಮೂವರು ಸ್ನೇಹಿತರೊಂದಿಗೆ ಯೋಬನ ಮುಕ್ತಾಯದ ಭಾಗ)

ಪ್ರಶ್ನೆಗಳು

1. ಯೋಬನು ತನ್ನ ಸಂಕಟವನ್ನು ಹೇಗೆ ವಿವರಿಸುತ್ತಾನೆ (6:1–7)?
2. ಯೋಬನು ತನಗೆ ಏನಾಗಬೇಕೆಂದು ಬಯಸುತ್ತಾನೆ ಮತ್ತು ಏಕೆ (6:8–13)?
3. ಎಲೀಫಜನ ಸಲಹೆಯ ಬಗ್ಗೆ ಯೋಬನಿಗೆ ಹೇಗೆ ಅನಿಸುತ್ತದೆ (6:14–30)?
4. 7:11–21 ರಲ್ಲಿ ಯೋಬನಿಗೆ ದೇವರ ಬಗ್ಗೆ ಹೇಗೆ ಅನಿಸುತ್ತದೆ?
5. 9:1–20 ರಲ್ಲಿ ಯೋಬನು ದೇವರನ್ನು ಹೇಗೆ ವರ್ಣಿಸುತ್ತಾನೆ?
6. 13:20–27 ರಲ್ಲಿ ಯೋಬನು ದೇವರಿಂದ ಏನು ಕೇಳಿಕೊಳ್ಳುತ್ತಾನೆ?
7. 19:23–29 ರಲ್ಲಿ ಯೋಬನು ದೇವರ ನ್ಯಾಯದಲ್ಲಿ ತನ್ನ ಭರವಸೆಯನ್ನು ಹೇಗೆ ವ್ಯಕ್ತಪಡಿಸುತ್ತಾನೆ?
8. 27:1–6 ರಲ್ಲಿ ದೇವರು ಏನು ಮಾಡುತ್ತಿದ್ದಾನೆಂದು ಯೋಬನು ಆರೋಪಿಸುತ್ತಾನೆ?
9. 27:1–6 ರಲ್ಲಿ ಯೋಬನ ಮನೋಭಾವನೆ ಏನು?
10. 27:5–6 ರಲ್ಲಿ ಯೋಬನು ಬಿಲ್ದದನ ಹೇಳಿಕೆಗೆ (ಅಧ್ಯಾಯ 25) ಹೇಗೆ ಪ್ರತಿಕ್ರಿಯಿಸುತ್ತಾನೆ?
11. ಯೋಬನು ತನ್ನ ಬಾಧೆಗಳಿಗೆ ನೀಡಿದ ಪ್ರತಿಕ್ರಿಯೆಯು 1:11 ಮತ್ತು 2:5 ರಲ್ಲಿನ ಸೈತಾನನ ನುಡಿಗಳಿಗೆ ಹೇಗೆ ಹೋಲುತ್ತದೆ?

12. ಹಿಂದಿನ ಅಧ್ಯಯನದಲ್ಲಿ ಯೋಬನ ಸ್ನೇಹಿತರು ದೇವರ ಕುರಿತು ಅಲ್ಪವಾದ ತಿಳುವಳಿಕೆಯನ್ನು ಹೊಂದಿದ್ದಾರೆಂದು ನಾವು ಕಂಡಿದ್ದೇವೆ. ಅವರು ಆತನನ್ನು ಒಬ್ಬ ವ್ಯಕ್ತಿತ್ವವಿಲ್ಲದ ಕಾರಣ ಮತ್ತು ಪರಿಣಾಮವೆಂಬಂತೆ ಕಂಡರು. ದೇವರ ಬಗ್ಗೆ ಯೋಬನ ತಿಳುವಳಿಕೆಯೇನು?

13. ನಾವು ಬಾಧೆಪಟ್ಟ ಸಮಯವನ್ನು ತಿರುಗಿ ನೋಡಿರಿ, ಆ ಸಮಯದಲ್ಲಿ ದೇವರ ಬಗ್ಗೆ ನೀವು ಏನೆಂದು ಯೋಚಿಸುವಿರಿ? ನೀವು ಯೋಬನಿಗೆ ಯಾವ ವಿಧದಲ್ಲಿ ಸಮಾನರಾಗಿದ್ದೀರಿ? ನೀವು ಯೋಬನಿಗಿಂತ ಯಾವ ವಿಧದಲ್ಲಿ ವಿಭಿನ್ನರಾಗಿದ್ದೀರಿ?

14. ಇಬ್ರಿಯ. 4:14–16 ಅನ್ನು ಓದಿರಿ. ಯೇಸು ಒಬ್ಬ ಪರಿಪೂರ್ಣ ಸ್ನೇಹಿತ ಮತ್ತು ಮಧ್ಯಸ್ಥನಾಗಿದ್ದಾನೆ. ಏಕೆ?

15. ನಾವು ಬಾಧೆಪಡುವಾಗ ಯೇಸುವನ್ನು ತಿಳುಕೊಳ್ಳುವುದು ನಮಗೆ ಹೇಗೆ ಸಹಾಯ ಮಾಡುತ್ತದೆ?

ಯೋಬ ಅಧ್ಯಯನ 4: ಜ್ಞಾನಕ್ಕಾಗಿ ಮಾನವನ ಹುಡುಕಾಟ

ಪೀಠಿಕೆ

ಯೋಬನು ಅಧ್ಯಾಯ 27 ರೊಂದಿಗೆ ಆತನ ಮೂವರು ಸ್ನೇಹಿತರ ದೂಷಣೆ ಮತ್ತು ಸಲಹೆಗೆ ತನ್ನ ಪ್ರತ್ಯುತ್ತರವನ್ನು ಕೊಟ್ಟಿರುತ್ತಾನೆ. ಯೋಬನ ಬಾಧೆಯು ಆತನ ಗುಪ್ತ ಮತ್ತು ಅರಿಕೆ ಮಾಡದ ಪಾಪದ ಪರಿಣಾಮವೇ ಎಂದು ಆತನ ಸ್ನೇಹಿತರು ಮನವರಿಕೆ ಮಾಡಿಕೊಳ್ಳುತ್ತಾರೆ. ಆದರೆ ಯೋಬನು ತಾನು ನೀತಿವಂತನಾಗಿದ್ದೇನೆ ಮತ್ತು ಅಂಥಹ ಯಾವ ಪಾಪವು ಸಹ ತನ್ನ ಜೀವಿತದಲ್ಲಿ ಇಲ್ಲ ಎಂದು ನಂಬುತ್ತಾನೆ. ಹಾಗಾಗಿ ವಾದಿಸುವ ಎರಡು ಪಕ್ಷಗಳು ಸಹ ಬಿಕ್ಕಟ್ಟಾಗಿ ಪರಿಣಮಿಸುತ್ತವೆ. ಏನನ್ನು ಸಹ ಸಾಧಿಸಿದಂತೆ ಕಾಣಲ್ಲ ಮತ್ತು ಚೋಫರನು ಇನ್ನೂ ಮುಂದೆ ಸಂಭಾಷಣೆಗೆ ಏನನ್ನು ಸೇರಿಸಲು ಬಯಸುವುದಿಲ್ಲ. (ಅಧ್ಯಯನ 2 ರಲ್ಲಿನ ಪಟ್ಟಿ ನೋಡಿರಿ). ಯೋಬನ ಸ್ನೇಹಿತರ ಸಾಂಪ್ರದಾಯಿಕ ಜ್ಞಾನವು ಯೋಬನನ್ನು ತೃಪ್ತಿಪಡಿಸಲಾಗಲಿಲ್ಲ. ಆದರೆ ಮನುಷ್ಯನ ಬಾಧೆಗೆ ರಹಸ್ಯವನ್ನು ಬೇದಿಸುವಲ್ಲಿ ಯೋಬನ ಅಸಾಂಪ್ರದಾಯಿಕ ಜ್ಞಾನದ ಪ್ರಯತ್ನವು ಸಹ ವಿಫಲವಾಯಿತು.

ಆದ್ದರಿಂದ 28ನೇ ಅಧ್ಯಾಯದೊಂದಿಗೆ ಯೋಬನು (ಅಥವಾ ಯೋಬನ ಪುಸ್ತಕದ ಅನಾಮಧೇಯ ಗ್ರಂಥಕರ್ತನು) ಜ್ಞಾನ ಮತ್ತು ನಿಜವಾದ ಜ್ಞಾನದ ಮೂಲದ ಬಗ್ಗೆ ಒಂದು ಸುಂದರವಾದ ಕವನ ಅಥವಾ ಪದ್ಯವನ್ನು ಸೇರಿಸುತ್ತಾನೆ. ಈ 28ನೇ ಅಧ್ಯಾಯವು ಪುಸ್ತಕವನ್ನು ಒಂದು ಮನಶ್ಚೇತನಗೊಳಿಸುವ ತುಂತುರು ಮಳೆಯನ್ನಾಗಿಸುತ್ತದೆ. ಇದು ಯೋಬನ ಪುಸ್ತಕದ ಮುಖ್ಯವಾದ ಪಾಠವನ್ನು ನಮಗೆ ಅರಿತುಕೊಳ್ಳಲು ಸಹಾಯಕವಾಗುವಂತೆ ಒಂದು ನೂತನವಾದ ದೃಷ್ಟಿಕೋನದಲ್ಲಿ ಹೊರತರುತ್ತದೆ.

ಈ ಅಧ್ಯಾಯದ ಶೈಲಿ ಮತ್ತು ಭಾಷೆ ಸಹ ವಿಭಿನ್ನವಾಗಿದೆ. ಪ್ರಶಾಂತ ಅಥವಾ ನೀರವಾದ ಮತ್ತು ಸಮತೋಲಿತ ಮತ್ತು ಕಡಿಮೆ ಭಾವನಾತ್ಮಕವಾದ ವಾದವನ್ನು ನಾವಿಲ್ಲಿ ಕಾಣುತ್ತೇವೆ.

ಈ ಅಧ್ಯಾಯವನ್ನು 3 ಭಾಗಗಳಾಗಿ ವಿಂಗಡಿಸಬಹುದು:

ಅ. ಯೋಬ ಮತ್ತು ಜ್ಞಾನ (ಪ್ರಶ್ನೆ 1–4 ರೊಂದಿಗೆ)

ಆ. ಅಧ್ಯಾಯ 28 (ಪ್ರಶ್ನೆ 5–9 ರೊಂದಿಗೆ)

ಇ. ಜ್ಞಾನ ಮತ್ತು ಹೊಸ ಒಡಂಬಡಿಕೆ (ಪ್ರಶ್ನೆ 10–13 ರೊಂದಿಗೆ)

ಓದಿರಿ

- ಜ್ಞಾನೋಕ್ತಿ 3:1–20, ಯೋಬ 1:1–5
- ಯೋಬ ಅಧ್ಯಾಯ 28

ಪ್ರಶ್ನೆಗಳು

1. ಜ್ಞಾನೋಕ್ತಿ 3:1–20 ರ ಪ್ರಕಾರ ಜ್ಞಾನದ ಮೌಲ್ಯವೇನು?
2. ಜ್ಞಾನೋಕ್ತಿ 3:1–20 ರ ಪ್ರಕಾರ ಒಬ್ಬ ಜ್ಞಾನಿಯೊಬ್ಬನ ಗುಲಕ್ಷಣವೇನು?
3. ಜ್ಞಾನೋಕ್ತಿ 3:1–20 ರ ಪ್ರಕಾರ ಜ್ಞಾನಿಯ ಜೀವನದ ಫಲಿತಾಂಶಗಳೇನು?
4. ಯೋಬನು ಯೋಬ 1:1–5 ರಲ್ಲಿ ಜ್ಞಾನಿಯ ಪರಿಪೂರ್ಣ ಉದಾಹರಣೆಯಾಗಿ ಹೇಗೆ ಚಿತ್ರಿಸಲಾಗಿದೆ?
5. ಯೋಬ 28:1–18 ರಲ್ಲಿ ಯಾವ ಮೌಲ್ಯಯುತ ಸಂಗತಿಗಳನ್ನು ಉಲ್ಲೇಖಿಸಲಾಗಿದೆ ಮತ್ತು ಈ ಸಂಗತಿಗಳನ್ನು ಎಲ್ಲಿ ಕಾಣಬಹುದು?
6. ಮನುಷ್ಯನ ಸಾಧನೆಗಳು ಯಾವ ವಿಧದಲ್ಲಿ ಪ್ರಭಾವಶಾಲಿಯಾಗಿವೆ (ಯೋಬ 28:1–11)?

7. ಯೋಬ 28:12–28 ರಲ್ಲಿ ಮೌಲ್ಯಯುತವಾದ ಯಾವ ಸಂಗತಿಗಳನ್ನು ಚರ್ಚಿಸಲಾಗಿದೆ ಮತ್ತು ಅಧ್ಯಾಯದ ಮೊದಲ ಭಾಗದಲ್ಲಿ ಚರ್ಚಿಸಲಾದ ಅಮೂಲ್ಯವಾದ ಸಂಗತಿಗಳೊಂದಿಗೆ ಈ ವಿಷಯವು ಹೇಗೆ ಹೋಲಿಸುತ್ತದೆ?

8. ಈ ಮೌಲ್ಯಯುತವಾದ ಸಂಗತಿಯನ್ನು ಎಲ್ಲಿ ಕಾಣಬಹುದು?

9. 28:28 ರಲ್ಲಿ ಬಳಸಲ್ಪಟ್ಟ **"ಕರ್ತನಿಗೆ ಭಯಪಡುವದು"** ಎಂಬ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

10. 1 ಕೊರಿಂಥ. 1:18–25 ರ ಪ್ರಕಾರ ದೇವರ ಜ್ಞಾನವೇನು?

11. ಯೆಹೂದ್ಯರು ಮತ್ತು ಗ್ರೀಕರು ನಿರೀಕ್ಷಿಸುವ ಮತ್ತು ಬಯಸುವದಕ್ಕಿಂತ ಈ ಜ್ಞಾನವು ಹೇಗೆ ಭಿನ್ನವಾಗಿದೆ (1 ಕೊರಿಂಥ. 1:18–25)?

12. ಕೊಲೊಸ್ಸೆ. 2:2–3 ರ ಪ್ರಕಾರ ಜ್ಞಾನ ಮತ್ತು ತಿಳುವಳಿಕೆಯನ್ನು ಎಲ್ಲಿ ಕಾಣಬಹುದು?

13. ಜ್ಞಾನೋಕ್ತಿ 3:19–20 ಅನ್ನು ಕೊಲೊಸ್ಸೆ. 1:15–20 ರೊಂದಿಗೆ ಹೋಲಿಸಿರಿ. ಯೇಸು ಕ್ರಿಸ್ತನು ಮತ್ತು ಜ್ಞಾನದ ನಡುವಿನ ಸಮಾನಾಂತರತೆ ಏನು?

ಯೋಬ ಅಧ್ಯಯನ 5: "ನಾನು ನಿರ್ದೋಷಿ"

ಪೀಠಿಕೆ

ಅಧ್ಯಾಯ 3–27 ಯೋಬ ಮತ್ತು ಆತನ ಸ್ನೇಹಿತರ ನಡುವಿನ ದೀರ್ಘವಾದ ಚರ್ಚೆಯನ್ನು ಒಳಗೊಂಡಿದೆ. ಯೋಬನು ತನ್ನ ಜೀವ ಹೊರತಾಗಿ ಎಲ್ಲವನ್ನು ಕಳಕೊಳ್ಳುತ್ತಾನೆ. ಮತ್ತು ಆತನ ಅರಿಕೆಮಾಡದ ಪಾಪದ ನಿಮಿತ್ತವೇ ಹೀಗಾಯಿತೆಂದು ಆತನ ಸ್ನೇಹಿತರು ಯೋಚಿಸುತ್ತಾರೆ. ಆದರೆ ಆ ರೀತಿಯ ಯಾವುದೇ ಪಾಪ ತನ್ನ ಜೀವಿತದಲ್ಲಿ ಇಲ್ಲವೆಂದು ಯೋಬನಿಗೆ ತಿಳಿದಿತ್ತು ಹಾಗಾಗಿ ಅಧ್ಯಾಯದ ನಂತರ ಅಧ್ಯಾಯವೆಂಬತೆ ಅವರು ಹೆಚ್ಚು ಕಡಿಮೆ ಕೋರ್ಟ್‌ನಲ್ಲಿನ ಕೇಸಿನಂತೆ ಒಬ್ಬರಿಗೊಬ್ಬರು ವಾದಿಸುತ್ತಾರೆ. ಇಲ್ಲಿಯವರೆಗೆ ಸ್ಪಷ್ಟವಾಗಿ ಜಯಿಸುವವರು ಒಬ್ಬರೂ ಕಾಣಬರುವದಿಲ್ಲ.

ಈಗ ನ್ಯಾಯಾಧಿಪತಿಯ ತೀರ್ಪಿಗಾಗಿ ಸಮಯ ಬಂದಿದೆ, ಸ್ವತಃ ದೇವರೇ ವಾದ ವಿವಾದಕ್ಕೆ ಪ್ರವೇಶಿಸಿ ತನ್ನ ದೃಷ್ಟಿಕೋನ ಅಥವಾ ನಿಲುವನ್ನು ಮಂಡಿಸುತ್ತಾನೆ. ಆದರೆ ಅದು ಆಗುವುದಕ್ಕಿಂತ ಮುನ್ನ ಎರಡು ಕಡೆಯವರು ತಮ್ಮ ವಾದವನ್ನು ಸಾರಾಂಶಗೊಳಿಸುತ್ತಾರೆ (ಮುಗಿಸುತ್ತಾರೆ).

ಮೊದಲನೆಯ ಪ್ರತಿವಾದಿಯು ಯೋಬ (ಅಧ್ಯಾಯ 29–31) ಒಳ್ಳೆಯ ಸಮಯಗಳನ್ನು ತಿರುಗಿ ನೋಡುವುದರಿಂದ ಆತನು ಪ್ರಾರಂಭಿಸುತ್ತಾನೆ. ಅನಂತರ ಆತನು ತನ್ನ ಪ್ರಸ್ತುತ ಶೋಕದುರಂತವನ್ನು ವಿವರಿಸುತ್ತಾನೆ (ಅಧ್ಯಾಯ 30). ಕೊನೆಯದಾಗಿ ಆತನು ತನ್ನ ನಿರ್ದೋಷತ್ವವನ್ನು ಸಾಬೀತುಪಡಿಸಲು ಅನೇಕ ಅಂಶಗಳನ್ನು ಪಟ್ಟಿಮಾಡುತ್ತಾನೆ (ಅಧ್ಯಾಯ 31). ಇದರಲ್ಲಿನ ಕೆಲವು ಅಂಶಗಳು ಆತ್ಮ ಖಂಡನೆಯ ಪ್ರತಿಜ್ಞೆ ಅಥವಾ ಶಪತಗಳಿಂದ ಕೊನೆಗೊಳ್ಳುತ್ತವೆ (ಉದಾ. ನೋಡಿ. ವಚನ 8, 22 ಮತ್ತು 40).

"ಪ್ರಾಸಿಕ್ಯೂಷನ್"ನ ವಕ್ತಾರ ಯೋಬನ ಮೂವರು ಸ್ನೇಹಿತರಲ್ಲಿ ಒಬ್ಬನಲ್ಲ. ಅವರು ಯೋಬನ ಸ್ವನೀತಿಯೊಂದಿಗೆ ಮುನಿಸಿಕೊಳ್ಳುತ್ತಾರೆ ಮತ್ತು ಹೆಚ್ಚಾಗಿ ಇನ್ನೂ ಏನನ್ನು ಹೇಳಲು ಬಯಸುವುದಿಲ್ಲ. ಬದಲಾಗಿ ಒಬ್ಬ ಹೊಸ ವ್ಯಕ್ತಿ ಯೌವನಸ್ಥನಾದ ಎಲೀಹು ಪ್ರವೇಶಿಸುತ್ತಾನೆ. ಗದ್ಯ ರೂಪದಲ್ಲಿ ಬರೆಯಲ್ಪಟ್ಟ ವಿಭಾಗದಲ್ಲಿ ಆತನು ಪರಿಚಯಿಸಲ್ಪಡುತ್ತಾನೆ (32:1–5). ಎಲೀಹು ಸಹ ಯೋಬನೊಂದಿಗೆ ಮುನಿಸಿಕೊಳ್ಳುತ್ತಾನೆ (ಆತನ ನಿರ್ದೋಷತ್ವದ ಹೇಳಿಕೆಯ ನಿಮಿತ್ತ) ಮತ್ತು ಮೂವರು ಸ್ನೇಹಿತರು ಸಹ ಮುನಿಸಿಕೊಳ್ಳುತ್ತಾರೆ (ಯೋಬನನ್ನು ಮನವೊಲಿಸಲು ಆಗದೇ ಇರುವದಕ್ಕಾಗಿ). ಅಧ್ಯಾಯ 32–37 ರಲ್ಲಿ ಎಲೀಹು ನಾಲ್ಕು ಹೇಳಿಕೆ ಮಾತುಗಳನ್ನು ಆಡುತ್ತಾನೆ. ಆತನ ವಾದವು ಇತರೆ ಮೂವರು ಸ್ನೇಹಿತರಿಗೆ ಹೆಚ್ಚಾಗಿ ದೇವರ ಮೇಲೆ ಕೇಂದ್ರೀಕರಿಸುವಂತೆ ವಾದವನ್ನುವನ್ನು ಮರುಪರಿಶೀಲಿಸುತ್ತಾನೆ:

ಇಂಥ ಸರ್ವಶಕ್ತನನ್ನು ನಾವು ಕಂಡುಹಿಡಿಯಲಾರೆವು; ಆತನ ಪರಾಕ್ರಮವು ಬಹಳ;
ಆತನು ನ್ಯಾಯವನ್ನಾಗಲಿ ಪರಿಪೂರ್ಣಧರ್ಮವನ್ನಾಗಲಿ ಕುಂದಿಸುವದಿಲ್ಲ.
ಆದಕಾರಣ ಮನುಷ್ಯರು ಆತನಿಗೆ ಭಯಪಡುವರು,
ಜ್ಞಾನಿಗಳೆಂದು ಎಣಿಸಿಕೊಳ್ಳುವವರನ್ನು ಆತನು ಲಕ್ಷಿಸುವುದೇ ಇಲ್ಲ
(ಯೋಬ 37:23–24)

ಓದಿರಿ

- ಯೋಬ ಅಧ್ಯಾಯ 29–31 (ಯೋಬನ ಪ್ರತಿಪಾದನಾ ಹೇಳಿಕೆಗಳು)
- ಯೋಬ 32:1–33:12, 36:1–9, 37:14–24 (ಎಲೀಹು ಹೇಳಿಕೆಗಳ ಭಾಗ) .

ಪ್ರಶ್ನೆಗಳು

1. 29 ನೇ ಅಧ್ಯಾಯದಲ್ಲಿ ಯೋಬನು ಆಪತ್ತು ಸಂಭವಿಸುವದಕ್ಕಿಂತ ಮೊದಲಿನ ತನ್ನ ಜೀವನವನ್ನು ನೆನಪು ಮಾಡಿಕೊಳ್ಳುತ್ತಾನೆ. ಆತನು ಅನುಭವಿಸಿದ ಕೆಲವು ಆಶೀರ್ವಾದಗಳನ್ನು ಕೆಲವು ಅಂಶಗಳಲ್ಲಿ ಬರೆಯಿರಿ.

2. 30 ನೇ ಅಧ್ಯಾಯದಲ್ಲಿ ಯೋಬನು ತನ್ನ ಪ್ರಸ್ತುತ ಪರಿಸ್ಥಿತಿಯ ಕುರಿತು ಪ್ರಲಾಪಿಸುತ್ತಾನೆ. ಆತನ ಎರಡು ಮುಖ್ಯ ಕಳಕಳಿ ಏನು?

3. 31 ನೇ ಅಧ್ಯಾಯದಲ್ಲಿ ಯೋಬನು ತನ್ನ ನಿರ್ದೋಷತ್ವವನ್ನು ತಿಳಿಸುತ್ತಾನೆ. ಆತನು ಹೇಳುವ ಅಂಶಗಳನ್ನು ಪಟ್ಟಿ ಮಾಡಿರಿ.

4. 31:35–37 ರಲ್ಲಿನ ಯೋಬನ ಮಾತುಗಳನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

5. 29–31 ಅಧ್ಯಾಯಗಳಲ್ಲಿ ದೇವರ ಬಗೆಗಿನ ಯೋಬನ ತಿಳುವಳಿಕೆ ಮತ್ತು ಭಾವನೆಗಳನ್ನು ಸಾರಾಂಶಗೋಳಿಸಿರಿ.

6. ಯೋಬನ ಪುಸ್ತಕದಲ್ಲಿ ಎಲ್ಲಾ ಮಾತುಗಳು ಪದ್ಯರೂಪದಲ್ಲಿವೆ. ಪದ್ಯದ ಒಂದು ಅಂಶವೆಂದರೆ ಚಿತ್ರಣ (ವಿಶೇಷವಾಗಿ ರೂಪಲಂಕಾರಗಳು). 29–31 ಮೂರು ಅಧ್ಯಾಯಗಳಲ್ಲಿ ಪ್ರತೀ ಅಧ್ಯಾಯದಿಂದ ಚಿತ್ರಣ/ರೂಪಾಲಂಕಾರಗಳಿಗೆ ಐದು ಉದಾರಣೆಗಳನ್ನು ನೀಡಿ. ಅವುಗಳ ಅರ್ಥವನ್ನು ವಿವರಿಸಿ.

7. 31:40 ಹೇಗೆ ಮುಕ್ತಾಯವಾಗುತ್ತದೆ? ಇದರಿಂದ ನಾವು ಯಾವ ತೀರ್ಮಾನವನ್ನು ತೆಗೆದುಕೊಳ್ಳಬಹುದು?

8. ಅಧ್ಯಾಯ 32 ರಲ್ಲಿ ಎಲೀಹು ಎಂಬ ಒಬ್ಬ ಹೊಸ ವ್ಯಕ್ತಿ ಫಕ್ಕನೆ ಓದುಗರಿಗೆ ಪರಿಚಯಿಸಲ್ಪಡುತ್ತಾನೆ. ಯೋಬನಿಗೆ ವಿರುದ್ಧವಾಗಿ ಆತನ ಮೂವರು ಸ್ನೇಹಿತರು ಮಾಡಿದ ವಾದವನ್ನು ಸಾರಾಂಶಗೊಳಿಸುವುದಕ್ಕಾಗಿ ಗ್ರಂಥಕರ್ತನು ಎಲೀಹುನನ್ನು ಉಪಯೋಗಿಸುತ್ತಾನೆ. ಈ ಪ್ರಶ್ನೆಗಳಿಗೆ ಉತ್ತರಿಸಿರಿ (32:1–33:13 ರ ಆಧಾರದ ಮೇಲೆ):

   ಅ. ಎಲೀಹು ಇಲ್ಲಿಯವರೆಗೆ ಯಾಕೆ ಮಾತನಾಡಲಿಲ್ಲ?

   ಆ. ಎಲೀಹು ಯೋಬನ ಸ್ನೇಹಿತರು ತಮ್ಮ ಸ್ವಂತ ವಾದವನ್ನು ಸಾರಾಂಶಗೊಳಿಸಲು ಯಾಕೆ ಬಿಡುವುದಿಲ್ಲ?

   ಇ. ಯೋಬನ ಬಗ್ಗೆ ಎಲೀಹುನ ಅಭಿಪ್ರಾಯವೇನು?

9. ಅಧ್ಯಾಯ 36 ಮತ್ತು 37 ರಲ್ಲಿ ದೇವರ ಪರವಾಗಿ ಪ್ರತಿಪಾದಿಸಲು ಎಲೀಹು ಹೋಗುತ್ತಾನೆ. ದೇವರ ಬಗ್ಗೆ ಆತನು ಹೇಳುವ ಕೆಲವು ಸಂಗತಿಗಳು ಯಾವುವು (36:1–9 ಮತ್ತು 31:14–24)?

ಯೋಬ ಅಧ್ಯಯನ 6: ದೇವರು ಮಾತನಾಡುವುದು

ಪೀಠಿಕೆ

ಈಗ ಕೊನೆಗೂ ದೇವರು ಮಾತನಾಡಲಾರಂಭಿಸುತ್ತಾನೆ. ಆದರೆ ಆತನು ಯೋಬನ ಬಾಧೆಯ ಕಾರಣವನ್ನು ಆತನಿಗೆ ವಿವರಿಸುವುದಿಲ್ಲ ಮತ್ತು ಯೋಬನ ಯಾವುದೇ ಪ್ರಶ್ನೆಗಳನ್ನೂ ಸಹ ಉತ್ತರಿಸುವುದಿಲ್ಲ. ಬದಲಾಗಿ ದೇವರು ಯೋಬನಿಗೆ ಉದ್ದವಾದ ಪ್ರಶ್ನೆಗಳ ಪಟ್ಟಿಯನ್ನು ಇಡುತ್ತಾನೆ, "ಶೂರನಂತೆ ನಡುಕಟ್ಟಿಕೋ; ನಾನು ಪ್ರಶ್ನೆ ಮಾಡುವೆನು, ನೀನೇ ನನಗೆ ಉಪದೇಶಿಸು" (38:3,40:7). ಈ ಎಲ್ಲಾ ಪ್ರಶ್ನೆಗಳು ಸೃಷ್ಟಿಕರ್ತನು ದೇವರೋ ಅಥವಾ ಯೋಬನೋ? ಎಂಬುದರ ಕುರಿತಾಗಿ ಆಗಿವೆ.

ಮೊದಲು ಯೋಬನು ಹೆಚ್ಚುಕಡಿಮೆ ಮಾತಿಲ್ಲದವನಾಗಿಬಿಡುತ್ತಾನೆ. "ಅಯ್ಯೋ, ನಾನು ಅಲ್ಪನೇ ಸರಿ, ನಿನಗೆ ಪ್ರತ್ಯುತ್ತರವಾಗಿ ಏನು ಹೇಳಲಿ?" (40:4). ನಂತರ ಯೋಬನು ಬೂದಿ ಮತ್ತು ದೂಳಿನಲ್ಲಿ ಸಂಪೂರ್ಣವಾದ ಪಶ್ಚಾತ್ತಾಪಕ್ಕೆ ತಳ್ಳಲ್ಪಡುತ್ತಾನೆ (42:6).

ಓದಿರಿ

- ಯೋಬ 38:1–40:2 (ದೇವರ ಮೊದಲ ಮಾತು)
- ಯೋಬ 40:3–5 (ಯೋಬನ ಪ್ರತ್ಯುತ್ತರ)
- ಯೋಬ 40:6–41:34 (ದೇವರ ಎರಡನೇ ಮಾತು)
- ಯೋಬ 42:1–6 (ಯೋಬನ ಪಶ್ಚಾತ್ತಾಪ)

ಪ್ರಶ್ನೆಗಳು

1. ದೇವರು ತನ್ನ ಮೊದಲ ಮಾತಿನಲ್ಲಿ ಯಾವುದರ ಬಗ್ಗೆ ಮಾತನಾಡುತ್ತಾನೆ (38:1–40:2)?
2. ದೇವರು ಈ ರೀತಿ ಮಾತನಾಡುತ್ತಾನೆಂದು ನೀವು ಏಕೆ ಯೋಚಿಸುವಿರಿ (38:1–40:2)?
3. ದೇವರ ಮೊದಲ ಮಾತಿಗೆ ಯೋಬನು ಹೇಗೆ ಪ್ರತಿಕ್ರಿಯಿಸುತ್ತಾನೆ (42:3–5)?
4. ದೇವರು ತನ್ನ ಎರಡನೇ ಮಾತನ್ನು ಹೇಗೆ ಪ್ರಾರಂಭಿಸುತ್ತಾನೆ?
5. ಯೋಬನ ಬಗ್ಗೆ ದೇವರ ಮುಖ್ಯ ಖಂಡನೆಯೇನು (40:6–14)?
6. ಮೊಸಳೆ ಮತ್ತು ಲಿವ್ಯಾತಾನನ ಕುರಿತಾದ ವಿಷಯಗಳು ಯೋಬನ ಬಗ್ಗೆ ದೇವರ ಖಂಡನೆಗೆ ಹೇಗೆ ಸಂಬಂಧಿಸುತ್ತವೆ (ನೋಡಿ 41:10–11)?
7. ದೇವರ ಮಾತುಗಳು ಯೋಬನ ಮೇಲೆ ಯಾವ ಪರಿಣಾಮವನ್ನು ಬೀರುತ್ತವೆ (42:1–6)?
8. ಯೋಬನು ದೇವರಿಗೆ "ದೂಳು ಮತ್ತು ಬೂದಿಯಲ್ಲಿ ಕೂತು" ಪಶ್ಚಾತ್ತಾಪಪಡುತ್ತೇನೆ ಎಂದು ದೇವರಿಗೆ ಹೇಳುತ್ತಾನೆ (42:6). ಯೋಬನು ನಿಖರವಾಗಿ ಯಾವುದಕ್ಕಾಗಿ ಪಶ್ಚಾತ್ತಾಪಪಡುತ್ತಾನೆ ಎಂದು ನೀವು ಯೋಚಿಸುವಿರಿ?
9. ದೇವರ ಮಾತುಗಳು ಸುಂದರವಾಗಿ ಕಾವ್ಯಾತ್ಮಕವಾಗಿವೆ. ನಿಮಗೆ ಗಮನಾರ್ಹ ಎನಿಸುವ ಕೆಲವು ಕಾವ್ಯಾತ್ಮಕ ಹೇಳಿಕೆಗಳನ್ನು ಆರಿಸಿ ಮತ್ತು ನಿಮ್ಮ ಗುಂಪಿನಲ್ಲಿರುವ ಇತರರೊಂದಿಗೆ ಹಂಚಿಕೊಳ್ಳಿರಿ.
10. ದೇವರು ಯೋಬನಿಗೆ ಕೇಳುವ ಪ್ರಶ್ನೆಗಳೆಲ್ಲವೂ ಅಲಂಕಾರಿಕವಾಗಿವೆ, ಉದಾಹರಣೆಗಳನ್ನು ಕೊಡಿರಿ ಮತ್ತು ಅವು ಯಾಕೆ ಅಲಂಕಾರಿಕವಾಗಿವೆ ಎಂದು ವಿವರಿಸಿರಿ. ದೇವರು ಯೋಬನನ್ನು ಯಾಕೆ ಈ ವಿಧದಲ್ಲಿ ಸಂಬೋಧಿಸುತ್ತಾನೆಂದು ನೀವು ಯೋಚಿಸುವಿರಿ?

11. ದೇವರು 38:21 ರಲ್ಲಿ ಯೋಬನನ್ನು ಸಂಬೋಧಿಸುವಾಗ ವ್ಯಂಗ್ಯವನ್ನು ಉಪಯೋಗಿಸುತ್ತಾನೆ. ವ್ಯಂಗ್ಯವನ್ನು ವಿವರಿಸಿರಿ.

12. ಮೊಸಳೆ (40:15–254) ಮತ್ತು ಲಿವ್ಯಾತಾನ (41:1–34) ರ ವರ್ಣನೆಯಲ್ಲಿ ಅತಿಶಯೋಕ್ತಿ ಮತ್ತು ರೂಪಾಲಂಕಾರಕ್ಕೆ ನಾವು ಅನೇಕ ಉದಾಹರಣೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಕೆಲವನ್ನು ನಿಮ್ಮ ಗುಂಪಿನಲ್ಲಿನ ಇತರರಿಗೆ ವಿವರಿಸಿರಿ.

13. ಕೆಳಕಂಡ ವಾಕ್ಯ ಭಾಗಗಳನ್ನು ಓದಿರಿ ಮತ್ತು ಕಠಿಣ ಪರಿಸ್ಥಿತಿಗಳಲ್ಲಿ ದೇವರೊಂದಿಗೆ ಹೇಗೆ ವರ್ತಿಸಬೇಕು ಎಂಬುದಕ್ಕೆ ಅವು ಸಕರಾತ್ಮಕ ಉದಾಹರಣೆಗಳನ್ನು ಹೇಗೆ ಕೊಡುತ್ತವೆ ಎಂಬುದನ್ನು ಬರೆಯಿರಿ:

    ಅ. ಕೀರ್ತನೆ 57

    ಆ. ಪ್ರಲಾಪಗಳು 3:19–33

    ಇ. ಹಬಕ್ಕೂಕ 3:17–19

    ಈ. ಲೂಕ 22:39–46

14. ನಾವು ಬಾಧೆಪಡುವಾಗ ನಾವು ಕಹಿಭಾವನೆ ಹೊಂದುವನ್ನು ತೆಡೆಯಲು ನಾವು ಮಾಡಬಹುದಾದ ಕೆಲವು ಪ್ರಾಯೋಗಿಕ ಸಂಗತಿಗಳು ಯಾವುವು?

15. ಯೋಬ 42:2 ರಲ್ಲಿ ಯೋಬನು **"ನೀನು ಸಕಲ ಕಾರ್ಯಗಳನ್ನು ನಡೆಸಬಲ್ಲಿಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ"** ಎಂದು ಹೇಳುತ್ತಾನೆ. ದೇವರೊಂದಿಗೆ ಸರಿಯಾದ ರೀತಿಯಲ್ಲಿ ವರ್ತಿಸಲು ನಾವು ಬಾಧೆಪಡುವಾಗ ಈ ರೀತಿಯ ಜ್ಞಾನವು ಹೇಗೆ ಸಹಾಯಕವಾಗುತ್ತದೆ?

ಯೋಬನ ಅಧ್ಯಯನ 7: ಒಂದು ಹರ್ಷದ ಮುಕ್ತಾಯ ಮತ್ತು ಉತ್ತರಿಸಲ್ಪಡದ ಪ್ರಶ್ನೆಗಳು

ಪೀಠಿಕೆ

ನಮ್ಮಲ್ಲಿ ಹೆಚ್ಚಿನವರೆಲ್ಲರೂ ಸಂತೋಷದ ಅಂತ್ಯವನ್ನು ಇಷ್ಟಪಡುತ್ತೇವೆ. ಒಂದು ಸಂತೋಷದ ಅಂತ್ಯವಿರುವ ಪುಸ್ತಕ ಅಥವಾ ಸಿನೆಮಾವನ್ನು ನಾವು ಇಷ್ಟಪಡುತ್ತೇವೆ. ಕೆಟ್ಟ ವ್ಯಕ್ತಿ ಸೋತು ಮತ್ತು ಒಳ್ಳೆಯ ವ್ಯಕ್ತಿ ಜಯಿಸುವುದನ್ನು ನಾವು ಬಯಸುತ್ತೇವೆ. ಕಳೆದು ಹೋದ ಮಗುವು ಸಿಕ್ಕು ಮತ್ತು ಪ್ರೇಮಿಗಳು ಒಂದಾಗುವುದನ್ನು ನಾವು ಇಷ್ಟಪಡುತ್ತೇವೆ. ಯೋಬನ ಪುಸ್ತಕವು ಒಂದು ಸಂತೋಷದ ಅಂತ್ಯವನ್ನು ಹೊಂದಿದೆ. ಹಾಗಾಗಿ ನಮ್ಮಲ್ಲಿ ಹೆಚ್ಚಿನವರು ಇದು ಹೇಗೆ ಅಂತ್ಯವಾಗುತ್ತದೆಂಬುದರಿಂದ ಮೆಚ್ಚುವವರಾಗಿರಬೇಕು.

ಆದರೆ ಅಂತ್ಯವು ಸಂತೋಷವಲ್ಲ. ಇದೊಂದು ಗೊಂದಲ ಸಹ ಆಗಿದೆ. ಯೋಬನು ತನ್ನ ಸಂಪತ್ತು ಮತ್ತು ಸ್ಥಾನಮಾನಕ್ಕೆ ತಿರುಗಿ ಉನ್ನತಿಗೆ ಯಾಕೆ ಏರಿಸಲ್ಪಟ್ಟನೆಂಬುದಕ್ಕೆ ಯಾವುದೇ ಕಾರಣ ಕೊಡಲ್ಪಟ್ಟಿಲ್ಲ. ಸೈತಾನನ ಶೋಧನೆಯನ್ನು/ಪರೀಕ್ಷೆಯನ್ನು ಪಾಸಾದುದಕ್ಕೆ/ಗೆದ್ದದಕ್ಕೆ ಇದೊಂದು ಬಹುಮಾನ/ಪ್ರತಿಫಲವಾ? ಮತ್ತು ಸೈತಾನನ ಕುರಿತು ಏನು? ಮೊದಲು ಎಲ್ಲಾ ರೀತಿಯ ಕಷ್ಟಗಳನ್ನು ಪ್ರಾರಂಭಿಸಿದವನು ಆತನೇ. ಯೋಬನ ಸ್ನೇಹಿತರು ಹೇಳಿದ್ದೆಲ್ಲಾ ತಪ್ಪೆಂದು ದೇವರು ಹೇಳುತ್ತಾನೆ. ಆದರೆ ದೇವರು ಯಾಕೆ ಸೈತಾನನ್ನು ಗದರಿಸುವುದಿಲ್ಲ?

ಮತ್ತು 32 ನೇ ಅಧ್ಯಾಯದಲ್ಲಿ ಫಕ್ಕನೆ ಬಂದ ಯೌವನಸ್ಥನಾದ ಎಲೀಹುನ ಕುರಿತೇನು? ಪುಸ್ತಕದ ಕೊನೆಯಲ್ಲಿ ದೇವರು ಯೋಬನೊಂದಿಗೆ ಮತ್ತು ಆತನ ಸ್ನೇಹಿತರೊಂದಿಗೆ ಮಾತನಾಡುತ್ತಾನೆ. ಎಲೀಹು ಯಾರೆಂದು ಖಚಿತಪಡಿಸದೆ ಸಹ ಈ ಪುಸ್ತಕವು ಅಂತ್ಯಗೊಳ್ಳುತ್ತದೆ.

ಯೋಬನ ಅಂತ್ಯವು ಸಂತಸಭರಿತವಾಗಿರಬಹುದು, ಆದರೆ ಈ ಎಲ್ಲಾ ಸಡಿಲ ಅಂತ್ಯಗಳಿಂದಾಗಿ ಇದು ಸ್ವಲ್ಪ ನಿರಾಶದಾಯಕವೂ ಆಗಿದೆ. ನಮಗೆ ಇನ್ನಷ್ಟು ಹೇಳಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ನಾವು ಬಯಸುತ್ತೇವೆ.

ಓದಿರಿ

ಯೋಬ 42:7–17

ಪ್ರಶ್ನೆಗಳು

1. ಯೋಬನ ಸ್ನೇಹಿತರ ಬಗ್ಗೆ ದೇವರ ಅಭಿಪ್ರಾಯವೇನು?
2. ದೇವರು ಎಲೀಫಜನಿಗೆ ಹೇಳುವ "ಯಥಾರ್ಥವಾದದ್ದನ್ನು ನೀವು ನುಡಿಯಲಿಲ್ಲ" ಎಂಬ ಹೇಳಿಕೆಯನ್ನು ವಿವರಿಸಿರಿ (7, 8).
3. ದೇವರು ಎಲೀಫಜನಿಗೆ ಹೇಳುವ "ಯೋಬನು ನನ್ನ ವಿಷಯವಾಗಿ ಯಥಾರ್ಥವನ್ನಾಡಿದಂತೆ ನೀವು ಆಡಲಿಲ್ಲ" ಎಂಬ ಮಾತಿನ ಅರ್ಥವೇನು (7, 8)?
4. ಯೋಬನು ತನ್ನ ಸ್ನೇಹಿತರಿಗಾಗಿ ಪ್ರಾರ್ಥಿಸಿದ ನಂತರ ಆತನಿಗೆ ಏನಾಯಿತು? ಪುಸ್ತಕದ ಅಂತ್ಯದಲ್ಲಿನ ಆತನ ಪರಿಸ್ಥಿತಿಯನ್ನು ಪುಸ್ತಕದ ಪ್ರಾರಂಭದಲ್ಲಿನ ಆತನ ಪರಿಸ್ಥಿತಿಗೆ ಹೋಲಿಸಿರಿ.
5. ಪುಸ್ತಕದ ಕೊನೆಯಲ್ಲಿ ನಿಮಗೆ ಹೇಗೆ ಅನಿಸುತ್ತದೆ? ಸಂತೋಷವಾಗಿದೆಯೇ? ಗೊಂದಲವಾಗಿದೆಯೇ? ಆಶ್ಚರ್ಯವಾಗಿದೆಯೇ? ವಿವರಿಸಿರಿ.
6. ಯೋಬನ ಪುಸ್ತಕದಲ್ಲಿ ನೀವು ಇನ್ನಷ್ಟು ತಿಳಿದುಕೊಳ್ಳಲು ಬಯಸುವ ವಿಷಯಗಳು ಅಥವಾ ವ್ಯಕ್ತಿಗಳು ಇದ್ದಾರೆಯೇ? ಮತ್ತು ಪುಸ್ತಕದ ಅಂತ್ಯವು ನಿಮಗೆ ಹೇಳುವುದಿಲ್ಲವೇ? ವಿವರಿಸಿರಿ.

7. ಈ ಪುಸ್ತಕದಲ್ಲಿನ ಎಲ್ಲಾ ವ್ಯಕ್ತಿಗಳ ಬಗ್ಗೆ ತಿರುಗೊಮ್ಮೆ ಯೋಚಿಸಿ ನೋಡಿರಿ. ಸ್ವಲ್ಪಮಟ್ಟಿಗೆ ಪ್ರತೀ ವ್ಯಕ್ತಿ ಸಹ ಕೆಲವೊಂದನ್ನು ತಿಳಿದಿಲ್ಲ ಅಥವಾ ಅರ್ಥೈಸಿಕೊಂಡಿಲ್ಲ.

   ಅ. ಸೈತಾನನಿಗೆ ಏನು ಅರ್ಥವಾಗಲಿಲ್ಲ?

   ಆ. ಯೋಬನು ಏನನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ?

   ಇ. ಯೋಬನ ಸ್ನೇಹಿತರು ಏನನ್ನು ಅರ್ಥಮಾಡಿಕೊಳ್ಳಲಿಲ್ಲ?

   ಈ. ಎಲೀಹು ಏನನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ?

8. ಯೋಬನ ಪುಸ್ತಕದಲ್ಲಿ ಎಲ್ಲವನ್ನು ತಿಳಿದಿರುವ ಮತ್ತು ಅರ್ಥಮಾಡಿಕೊಂಡಿರುವ ಏಕೈಕ ವ್ಯಕ್ತಿ ಯಾರು?

9. ಯೋಬನ ಪುಸ್ತಕವು ಜೀವನದ ಬಗ್ಗೆ ಏನು ಹೇಳುತ್ತಿದೆ ಎಂದು ನೀವು ಯೋಚಿಸುವಿರಿ?

10. ದೇವರಲ್ಲಿ ನಂಬಕೆಯಿಟ್ಟಿದ್ದೇವೆಂದು ಹೇಳುವ ನಾವು ದೇವರನ್ನು ಅರಿತುಕೊಳ್ಳುವುದಕ್ಕೆ ಯಾಕೆ ಹೆಚ್ಚು ಬೆಲೆಕೊಡುವುದಿಲ್ಲ? ದೇವರನ್ನು ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ನಾವು ಬೆಲೆಕೊಡುವ ಇತರೆ ಕೆಲವು ಸಂಗತಿಗಳು ಯಾವುವು?

11. ಯೋಬ ಪುಸ್ತಕದ ಅಧ್ಯಯನಗಳನ್ನು ತಿರುಗೊಮ್ಮೆ ನೋಡಿರಿ. ನೀವು ಕಲಿತುಕೊಂಡ ಅತೀ ಪ್ರಾಮುಖ್ಯ ಸಂಗತಿಯೇನು? ಯಾಕೆ ಎಂದು ವಿವರಿಸಿರಿ. ಈ ಹೊಸ ತಿಳುವಳಿಕೆಯಿಂದ ನಿಮ್ಮ ಜೀವನದಲ್ಲಿ ಯಾವ ಬದಲಾವಣೆಗಳನ್ನು ನೀವು ಮಾಡಲು ಹೋಗುವಿರಿ?

ಯೋಬ: ಪರೀಕ್ಷಾ ಪ್ರಶ್ನೆಪತ್ರಿಕೆ

ಜೋಡಿ ಅಥವಾ ಚಿಕ್ಕ ಗುಂಪುಗಳಾಗಿ ಕಾರ್ಯನಿರ್ವಹಿಸಿರಿ. ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿರಿ. ನಿಮ್ಮ ನೋಟ್ಸ್ ಕೋರ್ಸಿನ ವಸ್ತುಗಳನ್ನು ಉಪಯೋಗಿಸಬಹುದು. ಆದರೆ ಅದರಿಂದ ನೇರವಾಗಿ ನಕಲಿ ಮಾಡಬಾರದು. ನಿಮ್ಮ ಪದಗಳಲ್ಲಿ ಹೇಳಿಕೆಗಳನ್ನು ಉಪಯೋಗಿಸಿರಿ.

ಉತ್ತರ ಬರೆಯುವ ಮೊದಲು ಎಲ್ಲಾ ಪ್ರಶ್ನೆಗಳನ್ನೊಮ್ಮೆ ಓದಿರಿ.

1. ಯೋಬ ಪುಸ್ತಕದ ರಚನೆ ಏನು?
2. ಯೋಬನ **"ಜೀವನದ ಕಥೆಯನ್ನು"** ಕೆಲವು ವಾಕ್ಯಗಳಲ್ಲಿ ಪುನಃ ಹೇಳಿರಿ.
3. ಓದುಗರಾದ ನಮಗೆ ಯೋಬನ ಪರಿಸ್ಥಿತಿಯ ಬಗ್ಗೆ ಅವನು ಸ್ವತಃ ಹೇಗೆ ವರ್ತಿಸುತ್ತಾನೆಂದು ತಿಳಿದಿದೆ. ಹೇಗೆ ಎಂದು ವಿವರಿಸಿ.
4. ಯೋಬನ ಪುಸ್ತಕದಲ್ಲಿ ಸೈತಾನನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
5. ಯೋಬನ ಸ್ನೇಹಿತರು:

   ಅ. ಅವರು ಯಾರು?

   ಆ. ಅವರ **"ದೈವಶಾಸ್ತ್ರ"**ವನ್ನು ವಿವರಿಸಿರಿ.

   ಇ. ಯೋಬನು ಅವರ ಸಲಹೆಯನ್ನು ಕೇಳಲು ಯಾಕೆ ನಿರಾಕರಿಸಿದನು?

   ಈ. ಅವರ ಬಗ್ಗೆ ದೇವರ ಅಭಿಪ್ರಾಯವೇನು?
6. ಯೋಬನ ಪರಿಸ್ಥಿತಿಯ ಬಗ್ಗೆ ಅವನ ಹತಾಶೆಯನ್ನು ವಿವರಿಸಿರಿ.
7. ಯೋಬ ಪುಸ್ತಕದಲ್ಲಿನ ಮುಖ್ಯ ವಿಷಯದ ಬಗೆಗಿನ ಈ ಹೇಳಿಯನ್ನು ವಿವರಿಸಿರಿ: **"ಯಾಕೆ** ಬಾಧೆಗಳು ಉಂಟಾಗುತ್ತವೆ ಎಂಬುದಕ್ಕೆ ಕಾರಣಗಳ ಪಟ್ಟಿಯೊಂದನ್ನು ಇದು ಕೊಡುವುದಿಲ್ಲ, ಬಾಧೆಗಳು ಉಂಟಾಗುವಾಗ ದೇವರೊಂದಿಗೆ **ಹೇಗೆ** ನಡಕೊಳ್ಳಬೇಕು ಎಂಬುದರ ಕಡೆಗೆ ಇದು ಹೆಚ್ಚು ಗಮನ ಹರಿಸುತ್ತದೆ".
8. ಯೋಬನ ಪುಸ್ತಕದಲ್ಲಿ ನಾವು ದೇವರ ಬಗ್ಗೆ ಏನು ಕಲಿಯುತ್ತೇವೆ?
9. ಯೋಬನ ಪುಸ್ತಕದ ಅಧ್ಯಯನದಿಂದ ನೀವು ಏನನ್ನು ಕಲಿತಿದ್ದೀರಿ?

ಇಬ್ರಿಯ ಪದ್ಯ ಮತ್ತು ಜ್ಞಾನ

ಇಬ್ರಿಯ ಪದ್ಯಕ್ಕೆ ಪೀಠಿಕೆ

ಶಿಕ್ಷಕರಿಂದ ನಡೆಸಲ್ಪಡುವ ತರಗತಿಯ ಚರ್ಚೆ

1. ಗದ್ಯ ಮತ್ತು ಪದ್ಯದ ನಡುವಿನ ವ್ಯತ್ಯಾಸವೇನು?
2. ಗದ್ಯವು ಯಾವಾಗ ಉಪಯೋಗಿಸಲ್ಪಡುತ್ತದೆ? ಮತ್ತು ಪದ್ಯವು ಯಾವಾಗ ಉಪಯೋಗಿಸಲ್ಪಡುತ್ತದೆ?
3. ಕನ್ನಡದ ಕವನವನ್ನು ನೀವು ಹೇಗೆ ವರ್ಣಿಸುವಿರಿ? ಕಪ್ಪು ಹಲಗೆಯ ಮೇಲೆ ಕೆಲವೊಂದು ಗುಣಲಕ್ಷಣಗಳನ್ನು ಪಟ್ಟಿ ಮಾಡಿರಿ.
4. ಗದ್ಯದಿಂದ ನಾವು ಅನೇಕ ಪ್ರಭೇಧಗಳನ್ನು (ವಿಭಿನ್ನ ಪಠ್ಯರೂಪಗಳು) ಉದಾಹರಣೆಗೆ, ಕಾದಂಬರಿಗಳು, ಚಿಕ್ಕ ಕಥೆಗಳು, ದಿನಪತ್ರಿಕೆಯ ಲೇಖನಗಳು, ಪತ್ರಗಳು, ಸರಕುಗಳ ಪಟ್ಟಿ, ಕೋರ್ಟಿನ ಆಜ್ಞೆಗಳು, ದೂರವಾಣಿ ಬಿಲ್ಲುಗಳು ಇಂಥವುಗಳನ್ನು ಕಾಣುತ್ತೇವೆ. ಹಾಗಾದರೆ ಪದ್ಯದ ಕುರಿತೇನು? ವಿಭಿನ್ನವಾದ ಪದ್ಯರೂಪ ಪ್ರಭೇಧಗಳು ಇವೆಯಾ?

   ಉತ್ತರ: ಹೌದು ಇವೆ. ಉದಾಹರಣೆಗೆ, ಪುರಾಣ, ಕವಿತೆಗಳು, ಪ್ರೇಮಕಾವ್ಯ, ಪ್ರಕೃತಿಯ ಹಾಡುಗಳು, ಧಾರ್ಮಿಕ ಶೋಕಗಳು ಮತ್ತು ಆರಾಧನಾ ಹಾಡುಗಳು, ಪದ್ಯರೂಪಿ ಜ್ಞಾನೋಕ್ತಿಗಳು, ಮಂತ್ರಗಳು, ಪದ್ಯರೂಪಿ ಶಾಪ/ಆಶೀರ್ವಾದಗಳು.

   ಕೆಲವು ಕನ್ನಡದ ಪ್ರಭೇಧಗಳನ್ನು ಉದಾಹರಣೆಯಾಗಿ ಕೊಡಿರಿ.

ಇಂಗ್ಲೀಷ್ ಪದ್ಯವು ಈ ರೀತಿಯ ಗುಣಲಕ್ಷಣ ಹೊಂದಿರುವುದು

1. ಒಂದು ಪದ್ಯಕ್ಕೆ ಪ್ರತ್ಯೇಕ ರೂಪವಿರುತ್ತದೆ: ಹೆಚ್ಚಾಗಿ ಇದು ಶ್ಲೋಕ ರೂಪದಲ್ಲಿ ಅಥವಾ ಸಾಲುಗಳ ಗುಂಪುಗಳಲ್ಲಿ ಬರೆಯಲ್ಪಟ್ಟಿರುತ್ತದೆ. ಇದು ಹೆಚ್ಚಾಗಿ ಚಿಕ್ಕ ಸಾಲುಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.
2. ಒಂದು ಪದ್ಯವು ಸಾಮಾನ್ಯವಾಗಿ ಹೆಚ್ಚು ಅಥವಾ ಕಡಿಮೆ ವಿಭಿನ್ನವಾದ ಲಯ ಅಥವಾ ತಾಳವನ್ನು ಹೊಂದಿರುತ್ತದೆ, ಇದು ಸಾಮಾನ್ಯವಾಗಿ ಯಥಾಪ್ರಕಾರದಲ್ಲಿರುತ್ತದೆ.
3. ಪದ್ಯವು ಕೆಲವೊಮ್ಮೆ ಸಾಲುಗಳ ಕೊನೆಯಲ್ಲಿ ಪ್ರಾಸವನ್ನು ಹೊಂದಿರುತ್ತದೆ. ಉದಾಹರಣೆಗೆ ಇಂಗ್ಲೀಷಿನಲ್ಲಿರುವ ಪ್ರಾಸದ ವಿಧಗಳು.
4. ಸಾಮಾನ್ಯವಾಗಿ ಒಂದು ಪದ್ಯವು ಇತರ ರೀತಿಯ ಶಬ್ಧಪ್ರಭಾವವನ್ನು ಬಳಸುತ್ತದೆ ಉದಾಹರಣೆ: ಒಂದೇ ರೀತಿಯ ಶಬ್ಧದೊಂದಿಗೆ ಪ್ರಾರಂಭವಾಗುವ ಪದಗಳು ಶಬ್ಧದ ಹೋಲಿಕೆಗಳು ಮತ್ತು ಪುನರಾವರ್ತನೆ, ಪದ ಮತ್ತು ಹೇಳಿಕೆಗಳ ಪುನರಾವರ್ತನೆ.
5. ಪದ್ಯಗಳು ಅಲಂಕಾರಿಕ ಭಾಷೆಗಳನ್ನು (ಚಿತ್ರಣಗಳು, ರೂಪಾಲಂಕಾರಗಳು, ಉಪಮೆ) ಗದ್ಯಕಿಂತ ಹೆಚ್ಚಾಗಿ ಉಪಯೋಗಿಸುತ್ತದೆ.
6. ಪದ್ಯಗಳು ಗದ್ಯಕ್ಕಿಂತಲೂ ಹೆಚ್ಚಾಗಿ ಕೇಂದ್ರೀಕರಿಸಲ್ಪಟ್ಟಿವೆ (ಆಲೋಚನೆಯ ಮೇಲೆ, ಒಂದು ಭಾವನೆಯ ಮೇಲೆ, ಒಂದು ಒಲವಿನ ಮೇಲೆ). ಪರಿಣಾಮವಾಗಿ ಸಾಮಾನ್ಯವಾಗಿ ಪದ್ಯಗಳು ಗದ್ಯಕ್ಕಿಂತಲೂ ಹೆಚ್ಚಾಗಿ ಗಮನ ಹರಿಸುವಂಥವುಗಳಾಗಿವೆ.
7. ಪದ್ಯದ ಭಾಷೆಯು ಸಾಮಾನ್ಯವಾಗಿ ಗದ್ಯಕ್ಕಿಂತಲೂ ಸಾರವುಳ್ಳದ್ದಾಗಿವೆ. ಅದರಲ್ಲಿ ಅನೇಕ ಪದಗಳಿರುತ್ತವೆ. ಭಾವನಾತ್ಮಕ ಪದಗಳು ಮತ್ತು ಹೇಳಿಕೆಗಳು ಹೆಚ್ಚಾಗಿ ಪದೇ ಪದೇ ಬರುವಂಥವುಗಳಾಗಿವೆ. ನಾವು ಹೆಚ್ಚಾಗಿ ಪರ್ಯಾಯ ಮತ್ತು ಶಬ್ಧಕೋಶದ ಬದಲಾವಣೆಯನ್ನು ಕಾಣುತ್ತೇವೆ. ಮೊದಲಿನ ಅಥವಾ ಪವಿತ್ರ ಪಠ್ಯಗಳಿಗೆ ಸೂಚನೆಗಳನ್ನು (ಅಥವಾ ಪ್ರತಿಧ್ವನಿಯನ್ನು) ಸಹ ಕಾಣುತ್ತೇವೆ.

8. ಪದ್ಯದ ಭಾಷೆಯು ಗದ್ಯದ ಭಾಷೆಗಿಂತಲೂ ಹೆಚ್ಚಾಗಿ ಸ್ವತಂತ್ರವಾಗಿರದಿದ್ದಲ್ಲಿ ಅನಾವಶ್ಯಕ ಪದಗಳ ಕ್ರಮವನ್ನು ಅಪರಿಚಿತ ಮತ್ತು ಅಸ್ಪಷ್ಟ ವ್ಯಾಕರಣ ಮತ್ತು ಪದಸಂಕೋಚಗಳನ್ನು ಕಾಣುತ್ತೇವೆ.

ಹೆಚ್ಚಿನ ಈ ಗುಣಲಕ್ಷಣಗಳನ್ನೆಲ್ಲಾ ಕನ್ನಡದ ಪದ್ಯಗಳಲ್ಲಿ ಸಹ ಕಾಣಬಹುದು. ಇವೆಲ್ಲವೂ ಸಹ ಪ್ರತೀ ಪದ್ಯ ಅಥವಾ ಪದ್ಯರೂಪಿ ಪಠ್ಯಗಳಲ್ಲಿ ಕಾಣಸಿಗುವುದಿಲ್ಲ. ಆದರೆ ಸಾಮಾನ್ಯವಾಗಿ ಕೆಲವು ಇರುವವು. ಇವು ಪದ್ಯ ಮತ್ತು ಗದ್ಯ ಎರಡು ನಾವು ಹೇಳಲು ಸಾಧ್ಯವಾಗುವಂತಿರುತ್ತದೆ. ಗದ್ಯ ಮತ್ತು ಪದ್ಯಗಳ ನಡುವಿನ ವ್ಯತ್ಯಾಸಗಳು ಓದುಗರಿಗೆ ಪರಿಣಾಮವನ್ನು ಬೀರುತ್ತದೆ. ಪದ್ಯರೂಪಿ ಪಠ್ಯವು ಗದ್ಯರೂಪಿ ಪಠ್ಯಕ್ಕಿಂತಲೂ ವಿಭಿನ್ನವಾಗಿ ಓದುವಂತಾಗಬೇಕು, ಅಲ್ಲದೇ ವಿಭಿನ್ನವಾಗಿ ಅರ್ಥೈಸುವಂತಾಗಬೇಕು ಮತ್ತು ವ್ಯಾಖ್ಯಾನಿಸುವಂತಾಗಬೇಕು.

ಎರಡು ದೊಡ್ಡ ಸಮಸ್ಯೆಗಳು

ಪದ್ಯವನ್ನು ಓದಿ ಮತ್ತು ಅಧ್ಯಯನ ಮಾಡುವಾಗ ಹೆಚ್ಚಾಗಿ ಎರಡು ಸಮಸ್ಯೆಗಳನ್ನು ನಾವು ಎದುರಿಸುತ್ತೇವೆ:

1. ಪದ್ಯವು ತೀವ್ರವಾಗಿ ಸಂಸ್ಕೃತಿಯಿಂದ ಪ್ರಭಾವಿತಗೊಂಡಿರುತ್ತದೆ. ಇದರರ್ಥ ಇನ್ನೊಂದು ಸಂಸ್ಕೃತಿಯ ವ್ಯಕ್ತಿಯು (ಉದಾಹರಣೆಗೆ, ಇಂಗ್ಲೀಷ್ ಪದ್ಯವನ್ನು ಓದುವ ಕನ್ನಡಿಗನು) ಸ್ಥಳೀಯ ಭಾಷಿಕನಿಗೆ ಸಾಮಾನ್ಯವೆನಿಸುವ ಕೆಲವು ಅಂಶಗಳನ್ನು ಕಳೆದುಕೊಳ್ಳುವನು. ಕೆಲವು ಉದಾಹರಣೆಗಳು ಇಲ್ಲಿವೆ: ಆತನು ರೂಪಾಲಂಕಾರಗಳ ಅರ್ಥವನ್ನು ಕಳಕೊಳ್ಳಬಹುದು. ಆತನು ಪ್ರಸ್ತಾಪ/ಸೂಚನೆ ಅಥವಾ ಹೇಳಿಕೆಗಳನ್ನು ಅಥವಾ ಜ್ಞಾನೋಕ್ತಿಗಳನ್ನು ಕಾಣದೇ ಇರಬಹುದು. ಆತನು ಪದಗಳ ಅರ್ಥದ ಅನಾವಶ್ಯಕ ನೆರಳನ್ನು ಕಳಕೊಳ್ಳಬಹುದು. ಪದಗಳ ಅನಾವಶ್ಯಕ ಕ್ರಮದಿಂದ ಆತನು ಗಲಿಬಿಲಿಗೊಳ್ಳಬಹುದು.

2. ಪದ್ಯವು ಭಾಷಾಂತರಿಸಲು ಕಷ್ಟಕರವಾಗುತ್ತದೆ. ಯಾವ (ಇದರ ತಾಳ, ಪ್ರಾಸ, ವಿಧಗಳ ಅರ್ಥದ ನೆರಳು, ಪ್ರಸ್ತಾಪ, ಇದರ ಅಲಂಕಾರಿಕ ಭಾಷೆ ಇತ್ಯಾದಿ) ಇನ್ನೊಂದು ಭಾಷೆಗೆ ಭಾಷಾಂತರಿಸಲಾರನು. ಅನುವಾದಕನು ಪದ್ಯವೊಂದು ತೆಳ್ಳಗಾಗುವುದರೊಂದಿಗೆ ಮುಕ್ತಾಯಗೊಳಿಸುವನು (ತೆಳ್ಳಗೆ ಅಥವಾ ಬಲಹೀನ ಅಥವಾ ಸಮಾನ – ನಮ್ಮ ಕನ್ನಡದ ಭಾಷಾಂತರವನ್ನು ಸಹ ಸೇರಿ ಅನೇಕ ಸತ್ಯವೇದ ಭಾಷಾಂತರದ ಪದ್ಯರೂಪಿ ಪದ್ಯಗಳಲ್ಲಿ ಅನೇಕ ಉದಾಹರಣೆಗಳನ್ನು ಕಾಣಬಹುದು). ಅಥವಾ ಅನುವಾದಕನು ವಿಭಿನ್ನ ಪದ್ಯದೊಂದಿಗೆ ಕೊನೆಗೊಳಿಸಬಹುದು.

ಈ ಎರಡು ಸಮಸ್ಯೆಗಳ ಪರಿಣಾಮವಾಗಿ ಆಧುನಿಕ ಸತ್ಯವೇದದ ಭಾಷಾಂತರಗಳು ಅವು ಹಳೇ ಒಡಂಬಡಿಕೆಯ ಪದ್ಯರೂಪಿ ಪಠ್ಯಗಳನ್ನು ವ್ಯಾಖ್ಯಾನಿಸುವ ಮತ್ತು ಭಾಷಾಂತರಿಸುವ ರೀತಿಯು ವಿಭಿನ್ನವಾಗಿರುತ್ತವೆ. ಪದ್ಯರೂಪಿ ಪುಸ್ತಕದ ಕನ್ನಡ ಭಾಷಾಂತರವನ್ನು ಹೋಲಿಸುವಾಗ ಇದನ್ನು ನಾವು ಸುಲಭವಾಗಿ ಕಾಣಬಹುದು.

ಹಳೇ ಒಡಂಬಡಿಕೆಯಲ್ಲಿನ ಪದ್ಯರೂಪಿ ಪಠ್ಯಗಳು

ಶಿಕ್ಷಕರಿಂದ ನಡೆಸಲ್ಪಡುವ ತರಗತಿ ಚರ್ಚೆ

1. ಹಳೇ ಒಡಂಬಡಿಕೆಯಲ್ಲಿ ಪದ್ಯವು ಯಾವಾಗ ಉಪಯೋಗಿಸಲ್ಪಟ್ಟಿದೆ?.

   ಉತ್ತರ:

   - ಪದ್ಯರೂಪಿ ಪುಸ್ತಕಗಳು ಹೆಚ್ಚಾಗಿ ಪದ್ಯದಲ್ಲಿ ಬರೆಯಲ್ಪಟ್ಟಿದೆ. ಕೀರ್ತನೆಗಳು, ಪರಮಗೀತ, ಪ್ರಲಾಪಗಳು.
   - ಜ್ಞಾನದ ಪುಸ್ತಕಗಳು ಪದ್ಯರೂಪವನ್ನು ಒಳಗೊಂಡಿವೆ. ಜ್ಞಾನೋಕ್ತಿಗಳು, ಯೋಬ, ಪ್ರಸಂಗಿ.
   - ಪ್ರವಾದನ ಪುಸ್ತಕಗಳಲ್ಲಿನ ನುಡಿಗಳು ಪದ್ಯರೂಪದಲ್ಲಿವೆ. ಹಾಗೇ ಪ್ರವಾದನಾ ಪುಸ್ತಕಗಳಲ್ಲಿ ನಾವು ಅನೇಕ ಪದ್ಯರೂಪವನ್ನು ಕಾಣಬಹುದು.
   - ಹಾಡುಗಳು, ಪ್ರಾರ್ಥನೆಗಳು, ಹೇಳಿಕೆಗಳು, ಆಶೀರ್ವಾದಗಳು, ಶಾಪಗಳು ಮತ್ತು ವೃತ್ತಾಂತ ಪುಸ್ತಕಗಳಲ್ಲಿನ ಪ್ರವಾದನಾ ನುಡಿಗಳೆಲ್ಲವೂ ಪದ್ಯರೂಪದಲ್ಲಿವೆ. ಉದಾಹರಣೆಗೆ, ಆದಿಕಾಂಡ 2:23, ವಿಮೋ. 15, ಧರ್ಮೋ. 27, ನ್ಯಾಯಸ್ಥಾಪಕರು 5, 1 ಸಮುವೇಲ 2.

2. ಇಬ್ರಿಯ ಪದ್ಯವು ಕನ್ನಡ/ಇಂಗ್ಲೀಷ್ ಪದ್ಯಕ್ಕಿಂತ ಹೇಗೆ ವಿಭಿನ್ನವಾಗಿದೆ?

   ಉತ್ತರ:

   ಅ. ಇಬ್ರಿಯ ಪದ್ಯದಲ್ಲಿ ಎರಡು ಸಂಗತಿಗಳು ಕಾಣೆಯಾಗಿವೆ.

   - ಪ್ರಾಸ
   - ಮಾಪಕ (ತಾಳದ ವಿಶಿಷ್ಟ ಮತ್ತು ನಿಯಮಿತ ಮಾದರಿ)

   ಆ. ಎರಡು ಸಂಗತಿಗಳು ಇಬ್ರಿಯ ಪದ್ಯದಲ್ಲಿ ವಿಶಿಷ್ಟವಾಗಿವೆ.

   - ಹೆಚ್ಚಿನ ಪಠ್ಯಗಳಲ್ಲಿನ ಸಮಾನಾಂತರತೆ.
   - ಕೆಲವು ಪಠ್ಯಗಳ ಒಗಟು ರೂಪದ ಜೋಡಣೆ. ಇದರರ್ಥ ವಚನಗಳ ಅಥವಾ ವಚನಗಳ ಗುಂಪುಗಳು ವರ್ಣಮಾಲಾತ್ಮಕ ಜೋಡಣೆ – ಇಬ್ರಿಯ ವರ್ಣಮಾಲೆಯಲ್ಲಿ 22 ಅಕ್ಷರಗಳಿವೆ. ಇದರ ಉಹಾಹರಣೆಯನ್ನು ನಂತರದಲ್ಲಿ ನೀಡುತ್ತೇವೆ.

3. ಇಬ್ರಿಯ ಪದ್ಯದಲ್ಲಿ ಮತ್ತೇ ಏನನ್ನು ನಾವು ಕಾಣಬಹುದು (ಕನ್ನಡ/ಇಂಗ್ಲೀಷ್ ಪದ್ಯದಲ್ಲಿ ಕಾಣುವ ಲಕ್ಷಣಗಳು)?

   ಉತ್ತರ:

   - ಚಿತ್ರಣಗಳು (ಉಪಮೆ ಮತ್ತು ರೂಪಾಲಂಕಾರಗಳು)
   - ಭಾವನಾತ್ಮಕ ಮತ್ತು ವೈಯಕ್ತಿಕ ಭಾಷೆ
   - ಯೋಚನೆಗಳ ಗಮನ
   - ಶಬ್ಧಚಮತ್ಕಾರ (ಎರಡು ಪದಗಳ ನಡುವಿನ ಸಾಮಾನತೆಯನ್ನು ತೋರಿಸುವುದು)
   - ಅನಾವಶ್ಯಕ ಅಥವಾ ಪದ್ಯರೂಪಿ ಪದಗಳು.
   - ಅಕ್ಷರಗಳ ಧ್ವನಿ ಸಾಮ್ಯ (ವಿಭಿನ್ನ ಪದಗಳಲ್ಲಿ ಪುನರಾವರ್ತಿಸಲ್ಪಟ್ಟ ಶಬ್ಧಗಳ ಸಂಯೋಗ) ಅನುಪ್ರಾಸ (ಪದ ಮತ್ತು ಹೇಳಿಕೆಗಳ ಆರಂಭದಲ್ಲಿನ ಅದೇ ರೀತಿಯ ಶಬ್ಧಗಳ ಪುನಾರಾವರ್ತನೆ) ಮತ್ತು ಇತರ ಪ್ರವಾದನಾ

ಲಕ್ಷಣಗಳು, ಶಬ್ದಗಳು, ಆಲೋಚನೆಗಳು ಅಥವಾ ವಿಷಯವಸ್ತುಗಳ ಪುನರಾವರ್ತನೆ, ಸಾಲುಗಳಲ್ಲಿ ಅಥವಾ ಶ್ಲೋಕಗಳಲ್ಲಿ ಪದ್ಯದ ಜೋಡಣೆ.

ನಾಲ್ಕು ತೊಡಕುಗಳು

ಪದ್ಯದ ರೂಪಗಳು ಮತ್ತು ಹೇಳಿಕೆಗಳು ಸಂಸ್ಕೃತಿಗಳ ನಡುವೆ ಬೇರ್ಪಟ್ಟಿರುತ್ತವೆ. ಕನ್ನಡದ ಪದ್ಯವು ಸಾಂಪ್ರದಾಯಕ ಇಂಗ್ಲೀಷ್ ಕಾವ್ಯಕ್ಕಿಂತ ವಿಭಿನ್ನವಾಗಿರುತ್ತದೆ. ಮತ್ತು ಈ ಎರಡೂ ಪದ್ಯರೂಪಿ ಪರಂಪರೆಗಳು ಹಳೇ ಒಡಂಬಡಿಕೆಯಲ್ಲಿ ಕಾಣಬರುವ ಪಾಚೀನ ಇಬ್ರಿಯ ಪದ್ಯಗಳಿಗಿಂತ ವಿಭಿನ್ನವಾಗಿವೆ. ಯೋಬ, ಜ್ಞಾನೋಕ್ತಿಗಳು, ಪರಮಗೀತ, ಪ್ರಲಾಪಗಳು ಮತ್ತು ಪ್ರವಾದನಾ ನುಡಿಗಳಂತೆ ಇತರೆ ಹಳೇ ಒಡಂಬಡಿಕೆ ಪುಸ್ತಕದಲ್ಲಿನ ಇತರೆ ಪದ್ಯರೂಪಿ ಪಠ್ಯಗಳನ್ನು ಸೇರಿ ಕೀರ್ತನೆಗಳ ಪದ್ಯಗಳ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಲು ನಾವು ಹಳೇ ಒಡಂಬಡಿಕೆಯ ಪದ್ಯಗಳ ಗುಣಲಕ್ಷಣಗಳನ್ನು ಅಧ್ಯಯನ ಮಾಡಬೇಕು.

ಈ ಮೊದಲು ತಿಳಿಸಿದಂತೆ ನಾವು ಹಳೇ ಒಡಂಬಡಿಕೆಯ ಪದ್ಯಗಳನ್ನು ಕಲಿಯುವಾಗ ತಿರಸ್ಕರಿಸಲಾರದ ತೊಡಕುಗಳನ್ನು ನಾವು ಕಾಣುತ್ತೇವೆ. ಅಂತಹ ಪ್ರಮುಖ ನಾಲ್ಕು ತೊಡಕುಗಳು ಇಲ್ಲಿವೆ:

1. ನಾವು ನಮ್ಮ ಓದನ್ನು ಕೇವಲ **ಭಾಷಾಂತರದ** ಮೇಲೆ ಮಾತ್ರ ಆಧರಿಸಬಹುದು. ಹಾಗಾಗಿ ನಾವು ಅನುವಾದಕರು ಮೂಲ ಇಬ್ರಿಯ ಪಠ್ಯವನ್ನು ಹೇಗೆ ಒಪ್ಪಿಸಿಕೊಟ್ಟಿದ್ದಾರೆ ಅದರ ಮೇಲೆ ಆತುಕೊಳ್ಳಬೇಕಾಗುತ್ತದೆ. ಇದು ಕೇವಲ ಪದ್ಯಗಳ ಮತ್ತು ಹೇಳಿಕೆಗಳ ಭಾಷಾಂತರಕಷ್ಟೇ ಅಳವಡಿಕೆಯಾಗುವುದಿಲ್ಲ, ಆದರೆ ಮುದ್ರಿಸಲ್ಪಟ್ಟ ಪುಟಗಳ ಮೇಲಿನ ಭಾಷಾಂತರಿಸಲ್ಪಟ್ಟ ಪಠ್ಯದ ಜೋಡಣೆ ಸಹ ಅನ್ವಯವಾಗುತ್ತದೆ. ಕನ್ನಡದ ಭಾಷಾಂತರಕ್ಕೆ ಇದನ್ನು ಹೋಲಿಸುವಾಗ ಅಥವಾ ಕನ್ನಡದ ಭಾಷಾಂತರವನ್ನು ಇತರ ವಿಭಿನ್ನ ಇಂಗ್ಲೀಷ್ ಭಾಷಾಂತರಕ್ಕೆ ಹೋಲಿಸುವಾಗ ಇದನ್ನೂ ನಾವು ಸುಲಭವಾಗಿ ಕಾಣಬಹುದು.

2. ಯಾವುದೇ ವಿಭಾಗಗಳಿಲ್ಲದೆ ಇಬ್ರಿಯ ಪಠ್ಯವು ಬರೆದಿರುವಂತೆ ಸತ್ಯವೇದ ಪಂಡಿತರುಗಳು ಪಠ್ಯವನ್ನು ಪದ್ಯದ ಸಾಲುಗಳು ಮತ್ತು ಭಾಗಗಳಿಗೆ ರಚನೆಗೊಳಿಸುವಾಗ ಕೆಲವೊಮ್ಮೆ ಸಮಸ್ಯೆಗಳನ್ನು ಎದುರಿಸುವರು. ಆದರೆ ಪಠ್ಯವು ಹೇಗೆ ವಿಭಾಗಿಸಲ್ಪಟ್ಟಿದೆ ಎಂಬುದು (ಉದಾಹರಣೆಗೆ ಒಂದು ಪದವು ಹಿಂದಿನ ಸಾಲಿನೊಂದಿಗೆ ಓದಬೇಕಾದರೆ) ಇದನ್ನು ಹೇಗೆ ಅರ್ಥೈಸಿಕೊಳ್ಳಬೇಕು ಎಂಬುದರ ಮೇಲೆ ಪ್ರಭಾವವನ್ನು ಬೀರುವುದು.

3. ಇಬ್ರಿಯ ಕವಿಗಳು ಪರ್ಯಾಯ ಮತ್ತು ಸಮಾನಾಂತರ ಪದಗಳು ಮತ್ತು ಹೇಳಿಕೆಗಳ ಮೂಲಕ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುವಾಗ ವಿಶಾಲವಾದ ಶಬ್ದಕೋಶವನ್ನು ಉಪಯೋಗಿಸಿದ್ದಾರೆ. ಪರಿಣಾಮವಾಗಿ ಆ ಪುಸ್ತಕಕ್ಕೆ ವಿಶಿಷ್ಟವಾದ ಅನೇಕ ಪದಗಳಿವೆ ಮತ್ತು ಅವನ್ನು ಹಳೇ ಒಡಂಬಡಿಕೆಯಲ್ಲಿ ಬೇರೆ ಯಾವ ಕಡೆಗೂ ಸಹ ಕಾಣಗೊಳ್ಳುವುದಿಲ್ಲ (ಉದಾಹರಣೆಗೆ ಕೀರ್ತನೆಗಳಲ್ಲಿ). ಸಾಮಾನ್ಯವಾಗಿ ಈ ಪದಗಳು ಭಾಷಾಂತಕಾರರಿಗೆ ಸಮಸ್ಯೆಯನ್ನು ಹುಟ್ಟುಹಾಕುವುವು ಮತ್ತು ಅದನ್ನು ಹೇಗೆ ಭಾಷಾಂತರಿಸಬೇಕೆಂದು ಗಲಿಬಿಲಿಗೊಳಿಸುವವು.

4. ಇಬ್ರಿಯ ಕವಿಗಳ ಸಮಯ ಮತ್ತು ನಮ್ಮ ಸ್ವಂತ ಸಮಯಗಳ ನಡುವಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಂತರವು ವಿಶಾಲವಾಗಿದೆ. ಅದ್ದರಿಂದ ನಾವು ಯಾವಾಗಲೂ ಹೇಳಿಕೆ/ಭಾವನೆ ಮತ್ತು ರೂಪಾಲಂಕಾರಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತೇವೆ. ಅಥವಾ ಪಠ್ಯವು ಬರೆಯಲ್ಪಟ್ಟ ಐತಿಹಾಸಿಕ ಮತ್ತು ಧಾರ್ಮಿಕ ಸನ್ನಿವೇಶಗಳ ಬಗ್ಗೆ ಅಜಾಗರೂಕರಾಗಿರುತ್ತೇವೆ. ಹಾಗಾಗಿ ನಾವು ಜಾಗರೂಕರಾಗಿರಬೇಕು. ತಪ್ಪಾದ ಅರ್ಥವಿವರಣೆಗೆ ದುಮುಖಬಾರದು. ಅಥವಾ ನಾವು ಹಳೇ ಒಡಂಬಡಿಕೆಯ ಪದ್ಯರೂಪಿ ಪಠ್ಯಗಳನ್ನು ಅಧ್ಯಯನ ಮಾಡುವಾಗ ನಮ್ಮದೇ ಅದ ಭಾಷೆ ಮತ್ತು ಸಂಸ್ಕೃತಿಯ ಅಧಾರದ ಮೇಲೆ ತಪ್ಪು ವ್ಯಾಖ್ಯಾನಗಳಿಗೆ ದುಮುಖಿದಂತೆ ಅಥವಾ ತಪ್ಪು ತೀರ್ಮಾನಗಳನ್ನು ತೆಗೆದುಕೊಳ್ಳದಂತೆ ನಾವು ಎಚ್ಚರಿಕೆಯನ್ನು ವಹಿಸಬೇಕು.

ಪದ್ಯವು ಹೃದಯದ ಮೂಲಕ ಮನಸ್ಸಿಗೆ ಸಂಬೋಧಿಸುವುದಾಗಿದೆ. ಇದರರ್ಥ ಪದ್ಯದ ಭಾಷೆಯು ಉದ್ದೇಶಪೂರ್ವಕವಾಗಿ ಭಾವನಾತ್ಮಕವಾದುದ್ದಾಗಿದೆ. ಆದ್ದರಿಂದ ಪ್ರತ್ಯೇಕ ಪದಗಳಲ್ಲಿ ಅರ್ಥವನ್ನು ಹುಡುಕುವುದರಿಂದ ಹಳೇ ಒಡಂಬಡಿಕೆಯ ಪದ್ಯರೂಪಿ ಪದ್ಯಗಳನ್ನು **"ಅತಿಯಾಗಿ ವ್ಯಾಖ್ಯಾನಿಸದಂತೆ"** ನಾವು ಎಚ್ಚರದಿಂದರಬೇಕು. ಈ ಎಚ್ಚರಿಕೆಯು ಉಪಮಾನವಲ್ಲದೆ ಸಮಾನಾಂತರತೆಯನ್ನು ವ್ಯಾಖ್ಯಾನಿಸುವಾಗ ಸಹ ಅನ್ವಯವಾಗುತ್ತದೆ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಒಳ್ಳೆಯದು.

1. ಹಳೇ ಒಡಂಬಡಿಕೆಯಲ್ಲಿ ಕಾವ್ಯಶೈಲಿಯ ಗ್ರಂಥಗಳು ಎಲ್ಲಿ ಕಾಣಬಹುದು?
2. ಕನ್ನಡ ಕಾವ್ಯ ಮತ್ತು ಪ್ರಾಚೀನ ಇಬ್ರಿಯ ಕಾವ್ಯಗಳಲ್ಲಿ ನಾವು ಕಂಡುಕೊಳ್ಳುವ ಕೆಲವು ಸಾಮಾನ್ಯ ಕಾವ್ಯಲಕ್ಷಣಗಳನ್ನು ಪಟ್ಟಿಮಾಡಿ.
3. ಕನ್ನಡ ಕಾವ್ಯ ಮತ್ತು ಪ್ರಾಚೀನ ಇಬ್ರಿಯ ಕಾವ್ಯದ ನಡುವಿನ ಕೆಲವು ವ್ಯತ್ಯಾಸಗಳನ್ನು ಪಟ್ಟಿಮಾಡಿ.
4. ಈ ಪದಗಳನ್ನು ವಿವರಿಸಿ

   ಅ. ಪದಕ್ರೀಡೆ

   ಆ. ಸ್ವರಸಮತೆ
5. ಪ್ರಾಚೀನ ಇಬ್ರಿಯ ಕಾವ್ಯವನ್ನು ಓದುವಾಗ ಮತ್ತು ಅಧ್ಯಯನ ಮಾಡುವಾಗ ನಾವು ಎದುರಿಸುವ ನಾಲ್ಕು ಪ್ರಮುಖ ತೊಡಕುಗಳನ್ನು ಪಟ್ಟಿಮಾಡಿ.
6. ಹಳೇ ಒಡಂಬಡಿಕೆಯ ಕಾವ್ಯಪಠ್ಯಗಳನ್ನು ಅಧ್ಯಯನ ಮಾಡುವ ಗಂಭೀರ ವಿದ್ಯಾರ್ಥಿಯು ಒಂದಕ್ಕಿಂತ ಹೆಚ್ಚು ಸತ್ಯವೇದ ಅನುವಾದಗಳನ್ನು ಏಕೆ ಬಳಸಬೇಕು?
7. ನಮ್ಮ ಸತ್ಯವೇದಗಳಲ್ಲಿ ಮೂಲ ಇಬ್ರಿಯ ಪಠ್ಯದಲ್ಲಿ ಕಂಡುಬರದ ಕೆಲವು ಕಾವ್ಯಾತ್ಮಕ ಪಠ್ಯಗಳ ರಚನಾತ್ಮಕ ವಿಭಾಗಗಳು ಯಾವುವು?
8. ಕೀರ್ತನೆಗಳ ಪುಸ್ತಕದಲ್ಲಿ (ಮತ್ತು ಇತರ ಕಾವ್ಯಾತ್ಮಕ ಪಠ್ಯಗಳಲ್ಲಿ) ಶಬ್ದಕೋಶವು ಏಕೆ ಸಮೃದ್ಧವಾಗಿದೆ? ಭಾಷಾಂತಕಾರರಿಗೆ ಶ್ರೀಮಂತ ಶಬ್ದಕೋಶವು ಸಮಸ್ಯೆಗಳನ್ನು ಉಂಟುಮಾಡುತ್ತದೆ. ಹೇಗೆ?
9. ಹಳೇ ಒಡಂಬಡಿಕೆಯ ಕಾವ್ಯಾತ್ಮಕ ಪಠ್ಯಗಳ ಆಧುನಿಕ ಓದುಗರಿಗೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಂತರಗಳು ಸಮಸ್ಯೆಗಳನ್ನು ಏಕೆ ಉಂಟುಮಾಡುತ್ತವೆ?

ಚಿತ್ರಣ

ಪೀಠಿಕೆ

ಹಳೇ ಒಡಂಬಡಿಕೆಯ ಕಾವ್ಯಶೈಲಿಯ ಗ್ರಂಥಗಳಲ್ಲಿ ಸಾಮಾನ್ಯವಾಗಿ ಬಳಸಲಾಗುವ ದೃಶ್ಯ ಭಾಷೆ (ಅಥವಾ ರೂಪಕ ಭಾಷೆ) ಇವುಗಳಲ್ಲಿ ಉಪಮೆಗಳು ಮತ್ತು ರೂಪಾಲಂಕಾರಗಳು ಅತ್ಯಂತ ಸಾಮಾನ್ಯವಾಗಿವೆ. ವಿಶೇಷವಾಗಿ ರೂಪಾಲಂಕಾರಗಳು ಬಹುಮಟ್ಟಿಗೆ ಕಂಡುಬರುತ್ತವೆ. ಮಾನವೀಕರಣ, ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ, ಮತ್ತು ನಾಮಪರ್ಯಾಯ ಎಂಬ ನಾಲ್ಕು ವಿಶೇಷ ರೀತಿಯ ರೂಪಾಲಂಕಾರಗಳು ಇವೆ.

ಅಧ್ಯಾಯದ ಕೊನೆಯಲ್ಲಿ ನಾಲ್ಕು ಹೆಚ್ಚುವರಿ ಕಾವ್ಯಶೈಲಿ ಉಪಕರಣಗಳು ಸಣ್ಣ ಪರಿಚಯವಿದೆ. ಇವುಗಳನ್ನು **"ದೃಶ್ಯ ಭಾಷೆ"** ಎಂದು ಕರೆಯಲಾಗಿದೆ. ಆದರೆ ಯಾವುದೇ ಭಾಷೆಯ ಕಾವ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಮತ್ತು ವಿವರಿಸಲು ಬಹಳ ಮುಖ್ಯವಾಗಿವೆ.

ಉಪಮೆ

ಉಪಮೆ ಒಂದು ಶಬ್ದಾಲಂಕಾರವಾಗಿದೆ. ಇದು ವಿಭಿನ್ನ ರೀತಿಯ ಒಂದು ಸಂಗತಿಯೊಂದಿಗೆ ಒಂದು ಸಂಗತಿಯನ್ನು ಹೋಲಿಸುವಾಗ ಭಾಗಿಯಾಗುವ ಹೋಲಿಕೆಯ ಪದವಾಗಿದೆ. ಎರಡು ಉದಾಹರಣೆಗಳು:

1. ರಾಜನು ನರಿಯಂತೆ ಮೋಸ ಮಾಡುತ್ತಾನೆ ಇದೊಂದು ಉಪಮೆಯಾಗಿದೆ. ಯಾಕೆ?

   ಉತ್ತರ:

   - ಒಂದು ಸಂಗತಿ(ರಾಜ) ಇನ್ನೊಂದು ಸಂಗತಿ (ನರಿ)ಯೊಂದಿಗೆ ಹೋಲಿಸಲ್ಪಟ್ಟಿದ್ದಾನೆ.
   - ಅವು ವಿಭನ್ನವಾದವುಗಳು (ಮನುಷ್ಯ ರಾಜ ಮತ್ತು ನರಿ ಎರಡೂ ಸಮಾನವಾದವುಗಳಲ್ಲ)
   - ಈ ಹೋಲಿಕೆಯನ್ನು ಮಾಡಲು **"ಅಂತೆ"** ಎಂಬ ಪದ ಒಳಪಡಲಾಗಿದೆ.

2. *ಅವನು* (ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವ ವ್ಯಕ್ತಿ) *ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವುದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವುದು* (ಕೀರ್ತನೆ 1:3) ಎಂಬುದು ಒಂದು ಉಪಮೆ. ಯಾಕೆ?

   ಉತ್ತರ:

   - ಮನುಷ್ಯನು ಒಂದು ಮರದೊಂದಿಗೆ ಹೋಲಿಸಲ್ಪಟ್ಟಿದ್ದಾನೆ.
   - ಅವೆರಡೂ ಒಂದೇ ಅಲ್ಲ.
   - ಹೋಲಿಕೆಯನ್ನು ಮಾಡಲು. **"ಹಾಗೆ"** ಎಂಬ ಪದವನ್ನು ಉಪಯೋಗಿಸಲಾಗಿದೆ.

ಒಂದು ಉಪಮೆ ಹೋಲಿಕೆಯಲ್ಲಿ ಒಂದಂಶವನ್ನು ಒಳಗೊಂಡಿದೆ ಎಂಬುದನ್ನು ನಾವು ಗಮನಿಸಬೇಕು.

ಅ. ನಮ್ಮ ಮೊದಲ ಉದಾಹರಣೆಯಲ್ಲಿ ರಾಜನು ಒಂದು ಕ್ಷೇತ್ರದಲ್ಲಿ ಮಾತ್ರ ನರಿಗೆ ಹೋಲಿಸಲ್ಪಟ್ಟಿದ್ದಾನೆ ಅದು: ಕುತಂತ್ರ. ರಾಜನು ಉಳಿದ ಎಲ್ಲಾ ವಿಧದಲ್ಲಿ ನರಿಯಂತೆ ಇರುವನು ಎಂದು ನಾವು ಮುಕ್ತಾಯಕ್ಕೆ ಬರಬಾರದು: ಅಂದರೆ ಆತನು ನಾಲ್ಕು ಕಾಲುಗಳ ಮೇಲೆ ನಡೆಯುತ್ತಾನೆ, ಆತನು ಕಾಡಿನಲ್ಲಿ ವಾಸಿಸುತ್ತಾನೆ, ಆತನು ನಮ್ಮ ಕೋಳಿಗಳನ್ನು ಕದ್ದುಕೊಂಡು ಹೋಗುತ್ತಾನೆ ಎಂದರ್ಥವಲ್ಲ.

ಆ. ನಮ್ಮ ಎರಡನೇ ಉದಾಹರಣೆಯಲ್ಲಿ ದೇವರ ಧರ್ಮಶಾಸ್ತ್ರದಲ್ಲಿ ಆನಂದಪಡುವ ವ್ಯಕ್ತಿಯು ಫಲಭರಿತ ಮತ್ತು ಸಮೃದ್ಧಿಯಲ್ಲಿ ಒಂದು ಮರದೊಂದಿಗೆ ಹೋಲಿಸಲ್ಪಟ್ಟಿದ್ದಾನೆ. ಆತನು ಬೇರೆ ವಿಧದಲ್ಲಿ ಮರದಂತಿರುವನೆಂದು ನಾವು ಮುಕ್ತಾಯಕ್ಕೆ ಬರಬಾರದು: ಅಂದರೆ ಆತನು ಬೇರೊಂದು ದೇಶಕ್ಕೆ ಚಲಿಸುವಂತಿಲ್ಲ, ನೋಡಲು ಸುದಂರವಾಗಿರುವನು, ಆತನು ಕೇವಲ ನೀರನ್ನು ಮಾತ್ರ ಕುಡಿಯಬೇಕು ಎಂದರ್ಥವಲ್ಲ.

ರೂಪಾಲಂಕಾರ

ರೂಪಾಲಂಕಾರವು ಒಂದು ಶಬ್ದಾಲಂಕಾರವಾಗಿದೆ. ಇದರಲ್ಲಿ ಒಂದು ಪದ ಅಥವಾ ಹೇಳಿಕೆಯು ಅಕ್ಷರಶಃ ಅನ್ವಯಿಸದ ಒಂದು ವಸ್ತು ಅಥವಾ ಒಂದು ಕ್ರಿಯೆಗೆ ಅನ್ವಯವಾಗುವಂತೆ ಮಾಡುವುದಾಗಿದೆ. ಒಂದು ರೂಪಾಲಂಕಾರವು ಉಪಮೆಯನ್ನು ಬಳಸುವುದಿಲ್ಲ. ಹಾಗಾಗಿ ರೂಪಾಲಂಕಾರದೊಂದಿಗೆ ಇರುವಂತೆ ಉಪಮೆಯು ಮುಕ್ತವಾಗಿ ವ್ಯಕ್ತವಾಗಿಲ್ಲ. ಆದರೆ ಅಳವಡಿಸಲ್ಪಟ್ಟಿದೆ (ಅಥವಾ ಅರ್ಥೈಸಲ್ಪಟ್ಟಿದೆ). ಎರಡು ಉದಾಹರಣೆಗಳು:

1. ರಾಜನು ಒಬ್ಬ ನರಿಯಾಗಿದ್ದಾನೆ. ಇದೊಂದು ರೂಪಾಲಂಕಾರವಾಗಿದೆ. ಏಕೆ?

   ಉತ್ತರ:

   - ರಾಜನು ಒಂದು ನರಿಯಲ್ಲ. ಆದರೆ ಆತನು ನರಿಯೊಂದಿಗೆ ಹೋಲಿಸಲಾಗುತ್ತಿದೆ.
   - ಹೋಲಿಕೆಯ ಯಾವುದೇ ಪದ ಬಳಸಲ್ಪಟ್ಟಿಲ್ಲ (ಹಾಗಾಗಿ ಹೋಲಿಕೆಯು ಅರ್ಥೈಸಲ್ಪಟ್ಟಿದೆ, ಮುಕ್ತವಾಗಿ ವ್ಯಕ್ತಪಡಿಸಲ್ಪಟ್ಟಿಲ್ಲ).

2. *ಆದರೂ ಯೆಹೋವನೇ, ನೀನು ನನ್ನನ್ನು ಕಾಯುವ ಗುರಾಣಿ* (ಕೀರ್ತನೆ 3:3) ಇದೊಂದು ರೂಪಾಲಂಕಾರವಾಗಿದೆ. ಏಕೆ?

   ಉತ್ತರ:

   - ನೀನು (ಯೆಹೋವನು) ಒಂದು ಗುರಾಣಿಯಲ್ಲ, ಆದರೆ ಕೀರ್ತನೆಗಾರನು ಯೆಹೋವನನ್ನು ಗುರಾಣಿಯೊಂದಿಗೆ ಹೋಲಿಸಿದ್ದಾನೆ.
   - ಹೋಲಿಕೆಯು ಕೇವಲ ವ್ಯಕ್ತವಾಗಿಲ್ಲ ಆದರೆ ಅಳವಡಿಸಲ್ಪಟ್ಟಿದ್ದಾನೆ.

ರೂಪಾಲಂಕಾರವು ಹೋಲಿಕೆಯಲ್ಲಿ ಕೇವಲ ಒಂದು ಅಂಶವನ್ನು ಮಾತ್ರ ಹೊಂದಿದೆ ಎಂಬುದನ್ನು ನಾವು ಗಮನಿಸಬೇಕು: ಗುರಾಣಿಯು ರಕ್ಷಣೆಗಾಗಿ ಉಪಯೋಗಿಸಲ್ಪಡುತ್ತದೆ. ಹಾಗಾಗಿ ಮುಖ್ಯ ಅಂಶವೇನೆಂದರೆ ದೇವರು ತನ್ನ ರಕ್ಷಕನೆಂದು ಕೀರ್ತನೆಗಾರನು ತಿಳಿಸುತ್ತಾನೆ. ಆತನು ಈ ರೂಪಾಲಂಕಾರವನ್ನು ಉಪಯೋಗಿಸುವಾಗ ಕೀರ್ತನೆಗಾರನು ಗುರಾಣಿಗಿರುವ ಇತರ ಲಕ್ಷಣಗಳೊಂದಿಗೆ ದೇವರನ್ನು ಹೋಲಿಸುವ ಗುರಿ ಹೊಂದಿಲ್ಲ. ಉದಾಹರಣೆಗೆ: ದೇವರು ಗುರಾಣಿಯಂತೆ ಗಟ್ಟಿಯಾಗಿದ್ದಾನೆ ಅಥವಾ ನೀವು ಗುರಾಣಿಯನ್ನು ಕೈಯಲ್ಲಿ ಕೊಂಡೊಯ್ಯುವಂತೆ ದೇವರನ್ನು ನಿಮ್ಮ ಕೈಯಲ್ಲಿ ಕೊಂಡೊಯ್ಯುವಿರಿ ಅಥವಾ ದೇವರು ಕೇವಲ ನಿಮ್ಮ ದೇಹವನ್ನು ಮಾತ್ರ ರಕ್ಷಿಸುವನು ಆದರೆ ನಿಮ್ಮ ಕಾಲು ಮತ್ತು ತಲೆಯನ್ನಲ್ಲ (ಗುರಾಣಿಯು ಕಾಲು ಮತ್ತು ತಲೆಯನ್ನು ಮುಚ್ಚದೇ ಕೇವಲ ದೇಹವನ್ನು ಮಾತ್ರ ಮುಚ್ಚುವಂತೆ) ಅಥವಾ ದೈಹಿಕವಾಗಿ ಯುದ್ಧದಲ್ಲಿ ತೊಡಗಿರುವಾಗ ಸೈನಿಕನಂತೆ ಗುರಾಣಿ ಒಯ್ಯುವಂತೆ ಆತ್ಮೀಕ ಯುದ್ಧದಲ್ಲಿ ನೀವು ದೇವರನ್ನು ಗುರಾಣಿಯಾಗಿ ಕೊಂಡೊಯ್ಯಬೇಕು.

ಇದರ ಪರಿಣಾಮವಾಗಿ ನಾವು ಎಂದಿಗೂ ರೂಪಾಲಂಕಾರವನ್ನು ಉತ್ತರಿಸಲಾಗದು ಮತ್ತು ಇದರಿಂದ ಒಂದು ಲಾಕ್ಷಣೀಕ/ಅನ್ಯೋಕ್ತಿಯ ಕಥೆಯನ್ನು ಮಾಡಲಾಗದು. ಯಾಕಿಲ್ಲ?

ಉತ್ತರ: ಆ ರೀತಿಯಲ್ಲಿ ನೀವು ರೂಪಾಲಂಕಾರವನ್ನು ಉಪಯೋಗಿಸಲಾಗುವುದಿಲ್ಲ, ಕವಿಯ ಮನಸ್ಸಿನಲ್ಲಿ **"ಹೋಲಿಕೆಯ ಕಥೆಯಿಲ್ಲ"**, ಆತನ ಮನಸ್ಸಿನಲ್ಲಿರುವುದು **"ಹೋಲಿಕೆಯ ಒಂದು ಅಂಶವಷ್ಟೇ"**. ಒಂದು ಗುರಾಣಿಯು ಸೈನಿಕನಿಗೆ ರಕ್ಷಣೆಯನ್ನು ಒದಗಿಸುತ್ತದೆ. ಹಾಗೆಯೇ ದೇವರು ತನ್ನ ಸೇವಕರಿಗೆ ರಕ್ಷಣೆಯನ್ನು ಒದಗಿಸುತ್ತಾನೆ.

ಹಳೇ ಒಡಂಬಡಿಕೆಯ ಪದ್ಯರೂಪಿ ಪಠ್ಯಗಳು ನೂರಾರು ರೂಪಾಲಂಕಾರಗಳನ್ನು ಒಳಗೊಂಡಿವೆ. ಓದುಗರಾದ ನಾವು ಅವುಗಳ ಬಗ್ಗೆ ಅರಿತಿರಬೇಕು ಮತ್ತು ಸರಿಯಾಗಿ ಅರ್ಥವಿವರಣೆಯನ್ನು ಮಾಡಬೇಕು. ಇದರರ್ಥ ಮೂರು ಸಂಗತಿಗಳು:

1. ನಾವು ಅದನ್ನು ರೂಪಾಲಂಕಾರಗಳಾಗಿ ಗುರುತಿಸಬೇಕೆ ವಿನಃ ಅಕ್ಷರಶಃ ಹೇಳಿಕೆಗಳಾಗಿ ಅಲ್ಲ. ಉದಾಹರಣೆಗೆ, ಕೀರ್ತನೆ 23:1–4 ರಲ್ಲಿ ದಾವೀದನು **"ಕರ್ತನು ನನಗೆ ಕುರುಬನು"** ಎಂಬ ರೂಪಾಲಂಕಾರವನ್ನು ಉಪಯೋಗಿಸುತ್ತಾನೆ. ಇದೊಂದು ರೂಪಾಲಂಕಾರವಾಗಿದೆ ಹೊರತು ಅಕ್ಷರಶಃ ಹೇಳಿಕೆಯಲ್ಲ ಎಂಬುದನ್ನು ನಾವು ಗಮನಿಸಬೇಕು. ದೇವರು ಒಬ್ಬ ಕುರುಬನಲ್ಲ. ಆತನು ತನ್ನ ಜನರನ್ನು ಕಾಳಜಿವಹಿಸುವ ರೀತಿಯಲ್ಲಿ ಆತನು ಕುರುಬನಂತಿದ್ದಾನೆ. ದೇವರ ಮಕ್ಕಳಾದ ನಾವು ಕುರಿಗಳಲ್ಲ, ಆದರೆ ದೇವರಿಂದ ನಾವು ಪೋಷಿಸಲ್ಪಡುತ್ತಿರುವ ರೀತಿಯಲ್ಲಿ ನೋಡಿದರೆ ನಾವು ಕುರಿಗಳಂತಿದ್ದೇವೆ.

2. ಕವಿಯು ಹೇಳುತ್ತಿರುವ ಅಂಶವನ್ನು ನಾವು ಗಮನಿಸಬೇಕು. ಕೀರ್ತನೆ 59:7ರಲ್ಲಿ ದಾವೀದನು ತನ್ನ ವೈರಿಗಳು *"ಇಗೋ, ಅವರ ಬಾಯಿಗಳು ಎಷ್ಟೋ ಮಾತುಗಳನ್ನು ಕಕ್ಕುತ್ತವೆ; ಅವೆಲ್ಲಾ ಕತ್ತಿಗಳೇ"* ಇದೊಂದು ರೂಪಾಲಂಕಾರವಾಗಿದೆ. ವೈರಿಗಳ ಮಾತುಗಳು ಅಪಾಯಕಾರಿ ಮತ್ತು ಹಾನಿಕಾರಕವಾಗಿವೆ. ದಾವೀದನು ಕತ್ತಿಗಳ ಬಗ್ಗೆ ಮಾತನಾಡುತ್ತಿಲ್ಲ. ಆತನು ವೈರಿಗಳ ಮಾತಿನ ಬಗ್ಗೆ ಮತ್ತು ಅವು ತನಗೆ ಎಷ್ಟು ಅಪಾಯಕಾರಿ ಮತ್ತು ಹಾನಿಕಾರಕವಾಗಿವೆ ಎಂದು ಮಾತನಾಡುತ್ತಾನೆ.

3. ನಾವು ರೂಪಾಲಂಕಾರವನ್ನು ಅರ್ಥವಿವರಿಸಬಾರದು. ಅಥವಾ ಇದನ್ನು ಒಂದು ಅಲಂಕಾರಿಕ ಕಥೆಗೆ ವಿಸ್ತರಿಸಬಾರದು. ಕೀರ್ತನೆ 23:1–4 ರಲ್ಲಿ ದೇವರು ತನಗೆ ಕುರುಬನಾಗಿದ್ದಾನೆ ಎಂದು ಹೇಳುವ ರೂಪಾಲಂಕಾರವು ವರ್ಣಿಸುವುದಾಗಿದೆ. ಮತ್ತು ಹಲವು ವಿವರಗಳನ್ನು ಒಳಗೊಂಡಿದೆ. ಆದರೆ ರೂಪಾಲಂಕಾರವು ಕೇವಲ ಒಂದು ಅಂಶವನ್ನು ಒಳಗೊಂಡಿದೆ. ದೇವರು ಆತನಿಗಾಗಿ ಹೇಗೆ ಕಾಳಜಿವಹಿಸುತ್ತಾನೆ ಮತ್ತು ಕುರುಬನು ತನ್ನ ಕುರಿಗಾಗಿ ಹೇಗೆ ಕಾಳಜಿವಹಿಸುತ್ತಾನೋ ಮತ್ತು ಅದನ್ನು ಕಾಪಾಡುತ್ತಾನೋ ಹಾಗೆಯೇ ದೇವರು ನನ್ನನ್ನು ಕಾಪಾಡುತ್ತಾನೆ ಎಂಬುದಾಗಿದೆ. ಉದಾಹರಣೆಗೆ, ಈ ಕಥೆಯು ನಾವು ನಗರವನ್ನು ಬಿಟ್ಟು ಹುಲ್ಲಿನ ಮೇಲೆ ಮಲಗಿ ಮತ್ತು ಹಳ್ಳದ ನೀರನ್ನು ಕುಡಿಯಬಹುದಾದ ಹಳ್ಳಿಯೆಡೆಗೆ ಹೋಗಬೇಕೆಂದು ಬೋಧಿಸುವುದಿಲ್ಲ.

ನಾಲ್ಕು ರೂಪಾಲಂಕಾರಿಕ ಪ್ರಕ್ರಿಯೆಗಳು

ಹಳೇ ಒಡಂಬಡಿಕೆಯ ಪದಸ್ಯರೂಪಿ ಪಠ್ಯಗಳಲ್ಲಿ ಕಾಣಬರುವ ನಾಲ್ಕು ರೂಪಾಲಂಕಾರಿಕ ಪ್ರಕ್ರಿಯೆಗಳು ಇಂತಿವೆ:

1. ಮಾನವೀಕರಣ

ಇದು ದೇವರ ಕುರಿತಾದ ಕೆಲವು ಸತ್ಯವನ್ನು ತಿಳಿಸುವ ಸಲುವಾಗಿ ಆ ದೇವರನ್ನು ಮನುಷ್ಯನಾಗಿ ಚಿತ್ರಿಸುವುದಾಗಿದೆ (ಅಂತ್ರೋಪೋಸ ಎಂದರೆ ಗ್ರೀಕಿನಲ್ಲಿ **"ಮನುಷ್ಯ"** ಅಗಿದೆ). ಇಲ್ಲಿ ಕೆಲವು ಉದಾಹರಣೆಗಳಿವೆ:

- ಕೀರ್ತನೆ 2:4 ದೇವರು ನಗುತ್ತಾನೆ ಮತ್ತು ಪರಿಹಾಸ್ಯ ಮಾಡುತ್ತಾನೆ.
- ಕೀರ್ತನೆ 3:7 ದೇವರು ಎದ್ದೇಳಲು ಕೇಳಿಕೊಳ್ಳಲ್ಪಟ್ಟಿದ್ದಾನೆ.
- ಕೀರ್ತನೆ 11:4 ದೇವರು ನೋಡುತ್ತಾನೆ ಮತ್ತು ಗಮನಿಸುತ್ತಾನೆ.
- ಕೀರ್ತನೆ 31:2 ದೇವರು ಕಿವಿಗೊಟ್ಟು ಕೇಳುತ್ತಾನೆ.
- ಕೀರ್ತನೆ 43:1 ದೇವರನ್ನು ನ್ಯಾಯಾಲಯದಲ್ಲಿ ವಕೀಲನಾಗಿ ಚಿತ್ರಿಸಲಾಗಿದೆ.
- ಕೀರ್ತನೆ 46:9 ದೇವರನ್ನು ಪರಾಕ್ರಮಿ ಯೋಧನಾಗಿ ಚಿತ್ರಿಸಲಾಗಿದೆ.
- ಕೀರ್ತನೆ 102:12–13 ದೇವರನ್ನು ತನ್ನ ಸಿಂಹಾಸನದ ಮೇಲೆ ಕುಳಿತಿರುವ ಶಕ್ತಿಶಾಲಿ ರಾಜನಾಗಿ ಚಿತ್ರಿಸಲಾಗಿದೆ.

ಇದು ಮಾನವೀಕರಣದ ಒಂದು ರೂಪಾಂತರವಾಗಿದ್ದು **"ಪಾಶವೀಕರಣ"** (**"ಜೂಮೋರ್ಫಿಸಮ್"**) ಎನ್ನುವರು. ಇದು ಆತನ ಕುರಿತಾಗಿ ಕೆಲವು ಸತ್ಯದಾಳವನ್ನು ತಿಳಿಸುವ ಸಲುವಾಗಿ ದೇವರನ್ನು ಒಂದು ಪ್ರಾಣಿಯೆಂಬಂತೆ ಕವಿಯು ವರ್ಣಿಸುವುದಾಗಿದೆ (ಗ್ರೀಕಿನಲ್ಲಿ **"ಜೂನ್"** ಎಂದರೆ **"ಪ್ರಾಣಿ"**ಯಾಗಿದೆ). ಇಲ್ಲಿ ಕೆಲವು ಉದಾಹರಣೆಗಳಿವೆ:

- ಕೀರ್ತನೆ 17:8 ದೇವರನ್ನು ಪಕ್ಷಿಯಂತೆ ರೆಕ್ಕೆಗಳಿಂದ ಚಿತ್ರಿಸಲಾಗಿದೆ.
- ಕೀರ್ತನೆ 8:15 ದೇವರನ್ನು ಕೋಪಗೊಂಡ ಡ್ರ್ಯಾಗನ್ ಆಗಿ ಚಿತ್ರಿಸಲಾಗಿದೆ.
- ಕೀರ್ತನೆ 91:4 ದೇವರಿಗೆ ಗರಿಗಳು ಮತ್ತು ರೆಕ್ಕೆಗಳಿವೆ.

2. ಮೂರ್ತೀಕರಣ

ಇದು ಮನುಷ್ಯನ ಗುಣಲಕ್ಷಣಗಳನ್ನು ಒಂದು ನಿರ್ಜೀವ ವಸ್ತುಗಳಿಗೆ ಕೊಡುವುದಾಗಿದೆ. ಇಲ್ಲಿ ಕೆಲವು ಉದಾಹರಣೆಗಳಿವೆ:

- ಕೀರ್ತನೆ 77:16 ನೀರು ದೇವರನ್ನು ನೋಡಿ ಭಯಪಡುತ್ತದೆ.
- ಕೀರ್ತನೆ 96:11–12 ಆಕಾಶ, ಭೂಮಿ, ಸಮುದ್ರ, ಹೊಲ, ಮರಗಳು ಜನರು ಮಾಡುವ ರೀತಿಯಲ್ಲಿ ದೇವರನ್ನು ಸ್ತುತಿಸುತ್ತವೆ.
- ಕೀರ್ತನೆ 104:19 ಸೂರ್ಯನಿಗೆ ಜ್ಞಾನವನ್ನು ನೀಡಲಾಗಿದೆ. ಆದ್ದರಿಂದ ಅದು ಹೇಗೆ ವರ್ತಿಸಬೇಕೆಂದು ತಿಳಿಯುತ್ತದೆ.

3. ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ

ಇದು ಪೂರ್ಣಸಂಗತಿಯನ್ನು ಭಾಗವಾಗಿ ಮತ್ತು ಭಾಗವನ್ನು ಪೂರ್ಣವಾಗಿ ಸೂಚಿಸುವುದಾಗಿದೆ. ಇಲ್ಲಿ ಕೆಲವು ಉದಾಹರಣೆಗಳಿವೆ:

- ಕೀರ್ತನೆ 6:2, 42:10 ಎಲುಬುಗಳು ಇಡೀ ವ್ಯಕ್ತಿಯನ್ನು ಪ್ರತಿನಿಧಿಸುತ್ತವೆ.
- ಕೀರ್ತನೆ 46:9 ಬಿಲ್ಲು ಮತ್ತು ಈಟಿ ಯುದ್ಧವನ್ನು ಪ್ರತಿನಿಧಿಸುತ್ತವೆ.
- ಕೀರ್ತನೆ 91:5 ಬಾಣವು ಶತ್ರುವನ್ನು ಪ್ರತಿನಿಧಿಸುತ್ತದೆ.
- 102:4, 138:1 ಕೀರ್ತನೆಗಾರನ ಹೃದಯವು ಅವನ ಇಡೀ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

  ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರವು ಕಾವ್ಯಾತ್ಮಕವಲ್ಲದ ಭಾಷೆಯಲ್ಲಿಯೂ ಸಾಮಾನ್ಯವಾಗಿದೆ. ಇಲ್ಲಿ ಎರಡು ಉದಾಹರಣೆಗಳಿವೆ:

- ಯೇಸು ತನ್ನ ಶಿಷ್ಯರಿಗೆ "ದೈನಂದಿನ ಬ್ರೆಡ್" ಗಾಗಿ ಪ್ರಾರ್ಥಿಸಲು ಹೇಳುತ್ತಾನೆ. ನಮಗೆ ಭಾರತದಲ್ಲಿ ಈ "ರೊಟ್ಟಿ" ಅನ್ನ, ಸಾಂಬಾರ್, ಬಾಳೆಹಣ್ಣು ಮತ್ತು ಚಹಾವನ್ನು ಒಳಗೊಂಡಿದೆ. ಆದ್ದರಿಂದ "ರೊಟ್ಟಿ" ಎಲ್ಲಾ ರೀತಿಯ ಆಹಾರ ಮತ್ತು ಪಾನೀಯಗಳನ್ನು ಪ್ರತಿನಿಧಿಸುತ್ತದೆ.
- ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ (ಇಂಗ್ಲಿಷ್ ತಂಡವನ್ನು ಪ್ರತಿನಿಧಿಸುವ) ಆಸ್ಟ್ರೇಲಿಯಾವನ್ನು (ಆಸ್ಟ್ರೇಲಿಯಾ ತಂಡವನ್ನು ಪ್ರತಿನಿಧಿಸುವ) ಸೋಲಿಸಿತು ಎಂದು ನಾವು ಪತ್ರಿಕೆಗಳಲ್ಲಿ ನಾವು ಓದಬಹುದು.

4. ನಾಮಪರ್ಯಾಯ

ಇದು ಎರಡರ ನಡುವಿನ ಕೆಲವು ಸಂಬಂಧದ ನಿಮಿತ್ತ ಒಂದು ನಾಮ ಪದದ ಸ್ಥಾನದಲ್ಲಿ ಇನ್ನೊಂದು ನಾಮಪದದವನ್ನು ಉಪಯೋಗಿಸುವುದಾಗಿದೆ. ಉದಾಹರಣೆಗೆ ಕೀರ್ತನೆ 5:9 (ನಾಶಕರವಾದ ಗುಂಡಿಯು ಮರಣ ಮತ್ತು ನಾಶನವನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ), 18:2 (ಕೊಂಬು ಬಲವನ್ನು ಸೂಚಿಸುತ್ತದೆ), 13:9 (ಬಾಯಿ ಮತ್ತು ನಾಲಿಗೆ ಅವರು ಮಾತನಾಡುವ ವಿಧವನ್ನು ಸೂಚಿಸುತ್ತದೆ). ಎರಡು ಆಧುನಿಕ ಉದಾಹರಣೆಗಳು: ಭಾರತದ ನೆರೆಯವರ ಮೇಲಿನ ಯುದ್ಧವು ಅಸಂಭವನೀಯವೆಂದು ನವ ದೆಹಲಿಯು (ಭಾರತದ ಸರ್ಕಾರವನ್ನು ಸೂಚಿಸಿ) ಹೇಳುತ್ತದೆ. ಕೇಸರಿ ಪಕ್ಷವು (ಭಾರತೀಯ ಜನಾತಾ ಪಕ್ಷ ಬಿಜೆಪಿಯನ್ನು ಸೂಚಿಸಿ) ಚುನಾವಣೆಯಲ್ಲಿ ಜಯಿಸಿತು).

ನಾಲ್ಕು ಹೆಚ್ಚುವರಿ ಪದ್ಯರೂಪಿ ಪ್ರಕ್ರಿಯೆಗಳು

ಇತರೆ ನಾಲ್ಕು ಹೆಚ್ಚುವರಿ ಪದ್ಯರೂಪಿ ಪ್ರಕ್ರಿಯೆಗಳು ಹಳೇ ಒಡಂಬಡಿಕೆಯ ಪದ್ಯರೂಪಿ ಪಠ್ಯಗಳಲ್ಲಿ ಸಾಮಾನ್ಯವಾಗಿವೆ:

1. ಅತಿಶಯೋಕ್ತಿ

ಒಂದು ಅಂಶವನ್ನು ಒತ್ತಿ ಹೇಳುವುದಕ್ಕೆ ಉಪಯೋಗಿಸುವ ಅತಿಶಯೋಕ್ತಿ ಇದಾಗಿದೆ. ಇಲ್ಲಿ ಕೆಲವು ಉದಾಹರಣೆಗಳಿವೆ:

- ಕೀರ್ತನೆ 6:6 ಕೀರ್ತನೆಗಾರನು ತುಂಬಾ ಅತ್ತನು, ಆದರೆ ಅವನ ಕಣ್ಣೀರು ಬಹುಶ ಅವನ ಹಾಸಿಗೆಯನ್ನು ನೆನಸಲಿಲ್ಲ.
- ಕೀರ್ತನೆ 42:3 ಕೀರ್ತನೆಗಾರನ ಕಣ್ಣೀರು ನಿಜವಾಗಿಯೂ ಹಗಲಿರುಳು ಅವನ ಆಹಾರವಾಗಿರಲಿಲ್ಲ.
- ಕೀರ್ತನೆ 38:10 ಕೀರ್ತನೆಗಾರನು ತನ್ನ ದುಖಗಳನ್ನು ಉತ್ಪ್ರೇಕ್ಷಿಸುತ್ತಾನೆ, ಅವು ಅವನ ದೃಷ್ಟಿಯಲ್ಲಿ ಕಳೆದುಕೊಳ್ಳುವಂತೆ ಮಾಡಿವೆ ಎಂದು ಹೇಳುತ್ತಾನೆ.
- ಕೀರ್ತನೆ 78:27 ದೇವರು ಇಸ್ರಾಯೇಲ್ಯರಿಗೆ ಅರಣ್ಯ ವರ್ಷಗಳಲ್ಲಿ ಮನ್ನಾ ಮತ್ತು ಲಾವಕ್ಕಿಗಳನ್ನು ಒದಗಿಸಿದ್ದು ಉತ್ಪ್ರೇಕ್ಷೆಯಾಗಿದೆ.
- ಕೀರ್ತನೆ 107:26 ಅಲೆಗಳು ಎತ್ತರವಾಗಿದ್ದರಬೇಕು, ಆದರೆ ಅವು ಆಕಾಶವನ್ನು ತಲುಪಲು ಸಾಧ್ಯವಾಗಲಿಲ್ಲ.

2. ಅಲಂಕಾರಿಕ ಪ್ರಶ್ನೆ

ಒಂದು ವಾಸ್ತವಾಂಶವನ್ನು ಸ್ಪಷ್ಟಪಡಿಸಲು ಅಥವಾ ಅಲ್ಲಗಳೆಯಲು ಒಂದು ಪ್ರಶ್ನೆಯನ್ನು ಉಪಯೋಗಿಸುವುದಾಗಿದೆ. ಇಲ್ಲಿ ಕೆಲವು ಉದಾಹರಣೆಗಳಿವೆ:

- ಕೀರ್ತನೆ 35:10 ಕೀರ್ತನೆಗಾರನು ದೇವರು ಅಪ್ರತಿಮ ಎಂದು ಅಲಂಕಾರಿಕ ಪ್ರಶ್ನೆಯನ್ನು ಬಳಸಿಕೊಂಡು ಹೇಳುತ್ತಾನೆ: **"ಓ ಕರ್ತನೆ, ನಿನ್ನಂತೆ ಯಾರು?"**
- ಕೀರ್ತನೆ 56:8 ಕೀರ್ತನೆಗಾರನು ದೇವರಿಗೆ ತನ್ನ ದುಃಖಗಳನ್ನು ಅಲಂಕಾರಿಕ ಪ್ರಶ್ನೆಯ ರೂಪದಲ್ಲಿ ನೆನಪಿಸುತ್ತಾನೆ: **"ಅವರು ನಿನ್ನ ದಾಖಲೆಯಲ್ಲಿಲ್ಲವೇ?"**
- ಕೀರ್ತನೆ 91:6 ಕೀರ್ತನೆಗಾರನು **"ದುಷ್ಟರ ವಿರುದ್ಧ ನನ್ನ ಪರವಾಗಿ ಯಾರು ನಿಲ್ಲುತ್ತಾರೆ?"** ಎಂದು ಉದ್ಗರಿಸಿದಾಗ ಅವನು ಈ ಅಲಂಕಾರಿಕ ಪ್ರಶ್ನೆಗೆ ಉತ್ತರವನ್ನು ನಿರೀಕ್ಷಿಸುತ್ತಿಲ್ಲ. ಯಾರೂ ಅವನನ್ನು ಬೆಂಬಲಿಸುತ್ತಿಲ್ಲ ಎಂಬ ಹೇಳಿಕೆಯನ್ನು ಅವನು ನೀಡುತ್ತಿದ್ದಾನೆ.
- ಕೀರ್ತನೆ 106:2 ಅಲಂಕಾರಿಕ ಪ್ರಶ್ನೆಯನ್ನು ಉದ್ಗಾರವಾಗಿ ಅರ್ಥೈಸಿಕೊಳ್ಳಬೇಕು: ದೇವರ ಮಹತ್ಕಾರ್ಯಗಳನ್ನು ಯಾರೂ ವಿವರಿಸಲು ಸಾಧ್ಯವಿಲ್ಲ! ಅವು ಮಾನವ ವಿವರಣೆಯನ್ನು ಮೀರಿವೆ.

3. ಸಂಭೋಧನೆ

ಸತ್ತ (ಅಥವಾ ಇಲ್ಲದ) ವ್ಯಕ್ತಿಗಳು ಅಥವಾ ನಿರ್ಜಿವ ವಸ್ತುಗಳನ್ನು ಸಂಬೋಧಿಸುವುದು. ಉದಾಹರಣೆಗೆ:

- ಕೀರ್ತನೆ 114:5 ರಲ್ಲಿ ಕೀರ್ತನೆಗಾರನು ಸಮುದ್ರ, ಯೋರ್ದನ್ ನದಿ, ಪರ್ವತಗಳು ಮತ್ತು ಬೆಟ್ಟಗಳನ್ನು ಸಂಬೋಧಿಸುತ್ತಿದ್ದಾನೆ.
- ದೇಶಗಳು ಮತ್ತು ನಗರಗಳನ್ನು ಕೆಲವೊಮ್ಮೆ ಅವು ಮನುಷ್ಯರಂತೆ ಸಂಬೋಧಿಸಲ್ಪಡುತ್ತವೆ: ಐಗುಪ್ತ (ಕೀರ್ತನೆ 135:9), ಯೆರೂಸಲೇಮ್ (ಕೀರ್ತನೆ 137:5), ಬಾಬೇಲ್ (ಕೀರ್ತನೆ 137:8).
- ಪ್ರಲಾಪ. 2:18 ರಲ್ಲಿ ಕವಿ ಯೆರೂಸಲೇಮ್‌ನ ಗೋಡೆಯನ್ನು ಈ ರೀತಿ ಸಂಬೋಧಿಸುತ್ತಾನೆ: ಓ ಚೀಯೋನಿನ ಮಗಳೇ.

4. ಪ್ರಸ್ತಾಪ

ಹಿಂದಿನ (ಮತ್ತು ಪ್ರಸಿದ್ಧ) ಪಠ್ಯವನ್ನು ಪ್ರತಿಧ್ವನಿಸುವುದು. ಉದಾಹರಣೆ:

- ಕೀರ್ತನೆ 103:8: ವಿಮೋಚನಕಾಂಡ 34:6 ರಲ್ಲಿ ಸೀನಾಯಿ ಪರ್ವತದ ಮೇಲೆ ಮೋಶೆಗೆ ದೇವರು ಹೇಳಿದ ಮಾತುಗಳನ್ನು ಪ್ರತಿಧ್ವನಿಸುತ್ತದೆ: "ಯೆಹೋವ, ಯೆಹೋವ, ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು"

- ಕೀರ್ತನೆ 103:14: ಮನುಷ್ಯನ ಸೃಷ್ಟಿಯ ಬಗ್ಗೆ ಆದಿಕಾಂಡದ ಖಾತೆಗಳನ್ನು ಪ್ರತಿಧ್ವನಿಸುತ್ತದೆ: (ಯೆಹೋವದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿದನು, ಆದಿಕಾಂಡ 2:7) ಮತ್ತು ಪತನದ ಪರಿಣಾಮವಾಗಿ ಶಾಪ (ನೀನು ತಿರಿಗೆ ಮಣ್ಣಿಗೆ ಸೇರುವತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ, ಆದಿಕಾಂಡ 3:19).

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳು (ಪ್ರಶ್ನೆ 9 ಹೊರತುಪಡಿಸಿ) ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಂಡುಬರುತ್ತವೆ. ಆದರೆ ನೀವು ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಉಪಮೆ ಮತ್ತು ರೂಪಾಲಂಕಾರದ ನಡುವಿನ ವ್ಯತ್ಯಾಸವನ್ನು ವಿವರಿಸಿರಿ.

2. ಕೀರ್ತನೆಗಳ ಪುಸ್ತಕದಲ್ಲಿ ಕಂಡುಬರುವ ಮಾನವೀಕರಣದ ಎರಡು ಉದಾಹರಣೆಗಳನ್ನು ನೀಡಿರಿ.

3. ವ್ಯಕ್ತೀಕರಣ ಎಂಬ ಪದವನ್ನು ವಿವರಿಸಿರಿ.

4. "ನಮ್ಮ ಅನುದಿನದ ರೊಟ್ಟಿಯನ್ನು ಇಂದು ನಮಗೆ ಕೊಡು" ಎಂಬ ಪ್ರಾರ್ಥನೆಯಲ್ಲಿ "ರೊಟ್ಟಿ" ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರಕ್ಕೆ ಉದಾಹರಣೆಯಾಗಿ ಏಕೆ ಪರಿಗಣಿಸಬಹುದು ಎಂಬುದನ್ನು ವಿವರಿಸಿರಿ.

5. ನಾಮಪರ್ಯಾಯದ ಉದಾಹರಣೆಯೊಂದನ್ನು ಆಧುನಿಕ ಭಾರತದ ಜೀವನದಿಂದ ನೀಡಿ.

6. ಅತಿಶಯೋಕ್ತಿ ಎಂಬ ಪದವನ್ನು ವಿವರಿಸಿ.

7. "ನನ್ನನ್ನು ಕೇಳಲು ನೀನು ಯಾರು!" ಎಂಬ ಸಾಮಾನ್ಯ ಭಾರತೀಯ ಉದ್ಗಾರವನ್ನು ನಿಜವಾದ ಪ್ರಶ್ನೆಯಾಗಿ ಅಲ್ಲ, ಬದಲಿಗೆ ಅಲಂಕಾರಿಕ ಪ್ರಶ್ನೆಯಾಗಿ ಏಕೆ ಅರ್ಥೈಸಿಕೊಳ್ಳಬೇಕೆಂಬುದನ್ನು ವಿವರಿಸಿ.

8. "ಓ ದೇವರೇ, ನನ್ನ ರಕ್ಷಕನೇ" ಎಂಬ ವಾಕ್ಯವನ್ನು ಸಂಭೋಧನಾ ಶೈಲಿಯ ಉದಾಹರಣೆಯಾಗಿ ಏಕೆ ಪರಿಗಣಿಸಬಾರದು ಎಂಬುದನ್ನು ವಿವರಿಸಿ.

9. ಅನುಭವವಿಲ್ಲದ ಓದುಗರಿಗೆ ಕಾವ್ಯಾತ್ಮಕ ಪಠ್ಯಗಳಲ್ಲಿ ಸೂಚನೆಗಳನ್ನು ಕಂಡುಹಿಡಿಯಲು ಕಷ್ಟವಾಗುತ್ತದೆ ಎಂದು ನೀವು ಏಕೆ ಭಾವಿಸುತ್ತೀರಿ?

ಸಮಾನಾಂತರತೆ

ಇಬ್ರಿಯ ಕಾವ್ಯಶೈಲಿಯ ಅತ್ಯಂತ ವಿಶೇಷ ಹಾಗೂ ವ್ಯಾಪಕವಾದ ಲಕ್ಷಣವೆಂದರೆ ಸಮಾನಾಂತರತೆಯು ಆಗಿದೆ. ಸಮಾನಾಂತರತೆ ಎಂದರೆ, ಹೆಚ್ಚಿನ ಕಾವ್ಯಪದಗಳು ಎರಡು (ಕೆಲವೊಮ್ಮೆ ಮೂರು) ಸಮತೋಲನ ಹೊಂದಿದ ಭಾಗಗಳಿಂದ ಅಂದರೆ ವಾಕ್ಯದ ಎರಡು ಸಮಾನ ಅಂಶಗಳಿಂದ ರಚನೆಯಾಗಿರುತ್ತವೆ.

ಈ ಸಮತೋಲನವು ಕಟ್ಟುನಿಟ್ಟಾದದ್ದಾಗಿರದೇ ಕೆಲವೊಮ್ಮೆ ಎರಡನೇ ಭಾಗವು ಮೊದಲನೇಯದಕ್ಕಿಂತ ಸ್ವಲ್ಪ ಚಿಕ್ಕದ್ದಾಗಿರಬಹುದು.

ಮೂರು ಮುಖ್ಯ ವಿಧಗಳು

1. ಎರಡನೇಯ ಭಾಗವು ಮೊದಲನೇಯ ಭಾಗಕ್ಕೆ ಸಮಾನವಾಗಿರುತ್ತದೆ (ಅಥವಾ ಇದು ಅದನ್ನೇ ಪುನರಾವರ್ತಿಸುತ್ತದೆ ಅಥವಾ ವಿಭಿನ್ನ ಪದದೊಂದಿಗೆ ಅದೇ ಆಲೋಚನೆ). ಇದನ್ನು **ಸಮಾನಾರ್ಥಕ ಸಮಾನಾಂತರತೆ** ಎನ್ನುವರು.
2. ಎರಡನೇಯ ಭಾಗವು ಮೊದಲನೇಯ ಭಾಗಕ್ಕೆ ವಿರುದ್ಧವಾಗಿರುತ್ತದೆ (ಅಥವಾ ಇದು ತದ್ವಿರುದ್ಧವಾದ ವ್ಯಕ್ತಿ ಅಥವಾ ಗುಣ ಸ್ವಭಾವವನ್ನು ವರ್ಣಿಸುತ್ತದೆ). ಇದನ್ನು **ವಿರೋಧಾತ್ಮಕ ಸಮಾನಾಂತರತೆ** ಎನ್ನುವರು.
3. ಎರಡನೇಯ ಭಾಗವು ಮೊದಲನೇಯ ಭಾಗಕ್ಕೆ ಮಾಹಿತಿಗಳನ್ನು ಸೇರಿಸುತ್ತದೆ. ಇದನ್ನು **ಸಂಯೋಜಿತ ಸಮಾನಾಂತರತೆ** ಎನ್ನುವರು.

ಈ ಮೂರು ವಿಧಗಳು ಸಾಧಾರಣೀಕರಣವಾಗಿದ್ದು ಮತ್ತು ಇಬ್ರಿಯ ಕವಿಗಳಿಂದ ಉಪಯೋಗಿಸಲ್ಪಟ್ಟ ಸಮಾನಾಂತರತೆಗಳು ಸಮೃದ್ಧ ವೈಶಿಷ್ಟ್ಯಗಳನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಹಾಗಾಗಿ ನಾವು ಈ ಎರಡು ಭಾಗಗಳ ರಚನೆಯಲ್ಲಿಯೇ ಗಮನಾರ್ಹವಾದ ರೀತಿಯಲ್ಲಿ ವೈವಿಧ್ಯತೆ ಮತ್ತು ನೈಜನಾತ್ಮಕತೆಯನ್ನು ಕಾಣಬಹುದು.

ಇಂಗ್ಲೀಷಿನ **ಎನ್ಐವಿ** ಮತ್ತು **ಇಎಸ್‌ವಿ** ಭಾಷಾಂತರದಲ್ಲಿ ಒಂದು ಸಾಲಿನ ಎರಡು ಮತ್ತು 3 ನೇ ಭಾಗಗಳು ಮೊದಲನೇಯ ಭಾಗಕ್ಕಿಂತ ಹೆಚ್ಚಾಗಿ ಕರಾರು ಮಾಡುವಂತಿವೆ. ಸತ್ಯವೇದದ ವಚನದಲ್ಲಿನ ಸಮಾನಾಂತರತೆಯ ರಚನೆಯನ್ನು ನಾವು ವಿಶ್ಲೇಷಿಸುವಾಗ ನಮಗೆ ಇದೊಂದು ದೊಡ್ಡ ಸಹಾಕಾರಿಯಾಗಿದೆ. ಕನ್ನಡದ ಭಾಷಾಂತರಗಳು ಈ ರೀತಿಯ ಸಹಾಯವನ್ನು ನಮಗೆ ಒದಗಿಸದೇ ಇರುವುದು ದುಃಖಕರವಾಗಿದೆ.

ಕನ್ನಡ ಸತ್ಯವೇದ ಭಾಷಾಂತರಗಳು ಹೆಚ್ಚಾಗಿ ಮೂಲ ಇಬ್ರಿಯ ಸಮಾನಾಂತರತೆಯನ್ನು ತೋರಿಸುವುದರಲ್ಲಿ ಗಮನವನ್ನೇ ಕೊಡುವುದಿಲ್ಲವೆಂಬುದನ್ನು ನಾವು ಗಮನಿಸಲೇಬೇಕು. ಇದರರ್ಥ ಕಲವೊಮ್ಮೆ ಅವು ಭಾಷಾಂತರಿಸುವುದರ ಬದಲು ಭಾವಾನುವಾದವನ್ನು ಮಾಡುತ್ತದೆ.

ಸಮಾನಾರ್ಥಕ ಸಮಾನಾಂತರತೆಗೆ ಉದಾಹರಣೆಗಳು

ಸಮಾನಾರ್ಥಕ ಸಮಾನಾಂತರತೆ ಎಂದರೆ ಪದ್ಯರೂಪಿ ವಾಕ್ಯದ ಎರಡನೇಯ ಭಾಗವು (ಸಾಲು) ಮೊದಲನೇಯ ಭಾಗದ ಜ್ಞಾನವನ್ನು ಪುನರಾವರ್ತಿಸುತ್ತದೆ ಅಥವಾ ಬಲಪಡಿಸುತ್ತದೆ. ಇದೊಂದು ರೀತಿಯ ಪ್ರತಿಧ್ವನಿಯಂತೆ: ಅದೇ ಸಂಗತಿಯು ಮತ್ತೆ ಬರುವುದಾಗಿದೆ ಆದರೆ ಸ್ವಲ್ಪ ವಿಭಿನ್ನವಾಗಿ.

ಉದಾಹರಣೆ 1:

ಪರಲೋಕದಲ್ಲಿ ಅಸನಾರೂಢನಾಗಿರುವಾತನು ಅದಕ್ಕೆ ನಗುವನು;

ಕರ್ತನು ಅದಕ್ಕೆ ಪರಿಹಾಸ್ಯಮಾಡುವನು.

(ಕೀರ್ತನೆ 2:4)

ಕೀರ್ತನೆಗಾರನು ಮೊದಲನೇಯ ಸಾಲಿನಲ್ಲಿ ಒಂದು ಸಂಗತಿಯನ್ನು (ದೇವರು ನಗುವುದು) ಮತ್ತು ಎರಡನೇ ಸಾಲಿನಲ್ಲಿ ಇನ್ನೊಂದು ಸಂಗತಿಯನ್ನು (ದೇವರು ಪರಿಹಾಸ್ಯ ಮಾಡುವುದು) ಹೇಳುವುದಿಲ್ಲ. ಇಲ್ಲಿ ಎರಡು ಸಾಲುಗಳು ಸಹ ವಿಭಿನ್ನ ಪದಗಳೊಂದಿಗೆ ಒಂದೇ ಸಂಗತಿಯನ್ನು ಹೇಳುವವು. ಎರಡನೇ ಸಾಲು ಮೊದನೇಯದನ್ನು ಪ್ರತಿಧ್ವನಿಸುತ್ತದೆಂದು ನಾವು

ಹೇಳಬಹುದು. ಮೊದಲನೇ ಸಾಲಿನಲ್ಲಿ "ಪರಲೋಕದಲ್ಲಿರುವವನು" ಎಂದು ದೇವರು ಕರೆಯಲ್ಪಟ್ಟರೆ, ಎರಡನೇ ಸಾಲಿನಲ್ಲಿ "ಕರ್ತನು" ಎಂದು ಕರೆಯಲ್ಪಟ್ಟಿದ್ದಾನೆ. ಮೊದಲ ಸಾಲಿನಲ್ಲಿ ಭಯಭಕ್ತಿಯಿಲ್ಲದ ರಾಷ್ಟ್ರಗಳೆಡೆಗೆ ದೇವರು ನಕ್ಕರೆ ಎರಡನೇ ಸಾಲಿನಲ್ಲಿ ದೇವರು ಅವರೆಡೆಗೆ ಪರಿಹಾಸ್ಯಮಾಡುವನು. ಎರಡು ಸಾಲುಗಳು ಸಹ ಒಟ್ಟಾಗಿ ಓದಿ ಅರ್ಥೈಸಲ್ಪಡಬೇಕು. ಒಂದೇ ಆಲೋಚನೆಯು ವಿಭಿನ್ನ ಪದಗಳೊಂದಿಗೆ ಪುನಾರಾವರ್ತನೆಯಾಗುವುದು ಪಠ್ಯವನ್ನು ಪದ್ಯ ಮತ್ತು ಇತರ ಸಂದೇಶವನ್ನು ಶ್ರೀಮಂತ ಮತ್ತು ಶೋಭಾಯಮಾನಗೊಳಿಸುತ್ತದೆ. ದೇವರು ಕರ್ತನಾಗಿದ್ದಾನೆ (ಇಸ್ರಾಯೇಲ್ಯರ ವೈಯಕ್ತಿಕ ದೇವರು). ಕುತಂತ್ರ ಮತ್ತು ಪಿತೂರಿ ಮಾಡುವ ದೇಶಗಳಿಗಿಂತ ಉನ್ನತವಾಗಿ ಪರಲೋಕದಲ್ಲಿ ಆಸೀನನಾಗಿದ್ದಾನೆ. ಆತನು ಅವರೆಡೆಗೆ ಪರಿಹಾಸ್ಯದಿಂದ ನಗುತ್ತಾನೆ.

ಉದಾಹರಣೆ 2:

ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ;

ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ.

ದಿನವು ದಿನಕ್ಕೆ ಪ್ರಕಟಿಸುತ್ತಿರುವುದು;

ರಾತ್ರಿಯು ರಾತ್ರಿಗೆ ಅರುಹುತ್ತಿರುವುದು.

(ಕೀರ್ತನೆ 19:1–2)

ಇಲ್ಲಿ ಎರಡು ಜೊತೆ ಸಾಮಾನಾರ್ಥಕ ಸಮಾನಾಂತರತೆಗಳಿವೆ. ಇವುಗಳ ಮೂಲಕ ಕೀರ್ತನೆಗಾರನು ದೇವರನ್ನು ಸೃಷ್ಟಿಕರ್ತನೆಂದು ಮಹಿಮೆಪಡಿಸುತ್ತಿದ್ದಾನೆ. ಆತನ ಹೇಳಿಕೆಯನ್ನು ನಾವು ಸರಳವಾದ ಗದ್ಯದಲ್ಲಿಟ್ಟರೆ ಅದು ಈ ರೀತಿಯಾಗಬಹುದು: "ದೇವರು ತನ್ನ ಸೃಷ್ಟಿಯಲ್ಲಿ ಪ್ರಕಟಿಸಲ್ಪಟ್ಟಿದ್ದಾನೆ. ವಿಶೇಷವಾಗಿ ಪರಲೋಕದ ಶರೀರಗಳಲ್ಲಿ".

ಈ ನಾಲ್ಕು ಸಾಲುಗಳು ನಾಲ್ಕು ಬೇರೆ ಬೇರೆ ಸಂಗತಿಗಳಲ್ಲಿ ಹೇಳಲು ಪ್ರಯತ್ನಿಸದೇ ಇರುವುದನ್ನು ಗಮನಿಸಿರಿ. ಆದರೆ ಎರಡನೇ ಜೊತೆಯು (ವಚನ 2) ಮೊದಲನೇಯ ಜೊತೆಗೆ – ಹಗಲು ಮತ್ತು ರಾತ್ರಿ ಸಮಯಗಳಲ್ಲಿ ಗಗನವು ತನ್ನ ಸೃಷ್ಟಿಕರ್ತನನ್ನು ಪ್ರಕಟಪಡಿಸುತ್ತದೆಂಬುದನ್ನು ಸೇರಿಸುತ್ತದೆ.

ಮೊದಲನೇಯ ಜೊತೆಯಲ್ಲಿ (ವಚನ 1), ಎರಡನೇ ಸಾಲು ಮೊದಲನೇಯದನ್ನು ಪ್ರತಿಧ್ವನಿಸುತ್ತದೆ: ಆತನ ಕೈಕೆಲಸದಲ್ಲಿ ಕಂಡಂತೆ (ಆತನ ಕೈಕೆಲಸ) ಆಕಾಶ/ಗಗನವು ದೇವರ ಮಹಿಮೆಯನ್ನು ಪ್ರಚುರಪಡಿಸುತ್ತದೆ. ಒಟ್ಟಾಗಿ ಈ ಎರಡೂ ಸಾಲುಗಳು ಸಹ ಒಂದು ಮಹಿಮೆಯ ವಾಸ್ತವಾಂಶದ ಬಗ್ಗೆ ಮಾತನಾಡುತ್ತವೆ.

ಎರಡನೇ ಜೊತೆಯಲ್ಲಿ (ವಚನ 2), ಎರಡನೇ ಸಾಲು ಮೊದಲನೇಯದನ್ನು ಪ್ರತಿಧ್ವನಿಸುತ್ತದೆ: ಪ್ರತಿ ದಿನವು/ರಾತ್ರಿಯು ದೇವರು ಏನನ್ನು ಮಾಡಿದ್ದಾನೆಂಬ ಜ್ಞಾನವನ್ನು ತೋರಿಸುತ್ತದೆ (ಅರುಹುತ್ತದೆ).

ಪ್ರಾಥಮಿಕವಾಗಿ ನಮ್ಮ ಬುದ್ಧಿಗಲ್ಲ, ಇದು ನಮ್ಮ ಭಾವನೆ ಮತ್ತು ಕಲ್ಪನೆಗಳಿಗೆ ಸ್ಪಂದಿಸುವಾಗ/ಸರಿಬೀಳುವಾಗ ಸಮಾನಾರ್ಥಕ ಭಾವನೆ/ಹೇಳಿಕೆಯೊಂದಿಗಿನ ಸಮಾನಾಂತರತೆಯು ಈ ಪಠ್ಯವನ್ನು ಶ್ರೀಮಂತ ಮತ್ತು ಸಮೃದ್ಧವನ್ನಾಗಿಸುತ್ತದೆ. ಅದೇ ಸಮಯ ಭೂಮಂಡಲದ ಸೃಷ್ಟಿಕರ್ತನಾಗಿ ದೇವರ ಕುರಿತಾದ ಪ್ರಮುಖ ಸತ್ಯವೇದದ ಸಿದ್ಧಾಂತವನ್ನು ಒಳಗೊಂಡಿರುತ್ತದೆ.

ವಿರೋಧಾತ್ಮಕ ಸಮಾನಾಂತರತೆಗೆ ಉದಾಹರಣೆ

ವಿರೋಧಾತ್ಮಕ ಸಮಾನಾಂತರತೆ ಎಂದರೆ ಪದ್ಯರೂಪಿ ವಾಕ್ಯದ ಎರಡು ಭಾಗಗಳ (ಸಾಲುಗಳ) ವಿಷಯಾಂಶಗಳು ತದ್ವಿರುದ್ಧವಾಗಿರುತ್ತವೆ.

ಉದಾಹರಣೆ 1:

ಯೆಹೋವನು ನೀತಿವಂತರ ಮಾರ್ಗವನ್ನು ಲಕ್ಷಿಸುವನು;

ದುಷ್ಟರ ಮಾರ್ಗವೋ ನಾಶವಾಗುವದು.

(ಕೀರ್ತನೆ 1:6)

ಸಾಮಾನ್ಯವಾಗಿ ಎರಡನೇ ಸಾಲು ತದ್ವಿರುದ್ಧತೆಯನ್ನು ತರುವ ಒಂದು ಶಬ್ದದೊಂದಿಗೆ ಪ್ರಾರಂಭವಾಗುತ್ತದೆ. ಈ ವಿಷಯದಲ್ಲಿ ನಾವು "ಆದರೆ" ಎಂಬ ಪದವನ್ನು ನೋಡುತ್ತೇವೆ. "ದುಷ್ಟರು" ಮತ್ತು "ನೀತಿವಂತರು" ಪರಸ್ಪರ

ತದ್ವಿರುದ್ಧವಾಗಿದ್ದಾರೆ ಮತ್ತು ಅವರಿಬ್ಬರ ಅಂತ್ಯವು ಸಹ ತದ್ವಿರುದ್ಧವಾಗಿದೆ: ನೀತಿಯ ಮಾರ್ಗವನ್ನು ಆರಿಸಿಕೊಳ್ಳುವವನನ್ನು ದೇವರು ಲಕ್ಷಿಸುವನು, ಆದರೆ ದುಷ್ಟನ ಮಾರ್ಗವನ್ನು ಹಿಡಿಯುವವನು ನಾಶವಾಗುವನು. ಅವನಿಗೆ ಭವಿಷ್ಯವೇ ಇಲ್ಲ.

ಉದಾಹರಣೆ 2:

ಯೆಹೋವನು ಪರದೇಶದವರನ್ನು ಕಾಪಾಡುತ್ತಾನೆ.

ಆತನು ಅನಾಥರಿಗೂ ವಿಧವೆಯರಿಗೂ ಆಧಾರವಾಗಿದ್ದಾನೆ.

ಆದರೆ ದುಷ್ಟರ ಮಾರ್ಗವನ್ನು ಡೊಂಕು ಮಾಡಿಬಿಡುತ್ತಾನೆ.

(ಕೀರ್ತನೆ 146:9)

ಯಾಕೆ ಈ ವಚನವು ವಿರೋಧಾತ್ಮಕ ಸಮಾನಾಂತರತೆಗೆ ಉದಾಹರಣೆಯಾಗಿದೆ?

ಉತ್ತರ:

- ಎರಡನೇ ಭಾಗವು ಮೊದಲನೇಯದಕ್ಕೆ ತದ್ವಿರುದ್ಧತೆಯನ್ನು ತೋರಿಸುತ್ತದೆ.
- ಎರಡನೇ ಭಾಗವು ಈ ತದ್ವಿರುದ್ಧತೆಯನ್ನು ತೋರಿಸುವ **"ಆದರೆ"** ಎಂಬ ಪದದಿಂದ ಆರಂಭವಾಗುತ್ತದೆ.

ತದ್ವಿರುದ್ಧತೆಗಳು ಯಾವುವು?

ಉತ್ತರ:

- ಎರಡನೇಯ ಭಾಗದಲ್ಲಿರುವ **"ದುಷ್ಟರು"** ಮೊದಲನೇಯ ಭಾಗದಲ್ಲಿನ **"ಪರದೇಶಿಗಳು, ಅನಾಥರು ಮತ್ತು ವಿಧವೆಯರೊಂದಿಗೆ"** ತದ್ವಿರುದ್ಧವಾಗಿದ್ದಾರೆ.
- ಮೊದಲನೇಯ ಭಾಗದಲ್ಲಿರುವ **"ಕಾಪಾಡುತ್ತಾನೆ"** ಮತ್ತು **"ಆಧಾರವಾಗಿದ್ದಾನೆ"** ಎಂಬುದು ಎರಡನೇಯ ಭಾಗದಲ್ಲಿನ **"ಮಾರ್ಗವನ್ನು ಡೊಂಕುಮಾಡುತ್ತಾನೆ"** ಎಂಬುದರೊಂದಿಗೆ ತದ್ವರುದ್ಧವಾಗಿದೆ.

ಯಾಕೆಂದರೆ ಇದರ ಬೋಧನಾ ಸ್ವಭಾವದಿಂದ ವಿರೋಧ ಭಾವದ ಸಮಾನಾಂತರತೆಯು ಕೀರ್ತನೆಗಿಂತಲೂ ಜ್ಞಾನೋಕ್ತಿಗಳಲ್ಲಿ ಹೆಚ್ಚು ಸಾಮಾನ್ಯವಾಗಿದೆ.

ಸಂಯೋಜಿತ ಸಮಾನಾಂತರತೆಗೆ ಉದಾಹರಣೆಗಳು

ಈ ಹಿಂದೆ ತಿಳಿಸಲ್ಪಟ್ಟ ಸಮಾನಾಂತರತೆಗಳ ವಿಧಗಳ ಪ್ರಗತಿಯಾಗಿ ಸಂಯೋಜಿತ ಸಮಾನಾಂತರತೆಯನ್ನು ಕಾಣಬಹುದು. ಇದು ಸಹ ಜಟಿಲವಾದದ್ದು. ಕೇವಲ ಇದರ ಮೂಲ ರಚನೆಯಲ್ಲಿಲ್ಲ, ಆದರೆ ಕವಿಯು ಇದನ್ನು ಅನೇಕ ವಿಭಿನ್ನ ವಿಧಗಳಲ್ಲಿ ಉಪಯೋಗಿಸುವುದರ ನಿಮಿತ್ತ ಸಹ ಆಗಿದೆ.

ಉದಾಹರಣೆ 1:

ಯೆಹೋವನು ನನಗೆ ಕುರುಬನು;

ಕೊರತೆಪಡೆನು.

(ಕೀರ್ತನೆ 23:1)

ಎರಡನೇಯ ಭಾಗವು ಸ್ವಾಭಾವಿಕವಾಗಿ ಮೊದಲ ಭಾಗವನ್ನು ಹಿಂಭಾಲಿಸುತ್ತದೆ. ಅವೆರಡರ ಮಧ್ಯೆ ಒಂದು ಆಂತರಿಕ ಮತ್ತು ವೈಚಾರಿಕ ಸಂಬಂಧವಿದೆ: ಯೆಹೋವನು ನನ್ನ ಕುರುಬನಾಗಿರುವ ನಿಮಿತ್ತ ನನ್ನ ಕೊರತೆಗಳು ನೀಗಲ್ಪಡುತ್ತವೆ.

ಉದಾಹರಣೆ 2:

ಆಗ ನಿನ್ನ ಮಾರ್ಗವನ್ನು ದ್ರೋಹಿಗಳಿಗೆ ಬೋಧಿಸುವೆನು;

ಪಾಪಿಗಳು ನಿನ್ನ ಕಡೆಗೆ ತಿರುಗಿಕೊಳ್ಳುವರು.

(ಕೀರ್ತನೆ 51:13)

ಅಲ್ಲದೇ ಈ ಉದಾಹರಣೆಯ ಹೇಳಿಕೆಯಲ್ಲಿ ಎರಡನೇಯ ಭಾಗವು (ಪಾಪಿಗಳು ದೇವರ ಕಡೆಗೆ ತಿರುಗಿಕೊಳ್ಳುವರು) ಎಂಬುದನ್ನು ಮೊದಲ ಭಾಗದಲ್ಲಿ ಏನಾಗುತ್ತದೋ ಅದರ ಫಲಿತಾಂಶವನ್ನಾಗಿ ಕಾಣಬಹುದಾಗಿದೆ (ಕೀರ್ತನೆಗಾರನು ದ್ರೋಹಿಗಳಿಗೆ ದೇವರ ಮಾರ್ಗವನ್ನು ಬೋಧಿಸುವುದು).

ಉದಾಹರಣೆ 3:

ಯೆಹೋವನೇ ದೇವರೆಂದು ತಿಳಿದುಕೊಳ್ಳಿರಿ,

ನಮ್ಮನ್ನು ಉಂಟು ಮಾಡಿದವನು ಆತನೇ; ನಾವು ಆತನವರು.

ಆತನ ಪ್ರಜೆಯೂ ಆತನು ಪಾಲಿಸುವ ಹಿಂಡೂ ಆಗಿದ್ದೇವೆ.

(ಕೀರ್ತನೆ 100:3)

ಇಲ್ಲಿ ಮೊದಲನೇಯ ಭಾಗವು ಒಂದು ಪ್ರಬೋಧನೆಯನ್ನು ಪ್ರಸ್ತುತಪಡಿಸುತ್ತದೆ (*ಯೆಹೋವನೇ ದೇವರೆಂದು ತಿಳಿದುಕೊಳ್ಳಿರಿ*).

ಎರಡನೇಯ ಭಾಗವು ಯಾಕೆ ಯೆಹೋವನು ನಮ್ಮ ದೇವರಾಗಿದ್ದಾನೆಂದು ವಿವರಿಸುತ್ತದೆ (*ಯಾಕೆಂದರೆ ಆತನೇ ನಮ್ಮನ್ನು ಉಂಟುಮಾಡಿದವನು, ನಾವು ಆತನಿಗೆ ಮೀಸಲಾಗಿದ್ದೇವೆ*).

ಮೂರನೇಯ ಭಾಗದ ಮೊದಲ ಅಂಶವು ನಾವು ಆತನಿಗೆ ಮೀಸಲಾಗಿದ್ದೇವೆಂಬುದನ್ನು ಪ್ರತಿಧ್ವನಿಸುತ್ತದೆ (ನಾವು ಆತನ ಪ್ರಜೆಗಳು) ಹಾಗಾಗಿ ಇದು ಎರಡನೇಯ ಭಾಗದ ಎರಡನೇಯ ಅಂಶಕ್ಕೆ ಸಮಾನಾರ್ಥಕವಾಗಿದೆ (*ನಾವು ಆತನವರು*).

ಮೂರನೇಯ ಭಾಗದ ಎರಡನೇಯ ಅಂಶವು ಒಂದು ರೂಪಾಲಂಕಾರವನ್ನು ಉಪಯೋಗಿಸುವುದರ ಮೂಲಕ ನಾವು ದೇವರಿಗೆ ಮೀಸಲಾಗಿದ್ದೇವೆ ಎಂಬ ಸಂಗತಿಯನ್ನು ವಿಸ್ತರಿಸುತ್ತದೆ. ಇದು ನಮಗೆ ಕುರುಬನು ತನ್ನ ಕುರಿಯ ಬಗ್ಗೆ ಕಾಳಜಿ ವಹಿಸಿದಂತೆ ದೇವರು ನಮಗಾಗಿ ಕಾಳಜಿ ವಹಿಸುತ್ತಾನೆ ಎಂಬುದನ್ನು ಅರ್ಥೈಸಿಕೊಳ್ಳಲು ನಮಗೆ ಸಹಾಯಕವಾಗುತ್ತದೆ. ಈ ರೂಪಾಲಂಕಾರವು ಕನ್ನಡದ ಇತರೆ ಎರಡು ಭಾಷಾಂತರಗಳಿಗಿಂತಲೂ **ಪವಿತ್ರ ಗ್ರಂಥ**ದಲ್ಲಿ ಸ್ಪಷ್ಟವಾಗಿದೆ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಮೂರು ರೀತಿಯ ಸಮಾನಾಂತರತೆಗಳು ಯಾವುವು?
2. ಅವು ಯಾವ ರೀತಿಯಲ್ಲಿ ಹೋಲುತ್ತವೆ?
3. ಅವು ಯಾವ ರೀತಿಯಲ್ಲಿ ಭಿನ್ನವಾಗಿವೆ?

ಇಬ್ರಿಯ ಪದ್ಯದಲ್ಲಿನ ಇತರ ರೀತಿಯ ರಚನೆಗಳು

ಸಮಾನಾಂತರತೆಯು ಇಬ್ರಿಯ ಪದ್ಯದಲಿನ ಅತೀ ಪ್ರಾಮುಖ್ಯ ರಚನಾ ಘಟಕವಾಗಿದೆ. ಆದರೆ ಕವಿಗಳು ಇತರ ರಚನಾತ್ಮಕ ವಿಧಾನಗಳನ್ನು ಸಹ ಬಳಸುತ್ತಾರೆ.

ಚರಣಗಳು

ಒಂದು ಚರಣವು ಗದ್ಯದಲ್ಲಿನ ಒಂದು ವಾಕ್ಯದ ಪದ್ಯರೂಪಿ ಸಮಾನಾರ್ಥಕವಾಗಿದೆ. ವಾಕ್ಯವು ಅಧ್ಯಾಯದೊಳಗಿನ ಒಂದು ತಾರ್ಕಿಕ ಘಟಕವಾಗಿದ್ದಂತೆ ಇದೂ ಸಹ ಪದ್ಯದೊಳಗಿನ ಒಂದು ತಾರ್ಕಿಕ ಘಟಕವಾಗಿದೆ. ಹಳೇಯ ಕನ್ನಡದ ಭಾಷಾಂತರವು (**ಸತ್ಯವೇದವು**) ಚರಣಗಳನ್ನು ತೋರಿಸುತ್ತದೆ. ಆದರೆ ಹೊಸಗನ್ನಡದ ಭಾಷಾಂತರವು (**ಪವಿತ್ರ ಗ್ರಂಥ** ಮತ್ತು **ಪವಿತ್ರ ಬೈಬಲ್**) ಈ ರೀತಿಯಲ್ಲಿ ಇಲ್ಲ. ಹೆಚ್ಚಿನ ಆಧುನಿಕ ಇಂಗ್ಲೀಷ್ ಭಾಷಾಂತರಗಳು ಚರಣಗಳನ್ನು ತೋರಿಸುತ್ತವೆ. ಇದು ಕೀರ್ತನೆಯನ್ನು ತಿಳಿಸಲು ವಿಧ್ಯಾರ್ಥಿಗಳಿಗೆ ಸಹಾಯಕವಾಗುತ್ತದೆ.

ಇಬ್ರಿಯ ಕಾವ್ಯದ ಚರಣ ರಚನೆಯು ಬೈಬಲ್ ವಿದ್ವಾಂಸರು ಒಪ್ಪದ ವಿಷಯವಾಗಿದೆ. ವಿಭಿನ್ನ ಬೈಬಲ್ ಆವೃತ್ತಿಗಳನ್ನು ಹೋಲಿಸಿದಾಗ ಇದು ಸ್ಪಷ್ಟವಾಗುತ್ತದೆ, ಉದಹರಣೆಗೆ:

ಕೀರ್ತನೆ 1: ಇದು ಎರಡು ಅಥವಾ ಮೂರು ಚರಣವನ್ನು ಹೊಂದಿದೆಯೇ? ಇಂಗ್ಲಿಷ್ **ಇಎಸ್‌ವಿ** ಅನುವಾದವು ಎರಡು (ವಚನ 1–5 ಮತ್ತು ವಚನ 6) ಹೊಂದಿದೆ. ಇಂಗ್ಲಿಷ್ **ಎನ್‌ಐವಿ** ಅನುವಾದವು (ಮತ್ತು ಬಹುಶಃ ಕನ್ನಡ **ಸತ್ಯವೇದವು**) ಮೂರು (ವಚನ 1–3, ವಚನ 4–5, ವಚನ 6) ಹೊಂದಿದೆ. ಕೀರ್ತನೆ 42–43 ಮತ್ತು ಕೀರ್ತನೆ 46 ರ ಅಧ್ಯಯನಗಳು ಈ ಕೀರ್ತನೆಗಳ ಚರಣ ರಚನೆಯನ್ನು ಉಲ್ಲೇಖಿಸುತ್ತದೆ.

ಪಲ್ಲವಿ, ಪುನಾರಾವರ್ತನೆ ಮತ್ತು ಆವರಣ

ಪಲ್ಲವಿಯು ಒಂದು ಪದ್ಯದಲ್ಲಿ ಪುನಃ ಪುನಃ ಮರುಕಳಿಸುವ ಒಂದು ಸಾಲು ಅಥವಾ ಅನೇಕ ಸಾಲುಗಳಾಗಿದೆ. ಪಲ್ಲವಿಗಳು ಕೆಲವು ಕೀರ್ತನೆಗಳಲ್ಲಿ ಕಂಡುಬರುತ್ತವೆ, ಮತ್ತು ಅವು ಕೀರ್ತನೆಗಳ ರಚನೆಯನ್ನು ಪ್ರೋತ್ಸಾಹಿಸುತ್ತವೆ. ಮೂರು ಉದಾಹರಣೆಗಳು:

ಕೀರ್ತನೆ 42–43 (ಮೂಲ ಒಂದೇ ಕೀರ್ತನೆ) ಈ ಪಲ್ಲವಿಯನ್ನು ನಾವು 3 ಬಾರಿ ಕಾಣಬಹುದು:

ನನ್ನ ಮನವೇ, ನೀನು ಕುಗ್ಗಿ ಹೋಗಿರುವುದೇನು?

ಹೀಗೆ ವ್ಯೆಥೆ ಪಡುವುದೇಕೆ?

ದೇವರನ್ನು ನಿರೀಕ್ಷಿಸು;

ಆತನೇ ನನಗೆ ರಕ್ಷಕನೂ ದೇವರೂ ಆಗಿದ್ದಾನೆ.

ನಾನು ಇನ್ನೂ ಆತನನ್ನು ಸ್ತುತಿಸುತ್ತಿರುವೆನು.

(ಕೀರ್ತನೆ 42:5, 42:11, 43:5)

ಕೀರ್ತನೆ 46 ರ ಪಲ್ಲವಿ 7 ಮತ್ತು 11 ನೇ ವಚನಗಳಲ್ಲಿ ಇದೆ.

ಕೀರ್ತನೆ 57 ಇದರಲ್ಲಿನ 5 ಮತ್ತು 11 ವಚನಗಳಲ್ಲಿನ ಒಂದು ಪಲ್ಲವಿಯಿಂದ ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ:

ದೇವರೇ, ಮೇಲಣಲೋಕಗಳಲ್ಲಿ ನಿನ್ನ ಪ್ರಭಾವವು ಮೆರೆಯಲಿ;

ಭೂಮಂಡಲದ ಮೇಲೆಲ್ಲಾ ನಿನ್ನ ಮಹತ್ವವು ಹಬ್ಬಲಿ.

ಪುನರಾವರ್ತನೆ

136 ನೇ ಕೀರ್ತನೆಯಲ್ಲಿ ಪ್ರತಿಯೊಂದು ವಚನದ ನಂತರ ಸಹ **"ಆತನ ಕೃಪೆಯು ಶಾಶ್ವತವಾದದ್ದು"** ಎಂಬ ಹೇಳಿಕೆಯು ಮರುಕಳಿಸಿರುವುದನ್ನು ನಾವು ಕಾಣಬಹುದು.

ಆವರಣ

ಆವರಣವೆಂದರೆ ಒಂದು ಪದ್ಯ (ಅಥವಾ ಪದ್ಯದ ಒಂದು ಭಾಗ) ಒಂದು ಹೇಳಿಕೆಯಿಂದ (ಪದಗುಚ್ಚದಿಂದ) ಅವರಿಸಲ್ಪಟ್ಟಿದೆ (ಅಥವಾ ಸುತ್ತುವರಿಯಲ್ಪಟ್ಟಿದೆ). ಈ ವೈಶಿಷ್ಟ್ಯವು ಒಂದು ಪದ್ಯದ ರಚನೆಯನ್ನು ಬಲಪಡಿಸುತ್ತದೆ ಮತ್ತು ಅದರ ವಿಷಯವನ್ನು ಒತ್ತಿಹೇಳುತ್ತದೆ. ಕೀರ್ತನೆ 8 ಇದಕ್ಕೆ ಒಂದು ಉದಾಹರಣೆಯಾಗಿದೆ, ಏಕೆಂದರೆ ಇದು ಒಂದೇ ವಿಷಯಾಧಾರಿತ ವಚನದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಕೊನೆಗೊಳ್ಳುತ್ತದೆ:

ನಮ್ಮ ಕರ್ತನಾದ ಯೆಹೋವನೇ,

ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು!

ಆವರಣದ ಇನ್ನೊಂದು ಉದಾಹರಣೆಗಾಗಿ ಕೀರ್ತನೆ 103 (ವಚನ 1 ಮತ್ತು 22) ನೋಡಿ.

ಕ್ರಮವ್ಯತ್ಯಯ (ಚಿಯಾಸ್ಮಸ್)

ಕ್ರಮವ್ಯತ್ಯಯವು ಇಬ್ರಿಯ ಪದ್ಯದಲ್ಲಿ (ಕಾವ್ಯದಲ್ಲಿ) ಸಾಮಾನ್ಯವಾಗಿ ಕಂಡುಬರುವ ಒಂದು ರಚನಾತ್ಮಕ ಲಕ್ಷಣವಾಗಿದೆ. ಇದು ವಿರುದ್ಧವಾದ ರೀತಿಯಲ್ಲಿ ಪಠ್ಯವನ್ನು ಜೋಡಿಸುವ ಒಂದು ಪ್ರಕಿಯೆಯಾಗಿದೆ. ಇದನ್ನು ಅಆಆಅ ರೀತಿಯಲ್ಲಿ ಹೇಳಬಹುದಾಗಿದೆ. ಒಂದು ಹೇಳಿಕೆಯು ಮೊದಲು ಮತ್ತು ಕೊನೆಯಲ್ಲಿ ಬರುತ್ತದೆ. ಇನ್ನೊಂದು ಹೇಳಿಕೆಯು ಮಧ್ಯದಲ್ಲಿ ಎರಡು ಬಾರಿ ಕಂಡು ಬರುತ್ತದೆ. ಇದು ಕ್ರಮವ್ಯತ್ಯಯವು ಸರಳ ರೀತಿಯಲ್ಲಿ ಕಂಡುಬರುವ ಒಂದು ವಿಧವಾಗಿದೆ. ಕೀರ್ತನೆ 8 ಇದಕ್ಕೆ ಒಂದು ಉದಾಹರಣೆಯಾಗಿದೆ, ಏಕೆಂದರೆ ಅದು ಒಂದೇ ವಿಷಯಾಧಾರಿತ ಪದ್ಯದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಕೊನೆಗೊಳ್ಳುತ್ತದೆ.

ದೀರ್ಘ ಪಠ್ಯದಲ್ಲಿ (ಅಆಇಈಉಊಇಆಅ ನಂತಹ ಸಂಕೀರ್ಣವಾದ ಕ್ರಮವ್ಯತ್ಯಯ ಮಾದರಿಗಳನ್ನು ನೀವು ಹೊಂದಿರಬಹುದು) ಕ್ರಮವ್ಯತ್ಯಯವನ್ನು ಕಂಡುಹಿಡಿಯುವುದು ಕಷ್ಟಕರವಾಗಿರುವುದರಿಂದ ಸತ್ಯವೇದ ವಿದ್ವಾಂಸರು ಪಠ್ಯವು ಕ್ರಮವ್ಯತ್ಯಯ ಆಗಿದಿಯೋ ಅಥವಾ ಇಲ್ಲವೇ ಎಂಬುದರ ಬಗ್ಗೆ ಸಾಮಾನ್ಯವಾಗಿ ಭಿನ್ನಾಭಿಪ್ರಾಯವನ್ನು ಹೊಂದಿರುತ್ತಾರೆ.

ಆದರೆ ಒಂದು ಕಾವ್ಯರೂಪಿ ಪಠ್ಯದಲ್ಲಿನ ಒಂದು ವಚನದಲ್ಲಿ ಕ್ರಮವ್ಯತ್ಯಯವು ಒಂದು ಪರಿಣಾಮಕಾರಿ ತಂತ್ರವಾಗಿದೆ.

ಉದಾಹರಣೆ 1 (ಕೀರ್ತನೆ 124:7):

ನಮ್ಮ ಜೀವವು ಬೇಟೆಗಾರನ ಬಲೆಯಿಂದ (ಅ)

ತಪ್ಪಿಸಿಕೊಂಡ ಪಕ್ಷಿಯಂತಿದೆ (ಆ)

ಬಲೆಯು ಹರಿದು ಹೋಯಿತು (ಅ)

ನಾವು ತಪ್ಪಿಸಿಕೊಂಡೆವು (ಆ)

ಇದು ಕ್ರಮವ್ಯತ್ಯಯದ ರಚನೆಯಲ್ಲಿ ಸಮಾನಾರ್ಥಕ ಸಮಾಂತರತೆಗೆ ಒಂದು ಉದಾಹರಣೆಯಾಗಿದೆ. ಸಮಾನಾಂತರತೆಯನ್ನು ಮಧ್ಯದ ಎರಡು ಸಾಲುಗಳಲ್ಲಿ ಕಾಣಬಹುದು (ಬೇಟೆಗಾರನ ಬಲೆಯಿಂದ ಮತ್ತು ಬಲೆ ಹರಿದು ಹೋಯಿತು). ನಾವು ಅದನ್ನು ಆ ಎಂದು ಕರೆಯಬಹುದು. ಅದೇ ಹೇಳಿಕೆಯು **"ನಾವು ತಪ್ಪಿಸಿಕೊಂಡೆವು"** (ಅದನ್ನು ಅ ಎನ್ನಬಹುದು) ವಚನವನ್ನು ಪ್ರಾರಂಭಿಸುತ್ತದೆ ಮತ್ತು ಮುಗಿಸುತ್ತದೆ. ಹಾಗಾಗಿ ವಚನದ ರಚನೆಯು ಅಆಆಅ ಒಂದು ಕ್ರಮವ್ಯತ್ಯಯವಾಗಿದೆ. ಕನ್ನಡದ ಮೂರು ಭಾಷಾಂತರಗಳೂ ಸಹ ಕ್ರಮವ್ಯತ್ಯಯವನ್ನು ತೋರಿಸಲು ಸಾಧ್ಯವಾಗಿಲ್ಲ.

ಉಹಾಹರಣೆ 2 (ಕೀರ್ತನೆ 1:6):

ಕರ್ತನು ನೀತಿವಂತರ ಮಾರ್ಗವನ್ನು ಲಕ್ಷಿಸುತ್ತಾನೆ,

ಆದರೆ ದುಷ್ಟರ ಮಾರ್ಗವು ನಾಶವಾಗುತ್ತದೆ.

ಇದು ಏಕೆ ಕ್ರಮವ್ಯತ್ಯಯ?

ಉತ್ತರ: ಪದ್ಯ **"**ಮಾರ್ಗ ... **"** ಎಂಬ ಪದಗುಚ್ಛ (ನಾವು ಇದನ್ನು ಆ ಎಂದು ಕರೆಯಬಹುದು) ಇದರ ಮಧ್ಯದಲ್ಲಿ ಬರುತ್ತದೆ. **"**ಕಾವಲು ಕಾಯುತ್ತದೆ**"** ಮತ್ತು **"**ನಾಶವಾಗುತ್ತದೆ**"** ಎಂಬ ಎರಡು ಪದಗುಚ್ಛಗಳು ವಿರೋಧಾತ್ಮಕ ಸಮಾನಾಂತರಗಳಾಗಿವೆ (ನಾವು ಅವುಗಳನ್ನು ಅ ಎಂದು ಕರೆಯಬಹುದು), ಮತ್ತು ಅವು ಪದ್ಯದ ಆರಂಭದಲ್ಲಿ ಮತ್ತು ಕೊನೆಯಲ್ಲಿ ಬರುತ್ತವೆ. ಆದ್ದರಿಂದ ಪದ್ಯದ ರಚನೆ ಅಆಆಅ –ಒಂದು ಕ್ರಮವ್ಯತ್ಯಯ. ಕನ್ನಡ ಭಾಷಾಂತರುಗಳು ಮತ್ತೊಮ್ಮೆ ಕ್ರಮವ್ಯತ್ಯವನ್ನು ಸ್ಪಷ್ಟವಾಗಿ ತೋರಿಸಲು ಸಾಧ್ಯವಾಗಲಿಲ್ಲ.

ಕೀರ್ತನೆ 103 (ವಚನ 1) ಕ್ರಮವ್ಯತ್ಯಯದ ಮತ್ತೊಂದು ಉದಾಹರಣೆಯಾಗಿದೆ. ಆದರೆ ಇದನ್ನು ಕನ್ನಡ ಭಾಷಾಂತರಗಳಲ್ಲಿ ನೋಡಲಾಗುವುದಿಲ್ಲ. ಕೀರ್ತನೆ 40 ರ ಅಧ್ಯಯನದ ಪರಿಚಯವು ಈ ಕೀರ್ತನೆಯನ್ನು ಸಂಪೂರ್ಣವಾಗಿ ಕ್ರಮವ್ಯತ್ಯಯ ಎಂದು ಹೇಗೆ ಅರ್ಥೈಸಿಕೊಳ್ಳಬಹುದು ಎಂಬುದನ್ನು ವಿವರಿಸುತ್ತದೆ.

ಒಗಟುರೂಪದ ಪದ್ಯಗಳು

"ಒಗಟುಗಳು**"** ಎಂದು ಕರೆಯಲ್ಪಡುವ ಸಾಹಿತ್ಯದ ಲಕ್ಷಣಗಳು ಇಬ್ರಿಯ ಕವಿಯು ತನ್ನ ಪಠ್ಯದ ಒಟ್ಟಾರೆ ವಿನ್ಯಾಸವನ್ನು ಗಮನದಲ್ಲಿಟ್ಟುಕೊಂಡು ಬರೆದಿದ್ದಾನೆ ಎಂದು ಬಹಿರಂಗಪಡಿಸುತ್ತದೆ. ಒಗಟುಗಳ ಪದ್ಯದಲ್ಲಿ ಪ್ರತೀ ಸಾಲು (ಅಥವಾ ವಚನ, ಅಥವಾ ಪಠ್ಯದ ವಿಭಾಗ) ಇಬ್ರಿಯ ವರ್ಣಮಾಲೆಯ ಪ್ರಕಾರ ವಿಭಿನ್ನ ಅಕ್ಷರಗಳೊಂದಿಗೆ ಪ್ರಾರಂಭವಾಗುತ್ತದೆ. ಎರಡು ಉದಾಹರಣೆಗಳು:

ಅ. ಕೀರ್ತನೆ 25 ಒಂದು ಒಗಟಿನ ಕೀರ್ತನೆಯಾಗಿದೆ. ಇಬ್ರಿಯ ವರ್ಣಮಾಲೆಯಲ್ಲಿ 22 ಅಕ್ಷರಗಳಿರುವಂತೆ ಇದರಲ್ಲಿ 22 ವಚನಗಳಿವೆ. ಮೊದಲನೇಯ ವಚನವು ವರ್ಣಮಾಲೆಯ ಮೊದಲ ಅಕ್ಷರದಿಂದ, ಎರಡನೇಯ ವಚನವು ಎರಡನೇಯ ಅಕ್ಷರದಿಂದ, ಇಪ್ಪತ್ತೆರಡನೇ ವಚನವು ಇಬ್ರಿಯ ವರ್ಣಮಾಲೆಯ ಇಪ್ಪತ್ತೆರಡನೇ/ಕಡೇ ಅಕ್ಷರದಿಂದ ಪ್ರಾರಂಭವಾಗುತ್ತದೆ. ಇಂತಹ ವೈಶಿಷ್ಟ್ಯವು ನಮ್ಮ ಕೀರ್ತನೆಯ ಅನುವಾದಗಳಲ್ಲಿ ಕಾಣುವುದಿಲ್ಲ. ಆದರೆ ಮೂಲ ಇಬ್ರಿಯ ಮಾತನಾಡುವ ಓದುಗರು ಅದನ್ನು ಮೆಚ್ಚಿರಬೇಕು.

ಆ. ಕೀರ್ತನೆ 119 ಸಹ ಒಂದು ಒಗಟಿನ ಕೀರ್ತನೆಯಾಗಿದೆ. ಆದರೆ ಇದು 176 ವಚನಗಳನ್ನು ಒಳಗೊಂಡಿದೆ. ಇಬ್ರಿಯ ವರ್ಣಮಾಲೆಯಲ್ಲಿನ (22) ಅಕ್ಷರಗಳಿಂದ ನೀವು ಇದರಲ್ಲಿನ ವಚನಗಳ ಸಂಖ್ಯೆಯನ್ನು (176) ವಿಭಾಗಿಸಿದರೆ ಫಲಿತಾಂಶವು 8 ಅಗಿರುತ್ತದೆ. ಈ ದೀರ್ಘವಾದ ಕೀರ್ತನೆಯು ಪ್ರತಿಯೊಂದು ವಿಭಾಗದಲ್ಲೂ 8 ವಚನಗಳೊಂದಿಗೆ 22 ವಿಭಾಗಗಳನ್ನು ಒಳಗೊಂಡಿದೆ. ಮತ್ತು ಪ್ರತೀ ವಿಭಾಗ ಸಹ ಇಬ್ರಿಯ ವರ್ಣಮಾಲೆಯ **"**ಆಲೆಫ್**"** ಎಂಬ ಅಕ್ಷರದಿಂದ ಪ್ರಾರಂಭವಾಗಿ (ಇಬ್ರಿಯ ವರ್ಣಮಾಲೆಯ ಮೊದಲ ಅಕ್ಷರ) **"**ಟಾವ**"** ಎನ್ನುವ ಅಕ್ಷರದೊಂದಿಗೆ (ಇಬ್ರಿಯ ವರ್ಣಮಾಲೆಯ ಕೊನೆಯ ಅಕ್ಷರ) ಮುಕ್ತಾಯವಾಗುತ್ತದೆ. ಅನೇಕ ಆಧುನಿಕ ಭಾಷಾಂತರಗಳು (ಕನ್ನಡ **ಸತ್ಯವೇದವು** ಅಲ್ಲ) ಅಕ್ಷರಗಳ ಹೆಸರುಗಳನ್ನು ಈ ವಿಭಾಗಗಳಿಗೆ ತಲೆಬರಹವಾಗಿ ಉಪಯೋಗಿಸಿವೆ. ಹಾಗಾಗಬೇಕಾದರೆ ಇಬ್ರಿಯ ಅಕ್ಷರಗಳ ಎಲ್ಲಾ ಹೆಸರುಗಳನ್ನು ನಾವು ಕಲಿಯಬಹುದು.

ಕೀರ್ತನೆಗಳು ಮತ್ತು ಪ್ರಲಾಪಗಳ ಪುಸ್ತಕದಲ್ಲಿ ಅಕ್ರೋಸ್ಟಿಕ್ ಕವಿತೆಗಳು ಕಂಡುಬರುತ್ತವೆ. ಜ್ಞಾನೋಕ್ತಿಗಳು ಅಂತಹ ಕವಿತೆಯೊಂದಿಗೆ ಕೊನೆಗೊಳ್ಳುತ್ತವೆ (ಜ್ಞಾನೋಕ್ತಿ. 31:10–31).

ತೀರ್ಮಾನ

ತಮ್ಮ ಪಠ್ಯಗಳನ್ನು ಬರೆಯುವಾಗ ಇಬ್ರಿಯ ಕವಿಗಳು ಇತರೆ ರಚನಾತ್ಮಕ ರೂಪಗಳನ್ನು ಸಹ ಉಪಯೋಗಿಸಿದ್ದಾರೆ. ಈ ರೂಪಗಳನ್ನು ಕಂಡುಹಿಡಿಯಲು ಮತ್ತು ಪ್ರಶಂಶಿಸಲು ಒಂದು ಒಳ್ಳೆಯ ಅಧ್ಯಯನ ಸತ್ಯವೇದವು ನಿಮಗೆ ಸಹಕರಿಸಬಲ್ಲದು. ಇದರಿಂದ ಕೀರ್ತನೆಗಳ ಗ್ರಂಥಕರ್ತರು ತಮ್ಮ ಪಠ್ಯವನ್ನು ಬಹು ಜಾಗರೂಕತೆಯಿಂದ ರಚಿಸಿದ್ದಾರೆಂದು ನಾವು ತಿಳಿದುಕೊಳ್ಳಬಹುದು. ಜಾಗರೂಕತೆಯಿಂದ ಅಧ್ಯಯನ ಮಾಡಿ ವಿಶ್ಲೇಷಿಸುವಾಗ ಅವರ ಕಾರ್ಯಗಳು ಪ್ರಕಾಶಿಸಲ್ಪಡುತ್ತವೆ.

ಪ್ರಶ್ನೆಗಳು

ಈ ಪ್ರಶ್ನೆಗಳ ಉತ್ತರಗಳನ್ನು ಹಿಂದಿನ ಐದು ಅಧ್ಯಯನಗಳಲ್ಲಿ ಸುಲಭವಾಗಿ ಕಾಣಬಹುದು. ಆದರೆ ಅದನ್ನು ನೋಡುವುದಕ್ಕಿಂತ ಮುನ್ನ ಪ್ರಶ್ನೆಗಳನ್ನು ಉತ್ತರಿಸಲು ನೀವು ಪ್ರಯತ್ನಿಸುವುದಾದರೆ ಹೆಚ್ಚಾಗಿ ಕಲಿಯುವಿರಿ.

1. ಚರಣ ಎಂದರೇನು?
2. ಕ್ರಮವ್ಯತ್ಯಯ ಎಂಬ ಪದವನ್ನು ವಿವರಿಸಿ.
3. ಆವರಣ ಎಂಬ ಪದವನ್ನು ವಿವರಿಸಿ.
4. ಕ್ರಮವ್ಯತ್ಯಯ ಮತ್ತು ಗ್ರೀಕ್ ಲೆಟರ್ ಚಿ ನಡುವಿನ ಸಂಪರ್ಕವನ್ನು ವಿವರಿಸಿ.
5. ಇಬ್ರಿಯ ವರ್ಣಮಾಲೆ ಮತ್ತು ಒಗಟುರೂಪದ ಕವಿತೆಯ ನಡುವಿನ ಸಂಪರ್ಕವನ್ನು ವಿವರಿಸಿ.

ಇಬ್ರಿಯ ಜ್ಞಾನದ ಅಸ್ತಿವಾರ

ಮೊದಲ ಪಾಠ "ಜ್ಞಾನದ ಸತ್ಯವೇದ ಶಾಲೆಯಲ್ಲಿ" ಪಾತ್ರ ನಾಟಕ.

ಸೂಚನೆಗಳು

ಶಿಕ್ಷಕರು "ಪಂಡಿತ" ಪಾತ್ರವನ್ನು ನಿರ್ವಹಿಸುತ್ತಾರೆ ಮತ್ತು ವಿವಿಧ ವಿದ್ಯಾರ್ಥಿಗಳು "ವಿದ್ಯಾರ್ಥಿ ಉತ್ತರಗಳು" ಭಾಗಕ್ಕೆ ಹೋಲುವ ಉತ್ತರಗಳೊಂದಿಗೆ ಬರಲು ಪ್ರೋತ್ಸಾಹಿಸುತ್ತಾರೆ. ಪಾತ್ರ ನಾಟಕದ ಉದ್ದೇಶ ವಿದ್ಯಾರ್ಥಿಗಳಿಗೆ "ಯೆಹೋವನ ಭಯ"ದ ಪ್ರಮುಖ ಪರಿಕಲ್ಪನೆಯನ್ನು ಸಂವಾದಾತ್ಮಕ ರೀತಿಯಲ್ಲಿ ಪರಿಚಯಿಸುವುದು ಮತ್ತು ಅದನ್ನು ಪ್ರತಿಬಿಂಬಿಸಲು ಅವರಿಗೆ ಸಹಾಯ ಮಾಡುವುದು.

ಈ ಪಾತ್ರ ನಾಟಕವನ್ನು ಆತುರದಿಂದ ಮುಗಿಸಬೇಡಿ, ಆದರೆ ಸತ್ಯವೇದ ವಚನಗಳನ್ನು ವೈಟ್‌ಬೋರ್ಡ್‌ನಲ್ಲಿ ಬರೆಯಲು ಸಮಯ ತೆಗೆದುಕೊಳ್ಳಿ ಮತ್ತು ನೀವು ಚರ್ಚಿಸುವಾಗ ವಿದ್ಯಾರ್ಥಿಗಳಿಗೆ ವಿವಿಧ ಅಭಿವ್ಯಕ್ತಿಗಳನ್ನು ಎತ್ತಿ ತೋರಿಸಿ.

ಪಂಡಿತ

"ಜ್ಞಾನದ ಸತ್ಯವೇದ ಶಾಲೆಗೆ" ಸ್ವಾಗತ. ನನ್ನ ಹೆಸರು ಪಂಡಿತ ಮತ್ತು "ಜ್ಞಾನದ ಶಾಲೆಯಲ್ಲಿ" ನಾನೊಬ್ಬ ಸಹ–ಶಿಕ್ಷಕನಾಗಿದ್ದೇನೆ. ನಾನು ಸಭಾಪಾಲಕನಲ್ಲ. ಆದರೆ ನಮ್ಮ ಸಭೆಯ ಜ್ಞಾನಿಗಳ ಸಹೋದರತ್ವಕ್ಕೆ ನಾನು ಸೇರಿದವನಾಗಿದ್ದೇನೆ. ನೀವು ಭವಿಷ್ಯದ ನಾಯಕರುಗಳಾಗಿರುವಿರೆಂದೂ ಮತ್ತು ಮುಂದಿನ ನಾಯಕತ್ವದ ಸ್ಥಳಗಳಿಗಾಗಿ ಸಿದ್ಧಗೊಳ್ಳಲು ಈ ಜ್ಞಾನದ ಶಾಲೆಗೆ ನಮ್ಮ ಸಭೆಗಳಿಂದ ನೀವು ಕಳುಹಿಸಲ್ಪಟ್ಟಿರುವಿರೆಂದು ನಾನು ಬಲ್ಲೆನು. ಮತ್ತೊಮ್ಮೆ ಸ್ವಾಗತ!

ನಮ್ಮ ಮೊದಲ ಪಾಠವು ಜ್ಞಾನದ ಮುಖ್ಯ ಸಂಗತಿಯಾದ "ದೇವರ ಭಯ"ವಾಗಿದೆ. ನಮ್ಮ ಶೈಕ್ಷಣಿಕ ವಿಧಾನವು ಜ್ಞಾನೋಕ್ತಿಯ ಬೆಳಕಿನಡಿಯಲ್ಲಿ ನಮ್ಮ ಸ್ವಂತ ಜೀವನವನ್ನು ಅಭ್ಯಾಸಿಸುವುದರ ಮೇಲೆ ಆಧಾರಿತಗೊಂಡಿದೆ. ಹಾಗಾಗಿ ಜ್ಞಾನೋಕ್ತಿಯನ್ನು ಕೇವಲ ಕಂಠಪಾಠದಿಂದ ಕಲಿಯುವುದು ಸಾಕಾಗುವುದಿಲ್ಲ. ಅಲ್ಲದೇ ಜ್ಞಾನೋಕ್ತಿಯ ಅರ್ಥವನ್ನು ಕಲಿತರೂ ಸಹ ಸಾಕಾಗಲ್ಲ. ಜ್ಞಾನೋಕ್ತಿಯು ನಮ್ಮ ಜೀವಿತವನ್ನು ಬದಲಾಯಿಸಲು ನಾವು ಅನುವು ಮಾಡಿಕೊಡಬೇಕು.

ನಮ್ಮ ಮೊದಲ ಜ್ಞಾನೋಕ್ತಿಯನ್ನು ನಮ್ಮ ಉಳಿದ ಎಲ್ಲಾ ಅಧ್ಯಯನಗಳಿಗೆ ಧ್ಯೇಯವನ್ನಾಗಿ ಕಾಣಬಹುದು.

ಯೆಹೋವನ ಭಯವೇ ತಿಳುವಳಿಕೆಗೆ ಮೂಲವು,

ಮೂರ್ಖರಾದರೋ ಜ್ಞಾನವನ್ನೂ ಶಿಕ್ಷೆಯನ್ನೂ ಅಸಡ್ಡೆಮಾಡುವರು.

(ಜ್ಞಾನೋಕ್ತಿ 1:7)

ಸೂಚನೆಗಳು

- ವಿಭಿನ್ನವಾದ ಸತ್ಯವೇದ ಭಾಷಾಂತರಗಳು "ಜ್ಞಾನ" ಮತ್ತು "ತಿಳುವಳಿಕೆಗೆ" ಬಗೆಬಗೆಯ ಶಬ್ದಗಳನ್ನು ಉಪಯೋಗಿಸಿವೆ. ಕನ್ನಡದ ಮೂರು ಭಾಷಾಂತರಗಳಲ್ಲಿ ಜ್ಞಾನ (**ಎನ್‌ಐಬಿವಿ** ಮತ್ತು **ಪವಿತ್ರ ಬೈಬಲ್**) ಮತ್ತು ತಿಳುವಳಿಕೆ/ಜ್ಞಾನ (**ಜೆವಿ**) ಎಂದಿವೆ.
- "ಶಿಸ್ತಿಗೆ" ಇತರ ಇಂಗ್ಲೀಷ್ ಭಾಷಾಂತರದಲ್ಲಿ "ಉಪದೇಶ" ಎಂದಿದೆ.

ಈ ಜ್ಞಾನೋಕ್ತಿ ದ್ವಿಪದಿ ಪದ್ಯದಲ್ಲಿ (ಎರಡು ಸಾಲುಗಳ ಪದ್ಯ) ನಾವು ಅನೇಕ ಮುಖ್ಯ ಸಂಗತಿಗಳನ್ನು ಕಾಣುತ್ತೇವೆ. ಎರಡು ಸಾಲುಗಳು ಪರಸ್ಪರ ಹೇಗೆ ವ್ಯವಹರಿಸುತ್ತವೆ?

ವಿದ್ಯಾರ್ಥಿಗಳು ಉತ್ತರಿಸುವುದು

ಅವರು ತದ್ವಿರುದ್ಧರಾಗಿರುವರು.

ಪಂಡಿತ

ಈ ದ್ವಿಪದಿಯಲ್ಲಿ ವಿರೋದಾತ್ಮಕ ಸಮಾನಾಂತರತೆಗೆ ಒಂದು ಉದಾಹರಣೆಯನ್ನು ನಾವು ಕಾಣುತ್ತೇವೆ. ಎರಡನೇಯ ಸಾಲಿನಲ್ಲಿ "ಮೂರ್ಖ"ರನ್ನು ನಾವು ಕಾಣುತ್ತೇವೆ. ಮೊದಲ ಸಾಲಿನಲ್ಲಿ ಅವರಿಗೆ ತದ್ವಿರುದ್ಧವಾಗಿರುವವರು ಯಾರು?

ವಿಧ್ಯಾರ್ಥಿಗಳು ಉತ್ತರಿಸುವುದು

ದೇವರಿಗೆ ಭಯಪಡುವ ಜನರು.

ಪಂಡಿತ

ಈ ತದ್ವಿರುದ್ಧತೆಯಿಂದ ನಾವು ಏನನ್ನು ಕಲಿಯುತ್ತೇವೆ?

ವಿದ್ಯಾರ್ಥಿಗಳು ಉತ್ತರಿಸುವುದು

ದೇವರಿಗೆ ಭಯಪಡುವ ಜನರು ಮೂರ್ಖರಲ್ಲ ಎಂಬುದನ್ನು ನಾವು ಕಲಿಯುತ್ತೇವೆ.

ಪಂಡಿತ

ಮೂರ್ಖರು ಏನನ್ನು ತಿರಸ್ಕರಿಸುವರು?

ವಿದ್ಯಾರ್ಥಿಗಳು ಉತ್ತರಿಸುವುದು

ಮೂರ್ಖರು ಜ್ಞಾನ/ತಿಳುವಳಿಕೆ ಮತ್ತು ಶಿಸ್ತು/ಸಲಹೆಯನ್ನು ತಿರಸ್ಕರಿಸುವರು.

ಪಂಡಿತ

ಹಾಗಾದರೆ ದೇವರಿಗೆ ಭಯಪಡುವವರ ಬಗ್ಗೆ ಇದು ಏನನ್ನು ಹೇಳುತ್ತದೆ?

ವಿದ್ಯಾರ್ಥಿಗಳು ಉತ್ತರಿಸುವುದು

ದೇವರಿಗೆ ಭಯಪಡುವವರು ಜ್ಞಾನ/ತಿಳುವಳಿಕೆ ಮತ್ತು ಶಿಸ್ತು/ಸಲಹೆಯನ್ನು ಪ್ರಕಾಶಿಸುವರು.

ಪಂಡಿತ

ಮುಂದಿನ ಪಾಠಗಳಲ್ಲಿ ನಾವು ತಿರುಗಿ ಈ ಎರಡು ವಿಷಯಗಳಿಗೆ (ಜ್ಞಾನ/ತಿಳುವಳಿಕೆ ಮತ್ತು ಶಿಸ್ತು/ಸಲಹೆ) ಬರೋಣ, ಮೊದಲ ಸಾಲಿನಲ್ಲಿ ದೇವರ ಭಯ ಮತ್ತು ಜ್ಞಾನ/ತಿಳುವಳಿಕೆಯ ನಡುವಿನ ಸಂಬಂಧವನ್ನು ನಾವು ಹೇಗೆ ಅರ್ಥೈಸಿಕೊಳ್ಳಬೇಕು?

ವಿದ್ಯಾರ್ಥಿಗಳು ಉತ್ತರಿಸುವುದು

ನಾವು ದೇವರಿಗೆ ಭಯಪಡದೆ ನಿಜವಾದ ಜ್ಞಾನ/ತಿಳುವಳಿಕೆಯನ್ನು ಹೊಂದಲು ಸಾಧ್ಯವಿಲ್ಲ. ದೇವರ ಭಯವು ತಿಳುವಳಿಕೆಗೆ ಮೂಲ, ಮತ್ತು ಬುನಾದಿ ಆಗಿದೆ.

ಪಂಡಿತ

ನಮ್ಮ ಮನುಷ್ಯನ ಅನುಭವದಲ್ಲಿ "ಭಯವು" ಒಂದು ರೀತಿಯ ನಕಾರಾತ್ಮಕ ಭಾವನೆಯಾಗಿದೆ. ನಾವು ಭಯಪಡುವ ಕೆಲವು ಸಂಗತಿಗಳಿಗೆ ಉದಾಹರಣೆಯನ್ನು ಕೊಡುವಿರಾ?

ವಿದ್ಯಾರ್ಥಿಗಳು ಉತ್ತರಿಸುವುದು

ಜನರು ಕಾಡುಪ್ರಾಣಿಗಳಿಗೆ ಭಯಪಡುವರು, ಭಯಾನಕ ರೋಗಗಳಿಗೆ ಭಯಪಡುವರು, ಬಡತನಕ್ಕೆ ಭಯಪಡುವರು ಮತ್ತು ಜನರು ಸಾವಿಗೆ ಭಯಪಡುವರು.

ಪಂಡಿತ

ಹಾಗಾದರೆ "ದೇವರಿಗೆ ಭಯಪಡುವುದರ ಬಗ್ಗೆ" ಏನೆಂದು ಸಾರಾಂಶ ಕೊಡಬಹುದು?

ವಿದ್ಯಾರ್ಥಿಗಳು ಉತ್ತರಿಸುವುದು

ಈ ಭಾವನೆಯಲ್ಲಿ "ಭಯ" ಎಂಬುದು ಸಾಮಾನ್ಯ ಮತ್ತು ನಕಾರಾತ್ಮಕ್ಕಿಂತಲೂ ವಿಭಿನ್ನವಾದುದ್ದಾಗಿದೆ. ಯಾಕೆಂದರೆ ಇದರ ಹಿನ್ನಲೆಯು ದೇವರಿಗೆ ಭಯಪಡುವುದು ಒಳ್ಳೇಯದು ಎಂದು ತೋರಿಸುತ್ತದೆ.

ಪಂಡಿತ

"ದೇವರ ಭಯ" ಎಂದು ಹೇಳಿಕೊಳ್ಳುವಲ್ಲಿ "ಭಯ" ಎಂಬುದರ ಅರ್ಥ ಏನಾಗಿರಬಹುದೆಂದು ನೀವು ಯೋಚಿಸುವಿರಿ?

ವಿದ್ಯಾರ್ಥಿಗಳು ಉತ್ತರಿಸುವುದು

ನಾನು ಎಣಿಸುತ್ತೇನೆ "ದೇವರಿಗೆ ಭಯಪಡುವುದು" ಎಂಬುದು ದೇವರನ್ನು ಗೌರವಿಸುವುದು ಎಂದು ಅರ್ಥವಾಗುತ್ತದೆ.

ಪಂಡಿತ

ಒಳ್ಳೇದು, ನೀವು ಹೇಳುವುದು ಸ್ವಲ್ಪಸರಿ. ದೇವರಿಗೆ ಭಯಪಡುವ ವ್ಯಕ್ತಿಯು ದೇವರು ಯಾರಾಗಿದ್ದಾನೆಂಬುದನ್ನು ಅರಿತುಕೊಳ್ಳುವವನಾಗಿದ್ದಾನೆ. ಆತನು ಯೆಹೋವನು, ಒಡಂಬಡಿಕೆಯ ದೇವರು ಎಂದು ತಿಳಿದುಕೊಳ್ಳುವವನಾಗಿದ್ದಾನೆ. ಹಾಗಾಗಿ ಆತನಿಗೆ ಭಯಪಡುವುದೆಂದರೆ ಆತನನ್ನು ಗೌರವಿಸುವುದು ಮತ್ತು ಸನ್ಮಾನಿಸುವುದಾಗಿದೆ ಮತ್ತು ಜೀವಿತವನ್ನು ಆತನ ಚಿತ್ತಕ್ಕನುಸಾರವಾಗಿ ಜೀವಿಸುವುದಾಗಿದೆ.

ಈಗ ನಾವು ಈ ತಿಳುವಳಿಕೆ/ಜ್ಞಾನವನ್ನು ವೈಯಕ್ತಿಕಗೊಳಿಸಬೇಕು. ನಾವು ನಮ್ಮನ್ನೇ ಈ ರೀತಿ ಪ್ರಶ್ನಿಸಿಕೊಳ್ಳಬೇಕು: ಈ ಜ್ಞಾನೋಕ್ತಿಯ ಬೆಳಕಿನಲ್ಲಿ ನಾನು ಎಲ್ಲಿ ನಿಂತಿದ್ದೇನೆ? ನಾನೊಬ್ಬ ಮೂರ್ಖನಾ ಅಥವಾ ಅಲ್ಲವಾ? ನಾನು ಮೂರ್ಖನಲ್ಲ ಎಂದು ಹೇಗೆ ತಿಳುಕೊಳ್ಳವುದು? ಮೂರ್ಖನಾಗಿರುವವನು ದೇವರಿಗೆ ಭಯಪಡುವ ವ್ಯಕ್ತಿಯಾಗಿ ಮಾರ್ಪಡಲು ನಾನು ಯಾವ ಬದಲಾವಣೆಯನ್ನು ಮಾಡಿಕೊಳ್ಳಬೇಕು?

ಈ ಪಾಠವನ್ನು ಮುಗಿಸುವುದಕ್ಕಿಂತ ಮುಂಚೆ, ಇನ್ನೊಂದು ಜ್ಞಾನೋಕ್ತಿಯನ್ನು ನೋಡಲು ನಾನು ಬಯಸುತ್ತೇನೆ. ಈಗಷ್ಟೇ ನಾನು ಕಲಿತ ಜ್ಞಾನೋಕ್ತಿಗೆ ಇದು ಸಮಾನವಾದುದ್ದಾಗಿದೆ.

ಯೆಹೋವನ ಭಯವೇ ಜ್ಞಾನಕ್ಕೆ ಮೂಲವು,

ಪರಿಶುದ್ಧನ ತಿಳುವಳಿಕೆಯೇ ವಿವೇಕವು.

(ಜ್ಞಾನೋಕ್ತಿ 9:10)

ಎರಡು ಸಾಲುಗಳು ಪರಸ್ಪರ ಹೇಗೆ ಸಂಬಂಧಿಸುತ್ತವೆ?

ವಿದ್ಯಾರ್ಥಿ ಉತ್ತರಿಸುವುದು

ಅವು ಹೆಚ್ಚು ಕಡಿಮೆ ಅದೇ ಅರ್ಥವನ್ನು ಕೊಡುತ್ತವೆ.

ಪಂಡಿತ

ಹೌದು, ಇಲ್ಲಿ ಮಮಗೆ ಸಮಾನಾಂತರತೆಯ ಉದಾಹರಣೆಯಿದೆ. ಖಂಡಿತವಾಗಿ ಈ ಜ್ಞಾನೋಕ್ತಿಯು "ದೇವರ ಭಯ" ಎಂದರೆ ಏನು ಎಂಬುದರ ಕೆಲವು ಹೆಚ್ಚುವರಿ ಅರ್ಥವನ್ನು ಕೊಡುತ್ತದೆ. ಹಾಗಾದರೆ ಅದು ಏನು?

ವಿದ್ಯಾರ್ಥಿ ಉತ್ತರಿಸುವುದು

"ದೇವರಿಗೆ ಭಯಪಡುವುದು" ಎಂದರೆ "ಪರಿಶುದ್ಧನ ತಿಳುವಳಿಕೆ", ದೇವರು ಯಾರಾಗಿದ್ದಾನೆ ಎಂಬುದನ್ನು ತಿಳುಕೊಳ್ಳುವುದು ಎಂಬ ಸಂಗತಿಯನ್ನು ನಾವು ಕಾಣಬಹುದು.

ಪಂಡಿತ

ಒಳ್ಳೇದು! ಈ ಜ್ಞಾನೋಕ್ತಿಯಿಂದ ನಾವು ನಮಗೆ ಈ ರೀತಿ ಪ್ರಶ್ನೆ ಕೇಳಿಕೊಳ್ಳಬೇಕೆಂಬುದನ್ನು ಅರಿತುಕೊಳ್ಳಬೇಕು. ನಾವು ನಿಜವಾಗಿ ನಮ್ಮ ಕರ್ತನನ್ನು ಒಡಂಬಡಿಕೆಯ ದೇವರನ್ನು ತಿಳುದುಕೊಂಡಿದ್ದೇವಾ? ಮತ್ತು ನಾವು ನಿಜವಾಗಿಯೂ ನಮ್ಮೊಂದಿಗಿನ ದೇವರ ಒಡಂಬಡಿಕೆಯ ಸಂಬಂಧಕ್ಕನುಸಾರವಾಗಿ ಜೀವಿಸಬೇಕು. ಎರಡು ಅರ್ಥ ಕೊಡುವ ಜ್ಞಾನದಲ್ಲಿ ಜೀವಿಸುತ್ತಿದ್ದೇವಾ?

ಈ ಪ್ರಶ್ನೆಗಳಿಗೆ ತಿರುಗಿ ಮುಂದಿನ ಪಾಠಗಳಲ್ಲಿ ಬರೋಣ. ಧನ್ಯವಾದ ಮತ್ತು ಶುಭವಂದನೆ.

"ಯೆಹೋವನ ಭಯ"

ಮೇಲಿನ ಭಾಗದಲ್ಲಿ ನಾವು "ಯೆಹೋವನ ಭಯ" ಎಂಬ ಪದವನ್ನು ಹೊಂದಿರುವ ಎರಡು ಜ್ಞಾನೋಕ್ತಿಗಳನ್ನು ಗಮನಿಸಿದೆವು.

ಯೆಹೋವನ ಭಯವೇ ತಿಳುವಳಿಕೆಗೆ ಮೂಲವು,

ಮೂರ್ಖರಾದರೋ ಜ್ಞಾನವನ್ನೂ ಶಿಕ್ಷೆಯನ್ನೂ ಅಸಡ್ಡೆ ಮಾಡುವರು.

(ಜ್ಞಾನೋ. 1:7)

ಯೆಹೋವನ ಭಯವೇ ಜ್ಞಾನಕ್ಕೆ ಮೂಲವು,

ಪರಿಶುದ್ಧನ ತಿಳುವಳಿಕೆಯೇ ವಿವೇಕವು

(ಜ್ಞಾನೋ. 9:10)

ಇಬ್ರಿಯ ಜ್ಞಾನವು "ಯೆಹೋವನ ಭಯ" ಎಲ್ಲಾ ನಿಜವಾದ ಜ್ಞಾನದ ಮೂಲವಾಗಿರುವುದನ್ನು ಅರ್ಥಮಾಡಿಕೊಳ್ಳುವುದರಿಂದ ಆರಂಭವಾಗುತ್ತದೆ. ನಾವು ದೇವರನ್ನು ನಮ್ಮ ಒಡಂಬಡಿಕೆಯ ದೇವರನ್ನು ತಿಳಿಯದೇ ಹೋದರೆ ಮತ್ತು ಆತನಿಗೆ ಗೌರವ ನೀಡಲು, ಅತನು ಏನು ಹೇಳುತ್ತಾನೋ ಅದಕ್ಕೆ ವಿಧೇಯರಾಗದೆ ಹೋದರೆ, ನಾವು ನಿಜವಾಧ ಜ್ಞಾನವನ್ನು ಹೊಂದಲು ಸಾಧ್ಯವಿಲ್ಲ. ಆದ್ದರಿಂದ ಜ್ಞಾನದ ಅಡಿಸ್ಥಾನ ದೇವರನ್ನು ತಿಳಿಯುವುದು ಮತ್ತು ಆತನಿಗೆ ಸಂಪೂರ್ಣವಾಗಿ ನಮ್ಮ ಜೀವಿತವನ್ನು ಅರ್ಪಿಸುವುದಾಗಿದೆ. ಇಲ್ಲಿ ಗಮನಿಸಬೇಕಾದದ್ದು ಏನೆಂದರೆ, "ಯೆಹೋವನ ಭಯ" ಎಂಬಲ್ಲಿ "ಭಯ" ಎಂಬ ಪದವು ಮೊದಲನೇಯದಾಗಿ ದೇವರ ಬಗ್ಗೆ ಹೆದರಿಕೆಯನ್ನು ಸೂಚಿಸುವುದಿಲ್ಲ. ಬದಲಾಗಿ, ಅದು ದೇವರಿಗೆ ಗೌರವ, ಆತನಿಗೆ ವಿಧೇಯತೆ, ಆತನ ಮೇಲೆ ಭರವಸೆ ಇಡುವುದು ಮತ್ತು ಆತನನ್ನು ಗೌರವಿಸುವ ಮನೋಭಾವವನ್ನು ಸೂಚಿಸುತ್ತದೆ.

ಯೆಹೋವನು ಆನಂದಿಸುವದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ.

(ಕೀರ್ತನೆ 147:11)

ಒಡಂಬಡಿಕೆಯ ದೇವರು ತನ್ನ ಜನರೊಂದಿಗೆ ನಿರಂತರ ಪ್ರೀತಿಯ ಮೂಲಕ ಮತ್ತು ನಂಬಿಗಸ್ತಿಕೆಯ ಮೂಲಕ ಸಂಬಂಧವನ್ನು ಹೊಂದಿದ್ದಾನೆ. ಜ್ಞಾನಿಗಳು ದೇವರನ್ನು ತನ್ನ ಜನರನ್ನು ದಾಸತ್ವದಿಂದ ರಕ್ಷಿಸಿದವನು ಎಂಬ ರೀತಿಯಲ್ಲಿ ತಿಳಿದಿದ್ದಾರೆ ಮತ್ತು ಅವರನ್ನು ತನ್ನ ಸ್ವಂತವಾಗಿ ಮಾಡಿಕೊಂಡಿದ್ದಾನೆ ಎಂಬಂತೆ ಅರಿತುಕೊಳ್ಳುತ್ತಾರೆ. ಆದ್ದರಿಂದ, "ಯೆಹೋವನ ಭಯ" ಎಂಬುದು ದೇವರ ನಿರಂತರ ಪ್ರೀತಿ ಮತ್ತು ನಂಬಿಗಸ್ತಿಕೆಯ ಪ್ರತಿಯಾಗಿ ಹೊಂದಬೇಕಾದ ಮತ್ತು ಶ್ರೇಷ್ಠವಾದ ಪ್ರತಿಕ್ರಿಯೆಯಾಗಿರುತ್ತದೆ.

ಯೋಬನು

"ಯೆಹೋವನ ಭಯ" ಎಂಬ ವಿಷಯದ ಕುರಿತು ಯೋಬನ ಗ್ರಂಥದಲ್ಲಿ ಈಗಾಗಲೇ ನಾವು ಕಂಡಿದ್ದೇವೆ. "ಆಗ ಯೆಹೋವನು – ನನ್ನ ದಾಸನಾದ ಯೋಬನ ಮೇಲೆ ಗಮನವಿಟ್ಟಿಯಾ? ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದ್ದನ್ನು ನಿರಾಕರಿಸುತ್ತಾ ನಿರ್ದೋಷಿಯೂ ಯಥಾರ್ಥಚಿತ್ತನೂ ಆಗಿದ್ದಾನೆ. ಅವನಿಗೆ ಸಮಾನನು ಭೂಲೋಕದಲ್ಲಿ ಎಲ್ಲಿಯೂ ಸಿಕ್ಕುವದಿಲ್ಲ ಎಂದು ಸೈತಾನನಿಗೆ ಹೇಳಿದನು" (ಯೋಬ. 1:8). ಈನಂತರ, ಯೋಬನ ಗ್ರಂಥದ ಅಧ್ಯಾಯ 28 ಸಂಪೂರ್ಣವಾಗಿ ಜ್ಞಾನಕ್ಕೆ ಮೀಸಲಾಗಿ ಬರೆದಿದೆ. ಸತ್ಯವೇದ ಜ್ಞಾನವು ಕೇವಲ "ಬುದ್ಧಿವಂತಿಕೆಯ ಜ್ಞಾನ" ಅಥವಾ "ಪುಸ್ತಕದ ತಿಳುವಳಿಕೆ" ಅಲ್ಲ. ಬದಲಾಗಿ ಅದು "ಜೀವನ ಶೈಲಿಯ ಜ್ಞಾನ" ಮತ್ತು "ಜೀವನ ಶೈಲಿಯ ತಿಳುವಳಿಕೆ" ಆಗಿದೆ. ಅಧ್ಯಾಯದ ಕೊನೆಯಲ್ಲಿ ದೇವರು ಮನುಷ್ಯನಿಗೆ ಹೇಳಿದ ಮಾತುಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು:

ಆ ಮೇಲೆ ಮನುಷ್ಯರಿಗೆ –

ಇಗೋ, ಕರ್ತನ ಭಯವೇ ಜ್ಞಾನವು

ದುಷ್ಟತನವನ್ನು ಬಿಡುವುದೇ ವಿವೇಕ.

(ಯೋಬ. 28:28)

ಯೋಬನು ತನ್ನ ಜೀವನದಲ್ಲಿ ಮಹತ್ತಾದ ಯಶಸ್ಸಿನ ಸಮಯದಲ್ಲೂ ಆಳವಾದ ದುಃಖದ ಸಮಯದಲ್ಲೂ ಬುದ್ಧಿವಂತನೆಂದು ತೋರಿಸಿದನು. ಆಪತ್ತುಗಳು ಅವನ ಜೀವನವನ್ನು ಆವರಿಸಿದಾಗ ಅವನು ತನ್ನ ಹುಟ್ಟಿದ ದಿನವನ್ನು ಶಪಿಸಬಹುದಾದರೂ ದೇವರನ್ನು ಪ್ರಶ್ನಿಸಬಹುದಾದರೂ ಅವನು ದೇವರನ್ನು ತಿರಸ್ಕರಿಸಲಿಲ್ಲ ಅಥವಾ ಅತನನ್ನು ಶಪಿಸಲಿಲ್ಲ. ಅವನು ಪಾಪಮಾಡಲಿಲ್ಲ. ಬದಲಾಗಿ, ಅವನು ದೇವರ ಭಯಭಕ್ತಿಯಲ್ಲಿ ಜೀವಿಸಿದನು ಮತ್ತು ಕೆಡುಕನ್ನು ದೂರವಿಟ್ಟನು.

ಕೀರ್ತನೆಗಳು

ಕೀರ್ತನೆಗಳ ಗ್ರಂಥವೂ ಸಹ "ಯೆಹೋವನ ಭಯ" ಮತ್ತು ಜ್ಞಾನ/ತಿಳುವಳಿಕೆ ನಡುವೆ ಇರುವ ಬಲವಾದ ಸಂಬಂಧವನ್ನು ಕಲಿಸುತ್ತದೆ:

ಯೆಹೋವನ ಭಯವೇ ಜ್ಞಾನಕ್ಕೆ ಮೂಲವು;

ಆತನ ಕಟ್ಟಳೆಗಳನ್ನು ನಡಿಸುವವರು ಪೂರ್ಣ ವಿವೇಕಿಗಳು.

(ಕೀರ್ತನೆ 111:10)

ಆದರೆ ಕೀರ್ತನೆಗಳಲ್ಲಿ ಹೆಚ್ಚು ಒತ್ತಡವು "ಯೆಹೋವನ ಭಯ"ದ ಪಲಿತಾಂಶಗಳ ಮೇಲೆ ಇರುತ್ತದೆ. "ಯೆಹೋವನ ಭಯ"ವು ಆಶೀರ್ವಾದಪೂರ್ಣವಾದ ಜೀವನಕ್ಕೆ ನಮಗೆ ದಾರಿ ತೋರಿಸುತ್ತದೆ. ಉದಾಹರಣೆಗೆ:

ಯೆಹೋವನಾದರೋ ತನ್ನಲ್ಲಿ ಭಯಭಕ್ತಿಯುಳ್ಳವರನ್ನು ಕಟಾಕ್ಷಿಸುತ್ತಾನೆ;

ತನ್ನ ಕೃಪೆಯನ್ನು ನಿರೀಕ್ಷಿಸುವವರನ್ನು ಲಕ್ಷಿಸುತ್ತಾನೆ.

ಅವರ ಪ್ರಾಣವನ್ನು ಮರಣದಿಂದ ತಪ್ಪಿಸುವನು.

(ಕೀರ್ತನೆ 33:18–19)

ಆದರೆ ಯೆಹೋವನಲ್ಲಿ ಭಯಭಕ್ತಿಯುಳ್ಳವರ ಮೇಲೆ

ಆತನ ದಯವು ಯುಗಯುಗಾಂತರಗಳವರೆಗೂ ಇರುತ್ತದೆ.

(ಕೀರ್ತನೆ 103:17)

ಹೆಚ್ಚು ಉದಾಹರಣೆಗಳಿಗಾಗಿ: ಕೀರ್ತನೆ 112, 115 ಮತ್ತು 128 ನೋಡಬಹುದು. ನಾವು ಈ ಪುಸ್ತಕದ ಮುಂದಿನ ಅಧ್ಯಾಯಗಳಲ್ಲಿ ಕೆಲವು "ಜ್ಞಾನದ ಕೀರ್ತನೆಗಳನ್ನು" ಕೂಡ ಅಧ್ಯಯನ ಮಾಡಲಿದ್ದೇವೆ.

ಜ್ಞಾನೋಕ್ತಿಗಳು

"ಯೆಹೋವನ ಭಯ" ಮತ್ತು ಅದಕ್ಕೆ ಸಂಬಂಧಿಸಿದ ಜೀವನ ಪೂರ್ಣಜ್ಞಾನ ಮತ್ತು ಪ್ರಾಯೋಗಿಕ ಅರಿವಿನ ವಿಷಯವನ್ನು ಜ್ಞಾನೋಕ್ತಿಗಳ ಪ್ರಾರಂಭದಲ್ಲಿಯೇ ಪರಿಚಯವಾಗುತ್ತದೆ, (ಜ್ಞಾನೋ. 17). ಈ ವಿಷಯವನ್ನು ಸಂಪೂರ್ಣ ಗ್ರಂಥದಲ್ಲಿ ಪುನಃ ಪುನಃ ಬಲಪಡಿಸಲಾಗಿದೆ. "ಯೆಹೋವನ ಭಯ" ಹೊಂದಿರುವ ಜೀವಿತವು ದೇವರ ಆಶೀರ್ವಾದಗಳನ್ನು ತರುತ್ತದೆ.

ಯೆಹೋವನ ಭಯ ಜೀವದ ಬುಗ್ಗೆ;

ಮೃತ್ಯುಪಾಶದಿಂದ ತಪ್ಪಿಸಿಕೊಳ್ಳಲು ಅದು ಸಾಧನ.

(ಜ್ಞಾನೋ. 14:27)

ಜೀವನದ ಸಂಪೂರ್ಣತೆ ದೇವರ ಕಣ್ಣಿನ ನಿಗಾವಡಿಯಲ್ಲಿ ನಡೆಯುತ್ತದೆ. ಅವನ ದೃಷ್ಟಿ ಎಲ್ಲಾಕಡೆ ಇದೆ. ದುಷ್ಟರನ್ನು ಮತ್ತು ನೀತಿವಂತರನ್ನು ಆತನು ನೋಡುತ್ತಾನೆ:

ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವದು;

ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು.

(ಜ್ಞಾನೋ. 15:3)

ಇದಕ್ಕಿಂತ ಹೆಚ್ಚು ಪ್ರಾಮುಖ್ಯವಾದದ್ದು: ಅದು ದೇವರ ಸ್ವಭಾವವನ್ನು (ಅತನ ಪರಿಶುದ್ಧತೆ ಮತ್ತು ನೀತಿ) ಆಧಾರವನ್ನಾಗಿ ಮಾಡಿಕೊಂಡು ತನ್ನ ಜನರ ಜೀವಿತಗಳನ್ನು ಅಳೆಯಲಾಗುತ್ತದೆ.

ದುಷ್ಟರ ಯಜ್ಞ ಯೆಹೋವನಿಗೆ ಅಸಹ್ಯ;

ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ.

ದುಷ್ಟನ ನಡತೆಯು ಯೆಹೋವನಿಗೆ ಅಸಹ್ಯ;

ಧರ್ಮಾಸಕ್ತನು ಆತನಿಗೆ ಪ್ರಿಯ.

(ಜ್ಞಾನೋ. 15:8–9)

ದೇವರು ಮಾನವನ ಚಟುವಟಿಕೆಗಳ ಮೇಲೆ ಪರಮಾಧಿಕಾರ ಹೊಂದಿದ್ದಾನೆ. ಆತನು ಮನುಷ್ಯನ ಉದ್ದೇಶಗಳನ್ನು ಅರಿತಿದ್ದಾನೆ ಮತ್ತು ತನ್ನ ಮೇಲೆ ಸಂಪೂರ್ಣವಾಗಿ ನಂಬಿಕೆ ಇಡುವವರಿಗೆ ಬಹುಮಾನ ನೀಡುತ್ತಾನೆ.

ಮನುಷ್ಯನು ತನ್ನ ಮನದಂತೆ ದಾರಿಯನ್ನಾರಿಸಿಕೊಂಡರೂ

ಯೆಹೋವನೇ ಅವನಿಗೆ ಗತಿಯನ್ನು ಏರ್ಪಡಿಸುವನು.

(ಜ್ಞಾನೋ. 16:9)

ಹೃದಯದ ಸಂಕಲ್ಪವು ಮನುಷ್ಯನ ವಶವು;

ತಕ್ಕ ಉತ್ತರಕೊಡುವ ಶಕ್ತಿಯು ಯೆಹೋವನಿಂದಾಗುವದು.

ಮನುಷ್ಯನ ನಡತೆಯೆಲ್ಲಾ ಸ್ವಂತ ದೃಷ್ಟಿಗೆ ಶುದ್ಧ;

ಯೆಹೋವನು ಅಂತರಂಗವನ್ನೇ ಪರೀಕ್ಷಿಸುವನು.

ನಿನ್ನ ಕಾರ್ಯಭಾರವನ್ನು ಯೆಹೋವನಿಗೆ ವಹಿಸಿದರೆ

ನಿನ್ನ ಉದ್ದೇಶಗಳು ಸಫಲವಾಗುವವು.

(ಜ್ಞಾನೋ. 16:1–3)

ದೇವರ ಉದ್ದೇಶವು ಸೃಷ್ಟಿಯ ಸಂಪೂರ್ಣತೆಗೆ ವ್ಯಾಪಿಸಿದೆ. ಆತನು ಅಹಂಕಾರಿಗಳನ್ನು ದಂಡಿಸುತ್ತಾನೆ. ಆದರೆ ಪ್ರೀತಿಯುಳ್ಳ ಮತ್ತು ನಂಬಿಗಸ್ತರ ಮೇಲೆ ತನ್ನ ಕೋಪವನ್ನು ತಿರಸ್ಕರಿಸುತ್ತಾನೆ ಮತ್ತು ಅವರಿಗೆ ಶಾಂತಿಯನ್ನು ನೀಡುತ್ತಾನೆ.

ಯೆಹೋವನು ಒಂದೊಂದನ್ನೂ ತಕ್ಕ ಗುರಿಯಿಂದ ಸೃಷ್ಟಿಸಿದ್ದಾನೆ,

ಹೌದು ಕೇಡಿನ ದಿನಕ್ಕಾಗಿ ಕೆಡುಕರನ್ನುಂಟುಮಾಡಿದ್ದಾನೆ.

ಅಹಂಕಾರಿಗಳೆಲ್ಲಾ ಯೆಹೋವನಿಗೆ ಅಸಹ್ಯ;

ಅವರಿಗೆ ದಂಡನೆ ಖಂಡಿತ.

ಕೃಪಾಸತ್ಯತೆಗಳಿಂದ ಪಾಪ ನಿವಾರಣೆ;

ಯೆಹೋವನ ಭಯಭಕ್ತಿಯಿಂದ ಹಾನಿ ನಿವಾರಣೆ.

ಯೆಹೋವನು ಒಬ್ಬನ ನಡತೆಗೆ ಮೆಚ್ಚಿದರೆ

ಅವನ ಶತ್ರುಗಳನ್ನೂ ಮಿತ್ರರನ್ನಾಗಿ ಮಾಡುವನು.

(ಜ್ಞಾನೋ. 16:4–7)

ಆದ್ದರಿಂದ, ನಾವು ದೇವರ ಮಾರ್ಗದರ್ಶನಕ್ಕೆ ವಿಧೇಯರಾಗುವ ನೀತಿವಂತ ಜೀವನವನ್ನು ನಡೆಸಬೇಕು. ಆತನನ್ನು ನಂಬುವವರಿಗೆ ಆಶೀರ್ವಾದ ಇರುತ್ತದೆ.

ಅನ್ಯಾಯದಿಂದ ಗಳಿಸಿದ ಬಹು ಧನಕ್ಕಿಂತಲೂ

ನ್ಯಾಯದಿಂದ ಕೂಡಿಸಿದ ಅಲ್ಪ ಧನವೇ ಲೇಸು.

(ಜ್ಞಾನೋ. 16:8)

ದೇವರ ವಾಕ್ಯವನ್ನು ಸ್ಮರಿಸುವವನು ಸುಕ್ಷೇಮವನ್ನು ಪಡೆಯುವನು;

ಯೆಹೋವನಲ್ಲಿ ಭರವಸವಿಡುವವನು ಭಾಗ್ಯವಂತನು.

(ಜ್ಞಾನೋ. 16:20)

ಮನುಷ್ಯನ ಜೀವನದ ಅಂತಿಮ ತೀರ್ಮಾನವು ಅವನ ಕೈಯಲ್ಲಿದೆ. ಆತನು ಹೃದಯವನ್ನು ಶೋಧಿಸುತ್ತಾನೆ, ಮತ್ತು ಆತನ ಉದ್ದೇಶಗಳೇ ನಡೆಯುತ್ತವೆ. ಹಾಗೂ ಮನುಷ್ಯನ ಎಲ್ಲಾ ಹೆಜ್ಜೆಗಳು ಆತನಿಂದ ನಡೆಸಲ್ಪಟ್ಟಿವೆ.

ಉಡಿಯಲ್ಲಿ ಚೀಟು ಹಾಕಬಹುದು;

ಅದರ ತೀರ್ಮ ಯೆಹೋವನದೇ.

(ಜ್ಞಾನೋ. 16:33)

ಮನುಷ್ಯನ ಮನಸ್ಸಿನಲ್ಲಿ ಅನೇಕ ಸಂಕಲ್ಪಗಳಿವೆ;

ಯೆಹೋವನ ಸಂಕಲ್ಪವೇ ಈಡೇರುವದು.

(ಜ್ಞಾನೋ. 19:21)

ನರನ ನಡತೆಯು ಸ್ವಂತ ದೃಷ್ಟಿಗೆ ನೆಟ್ಟಗೆ;

ಯೆಹೋವನು ಹೃದಯಗಳನ್ನೇ ಪರೀಕ್ಷಿಸುವನು.

(ಜ್ಞಾನೋ. 21:2)

ಮನುಷ್ಯ ಆತ್ಮವು ಯೆಹೋವನ ದೀಪವಾಗಿದೆ;

ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ.

(ಜ್ಞಾನೋ. 20:27)

ಮನುಷ್ಯನಿಗೆ ಗತಿಯನ್ನು ಏರ್ಪಡಿಸುವವನು ಯೆಹೋವನೇ ಆಗಿರುವಲ್ಲಿ

ಮನುಷ್ಯನು ತನ್ನ ಮಾರ್ಗವನ್ನು ಹೇಗೆ ತಿಳಿದುಕೊಂಡಾನು?

(ಜ್ಞಾನೋ. 20:24)

ಯೆಹೋವನ ವಿರುದ್ಧ ಗೆಲವು ಸಾಧ್ಯವಿಲ್ಲ. ನಾವು ಯುದ್ಧಕ್ಕೆ ಸಿದ್ಧರಾಗಬಹುದು. ಆದರೆ ಜಯ ಮಾತ್ರ ದೇವರಿಂದಲೇ.

ಯಾವ ಜ್ಞಾನವೂ ಯಾವ ವಿವೇಕವೂ ಯಾವ ಆಲೋಚನೆಯೂ

ಯೆಹೋವನೆದುರಿಗೆ ನಿಲ್ಲುವುದಿಲ್ಲ.

ಅಶ್ವಬಲವು ಯುದ್ಧದಿನಕ್ಕಾಗಿ ಸನ್ನದ್ಧವಾಗಿದ್ದರೂ

ಜಯವು ಯೆಹೋವನಿಂದಲೇ.

(ಜ್ಞಾನೋ. 21:30–31)

ಇದಕ್ಕಿಂತ ಆಶ್ಚರ್ಯವಿಲ್ಲ – ಇಬ್ರಿಯ ಜ್ಞಾನವು ದೇವರ ದೃಷ್ಟಿಯಲ್ಲಿ ನ್ಯಾಯ ಮತ್ತು ಸರಿಯಾದದ್ದನ್ನು ಅತ್ಯಂತ ಮೌಲ್ಯಯುತವೆಂದು ಪರಿಗಣಿಸುತ್ತದೆ.

ಗುಪ್ತ ಬಹುಮಾನವು ಕೋಪವನ್ನಾರಿಸುವದು;

ಮಡಲಲ್ಲಿಟ್ಟ ಲಂಚವು ಬಲು ಸಿಟ್ಟನ್ನಣಗಿಸುವದು.

(ಜ್ಞಾನೋ. 21:14)

ಇಬ್ರಿಯ ಜ್ಞಾನವು ಮಾನವ ಜೀವಿತದ ಎಲ್ಲಾ ಅಂಶಗಳನ್ನೂ ಈ ನಿಜವೊಂದರ ಬೆಳಕಿನಲ್ಲಿ ವೀಕ್ಷಿಸುತ್ತದೆ: **"ನಾನು ಯೆಹೋವನು, ನಿನ್ನ ದೇವರು"** (ಯಾಜಕ. 19:2, 3, 4, 10, 25, 31, 34, 36). ದೇವರು ಯಾರಾಗಿದ್ದಾನೆ ಎಂಬ

ಆಧಾರದ ಮೇಲೆ – ಪರಿಶುದ್ಧತೆ, ನೀತಿ ಮತ್ತು ನಂಬಿಗಸ್ತಿಕೆಯ ದೇವರು – ಅವನ ಪ್ರಜೆಗಳು ಹೇಗೆ ಬದುಕಬೇಕೆಂಬುದನ್ನು ತಿಳಿದುಕೊಳ್ಳುತ್ತಾರೆ: ಆತನ ಆಶೀರ್ವಾದವನ್ನು ಅನುಭವಿಸಲು, ರಕ್ಷಣೆ ಪಡೆಯಲು ಮತ್ತು ಆತನ ಕಾಳಜಿಯಿಂದ ಲಾಭ ಪಡೆಯಲು. ಅವರು ದೇವರ ಸನ್ನಿಧಿಯಲ್ಲಿ ಜೀವಿಸಲು ದಾರಿಹಾಯುವ ಮಾರ್ಗವನ್ನೇ ಹಿಡಿಯುತ್ತಾರೆ: **"**ಇಸ್ರಾಯೇಲ್ ಜನಾಂಗದ ಎಲ್ಲಾ ಸಭೆಯೊಂದಿಗೆ ನುಡಿಯಿರಿ: ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು**"** (ಯಾಜಕ. 19:2, ಹೋಲಿಸಿ 20:7). ಹಳೇ ಒಡಂಬಡಿಕೆಯ ಉದ್ದಕ್ಕೂ ದೇವರಜನರು ಅವರಂತೆ ಜೀವಿಸಬೇಕೆಂಬ ಕರೆಯಿದೆ. ಇಬ್ರಿಯ ಜ್ಞಾನ ಸಾಹಿತ್ಯವು ನೈತಿಕತೆ ಮತ್ತು ನೀತಿಯ ಈ ಪರಂಪರೆಯ ಮುಖ್ಯಭಾಗವಾಗಿದೆ.

ಪ್ರಸಂಗಿ

ಮಾನವ ಜೀವನ ಮತ್ತು ಅನುಭವಗಳ ಸಂಪೂರ್ಣ ಪರಿಶೀಲನೆಯ ನಂತರ, ಪ್ರಸಂಗಿ ಗ್ರಂಥ ತನ್ನ ಅಂತಿಮ ಉಪಸಂಹಾರವನ್ನು ಈ ರೀತಿ ನೀಡುತ್ತದೆ:

> *ವಿಷಯವು ತೀರಿತು; ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು; ಮನುಷ್ಯರೆಲ್ಲರ ಕರ್ತವ್ಯವು ಇದೇ.*
>
> *ಒಳ್ಳೇದಾಗಲಿ ಕೆಟ್ಟದ್ದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು.*
>
> (ಪ್ರಸಂಗಿ. 12:13–14)

ಈ ಉಪಸಂಹಾರವು ಜ್ಞಾನೋಕ್ತಿಗಳ ಗ್ರಂಥದಲ್ಲಿ ಕಂಡುಬರುವ ಧಾರ್ಮಿಕ ಮತ್ತು ನೈತಿಕ ನೀತಿಶಾಸ್ತ್ರದ ದೃಷ್ಟಿಕೋನವನ್ನು ಪ್ರತಿಧ್ವನಿಸುತ್ತದೆ. ಇದು ನಾವು ಈವರೆಗೆ ಅಧ್ಯಯನ ಮಾಡಿದ ಹಳೇ ಒಡಂಬಡಿಕೆಯ ಜ್ಞಾನ ಸಾಹಿತ್ಯಗಳಾದ ಯೋಬ, ಕೀರ್ತನೆಗಳು ಮತ್ತು ಜ್ಞಾನೋಕ್ತಿಗಳು ಈ ಮೂರು ಪುಸ್ತಕಗಳಲ್ಲಿ ಕಂಡ ನಿಲುವಿಗೆ ನೇರವಾಗಿ ಹೊಂದಿಕೆಯಾಗುತ್ತದೆ.

ಇಬ್ರಿಯ ಜ್ಞಾನದ ಪ್ರಸ್ತಾವನೆ

ಪೀಠಿಕೆ

ಹಳೇ ಒಡಂಬಡಿಕೆಯ ಸಮಯದಲ್ಲಿ ದೇವರು ತನ್ನ ಜನರೊಡನೆ ಮಾಡಿದ ಒಡಂಬಡಿಕೆಯಲ್ಲಿ ಇಬ್ರಿಯ ಜ್ಞಾನವನ್ನು ಅರ್ಥಮಾಡಿಕೊಳ್ಳುವದು ಅಗತ್ಯ. ಈ ಅಧ್ಯಯನದಲ್ಲಿ ಮುಂದೆ ಇರುವ ಚಾರ್ಟ್ ಮತ್ತು ಪ್ರಶ್ನೆಗಳ ಸಹಾಯದಿಂದ ನಾವು ಇಬ್ರಿಯ ಜ್ಞಾನದ ಆ ಅಂಶವನ್ನು ಹೆಚ್ಚು ಆಳವಾಗಿ ಅನ್ವೇಷಿಸುತ್ತೇವೆ.

ಈ ಪುಸ್ತಕದಲ್ಲಿ "ಜ್ಞಾನದ ಮೌಲ್ಯಗಳು" ಎಂಬ ಹೆಸರಿನ ವಿಭಾಗದಲ್ಲಿ ನಾವು ಇಬ್ರಿಯ ಜ್ಞಾನದ "ಪ್ರಾಯೋಗಿಕ ಆಯಾಮ" ವನ್ನು ಅಧ್ಯಯನ ಮಾಡುತ್ತೇವೆ.

ಕೆಳಗಿನ ಪುಟದಲ್ಲಿರುವ ಚಾರ್ಟ್ ನೋಡಿ ಮತ್ತು ಈ ಪ್ರಶ್ನೆಗಳಿಗೆ ಉತ್ತರಿಸಿರಿ

1. ಕರ್ತನ ಜನರೊಂದಿಗಿನ ಆತನ ಒಂಡಂಬಡಿಕೆಯ ಸಂಬಂಧದ ಪ್ರಮುಖ ಎರಡು ಹೇಳಿಕೆಗಳು ಯಾವುವು? (ಉತ್ತರ 1)
2. ಒಡಂಬಡಿಕೆಯಲ್ಲಿ ಕರ್ತನ ಜನರು ಆತನೊಂದಿಗೆ ಹೇಗೆ ಸಂಬಂಧ ಹೊಂದಿರಬೇಕು ಎಂಬುದರ ಪ್ರಮುಖ ಅಂಶವನ್ನು ಯಾವ ಹೇಳಿಕೆ ವಿವರಿಸುತ್ತದೆ. ಅವು ಯಾವುವು? (ಉತ್ತರ 2)
3. ಕರ್ತನ ಜನರ ಜೀವನವನ್ನು ಯಾವ ಹೇಳಿಕೆ ವಿವರಿಸುತ್ತದೆ? (ಉತ್ತರ 3)
4. "ಜ್ಞಾನ ಮಾರ್ಗ"ದ ಎರಡು "ನಿರ್ದೇಶನಗಳು" (ಅಥವಾ "ಆಯಾಮಗಳು") ಯಾವುವು? (ಉತ್ತರ 4)
5. ಕರ್ತನ ಜನರು ದೇವರ ಸೃಷ್ಟಿಗೆ ಹೇಗೆ ಸಂಬಂಧಿಸಬೇಕು? (ಉತ್ತರ 5)
6. ಈ ಕೋರ್ಸ್‌ನಲ್ಲಿ ನಂತರ (ಜ್ಞಾನೋಕ್ತಿಗಳ ಪುಸ್ತಕದ ಅಧ್ಯಯನದ ಭಾಗವಾಗಿ), ನಾವು ಮಾನವ ಜೀವನದ ಐದು ಪ್ರಮುಖ ಕ್ಷೇತ್ರಗಳನ್ನು ನೋಡುತ್ತೇವೆ. ಅವು ಯಾವುವು? (ಉತ್ತರ 6)
7. ಮಾನವ ಜೀವನದ ಈ ಐದು ಕ್ಷೇತ್ರಗಳನ್ನು "ಜ್ಞಾನದ ಮಾರ್ಗದ ಪ್ರಾಯೋಗಿಕ ಆಯಾಮ" ಎಂದು ಏಕೆ ಕರೆಯಬಹುದು ಎಂಬುದನ್ನು ವಿವರಿಸಿ? (ಉತ್ತರ 7)
8. ಮಾನವ ಜೀವನದ ಈ ಐದು ಕ್ಷೇತ್ರಗಳಲ್ಲಿ ಕರ್ತನ ಜನರ ಜೀವನವನ್ನು ಎನು ನಿರೂಪಿಸಬೇಕು? (ಉತ್ತರ 8)
9. ಚಿತ್ರದ ಮಧ್ಯದಲ್ಲಿ ನಾವು ಏನು ಕಾಣುತ್ತೇವೆ? ಇದು ಏಕೆ ಸೂಕ್ತವಾಗಿದೆ? (ಉತ್ತರ 9)
10. ದೇವರ ಜನರು ಆತನ ಸೃಷ್ಟಿಯಾದ ಪ್ರಪಂಚಕ್ಕೆ ಪ್ರೀತಿ, ನ್ಯಾಯ ಮತ್ತು ಸಮಗ್ರತೆಯಿಂದ ಏಕೆ ಸಂಬಂಧಿಸಬೆಕು? (ಉತ್ತರ 10)
11. ಈ ರೀತಿಯ ಚಾರ್ಟ್ ಅನ್ನು ಮಾಡಿ ಮತ್ತು ನೀವು ಅದನ್ನು ಚಿತ್ರಿಸುವಾಗ ನಿಮ್ಮ ಸಹಪಾಠಿಗಳಿಗೆ ವಿವರಿಸಿ. ಅದು ಸಂಪೂರ್ಣವಾಗಿ ಅಗತ್ಯವಿಲ್ಲದಿದ್ದರೆ ನಿಮ್ಮ ಟಿಪ್ಪಣಿಗಳನ್ನು (ಅಥವಾ ಚಾರ್ಟ್ ಅನ್ನು) ಉಲ್ಲೇಖಿಸಬೇಡಿ.

ಅಸೈನ್‌ಮೆಂಟ್

ಒಂದು ಅಥವಾ ಹೆಚ್ಚಿನ ಕಾರ್ಯಗಳನ್ನು ಮಾಡುವ ಅವಕಾಶ ಇದ್ದರೆ ದಯವಿಟ್ಟು ಪ್ರಯತ್ನಿಸಿ. ನಿಮ್ಮ ಸಹಪಾಠಿಗಳಿಗೆ ಅಥವಾ ಕಾಲೇಜಿನಲ್ಲಿ ನಿಮ್ಮ ಸ್ನೇಹಿತ ವಿದ್ಯಾರ್ಥಿಗಳಿಗೆ ಈ ಕೆಲಸವನ್ನು ಪ್ರಸ್ತುತಪಡಿಸುವ ಅವಕಾಶವನ್ನು ಹಂಚಿಕೊಳ್ಳಿ.

1. ಜ್ಞಾನೋ. 1:7 ಆಧಾರದ ಮೇಲೆ ಒಂದು ಧ್ಯಾನವನ್ನು ಬರೆಯಿರಿ.
2. "ಜ್ಞಾನಮಾರ್ಗ" ಎಂಬ ಶೀರ್ಷಿಕೆಯಿಂದ ಒಂದು ಸಂಕ್ಷಿಪ್ತ ಪ್ರಬಂಧ ಬರೆಯಿರಿ.
3. "ಜ್ಞಾನಮಾರ್ಗ" ವಿಷಯದ ಮೇಲೆ ಒಂದು ನಾಟಕ ಬರೆಯಿರಿ.

4. **“**ಹಿಬ್ರಿಯ ಜ್ಞಾನದಲ್ಲಿ ಯೆಹೋವನು**”** ಎಂಬ ಸರಳ ಅಧ್ಯಯನವನ್ನು ರಚಿಸಿರಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿರಿ. ಪಾಠ ಟಿಪ್ಪಣಿಗಳು ಅಥವಾ ಪಾಠ ಪುಸ್ತಕವನ್ನು ನಕಲು ಮಾಡಬೇಡಿ.

ಚಾರ್ಟ್: ಜ್ಞಾನ ಮತ್ತು ಒಡಂಬಡಿಕೆ



"ಆಧ್ಯಾತ್ಮಿಕ ಆಯಾಮ"

ಜ್ಞಾನದ ಮಾರ್ಗ

"ಪ್ರಾಯೋಗಿಕ ಆಯಾಮ"

ಕರ್ತನ ಜನರು ಆತನ ಸೃಷ್ಟಿಗೆ ಹೇಗೆ ಸಂಬಂಧಿಸಬೇಕು:

– ಪ್ರೀತಿಯಿಂದ
– ನ್ಯಾಯದಿಂದ
– ಸಮಗ್ರತೆಯಿಂದ

1. ಕುಟುಂಬ
2. ಕೆಲಸ
3. ಆರೋಗ್ಯ ಮತ್ತು ಭದ್ರತೆ
4. ಭೌತಿಕ ಸಮರ್ಪಕತೆ
5. ನಾಲಿಗೆಯ ಬಳಕೆ
6. ಮತ್ತು ಈ ಕೋರ್ಸ್‌ನಲ್ಲಿ ಅಧ್ಯಯನ ಮಾಡದ ಅನೇಕ ವಿಷಯಗಳು

ಇಬ್ರಿಯ ಜ್ಞಾನ ಮತ್ತು ಮಾನವನ ಅನುಭವ

ಕೆಲವೊಮ್ಮೆ ಇಬ್ರಿಯ ಜ್ಞಾನವು ನೇರವಾಗಿರುತ್ತದೆ. ಅದು ಅರ್ಥಪೂರ್ಣವಾಗಿದೆ ಮತ್ತು ಸಮಂಜಸವೆಂದು ತೋರುತ್ತದೆ. ಆದರೆ ಇತರ ಸಮಯಗಳಲ್ಲಿ ಅದರ ಶೈಲಿ ಮತ್ತು ಸಂದೇಶವು ವಿರೋಧಾತ್ಮಕ ಅಥವಾ ಗೊಂದಲಮಯವಾಗಿ ತೋರುತ್ತದೆ. ಇಬ್ರಿಯ ಜ್ಞಾನವು ನಮ್ಮ ಅನುಭವಕ್ಕೆ ವಿರುದ್ಧವಾದ ಹೇಳಿಕೆಗಳನ್ನು ನೀಡುತ್ತದೆ, ಅವು ಸತ್ಯವನ್ನು ಹೇಳುವುದಿಲ್ಲ ಎಂದು ತೋರುತ್ತದೆ. ಒಂದು ಉದಾಹರಣೆ:

ನಿನ್ನ ಕಾರ್ಯಭಾರವನ್ನು ಯೆಹೋವನಿಗೆ ವಹಿಸಿದರೆ

ನಿನ್ನ ಉದ್ದೇಶಗಳು ಸಫಲವಾಗುವವು.

(ಜ್ಞಾನೋ. 16:3)

ನಮ್ಮ ಯೋಜನೆಗಳನ್ನು ದೇವರಿಗೆ ಒಪ್ಪಿಸಿದರೂ ಸಹ, ನಮ್ಮಲ್ಲಿ ಹೆಚ್ಚಿನವರು ವಿಫಲರಾಗಿರುವುದನ್ನು ಅನುಭವಿಸಿದ್ದೇವೆ. ನಾವು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದೇವೆ. ನಮ್ಮ ಆಯ್ಕೆಯ ಕಾಲೇಜಿನಲ್ಲಿ ನಮಗೆ ಸೀಟು ನೀಡಲಾಗಿಲ್ಲ.ನಮಗೆ ಉದ್ಯೋಗ ಅಥವಾ ವ್ಯಾಪಾರ ಅವಕಾಶವನ್ನು ನಿರಾಕರಿಸಲಾಗಿದೆ. ನಮ್ಮ ದೇವರು ನೇಮಿಸಿದ ಜೀವನದಲ್ಲಿ ನಾವು ಎಲ್ಲಾ ರೀತಿಯ ತೊಂದರೆಗಳು ಮತ್ತು ಅಡತಡೆಗಳಿಂದ ಬಳಲಿದ್ದೇವೆ. ಮತ್ತು ನಾವು ನಮ್ಮ ಜೀವನವನ್ನು ಮತ್ತು ಯೋಜನೆಗಳನ್ನು ದೇವರ ಕೈಗೆ ಒಪ್ಪಿಸಿದಾಗ ನಾವು ನಿಜವಾಗಿಯೂ ಪ್ರಾಮಾಣಿಕರಾಗಿದ್ದೇವೆ. ಹಾಗಾದರೆ ನಮ್ಮ ಯೋಜನೆಗಳು ಏಕೆ ತಪ್ಪಾದವು?

ನಮ್ಮ ಅನುಭವವು ಈ ಜ್ಞಾನೋಕ್ತಿ ಸುಳ್ಳೆಂದು ಸಾಬೀತುಪಡಿಸಿದೆ. ಮತ್ತೊಂದೆಡೆ, ನಾವು ದೇವರಲ್ಲಿ ನಿಜವಾಗಿಯೂ ನಂಬಿಕೆ ಇಡುತ್ತೇವೆ ಮತ್ತು ಆತನ ಮಾತು ಸತ್ಯ ಮತ್ತು ಆತನು ತನ್ನ ವಾಗ್ದಾನಗಳನ್ನು ಉಳಿಸಿಕೊಳ್ಳುವ ದೇವರು ಎಂದು ನಾವು ಸಂಪೂರ್ಣವಾಗಿ ನಂಬುತ್ತೇವೆ. ದೇವರ ವಾಗ್ದಾನ ಮತ್ತು ನಮ್ಮ ಅನುಭವದ ನಡುವಿನ ಈ ಸಂಘರ್ಷವು ನಮ್ಮನ್ನು ಈ ರೀತಿಯ ಪ್ರಶ್ನೆಗಳನ್ನು ಕೇಳಿಕೊಳ್ಳುವಂತೆ ಒತ್ತಾಯಿಸುತ್ತದೆ: ಈ ಜ್ಞಾನೋಕ್ತಿ ಸತ್ಯದ ಹೇಳಿಕೆಯೇ ಅಥವಾ ಅದನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕೆ? ಇದು ಯಾವ ರೀತಿಯ ವಾಗ್ದಾನ? ಈ ರೀತಿಯ ವಾಗ್ದನವನ್ನು ಹೇಗೆ ಅರ್ಥಮಾಡಿಕೊಳ್ಳಬೆಕು.

ಕೆಲವು ಹಳೆಯ ಒಡಂಬಡಿಕೆಯ ಜ್ಞಾನದ ಪಠ್ಯಗಳು ವಾಸ್ತವದ ಹೇಳಿಕೆಗಳಂತೆ ಕಾಣುತ್ತವೆ. ಅವುಗಳನ್ನು ಓದುವ ಬಹುತೇಕ ಜನರು ಅವುಗಳನ್ನು ನಿಜವಾಧ ಯಥಾರ್ಥದ ಹೇಳಿಕೆಗಳೆಂದು ಅರ್ಥಮಾಡಿಕೊಳ್ಳುತ್ತಾರೆ. ಆದರೆ ಅವರು ನಿಜವಾಗಿಯೂ ಏನು ಹೇಳಿಕೊಳ್ಳುತ್ತಾರೆ ಎಂಬುದರ ಕುರಿತು ನಾವು ಯೋಚಿಸಿದಾಗ, ಅವು ಆಗಾಗ್ಗೆ ನಮ್ಮ ಮಾನವ ಅನುಭವಕ್ಕೆ ವಿರುದ್ಧವಾಗಿ ಹೋಗುತ್ತವೆ. ದೇವರಿಗೆ ಭಯಪಡುವವರು ಮತ್ತು ನೀತಿವಂತರಾಗಿ ಬದುಕುವವರು ಆಶೀರ್ವದಿಸಲ್ಪಡುತ್ತಾರೆ ಮತ್ತು ಏಳಿಗೆ ಹೊಂದುತ್ತಾರೆ ಎಂದು ಒಂದು ಜ್ಞಾನೋಕ್ತಿ (ಅಥವಾ ಜ್ಞಾನದ ಕೀರ್ತನೆ) ಸೂಚಿಸಿದಾಗ ಇದು ವಿಶೇಷವಾಗಿ ಕಂಡುಬರುತ್ತದೆ.

ಈ ರೀತಿಯ ಜ್ಞಾನದ ಪಠ್ಯಗಳನ್ನು ಅರ್ಥಮಾಡಿಕೊಳ್ಳಲು ನಾವು ಕೀರ್ತನೆಗಳಿಂದ ಎರಡು ಉದಾಹರಣೆಗಳನ್ನು ಬಳಸುತ್ತೇವೆ:

ಕೀರ್ತನೆ 1:1–3 ಹೆಚ್ಚಿನ ದೃಢೀಕರಣದಂತೆ ಓದುತ್ತದೆ:

ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ

ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ

ಧರ್ಮನಿಂದಕರೊಡನೆ ಕೂತುಕೊಳ್ಳದೆ

ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ

ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ

ಅವನು ಎಷ್ಟೋ ಧನ್ಯನು.

ಅವನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳದಿರುವ ಮರದ ಹಾಗಿರುವನು.

ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ;

ಅದರ ಎಲೆ ಬಾಡುವುದೇ ಇಲ್ಲ.

ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು.

ಈ ದೃಢವಚನವು ವಿಶ್ವಾಸಿಗಳಾಗಿರುವ ನಮ್ಮ ಅನುಭವವನ್ನು ಎಲ್ಲಾ ವೇಳೆಯಲ್ಲೂ ಪ್ರತಿಬಿಂಬಿಸುವುದಿಲ್ಲ. ನಾವು ಯಾವಾಗಲೂ ಹಣ್ಣು ಕೊಡುವ ಮರಗಳಂತೆ ಆಗುವುದಿಲ್ಲ. ನಾವು ದುಷ್ಟ ಜನರೊಂದಿಗೆ ಸಂಪರ್ಕದಲ್ಲಿರದಿದ್ದರೂ ಮತ್ತು ಸತ್ಯವೇದವನ್ನು ಓದಲು ಪ್ರೀತಿಯುಳ್ಳವರಾಗಿದ್ದರೂ ಕೂಡ ನಾವು ಸದಾ ಯಶಸ್ವಿಯಾಗಿರುವುದಿಲ್ಲ.

ಆದರೆ ನಾವು ಬೇರೆ ಕೀರ್ತನೆ ನೋಡುವಾಗ ವ್ಯತ್ಯಾಸಕರ ಭಾವನೆಯನ್ನು ಕಾಣುತ್ತೇವೆ. ಒಂದು ಉದಾಹರಣೆ:

ದೇವರು ನಿರ್ಮಲಚಿತ್ತರಾದ ಇಸ್ರಾಯೇಲ್ಯರಿಗೆ

ದಯಾಪರನೇ ಹೌದು.

ಆದರೆ ನಾನು ದುಷ್ಟರ ಸೌಭಾಗ್ಯವನ್ನು ಕಂಡು

ಸೊಕ್ಕಿನವರ ಮೇಲೆ ಉರಿಗೊಂಡೆನು.

ನನ್ನ ಕಾಲುಗಳು ಜಾರಿದವುಗಳೇ;

ನನ್ನ ಹೆಜ್ಜೆಗಳು ತಪ್ಪಿದವುಗಳೇ.

ಅವರ ಮರಣವು ನಿರ್ಬಾಧಕವಾಗಿದೆ;

ಅವರ ಕಾಯವು ಕೊಬ್ಬುಳ್ಳದ್ದಾಗಿದೆ.

ಮನುಷ್ಯರ ಕಷ್ಟದಲ್ಲಿ ಅವರು ಭಾಗಿಗಳಾಗುವದಿಲ್ಲ;

ಇತರರಿಗೆ ತಗಲುವಂತೆ ಅವರಿಗೆ ಅಂಟುರೋಗವೂ ತಗುಲುವದಿಲ್ಲ.

(ಕೀರ್ತನೆ. 73:1–5)

ನೋಡಿರಿ, ದುಷ್ಟರು ಇಂಥವರೇ;

ಅವರು ಸದಾ ಸುಖದಿಂದಿದ್ದು ಸ್ಥಿತಿವಂತರಾಗಿ ಹೋಗುತ್ತಾರೆ.

ನನ್ನ ಮನಸ್ಸನ್ನು ನಿರ್ಮಲಮಾಡಿಕೊಂಡದ್ದೂ

ಶುದ್ಧತ್ವದಲ್ಲಿ ಕೈತೊಳಕೊಂಡದ್ದೂ ವ್ಯರ್ಥವೇ ಸರಿ.

ನಾನು ಯಾವಾಗಲೂ ವ್ಯಾಧಿಪೀಡಿತನಾಗಿದ್ದು

ಪ್ರತಿದಿನವೂ ದಂಡಿಸಲ್ಪಡುತ್ತಾ ಇದ್ದೇನಲ್ಲಾ.

(ಕೀರ್ತನೆ. 73:12–14)

73 ನೇ ಕೀರ್ತನೆಯಲ್ಲಿ, ದುಷ್ಟರು ಎಲ್ಲದರಿಂದ ಪಾರಾಗುತ್ತಿರುವಂತೆ ಕಾಣುವುದು ಏಕೆ ಎಂದು ಕೀರ್ತನೆಗಾರನು ಆಶ್ಚರ್ಯಪಡುತ್ತಾನೆ. ನೀತಿವಂತನು ತನ್ನನ್ನು ತಾನು ವ್ಯರ್ಥವಾಗಿ ಶುದ್ಧವಾಗಿಟ್ಟುಕೊಂಡಿದ್ದಾನೆಯೇ? ದೇವರು ನಿಜವಾಗಿಯೂ ದೈವಭಕ್ತರ ಪರವಾಗಿ ಇದ್ದಾನೆಯೇ? ನಾವು ದೈವಭಕ್ತರು ಕಷ್ಟಗಳನ್ನು ಅನುಭವಿಸಿದಾಗ ಮತ್ತು ನಮ್ಮ ಭಕ್ತಿಹೀನ ನೆರೆಹೊರೆಯವರು ಏಳಿಗೆ ಹೊಂದಿದಾಗ ನಾವು ನಮ್ಮನ್ನು ಕೇಳಿಕೊಳ್ಳುವ ಪ್ರಶ್ನೆಗಳು ಇವು.

ಆದರೆ ಕೀರ್ತನೆಗಾರನು ದೇವಾಲಯವನ್ನು ಪ್ರವೇಶಿಸಿದಾಗ ಅವನು ಎಲ್ಲವನ್ನೂ ಬೇರೆಯದೇ ಬೆಳಕಿನಲ್ಲಿ, ಬೇರೆಯದೇ ದೃಷ್ಟಿಕೋನದಿಂದ ನೋಡುತ್ತಾನೆ.

ನಾನು ಇದನ್ನು ಗ್ರಹಿಸಿಕೊಳ್ಳಬೇಕೆಂದು ಎಷ್ಟು ಚಿಂತಿಸಿದರೂ

ಅದು ಒಂದು ಕಷ್ಟಕರವಾದ ಮರ್ಮವೆಂದು ತೋಚಿತು.

ಆದರೆ ದೇವಾಲಯಕ್ಕೆ ಹೋಗಿ

ಅವರ ಅಂತ್ಯಾವಸ್ಥೆಯನ್ನು ಆಲೋಚಿಸಿದಾಗ ನನಗೆ ಗೊತ್ತಾಯಿತು.

(ಕೀರ್ತನೆ. 73:16–17)

ಮತ್ತು ಈ ಶಾಶ್ವತ ಮೌಲ್ಯಗಳ ಬೆಳಕಿನಲ್ಲಿ, ದೇವರ ದೃಷ್ಟಿಕೋನದಿಂದ ಮಾನವ ಜೀವನವನ್ನು ನೋಡಿದಾಗ, ಕೀರ್ತನೆಗಾರನು ದೈವಿಕ ಜನರ ನಿಜವಾದ ಮತ್ತು ಶಾಶ್ವತ ಸಂಪತ್ತನ್ನು ಮತ್ತು ಭಕ್ತಿಹೀನರು ಮತ್ತು ದುಷ್ಟರು ಮರಣದ ಹಾದಿಯಲಿ ಹೇಗೆ ಇದ್ದರೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾನೆ.

ಆದರೂ ಸದಾ ನಿನ್ನ ಸನ್ನಿಧಿಯಲ್ಲಿಯೇ ಇದ್ದೇನೆ.

ನೀನು ನನ್ನ ಬಲಗೈಯನ್ನು ಹಿಡಿದು

ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡಿಸಿ

ತರುವಾಯ ಮಹಿಮೆಗೆ ಸೇರಿಸಿಕೊಳ್ಳುವಿ.

ಪರಲೋಕದಲ್ಲಿ ನನಗೆ ನೀನಲ್ಲದೆ ಮತ್ತಾರು ಅವಶ್ಯ?

ಇಹಲೋಕದಲ್ಲಿ ನಿನ್ನನ್ನಲ್ಲದೆ ಇನ್ನಾರನ್ನೂ ಬಯಸುವದಿಲ್ಲ.

ತನುಮನಗಳು ಕ್ಷಯಿಸಿದರೂ

ನನ್ನ ಆತ್ಮಕ್ಕೆ ಶರಣನೂ ನನ್ನ ಶಾಶ್ವತವಾದ ಪಾಲೂ ದೇವರೇ.

ಇಗೋ, ನಿನ್ನನ್ನು ಬಿಟ್ಟವರು ನಾಶವಾಗುವರು;

ನಿನಗೆ ದ್ರೋಹಮಾಡಿದವರೆಲ್ಲರನ್ನು ನಿರ್ಮೂಲ ಮಾಡುತ್ತೀ.

ನನಗಾದರೋ ದೇವರ ಸಾನ್ನಿಧ್ಯವೇ ಭಾಗ್ಯವು.

ಕರ್ತನೇ, ಯೆಹೋವನೇ, ನಾನು ನಿನ್ನನ್ನು ಆಶ್ರಯಿಸಿಕೊಂಡವನಾಗಿ

ನಿನ್ನ ಮಹಾತ್ಕಾರ್ಯಗಳನ್ನು ಪ್ರಕಟಿಸುವೆನು.

(ಕೀರ್ತನೆ. 73:23–28

ಆದ್ದರಿಂದ ನಾವು ಈ ಎರಡು ಕೀರ್ತನೆಗಳನ್ನು ಹೋಲಿಸಿದಾಗ, ಅವು ಬುದ್ಧಿವಂತ ಸಾಹಿತ್ಯದ ಎರಡು ವಿಭಿನ್ನ ಪ್ರಕಾರಗಳಿಗೆ ಸೇರಿವೆ ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ:

1. ಕೀರ್ತನೆ 1 ನಂಬಿಕೆಯ ಹೇಳಿಕೆಯಾಗಿದೆ, ನಂಬಿಕೆಯ ಹೇಳಿಕೆಯಾಗಿದೆ: ದೇವರು ಮಾನವ ಅಸ್ತಿತ್ವದ ಮೇಲೆ ನಿಯಂತ್ರಣ ಹೊಂದಿದ್ದಾನೆ. ದೇವರು ನಮ್ಮನ್ನು ಗಮನಿಸುತ್ತಾನೆ, ಅಥವಾ ಬಹುಶಃ ವಿಶೇಷವಾಗಿ – ಅವನು ಹಾಗೆ ಮಾಡುತ್ತಿದ್ದಾನೆಂದು ನಮಗೆ ಅನಿಸದಿದ್ದಾಗಲೂ ಸಹ. ಅವನು ಯಾವಾಗಲೂ ದೈವಭಕ್ತರ ಮಾರ್ಗಗಳನ್ನು ಗಮನಿಸುತ್ತಿರುತ್ತಾನೆ:

   ಯೆಹೋವನು ನೀತಿವಂತರ ಮಾರ್ಗವನ್ನು ಲಕ್ಷಿಸುವನು;

   ದುಷ್ಟರ ಮಾರ್ಗವೋ ನಾಶವಾಗುವದು.

   (ಕೀರ್ತನೆ. 1:6)

ನಮ್ಮ ಮನೆ ಕುಸಿದಾಗ, ನಾವು ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ, ನಮ್ಮ ತಾಯಿಗೆ ಕ್ಯಾನ್ಸರ್ ಇರುವುದು ಪತ್ತೆಯಾದಾಗ ಅಥವಾ ನಾವು ಇದ್ದಕ್ಕಿದ್ದಂತೆ ನಮ್ಮ ಕೆಲಸವನ್ನು ಕಳೆದುಕೊಂಡಾಗ – ಕೀರ್ತನೆ 1 ನಮ್ಮ ನಂಬಿಕೆಯನ್ನು ಬಲಪಡಿಸುತ್ತದೆ: ದೇವರು ನಮ್ಮನ್ನು ಕಾಯುತ್ತಿದ್ದಾನೆ.

2. ಈ ಪತನಗೊಂಡ ಲೋಕದಲ್ಲಿ ಕಷ್ಟ, ಸಂಕಟ ಮತ್ತು ವಿರೋಧದ ಸಮಯದಲ್ಲಿ ದೈವಿಕ ವ್ಯಕ್ತಿಯಾಗಿರುವುದು ಹೇಗೆ ಅನಿಸುತ್ತದೆ ಎಂಬುದನ್ನು ಕೀರ್ತನೆ 73 ನಮಗೆ ನೆನಪಿಸುತ್ತದೆ.

ಆದ್ದರಿಂದ, ನಾವು ಜ್ಞಾನೋಕ್ತಿಗಳು (ಮತ್ತು ಇತರ ಜ್ಞಾನ ಸಾಹಿತ್ಯಗಳನ್ನು) ಓದುವಾಗ ಎಚ್ಚರಿಕೆಯಿಂದ ಇರಬೇಕಾಗಿದೆ. ಏಕೆಂದರೆ ಜೀವನವು ಸದಾ ಇವು ಸೂಚಿಸುವ ರೀತಿಯಲ್ಲಿ ನಡೆಯುವುದಿಲ್ಲ. ಬಹುಮಟ್ಟಿಗೆ ಈ ಪಠ್ಯಗಳ ಹಿಂದೆ ಇನ್ನೊಂದು ಮುಖವೂ ಇರುತ್ತದೆ. ಆದರೆ ಇವು ನಮ್ಮನ್ನು ಶಾಶ್ವತ ಮೌಲ್ಯಗಳ ಬೆಳಕಿನಲ್ಲಿ ವಿಷಯಗಳನ್ನು ನೋಡಿಕೊಳ್ಳುವಂತೆ ಮಾಡುತ್ತವೆ. ಇವು ದೇವರು ಮಾನವ ಜೀವನವನ್ನು ಹೇಗೆ ನೋಡುತ್ತಾರೆ ಎಂಬುದನ್ನು ನಾವು ನೆನಪಿಸಿಕೊಳ್ಳಲು ಸಹಾಯಮಾಡುತ್ತವೆ.

ಇದಕ್ಕಿಂತ ಹೆಚ್ಚಾಗಿ, ಈ ಜ್ಞಾನೋಕ್ತಿಗಳು ಮತ್ತು ಇತರ ಜ್ಞಾನ ಪಠ್ಯಗಳು ಯಾವ ತರಹದ ಪಾಠಗಳೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು: ಇವು **"ವಾಸ್ತವದ ಹೇಳಿಕೆಗಳು"** ಅಥವಾ **"ಮಾನವ ಜೀವನದ ನಿಖರ ವಿವರಣೆಗಳು"** ಅಲ್ಲ. ಇವು ಶೈಕ್ಷಣಿಕ ಸಲಕರಣೆಗಳಾಗಿವೆ. ಇವು ಸಂಕ್ಷಿಪ್ತವಾಗಿದ್ದು, ನೆನಪಿಟ್ಟುಕೊಳ್ಳಲು ಸುಲಭವಾಗಿವೆ. ಇವು ನಮ್ಮನ್ನು ಅಲುಗಾಡಿಸಲು, ಹೊಸ ರೀತಿಯಲ್ಲಿ ಜೀವನವನ್ನು ಯೋಜಿಸಲು ನಮ್ಮನ್ನು ಪ್ರೇರೇಪಿಸಲು ವಿನ್ಯಾಸಗೊಳಿಸಲಾಗಿದೆ. ಇವು ನಮಗೆ ಈ ರೀತಿಯ ಪ್ರಶ್ನೆಗಳನ್ನು ಕೇಳುವಂತೆ ಮಾಡುತ್ತವೆ:

- ಈ ಜ್ಞಾನೋಕ್ತಿಗಳು ಸೂಚಿಸುವ ರೀತಿಯಲ್ಲಿ ನನ್ನ ಜೀವಿತವು ಪ್ರಭಾವಿತವಾಗಿದೆಯೇ ಅಥವಾ ಇಲ್ಲವೆ?
- ನಾನು ದುಷ್ಟರ ಪರವಾಗಿದ್ದೇನೋ ಅಥವಾ ನೀತಿವಂತರ ಪರವಾಗಿದ್ದೇನೋ?
- ನಾನು ದೇವರೊಂದಿಗೆ ಸರಿಯಾಗಿದ್ದೇನೋ ಅಥವಾ ದೇವರು ನನ್ನ ವಿರುದ್ದವೋ?
- ನಿತ್ಯತ್ವದ ಬೆಳಕಿನಲ್ಲಿ ನಾನು ಎಲ್ಲಿ ನಿಲ್ಲುತ್ತೇನೆ?

ಅಸೈನ್‌ಮೆಂಟ್

ಈ ಕೆಳಗಿನ ಕಾರ್ಯಗಳನ್ನು ನೀವು ಮಾಡಲು ಸಮಯವಿದ್ದರೆ ಮಾಡಿ. ನಿಮ್ಮ ತರಗತಿಯಲ್ಲಿ ಅಥವಾ ಕಾಲೇಜಿನಲ್ಲಿ ಸ್ನೇಹಿತರೊಂದಿಗೆ ಈ ಕೆಲಸವನ್ನು ಹಂಚಿಕೊಳ್ಳಲು ಅವಕಾಶ ಕಂಡುಕೊಳ್ಳಿ.

1. ನಿಮ್ಮ ಸ್ವಂತ ಕಷ್ಟಗಳು ಮತ್ತು ಸಂಕಟಗಳ ಅನುಭವಗಳ ಬೆಳಕಿನಲ್ಲಿ ಮತ್ತು ನಿಮ್ಮ ಅನ್ಯಾಯದ ನೆರೆಹೊರೆಯವರು ಆರಾಮದಾಯಕ ಮತ್ತು ಯಶ್ವಸ್ವಿ ಜೀವನವನ್ನು ನಡೆಸುವುದನ್ನು ನೀವು ನೋಡುವಾಗ ಈ ಜ್ಞಾನೋಕ್ತಿಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?

   ಸಜ್ಜನರಿಗೆ ಯಾವ ಹಾನಿಯೂ ಸಂಭವಿಸದು;

   ದುರ್ಜನರಿಗೆ ಕೇಡು ತುಂಬಿತುಳುಕುವದು.

   (ಜ್ಞಾನೋ. 12:21)

2. ಈ ಪಾಠದಲ್ಲಿ ನೀವು ಕಲಿತದ್ದನ್ನು ಜ್ಞಾನೋಕ್ತಿ 16:3 ರ ಆಧಾರದ ಮೇಲೆ ಯುವ ಜನರ ಗುಂಪಿಗೆ ಚಿಕ್ಕ ಸಂದೇಶವನ್ನು ಸಿದ್ದಮಾಡಿರಿ.

ಕೀರ್ತನೆಗಳು

ಕೀರ್ತನೆ 1

ಗಮನಿಸಿ: ಕೀರ್ತನೆ ಪುಸ್ತಕವು ಕೀರ್ತನೆ 2 ರ ಅಧ್ಯಯನದ ನಂತರ ಪರಿಚಯಿಸಲ್ಪಡುತ್ತದೆ.

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ ಶೀರ್ಷಿಕೆ ಕಾಣಿಸಿಗುವುದಿಲ್ಲ.

ಈ ಕೀರ್ತನೆಯು (ಬಹುಶಃ ಕೀರ್ತನೆ 2 ರೊಂದಿಗೆ) ಇಡೀ ಕೀರ್ತನೆಗಳ ಪುಸ್ತಕವನ್ನು ಪರಿಚಯಿಸುತ್ತದೆ. ದೇವರನ್ನು ನಿಜವಾಗಿಯೂ ಆರಾಧಿಸಲು ಬಯಸುವವರು ಆತನ ನಿಯಮವನ್ನು, ಒಡಂಬಡಿಕೆಯ ಸೂಚನೆಗಳನ್ನು ಪೂರ್ಣಹೃದಯದಿಂದ ಅನುಸರಿಸಬೇಕು ಎಂಬ ಅಂಶವನ್ನು ಇದು ಒತ್ತಿಹೇಳುತ್ತದೆ. ಜ್ಞಾನ ಸಾಹಿತ್ಯ ಮತ್ತು ಅವುಗಳನ್ನು ಹಾಡನ್ನಾಗಿ ಮಾಡುತ್ತದೆ. ಈ ಹಾಡನ್ನು ಹಾಡುವವರು ಇದರ ಜ್ಞಾನದ ಮೌಲ್ಯಗಳನ್ನು ಸ್ವೀಕರಿಸುತ್ತಾರೆ. ಧರ್ಮಶಾಸ್ತ್ರದ ನೈತಿಕ ಅಗತ್ಯತೆಗಳನ್ನು ಪಾಲಿಸುವುದರಿಂದ ಅವರು ನೀತಿವಂತರ ನಡುವೆಯಿರಲು ಪ್ರಯತ್ನಿಸುವರು. ಈ ಕೀರ್ತನೆಯು ಮೂಲತಃ ಮಾನವ ಜೀವನದಲ್ಲಿ ಕೇವಲ ಎರಡು ವಿಧಗಳಿವೆ ಎಂದು ಓದುಗರಿಗೆ ನೆನಪಿಸುತ್ತದೆ – ನೀತಿವಂತರ ಮಾರ್ಗ ಮತ್ತು ದುಷ್ಟರ ಮಾರ್ಗ.

ಧನ್ಯರು (ಕನ್ನಡ ಸತ್ಯವೇದದಲ್ಲಿ ವಚನ 2): ಇದು ಪುರುಷ ಮತ್ತು ಮಹಿಳೆ ಇಬ್ಬರೂ ಸೇರಿದ್ದಾರೆ.

ಯೆಹೋವನ ಧರ್ಮಶಾಸ್ತ್ರ (ವಚನ 2): ದೇವರ ಉಪದೇಶ ಮತ್ತು ಬೋಧನೆ; ದೇವರ ವಾಕ್ಯ.

ನ್ಯಾಯತೀರ್ಪು (ವಚನ 5): ದೇವರ ತೀರ್ಪು, ಇದು ಈ ಲೋಕದಲ್ಲಿ ಅಥವಾ ನಮ್ಮ ಕಾಲವನ್ನು ಮೀರಿ ನಡೆಯಬುದು.

ಸಭೆ (ವಚನ 5): ದೇವಜನರು

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯು ಎರಡು ರೀತಿಯ ಜನರನ್ನು ವ್ಯತ್ಯಾಸಗೊಳಿಸುತ್ತದೆ. ಅವರು ಯಾರು? ಅವರ ನಡುವಿನ ವ್ಯತ್ಯಾಸವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.
   ಅ. ಈ ಲೋಕದಲ್ಲಿ ಅವರ ಜೀವನ
   ಆ. ಅವರ ಭವಿಷ್ಯ
3. ವಚನ 1 ಮತ್ತು 2 ಹೇಗೆ ಒಟ್ಟಿಗೆ ಸಂಬಂಧವನ್ನು ಹೊಂದಿವೆ ಎಂಬುದನ್ನು ವಿವರಿಸಿ.
4. 1 ನೇ ವಚನದಲ್ಲಿ ಮೂರು ರೀತಿಯ ಕೆಟ್ಟ ಜನರನ್ನು ಉಲ್ಲೇಖಿಸಲಾಗಿದೆ. ಅವರು ಯಾರು? ಅವರ ನಡುವಿನ ವ್ಯತ್ಯಾಸವೇನು?
5. ನೀತಿವಂತನು ಯೆಹೋವನ ಧರ್ಮಶಾಸ್ತ್ರಕ್ಕೆ ಹೇಗೆ ಸಂಬಂಧಿಸುತ್ತಾನೆ?
6. ಕೀರ್ತನೆಗಾರನು ನೀತಿವಂತ ಮತ್ತು ದುಷ್ಟರನ್ನು ವಿವರಿಸಲು ಉಪಮೆಗಳನ್ನು ಬಳಸುತ್ತಾನೆ. ಅವುಗಳನ್ನು ವಿವರಿಸಿ.
7. ಈ ಕೀರ್ತನೆಯು ಯಾವ ಕೀರ್ತನೆ ವರ್ಗಕ್ಕೆ ಸೇರಿದೆ? ಏಕೆ ಎಂದು ವಿವರಿಸಿರಿ.

ಕೀರ್ತನೆ 1 ಅಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯು ಇಡೀ ಪುಸ್ತಕವನ್ನು ಪರಿಚಯಿಸುತ್ತದೆ. ಅದು ಕೀರ್ತನೆಗಳು ಪುಸ್ತಕದ ಬಗ್ಗೆ ನಮಗೆ ಏನು ಹೇಳುತ್ತದೆ?

2. ನೀತಿವಂತ ಮತ್ತು ದುಷ್ಟರನ್ನು ವಿವರಿಸಲು ಕೀರ್ತನೆಗಾರನು ಉಪಮೆಗಳನ್ನು ಬಳಸುತ್ತಾನೆ. ಅವನು ಈ ಉಪಮೆಗಳನ್ನು ಏಕೆ ಆರಿಸಿಕೊಂಡನು ಎಂದು ನೀವು ಭಾವಿಸುತ್ತೀರಿ? ಈ ಉಪಮೆಗಳು ಓದುಗರಿಗೆ ಯಾವ ಸಂದೇಶವನ್ನು ನೀಡುತ್ತವೆ.

3. **ಪವಿತ್ರ ಬೈಬಲ್** 6 ನೇ ವಚನವನ್ನು ಹೇಗೆ ಅನುವಾದಿಸಿದೆ ಎಂಬುದನ್ನು ಗಮನಿಸಿ ಮತ್ತು ಇತರ ಕನ್ನಡ ಅನುವಾದಗಳೊಂದಿಗೆ ಹೋಲಿಕೆ ಮಾಡಿ. ನಿಮ್ಮ ಅಭಿಪ್ರಾಯಗಳೇನು?

4. ಈ ಕೀರ್ತನೆಯಲ್ಲಿರುವ ಕೆಲವು ಸಮಾನಾಂತರತೆಗಳನ್ನು ಅಧ್ಯಯನ ಮಾಡಿ ವಿವರಿಸಿ.

5. 6 ನೇ ವಚನವು **"ಕ್ರಮವ್ಯತ್ಯಯ"** (ಪಠ್ಯದ ಅಡ್ಡ–ವಾರು ಜೋಡಣೆ) ಎಂಬ ವಾಕ್ಚಾತುರ್ಯದ ಚಿತ್ರಣವನ್ನು ಒಳಗೊಂಡಿದೆ. ಆದಾಗ್ಯೂ, ಕನ್ನಡ ಸತ್ಯವೇದಗಳ ಅನುವಾದಕರು ಈ ವೈಶಿಷ್ಟ್ಯವನ್ನು ತೋರಿಸಲು ಯಶಸ್ವಿಯಾಗಲಿಲ್ಲ. ಈ ವಚನವನ್ನು ಇಂಗ್ಲೀಷ್ ಬೈಬಲ್‌ನಲ್ಲಿ ಓದಿ ಮತ್ತು **"ಕ್ರಮವ್ಯತ್ಯಯ"** ಅನ್ನು ವಿವರಿಸಿ.

ಕೀರ್ತನೆ 1 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನಿಮ್ಮನ್ನು ಮತ್ತು ನಿಮ್ಮ ಸ್ವಂತ ಜೀವನವನ್ನು ಒಮ್ಮೆ ನೋಡಿ:

   ಅ. ನೀವು ಯಾವ ರೀತಿಯ ಜನರೊಂದಿಗೆ ಸಹವಾಸ ಮಾಡುವುದನ್ನು ತಪ್ಪಿಸುತ್ತೀರಿ? ಮತ್ತು ನೀವು ಯಾವ ರೀತಿಯ ಜನರೊಂದಿಗೆ ಸಹವಾಸ ಮಾಡಲು ಇಷ್ಟಪಡುತ್ತೀರಿ?

   ಆ. ನೀವು ಯಾವ ರೀತಿಯ ಚಟುವಟಿಕೆಗಳೊಂದಿಗೆ ನಿಮ್ಮ ಸಮಯವನ್ನು ಕಳೆಯುತ್ತೀರಿ?

   ಇ. ನಿಮ್ಮ ಸ್ವಂತ ಜೀವನವನ್ನು **"ದೃಢವಾಗಿ ನೆಡಲ್ಪಟ್ಟ"**, **"ಚೆನ್ನಾಗಿ ನೀರುಹಾಕಿದ"** ಮತ್ತು **"ಫಲಪ್ರದ"** ಎಂದು ವಿವರಿಸಬಹುದೇ? ಹೇಗೆ ಎಂದು ವಿವರಿಸಿ.

2. ಪ್ರಾರ್ಥಿಸಲು ಕೆಲವು ಕ್ಷಣಗಳನ್ನು ತೆಗೆದುಕೊಳ್ಳಿ:

   ಅ. ನೀವು ಪ್ರಸ್ತುತ ನಡೆಸುತ್ತಿರುವ ವೈಯಕ್ತಿಕ ಜೀವನದ ಬಗ್ಗೆ ನೀವು ದೇವರಿಗೆ ಯಾವುದಕ್ಕಾಗಿ ಧನ್ಯವಾದ ಹೇಳಬಹುದು?

   ಆ. ಈ ಕೀರ್ತನೆಯಲ್ಲಿರುವ ನೀತಿವಂತನಂತೆ ನೀವು ನಿಜವಾಗಿಯೂ ಆಶೀರ್ವದಿಸಲ್ಪಟ್ಟ ವ್ಯಕ್ತಿಯಾಗಲು ನಿಮ್ಮ ಜೀವನದ ಯಾವ ಕ್ಷೇತ್ರಗಳಲ್ಲಿ ಬದಲಾಗಲು ನಿಮಗೆ ದೇವರ ಸಹಾಯ ಬೇಕು?

ಕೀರ್ತನೆ 2

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ ಯಾವುದೇ ಶೀರ್ಷಿಕೆಯಿಲ್ಲ.

ಈ ಕೀರ್ತನೆಯು ಏಕೆ? ಎಂಬ ಪ್ರಶ್ನೆಯೊಂದಿಗೆ ಪ್ರಾರಂಭವಾಗುತ್ತದೆ. ಈ ಪ್ರಶ್ನೆಯು ಅಲಂಕಾರಿಕ ಪ್ರಶ್ನೆಯಾಗಿದೆ. ಇದರರ್ಥ ಇದು ಒಂದು ನಿಜವಾದ ಪ್ರಶ್ನೆಯಲ್ಲ, ಆದರೆ ಪ್ರಶ್ನೆಯ ರೂಪದಲ್ಲಿರುವ ಒಂದು ಹೇಳಿಕೆಯಾಗಿದೆ: "ಜನಾಂಗಗಳು ದೇವರಿಗೆ ವಿರೋಧವಾಗಿ ಎಷ್ಟು ಧೈರ್ಯದಿಂದ ದೊಂಬಿಮಾಡುತ್ತಾರೆ".

ಈ ಕೀರ್ತನೆಯು ಚಿಯೋನಿನಲ್ಲಿ ಸಿಂಹಾಸೀನನಾಗಿರುವ ಅರಸನ ಬಗ್ಗೆ ಆಗಿದೆ, ಇದು ಯೆರೂಸಲೇಮಿನಲ್ಲಿ ಆಳ್ವಿಕೆ ಮಾಡುವ ಇಸ್ರಾಯೇಲ್ ಅರಸನನ್ನು ಸೂಚಿಸುತ್ತದೆ. ಜನಾಂಗಗಳು ದೊಂಬಿ ಮಾಡುವುದು ಮತ್ತು ವ್ಯರ್ಥಕಾರ್ಯಗಳನ್ನು ಯೋಚಿಸುವುದು ಇಸ್ರಾಯೇಲ್ ದೇವರಿಗೆ ವಿರುದ್ಧವಾಗಿದೆ ಮತ್ತು ಇದು ದೇವರು ಜಯ ಮತ್ತು ಯಶಸ್ಸನ್ನು ವಾಗ್ದಾನ ಮಾಡಿದ ಅರಸನ ವಿರುದ್ಧವಾಗಿದೆ. ಹಾಗಾಗಿ ಇದೊಂದು **"ರಾಜ ವರ್ಣನೆಯ"** ಕೀರ್ತನೆಯಾಗಿದೆ. ಇಸ್ರಾಯೇಲ್ಯರು ಈ ಕೀರ್ತನೆಯನ್ನು ಹಾಡಿದಾಗೆಲ್ಲ ಅವರು, ದೇವರು ದಾವೀದನನ್ನು ಮತ್ತು ಆತನ ಸಂತತಿಯವರು ಯೆರೂಸಲೇಮಿನಲ್ಲಿ ಅರಸರಾಗಿರಬೇಕೆಂದು ನೇಮಿಸಿದನೆಂಬುದನ್ನು ನೆನಪಿಸಿಕೊಳ್ಳುತ್ತಿದ್ದರು. ಅವರ ಮತ್ತು ಅವರ ಆಳ್ವಿಕೆಯ ಮೂಲಕ ದೇವರು ಅಬ್ರಹಾಮನಿಗೆ ಮಾಡಿದ **"ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು"** (ಆದಿ. 12:3) ವಾಗ್ದಾನವನ್ನು ನೆರವೇರಿಸುವವನಾಗಿದ್ದಾನೆ.

ಹೊಸ ಒಡಂಬಡಿಕೆಯ ಬರಹಗಾರರು ಈ ಕೀರ್ತನೆಯನ್ನು ಒಂದು ಮೆಸ್ಸೀಯನ ಕೀರ್ತನೆಯೆಂಬುದಾಗಿ ವ್ಯಖ್ಯಾನಿಸುವರು. **"ನನಗೆ ನೀನು ಮಗನು, ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ"** ಎಂಬ ಮಾತನ್ನು ಇಬ್ರಿಯ 1:5 ಮತ್ತು 5:5 ರಲ್ಲಿ ಯೇಸು ಕ್ರಿಸ್ತನನ್ನು ಸೂಚಿಸಿ ಹೇಳಿಸಲಾಗಿದೆ. ಅಲ್ಲದೆ ಇದು ಅಂತಿಯೋಕ್ಯದ ಪಿಸಿದ್ಯದಲ್ಲಿನ ಸಭಾಮಂದಿರದಲ್ಲಿರುವ ಯೆಹೂದ್ಯರಿಗಾಗಿ ಪೌಲನ ಸಂದೇಶದಲ್ಲಿ ಸಹ ಬರೆಸಲಾಗಿದೆ (ಅಪೊ.ಕೃತ್ಯ. 13:33). ಯೇಸು ಕ್ರಿಸ್ತನ ದೀಕ್ಷಾಸ್ನಾನದ ಸಮಯದಲ್ಲಿ ದೇವರು ಆತನಿಗೆ ನುಡಿದ **"ಈತನು ಪ್ರಿಯನಾಗಿರುವ ನನ್ನ ಮಗನು"** (ಮತ್ತಾಯ 3:17) ಮಾತು ಸಹ ಕೀರ್ತನೆ 2 ಅನ್ನು ಪ್ರತಿಧ್ವನಿಸುತ್ತದೆ.

ಅಭಿಷಿಕ್ತನು (ವಚನ 2): ಅಭಿಷಿಕ್ತ ಅರಸನು. ಮೆಸ್ಸೀಯ ಎಂಬ ಪದ ಈ ಹೇಳಿಕೆಯಿಂದಲೇ ಬರುವುದಾಗಿದೆ ಮತ್ತು ಗ್ರೀಕ್ ಭಾಷಾಂತರವು ಕ್ರಿಸ್ತನು ಎಂಬುದಾಗಿದೆ.

ಚೀಯೋನೆಂಬ ನನ್ನ ಪರಿಶುದ್ಧ ಪರ್ವತ (ವಚನ 6): ಯೆರೂಸಲೇಮ್ ಮತ್ತು ಅಲ್ಲಿನ ದೇವಾಲಯ.

ಅವರನ್ನು ಒಡೆದು ಹಾಕುವಿ (ವಚನ 9): ಇಬ್ರಿಯ ಪದವು ಎರಡು ವಿಧದಲ್ಲಿ **"ಆಳುವುದು, ಕಾಯುವುದು"** ಅಥವಾ **"ಒಡೆದುಹಾಕುವುದು, ನಾಶಮಾಡುವುದು"** ಎಂಬುದಾಗಿ ಅರ್ಥೈಸಲ್ಪಡಬಹುದು. ಕನ್ನಡ ಭಾಷಾಂತರವು ಎರಡನೇ ಪದವನ್ನು ಉಪಯೋಗಿಸಿದೆ. ಗ್ರೀಕಿನ ಸೆಪ್ಟೂಜೆಂಟ್ ಭಾಷಾಂತರವು (ಪ್ರಕಟಣೆ 2:27, 12:5, 19:15 ರಲ್ಲೂ ಪ್ರತಿಬಿಂಬಿಸಲ್ಪಟ್ಟಿದೆ) ಮೊದಲ ಅರ್ಥವನ್ನು ಕೊಡುತ್ತದೆ.

ಮುದ್ದಿಡಿರಿ (ವಚನ 12): ಸಮರ್ಪಣೆ. ವಿಧೇಯತೆಯ ಸಂಕೇತ.

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವುದರೊಂದಿಗೆ ಈ ಕೀರ್ತನೆಯ ವಿವರಣೆಯನ್ನು ನಿಮ್ಮ ಸ್ವಂತ ಪದಗಳಿಂದ ಹೇಳಿರಿ:

   ಅ. ರಾಷ್ಟ್ರಗಳ ಕುರಿತು ನಾವು ಏನನ್ನು ಕಲಿಯುತ್ತೇವೆ?

   ಆ. ಕರ್ತನ ಕುರಿತು ನಾವು ಏನನ್ನು ಕಲಿಯುತ್ತೇವೆ?

   ಇ. ಅಭಿಷಿಕ್ತನ ಕುರಿತು ನಾವು ಏನನ್ನು ಕಲಿಯುತ್ತೇವೆ?

ಈ. ಕರ್ತನೊಂದಿಗೆ ಮತ್ತು ಆತನ ಮಗನೊಂದಿಗೆ ಸಂಬಂಧವನ್ನು ಇಟ್ಟುಕೊಂಡವರ ಕುರಿತು ನಾವು ಏನನ್ನು ಕಲಿಯುತ್ತೇವೆ?

3. ಈ ಕೀರ್ತನೆಯಲ್ಲಿ ಅದೇ ವ್ಯಕ್ತಿಯ ಕುರಿತು ಮೂರು ಪದವಿನ್ಯಾಸಗಳು ತಿಳಿಸಲ್ಪಟ್ಟಿವೆ (ವಚನ 2, 5, 6, 7), ಅವುಗಳು ಯಾವುವು?

4. ಮಗನಲ್ಲಿ ಆಶ್ರಯವನ್ನು ಹೊಂದಿದವರ ಕುರಿತು ಕೀರ್ತನೆಗಾರನು ಏನನ್ನು ಹೇಳುತ್ತಿದ್ದಾನೆ?

ಕೀರ್ತನೆ 2 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 12 ಹೇಗೆ ಕೀರ್ತನೆ 1:1–2 ರೊಂದಿಗೆ ಸಂಪರ್ಕವನ್ನು ಹೊಂದಿದೆ. ಈ ಒಂದು ಸಂಪರ್ಕವು ಇಡೀ ಪುಸ್ತಕದ ಪೀಠಿಕೆಯಾಗಿ ಕೀರ್ತನೆ 1 ಮತ್ತು 2 ಅನ್ನು ಹೇಗೆ ಅರ್ಥಮಾಡಿಕೊಳ್ಳಲು ಸಹಾಯವಾಗಿದೆ ಎಂಬುದನ್ನು ವಿವರಿಸಿರಿ.

2. ಈ ಕೀರ್ತನೆಯ ಕೆಲವು ಸಾಹಿತ್ಯದ ಅಂಶಗಳನ್ನು ಅಭ್ಯಾಸಿಸಿರಿ:

   ಅ. ವಚನ 3, 4 ಮತ್ತು 5 ರಲ್ಲಿನ ಸಮಾನಾಂತರತೆಯನ್ನು ವಿವರಿಸಿರಿ.

   ಆ. ವಚನ 3 ರಲ್ಲಿ ಕರ್ತನಿಗೂ ಮತ್ತು ಆತನ ಅಭಿಷಿಕ್ತನೊಂದಿಗೆ ತಮಗಿರುವ ಸಂಬಂಧದ ಕುರಿತು ಇತರೆ ರಾಷ್ಟ್ರಗಳ ಅರಸರು ಮಾತನಾಡುತ್ತಿದ್ದಾರೆ. ಅವರು ಯಾವ ರೂಪಾಲಂಕಾರವನ್ನು ಉಪಯೋಗಿಸುತ್ತಿದ್ದಾರೆ? ಅವರು ಹಾಗೆ ಹೇಳುವುದರ ಅರ್ಥವೇನು?

   ಇ. ವಚನ 4 ರಲ್ಲಿ ಕಂಡುಬರುವ **"ಪರಿಹಾಸ್ಯ ಮಾಡುವನು"** ಎಂಬ ವಿಶೇಷ ರೀತಿಯ ರೂಪಾಲಂಕಾರವನ್ನು ವಿವರಿಸಿರಿ.

   ಈ. ವಚನ 9 ರಲ್ಲಿ ಮೆಸ್ಸೀಯನ ಭವಿಷ್ಯದ ಆಳ್ವಿಕೆಯು ಎರಡು ರೂಪಾಲಂಕಾರಗಳಲ್ಲಿ ವಿವರಿಸಿಲ್ಪಟ್ಟಿದೆ. ಅವುಗಳು ಯಾವುವು? ಅವುಗಳ ಅರ್ಥದ ಕುರಿತು ನೀವು ಏನನ್ನು ಆಲೋಚಿಸುವಿರಿ?

   ಉ. ಈ ಕೀರ್ತನೆಯ ಅಲಂಕಾರಿಕ ಪ್ರಾರಂಭವನ್ನು ವಿವರಿಸಿರಿ.

   ಊ. ಈ ಕೀರ್ತನೆಯ ನಾಲ್ಕು ವಿಭಾಗಗಳು ನಾಲ್ಕು ದೃಷ್ಟಿಕೋನಗಳನ್ನು ತಿಳಿಸುತ್ತವೆ. ಹೇಗೆ ಎಂಬುದನ್ನು ವಿವರಿಸಿರಿ?

3. ಕೀರ್ತನೆ 2 **"ಮೆಸ್ಸೀಯನ ಕೀರ್ತನೆ"**ಗಳಲ್ಲಿ ಒಂದಾಗಿದ್ದು, ಹೊಸ ಒಡಂಬಡಿಕೆಯಲ್ಲಿ ಅನೇಕಸಾರಿ ಉಲ್ಲೇಖಿಸಲ್ಪಟ್ಟಿದೆ. ಈ ಕೆಳಗಿನ ವಾಕ್ಯಭಾಗಗಳನ್ನು ನೋಡಿರಿ. ಮತ್ತು ಯೇಸು ಕ್ರಿಸ್ತನ ಕುರಿತು ಬೋಧಿಸುವಾಗ ಹೊಸ ಒಡಂಬಡಿಕೆಯ ಬರಹಗಾರರು ಈ ಕೀರ್ತನೆಯನ್ನು ಹೇಗೆ ಉಲ್ಲೇಖಿಸಿದರು ಎಂಬುದನ್ನು ವಿವರಿಸಿರಿ?

   ಅ. ವಚನ 2: ಅಪೊ.ಕೃತ್ಯ. 4:25–26 (ಯೆರೂಸಲೇಮಿನ ವಿಶ್ವಾಸಿಗಳ ಪ್ರಾರ್ಥನೆ)

   ಆ. ವಚನ 7: ಮತ್ತಾಯ. 3:17 (ಯೇಸು ಕ್ರಿಸ್ತನ ದೀಕ್ಷಾಸ್ನಾನ), ಮತ್ತಾಯ. 4:3 (ಸೈತಾನನು ಯೇಸುವನ್ನು ಶೋಧಿಸುತ್ತಿರುವುದು), ಅಪೊ.ಕೃತ್ಯ. 13:33, 38 (ಪಿಸಿದ್ಯದ ಅಂತಿಯೋಕ್ಯದ ಸಭಾಮಂದಿರದಲ್ಲಿ ಪೌಲನು ಮಾತನಾಡುತ್ತಿರುವುದು), ಇಬ್ರಿಯ 1:5 ಮತ್ತು 5:5 (ಯೇಸು ಕ್ರಿಸ್ತನ ಗುರುತುಗಳು).

   ಇ. ವಚನ 8–9: ಪ್ರಕಟಣೆ 2:26–27 (ಜಯಿಸುವವರಿಗೆ ಯೇಸುವಿನ ವಾಗ್ದಾನ), ಪ್ರಕಟಣೆ 12:5 (ಆಕೆ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು), ಪ್ರಕಟಣೆ 19:15 (ಬಿಳಿಕುದುರೆಯನ್ನು ಏರಿಬಂದದ್ದು).

4. ಈ ಕೀರ್ತನೆಯು ಯಾವ ಕೀರ್ತನೆಯ ಗುಂಪಿಗೆ ಸೇರಿದೆ ಎಂಬುದನ್ನು ವಿವರಿಸಿರಿ.

ಕೀರ್ತನೆ 2 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯ ಬೆಳಕಿನಲ್ಲಿ:

   ಅ. ಆಶೀರ್ವದಿಸಿದವರಲ್ಲಿ ಭಾರತೀಯರು (ಅಥವಾ ಅದರ ನಾಯಕರು) ಯಾಕೆ ಭಾಗಿಯಾಗಿಲ್ಲ?

   ಆ. ಭಾರತ ದೇಶವನ್ನು ಆಶೀರ್ವಾದದ ಅಡಿಯಲ್ಲಿ ತರಲು ವೈಯಕ್ತಿಕವಾಗಿ ನೀನು ಮತ್ತು ನಿನ್ನ ಸಭೆ ಯಾವ ಕಾರ್ಯವನ್ನು ಮಾಡುತ್ತಿದ್ದೀರಿ?

2. ಭಾರತ ದೇಶ ಮತ್ತು ಅದರ ನಾಯಕರುಗಳಿಗಾಗಿ ಪ್ರಾರ್ಥಿಸಿರಿ. ಈ ರಾಷ್ಟ್ರವನ್ನು ದೇವರ ಆಶೀರ್ವಾದದ ಅಡಿಯಲ್ಲಿ ತರುವಲ್ಲಿ ನಿನ್ನನ್ನು ಮತ್ತು ನಿನ್ನ ಸಭೆಯನ್ನು ದೇವರು ಆಯುಧವಾಗಿ ಉಪಯೋಗಿಸಿಕೊಳ್ಳುವಂತೆ ಪ್ರಾರ್ಥಿಸಿರಿ.

ಕೀರ್ತನೆಗಳ ಪರಿಚಯ

ಪುಸ್ತಕದ ಹೆಸರು

ಇಬ್ರಿಯ ಸತ್ಯವೇದದಲ್ಲಿ ಕೀರ್ತನೆಗಳ ಪುಸ್ತಕವು **"ತೆಹಿಲ್ಲಿಮ್"** ಎಂದು ಕರೆಯಲ್ಪಟ್ಟಿದೆ. ಈ ಪದದ ಅರ್ಥ ಇಬ್ರಿಯದಲ್ಲಿ **"ಸ್ತುತಿಗಳು"** ಎಂದಾಗುತ್ತದೆ ಮತ್ತು ಹೆಚ್ಚಾಗಿ ಅ ಪುಸ್ತಕವು ಒಳಗೊಂಡಿರುವ ಸಂಗತಿಗಳನ್ನು ಇದು ಪ್ರತಿಬಿಂಬಿಸುತ್ತದೆ. ಕನ್ನಡ ಸತ್ಯವೇದದ ಭಾಷಾಂತರಕಾರರು ಈ ಪದವನ್ನು ಉಪಯೋಗಿಸಲು ಆರಿಸಿಕೊಂಡು ಪುಸ್ತಕದ ಶೀರ್ಷಿಕೆಗಾಗಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಆದರೆ ಇಂಗ್ಲೀಷಿನಲ್ಲಿ ಮತ್ತು ಇತರ ಅನೇಕ ಭಾಷೆಗಳಲ್ಲಿ ಪುಸ್ತಕದ ಹೆಸರು **"ಕೀರ್ತನೆಗಳು"** ಎಂದಿದೆ. ಈ ವಿಧಗಳು ಹಳೇ ಒಡಂಬಡಿಕೆಯ ಗ್ರೀಕ್ ಭಾಷಾಂತರ ಸೆಪ್ಟೂಜೆಂಟ್‌ನಿಂದ ಬಂದಿವೆ. ಮೂಲಾಧರದಲ್ಲಿ ಗ್ರೀಕಿನಲ್ಲಿ ಈ ಪದಗಳು ವೀಣೆ, ಕಿನ್ನರಿ, ಗಿಟಾರ್‌ನಂತಹ ವಿವಿಧ ಬಗೆಯ ತಂತಿ ವಾದ್ಯಗಳ ಕುರಿತಾಗಿ ಹೇಳಲಾಗಿದೆ. ಅದರ ನಂತರ ಈ ಪದಗಳು ಈ ವಾದ್ಯಗಳಿಗೆ ಹಾಡುವ ಹಾಡುಗಳ ಬಗ್ಗೆ ಸಹ ಉಪಯೋಗಿಸಲ್ಪಟ್ಟಿವೆ.

ಸ್ತುತಿಗೆ ಇಬ್ರಿಯ ಪದವು ಇಡೀ ಪುಸ್ತಕದ ಹೆಸರಾಗಿರಲು ಉಪಯೋಗಿಸಲ್ಪಟ್ಟರೂ ಸಹ ಈ ಪದವು ಕೇವಲ ಒಂದು ಕೀರ್ತನೆಯ ಶೀರ್ಷಿಕೆ ಆಗಿ ಮಾತ್ರ ಉಪಯೋಗಿಸಲ್ಪಟ್ಟಿದೆ. ಇದು 145ನೇ ಕೀರ್ತನೆ, ಇಲ್ಲಿ ಈ ಪದವು ಏಕವಚನ ರೂಪದಲ್ಲಿ ಉಪಯೋಗಿಸಲ್ಪಟ್ಟಿದೆ.

ಹೆಚ್ಚಿನ ಕೀರ್ತನೆಗಳು ಪ್ರಾರ್ಥನೆಯ ಕೀರ್ತನೆಗಳಾಗಿವೆ. ಕೀರ್ತನೆಯ ಆರಂಭವನ್ನು ನೀವು ಗಮನಿಸುವುದಾದರೆ ಇದನ್ನು ನೀವು ಸುಲಭವಾಗಿ ಗಮನಿಸಬಹುದು. ಒಂದು ಕೂತೂಹಲಕರ ವಚನ (ಇಲ್ಲಿಗೆ ಇಷಯನ ಮಗನಾದ ದಾವೀದನ ಪ್ರಾರ್ಥನೆಗಳ ಸಮಾಪ್ತಿ ಕೀರ್ತನೆ 72:20) ಕೀರ್ತನೆಗಳ ಪ್ರಾರಂಭಿಕ ಸಂಗ್ರಹಗಳ ಹಂತದಲ್ಲಿ ಪ್ರಾರ್ಥನೆಯ ಕೀರ್ತನೆಗಳ ಪ್ರತ್ಯೇಕವಾದ ಸಂಗ್ರಹಗಳು ಇದ್ದಿರಬಹುದೆಂಬುದನ್ನು ಪ್ರಕಟಿಸುತ್ತದೆ.

ಸಂಗ್ರಹ, ಜೋಡಣೆ ಮತ್ತು ದಿನಾಂಕ

ಕೀರ್ತನೆಗಳು ಹಾಡುಗಳು, ಕವನಗಳು, ಸ್ತುತಿಗಳು ಮತ್ತು ಪ್ರಾರ್ಥನೆಗಳ ಪ್ರಾರಂಭಿಕ ಚಿಕ್ಕ ಸಂಗ್ರಹಗಳ ಬೃಹತ್ ಸಂಗ್ರಹವಾಗಿದೆ. ಹಾಗಾಗಿ ಇಂದು ನಮ್ಮ ಸತ್ಯವೇದಗಳಲ್ಲಿ ನಾವು ಕಾಣುವುದನ್ನು (ಪುಸ್ತಕವು) ಶತಮಾನಗಳನ್ನು ತೆಗೆದುಕೊಂಡ ಪ್ರಕ್ರಿಯೆಯ ಒಂದು ಕೊನೆಯ ಹಂತವಾಗಿದೆ. ಈ ಪ್ರಶ್ನೆಯು ಬಹುಶಃ ಕ್ರಿ.ಪೂ. ಕೆಲವು ನೂರಾರು ವರುಷಗಳ ಹಿಂದೆ ಒಂದು ಮುಕ್ತಾಯಕ್ಕೆ ಬಂದಿರಬಹುದು. ಸಂಗ್ರಹ ಮತ್ತು ಜೋಡಣೆಯ ಕಾರ್ಯವು ಯೆರೂಸಲೇಮಿನಲ್ಲಿ ದೇವಾಲಯದೊಂದಿಗೆ ಭಾಗಿಯಾಗಿದ್ದ ಜನರಿಂದ ಅಗಿರಬಹುದು.

ಈ ಸಂಗ್ರಹವು ಇಸ್ರಾಯೇಲ್ ಜನರು ಬಾಬೆಲಿನಿಂದ ಹಿಂತಿರುಗಿದ ನಂತರ ಜೆರುಬ್ಬಾಬೆಲನ ನೇತೃತ್ವದಲ್ಲಿ ಕಟ್ಟಲ್ಪಟ್ಟು (ಇದು ಕ್ರಿ.ಪೂ. 516 ರಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು) ಯೇಸು ಕ್ರಿಸ್ತನ ಸಮಯದಲ್ಲಿ ಹೆರೋದ ಮಹಾಶಯನಿಂದ ಜೀರ್ಣೋದ್ಧಾರಗೊಂಡ ಎರಡನೇ ದೇವಾಲಯದಲ್ಲಿ ಆರಾಧನೆ ಮಾಡುವವರಾಗಿ ಒಂದು ಪ್ರಾರ್ಥನೆ ಮತ್ತು ಹಾಡಿನ ಪುಸ್ತಕವಾಗಿ ಉಪಯೋಗಿಸಲ್ಪಟ್ಟಿತು. ಇದು ಸಭಾಮಂದಿರಗಳಲ್ಲಿ ಸಹ ಉಪಯೋಗಿಸಲ್ಪಟ್ಟಿತು. ಆದರೆ ಇದಕ್ಕಿಂತ ಮಿಗಿಲಾಗಿ ಈ ದಿನ ನಾವು ಕಾಣುವ ಕೀರ್ತನೆಗಳು ಯೆಹೂದ್ಯರಿಂದ ಮತ್ತು ಅದನಂತರ ಕ್ರೈಸ್ತರಿಂದ ಒಂದು ವೈಯಕ್ತಿಕವಾದ ಪ್ರಾರ್ಥನಾ ಪುಸ್ತಕವಾಗಿ ಸಹ ಉಪಯೋಗಿಸಲ್ಪಟ್ಟದೆ.

ಯೇಸು ಮತ್ತು ಪೇತ್ರನು ಇದನ್ನು ಕೀರ್ತನೆ ಗ್ರಂಥವೆಂದು ಸೂಚಿಸಿದ್ದಾರೆ. **"ದಾವೀದನು ಆತನನ್ನು ಒಡೆಯನೆಂದು ಹೇಳಿದ ಮೇಲೆ ಆತನು ಅವನಿಗೆ ಮಗನಾಗುವುದು ಹೇಗೆ ಎಂದು ಅವರನ್ನು ಕೇಳಿದನು"** (ಲೂಕ 20:41–42). ಸ್ವತಃ ದಾವೀದನೇ ಇದನ್ನು ಕೀರ್ತನೆ ಗ್ರಂಥದಲ್ಲಿ ಹೇಳಿರುತ್ತಾನೆ. ಮತ್ತು ಪೇತ್ರನು ಕೀರ್ತನೆಗಳ ಗ್ರಂಥದಲ್ಲಿ ಬರೆಯಲ್ಪಟ್ಟಿದೆ (ಅಪೊ.ಕೃತ್ಯ. 1:20) ಎಂದು ಹೇಳುತ್ತಾನೆ.

ಹೊಸ ಒಡಂಬಡಿಕೆಯ ಕಾಲದಲ್ಲಿ ಕೀರ್ತನೆಗಳನ್ನು ಇಬ್ರಿಯ ಸತ್ಯವೇದದ ಮೂರು ಮತ್ತು ಕಡೆಯ ವಿಭಾಗಕ್ಕೆ ಶೀರ್ಷಿಕೆಯಾಗಿ ಸಹ ಉಪಯೋಗಿಸಲಾಗುತಿತ್ತು. ಇದು **"ತರುವಾಯ ಆತನು – ನಾನು ನಿಮ್ಮ ಸಂಗಡ ಇದ್ದಾಗ ಇದೆಲ್ಲಾ ನಿಮಗೆ ತಿಳಿಸಲಿಲ್ಲವೇ? ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವುದೆಲ್ಲಾ ನೆರವೇರುವುದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ"** ಅಂದನು (ಲೂಕ 24:44). ಇದಕ್ಕೆ ಕಾರಣ ಕೀರ್ತನೆಗಳ ಗ್ರಂಥವು ಗ್ರಂಥಗಳಲ್ಲೇ ಅತೀ ದೀರ್ಘವಾದ ಮತ್ತು ಅತ್ಯಧಿಕವಾಗಿ ಓದಲ್ಪಟ್ಟ ಗ್ರಂಥವಾಗಿತ್ತು.

ಸಂಗೀತಗಳು, ಪದ್ಯಗಳು, ಹಾಡುಗಳು ಮತ್ತು ಪ್ರಾರ್ಥನೆಗಳ ಪ್ರಾರಂಭಿಕ ಸಂಗ್ರಹಗಳು ಬಹುಶಃ ಕ್ರಿ.ಪೂ. 950 ರ ಸೊಲೊಮೋನನ ದೇವಾಲಯದ ಪ್ರಾರಂಭಿಕ ವರ್ಷಗಳಿಗೆ ಸೇರಿದವುಗಳಾಗಿವೆ. ಅದು ದೇವಾಲಯದ ಪೂಜಾಪದ್ಧತಿಯು ಪ್ರಾರಂಭವಾಗುವಾಗಲೇ ಇತ್ತು. ಈ ಮೊದಲೇ ಪ್ರಸ್ತಾಪಿಸಿದಂತೆ ಅಲ್ಲಿ "ದಾವೀದನ ಪ್ರಾರ್ಥನೆಗಳು" ಸಂಗ್ರಹ ಸಹ ಇತ್ತು. ಅಲ್ಲದೆ ಕೀರ್ತನೆಗಳಲ್ಲಿ ನೇರವಾಗಿ ತಿಳಿಸಲ್ಪಟ್ಟ ಇತರೇ ಸಂಗ್ರಹಗಳು ಸಹ ಅಲ್ಲಿವೆ;

- "ಕೋರಹೀಯರ ಪದ್ಯಗಳು" (ಕೀರ್ತನೆ 42–49, 84–85, ಮತ್ತು 87–88)
- ಆಸಾಫನ ಕೀರ್ತನೆಗಳು (ಕೀರ್ತನೆ 50, 73 ರಿಂದ 83)
- ಯಾತ್ರಾಗೀತೆಗಳು (ಕೀರ್ತನೆ 120–134).

ಇತರ ಬೇರೆ ಸಂಗ್ರಹಗಳ ಸೂಚನೆಗಳು ಸಹ ಇಲ್ಲಿವೆ.

- ಪುಸ್ತಕ 1 (ಕೀರ್ತನೆ 1–41) ದೇವರನ್ನು ಸೂಚಿಸಲು ಕರ್ತನು (ಇಬ್ರಿಯದಲ್ಲಿ ಯೆಹೋವನು) ಎಂಬುವುದಕ್ಕೆ ಒತ್ತು ಕೊಡುತ್ತದೆ.

  ಪುಸ್ತಕ 2 (ಕೀರ್ತನೆ 42–72) "ದೇವರು" ಎಂದು ಉಪಯೋಗಿಸಲಾಗಿದೆ (ಇಬ್ರಿಯದಲ್ಲಿ "ಎಲೋಹಿಮ್").
- ಕೀರ್ತನೆ 111–118 ಇದು "ಹಲ್ಲೆಲೂಯಾ" ಕೀರ್ತನೆಗಳ ಒಂದು ಸರಣಿಯಾಗಿದೆ. ಈ ಕೀರ್ತನೆಗಳನ್ನು ಪಸ್ಕಹಬ್ಬದ ಭೋಜನ ಮತ್ತು ಯೇಸುವಿನ ಸಮಯದಲ್ಲಿ ಇತರೇ ಧಾರ್ಮಿಕ ಹಬ್ಬಗಳಲ್ಲಿ ಹಾಡಲಾಗುತ್ತಿತ್ತು.
- ಕೀರ್ತನೆ 138–145 ಶೀರ್ಷಿಕೆಗಳಲ್ಲಿ "ದಾವೀದನು" ಎಂದಿವೆ ಮತ್ತು ದಾವೀದನ ಕೀರ್ತನೆಗಳ ಸಂಗ್ರಹಗಳಾಗಿ ಕಂಡು ಬರುತ್ತವೆ. ಮಧ್ಯದಲ್ಲಿನ 6 ಕೀರ್ತನೆಗಳು. "ಪ್ರಾರ್ಥನೆಯ ಕೀರ್ತನೆಗಳಾಗಿರುವಾಗ ಮೊದಲ ಮತ್ತು ಕೊನೆಯ ಕೀರ್ತನೆಯು ಸ್ತುತಿಯ ಹಾಡಾಗಿದೆ/ ಸ್ತೋತ್ರ ಗೀತವಾಗಿದೆ.

ಇದರ ಕಡೆಯ ಸಂಚಿಕೆಯಲ್ಲಿ ಕೀರ್ತನೆಗಳು ಗ್ರಂಥವು 150 ಕೀರ್ತನೆಗಳನ್ನು ಒಳಗೊಂಡಿದೆ. ಗ್ರೀಕ್ ಭಾಷಾಂತರ ಮತ್ತು ಇಬ್ರಿಯ ಪಠ್ಯಗಳಲ್ಲಿ ಸಹ ನಾವು ಇದೇ ಸಂಖ್ಯೆಯ ಕೀರ್ತನೆಗಳನ್ನು ಕಾಣುತ್ತೇವೆ. ಆದರೆ ಕೆಲವು ವ್ಯತ್ಯಾಸಗಳನ್ನು ಕಾಣುತ್ತೇವೆ. ಪ್ರಸ್ತಕದ ಕೊನೆಯಲ್ಲಿ "ಸೆಪ್ಟುಜೆಂಟ್" ಒಂದು ಹೆಚ್ಚುವರಿ ಕೀರ್ತನೆಯನ್ನು ಕೀರ್ತನೆ 9–10 ಮೂಲತಃ ಸೆಪ್ಟುಜೆಂಟ್‌ನಲ್ಲಿ ಒಂದೇ ಕೀರ್ತನೆ ಆಗಿದೆ. ಆದರೆ ಇಬ್ರಿಯ ಪಠ್ಯದಲ್ಲಿ ಎರಡಾಗಿದೆ. ಗ್ರೀಕ್ ಮತ್ತು ಇಬ್ರಿಯ ಪಠ್ಯಗಳಲ್ಲಿ ಕೀರ್ತನೆ 42 ಮತ್ತು 43 ಬೇರೆ ಬೇರೆಯಾಗಿದೆ. ಮೂಲತಃ ಇವೆರಡು ಒಂದೇ ಕೀರ್ತನೆಯ ಭಾಗಗಳಾಗಿವೆ.

ಈ 150 ಕೀರ್ತನೆಗಳು 5 ಪುಸ್ತಕಗಳಾಗಿ ಜೋಡಿಸಲ್ಪಟ್ಟಿವೆ. (ಕೀರ್ತನೆ 1–40, ಕೀರ್ತನೆ 42–72, ಕೀರ್ತನೆ 73–89, ಕೀರ್ತನೆ 90– 106, ಕೀರ್ತನೆ 107–150)

1. ಇಸ್ರಾಯೇಲ್ಯರ ದೇವರಾದ ಯೆಹೋವನಿಗೆ ಯುಗಯುಗಾಂತರಗಳ ವರೆಗೂ ಕೊಂಡಾಟವಾಗಲಿ. ಆಮೆನ್. ಆಮೆನ್. (ಕೀರ್ತನೆ 41:13).
2. ಮಹತ್ಕಾರ್ಯಗಳನ್ನು ನಡೆಸುವುದರಲ್ಲಿ ಅದ್ವಿತೀಯನೂ ಇಸ್ರಾಯೇಲ್ಯರ ದೇವರೂ ಆದ ಯೆಹೋವ ದೇವರಿಗೆ ಸ್ತೋತ್ರವು. ಆತನ ಪ್ರಭಾವವುಳ್ಳ ನಾಮಕ್ಕೆ ಸದಾಕಾಲವು ಪ್ರಣಾಮವಿರಲಿ; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿರಲಿ. ಆಮೆನ್, ಆಮೆನ್. (ಕೀರ್ತನೆ 72: 18–19). ಅನಂತರ ಈ ಹೆಚ್ಚುವರಿ ಮಾಹಿತಿಯು ಕಂಡುಬರುತ್ತದೆ: ಇಲ್ಲಿಗೆ ಇಷಯನ ಮಗನಾದ ದಾವೀದನ ಪ್ರಾರ್ಥನೆಗಳ ಸಮಾಪ್ತಿ (ವಚನ 20).
3. ಯೆಹೋವನಿಗೆ ಸದಾಕಾಲವು ಕೊಂಡಾಟವಾಗಲಿ ಆಮೆನ್, ಆಮೆನ್. (ಕೀರ್ತನೆ 89:52).
4. ಇಸ್ರಾಯೇಲ್ ದೇವನಾದ ಯೆಹೋವನಿಗೆ ಯುಗಯುಗಾಂತರಗಳ ವರೆಗೂ ಕೊಂಡಾಟವಾಗಲಿ; ಸರ್ವಜನರೂ ಆಮೆನ್ ಎನ್ನಲಿ. ಯಾಹುವಿಗೆ ಸ್ತೋತ್ರ! (ಕೀರ್ತನೆ 106:48).
5. ಯಾಹುವಿಗೆ ಸ್ತೋತ್ರ! ದೇವರನ್ನು ಆತನ ಪರಿಶುದ್ಧಾಲಯದಲ್ಲಿ ಸ್ತುತಿಸಿರಿ; ಆತನ ಶಕ್ತಿಪ್ರದರ್ಶಕವಾದ ಆಕಾಶ ಮಂಡಲದಲ್ಲಿ ಆತನನ್ನು ಸ್ತುತಿಸಿರಿ. ಆತನ ಮಹಾತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಿರಿ; ಆತನ ಮಹಾ ಪ್ರಭಾವಕ್ಕೆ ಸರಿಯಾಗಿ ಆತನನ್ನು ಸ್ತುತಿಸಿರಿ. ಕೊಂಬೂದುತ್ತಾ ಆತನನ್ನು ಸ್ತುತಿಸಿರಿ; ಸ್ವರಮಂಡಲ ಕಿನ್ನರಿಗಳಿಂದ ಆತನನ್ನು ಸ್ತುತಿಸಿರಿ. ದಮ್ಮಡಿಬಡಿಯುತ್ತಾ ಕುಣಿಯುತ್ತಾ ಆತನನ್ನು ಸ್ತುತಿಸಿರಿ; ತಂತೀವಾದ್ಯಗಳಿಂದಲೂ ಕೊಳಲುಗಳಿಂದಲೂ ಆತನನ್ನು ಸ್ತುತಿಸಿರಿ. ತಾಳದಿಂದ ಆತನನ್ನು ಸ್ತುತಿಸಿರಿ; ಝಲ್ಲರಿಯಿಂದ ಆತನನ್ನು ಸ್ತುತಿಸಿರಿ. ಶ್ವಾಸವಿರುವುದೆಲ್ಲವೂ ಯೆಹೋವನನ್ನು ಸ್ತುತಿಸಲಿ; ಯಾಹುವಿಗೆ ಸ್ತೋತ್ರ! (ಕೀರ್ತನೆ 150).

ಯೆಹೂದಿ ಬರಹಗಾರರು ಕೀರ್ತನೆಗಳ 5 ಪುಸ್ತಕಗಳನ್ನು ಈ ರೀತಿ ವಿವರಿಸಿದ್ದಾರೆ: "ಮೋಶೆಯು ಇಸ್ರಾಯೇಲ್ಯರಿಗೆ ಐದು ಪುಸ್ತಕಗಳನ್ನು" ಕೊಟ್ಟನು (ಧರ್ಮಶಾಸ್ತ್ರವನ್ನು ಸೂಚಿಸಿ) ಮತ್ತು ದಾವೀದನು ಇಸ್ರಾಯೇಲ್ಯರಿಗೆ ಕೀರ್ತನೆಗಳ 5 ಪುಸ್ತಕಗಳನ್ನು ಕೊಟ್ಟನು. ಹಾಗಾಗಿ ಅಲ್ಲಿ ಧರ್ಮಶಾಸ್ತ್ರ ಮತ್ತು ಕೀರ್ತನೆಗಳ ನಡುವೆ ಒಂದು ರೀತಿಯ ಸಮತೋಲನ ಅಥವಾ ಸಂಬಂಧ ಇತ್ತೆಂಬುದಾಗಿ ಅವರು ಪರಿಗಣಿಸುತ್ತಾರೆ. ಕೀರ್ತನೆಗಳು ಕೆನಾನ್‌ನ ಅತೀ ಪ್ರಾಮುಖ್ಯ ಭಾಗವಾಗಿ ಯೆಹೂದಿ ಪಂಡಿತರು ಪರಿಗಣಿಸಿದ್ದಾರೆ ಎಂಬುದನ್ನು ಈ ಹೇಳಿಕೆಯು ತೋರಿಸುತ್ತದೆ. ಇದನ್ನು ಅವರು "ಬರಹಗಳು/ ಗ್ರಂಥಗಳು" ಎಂದು ಕರೆಯುವರು.

ಒಂದು ಜ್ಞಾನದ ಪುಸ್ತಕ

ಕೀರ್ತನೆಗಳ ಈ ಕೊನೆಯ ಆವೃತ್ತಿಯು, ಪುಸ್ತಕವು ಒಂದು ಐಕ್ಯವಾಗಿದೆ ಎಂಬುದಕ್ಕೆ ಸ್ಪಷ್ಟವಾದ ಆಲೋಚನೆಯಾಗಿದೆ. ಇದು ಪೀಠಿಕೆಯೊಂದಿಗೆ ಪ್ರಾರಂಭವಾಗುತ್ತದೆ (ಕೀರ್ತನೆ 1 ಮತ್ತು 2). ಪುಸ್ತಕವು ಹೇಗೆ ಅರ್ಥೈಸಲ್ಪಡಬೇಕು ಎಂಬದರ ಬಗ್ಗೆ ಇದು ಓದುಗರಿಗೆ ತಿಳಿಸುತ್ತದೆ.

- ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವ ವ್ಯಕ್ತಿಯು "ಧನ್ಯನು" ಎಂಬುದಾಗಿ ಒಂದನೇಯ ಕೀರ್ತನೆಯು ಘೋಷಿಸುತ್ತದೆ. ಈ ಪಠ್ಯದಲ್ಲಿ "ಧರ್ಮಶಾಸ್ತ್ರ" ಎಂಬ ಪದವು ಬಹುಶಃ ಎರಡು ವಿಧದಲ್ಲಿ ಅರ್ಥೈಸಲ್ಪಡುತ್ತದೆ:

  ಒಂದು ವಿಧದಲ್ಲಿ ಇದು ಸಾಂಪ್ರದಾಯಿಕ ಅರ್ಥದಲ್ಲಿ ಎಲ್ಲಾ ದೇವರ ವಿಧಿಗಳಿಗಾಗಿನ ಆಯ್ದ ಒಂದು ಹೆಸರಾಗಿ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. ಇನ್ನೊಂದು ವಿಧದಲ್ಲಿ ಇದು ಇಲ್ಲಿ ಉಪಯೋಗಿಸಲ್ಪಟ್ಟ "ತೋರಾ" ಎನ್ನುವ (ಸಲಹೆಗಳು) ಇಬ್ರಿಯ ಪದದ ಮೂಲ ಅರ್ಥವನ್ನು ಸೂಚಿಸುತ್ತದೆ. ಹಾಗಾಗಿ ಸಂಯೋಜಕರು ಸಂಶಯವಿಲ್ಲದೆ ಕೀರ್ತನೆಗಳು ಮನುಷ್ಯರ ಮಾತುಗಳ ರೂಪದಲ್ಲಿದ್ದರೂ (ಪ್ರಾರ್ಥನೆಗಳು, ಸ್ತುತಿಗೀತೆಗಳು, ಹಾಡುಗಳು ಮತ್ತು ಸ್ತೋತ್ರಗಳು) ಸಹ ಅವು ದೇವರ ಮಾತಾಗಿರಬೇಕೆಂದು ಅಶಿಸಿದ್ದಾರೆ.

- ಎರಡನೇ ಕೀರ್ತನೆಯು "ಅರಸ" ಮತ್ತು "ಕರ್ತನ" ಕುರಿತಾಗಿದೆ. ಇವೆರೆಡರ ಸಂಯೋಗವು ಮಹತ್ತರವಾದದ್ದಾಗಿದೆ. ಅರಸನು ಎಂಬ ಸಂಗತಿಯು ಕೀರ್ತನೆಯನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಕೀರ್ತನೆಯೊಂದಿಗೆ ಸಂಬಂಧ ಹೊಂದಿರುವ ಅರಸನಾದ ದಾವೀದನೊಂದಿಗೆ ಸಂಬಂಧವನ್ನು ಕಲ್ಪಿಸುತ್ತದೆ. "ಪರಲೋಕದಲ್ಲಿ ಆಸೀನನಾಗಿರುವ ಕರ್ತನು" (ವಚನ 4) ಎಂಬ ಹೇಳಿಕೆಯು ಕೀರ್ತನೆಯಲ್ಲಿ ಆರಾಧಿಸಲ್ಪಟ್ಟ ದೇವರು ಸೃಷ್ಟಿಕರ್ತನು ಮತ್ತು ಇಡೀ ಲೋಕದ ಕರ್ತನು ಎಂಬುದನ್ನು ಸೂಚಿಸುತ್ತದೆ.

ಈ ಎರಡು ಕೀರ್ತನೆಗಳ ಒಟ್ಟು ಸಂದೇಶವು – ದೇವರ ಉಪದೇಶ ಸ್ವೀಕರಿಸಲು ಮತ್ತು ಈ ಕೀರ್ತನೆಗಳಲ್ಲಿ ಪ್ರಕಟಿಸಲ್ಪಟ್ಟ ದೇವರು ಇಡೀ ಜಗತ್ತನ್ನು ಆಳುವವನಾಗಿದ್ದಾನೆಂಬುದನ್ನು ಅರಿತುಕೊಳ್ಳುವುದಕ್ಕಾಗಿ ಪ್ರತಿಯೊಬ್ಬ ಓದುಗನಿಗೆ ಒಂದು ಆಮಂತ್ರಣ/ ಆಹ್ವಾನವಾಗಿದೆ. ಈ ಪುಸ್ತಕದ ಕೊನೆಯ ಕೀರ್ತನೆಯು (ಕೀರ್ತನೆ 150) "ಶ್ವಾಸವಿರುವುದರೆಲ್ಲದರ" ಕರ್ತನಿಗೆ ಒಂದು ಸ್ತುತಿಗೀತೆಯಾಗಿದೆ.

ಕೀರ್ತನೆಯ ಪೀಠಿಕೆಯು (ಕೀರ್ತನೆ 1 ಮತ್ತು 2 ಒಟ್ಟಾಗಿ) ಇದು ಒಂದು ಓದುವ ಪುಸ್ತಕವಾಗಿ ಮಾಡಲ್ಪಟ್ಟಿದೆ ಎಂಬುದನ್ನು ತಿಳಿಸುತ್ತದೆ. ಅಂತಿಮ ಉತ್ಪನ್ನವಾಗಿ ಇಂದು ನಮ್ಮ ಸತ್ಯವೇದಗಳಲ್ಲಿ ಇರುವ ಇದು ಒಂದು ಜ್ಞಾನದ ಪುಸ್ತಕವಾಗಿದ್ದು, ಇದು ನೀತಿವಂತರಿಗೆ ದೇವರ ಮಾರ್ಗದರ್ಶನ ಮತ್ತು ದೇವರು ಸಾರ್ವಭೌಮ ಅಧಿಪತಿಯಾಗಿದ್ದಾನೆಂಬ ಅಂಶಗಳನ್ನು ಒಳಗೊಂಡಿದೆ. ಈ ಪುಸ್ತಕದುದ್ದಕ್ಕೂ ವಿಧೇಯತೆಯಿಂದ ಸ್ತುತಿಗೆ ಒಂದು ಚಲನೆಯನ್ನು –ದೇವರಿಗೆ ವಿದೇಯರಾಗುವುದು ಆತನಿಗೆ ಮಹಿಮೆ ಮತ್ತು ಸ್ತೋತ್ರವನ್ನು ಅರ್ಪಿಸುವುದಾಗಿರುತ್ತದೆ ಎಂಬುದನ್ನು ಕಾಣಬಹುದು.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಪೀಠಿಕೆ ಅಧ್ಯಾಯದ ವಿಭಿನ್ನ ವಿಭಾಗಗಳ ವಾಕ್ಯಭಾಗಗಳಲ್ಲಿ ಸುಲಭವಾಗಿ ಕಾಣಬಹುದು. ಅಲ್ಲಿ ನೋಡುವುದಕ್ಕಿಂತ ಮುನ್ನ ಈ ಪ್ರಶ್ನೆಗಳಿಗೆ ಉತ್ತರಿಸಲು ನೀವು ಪ್ರಯತ್ನಿಸಿದರೆ ಇನ್ನು ಹೆಚ್ಚಾಗಿ ಕಲಿಯುವಿರಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿದರೆ ಒಳ್ಳೆಯದು.

1. ಕೀರ್ತನೆಗಳು ಪುಸ್ತಕದ ಇಂಗ್ಲೀಷ್ ಹೆಸರೇನು ಮತ್ತು ಇದರ ಅರ್ಥವೇನು?
2. ಈ ಪುಸ್ತಕಕ್ಕಾಗಿನ ಕನ್ನಡದ ಹೆಸರು ಎಲ್ಲಿಂದ ಬಂದಿದೆ?

3. ಈ ಪುಸ್ತಕದ ಕನ್ನಡದ ಹೆಸರು ಸೂಕ್ತವಾದದ್ದು ಅಥವಾ ಸೂಕ್ತವಲ್ಲದ್ದು ಎಂಬುದಾಗಿ ನೀವು ಯೋಚಿಸುವಿರಾ? ವಿವರಿಸಿರಿ.
4. ಕೀರ್ತನೆ 72:20 ರಿಂದ ನಾವು ಯಾವ ಮುಕ್ತಾಯವನ್ನು ಹೊರತರಬಹುದು.
5. ಕೀರ್ತನೆಗಳ ಪುಸ್ತಕವು ಯಾವ ಬಗೆಯ ಪುಸ್ತಕವಾಗಿದೆ?
6. ಕೀರ್ತನೆಗಳ ಪುಸ್ತಕದ ಕಡೆಯ ಆವೃತ್ತಿಯು (ಇಂದು ನಮ್ಮಲ್ಲಿರುವ ಪುಸ್ತಕ) ಯಾವಾಗ ಪೂರ್ಣಗೊಂಡಿತ್ತು?
7. ಕೀರ್ತನೆಗಳ ಕಡೆಯ ಆವೃತ್ತಿಯಲ್ಲಿ ಸೇರಿಸಲಾದ ವಾಕ್ಯಭಾಗಗಳ ಸಂಗ್ರಹಗಳು ಯಾವುವು?
8. ಕೀರ್ತನೆಗಳನ್ನು ಎಷ್ಟು ಪುಸ್ತಕಗಳನ್ನಾಗಿ (ಭಾಗಗಳಾಗಿ) ಜೋಡಿಸಲಾಗಿದೆ? ಈ ಪ್ರತೀ ಪುಸ್ತಕಗಳು ಹೇಗೆ ಅಂತ್ಯಗೊಳ್ಳುತ್ತವೆ?
9. ಕೀರ್ತನೆಗಳನ್ನು ಒಟ್ಟುಗೂಡಿಸುವ ಈ ಪುಸ್ತಕಗಳ ಸಂಖ್ಯೆಯ ಮಹತ್ವವೇನು?
10. ಹಳೇ ಒಡಂಬಡಿಕೆಯ ಸಮಯಗಳಲ್ಲಿ ಕೀರ್ತನೆಗಳನ್ನು ಒಂದು ಪುಸ್ತಕವಾಗಿ ಅನೇಕ ವಿಧಗಳಲ್ಲಿ ಉಪಯೋಗಿಸಲಾಗಿದೆ. ಹೇಗೆ?
11. ಹೊಸ ಒಡಂಬಡಿಕೆಯ ಸಮಯದಲ್ಲಿ ಕೀರ್ತನೆಗಳು ಹೇಗೆ ಉಪಯೋಗಿಸಲ್ಪಟ್ಟಿವೆ?
12. ಕೇವಲ ಕೀರ್ತನೆಗಳ ಪುಸ್ತಕದ ಕುರಿತಾಗಿ ಅಲ್ಲದೇ ಬೇರೆ ಸಂಗತಿಗಳ ಕುರಿತಾಗಿ ಸಹ ಯೇಸು ಕ್ರಿಸ್ತನು **"ಕೀರ್ತನೆಗಳು"** ಎಂಬ ಹೇಳಿಕೆಯನ್ನು ಉಪಯೋಗಿಸಿದನು. ಅವು ಏನು?
13. ಕೀರ್ತನೆಗಳ ಗ್ರೀಕಿನ ಸೆಪ್ಟೂಜೆಂಟ್ ಭಾಷಾಂತರ ಮತ್ತು ಕೀರ್ತನೆಗಳ ಇಬ್ರಿಯ ಆವೃತ್ತಿಯು ವಿಭಿನ್ನವಾಗಿ ಕೊನೆಗೊಳ್ಳುತ್ತದೆ. ಹೇಗೆ?
14. ಕೀರ್ತನೆ 1 ಮತ್ತು 2 ಅನ್ನು ಇಡೀ ಪುಸ್ತಕಕ್ಕೆ ಪೀಠಿಕೆಯಾಗಿ ಏಕೆ ಅರ್ಥೈಸಿಕೊಳ್ಳಬಹುದು ಎಂಬುದನ್ನು ವಿವರಿಸಿರಿ.
15. ಕೀರ್ತನೆಗಳ ಪುಸ್ತಕದ ಕೊನೆಯ ಆವೃತ್ತಿ ನಮ್ಮ ಸತ್ಯವೇದಗಳಲ್ಲಿ ಒಂದು ಜ್ಞಾನದ ಪುಸ್ತಕವನ್ನಾಗಿ ನಾವು ಹೊಂದಿರುತ್ತೇವೆ. ಹೇಗೆಂದು ವಿವರಿಸಿರಿ?

ಕೀರ್ತನೆ ಅಧ್ಯಯನಗಳು

ಒಟ್ಟು 150 ಕೀರ್ತನೆಗಳ ವಿವರವಾದ ಅಧ್ಯಯನವನ್ನು ಈ ರೀತಿಯ ಪಠ್ಯಪುಸ್ತಕದಲ್ಲಿ ಸೇರಿಸುವುದು ಅಷ್ಟು ಸುಲುಭದ ಮಾತಲ್ಲ. ಬದಲಾಗಿ ಕೆಲವು ನಿಗಧಿತ ಕೀರ್ತನೆಗಳ ಮೇಲೆ ಅಧ್ಯಯನವನ್ನು ಸಿದ್ಧಪಡಿಸಲು ನಾನು ಆರಿಸಿಕೊಂಡಿದ್ದೇನೆ (ಹೆಚ್ಚು ಕಡಿಮೆ 35).

ಈ ಅಧ್ಯಯನವು ಎಲ್ಲಾ ಪ್ರಾಮುಖ್ಯ ಕೀರ್ತನೆಗಳ ಬಗೆಗಳಿಂದ ಕೀರ್ತನೆಗಳನ್ನು ಒಳಗೊಂಡಿದೆ:

- ಪ್ರಲಾಪಗಳು: ಕೀರ್ತನೆ 3, ಕೀರ್ತನೆ 4, ಕೀರ್ತನೆ 6, ಕೀರ್ತನೆ 27, ಕೀರ್ತನೆ 38, ಕೀರ್ತನೆ 40, ಕೀರ್ತನೆ 42–43, ಕೀರ್ತನೆ 51, ಕೀರ್ತನೆ 102, ಕೀರ್ತನೆ 126, ಕೀರ್ತನೆ 130, ಕೀರ್ತನೆ 137, ಕೀರ್ತನೆ 143.
- ಸ್ತೋತ್ರ ಮತ್ತು ಕೃತಜ್ಞತಾ ಗೀತೆಗಳು: ಕೀರ್ತನೆ 8, ಕೀರ್ತನೆ 19, ಕೀರ್ತನೆ 32, ಕೀರ್ತನೆ 34, ಕೀರ್ತನೆ 40, ಕೀರ್ತನೆ 103, ಕೀರ್ತನೆ 105, ಕೀರ್ತನೆ 11, ಕೀರ್ತನೆ 138, ಕೀರ್ತನೆ 145.
- ಜ್ಞಾನದ ಕೀರ್ತನೆಗಳು ಮತ್ತು ದೇವರ ಧರ್ಮಶಾಸ್ತ್ರವನ್ನು ಆಚರಿಸುವ ಸ್ತುತಿಗೀತೆಗಳು: ಕೀರ್ತನೆ 1, ಕೀರ್ತನೆ 19, ಕೀರ್ತನೆ 34, ಕೀರ್ತನೆ 37, ಕೀರ್ತನೆ 73, ಕೀರ್ತನೆ 112, ಕೀರ್ತನೆ 127.
- ಭರವಸೆಯ ಹಾಡುಗಳು: ಕೀರ್ತನೆ 4, ಕೀರ್ತನೆ 16, ಕೀರ್ತನೆ 23, ಕೀರ್ತನೆ 27, ಕೀರ್ತನೆ 91, ಕೀರ್ತನೆ 102, ಕೀರ್ತನೆ 130, ಕೀರ್ತನೆ 139.
- ರಾಜ ವರ್ಣನೆ ವೈಭವದ ಕೀರ್ತನೆಗಳು, ಚೀಯೋನಿನ ಗೀತೆಗಳು ಮತ್ತು ಯಾತ್ರಾರ್ಥಿಗಳ ಕೀರ್ತನೆಗಳು: ಕೀರ್ತನೆ 2, ಕೀರ್ತನೆ 46, ಕೀರ್ತನೆ 84, ಕೀರ್ತನೆ 110, ಕೀರ್ತನೆ 126, ಕೀರ್ತನೆ 127, ಕೀರ್ತನೆ 130.
- ಐತಿಹಾಸಿಕ ಕೀರ್ತನೆ: ಕೀರ್ತನೆ 105.

ಅಸೈನ್‌ಮೆಂಟ್

9 ಮತ್ತು 10 ನೇ ಕೀರ್ತನೆಯನ್ನು ಓದಿರಿ. ಈ ಎರಡೂ ಕೀರ್ತನೆಗಳು ಮೂಲತಃ ಒಂದೇ ಕೀರ್ತನೆಯಾಗಿದ್ದಾವೆ ಎಂಬುದನ್ನು ಈ ಪಠ್ಯದಿಂದ ನಾವು ಹೇಗೆ ತಿಳುಕೊಳ್ಳಬಹುದು?

ಗ್ರಂಥ ಪರಿಚಯ

ಕೀರ್ತನೆ ಮೇಲೆ ಒಂದು ಅಧ್ಯಯನವನ್ನು ನಾನು ಸಿದ್ಧಪಡಿಸಿದಾಗ ಕೆಳಕಂಡ ಪುಸ್ತಕಗಳು ನನಗೆ ಸಹಾಯಕವಾಗಿದ್ದವು.

ಪರಿಚಯ: **ಎನ್‌ಐವಿ ಅಧ್ಯಯನ ಸತ್ಯವೇದ**ದಲ್ಲಿ **ಕೀರ್ತನೆಗಳು**

ಇಎಸ್‌ವಿ ಅಧ್ಯಯನ ಸತ್ಯವೇದದಲ್ಲಿ **ಕೀರ್ತನೆಗಳ ಪರಿಚಯ**

ಮೈಕಲ್ ವಿಲ್ಕಾಕ್ ಅವರಿಂದ **ಕೀರ್ತನೆಗಳ ಸಂದೇಶ** (2 ಸಂಪುಟಗಳು) (ದ ಬೈಬಲ್ ಸ್ಪೀಕ್ಸ್ ಟುಡೇ ಸರಣಿ)

ಹೆಲ್ಮರ್ ರಿಂಗ್‌ಗ್ರೇನ್ ಅವರಿಂದ **ಸಾಲ್ಟರೆನ್** (ಸಂಪುಟಗಳು) (ದ ಕೆಜಿಟಿ ಸರಣಿ)

ಗೋರ್ಡನ್ ಡಿ. ಫೀ ಮತ್ತು ಡೌಗ್ಲಾಸ್ ಸ್ಟುವರ್ಟ್ ಅವರಿಂದ **ಸತ್ಯವೇದವನ್ನು ಹೇಗೆ ಓದುವುದು**.

ಕೀರ್ತನೆ 3

ಪೀಠಿಕೆ ಮತ್ತು ಟಿಪ್ಪಣಿಗಳು

ಇದು ದಾವೀದನಿಗೂ ಮತ್ತು ಆತನ ಮಗನಾದ ಅಬ್ಷಾಲೋಮನ ನಡುವೆ ಏನಾಯಿತೆಂಬುದನ್ನು ಇದು ಸೂಚಿಸುತ್ತದೆ (ನೋಡಿ, 2 ಸಮುವೇಲ. 15:13–17:22).

ಈ ಕೀರ್ತನೆಯು ಒಂದು ವ್ಯಕ್ತಿಗತ ಪ್ರಲಾಪವಾಗಿದೆ ಮತ್ತು ಇದು ಈ ರೀತಿಯ ಕೀರ್ತನೆಯ ಕೆಲವು ಲಕ್ಷಣಗಳನ್ನು ತೋರಿಸುತ್ತದೆ: ದೇವರು ಸಂಬೋಧಿಸಲ್ಪಟ್ಟಿದ್ದಾನೆ, ದಾವೀದನು ತನ್ನ ವ್ಯಥೆಯನ್ನು ವರ್ಣಿಸುತ್ತಾನೆ ಮತ್ತು ದೇವರಿಗೆ ವಿರೋಧವಾಗಿ ಒಂದು ದೂರನ್ನು ಮುಂದಿಡುತ್ತಾನೆ. ದಾವೀದನು ದೇವರಲ್ಲಿನ ತನ್ನ ಭರವಸೆಯನ್ನು ವ್ಯಕ್ತಪಡಿಸುತ್ತಾನೆ ಮತ್ತು ಬಿಡುಗಡೆಗಾಗಿ ದೇವರಿಗೆ ಮನವಿಮಾಡುತ್ತಾನೆ. ಇದು ಒಂದು ಸಕಾರಾತ್ಮಕವಾದ ಮತ್ತು ನೀರೀಕ್ಷೆಯ ಗುರುತಿನೊಂದಿಗೆ ಅಂತ್ಯಗೊಳ್ಳುತ್ತದೆ.

ಸೆಲಾ (ವಚನ 2): ಈ ಪದದ ಅರ್ಥವು ಅನಿಶ್ಚಿತವಾಗಿದೆ, ಬಹುಶಃ ಇದೊಂದು ಸಂಗೀತದ ವಿಧವಾಗಿದೆ.

ನನ್ನ ತಲೆಯನ್ನು ಎತ್ತುವಂತೆ ಮಾಡುವವನು (ವಚನ 3): ಇದು ದೇವರು ದಾವೀದನಿಗೆ ಜಯವನ್ನು ಕೊಡುವನೆಂಬುದನ್ನು ಸೂಚಿಸುತ್ತದೆ(ಕೀರ್ತನೆ 27:6 ರೊಂದಿಗೆ ಹೋಲಿಸಿ).

ಪರಿಶುದ್ಧಪರ್ವತ (ವಚನ 4): ದೇವರು ವಾಸಿಸುವ ಯೆರೂಸಲೇಮಿನಲ್ಲಿನ ದೇವಾಲಯವಾಗಿದೆ (ಕೀರ್ತನೆ 26:8 ರೊಂದಿಗೆ ಹೋಲಿಸಿ). ಹಿನ್ನೆಲೆಯ ಸನ್ನಿವೇಶವನ್ನು ನೆನಪಿಸಿ ಕೊಳ್ಳಿರಿ: ದಾವೀದನು ಯೆರೂಸಲೇಮಿನಲ್ಲಿಲ್ಲ, ಆತನ ಮಗನಾದ ಅಬ್ಷಾಲೋಮನು ದಂಗೆಯೆದ್ದಾಗ ಅಲ್ಲಿಂದ ಓಡಿಹೋಗಿದ್ದಾನೆ. ವಚನ 4–5 ಮತ್ತು ಕ್ರಿಯಾಪದ ಕಾಲಗಳು. ಇಬ್ರಿಯ ಪಠ್ಯದಲ್ಲಿ ವಚನ 4 – "ಮೊರೆಯಿಡು" ಮತ್ತು "ಸದುತ್ತರ" "ಅನುಗ್ರಹಿಸುತ್ತಾನೆ" ಎಂಬ ಎರಡು ಕ್ರಿಯಾಪದಗಳನ್ನು ಒಳಗೊಂಡಿದೆ.

ವಚನ 4–5 ಮತ್ತು ಕ್ರಿಯಾಪದಗಳು: ಅವು "ಮಲಗಿಕೊಂಡು" "ನಿದ್ದೆಮಾಡು" "ಎಚ್ಚರಗೊಂಡೆನು" ಮತ್ತು "ಸುಖವಾಗಿ" ಎಂಬ ನಾಲ್ಕು ಕ್ರಿಯಾಪದಗಳನ್ನು ಒಳಗೊಂಡಿದೆ. ಅನುವಾದಕನು 3 ಸಮಸ್ಯೆಗಳನ್ನು ಎದುರಿಸುತ್ತಾನೆ: 1. ಇಬ್ರಿಯದಲ್ಲಿ ಕೇವಲ ಎರಡೇ ಕಾಲಗಳಿವೆ. ಅಧುನಿಕ ಭಾಷೆಗಳು ಕನಿಷ್ಠ ಪಕ್ಷ 3 ಕಾಲಗಳನ್ನು ಹೊಂದಿವೆ (ಭೂತ, ವರ್ತಮಾನ, ಭವಿಷ್ಯತ್). 2. ಆಧುನಿಕ ಭಾಷೆಗಳಲ್ಲಿರುವ ಕಾಲಗಳಂತೆ ಇಬ್ರಿಯ ಕಾಲಗಳು ಸಹ ಅದೇ ರೀತಿಯ ಕೆಲಸವನ್ನು ಹೊಂದಿವೆ. ಅವು ಸಮಯವನ್ನು ಸೂಚಿಸುವುದಿಲ್ಲ, ಆದರೆ ಸಂಪೂರ್ಣತೆಯನ್ನು ಸೂಚಿಸುತ್ತವೆ. 3. ಈ ಎರಡು ವಚನಗಳಲ್ಲಿ, ದಾವೀದನು ಪರಿಣಾಮಕಾರಿ ಮತ್ತು ಪ್ರಯೋಜನಕಾರಿಯನ್ನು ಸೇರಿಸಿದ್ದಾನೆ "ಮೊರೆ" ಎನ್ನುವುದು ಮತ್ತು "ಸದುತ್ತರವು" ಆಗಿದೆ. ಮಲಗಿಕೊಳ್ಳು ಮತ್ತು ಎಚ್ಚರಗೊಳ್ಳುವುದು ಆಗಿದೆ. ನಿದ್ದೆಮಾಡಿ ಮತ್ತು ಸುಖವಾಗಿ ಎನ್ನುವುದು ಪ್ರಾಚೀನ ಇಬ್ರಿಯದಲ್ಲಿ ಸಮಯವನ್ನು ಸೂಚಿಸುವ ಕಾಲಗಳ ಕೊರತೆಯು ಹಳೇ ಒಡಂಬಡಿಕೆ ಪಠ್ಯ ಅಧುನಿಕ ಓದುಗರಿಗೆ ಎರಡು ಪರಿಣಾಮಗಳನ್ನು ಹೊಂದಿರುತ್ತವೆ: 1. ಸತ್ಯವೇದ ಭಾಷಾಂತರಗಳ ನಡುವೆ ಕ್ರಿಯಾಪದ ಕಾಲಗಳು ವಿಭಿನ್ನವಾಗಿರುವಾಗ ನಾವು ಅಚ್ಚರಿಗೊಳ್ಳಬಾರದು (ಉದಾ: ವಚನ 5 **ಪವಿತ್ರ ಗ್ರಂಥ**ದಲ್ಲಿ ಮತ್ತು **ಪವಿತ್ರ ಬೈಬಲ್**ನಲ್ಲಿ). 2. ಒಂದು ಪಠ್ಯವನ್ನು ನಾವು ಅತ್ಮೀಕವಾಗಿ ಅರ್ಥವಿವರಣೆ ಮಾಡಬಾರದು. ಆಗ ಮೂಲ ಇಬ್ರಿಯ ಪಠ್ಯವು ಅದನ್ನು ಬೆಂಬಲಿಸಿದ ರೀತಿಯಲ್ಲಿ ಇದಕ್ಕೆ ನಾವು ಸಮಯವನ್ನು ಇಟ್ಟು ಓದುತ್ತೇವೆ.

ಎದ್ದು ಬಂದು (ವಚನ 7): ಅರಣ್ಯಕಾಂಡ 10:35 ರಲ್ಲಿನ ಮೋಶೆಯ ಮಾತುಗಳೊಂದಿಗೆ ಹೋಲಿಸಿರಿ.ಈ ಲೋಕದಲ್ಲಿ ಪ್ರಾಮುಖ್ಯ ಪಾತ್ರವನ್ನು ತೆಗೆದುಕೊಳ್ಳಬೇಕೆಂದು ದೇವರನ್ನು ಕೇಳಿಕೊಳ್ಳುವಾಗ "ಎದ್ದು ಬಂದು" ಎಂಬ ಮಾನವೀಕರಣವನ್ನು ಉಪಯೋಗಿಸಲಾಗಿದೆ. ತನ್ನ ಪರಿಸ್ಥಿತಿಯ ಬಗ್ಗೆ ಏನಾದರೂ ಮಾಡಬೇಕೆಂದು ದಾವೀದನು ದೇವರನ್ನು ಬೇಡಿಕೊಳ್ಳುತ್ತಾನೆ.

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?

2. ದಾವೀದನು ನಿಜವಾಗಿಯೂ ಕರ್ತನನ್ನೇ ಆಶ್ರಯಿಸಿಕೊಂಡಿದ್ದೇನೆ ಎಂದು ತೋರಿಸಲು ಯಾವ ಉದಾಹರಣೆಯನ್ನು ಬಳಸುತ್ತಾನೆ (ವಚನ 5–6)?
3. ದೇವರು ದಾವೀದನಿಗೆ ಎಲ್ಲಿಂದ ಉತ್ತರಿಸುತ್ತಾನೆ?
4. ದೇವರು ತನ್ನ ವೈರಿಗಳನ್ನು ಹೇಗೆ ಶಿಕ್ಷಿಸಬೇಕೆಂದು ದಾವೀದನು ಬಯಸುತ್ತಾನೆ?

ಕೀರ್ತನೆ 3 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವ್ಯಾಖ್ಯಾನಕಾರರು ಈ ಕೀರ್ತನೆಯ ವಿವಿಧ ಸನ್ನಿವೇಶಗಳನ್ನು ಪ್ರಸ್ತುತಪಡಿಸಿದ್ದಾರೆ, ಉದಾಹರಣೆಗೆ:
   ಅ. ದಾವೀದನು ಶತ್ರುಗಳಿಂದ ಆರೋಪಗಳನ್ನು ಎದುರಿಸುತ್ತಾನೆ ಮತ್ತು ಈಗ ತನ್ನ ಪ್ರಕರಣವನ್ನು ನ್ಯಾಯಾಧೀಶನಾದ ದೇವರ ಮುಂದೆ ತರುತ್ತಿದ್ದಾನೆ.
   ಆ. ದಾವೀದನು ಅನೇಕ ಶತ್ರುಗಳೊಂದಿಗೆ ಯುದ್ಧವನ್ನು ಎದುರಿಸುತ್ತಿದ್ದಾನೆ ಮತ್ತು ಈಗ ದೇವರ ಸಹಾಯವನ್ನು ಕೇಳುತ್ತಿದ್ದಾನೆ.
   ಈ ಮೇಲಿನ ಎರಡು ತರ್ಜುಮೆಗಳಲ್ಲಿ ಯಾವುದು ಸರಿಯಾದದ್ದೆಂದು ನೀವು ಆಲೋಚಿಸುತ್ತೀರಿ? ಯಾಕೆ?
2. ಕರ್ತನೊಂದಿಗೆ ತನ್ನ ಸಂಬಂಧವನ್ನು ವಿವರಿಸಲು ದಾವೀದನು ಯಾವ ರೂಪಾಲಂಕಾರವನ್ನು ಬಳಸುತ್ತಾನೆ (ವಚನ 3)? ದಾವೀದನು ಬಹುಶಃ ಏನು ಅರ್ಥೈಸುತ್ತಾನೆ ಎಂಬುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
3. ಕರ್ತನು ತನ್ನ ಶತ್ರುಗಳನ್ನು ಬಹಳ ಕಠಿಣ ರೀತಿಯಲ್ಲಿ ಶಿಕ್ಷಿಸಬೇಕೆಂದು ದಾವೀದನು ಬಯಸುತ್ತಾನೆ (ವಚನ 7). ನಿಮ್ಮ ಸ್ವಂತ ಶತ್ರುಗಳ ಮೇಲೆ ದೇವರ ದೈಹಿಕ ಶಿಕ್ಷೆಗಾಗಿ ಪ್ರಾರ್ಥಿಸುವ ಈ ವಿಧಾನದ ಬಗ್ಗೆ ನಿಮಗೆ ಏನು ಅನಿಸುತ್ತದೆ?
4. ಈ ಕೀರ್ತನೆಯ ಕೆಲವು ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಕುರಿತು ಅಧ್ಯಯನ ಮಾಡಿರಿ:
   ಅ. ವಚನ 7 ರಲ್ಲಿನ ಸಮಾನಾಂತರತೆಗಳನ್ನು ನೀವು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ?
   ಆ. ಈ ಕೀರ್ತನೆಯಲ್ಲಿ "ನಿರೂಪಕನು" ಯಾರು?
   ಇ. ನಾವು ಯಾವುದೇ ರೀತಿಯ ಸಂಭಾಷಣೆಯನ್ನು ಕಂಡುಕೊಳ್ಳುತ್ತೇವೆಯೇ? ಅಥವಾ ವಿಭಿನ್ನ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸಲಾಗಿದೆಯೇ?
5. ಈ ಕೀರ್ತನೆಯ ಭಾವ/ಸ್ವರವನ್ನು ನೀವು ಹೇಗೆ ನಿರೂಪಿಸುತ್ತೀರಿ?
6. ಕೀರ್ತನೆಯಲ್ಲಿ ದೈವಶಾಸ್ತ್ರವನ್ನು ನೀವು (ದೇವರ ಕುರಿತು ದಾವೀದನ ತಿಳುವಳಿಕೆ) ಹೇಗೆ ವಿವರಿಸುತ್ತೀರಿ?
7. ನಿಮ್ಮ ಸೇವೆಯಲ್ಲಿ ಕೀರ್ತನೆ 3 ಮತ್ತು ಈ ಅಧ್ಯಯನವನ್ನು ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

ಕೀರ್ತನೆ 3 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯಲ್ಲಿ ದಾವೀದನಂತೆ ನೀವು ಎಂದಾದರೂ ವೈರಿಗಳಿಂದ ಧಾಳಿಗೆ ಒಳಗಾಗಿರುವಿರೆಂದು (ಅಥವಾ ಕಷ್ಟ ಮತ್ತು ಬೆದರಿಕೆಯ ಸನ್ನಿವೇಶಗಳಿಂದ) ಭಾವಿಸಿರುವಿರಾ? ಆತನ ಬಿಡುಗಡೆಗಾಗಿ ಎಲ್ಲಿ ನೀವು ದೇವರಲ್ಲಿ ಭರವಸವಿಡಲು ಸಾಧ್ಯವಾಯಿತು? ಹೇಗೆ ದೇವರು ನಿಮ್ಮನ್ನು ಬಿಡಿಸಿದನು? ಯಾವ ರೀತಿಯಲ್ಲಿ ದೇವರ ಸಹಾಯ ಮತ್ತು ಬಿಡುಗಡೆಯು ನಿಮ್ಮ ನಂಬಿಕೆಯನ್ನು ಬಲಪಡಿಸಿತು? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
2. ಈ ಕೀರ್ತನೆಯಲ್ಲಿ, "ದೇವರು ಪರಿಶುದ್ಧಪರ್ವತ" (ವಚನ 4) ದಿಂದ ದಾವೀದನಿಗೆ ಉತ್ತರಿಸಿದನು. ದೇವರು ನಿಮಗೆ ಎಲ್ಲಿಂದ ಉತ್ತರಿಸಿದನು? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
3. ನಿಮಗಾಗಿ ಮತ್ತು ನಿಮ್ಮ ಕುಟುಂಬಕ್ಕಾಗಿ ಪ್ರಾರ್ಥಿಸಿರಿ:
   ಅ. ರಕ್ಷಣೆ ಮತ್ತು ಬಿಡುಗಡೆಗಾಗಿ ದೇವರ ಬಲದಲ್ಲಿ ಆಳವಾದ ಭರವಸೆಯನ್ನು ನಿಮಗೆ ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ.

೮. ಕಷ್ಟದ ಸನ್ನಿವೇಶಗಳಲ್ಲಿ ರಾತ್ರಿ ಸಮಯಗಳಲ್ಲಿ ಒಳ್ಳೆಯ ಮತ್ತು ಸುಖವಾದ ನಿದ್ದೆಯನ್ನು ಮಾಡಲು, ದೇವರು ಎಲ್ಲಾಪರಿಸ್ಥಿತಿಗಳಲ್ಲಿ ತನ್ನ ನಿಯಂತ್ರಣದಲ್ಲಿರುತ್ತಾನೆಂದು ಭರವಸೆಯಲ್ಲಿ ಪ್ರತಿದಿನ ಸಹ ಬದುಕಲು ಸಹಾಯಿಸುವಂತೆ ಮನಶಾಂತಿಯನ್ನು ಅನುಗ್ರಹಿಸಲು ದೇವರನ್ನು ಬೇಡಿಕೊಳ್ಳಿರಿ.

ಶಪಿಸುವ ಕೀರ್ತನೆಗಳು

ಕೆಲವು ಕೀರ್ತನೆಗಳು ವೈರಿಗಳೆಡೆಗೆ ಸೇಡಿನಿಂದ ತುಂಬಿರುವ ಭಾವನೆಗಳನ್ನು ಒಳಗೊಂಡಿವೆ. ಈ ಕೀರ್ತನೆಗಳು ಶಪಿಸುವ ಕೀರ್ತನೆಗಳೆಂದು ಕರೆಯಲ್ಪಟ್ಟಿವೆ. ಯಾಕೆಂದರೆ ಅವು ಒಂದು ರೀತಿಯ ಶಾಪವನ್ನು ಒಳಗೊಂಡಂತೆ ಕಾಣುತ್ತದೆ. ಕೆಲವು ವಾಕ್ಯಭಾಗಗಳಲ್ಲಿ ಸಾಮಾನ್ಯವಾಗಿ ಪ್ರಲಾಪಗಳಲ್ಲಿ ಕೀರ್ತನೆಗಾರನು ತನ್ನ ವೈರಿಗಳನ್ನು ಅಥವಾ ದೇವರ ವೈರಿಗಳನ್ನು ಶಪಿಸುವುದನ್ನು ಕಾಣಬಹುದು. ಉದಾಹರಣೆಗೆ ಕೀರ್ತನೆ 2:9, ಕೀರ್ತನೆ 69:22–28, ಕೀರ್ತನೆ 109:6–15, ಕೀರ್ತನೆ 137:7–9 ಅನ್ನು ನೋಡಿರಿ.

ಕೀರ್ತನೆ 137:7–9

ಯೆಹೋವನೇ, ಎದೋಮ್ಯರ ಹಾನಿಗಾಗಿ ಯೆರೂಸಲೇಮಿನ ನಾಶನದಿನವನ್ನು ನೆನಪು ಮಾಡಿಕೋ.

ಅವರು– ಅದನ್ನು ಹಾಳು ಮಾಡಿರಿ, ಅಸ್ತಿವಾರಸಹಿತ ಹಾಳುಮಾಡಿರಿ ಎಂದು ಹೇಳಿದರಲ್ಲಾ.

ಹಾಳಾಗುವದಕ್ಕಿರುವ ಬಾಬೆಲ್ ಪಟ್ಟಣವೇ,

ನೀನು ನಮಗೆ ಮಾಡಿದ್ದಕ್ಕೆ ಮುಯ್ಯಿಸಲ್ಲಿಸುವವನು ಧನ್ಯನು.

ನಿನ್ನ ಮಕ್ಕಳನ್ನು ಹಿಡಿದು ಬಂಡೆಗೆ ಅಪ್ಪಳಿಸುವವನು ಭಾಗ್ಯಹೊಂದಲಿ.

ಟಿಪ್ಪಣಿಗಳು

ಕೀರ್ತನೆ 137 ಬಾಬೆಲಿಗೆ ಸೆರೆಯಾದ ಸಮಯದಲ್ಲಿ ಬಾಬೆಲಿನಲ್ಲಿ ವಾಸಿಸಿದ ಇಸ್ರಾಯೇಲ್ಯರ ಬಾಧೆಗಾಗಿನ ಒಂದು ಪ್ರಲಾಪವಾಗಿದೆ. ಯೆರೂಸಲೇಮು ನಾಶವಾಗಿ ಅವರ ದೇಶವು ಬಾಬೆಲಿನವರಿಂದ ಆಕ್ರಮಿಸಲ್ಪಟ್ಟಿತು. ಒಡಂಬಡಿಕೆಯ ಶಾಪಗಳಿಗನುಸಾರವಾಗಿ ಕೀರ್ತನೆಗಾರನು ಅವರ ಮೇಲೆ ನ್ಯಾಯತೀರ್ಪನ್ನು ಕೇಳಿಕೊಳ್ಳುತ್ತಾನೆ. ಈ ಒಡಂಬಡಿಕೆಯ ಶಾಪಗಳು ಇಡೀ ದುಷ್ಟ ಸಮಾಜದ ನಾಶನದ ಆಯ್ಕೆಯನ್ನು ಒಳಗೊಂಡಿವೆ.

ಮನೆಯ ಹೊರಗೆ ಕತ್ತಿಯೂ ಒಳಗೆ ಭಯವೂ ಇರುವವು.

ಯೌವನಸ್ಥರು, ಕನ್ಯೆಯರು, ಮೊಲೆಕೂಸುಗಳು, ನೆರೆತಲೆಯವರು

ಇವರೆಲ್ಲರೂ ಕತ್ತಿಯಿಂದ ಕೊಲ್ಲಲ್ಪಡುವರು

(ಧರ್ಮೋ. 32:25)

ಕೀರ್ತನೆ 137 ರಲ್ಲಿ ಕೀರ್ತನೆಗಾರನು ಬಾಧೆ ಪಡುತ್ತಿರುವ ಇಸ್ರಾಯೇಲ್ಯರ ಭಾವನೆಗಳ ಬಗ್ಗೆ ದೇವರಿಗೆ ಹೇಳುತ್ತಿದ್ದಾನೆ. ಇದಕ್ಕಾಗಿ ಆತನು ಅರ್ತಿಯೋಕ್ರಿಯ ಭಾಷೆಯನ್ನು ನಾವು ಸ್ವತಃ ಒಡಂಬಡಿಕೆಯ ಶಾಪಗಳಲ್ಲಿ ಕಾಣಬಹುದು (ಧರ್ಮೋ. 32:25). "ಬಾಬೆಲ್ ಪಟ್ಟಣವೇ" ಎಂಬುದು ಕೀರ್ತನೆಗಾರನು ಬಾಬೆಲಿನವರಿಗೆ ನೇರವಾಗಿ ಹೇಳಿದಂತೆ ತೋರುತ್ತದೆ. ಆದರೆ ಈ ರೀತಿಯಾಗಿ ಹೇಳುವುದು ಅಥವಾ ಸಂಬೋಧಿಸುವುದು ಒಂದು ಅಲಂಕಾರವಾಗಿದೆ. ನಿಜವಾಗಿ ಹೇಳಬೇಕೆಂದರೆ ಇಲ್ಲಿ ಕೀರ್ತನೆಗಾರನು ದೇವರನ್ನು ಪ್ರಾರ್ಥಿಸುತ್ತಾನೆ ಮತ್ತು ದೇವರು ಆತನ ಕೋಪದ ಮಾತನ್ನು ಕೇಳುತ್ತಾನೆ. ಈ ರೀತಿಯ ಪದಗಳನ್ನು ಪ್ರಲಾಪದ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಇದು ಕೀರ್ತನೆಗಾರನಿಗೆ ತನ್ನ ಜನರ ಹಿಂಸಕರಾದ ಬಾಬೆಲಿನಿಯನ್ನರ ವಿರುದ್ಧ ತನ್ನ ಕೋಪವನ್ನು ತಾಳಿಕೊಳ್ಳಲು ಇರುವ ಒಂದು ವಿಧವಾಗಿದೆ.

ನಮಗೆ ಕೋಪ ಬಂದಾಗೆಲ್ಲ ಶಪಿಸುವ ಕೀರ್ತನೆಗಳು ನಮಗೆ ಸಹಾಯಕವಾಗಬಲ್ಲವು. ಅವು ಕೋಪದಲ್ಲಿ ನಾವು ಸಿಟ್ಟಿಗೇಳದಂತೆ ಮತ್ತು ದೇವರೇ ಹಿಂಸಕರನ್ನು ನೋಡಿಕೊಳ್ಳುವಂತೆ ಅನುಮತಿಸುವುದಾಗಿದೆ. ನಮಗೆ ಹಾನಿಯನ್ನುಂಟು ಮಾಡುವವರ ವಿರುದ್ಧವಾಗಿ ಆತನೇ ನ್ಯಾಯವನ್ನು ಒದಗಿಸುತ್ತಾನೆ. ಹಾಗಾಗಿ ಈ ಕೀರ್ತನೆಗಳ ಸರಿಯಾದ ಉಪಯೋಗವು ಕೆಟ್ಟತನಕ್ಕೆ ಸೋತು ಹೋಗದಂತೆ ಅಲ್ಲ, ಆದರೆ ನಮ್ಮ ಕೋಪದಿಂದ ನಮಗೆ ಬಿಡುಗಡೆಯನ್ನು ಕೊಡಲು ಸಹಾಯ ಮಾಡುವುದಾಗಿದೆ. ಆ ಮೂಲಕ ನಾವು ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸಬಹುದು (ರೋಮಾ 12:21)

ಪ್ರಶ್ನೆಗಳು

ಮೇಲ್ಕಂಡ ವಾಕ್ಯಭಾಗದಲ್ಲಿ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬಹುದು. ಆದರೆ ಅಲ್ಲಿ ನೋಡದೆ ಈ ಪ್ರಶ್ನೆಗಳನ್ನು ಉತ್ತರಿಸಲು ನೀವು ಪ್ರಯತ್ನಿಸಿದರೆ ನೀವು ಇನ್ನೂ ಹೆಚ್ಚಾಗಿ ಕಲಿಯುವಿರಿ. ಸಾಧ್ಯವಾದಷ್ಟು ನಮ್ಮದೇ ಪದಗಳನ್ನು ಉಪಯೋಗಿಸಿರಿ.

1. "ಶಪಿಸುವ ಕೀರ್ತನೆಗಳು" ಎಂದರೇನು?
2. ಅತಿಶಯೋಕ್ತಿ ಮತ್ತು ಅರ್ಥಿಯೋಕ್ರಿ ರೀತಿಯ ಪದಗಳನ್ನು ವಿವರಿಸಿರಿ.
3. "ಬಾಬೆಲ್ ಪಟ್ಟಣವೇ" ಎಂಬ ಶಬ್ದಾಲಂಕಾರದ ಅರ್ಥವೇನಿರಬಹುದು?
4. ಕೀರ್ತನೆಗಾರನು ಕೀರ್ತನೆ 137:8–9 ರಲ್ಲಿ ಹೇಗೆ ತರ್ಕಿಸುತ್ತಿದ್ದಾನೆ ಎಂಬುದನ್ನು ವಿವರಿಸಿರಿ.
5. ಈ ರೀತಿಯ "ಶಾಪವು" ಧರ್ಮಶಾಸ್ತ್ರದಲ್ಲಿ ಒಂದು ಹಿನ್ನಲೆಯನ್ನು ಹೊಂದಿದೆ. ಹೇಗೆಂದು ವಿವರಿಸಿರಿ.
6. ಈ ರೀತಿಯ "ಶಪಿಸುವ" ವಾಕ್ಯಭಾಗಗಳು ಇಂದು ನಮಗೆ ಹೇಗೆ ಉಪಯುಕ್ತವಾಗಿವೆ ಎಂಬುದನ್ನು ವಿವರಿಸಿರಿ.

ಅಸೈನ್‌ಮೆಂಟ್: ಶಪಿಸುವ ಕೀರ್ತನೆಗಳು

ಕೀರ್ತನೆ 109:6–15 ಅನ್ನು ಓದಿರಿ. ಯಾಕೆ ಈ ವಚನಗಳು ಶಪಿಸುವ ಕೀರ್ತನೆಯ ಭಾಗವಾಗಿವೆ? ಹಾಗೆಯೇ ಈ ರೀತಿಯ ಕೀರ್ತನೆಗಳು ನಮ್ಮ ಪ್ರಾರ್ಥನಾ ಜೀವಿತದಲ್ಲಿ ಹೇಗೆ ನಮಗೆ ಸಹಾಯಿಸುತ್ತವೆಂದು ವಿವರಿಸಿರಿ.

ತಲೆಬರಹಗಳು ಮತ್ತು ಗ್ರಂಥಕರ್ತತ್ವ

ತಲೆಬರಹವು ಒಂದು ರೀತಿಯ ಶಿರೋನಾಮೆ ಅಥವಾ ಶೀರ್ಷಿಕೆಯಾಗಿದೆ. ಇದು ಇಬ್ರಿಯ ಸತ್ಯವೇದದಲ್ಲಿ ಯೇಸು ಕ್ರಿಸ್ತನ ನಂತರ ಅನೇಕ ವರ್ಷಗಳ ನಂತರ **"ಮಾಸೋರೆಟ್ಸ್"** ಎಂದು ಕರೆಯಲ್ಪಡುವ ಯೆಹೂದಿ ಪಂಡಿತರಿಂದ ಸೇರಿಸಲ್ಪಟ್ಟಿದೆ.ಕೇವಲ ಕೀರ್ತನೆ 34 ಮತ್ತು 150 ಮಾತ್ರ ತಲೆಬರಹವನ್ನು ಹೊಂದಿಲ್ಲ. ನಮ್ಮ ಅಧುನಿಕ ಸತ್ಯವೇದ ಅನುವಾದಗಳು ಇಬ್ರಿಯ ಸತ್ಯವೇದದ್ದಾಗಿದೆ, ಆದರೆ ಅವು ತಲೆಬರಹಗಳನ್ನು ಪ್ರತಿಪಾದಿಸುವ ರೀತಿ ವಿಭಿನ್ನವಾಗಿವೆ. ಇಂಗ್ಲೀಷಿನ **ಎನ್ಐವಿ** ಅದನ್ನು ಭಾಷಾಂತರಿಸಿದೆ. ಇಂಗ್ಲೀಷಿನ **ಇಎಸ್ವಿ** ಅವುಗಳಿಗೆ ಶೀರ್ಷಿಕೆಯನ್ನು ಸೇರಿಸಿದೆ. ಕನ್ನಡದಲ್ಲಿ **ಪವಿತ್ರ ಗ್ರಂಥ** ಪ್ರತೀ ಕೀರ್ತನೆಗೂ ಸಹ ಒಂದೊಂದು ರೀತಿಯ ಶೀರ್ಷಿಕೆಯನ್ನು ಹೊಂದಿದೆ. ಅದೇ ರೀತಿ **ಸತ್ಯವೇದದಲ್ಲೂ** ಇದೆ. ಆದರೆ **ಪವಿತ್ರ ಬೈಬಲ್** ಕೇವಲ ಶೀರ್ಷಿಕೆಗಳನ್ನು ಒಳಗೊಂಡಿದೆ ಆದರೆ ತಲೆಬರಹವನ್ನು ಹೊಂದಿಲ್ಲ.

ಕ್ರಿಸ್ತನಿಗಿಂತ ಕೆಲವು ನೂರು ವರ್ಷಗಳ ಹಿಂದೆ ಮಾಡಲ್ಪಟ್ಟ ಕೀರ್ತನೆಗಳ ಸೆಪ್ಟೂಜೆಂಟ್ ಗ್ರೀಕ್ ಭಾಷಾಂತರದಲ್ಲಿ ಕೇವಲ 17 ಕೀರ್ತನೆಗಳು ತಲೆಬರಹವನ್ನು ಹೊಂದಿಲ್ಲ. ಅಲ್ಲದೆ ಗ್ರೀಕಿನ ಕೆಲವು ತಲೆಬರಹಗಳು ಇಬ್ರಿಯ ಪಠ್ಯದಲ್ಲಿರುವವುಗಳಿಗಿಂತ ದೀರ್ಘವಾಗಿವೆ. ಇಬ್ರಿಯ ಮತ್ತು ಗ್ರೀಕ್ ಪಠ್ಯಗಳ ನಡುವಿನ ವ್ಯತ್ಯಾಸಗಳಿಂದ ನಾವು ಮೂರು ಮುಕ್ತಾಯಗಳನ್ನು ಹೊರತರಬಹುದು:

1. ತಲೆಬರಹಗಳು ಮೂಲ ಕೀರ್ತನೆಗಳ ಭಾಗವಲ್ಲ, ಆದರೆ ಅವು ನಂತರ ಸಂಪಾದಕರಿಂದ ಸೇರಿಸಲ್ಪಟ್ಟವುಗಳಾಗಿವೆ.
2. ವಾಸ್ತವಾಂಶವೆಂದರೆ ಸೇರಿಸಲ್ಪಟ್ಟ ತಲೆಬರಹಗಳು ಕೀರ್ತನೆಯ ತಿದ್ದುಪಡಿಯ ಇತಿಹಾಸದ ಕೆಲವು ಅಂಶಗಳಲ್ಲಿ ಓದುಗನಿಗೆ ಹಿನ್ನೆಲೆ ಮಾಹಿತಿಯ ಅವಶ್ಯಕತೆಯನ್ನು ಹೊಂದಿರುವರೆಂಬುದನ್ನು ತೋರಿಸುತ್ತದೆ. ಇನ್ನೊಂದು ಕಾರಣವೆಂದರೆ ತಿದ್ದುಪಡಿ ಮಾಡುವವರು ಮತ್ತು ಕಂಪೈಲರ್‌ಗಳು ಓದುಗರಿಗೆ ಪ್ರಯೋಜನಕಾರಿಯಾಗಿವೆ ಎಂದು ತಾವು ಯೋಚಿಸಿದ ಕೀರ್ತನೆಯ ಬಗ್ಗೆ ಹಿನ್ನೆಲೆಯ ಮಾಹಿತಿ ಮತ್ತು ತಿಳುವಳಿಕೆಗೆ ಮಾರ್ಗವನ್ನು ಹೊಂದಿದ್ದರು.
3. ಕೀರ್ತನೆಗಳ ಕೊನೆಯ ಸಂಯೋಜನೆ ಮತ್ತು ತಿದ್ದುಪಡಿಯು (ಇಂದು ನಾವು ನಮ್ಮ ಸತ್ಯವೇದಗಳಲ್ಲಿ ಹೊಂದಿರುವ ಪುಸ್ತಕದಂತೆ) ಸೆಪ್ಟೂಜೆಂಟ್ ಭಾಷಾಂತರದ ಸಮಯದಲ್ಲಿ ಸವಿವರವಾಗಿ ಪೂರ್ಣಗೊಂಡಿರಲಿಲ್ಲ.

ತಲೆ ಬರಹಗಳು ವಿವಿಧಬಗೆಯ ಮಾಹಿತಿಗಳನ್ನು ಒಳಗೊಂಡಿವೆ ಉದಾಹರಣೆಗೆ:

ಗ್ರಂಥಕರ್ತನ ಹೆಸರು

ಸುಮಾರು 80 ಕೀರ್ತನೆಗಳು **"ದಾವೀದನದು"** ಎಂಬ ಹೇಳಿಕೆಯನ್ನು ಹೊಂದಿರುತ್ತವೆ. ಇದರ ಅರ್ಥ ದಾವೀದನು ಈ ಕೀರ್ತನೆಗಳ ಗ್ರಂಥಕರ್ತನೆಂದು ಪರಿಗಣಿಸಲ್ಪಟ್ಟಿದ್ದಾನೆ. 12 ತಲೆಬರಹಗಳಲ್ಲಿ ಆಸಾಫನ ಹೆಸರು ಬಂದಿದೆ. ಹೆಚ್ಚಿನವುಗಳು ಮೂರನೇ ಪುಸ್ತಕದ ಪ್ರಾರಂಭದಲ್ಲಿವೆ. ಆಸಾಫನು ದಾವೀದನ ಆಳ್ವಿಕೆಯ ಕಾಲದಲ್ಲಿ ಒಬ್ಬ ಪ್ರಾಮುಖ್ಯ ಹಾಡುಗಾರನಾಗಿದ್ದನು ಎಂಬುದನ್ನು ಪೂರ್ವಕಾಲವೃತ್ತಾಂತದಲ್ಲಿ ಕಾಣಬಹುದು. ಆತನು ಮತ್ತು ಆತನ ಸಂತತಿಯವರು ರಾಜರುಗಳ ಆಳ್ವಿಕೆಯ ಸಮಯದಲ್ಲಿ ಸಂಗೀತಜೀವನದಲ್ಲಿ ಪ್ರಮುಖ್ಯ ಪಾತ್ರವಹಿಸಿದರೆಂದು ತೋರುತ್ತದೆ. ಯೆದುತೂನ್ (ಕೀರ್ತನೆ 30, 62 ಮತ್ತು 77), ಏತಾನ್ (ಕೀರ್ತನೆ 89) ಮತ್ತು ಹೇಮಾನ್ (ಕೀರ್ತನೆ 88) ಈ ತಲೆಬರಹಗಳಲ್ಲಿ ಇತರೆ ಸಂಗೀತಗಾರರು ಮತ್ತು ಗಾಯಕರ ಹೆಸರು ಕಂಡು ಬರುತ್ತದೆ. 11 ತಲೆ ಬರಹಗಳಲ್ಲಿ 2 ಪೂರ್ವಕಾಲವೃತ್ತಾಂತ 20:19 ರಲ್ಲಿ ತಿಳಿಸಲ್ಪಟ್ಟ **"ಕೋರಹೀಯರ ಪದ್ಯ"**/ ಕೋರಹನ ಮಕ್ಕಳನ್ನು ನಾವು ಕಾಣುತ್ತೇವೆ. ಅಲ್ಲಿ ಅವರು ಎದ್ದು ನಿಂತು ಇಸ್ರಾಯೇಲ್ ದೇವರಾದ ಯೆಹೋವನನ್ನು ಮಹಾಸ್ವರದಿಂದ ಸ್ತುತಿಸಿದರು ಎಂದು ದಾಖಲಿಸಲ್ಪಟ್ಟಿದೆ. ಕಡೆಯದಾಗಿ ಹಳೇ ಒಡಂಬಡಿಕೆಯ ಇಬ್ಬರು ಚಿರಪರಿಚಿತ ವ್ಯಕ್ತಿಗಳ ಹೆಸರನ್ನು ಕಾಣುತ್ತೇವೆ. ಅವರೆಂದರೆ ಸೊಲೊಮೋನ್ (ಕೀರ್ತನೆ 72 ಮತ್ತು 127) ಮತ್ತು ಮೋಶೆ (ಕೀರ್ತನೆ 90).

ಕೀರ್ತನೆಯ ವಿಧ

ಕೀರ್ತನೆಗಳನ್ನು ವರ್ಗೀಕರಿಸಲು ಇಬ್ರಿಯ ಪಠ್ಯದಲ್ಲಿ 9 ರೂಪಗಳು ಉಪಯೋಗಿಸಲ್ಪಟ್ಟಿವೆ. ಅತೀ ಸಾಮಾನ್ಯವಾದದ್ದು ಮಿಜ್‌ಮೋರ್, ಇದು 57 ಕೀರ್ತನೆಗಳಿಗೆ ಉಪಯೋಗಿಸಲ್ಪಟ್ಟಿದೆ (ಉದಾ: ಕೀರ್ತನೆ 3,4 ಮತ್ತು 5). ಈ ಪದವು ಸತ್ಯವೇದದಲ್ಲಿ ಬೇರೆಲ್ಲೂ ಸಹ ಕಂಡು ಬರುವುದಿಲ್ಲ. ಇದು **"ತಂತಿವಾದ್ಯ"** ಎಂಬ ಪದದ ಅರ್ಥದಿಂದ ಬಂದಿದೆ. ಹಾಗಾಗಿ

ಬಹುಶಃ ಇದು ಈ ರೀತಿಯ ವಾದ್ಯಗಳೊಂದಿಗೆ ಈ ಕೀರ್ತನೆಗಳನ್ನು ಹಾಡಲಾಗುತ್ತಿತ್ತು ಎಂಬುದನ್ನು ಸೂಚಿಸುತ್ತದೆ. ಹಾಡಿಗಾಗಿ ಇರುವ ಒಂದು ಸಾಮಾನ್ಯ ಇಬ್ರಿಯ ಪದ ಶರ ಎಂಬುದಾಗಿದೆ. ಇದನ್ನು 29 ಕೀರ್ತನೆಗಳಿಗಾಗಿ ಉಪಯೋಗಿಸಲಾಗಿದೆ (ಉದಾ: ಕೀರ್ತನೆ 30 ಮತ್ತು 65). ಇದರಲ್ಲಿನ 13 ಕೀರ್ತನೆಗಳಲ್ಲಿ ಇದನ್ನು ಮಿಜ್ಮೊರ್ ಜೊತೆಯಲ್ಲಿ ಉಪಯೋಗಿಸಲಾಗಿದೆ. ಇಬ್ರಿಯ ಪದವಾದ ಮಾಸ್ಕಿಲ್ 17 ತಲೆ ಬರಹಗಳಲ್ಲಿ ಉಪಯೋಗಿಸಲ್ಪಟ್ಟಿದೆ (ಉದಾ: ಕೀರ್ತನೆ 32 ಮತ್ತು 53). ಇದರ ಅರ್ಥ ಈ ಎರಡು ಕೀರ್ತನೆಗಳ ವಿಷಯಾಂಶದೊಂದಿಗೆ ಸರಿಯಾಗಿ ಹೊಂದುವ "ಉಪದೇಶಕ್ಕಾಗಿನ ಒಂದು ಪದ್ಯ" ಎಂಬುದಾಗಿರಬಹುದು. ಒಂದು ವಿಧದ ಕೀರ್ತನೆಯು "ಯಾತ್ರಗೀತ" ಎಂದು ಕರೆಯಲ್ಪಡುತ್ತದೆ (ಕೀರ್ತನೆ 120 ರಿಂದ 134). ಇಸ್ರಾಯೇಲ್ಯರು ಪ್ರಮುಖ ಹಬ್ಬಗಳಲ್ಲಿ ಪಾಲ್ಗೊಳ್ಳಲು ಯೆರೂಸಲೇಮಿನಲ್ಲಿರುವ ದೇವಾಲಯಕ್ಕೆ ಯಾತ್ರೆಗಾಗಿ ಹೋದಾಗ ಇವನ್ನು ಉಪಯೋಗಿಸಲಾಗಿದೆ. ಮಿಕ್ತುಮ್ ಎನ್ನುವ ಇಬ್ರಿಯ ಪದವು 6 ತಲೆಬರಹಗಳಲ್ಲಿ ಕಂಡುಬರುತ್ತದೆ (ಕೀರ್ತನೆ 16 ಮತ್ತು 56–60). ಇಬ್ರಿಯದಲ್ಲಿ "ಪ್ರಾರ್ಥನೆಗೆ" ವಿಭಿನ್ನವಾದ ಪದಗಳಿವೆ. ಅದರಲ್ಲಿ ಒಂದು ತೆಫಿಲ್ಲ್ ಎಂಬುದು ಒಂದಾಗಿದೆ. ಇದನ್ನು 5 ತಲೆಬರಹಗಳಲ್ಲಿ ಉಪಯೋಗಿಸಲಾಗಿದೆ (ಕೀರ್ತನೆ 17, 86, 90, 102, ಮತ್ತು 142) ಮತ್ತು ಈ ಎಲ್ಲಾ ಕೀರ್ತನೆಗಳು ಪ್ರಲಾಪಗಳ ಲಕ್ಷಣವನ್ನು ಹೊಂದಿರುವಂತೆ ಇದು ಒಂದು ಪ್ರಲಾಪದ ಮೊರೆಯನ್ನು ಸೂಚಿಸುತ್ತದೆ. ಒಂದು ತಲೆಬರಹದಲ್ಲಿ ಕೇವಲ ಒಂದೇ ಬಾರಿ ಮಾತ್ರ ತೆಹಿಲ್ಲಾ ಎನ್ನುವ ಇಬ್ರಿಯ ಪದ ಕಂಡುಬರುತ್ತದೆ (ಕೀರ್ತನೆ 145). ಇದರ ಅರ್ಥ ಸ್ತುತಿ/ಸ್ತೋತ್ರ ಮತ್ತು ಈ ಪದದ ಬಹುವಚನ ರೂಪವನ್ನು ಇಡೀ ಕೀರ್ತನೆ ಪುಸ್ತಕಕ್ಕಾಗಿ ಇಬ್ರಿಯ ಸತ್ಯವೇದದಲ್ಲಿ ಶೀರ್ಷಿಕೆಯಾಗಿ ಬಳಸಲಾಗಿದೆ. ಕೀರ್ತನೆ 45 ಶರ್ ಯೆದಿದೋತ್ ಎಂಬ ಹೇಳಿಕೆಯನ್ನು ಉಪಯೋಗಿಸುತ್ತದೆ. ಇದರ ಅರ್ಥ "ಪ್ರೇಮಗೀತ". ಕೀರ್ತನೆ 7ರ ತಲೆಬರಹವು ಶಿಗ್ಗಾಯೋನ್ ಎಂಬುದಾಗಿದೆ. ಇದು "ದೂರುಕೊಡು" ಎಂದರ್ಥಕೊಡುವ ಒಂದು ಕ್ರಿಯಾಪದದಿಂದ ಬಂದಿದೆ. ಅಂತಿಮವಾಗಿ ಇವುಗಳಲ್ಲಿನ ಹೆಚ್ಚಿನ ರೂಪಗಳು ಹಾಡುವುದನ್ನು ಮತ್ತು ಸಂಗೀತವನ್ನು ಸೂಚಿಸುತ್ತವೆಂದು ನಾವು ಗಮನಿಸಬೇಕಾಗಿದೆ.

ಇತರ ಇಬ್ರಿಯ ನಿಬಂಧನೆಗಳು ಮೂಲತಃ ವಾಕ್ಯಭಾಗದೊಂದಿಗಿನ ಸಂಗೀತದ ಬಗ್ಗೆ ಹೆಚ್ಚಿನ ವಿವರವಾದ ಮಾಹಿತಿಯನ್ನು ಕೊಡುತ್ತವೆ.

ಉದಾಹರಣೆಗೆ ಕೀರ್ತನೆ 4 ತಂತಿವಾದ್ಯದೊಂದಿಗೆ ಉಪಯೋಗಿಸಲಾಗಿದೆ. ಕೀರ್ತನೆ 5ನ್ನು ಕೊಳಲಿನೊಂದಿಗೆ ಉಪಯೋಗಿಸಲಾಗಿದೆ. "ಪ್ರಧಾನ ಗಾಯಕನ ಕೀರ್ತನ ಸಂಗ್ರಹ" ಎಂಬ ಹೇಳಿಕೆಯನ್ನು ಹೆಚ್ಚು ಕಡಿಮೆ 55 ತಲೆಬರಹಗಳಲ್ಲಿ ಬಳಸಲಾಗಿದೆ. ಆದರೆ ಇದರರ್ಥವೇನೆಂದು ಸ್ಪಷ್ಟವಾಗಿಲ್ಲ. ಸೆಪ್ಟೂಜೆಂಟ್ ಇದನ್ನು "ಕೊನೆವರೆಗೆ"/ "ಎಂದೆಂದಿಗೂ" ಎಂದು ಭಾಷಾಂತರಿಸಿದೆ.

ಒಂದು ಕೀರ್ತನೆಯ ಸಂದರ್ಭದ ಬಗ್ಗೆ ಸಂಕ್ಷಿಪ್ತ ಮಾಹಿತಿ.

ಅರಸನಾದ ದಾವೀದನು ಕೀರ್ತನೆಯಲ್ಲಿ ವಹಿಸುವ ಪ್ರಾಮುಖ್ಯ ಪಾತ್ರವು ಕೇವಲ ಆತನ ಗುಣಧರ್ಮವನ್ನು ಸೂಚಿಸುವ ಹೆಚ್ಚಿನ ಕೀರ್ತನೆಗಳಲ್ಲಿ ಅಷ್ಟೇ ಕಾಣಲಾಗುವುದಿಲ್ಲ. ಆದರೆ 13 ಕೀರ್ತನೆಗಳು ದಾವೀದನ ಜೀವನದಲ್ಲಿ ಘಟನೆಗಳನ್ನು ತಿಳಿಸುವ ತಲೆಬರಹಗಳನ್ನು ಹೊಂದಿವೆ ಎಂಬ ಸನ್ನಿವೇಶದಲ್ಲಿಯೂ ಸಹ ಕಾಣಬಹುದು. ಇದರಲ್ಲಿನ 12 ಘಟನೆಗಳನ್ನು ಸಮುವೇಲನ ಪುಸ್ತಕದಲ್ಲಿ ನಾವು ಕಾಣಬಹುದು (ನೋಡಿರಿ. ಕೀರ್ತನೆ 3, 7, 18, 34, 51, 52, 54, 56, 57, 59, 60, 63 ಮತ್ತು 142), ಆದರೆ ಕೀರ್ತನೆ 7 ಮಾತ್ರ ಒಂದು ಅನಾಮಧೇಯ ಸನ್ನಿವೇಶವನ್ನು ಸೂಚಿಸುತ್ತದೆ. ಇದು ದಾವೀದನು ಮತ್ತು ಬೆನ್ಯಾಮೀನ್ ಕುಲದವನಾದ ಕೂಷನ ಕುರಿತಾಗಿದೆ. ಯೆಹೋವನಿಗೆ ಹಾಡಿದ ಶಿಗ್ಗಾಯೋನ್ ಆಗಿದೆ.

ಪ್ರಶ್ನೆಗಳು

ಈ ಪ್ರಶ್ನೆಗಳ ಉತ್ತರವನ್ನು ಈ ಪೀಠಿಕೆಯ ಅಧ್ಯಾಯದ ವಿವಿಧ ವಿಭಾಗಗಳ ವಾಕ್ಯಭಾಗಗಳಲ್ಲಿ ಸುಲಭವಾಗಿ ಕಾಣಬಹುದು. ಆದರೆ ಅಲ್ಲಿ ನೋಡುವುದಕ್ಕಿಂತ ಮುಂಚೆ ನೀವಾಗಿಯೇ ಈ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸಿದರೆ ನೀವು ಹೆಚ್ಚಾಗಿ ಕಲಿಯುವಿರಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿದರೆ ಒಳ್ಳೆಯದು. ಕೀರ್ತನೆಗಳ ಹಿನ್ನಲೆಯಲ್ಲಿ "ತಲೆಬರಹ" ಎಂಬ ಪದದ ಅರ್ಥವನ್ನು ವಿವರಿಸಿರಿ.

1. ಕೀರ್ತನೆಗಳಿಗೆ ಸಂಬಂದಿಸಿದಂತೆ "ತಲೆಬರಹ" ಎಂಬ ಪದದ ಅರ್ಥವನ್ನು ವಿವರಿಸಿ.

2. ಇಬ್ರಿಯ ಆವೃತ್ತಿಯ ಪಠ್ಯಕ್ಕಿಂತ ಸೆಪ್ಟೂಜೆಂಟ್‌ನಲ್ಲಿ ಹೆಚ್ಚು ತಲೆಬರಹಗಳಿವೆ ಎಂಬ ವಾಸ್ತವಾಂಶದಿಂದ ನಾವು ಏನನ್ನು ಕಲಿಯಬಹುದು?

3. ದಾವೀದನು ಎಲ್ಲಾ ಕೀರ್ತನೆಗಳನ್ನು ಬರೆಯದಿದ್ದರೂ ಸಹ ಕ್ರೈಸ್ತಸಭೆಯ ಇತಿಹಾಸದ ಸಮಯದಲ್ಲಿ ಇಡೀ ಕೀರ್ತನೆ ಪುಸ್ತಕವನ್ನು ಹೆಚ್ಚಾಗಿ **"ದಾವೀದನ ಕೀರ್ತನೆಗಳು"** ಎಂದು ಯಾಕೆ ಕರೆಯಲಾಗಿದೆ ಎಂಬುದಕ್ಕೆ ಎರಡು ಕಾರಣ ಕೊಡಿರಿ.

4. ಆಸಾಫನು ಯಾರು ಮತ್ತು ಎಷ್ಟು ಕೀರ್ತನೆಗಳು ಆತನ ಹೆಸರನ್ನು ಹೊಂದಿವೆ?

5. ಕೀರ್ತನೆಯ ಒಂದು ಬಗೆಯನ್ನು ಸೂಚಿಸಲು ತಲೆಬರಹಗಳಲ್ಲಿ ಇಬ್ರಿಯ ಪಠ್ಯವು ಅನೇಕ ಪದಗಳನ್ನು ಬಳಸುತ್ತದೆ. ಅತ್ಯಂತ ಸಾಮಾನ್ಯವಾದ ಮೂರು ಪದಗಳು ಯಾವುವು ಮತ್ತು ಅವುಗಳ ಅರ್ಥವೇನು?

6. ಕೀರ್ತನೆ 52–55 ರವರೆಗಿನ ತಲೆಬರಹಗಳಲ್ಲಿ ಉಪಯೋಗಿಸಲಾದ **"ಮಾಸ್ಕಿಲ್"** ಎಂಬ ಇಬ್ರಿಯ ಪದದ ಅರ್ಥವೇನಿರಬಹುದು (ಗಮನಿಸಿ: ಕನ್ನಡದ ಭಾಷಾಂತರಗಳು ಪದ್ಯ, ಕೀರ್ತನೆ ಮತ್ತು ಪ್ರಾರ್ಥನೆ ಎಂಬ ಪದಗಳನ್ನು ಬಳಸಿವೆ)?

7. ಅನೇಕ ಕೀರ್ತನೆಗಳ ತಲೆಬರಹವು ಒಂದು ಇಬ್ರಿಯ ಹೇಳಿಕೆಯನ್ನು ಒಳಗೊಂಡಿದೆ. ಅದು ನಮ್ಮ ಆಧುನಿಕ ಸತ್ಯವೇದ ಭಾಷಾಂತರದಲ್ಲಿರುವಂತೆ **"ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ"** ಎಂಬ ಹೇಳಿಕೆಯಾಗಿದೆ. ಆದರೆ ಸೆಪ್ಟೂಜೆಂಟ್ ಇದನ್ನು ಹೇಗೆ ಭಾಷಾಂತರಿಸುತ್ತದೆ?

8. ಕೀರ್ತನೆ 56 ಮತ್ತು 1 ಸಮುವೇಲ 21 ರ ತಲೆಬರಹದ ನಡುವಿನ ಸಂಬಂಧವೇನು?

ಕೀರ್ತನೆ 4

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಕೀರ್ತನೆಯು ಒಂದು ವ್ಯಕ್ತಿಗತ ಪ್ರಲಾಪವನ್ನು ನಮಗೆ ನೆನಪಿಸುತ್ತದೆ, ಆದರೆ ಇದು ಯಾವುದೇ ದುರಾವಸ್ಥೆಯ ಸನ್ನಿವೇಶವನ್ನು ವರ್ಣಿಸುವುದಿಲ್ಲ. ಹಾಗಾಗಿ ಬಹುಶಃ ಇದನ್ನು ಒಂದು ವ್ಯಕ್ತಿಗತ ಪ್ರಲಾಪ ಮತ್ತು ಒಂದು ಭರವಸೆಯ ಪದ್ಯದ ಸಂಯೋಗವೆಂದು ವರ್ಗೀಕರಿಸಬಹುದು. ಇದರ ಸಂಯೋಜನೆಯು ಈ ಹಿಂದಿನ ಕೀರ್ತನೆಗಿಂತ ವಿಭಿನ್ನವಾಗಿದೆ. ಅದು ಒಂದು ನಿಜವಾದ ಪ್ರಲಾಪವಾಗಿದೆ.

ಕೀರ್ತನೆ 3 ಒಂದು **"ಮುಂಜಾನೆಯ ಕೀರ್ತನೆ"** ಮತ್ತು ಕೀರ್ತನೆ 4 ಒಂದು **"ಸಂಜೆಯ ಕೀರ್ತನೆ"** ಎಂದು ಕರೆಯಲ್ಪಟ್ಟಿವೆ. ತಲೆಬರಹದ ಪ್ರಕಾರ ಈ ಎರಡೂ ಸಹ ದಾವೀದನಿಂದ ಬರೆಯಲ್ಪಟ್ಟಿವೆ.

ನ್ಯಾಯವನ್ನು ಸ್ಥಾಪಿಸುವ ನನ್ನ ದೇವರೇ (ವಚನ 1): ದೇವರು ನೀತಿಯ ಕರ್ತೃವಾಗಿದ್ದಾನೆ ಮತ್ತು ನಿರ್ದೋಷವಾಗಿ ಬಾಧೆಪಡುತ್ತಿರುವ ದಾವೀದನಿಗೆ ನ್ಯಾಯವನ್ನು ಕೊಡುವವನಾಗಿದ್ದಾನೆ. ದೇವರು ದಾವೀದನ ಪರವಾಗಿ ಕಾರ್ಯಮಾಡುವವನಾಗಿದ್ದಾನೆ.

ನನ್ನ ಗೌರವವನ್ನು (ವಚನ 2): ಇದು ಅರಸನಾಗಿ ದಾವೀದನ ಸ್ಥಾನಮಾನ ಅಥವಾ ದೇವರೊಂದಿಗಿನ ಆತನ ವಿಶೇಷ ಸಂಬಂಧವನ್ನು ಸೂಚಿಸುತ್ತದೆ.

ಭಕ್ತನು (ಮನುಷ್ಯ) (ವಚನ 3): ಇದು ಕೀರ್ತನೆಗಳಲ್ಲಿ ಒಂದು ಸಾಮಾನ್ಯ ಹೇಳಿಕೆಯಾಗಿದೆ. ಇದು ದೇವಜನರನ್ನು ಸೂಚಿಸುತ್ತದೆ.

ಯಾರಿದ್ದಾರೆ ... (ವಚನ 6): ಬಹುಶ: ಇದು ವಚನ 2ರಲ್ಲಿನ ಸುಳ್ಳು ದೇವರುಗಳನ್ನು ಸೂಚಿಸುತ್ತದೆ.

ನೀನು ಪ್ರಸನ್ನ ಮುಖದಿಂದ ನಮ್ಮನ್ನು ನೋಡಬೇಕು (ವಚನ 6): ದೇವರ ದಯೆಗಾಗಿ ಬೇಡಿಕೊಳ್ಳುವುದು (ಅರಣ್ಯಕಾಂಡ 6:25–26 ರೊಂದಿಗೆ ಹೋಲಿಸಿ, ಕೆಳಗೆ ಆಲೋಚಿಸಿರಿ ಮತ್ತು ಚರ್ಚಿಸಿರಿಯನ್ನು ಸಹ ನೋಡಿರಿ)

ಹೃದಯದಲ್ಲಿ (ವಚನ 7): ಸತ್ಯವೇದದಲ್ಲಿ ಹೃದಯವು ಮನುಷ್ಯನ ಅಂತರಂಗದ ಕೇಂದ್ರವೆಂದೂ, ಇಲ್ಲಿಂದಲೇ ಭಾವನೆಗಳು, ಆಲೋಚನೆಗಳು ಮತ್ತು ಪ್ರೇರಣೆಗಳು ಕಂಡುಬರುತ್ತವೆ ಎಂದು ಕಾಣಬಹುದು.

ಪ್ರಶ್ನೆಗಳು

1. ನೀವು ಕೀರ್ತನೆ 4 ಅನ್ನು ಹೇಗೆ ರಚಿಸುತ್ತೀರಿ?
2. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವಾಗ ಕೀರ್ತನೆಯ ವಿಷಯಗಳನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಪುನಃ ಹೇಳಿ:
   ಅ. ದಾವೀದನು ದೇವರನ್ನು ಹೇಗೆ ವರ್ಣಿಸುತ್ತಾನೆ ಮತ್ತು ಆತನಿಂದ ಏನನ್ನು ನಿರೀಕ್ಷಿಸುತ್ತಿದ್ದಾನೆ (ವಚನ 1)?
   ಆ. ದಾವೀದನು ಜನರ ಮೇಲೆ ಏನು ಆರೋಪ ಮಾಡುತ್ತಿದ್ದಾನೆ (ವಚನ 2)?
   ಇ. ದಾವೀದನು ಜನರಿಗೆ ದೇವರ ಕುರಿತು ಏನನ್ನು ಹೇಳುತ್ತಿದ್ದಾನೆ (ವಚನ 3)?
   ಈ. ದಾವೀದನು ಜನರು ಏನು ಮಾಡಬೇಕೆಂದು ಪ್ರಚೋದಿಸುತ್ತಾನೆ (ವಚನ 4–5)?
   ಉ. ದಾವೀದನು ದೇವರಿಂದ ಏನು ಬೇಡಿಕೊಳ್ಳುತ್ತಾನೆ (ವಚನ 6)?
   ಊ. ದೇವರ ಬಗ್ಗೆ ದಾವೀದನ ಸಾಕ್ಷಿ ಏನು (ವಚನ 7)?
   ಋ. ದೇವರೊಂದಿಗನ ದಾವೀದನ ಸಂಬಂದದ ಬಗ್ಗೆ 8 ನೇ ವಚನವು ಏನು ಬಹಿರಂಗಪಡಿಸುತ್ತದೆ?
3. ಈ ಕೀರ್ತನೆಯ ಮೇಲ್ಬರಹವು ನಮಗೆ ಏನು ಹೇಳುತ್ತದೆ? **ಸತ್ಯವೇದವು** ದಲ್ಲಿನ **"ಮೇಲ್ಬರಹ"** ಕೀರ್ತನೆಯ ಸಾರಾಂಶವನ್ನು ಸಹ ಒಳಗೊಂಡಿದೆ ಎಂಬುದನ್ನು ವಿವರಿಸಿ.

ಕೀರ್ತನೆ 4 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಅನೇಕ ಸತ್ಯವೇದ ಶಾಸ್ತ್ರಜ್ಞರು ಈ ಕೀರ್ತನೆಯನ್ನು "ಸಂಜೆಯ ಕೀರ್ತನೆ" ಎಂದು ಕರೆಯುತ್ತಾರೆ. ಪಠ್ಯದಲ್ಲಿ ಏನು ಆ ತೀರ್ಮಾನವನ್ನು ಬೆಂಬಲಿಸುತ್ತದೆ? ನಿಮ್ಮ ಸ್ವಂತ ತೀರ್ಮಾನವೇನು?

2. ಈ ಕೀರ್ತನೆಯನ್ನು ಬರೆದಾಗ ದಾವೀದನು ಎದುರಿಸುತ್ತಿದ್ದ ಪರಿಸ್ಥಿತಿಯ ಬಗ್ಗೆ 2 ನೇ ವಚನ ಮತ್ತು 7 ನೇ ವಚನಗಳಲ್ಲಿ ಸುಳಿವುಗಳಿರಬಹುದು. ಆ ಪರಿಸ್ಥಿತಿ ಹೇಗಿರಬಹುದು?

3. ಈ ಕೀರ್ತನೆಯಲ್ಲಿರುವ ದಾವೀದನ ಭಾವನೆಗಳನ್ನು ನೀವು ಹೇಗೆ ನಿರೂಪಿಸುತ್ತೀರಿ?

4. ವಚನ 6 ರಲ್ಲಿ ದಾವೀದನು "ದೇವರು ತಮ್ಮನ್ನು ತನ್ನ ಪ್ರಸನ್ನ ಮುಖದಿಂದ ನೋಡಬೇಕೆಂದು" ಕೇಳಿಕೊಳ್ಳುತ್ತಿದ್ದಾನೆ. ನಾವು ಇಂತಹ ಸಮಾನಾಂತರತೆಯನ್ನು ಇತರೆ ಕೀರ್ತನೆಗಳಲ್ಲಿಯೂ ಕಾಣಬಹುದಾಗಿದೆ. ಸಮಾನಾಂತರತೆಯು ಇಂತಹ ಪದವಿನ್ಯಾಸಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದರಲ್ಲಿ ನಮಗೆ ಸಹಾಯ ಮಾಡುತ್ತವೆ. ಆದ್ದರಿಂದ ನೀವು ಈ ಕೆಳಗಿನ ಉಲ್ಲೇಖಗಳಿಂದ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೀರಿ: ಕೀರ್ತನೆ 13:1; 27:9; 30:7; 44:24; 88:14; 102:2.

ಕೀರ್ತನೆ 4 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯಲ್ಲಿ ದಾವೀದನು ದೇವರನ್ನು ಅರ್ಥಮಾಡಿಕೊಂಡಿದ್ದನ್ನು ಪ್ರಕಟಿಸುವುದನ್ನು ನೀವು ಆಲೋಚಿಸಿರಿ. ನಿಮ್ಮ ಜೀವಿತದಲ್ಲಿ ದಾವೀದನ ಕುರಿತು ಮತ್ತು ಆತನ ದೇವರ ಕುರಿತು ನೀವು ಏನನ್ನು ಕಲಿಯುತ್ತೀರಿ.

2. ಆಲೋಚಿಸಿರಿ ಮತ್ತು ಚರ್ಚಿಸಿಯಲ್ಲಿರುವ ಪ್ರಶ್ನೆ 4 ರಲ್ಲಿರುವ ವಾಕ್ಯಗಳನ್ನು ಧ್ಯಾನಿಸಿರಿ. ನಿಮ್ಮ ಜೀವಿತದಲ್ಲಿಯ ಮತ್ತು ನಿಮ್ಮ ಪ್ರೀತಿಗೆ ಪಾತ್ರರಾದವರ ಜೀವಿತಗಳಲ್ಲಿ ದೇವರು ತನ್ನ ಪ್ರಸನ್ನ ಮುಖದಿಂದ ನಿಮ್ಮನ್ನು ನೋಡುವಂತೆ ಪ್ರಾರ್ಥಿಸಿರಿ.

3. ಶತಮಾನಗಳಿಂದ ಅನೇಕ ಭಕ್ತಿಯುತ ವಿಶ್ವಾಸಿಗಳು ವಚನ 8ನ್ನು ತಮ್ಮ ಸಂಜೆಯ ಪ್ರಾರ್ಥನೆಯನ್ನಾಗಿ ಉಪಯೋಗಿಸಿದ್ದಾರೆ. ನೀವು ಸಹ ಇದನ್ನು ನಿಮಗಾಗಿ ಪ್ರಯತ್ನಿಸಬಹುದು.

ಕೀರ್ತನೆಗಳ ದೈವಶಾಸ್ತ್ರೀಯ ಲಕ್ಷಣ

ಪೀಠಿಕೆ

ಕೀರ್ತನೆಗಳು ಮೂಲತಃ ಒಂದು ಪ್ರಾರ್ಥನೆ ಮತ್ತು ಸ್ತುತಿ/ಸ್ತೋತ್ರದ ಪುಸ್ತಕವಾಗಿದೆ. ಈ 150 ಕೀರ್ತನೆಗಳ ಮೂಲಕ ನಾವು ಕೇಳುವ ಸ್ವರ/ಧ್ವನಿಯು ಪ್ರಾರ್ಥನೆ ಮತ್ತು ಆರಾಧನೆಯಲ್ಲಿ ದೇವರನ್ನು ಸಂಬೋಧಿಸುವುದಾಗಿದೆ. ಅವು ಒಬ್ಬೊಬ್ಬ ವ್ಯಕ್ತಿಯಷ್ಟು ಅಲ್ಲ, ದೇವಜನರ ಸಮುದಾಯದ ಸ್ವರಗಳಾಗಿವೆ. ಅವು ದೇವರು, ಆತನ ಕರುಣೆ ಮತ್ತು ಆತನ ರಕ್ಷಿಸುವ ಶಕ್ತಿಯಲ್ಲಿ ಭರವಸೆ ಮತ್ತು ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಅವು ದೇವರ ಬಗ್ಗೆ ಮಾತನಾಡುವಾಗ ಆತನ ಬಗ್ಗೆ ಸ್ತುತಿ/ಸ್ತೋತ್ರದ ರೂಪದಲ್ಲಿ ಮಾತನಾಡುತ್ತವೆ.

ಹಾಗಾಗಿ ಕೀರ್ತನೆಯ ಪುಸ್ತಕವು ಒಂದು ದೈವಶಾಸ್ತ್ರೀಯ ಪುಸ್ತಕವಲ್ಲ. ಇದು ದೇವರು ಮತ್ತು ಮನುಷ್ಯನ ಕುರಿತಾದ ದೈವಶಾಸ್ತ್ರವನ್ನು ಒಂದು ವ್ಯವಸ್ಥಿತವಾದ ರೂಪದಲ್ಲಿ ಪ್ರಸ್ತುತ ಪಡಿಸಲು ಬರೆದ ಒಂದು ಪುಸ್ತಕವಲ್ಲ. ಖಂಡಿತವಾಗಿ ಇದು ದೈವಶಾಸ್ತ್ರವನ್ನು ಒಳಗೊಂಡಿದೆ ಮತ್ತು ವ್ಯಕ್ತಪಡಿಸುತ್ತದೆ, ಆದರೆ ಇದು ಅದನ್ನು ವ್ಯವಸ್ಥಿತವಾದ ವಿಧದಲ್ಲಿ ತಿಳಿಸುವುದಿಲ್ಲ.

ಬದಲಾಗಿ ಕೀರ್ತನೆಯಲ್ಲಿ ನಾವು ಕಾಣುವ ದೈವಶಾಸ್ತ್ರವು ಹೆಚ್ಚು ತಪ್ಪೊಪ್ಪಿಗೆಯ (ಅರಿಕೆಯ) ಮತ್ತು ಸ್ತೋತ್ರರೂಪದ ದೈವಶಾಸ್ತ್ರವಾಗಿದೆ. ವ್ಯಕ್ತಿಗತ ಕೀರ್ತನೆಗಳಲ್ಲಿ ಮಾತನಾಡುವವರು ತಮ್ಮ ನಂಬಿಕೆಯು ದೇವರಲ್ಲಿ ಮತ್ತು ಆತನ ರಕ್ಷಿಸುವ ಶಕ್ತಿಯಲ್ಲಿ ಇದೆಯೆಂದು ಹೇಳುತ್ತಾರೆ. ಇದು ಅರಿಕೆಯಾಗಿದೆ ಮತ್ತು ಅವರು ದೇವರು ಯಾರಾಗಿದ್ದಾನೆ ಮತ್ತು ಆತನು ಏನೆಲ್ಲಾ ಮಾಡಿದ್ದಾನೆಂಬುದಕ್ಕಾಗಿ ದೇವರನ್ನು ಸ್ತುತಿಸುತ್ತಾರೆ. ಇದು ಸ್ತೋತ್ರವಾಗಿದೆ.

ಪ್ರಲಾಪದಿಂದ ಆರಾಧನೆಗೆ

ಕೀರ್ತನೆಗಳು ಪುಸ್ತಕದ ದೈವಶಾಸ್ತ್ರವು ಎರಡು ಮಟ್ಟಗಳಲ್ಲಿ ಅಂದರೆ – ಇಡೀ ಪುಸ್ತಕದ ಮಟ್ಟದ ಮೇಲೆ, ಅಲ್ಲದೆ ವ್ಯಕ್ತಿಗತ ಕೀರ್ತನೆಯ ಮಟ್ಟದ ಮೇಲೆ ವ್ಯಕ್ತವಾಗಿದೆ.

ಪುಸ್ತಕದುದ್ದಕ್ಕೂ ಒಂದು ಮೂಲಭೂತ ಚಲನೆ

ಇಡೀ ಪುಸ್ತಕದ ರಚನೆಯ ಮೂಲಕ ನಾವು ಪ್ರಲಾಪದಿಂದ ಆರಾಧನೆಯೆಡೆಗೆ ಒಂದು ಚಲನೆಯನ್ನು ಕಾಣುತ್ತೇವೆ. ಮೊರೆಯಿಡುವವನು ತನ್ನ ಸಮಸ್ಯೆಗಳೊಂದಿಗೆ ದೇವರ ಬಳಿಗೆ ಹೋಗುತ್ತಾನೆ, ಯಾಕೆಂದರೆ ಆತನು ಈಗಾಗಲೇ ದೇವರ ಸಹಾಯವನ್ನು ಅನುಭವಿಸಿದ್ದಾನೆ, ಮತ್ತು ಆತನ ಈ ಹಿಂದಿನ ಅನುಭವವು ಆತನನ್ನು ಕೃತಜ್ಞತೆ ಮತ್ತು ಸ್ತೋತ್ರಕ್ಕೆ ನಡೆಸುತ್ತದೆ. ಈ ಇಡೀ ವಿನ್ಯಾಸವು ಇಬ್ರಿಯ ಕೇನಾನಿನಲ್ಲಿನ **"ಸ್ತುತಿ/ಸ್ತೋತ್ರಗಳು"** ಪುಸ್ತಕದಿಂದ ನಿಶ್ಚಯಿಸಲ್ಪಟ್ಟಿದೆ. ಆದರೆ ನಾವು ಈ ಹಿಂದೆ ನೋಡಿದಂತೆ ಇದರ ಕೊನೆಯ ಆವೃತ್ತಿಯಲ್ಲಿ ಕೀರ್ತನೆಯು ಒಂದು ಜ್ಞಾನದ ಪುಸ್ತಕವಾಗಿದೆ.

ವೈಯಕ್ತಿಕ ಕೀರ್ತನೆಗಳು

ವೈಯಕ್ತಿಕ ಕೀರ್ತನೆಗಳು ದೇವರ ಕುರಿತಾದ ದೈವಶಾಸ್ತ್ರವನ್ನು ಮತ್ತು ಮನುಷ್ಯನ ಸಿದ್ಧಾಂತವನ್ನು ಮತ್ತು ದೇವರು ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ತಿಳಿಸುತ್ತವೆ. ದೇವರು ಸೃಷ್ಟಿಕರ್ತನು ಮತ್ತು ನಿರ್ವಹಿಸುವವನೂ ಆಗಿದ್ದಾನೆ. ಆದರೆ ಆತನು ಚರಿತ್ರೆಯ ದೇವರಾಗಿದ್ದಾನೆ. ಆತನು ಪ್ರಾಕೃತಿಕ ಜಗತ್ತು ಮತ್ತು ಮಾನವನ ಜೀವನದಿಂದ ತೆಗೆದುಕೊಂಡ ಉಪಮೆ/ಚಿತ್ರಣಗಳ ಮೂಲಕ (ಒಂದು ಬಂಡೆ, ಕೋಟೆ ಮತ್ತು ಭದ್ರಕೋಟೆ, ಒಂದು ಗೋಪುರ, ರಕ್ಷಣೆ ಕೊಂಬು, ಕತ್ತಲೆಯಲ್ಲಿನ ಬೆಳಕು, ರೆಕ್ಕೆಗಳ ನೆರಳು, ಕುರುಬನು, ಸೇನಾಧೀಶ್ವರನು, ಅರಸನು) ಮತ್ತು ಧಾರ್ಮಿಕ ವಿಷಯಾಂಶಗಳಿಂದ ತುಂಬಿದ ಪದಗಳಿಂದ (ಆತನು ಕರುಣೆಯುಳ್ಳವನು, ಕನಿಕರವುಳ್ಳವನು, ಕೃಪಾವಂತನು, ನಿಧಾನವಾಗಿ ಕೋಪಿಸುವವನು, ಪೂರ್ಣಪ್ರೀತಿಯುಳ್ಳವನು) ಎಂದು ವರ್ಣಿಸಲ್ಪಟ್ಟಿದ್ದಾನೆ. ಆತನು ನ್ಯಾಯತೀರಿಸಲು ಅಧಿಕಾರವಿರುವ ಕೋಪವುಳ್ಳ ದೇವರಾಗಿದ್ದಾನೆಂಬುದು ಸತ್ಯ. ಆದರೆ ಕೀರ್ತನೆಗಾರನು ಕೋಪಕ್ಕಿಂತ ಹೆಚ್ಚಾಗಿ ಆತನ ಒಳ್ಳೇತನ, ಕರುಣೆ ಮತ್ತು ನಂಬಿಗಸ್ತಿಕೆಯ ಮೇಲೆ ಹೆಚ್ಚಾಗಿ ಪ್ರಾಮುಖ್ಯತೆ ಕೊಡುತ್ತಾನೆ. ಹಾಗಾಗಿ ತಮ್ಮ ಪ್ರಲಾಪ ಮತ್ತು ಪ್ರಾರ್ಥನೆಗಳಿಂದ ಆತನನ್ನು ಸಂಧಿಸಲು ಅವರಿಗೆ ಧೈರ್ಯವಿದೆ.

ಕರ್ತನೇ, ನೀನು ಕನಿಕರವೂ ದಯೆಯೂ ಉಳ್ಳ ದೇವರು;

ದೀರ್ಘಶಾಂತನು, ಬಹಳ ಪ್ರೀತಿಯೂ ನಂಬಿಕೆಯೂ ಉಳ್ಳವನು.

(ಕೀರ್ತನೆ 86:15)

ಅವರ ಮಾನವನ ಜೀವನದ ಅನುಭವಗಳನ್ನು ಸಹ ಕೀರ್ತನೆಗಾರನು ಮುಕ್ತವಾಗಿ ಹಂಚಿಕೊಳ್ಳುತ್ತಾನೆ. ಕ್ಷಮಾಪಣೆಯ ಅವಶ್ಯಕತೆಯನ್ನು ಮತ್ತು ಮನುಷ್ಯನ ಅಸ್ತಿತ್ವದ ಎಲ್ಲಾ ಪರಿಸ್ಥಿತಿಗಳಲ್ಲಿ ದೇವರನ್ನು ಸಂಧಿಸಲು ಇರುವ ಅವರ ಇಚ್ಛೆಯನ್ನು ಅವು ವ್ಯಕ್ತಪಡಿಸುತ್ತವೆ.

ದೇವರು – ವಾಸ್ತವ ಮತ್ತು ಒಂದು ಅನುಭವ

ಪುಸ್ತಕವು ಸಮಗ್ರವಾಗಿ ಅಲ್ಲದೆ ವೈಯಕ್ತಿಕ ಕೀರ್ತನೆಗಳಾಗಿ ಒಂದು ವಾಸ್ತವಾಂಶವಾಗಿ ಮತ್ತು ಒಂದು ಅನುಭವವಾಗಿ ಒಂದು ದೇವರ ದೈವಶಾಸ್ತ್ರವನ್ನು ತಿಳಿಸುತ್ತದೆ. ಈ ದೈವಶಾಸ್ತ್ರವು ಪ್ರಾರ್ಥನೆಯಲ್ಲಿ ಕೀರ್ತನೆಗಾರನು ಪ್ರಾರ್ಥಿಸುತ್ತಿರುವವರ ಜೀವನದಲ್ಲಿ ಲಂಗರು ಹಾಕಲ್ಪಟ್ಟಿದೆ. ಕೆಲಸಮಯ ಪ್ರಾರ್ಥನೆ, ಪ್ರಲಾಪ ಮತ್ತು ಸಹಾಯಕ್ಕಾಗಿನ ಒಂದು ಮೊರೆಯ ರೂಪದಲ್ಲಿದೆ. ಉಳಿದ ಸಮಯದಲ್ಲಿ ಇದು ಆರಾಧನೆ ಕೃತಜ್ಞತೆಯ ರೂಪದಲ್ಲಿದೆ.

ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲ್ಕಂಡ ವಾಕ್ಯಭಾಗಗಳಲ್ಲಿ ಕಾಣಬಹುದು. ಅಲ್ಲಿ ನೋಡುವುದಕ್ಕಿಂತ ಮೊದಲು ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನೂ ಹೆಚ್ಚಾಗಿ ಕಲಿಯುವಿರಿ. ಸಾಧ್ಯವಾದಷ್ಟು ನಿಮ್ಮದೇ ಮಾತಿನಲ್ಲಿ ಉತ್ತರಿಸಿರಿ.

1. ಕೀರ್ತನೆಗಳ ದೈವಶಾಸ್ತ್ರವು ಪುಸ್ತಕದ ರಚನೆಯ ಮೂಲಕ ಹೇಗೆ ವ್ಯಕ್ತವಾಗಿದೆ?
2. ಕೀರ್ತನೆಗಳ ಪುಸ್ತಕವು ಯಾಕೆ ದೈವಶಾಸ್ತ್ರವನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಪ್ರಸ್ತುತಪಡಿಸುವುದಿಲ್ಲ?
3. ಕೀರ್ತನೆಗಳ ಪುಸ್ತಕದ ದೈವಶಾಸ್ತ್ರೀಯ ಲಕ್ಷಣವನ್ನು ನೀವು ಹೇಗೆ ವಿವರಿಸುತ್ತೀರಿ?

ಅಸೈನ್‌ಮೆಂಟ್: ಕೀರ್ತನೆಗಳ ದೈವಶಾಸ್ತ್ರೀಯ ಲಕ್ಷಣ

ಕೀರ್ತನೆ 102 ಕ್ಕಿರುವ ತಲೆಬರಹವು ಈ ಕೀರ್ತನೆಯ ಹಿನ್ನಲೆಯನ್ನು ನಮಗೆ ತಿಳಿಸುತ್ತದೆ: ದುಃಖಿತನಾಗಿ ಯೆಹೋವನ ಮುಂದೆ ತನ್ನ ಚಿಂತೆಗಳನ್ನು ಹೇಳಿಕೊಳ್ಳುವ ದೀನನ ಪ್ರಾರ್ಥನೆ (ಕೀರ್ತನೆ. 102:0). ಕೀರ್ತನೆಯಲ್ಲಿ ನಾವು ಪ್ರಲಾಪದಿಂದ ಆರಾಧನೆವರೆಗಿನ ಒಂದು ಚಲನೆಯನ್ನು ಕಾಣುತ್ತೇವೆ ಎಂಬ ಹೇಳಿಕೆಯ ಸತ್ಯವನ್ನು ಈ ಪ್ರಾರ್ಥನೆ ಮತ್ತು ಪ್ರಲಾಪವು ಹೇಗೆ ಉದಾಹರಿಸುತ್ತದೆ ಎಂಬುದನ್ನು ವರ್ಣಿಸಿರಿ.

ಕೀರ್ತನೆ 6

ಪೀಠಿಕೆ ಮತ್ತು ಟಿಪ್ಪಣಿಗಳು

ಕ್ರೈಸ್ತ ಸಭೆಯ ಸಂಪ್ರದಾಯದಲ್ಲಿ ಈ ಕೀರ್ತನೆಯು ಏಳು **"ಪಶ್ಚಾತ್ತಾಪದ ಕೀರ್ತನೆಗಳಲ್ಲಿ"** ಮೊದಲನೆಯದ್ದಾಗಿ ಪರಿಗಣಿಸಲ್ಪಟ್ಟಿದೆ. ಉಳಿದವೆಂದರೆ, ಕೀರ್ತನೆ 32, 38, 51, 102, 130, ಮತ್ತು ಕೀರ್ತನೆ 143. ಈ ಕೀರ್ತನೆಗಳು ಮಾಡಿದ ಪಾಪಗಳಿಗಾಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಲು ಉಪಯೋಗಿಸಲ್ಪಟ್ಟಿವೆ. ಈ ರೀತಿಯಲ್ಲಿ ಇವು ಕಾರಣವಿಲ್ಲದೆ ಕೀರ್ತನೆಗಾರನು ನರಳುವ ಪ್ರಲಾಪಗಳಿಗಿಂತ ವಿಭಿನ್ನವಾಗಿವೆ.

ಇದು ಯಾವುದೇ ಪಾಪದರಿಕೆಯನ್ನು ಅಥವಾ ಪಶ್ಚಾತ್ತಾಪಕ್ಕಾಗಿನ ಪ್ರಾರ್ಥನೆಯನ್ನು ಒಳಗೊಂಡಿರದೇ ಇರುವಾಗ, ಈ ಕೀರ್ತನೆಯ ವಿಷಯಾಂಶದ ಮೇಲಿನ ಒಂದು ನೋಟವು ಇದೊಂದು **"ವೈಯಕ್ತಿಕ ಪ್ರಲಾಪ"** ವಾಗಿ ವರ್ಗೀಕರಿಸಬೇಕಿತ್ತೆಂಬುದನ್ನು ತಿಳಿಸುತ್ತದೆ.

ಎಲುಬುಗಳು (ವಚನ 2): ಇದು ಇಡೀ ದೇಹವನ್ನು ಪ್ರತಿನಿಧಿಸುವ ಅಸ್ಥಿಪಂಜರದ ಎಲುಬುಗಳನ್ನು ಸೂಚಿಸುತ್ತವೆ.

ಪ್ರಾಣ (ವಚನ 3): ಇಬ್ರಿಯ ಪದದ ಅರ್ಥವು ನಮ್ಮ ಅಧುನಿಕ ಕನ್ನಡ ಪದ **"ಪ್ರಾಣ"**ದಂತೆ ಕೇವಲ **"ಅಂತರ್ಯ"** ಅಥವಾ **"ಆತ್ಮೀಕ ವ್ಯಕ್ತಿ"** ಗಷ್ಟೇ ಸೀಮಿತವಾಗಿಲ್ಲ. ಹಾಗಾಗಿ ಬಹುಶಃ ವಚನ 2ರಲ್ಲಿನ ಎಲುಬುಗಳು" ಮತ್ತು ವಚನ 3ರಲ್ಲಿನ **"ಪ್ರಾಣ"**ವನ್ನು **"ನನ್ನ ಇಡೀ ಜೀವ"**ಕ್ಕೆ ಸಮಾನಾರ್ಥಕ ಹೇಳಿಕೆಯಾಗಿ ಅರ್ಥೈಸಿಕೊಳ್ಳಬೇಕಾಗಿದೆ.

ಎಷ್ಟರವರೆಗೂ? (ವಚನ 3): ದೇವರನ್ನು ಪ್ರಶ್ನಿಸುವುದು (ವಿಶೇಷವಾಗಿ ಎಷ್ಟರವರೆಗೂ? ಮತ್ತು ಯಾಕೆ?) ಪ್ರಲಾಪಗಳ ಲಕ್ಷಣವಾಗಿದೆ (ಉದಾಹರಣೆಗೆ ನೋಡಿ. ಕೀರ್ತನೆ 10:1, 13:1, 22:1, 42:9, 74:1, 10,11, 79:5,11, 80:4, 88:14, 89:46, 90:13, 94:3.).

ಜ್ಞಾಪಕ (ವಚನ 5): ಬಹುಶಃ **"ಸ್ಮರಣೆ ಮಾಡುವುದು, ಜನರ ಮುಂದೆ ಮಾತನಾಡುವುದು"** ಎಂದು ಅರ್ಥೈಸಿಕೊಳ್ಳಬೇಕು.

ಪಾತಾಳ (ವಚನ 5): ಇದಕ್ಕಿರುವ ಇಬ್ರಿಯ ಪದವು ಶಿಯೋಲ್. ಇದು ಸತ್ತವರೆಲ್ಲರೂ ಸತ್ತ ತಕ್ಷಣ ಹೋದ ಕತ್ತಲೆಯ ಮತ್ತು ನೆರಳಿನ ಸ್ಥಳಕ್ಕಿರುವ ಹೆಸರಾಗಿದೆ. ಇದು ಎಂದೂ ಹಿಂತಿರುಗದ ಸ್ಥಳವಾಗಿದೆ. ಅಲ್ಲಿ ದೇವರನ್ನು ಸ್ತುತಿಸಲಾಗುವುದಿಲ್ಲ (ಕೀರ್ತನೆ 30:9, ಕೀರ್ತನೆ 88), ಆದರೆ ಅಲ್ಲಿಯೂ ಸಹ ಆತನು ನಮ್ಮನ್ನು ಕಾಣುವನು (ಕೀರ್ತನೆ 139:8). **ಎನ್ಐಬಿವಿ** **"ಸಮಾಧಿ"** ಎಂದು ಹೇಳಿದರೆ, ಕನ್ನಡದ ಎರಡು ಭಾಷಾಂತರಗಳು **"ಪಾತಾಳ"** ಎಂಬ ಪದ ಬಳಸುತ್ತವೆ.

ದುಃಖದಿಂದ ನನ್ನ ಕಣ್ಣು ಡೊಗರಾಯಿತು, ಮೊಬ್ಬಾಯಿತು (ವಚನ 6): ಇದು ವಿಪರೀತವಾದ ಬಳಲಿಕೆಯನ್ನು ವ್ಯಕ್ತ ಪಡಿಸುವ ಇಬ್ರಿಯ ವಿಧವಾಗಿದೆ (ಹೋಲಿಸಿ ಕೀರ್ತನೆ 36:10, 1 ಸಮುವೇಲ 14:27, 29).

ಪ್ರಶ್ನೆಗಳು

1. ದಾವೀದನು 1 ನೇ ವಚನದಲ್ಲಿ ದೇವರನ್ನು ಸಂಬೋಧಿಸುತ್ತಾನೆ. ಕೀರ್ತನೆಯಲ್ಲಿ ಅವನು ನಂತರ ಯಾರನ್ನು ಸಂಬೋಧಿಸುತ್ತಾನೆ?
2. ಹಾಗಾದರೆ ಹಿಂದಿನ ಪ್ರಶ್ನೆಗೆ ನಿಮ್ಮ ಉತ್ತರವನ್ನು ಆಧರಿಸಿ ನೀವು ಈ ಕೀರ್ತನೆಯನ್ನು ಹೇಗೆ ರಚಿಸುತ್ತೀರಿ?
3. ಹಿಂದಿನ ಪ್ರಶ್ನೆಗೆ ನೀವು ನಿಮ್ಮ ಉತ್ತರದಲ್ಲಿ ಸೂಚಿಸಿದ ಪ್ರತಿಯೊಂದು ವಿಭಾಗಕ್ಕೂ ಸೂಕ್ತವಾದ ತಲೆಬರಹವನ್ನು ಕೊಡಿರಿ.
4. 1–3 ನೇ ವಚನಗಳಲ್ಲಿ ದಾವೀದನು ತನ್ನ ಪರಿಸ್ಥಿತಿಯನ್ನು ಹೇಗೆ ವಿವರಿಸುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. 6–7 ನೇ ವಚನಗಳಲ್ಲಿ ದಾವೀದನು ತನ್ನ ಪರಿಸ್ಥಿತಿಯನ್ನು ಹೇಗೆ ವಿವರಿಸುತ್ತಾನೆ? ನಿಮ್ಮ ಮಾತುಗಳನ್ನು ಬಳಸಿ.
6. ಈ ಕೀರ್ತನೆ ಯಾವ ಟಿಪ್ಪಣಿಯಲ್ಲಿ ಕೊನೆಗೊಳ್ಳುತ್ತದೆ?
7. ಈ ಕೀರ್ತನೆಯ ಬಗ್ಗೆ ತಲೆಬರಹವು ನಮಗೆ ಏನು ಹೇಳುತ್ತದೆ? ಸತ್ಯವೇದದಲ್ಲಿನ **"ತಲೆಬರಹ"** ಕೀರ್ತನೆಯ ಸಾರಾಂಶವನ್ನು ಒಳಗೊಂಡಿದೆ ಎಂಬುದನ್ನು ಗಮನಿಸಿ.

ಕೀರ್ತನೆ 6 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯ ಹಿನ್ನಲೆಯನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ದಾವೀದನು ಅನಾರೋಗ್ಯವನ್ನು ಎದುರಿಸಿದನೋ? ಅಥವಾ ಆತನು ಶತ್ರುಗಳನ್ನು ಎದುರಿದನೋ? ಅಥವಾ ಆತನು ಮರಣವನ್ನು ಎದುರಿಸಿದನೋ? ಅಥವಾ ಆತನು ತನ್ನ ಪಾಪಗಳಿಗಾಗಿ ದೇವರ ತೀರ್ಪನ್ನು ಎದುರಿಸಿದನೋ? ನಿಮ್ಮ ತೀರ್ಮಾನವನ್ನು ಬೆಂಬಲಿಸಲು ಕೀರ್ತನೆಯ ಪದಗಳನ್ನು ಬಳಸಿ.

2. ದೇವರು ಅವನನ್ನು ಬಿಡುಗಡೆ ಮಾಡಲು ದಾವೀದನು 4–5 ನೇ ವಚನಗಳಲ್ಲಿ ಎರಡು ಕಾರಣಗಳನ್ನು ನೀಡುತ್ತಾನೆ. ಆ ಕಾರಣಗಳೇನು? ಯಾವುದು ಉತ್ತಮ ಕಾರಣ ಎಂದು ನೀವು ಭಾವಿಸುತ್ತೀರಿ ಮತ್ತು ಏಕೆ?

3. ಈ ಕೀರ್ತನೆಯ ಕೆಲವು ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡಿ:

   ಅ. ಅದರ ಸ್ವರ/ಭಾವವನ್ನು ವಿವರಿಸಿ. ಸ್ವರ/ಭಾವವು ಕೀರ್ತನೆಗಳು 3 ಮತ್ತು 4 (ದಾವೀದನು ಬರೆದದ್ದು) ಕ್ಕಿಂತ ಹೇಗೆ ಭಿನ್ನವಾಗಿದೆ? ಕೀರ್ತನೆಯು ಭಿನ್ನವಾದ ಸ್ವರದಲ್ಲಿ ಕೊನೆಗೊಳ್ಳುತ್ತದೆ ಎಂಬುದನ್ನು ನೆನಪಿನಲ್ಲಿಡಿ.

   ಆ. 1 ನೇ ವಚನವು ಸಮಾನಾರ್ಥಕ ಸಮಾನಾಂತರತೆಯ ಉತ್ತಮ ಉದಾಹರಣೆಯನ್ನು ಒಳಗೊಂಡಿದೆ. ಹೇಗೆ ಎಂದು ವಿವರಿಸಿ.

   ಇ. 2 ನೇ ವಚನದಲ್ಲಿನ **"ಮೂಳೆಗಳು"** ಎಂಬುದು ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ ಎಂಬ ಮಾತಿನ ಒಂದು ಉದಾಹರಣೆಯಾಗಿದೆ (**"ಇಡೀ ಭಾಗವನ್ನು ಒಂದು ಭಾಗದಿಂದ ಪ್ರತಿನಿಧಿಸಲಾಗುತ್ತದೆ, ಅಥವಾ ಒಂದು ಭಾಗವನ್ನು ಇಡೀ ಭಾಗದಿಂದ ಪ್ರತಿನಿಧಿಸಲಾಗುತ್ತದೆ"**). **"ಮೂಳೆಗಳು"** ಎಂಬ ಪದವನ್ನು ಬಳಸುವ ಮೂಲಕ ದಾವೀದನು ಏನನ್ನು ಉಲ್ಲೇಖಿಸುತ್ತಾನೆ ಎಂಬುದನ್ನು ವಿವರಿಸಿ.

   ಈ. 3 ನೇ ವಚನದಲ್ಲಿ **"ಎಷ್ಟು ಕಾಲ...."** ಎಂಬ ಪ್ರಶ್ನೆಯನ್ನು ಪುನರಾವರ್ತಿಸಲಾಗಿದೆ ಎಂಬುದನ್ನು ಗಮನಿಸಿ. ದೇವರಿಗೆ ಈ ರೀತಿಯ ಪ್ರಶ್ನೆಯು ಪ್ರಲಾಪ ಮತ್ತು ಪ್ರಾರ್ಥನೆಯ ಕೀರ್ತನೆಗಳ ಅಲಂಕಾರಿಕ ಪ್ರಶ್ನೆ ಶೈಲಿಗೆ ಸೇರಿದೆ. ಕೀರ್ತನೆ 10:1, 13:1, 22:1, 42:9, 74:1, 10, 11, 79:5, 11, 80:4, 88:14, 89:46, 90:13, 94:3 ಗಳನ್ನು ಕನಿಷ್ಟ ಎರಡು ಕನ್ನಡ ಅನುವಾದಗಳಲ್ಲಿ ಓದಿ.

   ಉ. 6 ನೇ ವಚನದಲ್ಲಿರುವ ಅತಿಶಯೋಕ್ತಿಗಳನ್ನು ವಿವರಿಸಿ.

4. 4 ನೇ ವಚನದಲ್ಲಿ, ದೇವರು ತನ್ನನ್ನು ತನ್ನ ಸಂಕಟದಿಂದ ಬಿಡುಗಡೆ ಮಾಡಬೇಕೆಂದು ನಿರೀಕ್ಷಿಸಲು ಒಂದು ಕಾರಣವನ್ನು (ಇಬ್ರಿಯ ಪದ ಹೆಸೆದ್) ಹೇಳುತ್ತಾನೆ.
   ಅ. ಕನ್ನಡ ಅನುವಾದಗಳನ್ನು ಹೋಲಿಕೆ ಮಾಡಿ. ಅವರು ಇಬ್ರಿಯ ಪದ ಹೆಸೆದ್ ಅನ್ನು ಹೇಗೆ ಅನುವಾದಿಸಿದ್ದಾರೆ? ಅವರು ಬೇರೆ ಬೇರೆ ಪದಗಳನ್ನು ಏಕೆ ಬಳಸಿದ್ದಾರೆಂದು ನೀವು ಭಾವಿಸುತ್ತೀರಿ?
   ಆ. ಧರ್ಮೋಪದೇಶಕಾಂಡ 7:9, 12 ನೋಡಿ. ಹಾಗಾದರೆ ದೇವರು ಮಧ್ಯಪ್ರವೇಶಿಸಿ ತನ್ನ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆ ಎಂಬ ದಾವೀದನ ನಿರೀಕ್ಷೆಗೆ ಹಳೇ ಒಡಂಬಡಿಕೆಯ ಹಿನ್ನಲೆ ಏನಾಗಿರುತ್ತದೆ?
   ಇ. ಕೀರ್ತನೆಗಳಲ್ಲಿ **"ಹೆಸೆದ್"** ಎಂಬ ಇಬ್ರಿಯ ಪದವನ್ನು ಹಲವು ಬಾರಿ ಬಳಸಲಾಗಿದೆ, ಉದಾಹರಣೆಗೆ ಕೀರ್ತನೆಗಳು 5:7, ಕೀರ್ತನೆ 13:5, ಕೀರ್ತನೆ 18:50, ಕೀರ್ತನೆ 23:6, ಕೀರ್ತನೆ 25:6, 7, 10, ಕೀರ್ತನೆ 100:5, ಕೀರ್ತನೆ 103:4, 11, 17, ಕೀರ್ತನೆ 119:41, 64, 76, 88, 124, 149, 159, ಕೀರ್ತನೆ 136 (ಪ್ರತಿಯೊಂದು ವಚನದಲ್ಲಿ), ಕೀರ್ತನೆ 147:11. ದೇವರು ತನ್ನ ಜನರೊಂದಿಗೆ ಹೊಂದಿರುವ ಸಂಬಂಧದ ಶ್ರೀಮಂತಿಕೆಯ ಬಗ್ಗೆ ಹೆಚ್ಚಿನ ತಿಳುವಳಿಕೆಗಾಗಿ ಈ ಉಲ್ಲೇಖನಗಳನ್ನು ಓದಿ.
5. ಕೀರ್ತನೆ 6 ಮತ್ತು ಈ ಅಧ್ಯಯನವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

ಕೀರ್ತನೆ 6 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯಲ್ಲಿನ ದಾವೀದನ ಮಾತಗಳು ನೀನು ಹಾದುಹೋದಂಥ ಯಾವುದೇ ಸನ್ನಿವೇಶವನ್ನು ವರ್ಣಿಸುತ್ತವೆಯಾ? ಬಹುಶಃ ನೀವೇನಾದರೂ ತಪ್ಪು ಮಾಡಿರಬಹುದು ಮತ್ತು ನಿಮ್ಮ ಪ್ರಾಣವು ಸಂಕಟಪಡುತ್ತಿದೆಯಾ? ಒಂದು ವೇಳೆ ನೀವು ಏಕಕಾಲದಲ್ಲಿ ಅನಾರೋಗ್ಯ ಮತ್ತು ವೈರಿಗಳನ್ನು ಎದುರಿಸಿರಬಹುದು ಮತ್ತು ದೇವರು ಈ ರೀತಿ ನಿಮ್ಮನ್ನು ಶಿಕ್ಷಿಸಲು ದೇವರಿಗೆ ನೀವು ಏನನ್ನು ಮಾಡಿದ್ದೀರೆಂದು ಯೋಚಿಸಿರಬಹುದು.

ಬಹುಶಃ ನಿಮ್ಮ ಗುಂಪಿನಲ್ಲಿ ನೀವು ಭರವಸವಿಡಬಹುದಾದ ಯಾರಾದರೊಬ್ಬರೊಂದಿಗೆ ನಿಮ್ಮ ನೆನಪು ಮತ್ತು ಅನುಭವಗಳನ್ನು ಹಂಚಿಕೊಳ್ಳಬಹುದು.

2. ಶತಮಾನಗಳಿಂದ ಸಾವಿರಾರು ಭಕ್ತಿಯುತ ಯೆಹೂದ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಈ ಕೀರ್ತನೆಯನ್ನು ಉಪಯೋಗಿಸಿದ್ದಾರೆ. ಹಾಗಾಗೆ ಇತರರು ಕಷ್ಟದ ಸಮಯದಲ್ಲಿ ಉಪಯೋಗಿಸಲೆಂದು ದಾವೀದನ ವ್ಯಥೆಯ ಪ್ರಾರ್ಥನೆಯು ಸತ್ಯವೇದದಲ್ಲಿ ದಾಖಲಾಗಿದೆ. ಕೆಲವೊಮ್ಮೆ ನಾವು ಸರಿಯಾದ ಪದಗಳನ್ನು ಕಾಣದಿದ್ದಾಗ ದಾವೀದನ ಪದಗಳನ್ನು ನಾವು ಉಪಯೋಗಿಬಹುದು. ಆ ರೀತಿಯಲ್ಲಿ ಈ ಕೀರ್ತನೆಯು ನಮಗೆ ದೇವರ ವರವಾಗಿದೆ. ಈ ಕೀರ್ತನೆಯನ್ನು ಕೊಟ್ಟಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಾ ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

3. ತನ್ನ ಸೇವಾ ಸಮಯದಲ್ಲಿ ಯೇಸು ಕ್ರಿಸ್ತನು ಈ ಪ್ರಾರ್ಥನೆಯನ್ನು ಉಪಯೋಗಿಸಿರಬಹುದು. ಪಾಪವೇ ಇಲ್ಲದಂತ ವ್ಯಕ್ತಿ ದೇವರ ಮುಂದೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಒಬ್ಬ ಪಾಪಿಯ ಪದಗಳನ್ನು ಉಪಯೋಗಿಸುತ್ತಾನೆ.

   ಅ. ಆತನು ಮರಣವನ್ನು ಎದುರಿಸುವಾಗ ಆತನು ಬಳಸಿದ ಹೇಳಿಕೆಯು ವಚನ 3 ಅನ್ನು ಪ್ರತಿಧ್ವನಿಸುತ್ತದೆ. ಈಗ ನನ್ನ ಪ್ರಾಣವು ತತ್ತರಿಸುತ್ತದೆ (ಯೋಹಾನ 12:27).

   ಆ. ತನ್ನ ಸೇವೆಯ ಪ್ರಾರಂಭದಲ್ಲಿ, ಯಾರು ದೇವರ ರಾಜ್ಯದೊಳಗೆ ಸೇರುವರು ಎಂಬುದರ ಬಗ್ಗೆ ಮಾತನಾಡುವಾಗ (ಪರ್ವತ ಪ್ರಸಂಗದಲ್ಲಿ), ವಚನ 8ರಿಂದ ಹೇಳಿಕೆಯನ್ನು ಆತನು ಉಪಯೋಗಿಸುತ್ತಾನೆ. "ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿ ಹೋಗಿರಿ" (ಮತ್ತಾಯ. 7:23).

   ಈ ರೀತಿಯಲ್ಲಿ ಕೀರ್ತನೆಯನ್ನು ಯೇಸು ಕ್ರಿಸ್ತನು ಉಪಯೋಗಿಸುವ ಬಗೆಯಿಂದ ನೀವು ಏನನ್ನು ಕಲಿಯಬಹುದೆಂದು ನಿಮ್ಮ ಗುಂಪಿನಲ್ಲಿ ವಿಮರ್ಶಿಸಿರಿ.

ಕೀರ್ತನೆಗಳನ್ನು ವ್ಯಾಖ್ಯಾನಿಸುವುದು

ಕೀರ್ತನೆಗಳನ್ನು ವ್ಯಾಖ್ಯಾನಿಸುವುದರಲ್ಲಿನ ಮುಖ್ಯ ಸಮಸ್ಯೆಯೆಂದರೆ ಅದರ ಲಕ್ಷಣದೊಂದಿಗಿನದಾಗಿದೆ. ಕೀರ್ತನೆಗಳು ದೇವರಿಗೆ ಹೇಳುವ ಮನುಷ್ಯನ ಮಾತುಗಳಾಗಿವೆ. ದಾವೀದನು ಮತ್ತು ಇತರೆ ಕೀರ್ತನೆಗಾರರು ಪ್ರಾರ್ಥನೆ ಮತ್ತು ಸ್ತುತಿಯಲ್ಲಿ ದೇವರ ಕಡೆಗೆ ತಿರುಗುತ್ತಾರೆ. ಈ ರೀತಿಯ ಪ್ರಾರ್ಥನೆ ಮತ್ತು ಸ್ತುತಿಗಳಲ್ಲಿ ಅವರು ದೇವರ ಬಗ್ಗೆ ಸಹ ಮಾತನಾಡುತ್ತಾರೆ .

ಆದರೆ ಹೆಚ್ಚಿನ ವಿಶ್ವಾಸಿಗಳು ಕೀರ್ತನೆಗಳನ್ನು ಸೇರಿಸಿ ಸತ್ಯವೇದವು, ದೇವರು ಮನುಷ್ಯನಿಗೆ ಕೊಟ್ಟ ದೇವರ ಮಾತೆಂದು ಅರ್ಥೈಸಿಕೊಳ್ಳುತ್ತಾರೆ. ಹಾಗಾದರೆ ದೇವರಿಗೆ ಹೇಳುವ ಮಾತು ಮತ್ತು ದೇವರ ಕುರಿತಾದ ಮಾತುಗಳು ಅದೇ ಸಮಯದಲ್ಲಿ ಹೇಗೆ ದೇವರಿಂದ ಬಂದ ಮಾತುಗಳಾಗಿರಬಹುದು? ಕಾರಣವೇನೆಂದರೆ ಈ ಪ್ರಾರ್ಥನೆ ಮತ್ತು ಸ್ತುತಿಗಳ ಪದಗಳು ದೇವರ ಕುರಿತಾದ ಸತ್ಯಗಳನ್ನು ಪದ್ಯರೂಪದಲ್ಲಿ ವ್ಯಕ್ತಪಡಿಸುತ್ತವೆ.

ಕೀರ್ತನೆಗಳು ಏನು ಅಲ್ಲವೆಂಬುದನ್ನು ನೋಡೋಣ: ಅವು ಸಿದ್ಧಾಂತದ ಹೇಳಿಕೆಗಳಲ್ಲ. ಅವು ದೇವಜನರು ಹೇಗೆ ಜೀವಿಸಬೇಕೆಂಬುದಕ್ಕಾಗಿ ಇರುವ ದೇವರ ಆಜ್ಞೆಗಳಲ್ಲ. ಹಾಗೆ ಕೀರ್ತನೆಗಳು ಪ್ರಾಥಮಿಕ ಕರ್ತವ್ಯದ ಸಿದ್ಧಾಂತಗಳನ್ನು ಅಥವಾ ನೈತಿಕ ಸ್ವಭಾವವನ್ನು ಕಲಿಸುವುದಲ್ಲ, ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ ಹಳೇ ಒಡಂಬಡಿಕೆಯ ಐತಿಹಾಸಿಕ ಪುಸ್ತಕಗಳಲ್ಲಿನ ಸಂಗತಿಗಳಂತೆ **"ದೇವರ ಕಥೆಯೊಂದಿಗೆ"** ಸಂಬಂಧ ಕಲ್ಪಿಸುವ ಕಥೆಗಳಲ್ಲ.

ಹಾಗಾದರೆ ಯಾವ ರೀತಿಯಲ್ಲಿ ಕೀರ್ತನೆಗಳು ನಮಗೆ ಉಪಯುಕ್ತವಾಗಿವೆ? ಇಂದು ವಿಶ್ವಾಸಿಗಳಾದ ನಮಗೆ ಅವು ಉಪಯುಕ್ತವಾಗಿವೆ, ಯಾಕೆಂದರೆ ದೇವರೊಂದಿಗೆ ನಮ್ಮ ಭಾವನೆ ಹಂಚಿಕೊಳ್ಳಲು ಅವು ಉಪಯುಕ್ತವಾಗಿವೆ. ದೇವರು ಯಾರಾಗಿದ್ದಾನೆ ಮತ್ತು ಜನರೊಂದಿಗೆ ಆತನು ಹೇಗೆ ವರ್ತಿಸುತ್ತಾನೆಂಬುದರ ಮೇಲೆ ವಿಮರ್ಶಿಸಲು ಸಹ ಇವು ನಮಗೆ ಸಹಾಯಿಸುತ್ತವೆ. ಅವು ಸಂತೋಷ ಮತ್ತು ದುಃಖ, ಯಶಸ್ಸು ಮತ್ತು ಸೋಲು, ನಿರೀಕ್ಷೆ ಮತ್ತು ವಿಷಾದವನ್ನು ವ್ಯಕ್ತಪಡಿಸಲು ನಮಗೆ ಸಹಾಯಿಸುತ್ತವೆ. ಕಷ್ಟ ಮತ್ತು ವಿರೋಧದ ಸಮಯದಲ್ಲಿ ಕೀರ್ತನೆಗಾರನ ಮಾತನ್ನು ನಾವು ಮರು ಉಪಯೋಗ ಮಾಡುವಾಗ ದೇವರು ನಮ್ಮೊಂದಿಗೆ ಹೇಗೆ ಮಾತನಾಡುತ್ತಾನೆ ಮತ್ತು ತನ್ನ ಗುಣ ಸ್ವಭಾವವನ್ನು ನಮಗೆ ಹೇಗೆ ತೋರ್ಪಡಿಸುತ್ತಾನೆಂಬುದನ್ನು ನಾವು ಅನುಭವಿಸಬಹುದು. ಆತನು ದಾವೀದ ಮತ್ತು ಇತರ ಕೀರ್ತನೆಗಾರರೊಂದಿಗೆ ಮಾತನಾಡಿದಂತೆ ಮತ್ತು ಅವರಿಗೆ ತನ್ನ ಗುಣಸ್ವಭಾವವನ್ನು ಪ್ರಕಟಿಸಿಕೊಂಡತೆ, ಇಂದು ಸಹ ಆತನು ನಮ್ಮೊಂದಿಗೆ ಮಾತನಾಡುತ್ತಾನೆ ಮತ್ತು ತನ್ನ ಗುಣಸ್ವಭಾವವನ್ನು ಪ್ರಕಟಿಸಿಕೊಳ್ಳುತ್ತಾನೆ. ಮತ್ತು ನಾವು ಕೀರ್ತನೆಗಾರನ ಕೃತಜ್ಞತೆ ಮತ್ತು ಸ್ತುತಿ/ಸ್ತೋತ್ರದ ಮಾತುಗಳನ್ನು ಮರು ಉಪಯೋಗ ಮಾಡುವಾಗ ದೇವರು ನಮ್ಮ ಸಂಗಡ ಮಾತನಾಡುತ್ತಾನೆ ಮತ್ತು ದಾವೀದ ಮತ್ತು ಇತರೆ ಕೀರ್ತನೆಗಾರರೊಂದಿಗೆ ಮಾತನಾಡಿ ಆಶೀರ್ವದಿಸಿದಂತೆ ದೇವರು ನಮ್ಮ ಕೂಡ ಮಾತನಾಡುತ್ತಾನೆ ಮತ್ತು ನಮ್ಮನ್ನು ಆಶೀರ್ವದಿಸುತ್ತಾನೆ.

ಇದರರ್ಥ ಕೀರ್ತನೆಗಳ ಪುಸ್ತಕವು ಅಂದು ಇಸ್ರಾಯೇಲ್ಯರಿಗಾಗಿ ಕಾರ್ಯನಿರ್ವಹಿಸಿದಂತೆಯೇ ಇಂದು ವಿಶ್ವಾಸಿಗಳಾದ ನಮ್ಮೊಂದಿಗೆ ಸಹ ಕಾರ್ಯನಿರ್ವಹಿಸುತ್ತದೆ. ಗತಕಾಲದಲ್ಲಿ ತನ್ನೊಂದಿಗೆ ಮಾತನಾಡಲು ಜನರನ್ನು ಪ್ರೇರೇಪಿಸಿದ ಮಾತುಗಳ ಮೂಲಕ ನಾವೂ ಸಹ ದೇವರೊಂದಿಗೆ ಮಾತನಾಡಲು ನಮಗೆ ಅವಕಾಶಗಳನ್ನು ಒದಗಿಸುತ್ತದೆ. ಪ್ರಾಚೀನ ಇಸ್ರಾಯೇಲ್ಯರು, ನಂತರದ ಯೆಹೂದಿ ಸಮುದಾಯ ಮತ್ತು ಕ್ರೈಸ್ತ ಸಭೆಯು ಕೀರ್ತನೆಗಳಿಂದ ಮೂರು ಪ್ರಾಮುಖ್ಯ ಪ್ರಯೋಜನಗಳನ್ನು ಹೊಂದಿಕೊಂಡಿದೆ:

1. ಕೀರ್ತನೆಗಳು **ಆರಾಧನೆಯಲ್ಲಿ ನಮಗೆ ಸಹಾಯಿಸಬಲ್ಲವು**. ಸಭಾ ಇತಿಹಾಸದುದ್ದಕ್ಕೂ ಲೆಕ್ಕವಿಲ್ಲದಷ್ಟು ಹಾಡುಗಳು ಕೀರ್ತನೆಗಳ ವಾಕ್ಯಭಾಗಗಳನ್ನು ಆದರಿಸಿವೆ. ಕೀರ್ತನೆಗಳಿಂದ ವಾಕ್ಯಭಾಗಗಳನ್ನು ಎಲ್ಲಾ ಸಭೆಗಳೊಳಗಿನ ಪ್ರಾರ್ಥನೆ ಮತ್ತು ಪ್ರಾರ್ಥನಾ ವಿಧಿ ಅಥವಾ ಸಂಸ್ಕಾರಗಳಲ್ಲಿ ಉಪಯೋಗಿಸಲಾಗಿದೆ.
2. ದೇವರೊಂದಿಗೆ ನಾವು ಹೇಗೆ ಪ್ರಾಮಾಣಿಕರಾಗಿರಬೇಕು, ಸಂತೋಷ ಮತ್ತು ಕೃತಜ್ಞತೆಯನ್ನು, ಅಲ್ಲದೆ ನಿರಾಶೆ, ಸಿಟ್ಟು ಮತ್ತು ಹತಾಶೆಯನ್ನು ಹೇಗೆ ವ್ಯಕ್ತಪಡಿಸಬೇಕೆಂದು ಕೀರ್ತನೆಗಳು ನಮಗೆ ತೋರಿಸುತ್ತವೆ.
3. ದೇವ ಜನರಾದ ನಾವು, ದೇವರು ನಮಗಾಗಿ ಏನೆಲ್ಲಾ ಮಾಡಿದ್ದಾನೆಂಬುದನ್ನು ವಿಮರ್ಶಿಸುವುದು ಮತ್ತು ಧ್ಯಾನಿಸುವುದು ಅತೀ ಪ್ರಾಮುಖ್ಯವಾಗಿದೆ ಎಂಬುದನ್ನು ನಮಗೆ ಕೀರ್ತನೆಗಳು ತೋರಿಸುತ್ತವೆ. ಆದರೆ ಇತರೆ ವಿಶ್ವಾಸಿಗಳೊಂದಿಗೆ ಅನ್ಯೋನ್ಯತೆಯಿಂದಿರಲು ಸಹ ಅವು ನಮ್ಮನ್ನು ಆಹ್ವಾನಿಸುತ್ತವೆ.

ಒಂದು ಎಚ್ಚರಿಕೆ

ಅಂತಿಮವಾಗಿ ಒಂದು ಎಚ್ಚರಿಕೆ: ಕೀರ್ತನೆಗಳು ನಮಗೆ ಒಂದು ಅಹ್ಲಾದಕರವಾದ/ ಮಧುರವಾದ ಜೀವನವನ್ನು ಗ್ಯಾರಂಟಿಯಾಗಿ ಕೊಡುವುದಿಲ್ಲ. ಒಂದು ನಿಮಿಷ ನಾವು ಪ್ರಸಿದ್ಧ ಕೀರ್ತನೆಗಾರನಾದ ದಾವೀದನ ಜೀವಿತವನ್ನು ವಿಮರ್ಶಿಸುವುದಾದರೆ ನಾವದನ್ನು ತಿಳುಕೊಳ್ಳುತ್ತೇವೆ. ದೀರ್ಘಾವಧಿಯವರೆಗೆ ದಾವೀದನ ಜೀವಿತವು ದುಃಖ ಮತ್ತು ನಿರಾಶೆಯಿಂದ ತುಂಬಿತ್ತು. ಆದರೆ ಎಲ್ಲಾ ಹೋರಾಟ ಮತ್ತು ಜೀವಬೆದರಿಕೆಯ ಸನ್ನಿವೇಶಗಳಲ್ಲಿ ಆತನು ದೇವರನ್ನು ಸ್ತುತಿಸಿದನು ಮತ್ತು ಕೃತಜ್ಞತೆ ಸಲ್ಲಿಸಿದನು. ತನ್ನ ಜೀವನದ ಪ್ರತೀ ತಿರುವಿನಲ್ಲಿಯೂ ಸಹ ಆತನು ಇದನ್ನೇ ಮಾಡಿದನು. ತನ್ನ ಪ್ರಲಾಪದಲ್ಲಿ ಸಹ ಹಿಂದೆ ದೇವರು ಮಾಡಿದ ಕಾರ್ಯಗಳಿಗಾಗಿ ಮತ್ತು ಪ್ರಸ್ತುತ ಪರಿಸ್ಥಿತಿಯಲ್ಲಿ ದೇವರ ಸಹಾಯಕ್ಕಾಗಿ ದೇವರಲ್ಲಿನ ತನ್ನ ಭರವಸೆಯನ್ನು ವ್ಯಕ್ತಪಡಿಸಲು ಸಹ ಆತನು ಸಚಿದರ್ಭವನ್ನು ಕಂಡುಕೊಳ್ಳುತ್ತಿದ್ದನು. ವಿಶ್ವಾಸಿಗಳಾದ ನಮಗೆ ಇಚಿದು ಇದೊಂದು ದೊಡ್ಡ ಮಾದರಿಯಾಗಿದೆ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲ್ಕಂಡ ವಾಕ್ಯಭಾಗದಲ್ಲಿ ಕಾಣಬಹುದು. ಆದರೆ ಅಲ್ಲಿ ನೋಡದೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನೂ ಹೆಚ್ಚಾಗಿ ಕಲಿಯುವಿರಿ. ಸಾಧ್ಯವಾದಷ್ಟು ನಿಮ್ಮದೇ ಮಾತಿನಲ್ಲಿ ಉತ್ತರಿಸಿರಿ.

1. ಕೀರ್ತನೆಗಾರನು ದೇವರಿಗೆ ಹೇಳುವ ಮಾತು ಮತ್ತು ದೇವರ ಕುರಿತಾಗಿ ಮಾತನಾಡುವುದು ಅದೇ ಸಮಯದಲ್ಲಿ ಹೇಗೆ ಮನುಷ್ಯನಿಗೆ ದೇವರ ಮಾತಾಗುತ್ತದೆಂಬುದನ್ನು ವಿವರಿಸಿರಿ.
2. ಪ್ರಾಚೀನ ಇಸ್ರಾಯೇಲ್ಯರಿದ್ದಂತೆ ಯಾವ ಮೂರು ರೀತಿಯಲ್ಲಿ ಕೀರ್ತನೆಗಳ ಪುಸ್ತಕವು ತಲಾಂತರಗಳಿಂದ ಸಭೆಗೆ ಹೇಗೆ ಉಪಯುಕ್ತವಾಗಿದೆ?

ಕೀರ್ತನೆ 8

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಕೀರ್ತನೆಯ ಸೃಷ್ಟಿಕರ್ತನಾದ ದೇವರಿಗೆ ಸಲ್ಲಿಸುವ ಒಂದು ಸ್ತುತಿಗೀತೆಯಾಗಿದೆ. ಇದು ಆದಿಕಾಂಡದ ಮೊದಲ ಅಧ್ಯಾಯಗಳಲ್ಲಿ ತನ್ನ ಸೃಷ್ಟಿಯ ಕೀರಿಟವಾದ ಮನುಷ್ಯನಿಗೆ ದೇವರು ತಾನು ಸೃಷ್ಟಿಸಿದ ಜಗತ್ತಿನ ಮೇಲೆಲ್ಲಾ ಆಳ್ವಿಕೆ ಮಾಡಲು ಆಜ್ಞಾಪಿಸಿದ್ದನ್ನು ನಮಗೆ ನೆನಪಿಸುತ್ತದೆ. ಆದರೆ ದೇವರ ಮತ್ತು ಆತನ ಜನರ ವೈರಿಗಳನ್ನು ಇಲ್ಲಿ ತಿಳಿಸಿದ್ದನ್ನು ಸಹ ನಾವು ಕಾಣುತ್ತೇವೆ.

ಈ ಕೀರ್ತನೆಯು ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನ ಬಗ್ಗೆ ಪ್ರವಾದನೆಯಾಗಿ ನಾಲ್ಕು ಬಾರಿ ಬಳಸಲ್ಪಟ್ಟಿದೆ:

ಅ. ಮಕ್ಕಳು **"ಹೋಸನ್ನ"** ಎಂದು ಕೊಂಡಾಡುವುದರ ಬಗ್ಗೆ ಯಾಜಕರು ದೂರುವಾಗ ಸ್ವತಃ ಯೇಸು ಕ್ರಿಸ್ತನೇ ದೇವಾಲಯದ ಹತ್ತಿರ ವಚನ 2 ಅನ್ನು ಉಪಯೋಗಿಸುತ್ತಾನೆ (**"ಸಣ್ಣ ಮಕ್ಕಳ ಬಾಯಿಂದಲೂ ಮೊಲೆಕೂಸುಗಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ"** ಮತ್ತಾಯ. 21:16).

ಆ. ಪೌಲನು ಮತ್ತು ಇಬ್ರಿಯ ಪತ್ರಿಕೆಯ ಗ್ರಂಥಕರ್ತನು ಸಹ ಯೇಸು ಕ್ರಿಸ್ತನ ಅಧಿಕಾರ ಮತ್ತು ಆಳ್ವಿಕೆಯನ್ನು ಸೂಚಿಸಲು 4–6 ವಚನ ಭಾಗವನ್ನು ಉಪಯೋಗಿಸಿದ್ದಾರೆ (1 ಕೊರಿಂಥ. 15:24–27, ಎಫೆಸ. 1:22, ಇಬ್ರಿಯ. 2:6–9).

ನಿನ್ನ ನಾಮವು (ವಚನ 1,9): ದೇವರ ನಾಮವು ಆತನ ಗುಣಸ್ವಭಾವ ಮತ್ತು ವ್ಯಕ್ತಿತ್ವದ ಪ್ರಕಟಣೆಯಾಗಿದೆ (ನೋಡಿ. ವಿಮೋಚನಕಾಂಡ 3:14–15, 34:6–7). ಹಾಗಾಗಿ **"ನಿನ್ನ ನಾಮವು"** ಎಂಬ ಹೇಳಿಕೆಯು **"ದೇವರಾದ ನೀನು"** ಅಥವಾ **"ಕರ್ತನಾದ ನೀನು"** ಎಂಬಂತೆ ಅರ್ಥವನ್ನು ಕೊಡುತ್ತದೆ.

ಸ್ತೋತ್ರ (ವಚನ 2): **ಕನ್ನಡ ಸತ್ಯವೇದ**ದಲ್ಲಿ **"ಬಲವಾದ, ಸಾಕ್ಷಿ"** ಎಂದಿದೆ (ಇಲ್ಲಿ ಇಬ್ರಿಯ ಪಠ್ಯ ಬಳಸಲಾಗಿದೆ). ಕನ್ನಡದ **ಪವಿತ್ರ ಗ್ರಂಥ**ದಲ್ಲಿ **"ಸ್ತೋತ್ರ"** ಎಂದಿದೆ (ಇಲ್ಲಿ ಗ್ರೀಕಿನ ಸೆಪ್ಟೂಜೆಂಟ್ ಪಠ್ಯ ಬಳಸಲಾಗಿದೆ). ಮತ್ತಾಯ. 21:16 ಗ್ರೀಕಿನ ಸೆಪ್ಟೂಜೆಂಟ್ ಪಠ್ಯ ಆವೃತ್ತಿಯಿಂದ ವಾಕ್ಯಭಾಗವನ್ನು ಬಳಸಿದೆ.

ನಿನ್ನ ಬೆರಳುಗಳು (ವಚನ 3): **ಪವಿತ್ರ ಗ್ರಂಥ**ದಲ್ಲಿ ಭಾಷಾಂತರಿಸಿಲ್ಲ. **ಸತ್ಯವೇದವು** ಮತ್ತು **ಪವಿತ್ರ ಬೈಬಲ್** ನಲ್ಲಿ **"ಕೈ ಕೆಲಸ"** ಎಂದಿದೆ. ವಿಮೋಚನಕಾಂಡ 8:19 **"ಆಗ ಆ ಜೋಯಿಸರು ಇದು ದೇವರ ಕೈ ಕೆಲಸವೇ ಸರಿ ಎಂದು ಹೇಳಿದರು"** (ಐಗುಪ್ತದಲ್ಲಿನ ರೋಗಗಳ ಬಗ್ಗೆ). ಈ ವರ್ಣರಂಜಿತ ರೂಪಾಲಂಕಾರವು (**"ಮೆಟೊನಮಿ"**, ಅಸಹಜ ಲಕ್ಷಣದ ಬಗೆ, ಒಂದು ಭಾಗವು ಸಮಸ್ತವನ್ನು ಪ್ರತಿನಿಧಿಸುವುದು, ಇಲ್ಲಿ ದೇವರ ಬೆರಳು (ಕೈ ಕೆಲಸ) ಎಂಬುದು ಒಂದು ಮಾನವೀಕರಣವಾಗಿದ್ದು ಇದು ಶಕ್ತಿಯನ್ನು ಸೂಚಿಸುತ್ತದೆ. ಲೂಕ 11:20 ರಲ್ಲಿ ತನ್ನ ಬಗ್ಗೆ ಯೇಸು ಕ್ರಿಸ್ತನು ಇದೇ ರೀತಿಯ ಹೇಳಿಕೆಯನ್ನು ಉಪಯೋಗಿಸುತ್ತಾನೆ: **"ನಾನು ದೇವರ ಬಲದಿಂದಲೇ ದೆವ್ವಗಳನ್ನು ಬಿಡಿಸುವುದಾದರೆ ದೇವರ ರಾಜ್ಯವು ನಿಮ್ಮ ಹತ್ತಿರಕ್ಕೆ ಬಂತಲ್ಲಾ"**.

ಮನುಷ್ಯಕುಮಾರನು (ವಚನ 4. ಈ ಮಾತು ಕನ್ನಡ ಭಾಷಾಂತರದಲ್ಲಿ ಕಂಡುಬರುವುದಿಲ್ಲ): ಅಸಾಧಣವಾದ ಇಬ್ರಿಯ ಹೇಳಿಕೆ ಬೆನ್–ಅದಾಮ್ ಇದರರ್ಥ **"ಮನುಷ್ಯ"**. ಬಹುಶಃ ದೇವರೊಂದಿಗೆ ಹೋಲಿಕೆಯಲ್ಲಿ ಮನುಷ್ಯನ ಸಣ್ಣತನದ ಮೇಲೆ ಪ್ರಾಧಾನ್ಯತೆಯೊಂದಿಗೆ ಎಂದರ್ಥವಾಗಬಹುದು. ಬಹುಶಃ ಅದಕ್ಕಾಗಿ ದೇವರು ಪ್ರವಾದಿಯಾದ ಯೆಹೆಜ್ಕೇಲನನ್ನು ಈ ರೀತಿಯಲ್ಲಿ ಸಂಬೋಧಿಸಿರಬಹುದು. ಹೊಸ ಒಡಂಬಡಿಕೆಯಲ್ಲಿ ಈ ಹೇಳಿಕೆಯು ಯೇಸು ಕ್ರಿಸ್ತನ ಹೆಸರಿನಲ್ಲಿ ಒಂದಾಗಿದೆ.

ದೇವದೂತರು (ವಚನ 5): ಈ ಇಬ್ರಿಯ ಪದವು **"ದೇವರು"** (ದೈವಿಕ) ಎಂಬುದಾಗಿ ಸಹ ಅರ್ಥೈಸಬಹುದು. ಆದರೆ ಬಹುಶಃ ಇದು ದೇವದೂತರ ಕುರಿತಾಗಿದೆ. ಇದೇ ರೀತಿ ಸೆಪ್ಟೂಜೆಂಟ್‌ನಲ್ಲಿ ಇದು ಭಾಷಾಂತರಗೊಂಡಿದೆ. ಕನ್ನಡ ಸತ್ಯವೇದಗಳು ಸೆಪ್ಟೂಜೆಂಟ್ ಅನ್ನು ಪಾಲಿಸಿವೆ.

ಪ್ರಭಾವ ಮತ್ತು ಮಾನ (ವಚನ 5): ಈ ಪದಗಳು ಸಾಮಾನ್ಯವಾಗಿ ದೇವರ ಕುರಿತಾಗಿ ಉಪಯೋಗಿಲ್ಪಟ್ಟಿವೆ.

ಆತನ ಪಾದದ ಕೆಳಗೆ (ವಚನ 6, ವಚನ 8 **ಪವಿತ್ರ ಗ್ರಂಥ**ದಲ್ಲಿ ಮರೆ): ಇದು ಸಂಪೂರ್ಣ ವಶ ಮತ್ತು ಸಮರ್ಪಣೆಗಾಗಿ ಇರುವ ಒಂದು ರೂಪಾಲಂಕಾರವಾಗಿದೆ (1 ಅರಸು 5:3 ರೊಂದಿಗೆ ಹೋಲಿಸಿ). **ಕನ್ನಡ ಸತ್ಯವೇದ**ವು ಈ ರೂಪಾಲಂಕಾರವನ್ನು ಭಾಷಾಂತರಿಸಿಲ್ಲ ಬದಲಾಗಿ ಇದನ್ನು ವ್ಯಾಖ್ಯಾನಿಸಿದೆ.

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ಒಂದೇ ವಚನವನ್ನು ಪಠ್ಯದಲ್ಲಿ ಎರಡು ಬಾರಿ ಕಾಣುತ್ತೇವೆ. ಅದು ಯಾವ ವಚನ?
3. ಈ ಪುನರಾವರ್ತನೆಗೊಂಡ ಈ ವಚನವು ಕೀರ್ತನೆಯ ಮುಖ್ಯ ವಿಷಯದ ಬಗ್ಗೆ ನಮಗೆ ಏನು ಹೇಳುತ್ತದೆ?
4. ಈ ಕೀರ್ತನೆಯಲ್ಲಿ ದಾವೀದನು ಯಾರನ್ನು ಸಂಬೋಧಿಸುತ್ತಿದ್ದಾನೆ?
5. 4–8 ನೇ ವಚನಗಳಲ್ಲಿ ದಾವೀದನು ಮನುಷ್ಯನನ್ನು ಹೇಗೆ ವಿವರಿಸುತ್ತಾನೆ?

ಕೀರ್ತನೆ 8 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ದಾವೀದನು ಈ ಕೀರ್ತನೆಯನ್ನು ಬರೆದಾಗ ಪರಿಸ್ಥಿತಿ ಏನಾಗಿರಬಹುದೆಂದು ನೀವು ಭಾವಿಸುತ್ತೀರಿ?
2. ಈ ಕೀರ್ತನೆಯ ಕೆಲವು ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡಿ:
   ಅ. ಈ ಕೀರ್ತನೆಯನ್ನು ಒಂದು "ಸ್ತುತಿಯ ಗೀತೆ"ಯಾಗಿ ಮಾಡಲು ದಾವೀದನು ಯಾವ ಪದಗಳು ಮತ್ತು ಹೇಳಿಕೆಗಳನ್ನು ಬಳಸುತ್ತಾನೆ?
   ಆ. ದಾವೀದನು ಈ ಕೀರ್ತನೆಯಲ್ಲಿ ಯಾವ ಸ್ಥಾನವನ್ನು ತೆಗೆದುಕೊಳ್ಳುತ್ತಾನೆ. ಅದನ್ನು ಕೀರ್ತನೆ 3, 4, ಮತ್ತು 6 ರೊಂದಿಗೆ ಹೋಲಿಸಿರಿ. (ಉದಾಹರಣೆಗೆ: "ನಾನು, ನನ್ನ ಮತ್ತು ನನಗೆ" ಎಂದು ಪದ ಬಳಕೆ) ಹಾಗಾಗಿ ಒಂದು "ಸ್ತುತಿ ಗೀತೆಯ" ಕುರಿತು ನಾವು ಯಾವ ತೀರ್ಮಾನಕ್ಕೆ ಬರಬಹುದು?
   ಇ. 3 ನೇ ವಚದಲ್ಲಿರುವ ಮಾನವೀಕರಣವನ್ನು ವಿವರಿಸಿರಿ.
   ಈ. ವಚನ 1 ಮತ್ತು 9 "ಆವರಣ" ಎಂಬ ಸಾಹಿತ್ಯಿಕ ವೈಶಿಷ್ಟ್ಯಕ್ಕೆ ಉತ್ತಮ ಉದಾಹರಣೆಯಾಗಿದೆ. ಇದರ ಅರ್ಥವೇನು ಮತ್ತು ಅದನ್ನು ಬಳಸುವ ಉದ್ದೇಶವೇನು ಎಂಬುದನ್ನು ವಿವಿರಿಸಿ.
3. ಓದುಗರು ಈ ಕೀರ್ತನೆಯಲ್ಲಿ "ಮೊದಲ ಮನುಷ್ಯ" ಮತ್ತು "ಕೊನೆಯ ಮನುಷ್ಯ" ಎರಡನ್ನೂ ಕಾಣಬಹುದು. ಹೇಗೆ ಎಂದು ವಿವರಿಸಿರಿ.
4. ಈ ಕೀರ್ತನೆಯು ದೈವಶಾಸ್ತ್ರ ಮತ್ತು ಸಿದ್ಧಾಂತಗಳಿಂದ ತುಂಬಿದೆ. ಈ ಪ್ರಶ್ನೆಗಳಿಗೆ ಉತ್ತರಿಸಿರಿ.
   ಅ. ದೇವರ ಬಗ್ಗೆ ನಾವು ಏನು ಕಲಿಯುತ್ತೇವೆ?
   ಆ. ಸೃಷ್ಟಿಯಲ್ಲಿ ಮನುಷ್ಯನ ಬಗ್ಗೆ ನಾವು ಏನು ಕಲಿಯುತ್ತೇವೆ? ನಿಮ್ಮ ಉತ್ತರವು ಕನಿಷ್ಟ ಎರಡು ಅಂಶಗಳನ್ನು ಒಳಗೊಂಡಿರಬೇಕು:
      - 3–4 ನೇ ವಚನಗಳಲ್ಲಿ ದಾವೀದನ ಆತ್ಮಾವಲೋಕನ (ಪ್ರತಿಬಿಂಬ)
      - ಆದಿಕಾಂಡ 1:27–30 ರ ಸೃಷ್ಟಿಯ ಕಥೆ

   ಇ. ಯೇಸುವಿನ ಬಗ್ಗೆ ನಾವು ಏನು ಕಲಿಯುತ್ತೇವೆ? ನಿಮ್ಮ ಉತ್ತರವು ಕನಿಷ್ಟ ಎರಡು ಅಂಶಗಳನ್ನು ಒಳಗೊಂಡಿರಬೇಕು:
      - ಯೇಸು ತನ್ನ ಬಗ್ಗೆ 2 ನೇ ವಚನವನ್ನು ಉಲ್ಲೇಖಿಸುತ್ತಾನೆ.
      - ಪೌಲ ಮತ್ತು ಇಬ್ರಿಯ ಪತ್ರಿಕೆಯು 5–6 ವಚನಗಳನ್ನು ಯೇಸುವಿನ ಬಗ್ಗೆ ಪ್ರವಾದನೆಯಾಗಿ ಅರ್ಥೈಸುತ್ತಿದ್ದಾರೆ.

   ಈ. ದೇವರ ಕಡೆಗೆ ನಮ್ಮ ಮನೋಭಾವದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

ಕೀರ್ತನೆ 8 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಇಂದಿನ ಲೋಕದಲ್ಲಿನ ಮನುಷ್ಯರನ್ನು ನೀವು ನೋಡಿದರೆ ದೇವರು ಏದೆನ್ ತೋಟದಲ್ಲಿ ಆದಾಮ ಮತ್ತು ಹವ್ವರಿಗೆ ಕೊಟ್ಟ ಆಜ್ಞೆ/ಆದೇಶದ ಮಟ್ಟದವರೆಗೆ ನಾವು ಬದುಕುತ್ತಿದ್ದೇವಾ (ಆದಿ. 1:27–30)? ಎಷ್ಟರ ಮಟ್ಟಿಗೆ ಬದುಕುತ್ತಿದ್ದೇವೆ? ಎಷ್ಟರ ಮಟ್ಟಿಗೆ ಬದುಕುತ್ತಿಲ್ಲ?

2. ಕೀರ್ತನೆ 8 ರಿಂದ ಆಯ್ದ ಹೊಸ ಒಡಂಬಡಿಕೆಯ ಈ ಹೇಳಿಕೆಗಳನ್ನು ವಿಮರ್ಶಿಸಿರಿ ಮತ್ತು ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸಿರಿ.

   ಅ. **"**ಇವರು ಹೇಳುವುದನ್ನು ಕೇಳುತ್ತೀಯಾ ಎಂದು ಹೇಳಲು, ಯೇಸು ಹೌದು, ಕೇಳುತ್ತೇನೆ, ಸಣ್ಣ ಮಕ್ಕಳ ಬಾಯಿಂದಲೂ ಮೊಲೇಕೂಸುಗಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುದನ್ನು ನೀವು ಎಂದಾದರೂ ಓದಿಲಿಲ್ಲವೋ? ಅಂದನು**"** (ಮತ್ತಾಯ. 21:16). ಕೀರ್ತನೆ 8:2 ರಲ್ಲಿ ಈ ಪದಗಳು/ ಮಾತುಗಳು **"**ಕರ್ತನನ್ನು**"** ಸೂಚಿಸುತ್ತವೆ. ಆದರೆ ಯೇಸು ಅವನ್ನು ತನಗೆ ಅಳವಡಿಸಿಕೊಳ್ಳುತ್ತಾನೆ. ಈ ವಾಸ್ತವಾಂಶದಿಂದ ಯೇಸು ಕ್ರಿಸ್ತನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

   ಆ. ಇಬ್ರಿಯ 2:4–9 ಅನ್ನು ಓದಿರಿ. ಕೀರ್ತನೆ 8:4–6 ಅನ್ನು ಉಪಯೋಗಿಸಿದಂತೆ ಈ ವಾಕ್ಯಭಾಗದಲ್ಲಿ ಗ್ರಂಥಕರ್ತನು **"**ಮುಂದಣ ಸಾಮ್ರಾಜ್ಯ**"**ದ ಬಗ್ಗೆ ಮಾತನಾಡುತ್ತಾನೆ (ವಚನ 5). ಹಾಗೆಯೇ ಆತನು ಹೀಗೆ ಮುಂದುವರೆಸುತ್ತಾನೆ, **"**ಈಗ, ಎಲ್ಲವನ್ನು ಆತನ ಪಾದದ ಕೆಳಗೆ ಹಾಕಿದಂತೆ ನಾವು ಕಾಣುವುದಿಲ್ಲ**"** (ವಚನ 8). ಹಾಗಾದರೆ ಗ್ರಂಥಕರ್ತನು ಯೇಸು ಕ್ರಿಸ್ತನ ಬಗ್ಗೆ ಯಾವ ಅಂಶವನ್ನು ತಿಳಿಯಮಾಡುತ್ತಿದ್ದಾನೆ ಮತ್ತು ಈ ಅಂಶವನ್ನು ತಿಳಿಯ ಮಾಡಲು ಆತನು ಯಾಕೆ ಕೀರ್ತನೆ 8 ಅನ್ನು ಉಪಯೋಗಿಸುತ್ತಾನೆ?

   ಇ. 1 ಕೊರಿಂಥ. 15:20–28 ಅನ್ನು ಓದಿರಿ. ಈ ವಾಕ್ಯಭಾಗದಲ್ಲಿ ಪೌಲನು ಏನನ್ನು ಬೋಧಿಸುತ್ತಾನೆ ಮತ್ತು ಈ ಬೋಧನೆಯನ್ನು ಬೆಂಬಲಿಸಲು ಆತನು ಹೇಗೆ ಕೀರ್ತನೆ 8 ಅನ್ನು ಉಪಯೋಗಿಸುತ್ತಾನೆ?

3. ಒಬ್ಬ ಸತ್ಯವೇದ ಪಂಡಿತರು ಒಂದು ಬಾರಿ ಈ ರೀತಿ ಹೇಳಿದರು: ದೇವರ ಇಡೀ ಸೃಷ್ಟಿಯಲ್ಲಿ ಕೇವಲ ಮನುಷ್ಯನು ಮಾತ್ರ ವಚನ 4 ರಲ್ಲಿನ ಪ್ರಶ್ನೆಯನ್ನು ಕೇಳಲು ಸಾಧ್ಯ ಮತ್ತು ಯೇಸು ಕ್ರಿಸ್ತನ ಮೂಲಕ ಬಿಡುಗಡೆ ಹೊಂದಿದ ಮನುಷ್ಯನು ಮಾತ್ರ ಈ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯಬಲ್ಲನು. ಈ ಹೇಳಿಕೆಯನ್ನು ವಿಮರ್ಶಿಸಿರಿ ಮತ್ತು ಈ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿರಿ. **"**ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು?**"**

4. ಕೀರ್ತನೆ 8 ರ ಆಧಾರದ ಮೇಲೆ ನೀವು ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸುವಾಗ ಪರಿಶುದ್ಧಾತ್ಮನ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿರಿ.

ಕೀರ್ತನೆ 16

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆಬರಹವು **"ದಾವೀದನ ಕಾವ್ಯ"** ಎಂಬ ಸಂಕ್ಷಿಪ್ತ ಹೇಳಿಕೆಯನ್ನು ಒಳಗೊಂಡಿದೆ. ಇಬ್ರಿಯದಲ್ಲಿ ಮಿಕ್ತಂ ಎಂದಿದೆ. ಮಿಕ್ತಂ ಎಂದರೆ ಅರ್ಥ ಅನಾಮಧೇಯ. ಅಕ್ಷರಶಃ ಅಥವಾ ಸಂಗೀತದ ಒಂದು ರೂಪವಾಗಿರಬಹುದು. ಕನ್ನಡದ ಎರಡು ಭಾಷಾಂತರಗಳಲ್ಲಿ ಕಾವ್ಯ (ಪದ್ಯ) ಎಂದಿದೆ. ಇದೇ ರೂಪವನ್ನು ಕೀರ್ತನೆ 56–60 ರಲ್ಲಿ ಬಳಸಲಾಗಿದೆ.

ಈ ಕೀರ್ತನೆಯು ಒಂದು ಭರವಸೆಯ ಹಾಡಾಗಿದೆ. ಇದು ಇಕ್ಕಟ್ಟಿನ ಸಮಯದಲ್ಲಿ ಸಹ ದೇವರ ಕಾಳಜಿ ಮತ್ತು ರಕ್ಷಣೆಯಲ್ಲಿನ ದಾವೀದನ ಭರವಸೆಯನ್ನು ಇದು ವ್ಯಕ್ತಪಡಿಸುತ್ತದೆ.

ಪಂಚಾಶತ್ತಮ ದಿನದಲ್ಲಿ (ಅಪೊ.ಕೃತ್ಯ. 2:25–28) ಯೇಸು ಕ್ರಿಸ್ತನು ಮತ್ತು ಆತನ ಪುನರುತ್ಥಾನವನ್ನು ಸೂಚಿಸಿ ತನ್ನ ಪ್ರಸಂಗದಲ್ಲಿ ಪೇತ್ರನು ಕೀರ್ತನೆ 16:8–11ನ್ನು ಉಪಯೋಗಿಸುತ್ತಾನೆ. ಪಿಸಿದ್ಯದ ಅಂತಿಯೋಕ್ಯದಲ್ಲಿನ ಸಭಾಮಂದಿರದಲ್ಲಿ ಪೌಲನು ತನ್ನ ಪ್ರಸಂಗದಲ್ಲಿ (ಅಪೊ.ಕೃತ್ಯ. 13:35) 10ನೇ ವಚನ ಭಾಗವನ್ನು **"ನೀನು ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವುದಿಲ್ಲವೆಂದು"**. ಯೇಸು ಕ್ರಿಸ್ತನ ಪುನರುತ್ಥಾನದ ಬಗ್ಗೆ ಒಂದು ಪ್ರವಾದನೆಯಾಗಿ ಉಪಯೋಗಿಸುತ್ತಾನೆ.

ನನ್ನ ಪಾನವೂ (ವಚನ 5): ಈ ರೂಪಾಲಂಕಾರವು ಅತಿಥೇಯನು ತನ್ನ ಅತಿಥಿಗಳಿಗೆ ನೀಡುವ ಸ್ವಾಗತ ಪಾನವನ್ನು ಸೂಚಿಸುತ್ತದೆ.

ಆತನು ನನ್ನ ಬಲಗಡೆಯಲ್ಲಿ (ವಚನ 8): ಇದರರ್ಥ ದೇವರು ದಾವೀದನ ಸಂರಕ್ಷಕ ಮತ್ತು ಪಾಲಿಸುವವನಾಗಿದ್ದಾನೆ.

ಪಾತಾಳ (ವಚನ 10): ಇಬ್ರಿಯ ಪಠ್ಯವು ಶಿಯೋಲ್ ಎಂದು ಹೇಳುತ್ತದೆ, ಇದರರ್ಥ ಕೆಳಗಣ ಲೋಕ (ಪಾತಾಳ).

ನಿನ್ನ ಪರಿಶುದ್ಧನಿಗೆ (ವಚನ 10): ಇಬ್ರಿಯದಲ್ಲಿ ಈ ಪದವನ್ನು ದೇವರ ಪರಿಶುದ್ಧ ಮತ್ತು ನಂಬಿಗಸ್ತ ಜನರಿಗೆ ಉಪಯೋಗಿಲಾಗಿದೆ. ಇದನ್ನು **"ನಿನ್ನ ನಂಬಿಗಸ್ತನಿಗೆ"** ಅಥವಾ **"ನಿನ್ನ ಸೇವಕನಿಗೆ"** ಎಂದೂ ಸಹ ಭಾಷಾಂತರಿಸಬಹುದು (ಗ್ರೀಕಿನ ಸೆಪ್ಟೂಜೆಂಟ್ ಇಂಗ್ಲೀಷಿನ **ಎನ್ಐವಿ** ಮತ್ತು **ಇಎಸ್ವಿ** ಮತ್ತು ಕನ್ನಡದ **ಎನ್ಐಬಿವಿ** ಯಂತೆ). ಕನ್ನಡದ **ಜೆವಿ** ಭಾಷಾಂತರವು ಇದನ್ನು **"ನಿನ್ನ ಪ್ರಿಯನಿಗೆ"** ಎಂದು ಭಾಷಾಂತರಿಸಿದೆ.

ನಿನ್ನ ಬಲಗೈಯಲ್ಲಿ (ವಚನ 11): ಕೀರ್ತನೆಯಲ್ಲಿ **"ಬಲಗೈ" "ಬಲಿಷ್ಠ ಕೈ"** ಅಥವಾ **"ಗೌರವದ ಸ್ಥಾನ"** ಎಂದೂ ಅರ್ಥೈಸುತ್ತದೆ.

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯ ವಿಷಯಗಳನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಪುನಃ ಹೇಳಿ:
   ಅ. ದೇವರಿಗೆ ದಾವೀದನ ವಿನಂತಿ ಏನು, ವಚನ 1?
   ಆ. ದೇವರಿಂದ ದಾವೀದನು ಯಾವ ಆಶೀರ್ವಾದಗಳನ್ನು ಪಡೆದಿದ್ದಾನೆ, ವಚನ 2–7?
   ಇ. **"ಜೀವನದ ಮಾರ್ಗ"** ವಚನ 8–11 ಅನ್ನು ವಿವರಿಸಿ.

ಕೀರ್ತನೆ 16 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮೊದಲ ವಚನವು ಎರಡು ಭಾಗಗಳನ್ನು ಹೊಂದಿದೆ. ಈ ಭಾಗಗಳು ಪರಸ್ಪರ ಹೇಗೆ ಸಂಬಂಧಿಸಿವೆ?
2. 5 ನೇ ವಚನದಲ್ಲಿರುವ **"ಪಾನ"** ಎಂಬ ರೂಪಾಲಂಕಾರವನ್ನು ನೀವು ಹೇಗೆ ಅರ್ಥೈಸುತ್ತೀರಿ?
3. ಈ ಕೀರ್ತನೆಯನ್ನು ಹೊಸ ಒಡಂಬಡಿಕೆಯಲ್ಲಿ ಎರಡು ಬಾರಿ ಉಲ್ಲೇಖಿಸಲಾಗಿದೆ:

ಅ. ಅಪೊಸ್ತಲರ ಕೃತ್ಯಗಳು 2:25–28 ರಲ್ಲಿ ಪೇತ್ರನು 8–11 ನೇ ವಚನವನ್ನು ಹೇಗೆ ಬಳಸುತ್ತಾನೆ?

ಆ. ಅಪೋಸ್ತಲ ಕೃತ್ಯಗಳು 13:35 ರಲ್ಲಿ ಪೌಲನು 10 ನೇ ವಚನವನ್ನು ಹೇಗೆ ಬಳಸುತ್ತಾನೆ?

4. ಹಿಂದಿನ ಪ್ರಶ್ನೆಗೆ ನಿಮ್ಮ ಉತ್ತರದ ಬೆಳಕಿನಲ್ಲಿ ನಾವು ಆಧುನಿಕ ಓದುಗರು ಕೀರ್ತನೆ 16 ಅನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಈ ಕೀರ್ತನೆಯು ದಾವೀದನ ಬಗ್ಗೆಯೇ ಅಲ್ಲವೇ? ನಾವು ಈ ಕೀರ್ತನೆಯನ್ನು ನಮ್ಮ ಸ್ವಂತ ಜೀವನಕ್ಕೆ ಅನ್ವಯಿಸಬೇಕೆ?

5. 10–11 ನೆ ವಚನಗಳ ಕಾವ್ಯಾತ್ಮಕ ರಚನೆಯನ್ನು ವಿಶ್ಲೇಷಿಸಿರಿ.

6. 11 ನೇ ವಚನದಲ್ಲಿರುವ **"ನಿನ್ನ ಬಲಗೈಯಲ್ಲಿ"** ಎಂಬ ಹೇಳಿಕೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

7. ದಾವೀದನ ಸ್ವಂತ ಪರಿಸ್ಥಿತಿಯು ಪಠ್ಯದಲ್ಲಿ ಪ್ರತಿಫಲಿಸುತ್ತದೆ. ನಿಮ್ಮ ಸ್ವಂತ ಪರಿಸ್ಥಿತಿಗೆ ಅನ್ವಯಿಸುವಂತೆ ದಾವೀದನ ಪಠ್ಯವನ್ನು **"ಅನುವಾದಿಸಲು"** ಪ್ರಯತ್ನಿಸಿ.

ಅ. ಅನ್ಯದೇವರುಗಳು ಮತ್ತು ರಕ್ತ ಬಲಿಗಳು ಮತ್ತು ಪ್ರಾರ್ಥನೆಗಳ ಮೂಲಕ ಅವುಗಳನ್ನು ಪೂಜಿಸುವುದು ದಾವೀದನಿಗೆ ಒಂದು ಆಯ್ಕೆಯಾಗಿತ್ತು, ವಚನ 4. ನಿಮ್ಮ ಬಗ್ಗೆ ಏನು?

ಆ. ಈ ಕೀರ್ತನೆಯನ್ನು ಬರೆದಾಗ ಬಹುಶಃ ದಾವೀದನು ನಿರಾಶ್ರಿತನಾಗಿದ್ದಿರಬಹುದು. ಆದ್ದರಿಂದ ಅವನಿಗೆ ಯಾವುದೇ ಭೌತಿಕ ಆಶೀರ್ವಾದಗಳು ಮತ್ತು ಭದ್ರತೆ ಇದ್ದರೂ – ಅವು ದೇವರಲ್ಲಿ ಇದ್ದವು, ವಚನ 5. ನಿಮ್ಮ ಬಗ್ಗೆ ಏನು?

ಇ. ದಾವೀದನು ಬಹುಶಃ ಈಗಾಗಲೇ ಒಂದು ಒಳ್ಳೆಯ ದೇಶದ ಮೇಲೆ ರಾಜನಾಗಿದ್ದಿರಬಹುದು, ಆಥವಾ ಅವನು ಅದರಿಂದ ಪಲಾಯನ ಮಾಡಲು ಒತ್ತಾಯಿಸಲ್ಪಟ್ಟಿರಬಹುದು, ವಚನ 6. ನಿಮ್ಮ ಬಗ್ಗೆ ಏನು?

8. ಈ ಕೀರ್ತನೆಯಲ್ಲಿನ **"ದೈವಶಾಸ್ತ್ರ"**ವನ್ನು (ದೇವರನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ವಿಧಾನ) ಸಾರಾಂಶಗೊಳಿಸಿರಿ.

9. ಕೀರ್ತನೆ 16 ಮತ್ತು ಈ ಅಧ್ಯಯನವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 16 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ದೇವರಲ್ಲಿ ತನಗೆ ದೊರತಿರುವ ಆಶ್ರಯ, ಆಶೀರ್ವಾದ, ಭದ್ರತೆ, ಭೂಮಿ, ಮಾರ್ಗದರ್ಶನ ಮತ್ತು ಸಮಾಧಿಯ ಆಚೆಗಿನ ಭವಿಷ್ಯಕ್ಕಾಗಿ ದಾವೀದನು ಕೃತಜ್ಞನಾಗಿದ್ದಾನೆ. ನೀವು ದೇವರಿಗೆ ಯಾವುದಕ್ಕಾಗಿ ಕೃತಜ್ಞರಾಗಿರುತ್ತೀರಿ? ಪಟ್ಟಿಯನ್ನು ಮಾಡಿ. ನಂತರ ನೀವು ದೇವರಿಗೆ ಕೃತಜ್ಞತಾ ಪ್ರಾರ್ಥನೆಯಲ್ಲಿ ಸಮಯ ಕಳೆಯುವಾಗ ಪಟ್ಟಿಯನ್ನು ಬಳಸಿ.

2. ದಾವೀದನು ಕರ್ತನ ಸಲಹೆ ಮತ್ತು ಸೂಚನೆಗಳಿಗಾಗಿ ಆತನನ್ನು ಸ್ತುತಿಸುತ್ತಾನೆ (ವಚನ 7), ಅದು ಅವನಿಗೆ ಜೀವನದ ಮಾರ್ಗವನ್ನು ಬಹಿರಂಗಪಡಿಸಿತು (ವಚನ 11). ದಾವೀದನು ಈ ಸಲಹೆ ಮತ್ತು ಈ ಸೂಚನೆಗಳನ್ನು ಹೇಗೆ ಪಡೆದನೆಂದು ನೀವು ಭಾವಿಸುತ್ತೀರಿ? ನೀವು ಅಂತಿಮವಾಗಿ ದೇವರ ಸಾನಿಧ್ಯದಲ್ಲಿ ಶಾಶ್ವತ ಆನಂದಗಳನ್ನು ಆನಂದಿಸುವ ರೀತಿಯಲ್ಲಿ ನಿಮ್ಮ ಜೀವನವನ್ನು ಸಂತೋಷದಿಂದ ಬದುಕಲು ನಿಮಗೆ ಮಾರ್ಗದರ್ಶನ ಹೇಗೆ ಸಿಗುತ್ತದೆ (ವಚನ 11)?

3. ದೇವರಿಗೆ ಪ್ರಾರ್ಥಿಸಿ:

ಅ. ಸಹ ವಿಶ್ವಾಸಿಗಳನ್ನು ಮೆಚ್ಚಿಸಲು ಮತ್ತು ದೇವರ ಜನರಲ್ಲಿ ಆನಂದಿಸಲು ಸಹಾಯಕ್ಕಾಗಿ (ವಚನ 3)

ಆ. **"ಈ ಲೋಕದ ದೇವರುಗಳು"** ಮತ್ತು ಈ ಲೋಕದ ಶೋಧನೆಗಳಿಂದ ರಕ್ಷಣೆಗಾಗಿ (ವಚನ 4)

ಇ. ನೀವು ಕದಲದಂತೆ ನಂಬಿಕೆಯಲ್ಲಿ ದೃಢವಾಗಿರಲು (ವಚನ 8)

ಈ. ದೇವರಿಗೆ ಮೆಚ್ಚಿಕೆಯಾಗುವ ದೈನಂದಿನ ಜೀವನವನ್ನು ನಡೆಸಲು ಜ್ಞಾನಕ್ಕಾಗಿ, **"ಜೀವಮಾರ್ಗದಲ್ಲಿ"** ನಡೆಯುವುದು (ವಚನ 11)

ಉ. ದೇವರ ಸನ್ನಿಧಿಯಲ್ಲಿ ಸಂತೋಷಕ್ಕಾಗಿ (ವಚನ 11)

ಕೀರ್ತನೆಯ ವಿಧಗಳು

ನಾವು ಈ ಹಿಂದಿನ ಅಧ್ಯಾಯದಲ್ಲಿ ನೋಡಿದಂತೆ ತಲೆ ಬರಹಗಳು ವಿಭಿನ್ನ ಬಗೆಯ ಕೀರ್ತನೆಗಳ ಬಗ್ಗೆ ಮಾಹಿತಿಯನ್ನು ಸಹ ಒಳಗೊಂಡಿವೆ. ಆದರೆ ಇದರಲ್ಲಿನ ಹೆಚ್ಚಿನ ಮಾಹಿತಿಗಳು ವ್ಯಾಖ್ಯಾನಿಸಲು ಕಷ್ಟಕರವಾಗಿವೆ ಮತ್ತು ಕೆಲವು ಇಬ್ರಿಯ ರೂಪಗಳು ಹೇಳುವುದನ್ನು ಸತ್ಯವೇದ ಪಂಡಿತರುಗಳು ಒಪ್ಪುವುದಿಲ್ಲ.

ಕೀರ್ತನೆಗಳ ವಿಷಯಾಂಶಗಳು ಮತ್ತು ವಿಷಯ ವಸ್ತುಗಳ ಒಂದು ಅಧ್ಯಯನವು ಅವು ವಿಭಿನ್ನ ವಿಧಗಳಾಗಿ ವಿಭಾಗಿಸಲ್ಪಟ್ಟದ್ದನ್ನು ತೋರಿಸುತ್ತದೆ. ಇದರಲ್ಲಿನ ಕೆಲವು ವಿಧಗಳು ವಿಭಿನ್ನವಾಗಿವೆ ಮತ್ತು ಗುರುತಿಸಲು ಸುಲುಭವಾಗಿವೆ. ಉಳಿದ ಅಧ್ಯಾಯಗಳು ಅಷ್ಟು ಸ್ಪಷ್ಟವಾಗಿಲ್ಲ. ಕೆಲವು ಕೀರ್ತನೆಗಳನ್ನು ಒಂದಕ್ಕಿಂತ ಹೆಚ್ಚು ವಿಭಾಗಗಳಲ್ಲಿ ಇಡಬಹುದು. ಸತ್ಯವೇದ ಪಂಡಿತರುಗಳು ಈ ಸಂಗತಿಗಳನ್ನು ಒಪ್ಪುವುದಿಲ್ಲ.

ಕೀರ್ತನೆಯ ವಿಷಯಾಂಶ ಮತ್ತು ವಿಷಯವಸ್ತುವಿನ ಆಧಾರದ ಮೇಲೆ ಮಾಡಲಾದ 9 ವಿಧ ಅಥವಾ ಬಗೆಯ ಬಗೆಗಳು ಇಲ್ಲಿವೆ.

1. ಪ್ರಲಾಪಗಳು

ಇದು ಬಹು ದೊಡ್ಡ ಗುಂಪಾಗಿದೆ ಮತ್ತು ಕೀರ್ತನೆಗಳ ಮೂರರಲ್ಲಿ ಒಂದು ಅಂಶವನ್ನು ಪ್ರಲಾಪಗಳೆಂದು ಕರೆಯಬಹುದು. ಪ್ರಲಾಪವು ಇಕ್ಕಟ್ಟಿನ ಸಮಯದಲ್ಲಿ ದೇವರಿಗೆ ಮಾಡುವ ಪ್ರಾರ್ಥನೆಯಾಗಿದೆ. ದೇವರು ಮಧ್ಯೆಪ್ರವೇಶಿಸಿ ಸಹಾಯ ಮಾಡಬೇಕೆಂದು ಆತನನ್ನು ಕೇಳಿಕೊಳ್ಳುವುದಾಗಿದೆ. ಕೆಲ ಸಮಯ ಪ್ರಲಾಪವು ವೈಯಕ್ತಿಕವಾಗಿರುತ್ತದೆ (ಕೀ. 3ರಲ್ಲಿ ಇದ್ದಂತೆ). ಇತರ ಸಮಯಗಳಲ್ಲಿ ಇದು ಸಂಗ್ರಹಿತವಾದದ್ದಾಗಿದೆ. ಇಡೀ ದೇವಜನರ ಸಮುದಾಯವು ಇಕ್ಕಟ್ಟನ್ನು ಎದುರಿಸುವಾಗ (ಕೀರ್ತನೆ 12 ರಲ್ಲಿ ಇದ್ದಂತೆ) ಪ್ರಲಾಪಗಳು ಸಾಮಾನ್ಯವಾಗಿ ಅವುಗಳ ರಚನೆಯಲ್ಲಿ ಸಂಯುಕ್ತವಾಗಿವೆ ಮತ್ತು ಅವು 15 ಭಾಗಗಳನ್ನು ಹೊಂದಿರಬಹುದು (**ಎನ್ಐವಿ ಅಧ್ಯಯನ ಸತ್ಯವೇದ**ದಿಂದ ಸೇರಿಸಲಾಗಿದೆ. ಉದಾಹರಣೆಗಳನ್ನು ವಿವಿಧ ಕೀರ್ತನೆಗಳಿಂದ ತೆಗೆದುಕೊಳ್ಳಲಾಗಿದೆ): ದೇವರನ್ನು ಸಂಬೋಧಿಸುವುದು (ಓ ಕರ್ತನೇ), ದೇವರಿಗೆ ಮನವಿ ಮಾಡುವುದು (ನನ್ನನ್ನು ಕಾಪಾಡು), ಪರಿಸ್ಥಿತಿಯ ವರ್ಣನೆ (ನನಗೆ ವಿರೋಧವಾಗಿ ಎದ್ದವರು ಬಹುಮಂದಿ), ದೇವರಿಗೆ ವಿರುದ್ಧವಾಗಿ ದೂರು (ಇನ್ನೆಷ್ಟರವರೆಗೆ ನೀನು ನಿನ್ನ ಮುಖವನ್ನು ಮರೆಮಾಡಿಕೊಂಡಿರುವಿ), ದೇವರಿಗೆ ವಿಜ್ಞಾಪನೆ (ನನ್ನಿಂದ ದೂರವಾಗಿರಬೇಡ), ದೇವರು ಆಲಿಸಬೇಕೆಂದು ಪ್ರಚೋದಿಸುವುದು (ನೀನು ನನ್ನ ಆಶ್ರಯವಾಗಿದ್ದಿ), ವೈರಿಗಳಿಗೆ ವಿರುದ್ಧವಾಗಿ ದೂಷಣೆ (ದುಷ್ಟರು ನನ್ನ ಪ್ರಾಣಕ್ಕಾಗಿ ಹೊಂಚುಹಾಕುತ್ತಾರೆ), ನ್ಯಾಯ ಮತ್ತು ಪ್ರತಿಕಾರಕ್ಕಾಗಿ ಕೂಗಿಕೊಳ್ಳುವುದು (ನನ್ನ ಪ್ರಾಣಕ್ಕಾಗಿ ಹೊಂಚು ಹಾಕುವವರು ಅವಮಾನಗೊಳ್ಳಲಿ), ಮುಗ್ಧತೆಯ ಹೇಳಿಕೆ (ಅವರು ಕಾರಣವಿಲ್ಲದೆ ನನ್ನ ಮೇಲೆ ಬೀಳುತ್ತಾರೆ), ಪಾಪದ ಅರಿಕೆ (ನಿನಗೆ ವಿರುದ್ಧವಾಗಿ ನಾನು ಪಾಪ ಮಾಡಿದ್ದೇನು), ಭರವಸೆಯ ಹೇಳಿಕೆ (ನೀನು ನನ್ನ ಸುತ್ತಲು ಗುರಾಣಿಯಾಗಿದ್ದಿ), ದೇವರ ಬಿಡುಗಡೆಗಾಗಿ ಆತನನ್ನು ಸ್ತುತಿಸುತ್ತೇನೆಂದು ಮಾತುಕೊಡುವುದು (ನನ್ನ ಬಾಯಿ ನಿನ್ನನ್ನು ಸ್ತುತಿಸುವುದು), ಸ್ತುತಿಸಲು ಕರೆ (ಭೂಮಿ ಮತ್ತು ಅಕಾಶವು ಆತನನ್ನು ಸ್ತುತಿಸಲಿ) ಮತ್ತು ಸ್ತುತಿಸಲು ಉತ್ತೇಜಿಸುವುದು (ಕಷ್ಟದಲ್ಲಿದ್ದವರ ಮೊರೆಯನ್ನು ಯೆಹೋವನು ಆಲಿಸುತ್ತಾನೆ). ಈ ಎಲ್ಲಾ ಭಾಗಗಳು ಪ್ರತೀ ಪ್ರಲಾಪದಲ್ಲಿ ಕಂಡುಬರುವುದಿಲ್ಲ, ಆದರೆ ಅವೆಲ್ಲವೂ ಕೀರ್ತನೆಗಳ ಪ್ರಾರ್ಥನಾ ಸಂಪ್ರದಾಯಕ್ಕೆ ಸೇರಿದವುಗಳಾಗಿವೆ. ಉಳಿದವುಗಳಲ್ಲಿ ವಿಜ್ಞಾಪನೆಯೇ ಸಾಮಾನ್ಯವಾಗಿ ಒಂದು ಸಂಕ್ಷಿಪ್ತ ಮೂಲವಸ್ತುವಾಗಿದೆ.

ಈ ವರ್ಗದಲ್ಲಿನ ಕೀರ್ತನೆಯು ಕೋರ್ಟ್‌ನಲ್ಲಿನ ಸಂಭಾಷಣೆಯನ್ನು ಪ್ರತಿಬಿಂಬಿಸುತ್ತದೆ. ದುಷ್ಟವೈರಿಗಳಿಂದ ಹಿಂಸೆಗೊಳಗಾದ ಕೀರ್ತನೆಗಾರನು ಇಲ್ಲಿ ವಿಜ್ಞಾಪಿಸುವವನಾಗಿದ್ದಾನೆ. ಅರಸನೂ ಮತ್ತು ನ್ಯಾಯಾಧಿಪತಿಯೂ ಆದ ದೇವರ ಮುಂದೆ ಆತನು ತನ್ನ ಕೇಸನ್ನು ತಿಳಿಸುತ್ತಿದ್ದಾನೆ. ಕೀರ್ತನೆಗಾರನು ತನ್ನ ಸನ್ನಿವೇಶವನ್ನು ವರ್ಣಿಸುತ್ತಾನೆ, ತನ್ನ ನಿರ್ದೋಷತ್ವಕ್ಕಾಗಿ ಬೇಡುತ್ತಾನೆ, ವೈರಿಗಳಿಗೆ ವಿರುದ್ಧವಾಗಿ ತನ್ನ ದೂರನ್ನು ಮುಂದಿಡುತ್ತಾನೆ ಮತ್ತು ಬಿಡುಗಡೆ ಮತ್ತು ನ್ಯಾಯಕ್ಕಾಗಿ ಮನವಿ ಮಾಡುತ್ತಾನೆ. ಈ ಒಂದು ಪ್ರಲಾಪದ ಈ ರೀತಿಯ ಅಂಶಗಳೆಡೆಗೆ ನಾವು ಗಮನ ಕೊಡುವಾಗ ನಮ್ಮ ತಿಳುವಳಿಕೆಯು ಸುಧಾರಿಸುತ್ತದೆ.

2. ಸ್ತುತಿ ಗೀತೆಗಳು

ಈ ರೀತಿಯ ಸ್ತುತಿಗೀತೆಯ ಉದ್ದೇಶವು, ದೇವರ ಪ್ರಭಾವ ಮತ್ತು ಅದ್ಭುತ ಕಾರ್ಯಗಳಿಗಾಗಿ ಆತನನ್ನು ಸ್ತುತಿಸಲು ದೇವಜನರಿಗೆ ಕರೆಕೊಡುವುದಾಗಿದೆ. ಇದು ದೇವರ ಗುಣಧರ್ಮಗಳಲ್ಲಿ ಒಂದರ ಮೇಲೆ (ಉದಾ. ಕೀರ್ತನೆ 145 ರಲ್ಲಿದ್ದಂತೆ ಆತನ ಒಳ್ಳೇತನ), ಆತನ ಸಾರ್ವಭೌಮತ್ವದ ಮೇಲೆ (ಕೀರ್ತನೆ 93 ರಂತೆ) ಅಥವಾ ತನ್ನ ಸೃಷ್ಟಿಯ ಮೇಲಿನ ಆತನ ಅರಸತ್ವದ ಮೇಲೆ (ಕೀರ್ತನೆ 8 ರಲ್ಲಿದ್ದಂತೆ) ಒತ್ತು ಕೊಡುವುದು. ಈ ಕೀರ್ತನೆಗಳು ಮುಂದಿನ ಕೀರ್ತನೆಗಳಿಗಿಂತ (ಕೃತಜ್ಞತಾ ಗೀತೆಗಳು) ವಿಭಿನ್ನವಾಗಿವೆ. ಯಾಕೆಂದರೆ ಅವು ಯಾವುದೇ ವೈಯಕ್ತಿಕ ಆಶೀರ್ವಾದಗಳಿಗಾಗಿ ಅಥವಾ ವಿಶೇಷವಾದ ರಕ್ಷಣೆಯ ಕಾರ್ಯಕ್ಕಾಗಿ ದೇವರನ್ನು ಸ್ತುತಿಸುವುದಿಲ್ಲ.

3. ಕೃತಜ್ಞತಾ ಗೀತೆಗಳು

ಈ ರೀತಿಯ ಗೀತೆಗಳ ಉದ್ದೇಶವು ನಮ್ಮ ಪ್ರಾರ್ಥನೆಗೆ ದೇವರ ಸದುತ್ತರಗಳಿಗಾಗಿ ಮತ್ತು ಆತನು ಕೊಟ್ಟ ಬಿಡುಗಡೆಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವುದಾಗಿದೆ. ಪ್ರಲಾಪಗಳಂತೆ ಈ ಕೀರ್ತನೆಗಳು ವೈಯಕ್ತಿಕವಾಗಿರುತ್ತವೆ (ಕೀರ್ತನೆ 40 ರಂತೆ) ಇಲ್ಲವೇ ಸಂಗ್ರಹಿತವಾಗಿವೆ (ಕೀರ್ತನೆ 75 ರಂತೆ).

4. ದೇವರ ಧರ್ಮಶಾಸ್ತ್ರವನ್ನು ಆಚರಿಸುವ ಗೀತೆಗಳು

ಈ ರೀತಿಯ ಗೀತೆಗಳ ಉದ್ದೇಶವು ಆರಾಧಿಸುವವರು ಮೋಶೆಯ ಧರ್ಮಶಾಸ್ತ್ರದ ಅದ್ಭುತಗಳನ್ನು ಅರ್ಥೈಸಿಕೊಳ್ಳಲು ಸಹಾಯಿಸುವುದಾಗಿದೆ. ಆ ಮೂಲಕ ಅವರು ಅದಕ್ಕೆ ಇನ್ನೂ ಹೆಚ್ಚಾಗಿ ವಿಧೇಯರಾಗಲು ಸಹಾಯಕವಾಗುತ್ತದೆ. ಎಲ್ಲಾ ಕೀರ್ತನೆಗಳಲ್ಲಿ ಅತೀ ಉದ್ದವಿರುವ 119 ನೇ ಕೀರ್ತನೆ ಈ ಗುಂಪಿಗೆ ಸೇರುತ್ತದೆ.

5. ಜ್ಞಾನದ ಕೀರ್ತನೆಗಳು

ಈ ಕೀರ್ತನೆಗಳ ಉದ್ದೇಶವು (ಕೀರ್ತನೆ 1, ಕೀರ್ತನೆ 73, ಕೀರ್ತನೆ 112 ಮತ್ತು ಕೀರ್ತನೆ 127) ಜ್ಞಾನ ಮತ್ತು ಬುದ್ಧಿವಂತ ಜೀವನದ ಯೋಗ್ಯತೆಯನ್ನು ಪ್ರಚಾರಮಾಡುವುದು. ಅವು ಜ್ಞಾನದ ಪುಸ್ತಕಗಳಿಂದ ಒಂದು ವಿಷಯವಸ್ತುವನ್ನು ತೆಗೆದುಕೊಂಡು (ಉದಾ: ಜೀವನದ ಉದ್ದೇಶ, ದುಷ್ಟರು ಸಮೃದ್ಧಿಯಾಗುವಂತೆ ಕಾಣುವುದರೊಂದಿಗಿನ ಸಮಸ್ಯೆ ಮತ್ತು ನೀತಿವಂತನು ಬಾಧೆಪಡುವುದು) ಅದನ್ನು ಒಂದು ಪದ್ಯದ ವಿಚಾರವನ್ನಾಗಿ ಮಾಡುತ್ತವೆ. ಈ ಕೀರ್ತನೆಗಳು ಸಾಮಾನ್ಯವಾಗಿ ಜ್ಞಾನೋಕ್ತಿ ಗಾದೆ ರೀತಿಯ ಹೇಳಿಕೆಗಳು "ಇಂಥವರು ಧನ್ಯರು" ಮತ್ತು "ದೇವರಿಗೆ ಭಯಪಡಲು" ಆರಾಧಿಸುವವರಿಗೆ ಜ್ಞಾನ ಹುಟ್ಟಿಸುವಂಥವುಗಳು. ಇಂತಹ ಜ್ಞಾನಸಾಹಿತ್ಯಕ್ಕೆ ಸೇರಿದ ಶಬ್ದಕೋಶ ಮತ್ತು ಹೇಳಿಕೆಗಳನ್ನು ಉಪಯೋಗಿಸುತ್ತವೆ.

6. ಭರವಸೆಯ ಹಾಡುಗಳು

ಈ ರೀತಿಯ ಹಾಡುಗಳ ಉದ್ದೇಶವು (ಉದಾಹಣರಣೆ: ಕೀರ್ತನೆ 16, ಕೀರ್ತನೆ 23, ಕೀರ್ತನೆ 91) (ಕಷ್ಟದ ಸಮಯದಲ್ಲಿ ಸಹ) ದೇವರಲ್ಲಿ ಭರವಸೆಯಿಡಲು ಆರಾಧಕರನ್ನು ಉತ್ತೇಜಿಸುವುದಾಗಿದೆ (ಕಷ್ಟದ ಸಮಯದಲ್ಲಿ ಸಹ). ಪರಿಸ್ಥಿತಿಗಳು ಏನೇ ಆದರೂ ಆತನು ಏನನ್ನು ಕೊಡುತ್ತಾನೋ ಅದಕ್ಕಾಗಿ ಆತನನ್ನು ನಂಬಿ, ಆತನಲ್ಲಿ ಭರವಸೆಯಿಡುವವರನ್ನು ತಿಳಿದುಕೊಳ್ಳುವುದರಲ್ಲಿ ದೇವರು ಅನಂದಿಸುತ್ತಾನೆ. ಈ ಕೀರ್ತನೆಗಳು ತಮ್ಮ ರಚನಾ ರೂಪದಲ್ಲಿ ಸ್ವಲ್ಪ ವ್ಯತ್ಯಾಸಮಯವಾಗಿವೆ. ಸಾಮಾನ್ಯವಾಗಿ ಅವು ಹೊಂದಿರುವ ವಿಷಯವಸ್ತು ಮತ್ತು ಭಾವದ ನಿಮಿತ್ತ ಅವನ್ನು ಒಂದು ಗುಂಪಾಗಿ ಪರಿಗಣಿಸಲಾಗಿದೆ. ಇವುಗಳಲ್ಲಿನ ಬಹುತೇಕ ಕೀರ್ತನೆಗಳಲ್ಲಿ ಒಬ್ಬ ವ್ಯಕ್ತಿಯು ದೇವರ ಕಾಳಜಿ ಮತ್ತು ಸಂರಕ್ಷಣೆಯಲ್ಲಿ ತನ್ನ ಭರವಸೆಯನ್ನು ವ್ಯಕ್ತಪಡಿಸುವುದನ್ನು ನಾವು ಕಾಣಬಹುದು.

7. ರಾಜ ವೈಭವದ ಕೀರ್ತನೆಗಳು

ಈ ಕೀರ್ತನೆಗಳು ದೇವ ಜನರಿಗೆ ಆಶೀರ್ವಾದದ ಕಾಲುವೆಯಾಗಿರುವ ದಾವೀದನ ರಾಜ್ಯದ ಕುರಿತಾಗಿವೆ. ಅವುಗಳಲ್ಲಿ ಕೆಲವು ಪ್ರಾರ್ಥನೆಗಳಾಗಿವೆ (ಉದಾಹರಣೆ: ಕೀರ್ತನೆ 20), ಉಳಿದವುಗಳು ಕೃತಜ್ಞತೆಗಳಾಗಿವೆ (ಉದಾಹರಣೆ: ಕೀರ್ತನೆ 21). ಈ ಎಲ್ಲಾ ಕೀರ್ತನೆಗಳು ಒಂದು ಮಾದರಿಯನ್ನು ತೋರಿಸುವುದರಿಂದ (ಕೀರ್ತನೆ 21–22), ಮೆಸ್ಸೀಯನ ರೀತಿ ಆಳ್ವಿಕೆಯನ್ನು ವರ್ಣಿಸುವುದರಿಂದ (ಕೀರ್ತನೆ 2, ಕೀರ್ತನೆ 72) ಅಥವಾ ಭವಿಷ್ಯತ್ತನ್ನು ಸೂಚಿಸುವುದರಿಂದ (ಕೀರ್ತನೆ 110) ವಿಭಿನ್ನ ಬಗೆಗಳಲ್ಲಿ ದಾವೀದನ ಕುಮಾರನಾದ ಮೆಸ್ಸೀಯನನ್ನು ಸೂಚಿಸುತ್ತವೆ.

8. ಚೀಯೋನಿನ ಹಾಡುಗಳು

ಇವು ದೇವರು ಆರಾಧಿಸಲ್ಪಡುವ ಪವಿತ್ರ ಪಟ್ಟಣವಾದ ಯೆರೂಸಲೇಮ್ (ಚೀಯೋನ್) ಅನ್ನು ಶ್ಲಾಘಿಸುವ ಹಾಡುಗಳಾಗಿವೆ. ಇಲ್ಲಿಯೇ ದೇವರು ತನ್ನ ಪ್ರಸನ್ನತೆಯನ್ನು ತೋರ್ಪಡಿಸಿಕೊಳ್ಳುತ್ತಾನೆ ಮತ್ತು ಇಲ್ಲಿಂದಲೇ ಆತನು ಲೋಕವನ್ನು ಆಶೀರ್ವದಿಸುತ್ತಾನೆ. ಉದಾಹರಣೆಗೆ: ಕೀರ್ತನೆ 46.

9. ಐತಿಹಾಸಿಕ ಕೀರ್ತನೆಗಳು

ಕೇವಲ ಕೆಲವೇ ಕೀರ್ತನೆಗಳು (ಉದಾಹರಣೆ: ಕೀರ್ತನೆ 105) ಈ ಗುಂಪಿಗೆ ಸೇರಿವೆ. ಇವು ಇಸ್ರಾಯೇಲ್ ಜನರ ಮಧ್ಯೆ ದೇವರ ರಕ್ಷಣಾ ಕಾರ್ಯದ ಇತಿಹಾಸವನ್ನು ತಿಳಿಸುತ್ತವೆ ಮತ್ತು ಇಸ್ರಾಯೇಲ್ಯರನ್ನು ಐಗುಪ್ತದ ದಾಸತ್ವದಿಂದ ಬಿಡಿಸಿ, ಅವರನ್ನು ವಾಗ್ದಾನ ದೇಶಕ್ಕೆ ನಡೆಸುವುದರ ಮೇಲೆ ಒತ್ತು ಕೊಡುತ್ತವೆ.

ಅವುಗಳ ಕಾರ್ಯವೈಖರಿಯ ಅಧಾರದ ಮೇಲೆ ಮಾಡಲಾದ ಕೀರ್ತನೆಯ ಹೆಚ್ಚು ಪಂಗಡದ ವರ್ಗ ವಿಧಗಳು ಇಲ್ಲಿವೆ:

1. ಯಾತ್ರಾಗೀತಗಳು

ಈ ಹಿಂದೆ ತಿಳಿಸಿದಂತೆ ಈ ಕೀರ್ತನೆಗಳು (ಕೀರ್ತನೆ 120–134) ಕೀರ್ತನೆಗಳ ಅಂತಿಮ ಸಂಪಾದಕರಿಂದ ಒಟ್ಟಾಗಿ ಗುಂಪು ಮಾಡಲ್ಪಟ್ಟಿವೆ. ಇವುಗಳು ಬಹುಶಃ ಯಾತ್ರಾಗೀತೆಗಳಾಗಿದ್ದು, ಮುಖ್ಯ ಹಬ್ಬಗಳ ಸಮಯದಲ್ಲಿ ಯೆರೂಸಲೇಮಿನಲ್ಲಿ ದೇವಾಲಯಕ್ಕೆ ಹೋಗುವಾಗ ಇಸ್ರಾಯೇಲ್ ಜನರು ಹಾಡಿದವುಗಳಾಗಿವೆ.

2. The “Egyptian hallel”

ಈ 6 ಕೀರ್ತನೆಗಳನ್ನು (ಕೀರ್ತನೆ 113–118) ಯೆಹೂದ್ಯರ ಮುಖ್ಯ ಹಬ್ಬಗಳಲ್ಲಿ ಉಪಯೋಗಿಸಲಾಗುತಿತ್ತು. ಪಸ್ಕಹಬ್ಬದ ಸಮಯದಲ್ಲಿ ಊಟಕ್ಕಿಂತ ಮುಂಚೆ ಕೀರ್ತನೆ 113–114 ಅನ್ನು ಮತ್ತು ಊಟವಾದ ಮೇಲೆ ಕೀರ್ತನೆ 115–118 ಅನ್ನು ಹಾಡಲಾಗುತಿತ್ತು.

3. ಸಂತಾಪ ಸೂಚಿಸುವ ಕೀರ್ತನೆಗಳು

ಕ್ರೈಸ್ತ ಸಭೆಯ ಚರಿತ್ರೆಯಲ್ಲಿ ಏಳು ಕೀರ್ತನೆಗಳು ವಾರದ ಒಂದು ದಿನಕ್ಕಾಗಿ ಒಂದು ಕೀರ್ತನೆಯಂತೆ ಅನುತಾಪ ಸೂಚಕ ಕೀರ್ತನೆಗಳಾಗಿ ಉಪಯೋಗಿಸಲ್ಪಟ್ಟಿವೆ. (ಪಶ್ಚಾತ್ತಾಪ/ ಅನುತಾಪದೊಂದಿಗಿನ ಕೀರ್ತನೆಗಳು). ಅವೆಂದರೆ, ಕೀರ್ತನೆ 6, ಕೀರ್ತನೆ 32, ಕೀರ್ತನೆ 38, ಕೀರ್ತನೆ 51, ಕೀರ್ತನೆ 102, ಕೀರ್ತನೆ 130 ಮತ್ತು ಕೀರ್ತನೆ 143.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಪರಿಚಯದ ಅಧ್ಯಾಯದ ವಿವಿಧ ವಾಕ್ಯಭಾಗಗಳಲ್ಲಿ ಕಾಣುಬಹುದು. ಅಲ್ಲಿ ನೋಡುವುದಕ್ಕಿಂತ ಮೊದಲು ನೀವೇ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನೂ ಹೆಚ್ಚಾಗಿ ಕಲಿಯುವಿರಿ. ಕೀರ್ತನೆಗಳ ಹಿನ್ನಲೆಯಲ್ಲಿ "ತಲೆಬರಹ" ಎಂಬ ಪದದ ಅರ್ಥವನ್ನು ವಿವರಿಸಿರಿ. ಕೀರ್ತನೆಯ ಬಹು ಸಾಮಾನ್ಯವಾದ ಬಗೆ ಯಾವುದು?

1. ಕೀರ್ತನೆಗಳ ಸಂದರ್ಭದಲ್ಲಿ "ಮೇಲ್ವಿಚಾರಣೆ" ಎಂಬ ಪದದ ಅರ್ಥವನ್ನು ವಿವರಿಸಿ. ಅತ್ಯಂತ ಸಾಮಾನ್ಯವಾದ ಕೀರ್ತನೆ ವರ್ಗ ಯಾವುದು?
2. "ವೈಯಕ್ತಿಕ ಪ್ರಲಾಪ" ಮತ್ತು "ಸಾಮೂಹಿಕ ಪ್ರಲಾಪದ" ನಡುವಿನ ವ್ಯತ್ಯಾಸವೇನು?
3. ಒಂದು ಪ್ರಲಾಪವನ್ನು ನ್ಯಾಯಾಲಯದ ಪ್ರಕರಣದೊಂದಿಗೆ ಯಾವ ರೀತಿಯಲ್ಲಿ ಹೋಲಿಸಬಹುದು?
4. ಒಂದು "ಸ್ತುತಿ ಗೀತೆ" ಮತ್ತು "ಕೃತಜ್ಞತಾ ಗೀತೆ"ಯ ನಡುವಿನ ವ್ಯತ್ಯಾಸವೇನು?
5. ದೇವರ ಧರ್ಮಶಾಸ್ತ್ರವನ್ನು ಶ್ಲಾಘಿಸುವ ಗೀತೆಯ ಉದ್ದೇಶವೇನು?
6. "ಜ್ಞಾನದ ಕೀರ್ತನೆಗಳು" ಎಂದು ಕರೆಯಲ್ಪಡುವ ಕೀರ್ತನೆಯ ಬಗೆಯನ್ನು ವಿವರಿಸಿರಿ.
7. "ಭರವಸೆಯ ಹಾಡುಗಳು" ಎಂಬ ಕೀರ್ತನೆಯ ಬಗೆಯನ್ನು ವಿವರಿಸಿರಿ.
8. ಕೀರ್ತನೆಗಳಲ್ಲಿ ಬಹು ಚಿರಪರಿಚಿತವಾದ "ಭರವಸೆಯ ಹಾಡು" ಯಾವುದು?
9. "ರಾಜವೈಭವದ ಕೀರ್ತನೆಗಳು" ಹೇಗೆ ಮೆಸ್ಸೀಯನಿಗೆ ಸಂಭಂಧಿಸಿವೆ ಎಂದು ವಿವರಿಸಿರಿ.
10. "ಚೀಯೋನಿನ ಹಾಡು" ಎಂದರೇನು?
11. "ಐತಿಹಾಸಿಕ ಕೀರ್ತನೆಯ" ವಿಷಯವಸ್ತು ಯಾವುದು?
12. ಪ್ರವಾದನಾ ಪುಸ್ತಕಗಳು ಮತ್ತು "ಒಡಂಬಡಿಕೆಯ ಕೀರ್ತನೆಗಳ" ನಡುವಿನ ಸಂಬಂಧವನ್ನು ವಿವರಿಸಿರಿ.
13. ಪಸ್ಕಹಬ್ಬದ ಭೋಜನವನ್ನು ಆಚರಿಸುವಾಗ ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರುಗಳು ಯಾವ ಗುಂಪಿನ ಕೀರ್ತನೆಯನ್ನು ಹಾಡಿದರು?
14. "ಪ್ರಾಯಶ್ಚಿತ ಕೀರ್ತನೆಗಳು" ಹತ್ತು ಅಲ್ಲ, ಏಳು ಏಕೆ ಇವೆ? ಅವುಗಳನ್ನು ಹೇಗೆ ಬಳಸಲಾಗಿದೆ?

ಅಸೈನ್‌ಮೆಂಟ್: ಕೀರ್ತನೆಯ ವಿಧಗಳು

1. ಕೀರ್ತನೆ 12 ಪ್ರಲಾಪಕ್ಕೆ ಒಂದು ಉದಾಹರಣೆಯಾಗಿದೆ, ಪ್ರಲಾಪದ 15 ಭಾಗಗಳಲ್ಲಿ ಎಷ್ಟನ್ನು ನೀವು ಇದರಲ್ಲಿ ಕಾಣುವಿರಿ?
2. ಕೀರ್ತನೆ 104 ಸ್ತುತಿಗೀತೆಗೆ ಒಂದು ಉದಾಹರಣೆಯಾಗಿದೆ. ಕೀರ್ತನೆಗಾರನು ಯಾವೆಲ್ಲ ಸಂಗತಿಗಳಿಗಾಗಿ ದೇವರನ್ನು ಸ್ತುತಿಸುತ್ತಾನೆಂದು ಪಟ್ಟಿ ಮಾಡಿರಿ.
3. ಕೀರ್ತನೆ 75 ಕೃತಜ್ಞತಾ ಪದ್ಯಕ್ಕೆ ಒಂದು ಉದಾರಹಣೆಯಾಗಿದೆ. ಕೀರ್ತನೆಗಾರನ್ನು ಯಾವ ಸಂಗತಿಗಳಿಗಾಗಿ ಕೃತಜ್ಞತೆ ಸಲ್ಲಿಸುತ್ತಾನೆಂಬುದನ್ನು ಪಟ್ಟಿ ಮಾಡಿರಿ.
4. ಕೀರ್ತನೆ 119 ಭಕ್ತಿಯುತ ಜೀವಿತಕ್ಕಾಗಿ ಒಂದು ಪರಿಪೂರ್ಣ ಮಾರ್ಗದರ್ಶಕವಾಗಿ ದೇವರ ಧರ್ಮಶಾಸ್ತ್ರದ ಕೊಡುಗೆಯ ಶ್ಲಾಘನೆಯಾಗಿದೆ. ಕೆಳಗಿನ ಪ್ರಶ್ನೆಯನ್ನು ಉತ್ತರಿಸುವ ಮುನ್ನ ಸತ್ಯವೇದವನ್ನು ಓದಿರಿ ಮತ್ತು ಉತ್ತಮವಾದ ಒಂದು ಅಧ್ಯಯನ ಸತ್ಯವೇದ ಬಳಸಿರಿ:
   ಅ. ಕೀರ್ತನೆಗಾರನು ಬಳಸಿ ಮತ್ತು ಅವುಗಳ ಅರ್ಥಗಳನ್ನು ವಿವರಿಸಿದ "ಧರ್ಮಶಾಸ್ತ್ರಕ್ಕಿರುವ" ವಿಭಿನ್ನವಾದ ಪರ್ಯಾಯ ಪದಗಳು ಯಾವುವು?
   ಆ. ಮಾರ್ಗಗಳಲ್ಲಿ ತಪ್ಪಿಲ್ಲದವನಾಗಿ, ಯೆಹೋವನ ಧರ್ಮಶಾಸ್ತ್ರಕ್ಕನುಸಾರವಾಗಿ (ಕೀರ್ತನೆ 1) ನಡೆಯುವವನಿಗೆ ಆಗುವ ಯಾವ ಪ್ರಯೋಜನಗಳನ್ನು ಕೀರ್ತನೆಗಾರನು ತಿಳಿಸುತ್ತಾನೆ.
5. ಕೀರ್ತನೆ 91 ಅನ್ನು ಒಂದು "ಭರವಸೆಯ ಹಾಡು" ಎಂದು ಯಾಕೆ ಕರೆಯಬಹುದು?

ಕೀರ್ತನೆ 19

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪದ್ಯದ ತಲೆಬರಹಗಳಲ್ಲಿ **"ದಾವೀದನ ಕೀರ್ತನೆ"** ಎಂದಿದೆ.

ಈ ಕೀರ್ತನೆಯು ಒಂದು ಸ್ತುತಿಗೀತೆ ಮತ್ತು ದೇವರ ಧರ್ಮಶಾಸ್ತ್ರವನ್ನು ಶ್ಲಾಘಿಸುವ ಪದ್ಯ ಸಹ ಆಗಿದೆ. ಆತನ ಸೃಷ್ಟಿ ಮತ್ತು ಯೆಹೋವನ ಧರ್ಮಶಾಸ್ತ್ರದ ಸಾಕ್ಷಿಗಳಿಂದ ದೇವರ ಮಹಿಮೆಯನ್ನು ಹೊಗಳುತ್ತದೆ. ಗ್ರೀಕಿನ ಸೆಪ್ಟೂಜೆಂಟ್ ಭಾಷಾಂತರದಲ್ಲಿ ಈ ಕೀರ್ತನೆಯು ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ. ಎರಡು ಭಾಗಗಳ ನಡುವೆ ಭಾಷೆಯು ವಿಭಿನ್ನವಾಗಿದೆ ಎಂದು ಕೆಲವು ಸತ್ಯವೇದ ಪಂಡಿತರು ಹೇಳುತ್ತಾರೆ. ಮೊದಲ ಭಾಗವು (ದೇವರ ಸೃಷ್ಟಿಯ ಬಗ್ಗೆ) ಎರಡನೇ ಭಾಗಕ್ಕಿಂತ (ದೇವರ ಧರ್ಮಶಾಸ್ತ್ರದ ಬಗ್ಗೆ) ಹಳೇಯ ಶೈಲಿಯದ್ದಾಗಿದೆ ಎಂಬುದು ಅವರ ವಾದವಾಗಿದೆ. ಆದರೆ ಈ ಎರಡು ಭಾಗಗಳು ಸಹ ಪರಸ್ಪರ ಹೊಂದಿಕೊಳ್ಳುತ್ತವೆ. ಅವು ದೇವರು ಎರಡು ರೀತಿಯಲ್ಲಿ ತನ್ನ ಸೃಷ್ಟಿಯ ಮೂಲಕ ಮತ್ತು ತನ್ನ ವಾಕ್ಯದ ಮೂಲಕ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆಂದು ಸಾರುತ್ತವೆ.

ವಚನ 4 ಅನ್ನು ಪೌಲನು ರೋಮಾ. 10:18 ರಲ್ಲಿ ಬಳಸುತ್ತಾನೆ ಮತ್ತು ಇದನ್ನು ಸ್ವತಃ ತನ್ನ ಸಮಯದಲ್ಲಿ ಸುವಾರ್ತೆಯನ್ನು ಸಾರುವುದಕ್ಕೆ ಅಳವಡಿಸಿಕೊಳ್ಳುತ್ತಾನೆ.

ವಚನ 4 ಅನ್ನು ವಿಭಿನ್ನ ರೀತಿಯಲ್ಲಿ ಭಾಷಾಂತರಿಸಬಹುದು. ಆದರೆ ದಾವೀದನು ಹೇಳುವ ಅಂಶ ಸ್ಪಷ್ಟವಾಗಿದೆ. ದೇವರ ಸೃಷ್ಟಿಯ ಆತನ ಪ್ರಭಾವವನ್ನು ಸಾಕ್ಷೀಕರಿಸುತ್ತದೆ.

ಬುದ್ಧಿಹೀನರೀಗೆ ವಿವೇಕ ಪ್ರದವಾಗಿದೆ (ವಚನ 7): ಬುದ್ಧಿಹೀನರಿಗಾಗಿ ಇಬ್ರಿಯ ಪದವನ್ನು ಜ್ಞಾನ ಸಾಹಿತ್ಯದಲ್ಲಿ ಸುಲಭವಾಗಿ ದೇವರಿಂದ ದೂರವಾಗುವ ಅನುಭವಿ ಯೌವನಸ್ಥರಿಗೆ ಅಲ್ಲದೇ ಜ್ಞಾನದ ಬುದ್ಧಿ ಮಾತುಗಳಿಗೆ ಕಿವಿಗೊಡಲು ಮನಸ್ಸಿರುವವರಿಗಾಗಿ ಉಪಯೋಗಿಸಲಾಗಿದೆ. ಯಾವಾಗ ಈ ರೀತಿಯ ಜನರು ದೇವರ ಧರ್ಮಶಾಸ್ತ್ರದ ನಿಯಮಗಳಿಗೆ ವಿಧೇಯರಾಗುತ್ತಾರೋ ಅವರು ಜ್ಞಾನಿಗಳಾಗುತ್ತಾರೆ. ಈ ಅಂಶವನ್ನು ಕನ್ನಡ ಭಾಷಾಂತರವಾದ **ಸತ್ಯವೇದವು ಪವಿತ್ರ ಗ್ರಂಥ**ಕ್ಕಿಂತಲೂ ಅತ್ಯುತಮವಾಗಿ ಇದನ್ನು ತಿಳಿಸುತ್ತದೆ.

ಮನಸ್ಸು (ವಚನ 8): ಕೀರ್ತನೆ 4:7 ರ ಟಿಪ್ಪಣಿ ನೋಡಿರಿ.

ಯೆಹೋವನ ಭಯ (ವಚನ 9): ಇದು ದೇವರನ್ನು ಗೌವರವಿಸುವುದು ಮತ್ತು ದೇವರ ಚಿತ್ತಕ್ಕನುಸಾರವಾಗಿ ಜೀವಿಸುವುದನ್ನು ಸೂಚಿಸುತ್ತದೆ.

ನಿನ್ನ ದಾಸ (ವಚನ 11): ಸ್ವತಃ ದಾವೀದನು

ಶರಣನು (ವಚನ 14): ಇದು ತನ್ನಲ್ಲಿ ಭರವಸವಿಡುವ ಜನರಿಗೆ ಬಲ ಮತ್ತು ಒಂದು ಸುರಕ್ಷಿತ ಆಶ್ರಯವಾಗಿರುವ ದೇವರಿಗೆ ಇರುವ ಒಂದು ರೂಪಾಲಂಕಾರವಾಗಿದೆ. ಕನ್ನಡ ಸತ್ಯವೇದದ ಅನುವಾದಕರು ಈ ರೂಪಾಲಂಕಾರವನ್ನು ಹಾಗೇ ಇಡದೆ ವ್ಯಾಖ್ಯಾನಿಸಿದ್ದಾರೆ.

ಬಂಡೆ (ವಚನ 14): ದೇವರನ್ನು ಸೂಚಿಸುವ ಸಾಮಾನ್ಯ ರೂಪಾಲಂಕಾರ, ಆತನಲ್ಲಿ ನಂಬಿಕೆ ಇಡುವವರಿಗೆ ಆತನೇ ಶಕ್ತಿ ಮತ್ತು ಸುರಕ್ಷಿತ ಆಶ್ರಯ. ಕನ್ನಡ **ಸತ್ಯವೇದವು** ಅನುವಾದಕರು ರೂಪಾಲಂಕಾರವನ್ನು ಉಳಿಸಿಕೊಂಡಿಲ್ಲ, ಆದರೆ ಅದನ್ನು ಅರ್ಥೈಸಿದ್ದಾರೆ.

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ವಚನ 1 ಅನ್ನು ನಿಮ್ಮ ಸ್ವಂತ ಮಾತುಗಳಿಂದ ವಿವರಿಸಿ.
3. 7–9 ನೇ ವಚನಗಳಲ್ಲಿ ದಾವೀದನು **"ದೇವರ ಧರ್ಮಶಾಸ್ತ್ರಕ್ಕೆ"** ಐದು ಸಮಾನಾರ್ಥಕ ಪದಗಳನ್ನು ನೀಡುತ್ತಾನೆ. ಅವು ಯಾವುವು?

4. 7–10 ನೇ ವಚನಗಳಲ್ಲಿ ದಾವೀದನು "ಧರ್ಮಶಾಸ್ತ್ರವನ್ನು" ವಿವರಿಸಲು ಬಳಸುವ ಒಂಬತ್ತು ಹೇಳಿಕೆಗಳನ್ನು ಪಟ್ಟಿ ಮಾಡಿ.

5. 7–9 ನೇ ವಚನಗಳಲ್ಲಿ ದೇವರ ಸೇವಕ ದಾವೀದನ ಮೇಲೆ "ಧರ್ಮಶಾಸ್ತ್ರವು" ಬೀರುವ ಪರಿಣಾಮಗಳನ್ನು ಪಟ್ಟಿ ಮಾಡಿ. ನಂತರ ಈ ಪರಿಣಾಮಗಳ ಅರ್ಥವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.

6. 10 ನೇ ವಚನದಲ್ಲಿ ದಾವೀದನು ಧರ್ಮಶಾಸ್ತ್ರದ ಬಗ್ಗೆ ಯಾವ ತೀರ್ಮಾನಕ್ಕೆ ಬರುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

7. 12–13 ನೇ ವಚನಗಳಲ್ಲಿ ದಾವೀದನು ಯಾವುದರ ಬಗ್ಗೆ ಪ್ರಾರ್ಥಿಸುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

8. 14 ನೇ ವಚನದಲ್ಲಿ ದಾವೀದನು ಯಾವುದರ ಬಗ್ಗೆ ಪ್ರಾರ್ಥಿಸುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

ಕೀರ್ತನೆ 19 ಆಲೋಚಿಸಿರಿ ಮತ್ತು ಚರ್ಚಿಸಿರಿ

1. 3–4 ನೇ ವಚನಗಳನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

2. 4 ನೇ ವಚನದ ದ್ವಿತೀಯಾರ್ಧ ಭಾಗ–6 ರಲ್ಲಿನ ಕಾವ್ಯಾತ್ಮಕ ಭಾಷೆಯನ್ನು ಅಧ್ಯಯನ ಮಾಡಿ.

   ಅ. ಈ ರೂಪಾಲಂಕಾರಗಳನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ:

   - ಗುಡಾರ
   - ಮಂಟಪ

   ಆ. ಈ ಉಪಮೆಗಳನ್ನು ನಿವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ:

   - ಮದಲಿಂಗನಂತೆ
   - ಶೂರನಂತೆ

   ಇ. ಈ ವಾಕ್ಯಭಾಗದ ಸ್ವರ/ಭಾವ ಮತ್ತು ಒಟ್ಟು ಪರಿಣಾಮ ಏನು?

3. ದಾವೀದನ ಮೇಲೆ ಧರ್ಮಶಾಸ್ತ್ರ ಮತ್ತು ಅದರ ಪರಿಣಾಮವನ್ನು 7–9 ನೇ ವಚನಗಳಲ್ಲಿ ವಿವರಿಸಲಾಗಿದೆ. ದಾವೀದನು ಈ ವಚನಗಳನ್ನು ಹೇಗೆ ರಚಿಸಿದ್ದಾನೆ ಎಂಬುದನ್ನು ವಿವರಿಸಿ. 9 ನೇ ವಚನದ ರಚನೆಯು ಹಿಂದಿನ ಎರಡು ವಚನಗಳ ರಚನೆಗಿಂತ ಹೇಗೆ ಭಿನ್ನವಾಗಿದೆ?

4. ದಾವೀದನು ತನ್ನ ಜೀವನವನ್ನು ಧರ್ಮಶಾಸ್ತ್ರಕ್ಕೆ, ದೇವರ ವಾಕ್ಯಕ್ಕೆ ಮತ್ತು 9–14 ನೇ ವಚನಗಳಲ್ಲಿ ದೇವರಿಗೆ ಸಂಬಂಧಿಸಿದಂತೆ ಹೇಗೆ ವಿವರಿಸುತ್ತಾನೆ?

5. 14 ನೇ ವಚನದಲ್ಲಿ ದಾವೀದನು ದೇವರನ್ನು ಹೇಗೆ ಸಂಬೋಧಿಸುತ್ತಾನೆ? ದಾವೀದನು ಈ ಪದಗಳನ್ನು ಏಕೆ ಬಳಸುತ್ತಾನೆ ಎಂದು ನೀವು ಭಾವಿಸುತ್ತೀರಿ?

6. ಕೀರ್ತನೆ 19 ಮತ್ತು ಈ ಅಧ್ಯಯನವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 19 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯ ಮೊದಲ ಭಾಗದಲ್ಲಿ ದೇವರ ಸೃಷ್ಟಿಯ ಬಗ್ಗೆ ಮಾತನಾಡುವಾಗ ದಾವೀದನು "ದೇವರು" ಎಂಬ ಪದವನ್ನು ಉಪಯೋಗಿಸುತ್ತಾನೆ. ಆದರೆ ಈ ಕೀರ್ತನೆ ಎರಡನೇ ಭಾಗದಲ್ಲಿ ಯೆಹೋವನ ಧರ್ಮಶಾಸ್ತ್ರದ ಬಗ್ಗೆ ಮಾತನಾಡುವಾಗ ಆತನು ದೇವರ ವೈಯಕ್ತಿಕ ಹೆಸರಾದ "ಯೆಹೋವ"ನು ಬಳಸುತ್ತಾನೆ. ಸೃಷ್ಟಿಯ ನಿರಾಕಾರ ದೇವರು ಹೇಗೆ ನಿಮಗಾಗಿ ಸತ್ಯವೇದದಲ್ಲಿ ತನ್ನ ವಾಕ್ಯದ ವೈಯಕ್ತಿಕ ದೇವರಾಗುತ್ತಾನೆಂಬುದನ್ನು ವಿಮರ್ಶಿಸಿರಿ.

2. ದೇವರ ಸೃಷ್ಟಿಯ ಮಹತ್ತನ್ನು ವಿಮರ್ಶಿಸಿರಿ, ನಮ್ಮ ಪಾಪಮಯ ಜಗತ್ತಿನಲ್ಲಿ ಸಹ ನಾವು ಇದನ್ನು ಕಾಣುತ್ತವೆ. ಪಾಪಕ್ಕಿಂತ ಮೊದಲು ಇದು ಎಷ್ಟು ಮನೋಹರವಾಗಿತ್ತೆಂಬುದನ್ನು ಊಹಿಸಿಕೊಳ್ಳಿರಿ. ನೂತನ ಭೂಮಿ ಆಕಾಶಗಳು

ಎಷ್ಟು ಸುಂದರವಾಗಿರಬಹುದು ಎಂಬುದನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ. ದೇವರ ಸೃಷ್ಟಿಗಾಗಿ ಮತ್ತು ಅದರಲ್ಲಿ ನಿಮ್ಮನ್ನೂ ಸಹ ಒಂದು ಭಾಗವನ್ನಾಗಿ ಮಾಡಿದ್ದಕ್ಕಾಗಿ ದೇವರಿಗೆ ಕೃತಜ್ಞತೆಸಲ್ಲಿಸಿರಿ.

3. ದೇವರ ಮಹತ್ತನ್ನು ವಿಮರ್ಶಿಸಿರಿ. ಆಕಾಶ ಮತ್ತು ಸೂರ್ಯರು ಒಬ್ಬ ಉನ್ನತ ದೇವರನ್ನು ಪ್ರಚುರಪಡಿಸುತ್ತವೆ. ಹೌದು ಆತನ ಸೃಷ್ಟಿಯ ಎಲ್ಲಾ ಮಹತ್ತುಗಳು ಆತನ ಪ್ರಭಾವವನ್ನು ಸಾಕ್ಷೀಕರಿಸುತ್ತದೆ. ಒಬ್ಬ ಉನ್ನತನಾದ ದೇವರು ಮಾತ್ರ ಈ ರೀತಿಯ ಲೋಕವನ್ನು ಸೃಟಿಸಲು ಸಾಧ್ಯ. ಮತ್ತು ಅಲ್ಲದೇ ಈ ಉನ್ನತನಾದ ದೇವರು ಅಲ್ಪರಾದ ಮನುಷ್ಯರಿಗೆ ತನ್ನನ್ನು ಪ್ರಕಟಿಸಿಕೊಂಡಿದ್ದಾನೆ. ಆತನು ತನ್ನ ಸೃಷ್ಟಿ ಮತ್ತು ತನ್ನ ವಾಕ್ಯದ ಮೂಲಕ ತನ್ನನ್ನು ಪ್ರಕಟಿಸಿಕೊಂಡಿದ್ದಾನೆ. ಆತನ ಪ್ರಭಾವಕ್ಕಾಗಿ ದೇವರನ್ನು ಸ್ತುತಿಸಿರಿ ಮತ್ತು ಆರಾಧಿಸಿರಿ. ಅಲ್ಲದೇ ಮನುಷ್ಯರಿಗಾಗಿನ ಆತನ ಪ್ರೀತಿ ಮತ್ತು ನಂಬಿಗಸ್ತಿಕೆಗೆ ಸಹ ಆತನನ್ನು ಸ್ತುತಿಸಿರಿ ಮತ್ತು ಆರಾಧಿಸಿರಿ.

4. ದೇವರನ್ನು ತನ್ನ ಶರಣನು ಮತ್ತು ವಿಮೋಚಕನು ಎಂದು ಕರೆಯುವುದರ ಮೂಲಕ ದಾವೀದನು ಈ ಕೀರ್ತನೆಯನ್ನು ಮುಗಿಸುತ್ತಾನೆ. ದೇವರು ಯಾವ ಯಾವ ರೀತಿಯಲ್ಲಿ ನಿಮಗೆ ಶರಣನು ಮತ್ತು ವಿಮೋಚಕನು ಆಗಿದ್ದಾನೆಂದು ವಿಮರ್ಶಿಸಿರಿ.

5. ದೇವರ ವಾಕ್ಯದ ಮಧುರತೆಯನ್ನು ವಿಮರ್ಶಿಸಿರಿ. ಅಂದರೆ ಇದು ಹೇಗೆ ಮನಸ್ಸನ್ನು ಹರ್ಷಪಡಿಸುತ್ತದೆ. ಬುದ್ಧಿಹೀನರಿಗೆ ವಿವೇಕಪ್ರದವಾಗಿದೆ, ಪ್ರಾಣವನ್ನು ಉಜ್ಜೀವಿಸಮಾಡುತ್ತದೆ ಮತ್ತು ಕಣ್ಣುಗಳನ್ನು ಕಳೆಗೊಳಿಸುತ್ತದೆ. ದೇವರ ವಾಕ್ಯಕ್ಕಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿರಿ, ಮತ್ತು ಇದು ನಿಮ್ಮ ಜೀವತಕ್ಕೆ ಇನ್ನು ಹೆಚ್ಚಿನ ಮಧುರತೆಯನ್ನು/ಸಿಹಿಯನ್ನು ಕೊಡುವಂತೆ ಪ್ರಾರ್ಥಿಸಿರಿ.

6. "ನನ್ನ ಮಾತುಗಳೂ ನನ್ನ ಹೃದಯದ ಧ್ಯಾನವೂ" ಇದನ್ನು ವಿಮರ್ಶಿಸಿರಿ. ನೀವು ಮಾತನಾಡುವ ರೀತಿ ಮತ್ತು ಯೋಚಿಸುವ ಆಲೋಚನೆಗಳು ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿರಬೇಕೆಂದು ಪ್ರಾರ್ಥಿಸಿರಿ.

ಅಸೈನ್‌ಮೆಂಟ್: ಕೀರ್ತನೆ 19

ಕೀರ್ತನೆ 19 ಮತ್ತು ಈ ಅಧ್ಯಯನ ಆಧಾರದ ಮೇಲೆ ಒಂದು ಯೌವನಸ್ಥರ ಗುಂಪಿಗಾಗಿ (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶವನ್ನು) ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

ಕೀರ್ತನೆ 23

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆ ಬರಹವು ಕೇವಲ **"ದಾವೀದನ ಕೀರ್ತನೆ"** ಎಂದಷ್ಟೇ ಹೇಳುತ್ತದೆ. ಈ ಕೀರ್ತನೆಯು ಒಂದು ಭರವಸೆಯ ಹಾಡಾಗಿದೆ. ಇದು ದೇವರ ಕಾಳಜಿ ಮತ್ತು ರಕ್ಷಣೆಯಲ್ಲಿನ ದಾವೀದನ ಭರವಸೆಯನ್ನು ವ್ಯಕ್ತಪಡಿಸುತ್ತದೆ.

ಕುರುಬನು (ವಚನ 1): ಇದು ಪ್ರಾಚೀನ ಮಧ್ಯಪ್ರಾಂತ್ಯದಲ್ಲಿ ಒಬ್ಬ ಅರಸನಿಗಾಗಿ ಅತ್ಯಧಿಕವಾಗಿ ಬಳಸಲ್ಪಟ್ಟ ಒಂದು ರೂಪಾಲಂಕಾರವಾಗಿದೆ. ಇದನ್ನು ಈಗಾಗಲೇ ದೇವರ ಕುರಿತಾಗಿ ಆದಿಕಾಂಡದಲ್ಲಿ ಉಪಯೋಗಿಸಲಾಗಿದೆ (ಆದಿಕಾಂಡ 48:15, 49:24).

ತನ್ನ ಹೆಸರಿಗೆ ತಕ್ಕಂತೆ (ವಚನ 3): ದಾವೀದನು ಹೇಗೆ ಅಭಿವೃದ್ಧಿ ಹೊಂದಿದನೆಂಬುದನ್ನು ಜನರು ನೋಡುವಾಗೆಲ್ಲಾ ದೇವರ ಹೆಸರು ಗೌರವಿಸಲ್ಪಟ್ಟಿದೆ.

ದೊಣ್ಣೆ (ವಚನ 4): ದೊಣ್ಣೆಯು ಕುರಿಗಳನ್ನು ಮಾರ್ಗದರ್ಶಿಸಲು, ರಕ್ಷಿಸಲು ಮತ್ತು ಕಾಪಾಡುವುದಕ್ಕಾಗಿ ಕುರುಬನಿಂದ ಉಪಯೋಗಿಸಲ್ಪಟ್ಟ ಒಂದು ಸಾಧನವಾಗಿದೆ. ಅಲ್ಲದೆ ಇದು ಅಧಿಕಾರದ ಒಂದು ಸಂಕೇತವಾಗಿದೆ (ಹೋಲಿಸಿ ಯೆಶಾಯ 14:5) ಮತ್ತು ಶಿಕ್ಷಿಸುವ ಒಂದು ಸಾಧನವಾಗಿದೆ (ಹೋಲಿಸಿ ಕೀರ್ತನೆ 89:32).

ಕೋಲು (ವಚನ 4): ಕೋಲು ಸಹಾಯ/ಅಧಿರಕ್ಕಾಗಿ ಉಪಯೋಗಿಸಲ್ಪಟ್ಟಿದೆ.

ಔತಣ (ವಚನ 5): ಭೋಜನದ ಮೇಜು.

ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತಿ (ವಚನ 5): ಈ ರೀತಿಯಲ್ಲಿ ಒಬ್ಬ ಅತಿಥಿಯು ಔತಣಕೂಟದಲ್ಲಿ ಸತ್ಕರಿಸಲ್ಪಡುತ್ತಿದ್ದನು.

ಯೆಹೋವನ ಮಂದಿರದಲ್ಲಿ ವಾಸಿಸುವೆನು (ವಚನ 6): ಆತನ ದೇವಾಲಯದಲ್ಲಿ ದೇವರ ಅತಿಥಿಯಾಗಿ (ಅಥವಾ ಸೊಲೊಮೋನನು ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟುವುದಕ್ಕಿಂತ ಮೊದಲಿದ್ದ ದೇವದರ್ಶನ ಗುಡಾರ) ಆತನ ಪವಿತ್ರ, ರಾಜಮನೆತನದ ಮನೆಯಾಗಿ.

ಸದಾಕಾಲವು (ವಚನ 6): ಇಬ್ರಿಯದಲ್ಲಿ **"ದೀರ್ಘಕಾಲ"** ಎಂದಿದೆ. ಇದರ ನಿಜವಾದ ಅರ್ಥವೇನೆಂಬುದನ್ನು ಸತ್ಯವೇದ ಪಂಡಿತರು ಇನ್ನು ಚರ್ಚಿಸುತ್ತಿದ್ದಾರೆ. ಕೆಲವು ಅಧುನಿಕ ಭಾಷಾಂತರಗಳಲ್ಲಿ **"ನಾನು ಬದುಕಿರುವವರೆಗೂ"** ಅಥವಾ **"ನನ್ನ ಜೀವಿತ ಕಾಲವೆಲ್ಲಾ"** ಎಂಬುದೆ.

ಪ್ರಶ್ನೆಗಳು

1. ನೀವು ಕೀರ್ತನೆ 23 ಅನ್ನು ಹೇಗೆ ರಚಿಸುತ್ತೀರಿ?
2. ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವಾಗ ಈ ಕೀರ್ತನೆಯನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ:
   ಅ. **"ಕೊರತೆ ಪಡೇನು"**, ವಚನ 1. ಜೀವನದ ಯಾವ ಕ್ಷೇತ್ರದಲ್ಲಿ ದೇವರು ದಾವೀದನಿಗೆ ಒದಗಿಸುತ್ತಾನೆ, ವಚನ 2–3?
   ಆ. ದೇವರು ದಾವೀದನಿಗೆ ಯಾವ ರೀತಿಯಲ್ಲಿ ಪ್ರಯಾಣಕ್ಕೆ ಒಬ್ಬ ಉತ್ತಮ ಸಂಗಡಿಗನು, ವಚನ 4?
   ಇ. ಉದಾರ ಅತಿಥೇಯನಾಗಿ ದೇವರು ದಾವೀದನಿಗೆ ಏನು ಒದಗಿಸುತ್ತಾನೆ, ವಚನ 5?
   ಈ. ದಾವೀದನ ತೀರ್ಮಾನ ಏನು, ವಚನ 6?
3. ನಮ್ಮ ಆಧುನಿಕ ಭಾಷಾಂತರಗಳು ಈ ಕೀರ್ತನೆಯಲ್ಲಿ ವಿಭಿನ್ನ ಕ್ರಿಯಾಪದ ಕಾಲಗಳನ್ನು ಬಳಸುತ್ತವೆ. 1–5 ನೇ ವಚನಗಳಲ್ಲಿ ಕ್ರಿಯಾಪದಗಳ ಕಾಲ ಯಾವುದು? ಮತ್ತು 6 ನೇ ವಚನದಲ್ಲಿ?

ಕೀರ್ತನೆ 23 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮೆಲಿನ ಪ್ರಶ್ನೆ 1 ಕ್ಕೆ ನನ್ನ ಉತ್ತರದಲ್ಲಿ ಈ ಕೀರ್ತನೆಯ ರಚನೆಯನ್ನು ಅಧ್ಯಯನ ಮಾಡಿ. ವಿಷಯ ಮತ್ತು ಭಾಷೆಯ ಆಧಾರದ ಮೇಲೆ ನಾನು ಅದನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದೇನೆ. ಇದಕ್ಕೆ ಕಾರಣಗಳನ್ನು ನೀವು ನೋಡಬಹುದೇ? ಅಥವಾ ವಿಭಿನ್ನವಾಗಿ ರಚಿಸಬೇಕೆಂದು ನೀವು ಭಾವಿಸುತ್ತೀರಾ? ಹಾಗಿದ್ದಲ್ಲಿ, ಹೇಗೆ ಮತ್ತು ಏಕೆ?

2. ದಾವೀದನು ದೇವರನ್ನು ಹೇಗೆ ಸಂಬೋಧಿಸುತ್ತಾನೆ ಮತ್ತು ಆತನು ಈ ಕೀರ್ತನೆಯಲ್ಲಿ ದೇವರ ಒಡಂಬಡಿಕೆಯ ಹೆಸರನ್ನು ಹೇಗೆ ಬಳಸುತ್ತಾನೆ? ನಿಮ್ಮ ಅವಲೋಕನವನ್ನು ಗಮನಿಸಿ.

3. "ಕರ್ತನು ನನಗೆ ಕುರುಬನು" ಒಂದು ರೂಪಾಲಂಕಾರವಾಗಿದೆ. ಕುರುಬನು ತನ್ನ ಕುರಿಗಳನ್ನು ಹೇಗೆ ಪೋಷಿಸುತ್ತಾನೆ ಎಂಬುದರ ಕುರಿತು ಬರೆಯುವಾಗ ದಾವೀದನು ಈ ರೂಪಾಲಂಕಾರವನ್ನು ಅಭಿವೃದ್ಧಿಪಡಿಸುತ್ತಾನೆ. ಆದರೆ 3 ನೇ ವಚನದಲ್ಲಿ ಅವನು ಕುರುಬ/ಕುರಿ ರೂಪಾಲಂಕಾರವನ್ನು ಮೀರಿ ಹೋಗುತ್ತಾನೆ. ಹೇಗೆ ಎಂದು ವಿವರಿಸಿ.

4. ಪಾತ್ರೆಯು ಹೊರಸೂಸುತ್ತದೆ ಎಂಬುದರಲ್ಲಿ ಪಾತ್ರೆಯ ಮಹತ್ವ ಏನಾಗಿರಬಹುದು (ವಚನ 5)?

5. 6 ನೇ ವಚನದಲ್ಲಿ ನಾವು ಯಾವ ಕಾವ್ಯಾತ್ಮಕ ಸಾಧನವನ್ನು ಕಂಡುಕೊಳ್ಳುತ್ತೇವೆ?

6. "ಯೆಹೋವನ ಮಂದಿರದಲ್ಲಿ ವಾಸಿಸುವೆನು" ಎಂಬುದು ರೂಪಾಲಂಕಾರ ಆಗಿರಬಹುದೇ? ಹೇಗೆ ಎಂದು ವಿವರಿಸಿರಿ. ನೀವು ಏನು ಯೋಚಿಸುತ್ತೀರಿ?

7. ಇದೊಂದು ಭರವಸೆಯ ಹಾಡಾಗಿದೆ. ನಮ್ಮ ಆಧುನಿಕ ಅನುವಾದಗಳಲ್ಲಿ ಕ್ರಿಯಾಪದ ಕಾಲಗಳು ಕರ್ತನಲ್ಲಿ ದಾವೀದನ ವಿಶ್ವಾಸವನ್ನು ಹೇಗೆ ಒತ್ತಿ ಹೇಳುತ್ತವೆ?

8. ನಿಮ್ಮ ಸಣ್ಣ ಗುಂಪುಗಳಿಗಾಗಿ ಕೀರ್ತನೆ 23 ರ ಮೇಲೆ ಒಂದು ಸತ್ಯವೇದ ಅಧ್ಯಯನವನ್ನು ತಯಾರಿಸಿದರೆ ನಿಮ್ಮ ಮುಖ್ಯ ಅಂಶಗಳು ಯಾವುದಾಗಿರುತ್ತವೆ?

ಕೀರ್ತನೆ 23 ವಿಮರ್ಶಿಸಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯಲ್ಲಿ ದೇವರನ್ನು ತನ್ನ ಒಳ್ಳೆಯ ಕುರುಬನು ಪ್ರಯಾಣದಲ್ಲಿ ತನ್ನ ನಂಬಿಗಸ್ತ ಸಂಗಡಿಗನು ಮತ್ತು ತನಗೆ ಔತಣವನ್ನು ಬಡಿಸುವವನು ಎಂದು ಹೊಗಳುತ್ತಾನೆ. ಈ ಮೂರು ರೂಪಾಲಂಕಾರಗಳನ್ನು ಬಳಸಿ ದೇವರೊಂದಿಗಿನ ನಿಮ್ಮ ಜೀವಿತವನ್ನು ವಿವರಿಸಿರಿ.

2. ಯೋಹಾನ 10:11–18 ತಾನೇ ಒಳ್ಳೆಯ ಕುರುಬನೆಂದು ಯೇಸು ಕ್ರಿಸ್ತನು ಮಾತಾನಾಡುತ್ತಾನೆ. ಯೆಹೂದಿ ನಾಯಕರ ಮುಂದೆ ಆತನು ಈ ರೀತಿ ಹೇಳುವಾಗ ಉಳಿದ ಎಲ್ಲಾ ಹಳೇ ಒಡಂಬಡಿಕೆಯ ವಾಕ್ಯಭಾಗಗಳಲ್ಲಿ ಕೀರ್ತನೆ 23 ಅನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದಿರಬಹುದು. ಯೋಹಾನ 10:11–18 ಮತ್ತು ಯೇಸು ಕ್ರಿಸ್ತನು ನಿಮ್ಮ ಒಳ್ಳೆಯ ಕುರುಬನೆಂಬುದಾಗಿ ವಿವರಿಸಿರಿ.

3. ನಿಮಗಾಗಿನ ದೇವರ ಒಳ್ಳೆಯತನಕ್ಕಾಗಿ, ಆತನಿಗೆ ಕೃತಜ್ಞತೆ ಸಲ್ಲಿಸುತ್ತಾ ಸ್ವಲ್ಪಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

ಕೀರ್ತನೆ 27

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಸತ್ಯವೇದದಲ್ಲಿ ತಲೆಬರಹವು **"ದಾವೀದನು"** ಎಂಬ ಹೇಳಿಕೆಯನ್ನು ಹೊಂದಿದೆ.

ಈ ಕೀರ್ತನೆಯನ್ನು ಭರವಸೆಯ ಹಾಡಿನೊಂದಿಗೆ ಪ್ರಾರಂಭವಾಗುವ ಒಂದು ಪ್ರಲಾಪವೆಂಬುದಾಗಿ ವರ್ಣಿಸಬಹುದು. ದಾವೀದನು ತನಗೆ ವಿರುದ್ಧವಾಗಿ ಎದ್ದ ವೈರಿಗಳಿಂದ ತನ್ನನ್ನು ಬಿಡಿಸಬೇಕೆಂದು ಭರವಸದಿಂದ ದೇವರನ್ನು ಬೇಡಿಕೊಳ್ಳುತ್ತಾನೆ.

ಬೆಳಕು (ವಚನ 1): ಈ ಇಬ್ರಿಯ ಪದವು ಜೀವ ಮತ್ತು ಸಂತೋಷವನ್ನು ಸೂಚಿಸುತ್ತದೆ. ದಾವೀದನು, ದೇವರು ತನಗೆ ಉತ್ತಮವಾದ ಜೀವಿತವನ್ನು ಒದಗಿಸುವವನೆಂದು ಆತನಲ್ಲಿ ತನ್ನ ಭರವಸೆಯನ್ನು ವ್ಯಕ್ತಪಡಿಸುತ್ತಾನೆ.

ನನ್ನನ್ನು ನುಂಗಿಬಿಡಬೇಕೆಂದು (ವಚನ 2): ಇದು ಭಯಾನಕ ಮತ್ತು ಅಪಾಯಕಾರಿ ಧಾಳಿಯನ್ನು ವ್ಯಕ್ತಪಡಿಸುವ ಒಂದು ರೂಪಾಲಂಕಾರವಾಗಿದೆ (ಹೋಲಿಸಿ ಕೀರ್ತನೆ 7:2).

ಯೆಹೋವನ ಮನೆಯಲ್ಲಿ ವಾಸಮಾಡುತ್ತಾ (ವಚನ 4): ಈ ಒಂದು ಅಲಂಕಾರಿಕ ಹೇಳಿಕೆಯಿಂದ ದಾವೀದನು ದೇವಾಲಯದಲ್ಲಿ ಆರಾಧನೆಯುದ್ದಕ್ಕೂ ದೇವರ ಪ್ರಸನ್ನತೆಯನ್ನು ನೋಡಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾನೆ.

ಗುಡಾರ ... ಆಶ್ರಯಸ್ಥಾನ (ವಚನ 5): ಈ ಇಬ್ರಿಯ ಪದವು ಇಲ್ಲಿ ಸಂರಕ್ಷಣೆಯನ್ನು ಒದಗಿಸುವ ಸಂಗತಿಯ ಬಗ್ಗೆ ಹೇಳುತ್ತದೆ. ಈ ಪದಗಳನ್ನು ಕೆಲವೊಮ್ಮೆ ಯೆರೂಸಲೇಮಿನಲ್ಲಿನ ದೇವಾಲಯಕ್ಕೆ ರೂಪಾಲಂಕಾರಗಳಾಗಿ ಉಪಯೋಗಿಸಲಾಗಿದೆ.

ನನ್ನ ತಲೆ ಎತ್ತಲ್ಪಟ್ಟಿರುವದು (ವಚನ 6): ಈ ಇಬ್ರಿಯ ಪದವು ವಿಜೃಂಭಣೆ ಮತ್ತು ಜಯವನ್ನು ಸೂಚಿಸುತ್ತದೆ.

ವಚನ 8 ಇಬ್ರಿಯ ಪಠ್ಯದಲ್ಲಿ ಸ್ಪಷ್ಟವಾಗಿಲ್ಲ, ಹಾಗಾಗಿ ಭಾಷಾಂತಕಾರರು ಇದರೊಂದಿಗೆ ಸಮಸ್ಯೆಯನ್ನು ಎದುರಿಸುತ್ತಾರೆ. ವಿಭಿನ್ನ ಭಾಷಾಂತರಗಳನ್ನು ಹೋಲಿಸುವಾಗ ನಾವು ಇದನ್ನು ಕಾಣಬಹುದು.

ವಿಮುಖ (ವಚನ 8, 9): ಇದು **"ಪ್ರಸನ್ನತೆ"** ಅಥವಾ ದಯೆಗಾಗಿನ ಒಂದು ರೂಪಾಲಂಕಾರವಾಗಿದೆ. ದೇವರ ಮುಖಪ್ರಸನ್ನತೆಯನ್ನು ಬಯಸುವುದೆಂದರೆ ಆತನನ್ನು ಹುಡುಕುವುದು, ಆತನ ಹತ್ತಿರಕ್ಕೆ ಬಂದು ನಮ್ಮನ್ನು ಆಶೀರ್ವದಿಸುವುದಕ್ಕಾಗಿ ಆತನನ್ನು ಬೇಡಿಕೊಳ್ಳುವುದು. ದೇವರು ತನ್ನ ಮುಖವನ್ನು ಮರೆಮಾಡಿಕೊಂಡಾಗ ಆತನು ನಮ್ಮನ್ನು ಬಿಟ್ಟು ಹೋಗಿದ್ದಾನೆ, ಆತನು ನಮಗೆ ಕಿವಿಗೊಡುವುದಿಲ್ಲ, ಆತನು ನಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಳ್ಳುವುದಿಲ್ಲ ಅಥವಾ ಉತ್ತರಿಸುವುದಿಲ್ಲ. ಆತನು ನಮ್ಮನ್ನು ತಿರಸ್ಕರಿಸುತ್ತಾನೆ ಎಂದು ನಾವು ಭಾವಿಸುವುದಾಗಿದೆ. ದೇವರ ಮುಖವು ನಮ್ಮ ಮೇಲೆ ಪ್ರಕಾಶಿಸುವಾಗ ಆಶೀರ್ವದಿಸಲು ಮತ್ತು ಮಾರ್ಗದರ್ಶಿಸಲು ಆತನು ನಮ್ಮೊಂದಿಗಿರುತ್ತಾನೆ.

ಸಮವಾದ ದಾರಿ (ವಚನ 11): ಅಡೆತಡೆ, ಸಮಸ್ಯೆಗಳಿಲ್ಲದ ದಾರಿ.

ಜೀವಲೋಕದಲ್ಲಿ (ವಚನ 13): ಇದು ಮೃತ್ಯುಲೋಕಕ್ಕೆ ವಿರುದ್ಧವಾದುದ್ದಾಗಿದೆ. ಇಲ್ಲಿ **"ಈ ಜೀವಿತದಲ್ಲಿ" "ನಾನು ಜೀವಂತವಾಗಿರುವಾಗ". "ನಾನು ಬದುಕಿರುವವರೆಗೂ"** ಎಂಬುದಾಗಿ ಅರ್ಥೈಸುತ್ತದೆ.

ಯೆಹೋವನನ್ನು ನಿರೀಕ್ಷಿಸಿಕೊಂಡಿರು (ವಚನ 14): ಯೆಹೋವನನ್ನು ನಿರೀಕ್ಷಿಸಿಕೊಂಡಿರುವುದೆಂದರೆ ಭರವಸೆ ಮತ್ತು ವಿಶ್ವಾಸದಿಂದ ದೇವರನ್ನು ನೋಡುವುದಾಗಿದೆ. ಆತನಲ್ಲಿಯೇ ನಾನು ಬಲ ಮತ್ತು ಧೈರ್ಯವನ್ನು ಕಾಣಬಹುದು. ಕನ್ನಡದ ವಿಭಿನ್ನ ಭಾಷಾಂತರಗಳು ಈ ವಚನವನ್ನು ಹೇಗೆ ಭಾಷಾಂತರಿಸುತ್ತವೆ ಎಂದು ಹೋಲಿಸಿರಿ.

ಪ್ರಶ್ನೆಗಳು

1. ಕೀರ್ತನೆ 27 ಅನ್ನು ನೀವು ಹೇಗೆ ರಚಿಸುತ್ತೀರಿ?
2. ವಚನ 2 ಅನ್ನು ಭಾವಾರ್ಥಗೊಳಿಸಿರಿ? ಪಠ್ಯವನ್ನು ಹಾಗೆಯೇ ಉಪಯೋಗಿಸದೆ ನಿಮ್ಮದೇ ಪದಗಳನ್ನು ಉಪಯೋಗಿಸಿರಿ.

3. 4–5 ನೇ ವಚನಗಳಲ್ಲಿ ದಾವೀದನು ದೇವರಿಂದ ಏನನ್ನು ಕೇಳಿಕೊಳ್ಳುತ್ತಾನೆ? ಪಠ್ಯವನ್ನು ಉಲ್ಲೇಖಿಸಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
4. ದಾವೀದನು "ಉತ್ಸಾಹ ಧ್ವನಿಯೊಡನೆ ಯಜ್ಞಗಳನ್ನು ಸಮರ್ಪಿಸುತ್ತಾನೆ ಮತ್ತು ಹಾಡುತ್ತಾನೆ ಮತ್ತು ವಾದ್ಯ ಬಾರಿಸುತ್ತಾನೆ" ಏಕೆ (ವಚನ 6)? ಪಠ್ಯವನ್ನು ಉಲ್ಲೇಖಿಸಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. 9 ನೇ ವಚನದಲ್ಲಿ ದಾವೀದನು ಸ್ವತಃ ತನ್ನನ್ನು ಏನೆಂದು ಕರೆದುಕೊಳ್ಳುತ್ತಾನೆ?
6. 9 ನೇ ವಚನದಲ್ಲಿ ದಾವೀದನು ಯಾವುದರ ಬಗ್ಗೆ ಪ್ರಾರ್ಥಿಸುತ್ತಾನೆ? ಪಠ್ಯವನ್ನು ಉಲ್ಲೇಖಿಸಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
7. 11–12 ನೇ ವಚನಗಳಲ್ಲಿ ದಾವೀದನು ಯಾವುದರ ಬಗ್ಗೆ ಪ್ರಾರ್ಥಿಸುತ್ತಾನೆ? ಪಠ್ಯವನ್ನು ಉಲ್ಲೇಖಿಸಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
8. 13 ನೇ ವಚನದಲ್ಲಿ ದಾವೀದನಿಗೆ ಯಾವುದರ ಬಗ್ಗೆ ವಿಶ್ವಾಸವಿದೆ? ಪಠ್ಯವನ್ನು ಉಲ್ಲೇಖಿಸಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

ಕೀರ್ತನೆ 27 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೀರ್ತನೆ 27 ರಲ್ಲಿ ದಾವೀದನು ಯಾರನ್ನು ಸಂಭೋದಿಸುತ್ತಾನೆ? ಪಠ್ಯದಾದ್ಯಂತ ಆತನು ಒಬ್ಬರೇ ವ್ಯಕ್ತಿಯನ್ನು ಸಂಬೋಧಿಸಿಲ್ಲ ಎಂಬುದನ್ನು ಗಮನಿಸಿ.
2. ಈ ಕೀರ್ತನೆಯನ್ನು ನಾಲ್ಕು ಶೀರ್ಷಿಕೆಗಳಲ್ಲಿ (ಅಥವಾ ಹೇಳಿಕೆಗಳು ಅಥವಾ ಉಪದೇಶಗಳು) ಸಂಕ್ಷೇಪಿಸಿ:

   ಅ. ವಚನ 1–6:

   ಆ. ವಚನ 7–10:

   ಇ. ವಚನ 11–13:

   ಈ. ವಚನ 14:
3. ಈ ಕೀರ್ತನೆಯಲ್ಲಿ ದಾವೀದನು ತನ್ನ ಶತ್ರುಗಳಿಗೆ ವಿವಿಧ ಪದಗಳು ಮತ್ತು ಹೇಳಿಕೆಗಳನ್ನು ಬಳಸುತ್ತಾನೆ. ಪಟ್ಟಿ ಮಾಡಿ.
4. ಈ ಕೀರ್ತನೆಯಲ್ಲಿ ದಾವೀದನು ದೇವರ ಮೇಲೆ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿದ್ದಾನೆ. ಅವನ ಪ್ರಮುಖ ನಿರೀಕ್ಷೆಗಳನ್ನು ಪಟ್ಟಿ ಮಾಡಿ.
5. ಈ ಕೀರ್ತನೆಯ ಕಾವ್ಯಾತ್ಮಕ ರಚನೆಯನ್ನು ಅಧ್ಯಯನ ಮಾಡಿ. ಸಮಾನಾಂತರತೆಗಳ ಉದಾಹರಣೆಗಳನ್ನು ನೀಡಿ ಮತ್ತು ಅವುಗಳನ್ನು ವಿಶ್ಲೇಷಿಸಿರಿ.
6. ಈ ಕೀರ್ತನೆಯ ಚಿತ್ರಣವನ್ನು ಅಧ್ಯಯನ ಮಾಡಿ. ಕೆಲವು ಪ್ರಮುಖ ಅವಲೋಕನಗಳನ್ನು ಗಮನಿಸಿ.
7. ಕೀರ್ತನೆ 27 ಮತ್ತು ಈ ಅಧ್ಯಯನವು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

ಕೀರ್ತನೆ 27 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಪ್ರಸಕ್ತ ಕಾಲದಲ್ಲಿ ಯಾವ ವಿಭಿನ್ನ ಬಗೆಗಳಲ್ಲಿ ದೇವರು ನಿಮಗೆ ಬೆಳಕು ಮತ್ತು ರಕ್ಷಣೆಯಾಗಿದ್ದಾನೆ. ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
2. ಇಕ್ಕಟ್ಟಿನ ಸಮಯಗಳಲ್ಲಿ ದೇವಜನರಿಗೆ ಇರುವ ಒಂದೇ ಒಂದು ಅಯ್ಕೆಯೆಂದರೆ, ದೇವರ ಮುಖವನ್ನು ನೋಡುವುದಾಗಿದೆ. ಕಳೆದ ದಿನಗಳಲ್ಲಿ ನಿಮ್ಮ ಇಕ್ಕಟ್ಟಿನ ಸಮಯದಲ್ಲಿ ಹೇಗೆ ನೀವು ದೇವರ ಮುಖವನ್ನು ಹುಡುಕಿದಿರಿ? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

3. ಈ ಕೀರ್ತನೆಯಲ್ಲಿ ದಾವೀದನು ತನ್ನ ವೈರಿಗಳ ವಿರುದ್ಧವಾಗಿ ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ದೇವರನ್ನು ಬೇಡಿಕೊಳ್ಳುತ್ತಾನೆ. ನಿಮ್ಮನ್ನು ಸಹ ದೇವರು ಬಾಧಿಸುತ್ತಿರುವ ವೈರಿಗಳಿಂದ ಬಿಡಿಸಿ ಸಹಾಯಮಾಡಿರಬಹುದು. ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

4. ಈ ಹಿಂದೆ ಇಕ್ಕಟ್ಟಿನ ವೇಳೆಗಳಲ್ಲಿ ದೇವರು ಮಾಡಿದ ಸಹಾಯ ಮತ್ತು ಮಾರ್ಗದರ್ಶನವನ್ನು ನೆನಪುಮಾಡಿಕೊಳ್ಳಿರಿ. ಆತನ ಬೆಳಕು ಮತ್ತು ರಕ್ಷಣೆಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

5. ಲೋಕದ ನಮ್ಮ ತಂದೆ ತಾಯಂದಿರು ನಮ್ಮನ್ನು ತೊರೆಯಬಹುದು. ನೀವು ನಿಮ್ಮ ಪೋಷಕರಿಂದ, ಇತರ ಜನರಿಂದ (ಸಂಬಂಧಿಕರು, ಸ್ನೇಹಿತರು, ಸಹವಿಶ್ವಾಸಿಗಳು, ಸಹೋದರರು) ಕೀಳಾಗಿ ಎಣಿಸಲ್ಪಟ್ಟಿರಬಹುದು. ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

6. ನೀವು ಭರವಸವಿಟ್ಟ ಪೋಷಕರು, ಇತರ ಜನರು (ಸಂಬಂಧಿಕರು, ಸ್ನೇಹಿತರು, ಸಹವಿಶ್ವಾಸಿಗಳು, ಸೇವಕರು) ನಿಮ್ಮನ್ನು ತಳ್ಳಿಬಿಟ್ಟ ಪರಿಣಾಮವಾಗಿ ಬಹುಶಃ ನಿಮ್ಮ ಜೀವನ ಕಹಿತನದಿಂದ ಕೂಡಿರಬಹುದು. ನಿಮ್ಮ ಕಹಿತನವನ್ನು ಕರ್ತನ ಮುಂದೆ ತನ್ನಿರಿ. ಈ ರೀತಿಯ ಕಹಿತನದಿಂದ ಬಿಡಿಸುವಂತೆ ಆತನನ್ನು ಬೇಡಿಕೊಳ್ಳಿರಿ. ದೇವರ ಬಿಡುಗಡೆ, ರಕ್ಷಣೆ, ಬೆಳಕಿಗಾಗಿ ಸ್ತೋತ್ರ ಮಾಡಿರಿ.

ಅಸೈನ್ ಮೆಂಟ್: ಕೀರ್ತನೆ 27

ಕೀರ್ತನೆ 27 ಮತ್ತು ಈ ಅಧ್ಯಯನದ ಆಧಾರದ ಮೇಲೆ ಯೌವನಸ್ಥರ ಒಂದು ಗುಂಪಿಗಾಗಿ (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶ) ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

ಕೀರ್ತನೆ 32

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರೀಯ ತಲೆಬರಹವು **"ದಾವೀದನ ಪದ್ಯ, ಮಾಸ್ಕಿಲ್"** ಎಂಬ ಮಾಹಿತಿಯನ್ನು ಒಳಗೊಂಡಿದೆ. ಮಾಸ್ಕಿಲ್ ಎಂಬುದರ ಅರ್ಥ ಅನಾಮಿಕ (ಗೊತ್ತಿಲ್ಲ). ಇದೊಂದು ಸಾಹಿತ್ಯ ಅಥವಾ ಸಂಗೀತದ ರೂಪವಾಗಿರಬಹುದು. ಇದನ್ನು ಕೀರ್ತನೆ 42, ಕೀರ್ತನೆ 44–45, ಕೀರ್ತನೆ 52–57, ಕೀರ್ತನೆ 72, ಕೀರ್ತನೆ 88–89 ಮತ್ತು ಕೀರ್ತನೆ 142 ರೊಂದಿಗೂ ಬಳಿಸಲಾಗಿದೆ.

ಕ್ರೈಸ್ತ ಸಭೆಯ ಸಂಪ್ರದಾಯದಲ್ಲಿ ಇದು **"ಪಶ್ಚಾತ್ತಾಪದ"** ಕೀರ್ತನೆಗಳಲ್ಲಿ ಒಂದಾಗಿದೆ. ವಾಡಿಕೆಯಂತೆ ಬತ್ಷೆಬೆಳೊಂದಿಗೆ ದಾವೀದನ ವ್ಯಭಿಚಾರ ಮತ್ತು ಆಕೆಯ ಗಂಡನಾದ ಊರೀಯನ ಕೊಲೆಯೊಂದಿಗೆ ಇದನ್ನು ಸಂಬಂಧ ಕಲ್ಪಿಸಲಾಗಿದೆ. ಆದರೆ ವಾಕ್ಯಭಾಗದಲ್ಲಿ ಏನೂ ಸಹ ಇದಕ್ಕೆ ಬೆಂಬಲ ಕೊಡುವುದಿಲ್ಲ. ಹಾಗಾಗಿ ಈ ಕೀರ್ತನೆಯನ್ನು ದಾವೀದನ ಪಾಪದರಿಕೆ ಮತ್ತು ಕ್ಷಮಾಪಣೆಯ ಪ್ರತಿಬಿಂಬವಾಗಿ ಕಾಣುವುದು ಉತ್ತಮವಾದುದ್ದಾಗಿದೆ. ಪ್ರಾಥಮಿಕವಾಗಿ ಈ ಕೀರ್ತನೆಯು ದೇವರ ಕ್ಷಮೆ ಮತ್ತು ನಿರಂತರವಾದ ಪ್ರೀತಿಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸುವ ಒಂದು ಕೀರ್ತನೆಯಾಗಿದೆ.

ರೋಮಾ. 4:6–8 ರಲ್ಲಿ ವಚನ 1–2 ಅನ್ನು **"ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನು"** ಎಂದು ಉದಾಹರಣೆಯಾಗಿ ಉಪಯೋಗಿಸುತ್ತಾನೆ. ತಾನು ಮಾಡಿದ ಕಾರ್ಯಗಳ ನಿಮಿತ್ತ ದಾವೀದನು ಧನ್ಯನಾಗಲಿಲ್ಲ ಮತ್ತು ಆಶೀರ್ವದಿಸಲ್ಪಡಲಿಲ್ಲ, ಆದರೆ ದೇವರು ಆತನ ಪಾಪಗಳನ್ನು ಕ್ಷಮಿಸಿದನು ಮತ್ತು ನೀತಿವಂತನಾಗಿ ಮಾಡಿದನು (ವಚನ 11).

ಧನ್ಯನು (ವಚನ 1): ಕೀರ್ತನೆ 1:1 ರಲ್ಲಿ ದೇವರನ್ನು ಗೌರಾವಿಸಿ ಆತನ ಚಿತ್ತವನ್ನು ಮಾಡುವವನು ಧನ್ಯನು ಎಂಬುದರೊಂದಿಗೆ ಹೋಲಿಸಿರಿ.

ಯಾವನ ಹೃದಯದಲ್ಲಿ ಕಪಟವಿರುವುದಿಲ್ಲವೋ (ವಚನ 2): ದೇವರೊಂದಿಗೆ ಪ್ರಾಮಾಣಿಕವಾಗಿರುವ ವ್ಯಕ್ತಿ ಮಾತ್ರ ದೇವರಿಂದ ಕ್ಷಮೆಯನ್ನು ಹೊಂದಿಕೊಳ್ಳುತ್ತಾನೆ.

ಎಲುಬುಗಳು (ವಚನ 3): ಇಬ್ರಿಯ ಭಾಷೆಯಲ್ಲಿ **"ಎಲುಬುಗಳು"** ಎಂದರೆ ಮನುಷ್ಯನ ಆಂತರಿಕ ಅಸ್ತಿತ್ವ ಅಥವಾ ಅವನ ಇಡೀ ದೇಹವನ್ನು ಸೂಚಿಸುತ್ತದೆ.

ಮಹಾಪ್ರವಾಹವು (ವಚನ 6): ಇದು ಅಪಾಯ ಮತ್ತು ಬೆದರಿಕೆಯ ಸನ್ನಿವೇಶಗಳಿಗಿರುವ ಒಂದು ರೂಪಾಲಂಕಾರವಾಗಿದೆ. ಕೇವಲ ಇಬ್ರಿಯದಲ್ಲಿ ಮಾತ್ರವಲ್ಲ, ಪ್ರಾಚೀನ ಮಧ್ಯಪ್ರಾಂತ್ಯದುದ್ದಕ್ಕೂ ಇದೊಂದು ಸಾಮಾನ್ಯ ರೂಪಾಲಂಕಾರವಾಗಿತ್ತು.

ಪ್ರಶ್ನೆಗಳು

1. ಕೀರ್ತನೆ 32 ಅನ್ನು ನೀವು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯಲ್ಲಿ ಯಾರನ್ನು ಸಂಬೋಧಿಸಲಾಗಿದೆ.?
3. ಈ ಕೀರ್ತನೆಯಲ್ಲಿ ಧನ್ಯರು ಯಾರು?
4. ದೇವರಿಗೆ ತನ್ನ ಪಾಪವನ್ನು ಒಪ್ಪಿಕೊಳ್ಳುವ ಮೊದಲು ದಾವೀದನು ತನ್ನ ಜೀವನವನ್ನು ಹೇಗೆ ವಿವರಿಸುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. 5 ನೇ ವಚನದಲ್ಲಿ ದಾವೀದನು ಏನು ಮಾಡುತ್ತಾನೆ?
6. ದೇವರು ಅವನನ್ನು ಕ್ಷಮಿಸಿದ ಮೇಲೆ ದಾವೀದನಿಗೆ ಹೇಗೆ ಅನಿಸಿತು?
7. ದೇವರಲ್ಲಿ ಭರವಸೆವಿಡುವ ಮನುಷ್ಯನ ಜೀವಿತವು ದುಷ್ಟನ ಜೀವಿತಕ್ಕಿಂತ ಹೇಗೆ ಭಿನ್ನವಾಗಿದೆ?

ಕೀರ್ತನೆ 32 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯಲ್ಲಿ ಧನ್ಯನಾಗಿರುವ ವ್ಯಕ್ತಿಯನ್ನು ಕೀರ್ತನೆ 1 ರಲ್ಲಿನ ಧನ್ಯವಾಗಿರುವ ವ್ಯಕ್ತಿಯೊಂದಿಗೆ ಹೋಲಿಸಿರಿ. ಯಾವುದೇ ಸಮಾನತೆ, ವ್ಯತ್ಯಾಸಗಳಿವೆಯೆ?

2. ವಚನ 1–5 ರ **"ಸಿದ್ಧಾಂತವನ್ನು"** ನೀವು ಹೇಗೆ ಸಾರಾಂಶಗೊಳಿಸುವಿರಿ.

3. ಈ ಸಿದ್ಧಾಂತದ **"ಅನ್ವಯಿಕೆ"** (ವಚನ 6–10) ಅನ್ನು ನೀವು ಹೇಗೆ ಸಂಕ್ಷೇಪಗೊಳಿಸುತ್ತೀರಿ?

4. ಈ ಕೀರ್ತನೆಯಲ್ಲಿನ ಕೆಲವು ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಅಧ್ಯಯನ ಮಾಡಿ:

   ಅ. ಸಮಗ್ರ ರಚನೆ: ದಾವೀದನು ಈ ಕೀರ್ತನೆಯನ್ನು ಹೇಗೆ ರಚಿಸಿದ್ದಾನೆ? ಮೇಲಿನ ಮೊದಲ ಪ್ರಶ್ನೆಗೆ ನನ್ನ ಉತ್ತರದಲ್ಲಿ ಉಲ್ಲೇಖಿಸಲಾದ ಐದು ಅಂಶಗಳ ರಚನೆಯೊಂದಿಗೆ ನೀವು ಒಪ್ಪುತ್ತಿರಾ? ಯಾಕೆ? ಯಾಕಿಲ್ಲಾ?

   ಆ. ಸಮಗ್ರ ರಚನೆಯ ಬಗ್ಗೆ ಇನ್ನು ಹೆಚ್ಚು ಮಾಹತಿ: ದಾವೀದನು ಪ್ರಸ್ತುತ ಪಡಿಸುವ ವಿಧಾನವು ಯಾಕೆ ಉತ್ತಮವಾಗಿದೆ.

   ಇ. ಭಾವನೆ: ಈ ಕೀರ್ತನೆಯ ಸ್ವರ/ಭಾವ ಏನು? ದಾವೀದನು ಈ ಸ್ವರ/ಭಾವವನ್ನು ಹೇಗೆ ಸಾಧಿಸುತ್ತಾನೆ?

   ಈ. ಚಿತ್ರಣ: ಅರ್ಥಾಲಂಕಾರಗಳ ಉದಾಹರಣೆಗಳನ್ನು ವಿಶ್ಲೇಷಿಸಿರಿ:

   - ರೂಪಾಲಂಕಾರಗಳು
   - ಮಾನವೀಕರಣ
   - ಉಪಮೆಗಳು

   ಉ. ಪದ್ಯರೂಪಿ ರಚನೆ: ಕೆಲವು ಸಮಾನಂತರತೆಗಳನ್ನು ವಿಶ್ಲೇಷಿಸಿರಿ.

   ಊ. ಶಬ್ದಕೋಶ: ಸಮಾನಾರ್ಥಕ ಸಮಾನಾಂತರತೆಯ ಪರಿಣಾಮವು ಏನಾಗುತ್ತದೆ?

5. ದೇವರ ಸ್ವಭಾವವನ್ನು ಅರಿತುಕೊಳ್ಳಲು ಮತ್ತು ಪಾಪದ ಅರಿಕೆಯ ಪ್ರಾಮುಖ್ಯತೆಯನ್ನು ತಿಳಿಯಲು ಈ ಕೀರ್ತನೆಯು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

6. ಕೀರ್ತನೆ 32 ಮತ್ತು ಈ ಅಧ್ಯಯನವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 32 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನೀವು ಅರಿಕೆಮಾಡದ ಪಾಪಗಳಿಗಾಗಿ ನಿಮ್ಮ ಜೀವನದಲ್ಲಿ ನೀವು ಬಾಧೆಪಟ್ಟ ಸಮಯಗಳನ್ನು ವಿವರಿಸಿರಿ.

2. ಕಡೆಯದಾಗಿ ನೀವು ಪಾಪವನ್ನು ಅರಿಕೆ ಮಾಡಿದಾಗ ಮತ್ತು ನಿಮ್ಮ ಪಾಪವು ದೇವರಿಂದ ಅಷ್ಟೇ ಅಲ್ಲದೇ, ನೀವು ಯಾರ ವಿರುದ್ಧ ಪಾಪ ಮಾಡಿದಿರೋ ಅವರಿಂದಲೂ ಕ್ಷಮಿಸಲ್ಪಟ್ಟಾಗ ನಿಮಗೆ ಏನನಿಸಿತು? ವಿಮರ್ಶಿಸಿರಿ.

3. ವಚನ 8–9 ಅನ್ನು ವಿಮರ್ಶಿಸಿರಿ, ನಮಗೆಲ್ಲರಿಗೂ ಉಪದೇಶ ಮತ್ತು ಮಾರ್ಗದರ್ಶನ ಬೇಕಾಗಿದೆ. ಇದಕ್ಕೆ ಅಧ್ಯತೆಯನ್ನು ಕೊಡಲು ನಾವು ಏನನ್ನು ಮಾಡಬಹುದು ಮತ್ತು ವಿವೇಕಹೀನರಾಗಿ ಕುದುರೆಯಂತಾಗಲಿ ಅಥವಾ ಹೇಸರಗತ್ತೆಯಂತೆ ಅಗುವುದನ್ನು ನಾವು ಹೇಗೆ ತಪ್ಪಿಸಬಹುದು?

4. ವಚನ 10 ಅನ್ನು ವಿಮರ್ಶಿಸಿರಿ. ಇನ್ನೂ ಹೆಚ್ಚಾಗಿ ನೀವು ದೇವರಲ್ಲಿ ಭರವಸವಿಡುವಂತೆ ಮತ್ತು ಆ ಮೂಲಕ ಆತನ ಕೃಪೆ/ಪ್ರೀತಿಯಿಂದ ನೀವು ಅಪಹರಿಸಲ್ಪಟ್ಟಿರುವುದನ್ನು ಅನುಭವಿಸುವಂತೆ ಪ್ರಾರ್ಥಿಸಿರಿ.

5. ನಿಮ್ಮ ಜೀವನದಲ್ಲಿ ಯಾವುದಾದರೂ ಅರಿಕೆ ಮಾಡದ ಪಾಪಗಳಿವೆಯೇ? ದಾವೀದನಿಂದ ಕಲಿತುಕೊಳ್ಳಿರಿ. ನಿಮ್ಮ ಬಾಧೆಯಿಂದ ನೀವು ಕ್ಷಮೆ ಮತ್ತು ಬಿಡುಗಡೆಯನ್ನು ಅನುಭವಿಸಬಹುದು. ಕ್ಷಮಾಪಣೆಗಾಗಿ ಪ್ರಾರ್ಥಿಸಿರಿ ಮತ್ತು ನೀವು ದೇವರಿಂದ ನೀತಿವಂತಿಕೆಯನ್ನು ಹೊಂದುವಿರಿ.

ಅಸೈನ್‌ಮೆಂಟ್: ಕೀರ್ತನೆ 32

ಕೀರ್ತನೆ 32 ಮತ್ತು ಈ ಅಧ್ಯಯನವನ್ನು ಅಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನ (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶ)ವನ್ನು ಸಿದ್ಧಪಡಿಸಿರಿ.

ಕೀರ್ತನೆ 34

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಕೀರ್ತನೆಯು ಅರಸನಾದ ಅಬೀಮೆಲೆಕನ ಎದುರಿನಲ್ಲಿ ಹುಚ್ಚನಂತೆ ತೋರ್ಪಡಿಸಿಕೊಂಡು ಅವನ ಬಳಿಯಿಂದ ಹೊರಡಿಸಲ್ಪಟ್ಟಾಗ ದಾವೀದನು ರಚಿಸಿದ ಕೀರ್ತನೆ ಎಂದು ಇಬ್ರಿಯ ತಲೆಬರಹವು ಹೇಳುತ್ತದೆ. ಇದು 1 ಸಮುವೇಲ. 21:10–15 ರಲ್ಲಿನ ವೃತ್ತಾಂತಕ್ಕೆ ಒಂದು ಉಲ್ಲೇಖವಾಗಿರಬಹುದು. ದಾವೀದನು ಅರಸನಾದ ಸೌಲನಿಗೆ ಹೆದರಿ ಓಡಿಹೋಗಿ, ಪಿಲಿಷ್ಟಿಯರ ಪಟ್ಟಣವಾದ ಗತ್ ಊರಿಗೆ ಬರಬೇಕಾಯಿತು. ಒಬ್ಬ ಮಹಾನ್ ವೀರನಾದ ದಾವೀದನ ಕೀರ್ತಿಯು ಅಲ್ಲಿನ ಜನರಿಗೆ ತಿಳಿದಿತ್ತು, ಹಾಗಾಗಿ ಗತ್ ಊರಿನ ಅರಸನಾದ ಅಕೀಷನು ತನ್ನನ್ನು ಕೊಲ್ಲಬಹುದೆಂದು ಆತನು ಭಯಪಟ್ಟನು. ತನ್ನ ಜೀವವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅರಸನು ತನ್ನನ್ನು ಹೊರಡಿಸಲೆಂದು ದಾವೀದನು ತನ್ನನ್ನು ಹುಚ್ಚನಂತೆ ತೋರ್ಪಡಿಸಿಕೊಂಡನು. ತಲೆಬರಹವು ಅರಸನಾದ **"ಆಕೀಷನು"** ಎನ್ನದೆ, ಅರಸನಾದ ಅಬೀಮೆಲೆಕನು ಎಂದು ಹೇಳುವುದು ವಿಚಿತ್ರವೆನಿಸುತ್ತದೆ. ಬಹುಶಃ ಪಿಲಿಷ್ಟಿಯದ ಅರಸನರಿಗೆ **"ಅಬೀಮೆಲೆಕ"** ಎಂಬ ನಾಮದೇಯವನ್ನು (ಇದರರ್ಥ ತಂದೆಯು ಅರಸನಾಗಿದ್ದಾನೆ) ಉಪಯೋಗಿಸುತ್ತಿದ್ದರು. ಅಥವಾ ಬಹುಶಃ ಆಕೀಷ ಅರಸು ಅಬೀಮೆಲೆಕ ಎಂಬ ಎರಡನೇ ಹೆಸರನ್ನು ಹೊಂದಿರುತ್ತದೆ.

ಕೀರ್ತನೆ 34 ಅನ್ನು ವೈಯಕ್ತಿಕವಾಗಿ ಕೃತಜ್ಞತೆ ಸಲ್ಲಿಸುವ ಒಂದು ಗೀತವನ್ನಾಗಿ ವರ್ಗೀಕರಿಸಬಹುದು. ಆದರೆ ಇದರ ಎರಡನೇ ಭಾಗವು ಇಬ್ರಿಯ ಜ್ಞಾನವನ್ನು ಒಳಗೊಂಡಿದೆ. ಹಾಗಾಗಿ ಕೆಲವು ವಿಶ್ಲೇಷಕರು ಇದನ್ನು ಒಂದು ಜ್ಞಾನದ ಕೀರ್ತನೆಯೆಂದು ಕರೆಯುವರು. ಎರಡೂ ಭಾಗಗಳು ಪರಸ್ಪರ ಅಂಟಿಕೊಂಡಿವೆ. ಇಬ್ರಿಯ ವರ್ಣಮಾಲೆಯಂತೆ ನಮ್ಮ ಅಧುನಿಕ ಸತ್ಯವೇದಗಳಲ್ಲಿ 22 ವಚನಗಳಿವೆ. ಇದರ ವಿಧಾನ ಸರಿಯಿಲ್ಲದಿದ್ದರೂ ಸಹ ಇಬ್ರಿಯ ಪಠ್ಯವು ಇದೊಂದು **"ಒಗಟುರೂಪದ ಕೀರ್ತನೆ"** ಎಂದು ತೋರಿಸುತ್ತದೆ.

ಆತನ ಹೆಸರು (ವಚನ 3): ಸತ್ಯವೇದದ ಭಾಷೆಯಲ್ಲಿ **"ಹೆಸರು"** ಅಂದರೆ ಹಿಂದಿರುವ ವ್ಯಕ್ತಿ, ಆತನ ವೈಯಕ್ತಿಕ ಗುಣಲಕ್ಷಣಗಳು ಮತ್ತು ಆತನ ಅಧಿಕಾರ/ ಬಲವನ್ನು ಸೂಚಿಸುತ್ತದೆ.

ಈ ಬಡ ಮನುಷ್ಯನು (ವಚನ 6): (ಇದು ಕನ್ನಡದ ಸತ್ಯವೇದದಲ್ಲಿ ಅಷ್ಟೇ ಸ್ಪಷ್ಟವಾಗಿಲ್ಲ) ದಾವೀದನು ಈ ಹೇಳಿಕೆಯನ್ನು ಸ್ವತಃ ತನಗಾಗಿ ಉಪಯೋಗಿಸುತ್ತಾನೆ. ಹಲೇ ಒಡಂಬಡಿಕೆಯಲ್ಲಿ **"ಬಡವನು"** ಎಂಬುವದು **"ದೀನ, ದೇವರನ್ನು ಆತುಕೊಂಡಿರುವವ"** ಎಂದು ಅರ್ಥೈಸುತ್ತದೆ (ವಚನ 18 ರಲ್ಲಿನ ಮುರಿದ ಮನಸ್ಸುಳ್ಳವರು ಮತ್ತು ಕುಗ್ಗಿಹೋದವರೊಂದಿಗೆ ಹೋಲಿಸಿರಿ). ತನ್ನ ಜನರು ತನ್ನ ಮೇಲೆ ಆತುಕೊಂಡಿರಬೇಕು, ದೀನರಾಗಿರಬೇಕೆಂದು ದೇವರು ಬಯಸುತ್ತಾನೆ. ಪರ್ವತ ಪ್ರಸಂಗದಲ್ಲಿ ಪರಲೋಕರಾಜ್ಯದ ಜನರನ್ನು **"ಆತ್ಮದಲ್ಲಿ ಬಡವರು"** ಎಂದು ಯೇಸು ಕ್ರಿಸ್ತನು ಕರೆಯುತ್ತಾನೆ.

ಯೆಹೋವನ ಭಯಭಕ್ತಿಯುಳ್ಳವರ ಸುತ್ತಲೂ ಆತನ ದೂತನು ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ (ವಚನ 7): ತನ್ನ ಜನರನ್ನು ಕಾಪಾಡಲು ದೇವರು ತನ್ನ ಪರಲೋಕದ ಪ್ರತಿನಿಧಿಗಳನ್ನು ಕಳುಹಿಸುತ್ತಾನೆ. **"ದಂಡಿಳಿಸಿ"** ಎಂಬುದು ಅಲಂಕಾರಿಕವಾಗಿ ಬಳಸಲಾಗಿದೆ. ಒಂದು ಜನರ ಗುಂಪಿನ ಸುತ್ತಲು ಒಬ್ಬ ದೇವದೂತನು ದಂಡಿಳಿಸಿ ಕಾಯಲು ಹೇಗೆತಾನೆ ಸಾಧ್ಯ? ದೇವರಿಗೆ ಭಯಪಡುವುದೆಂದರೆ ಆತನಲ್ಲಿ ಭರವಸ ಇಡುವುದಾಗಿದೆ ಮತ್ತು ಆತನಿಗೆ ವಿಧೇಯರಾಗುವುದಾಗಿದೆ.

ಅನುಭವ ಸವಿದು ನೋಡಿರಿ (ವಚನ 8): ಎರಡು ಕ್ರಿಯಾಪದ ಪದಗಳು ಯಾವುದೋ ಸಂಗತಿಯನ್ನು ಎರಡು ವಿಧಗಳಲ್ಲಿ ಕಾಣುವುದನ್ನು ವ್ಯಕ್ತಪಡಿಸುತ್ತವೆ.

ಮಕ್ಕಳಿರಾ(ವಚನ 11): ಇದು ತಮ್ಮ ವಿಧ್ಯಾರ್ಥಿಗಳ ಕುರಿತಾಗಿ ಇಬ್ರಿಯ ಜ್ಞಾನದ ಶಿಕ್ಷಕರುಗಳಿಂದ ಉಪಯೋಗಿಸಲ್ಪಡುವ ಒಂದು ಶಬ್ಧವಾಗಿದೆ.

ಯೆಹೋವನ ಮುಖ (ವಚನ 16): ದೇವರ ಮುಖವು ಆತನ ಗುಣಸ್ವಭಾವವನ್ನು ತಿಳಿಸುತ್ತದೆ.

ಆತನ ಎಲುಬುಗಳಲ್ಲಿ ... ಒಂದಾದರು ಮೂರಿದು ಹೋಗುಲಿಲ್ಲ (ವಚನ 20): ಎಲುಬುಗಳು ಇಡೀ ದೇಹವನ್ನು ಪ್ರತಿನಿಧಿಸುತ್ತವೆ, ಹಾಗೇ ದೇವರು ನೀತಿವಂತನನ್ನು ಕಾಪಾಡುತ್ತಾನೆ. ಯೊಹಾನನು ತನ್ನ ಸುವಾರ್ತೆಯಲ್ಲಿ ಈ ವಚನದ ಒಂದು ಭಾಗವನ್ನು ಉಪಯೋಗಿಸುತ್ತಾನೆ (ಯೋಹಾನ 19:36). ಯೋಹಾನನು ತನ್ನ ಮನಸ್ಸಿನಲ್ಲಿ ಎರಡು ಸಂಗತಿಗಳನ್ನು ಇಟ್ಟುಕೊಂಡಿದ್ದಿರಬಹುದು: ಮೊದಲನೇಯದು, ಯೇಸು ಕ್ರಿಸ್ತನು ಪಸ್ಕದ ಕುರಿಮರಿಯಾಗಿದ್ದು ಆತನ ಎಲುಬುಗಳಲ್ಲಿ

ಒಂದನ್ನೂ ಮುರಿಯಕೂಡದಾಗಿತ್ತು, ವಿಮೋಚನಕಾಂಡ 12:46, ಅರಣ್ಯಕಾಂಡ 9:12. ಎರಡನೇಯದಾಗಿ ಯೇಸು ಕ್ರಿಸ್ತನು, ದೇವರು ಕಾಪಾಡುವ ಒಬ್ಬ ನೀತಿವಂತ ವ್ಯಕ್ತಿಯಾಗಿದ್ದನು, ಕೀರ್ತನೆ 34:20.

ವಿಮೋಚಿಸುತ್ತಾನೆ (ವಚನ 22): ಇಬ್ರಿಯ ಪದ್ಯಸಾಹಿತ್ಯದಲ್ಲಿ ವಿಮೋಚಿಸು ಮತ್ತು ರಕ್ಷಿಸು ಇವೆರಡೂ ಸಮಾನಪದಗಳಾಗಿವೆ.

ಪ್ರಶ್ನೆಗಳು

1. ಕೀರ್ತನೆ 34 ಅನ್ನು ಹೇಗೆ ವರ್ಗೀಕರಿಸಬಹುದು?
2. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
3. ಈ ಕೀರ್ತನೆಯಲ್ಲಿ ದಾವೀದನು ಯಾರನ್ನು ಸಂಬೋಧಿಸಿದ್ದಾನೆ? ಮತ್ತು ಆತನು ಯಾರನ್ನು ಸಂಬೋಧಿಸಿಲ್ಲ?
4. ಇಡಿ ಕೀರ್ತನೆಯನ್ನು ವಿಭಾಗದಿಂದ ವಿಭಾಗಕ್ಕೆ ಸಂಕ್ಷೇಪಿಸಿ. ನಿಮ್ಮ ಸತ್ಯವೇದ ಹೇಳಿಕೆಗಳನ್ನು ಉಲ್ಲೇಖಿಸಬೇಡಿ, ಆದರೆ ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿ.
   ಅ. ವಚನ 1–3
   ಆ. ವಚನ 4–7
   ಇ. ವಚನ 8–10
   ಈ. ವಚನ 11–14
   ಉ. ವಚನ 15–18
   ಊ. ವಚನ 19–22
5. 9 ನೇ ವಚನದಲ್ಲಿ **"ದೇವರಿಗೆ ಭಯಪಡುವುದರಿಂದ"** ಆಗುವ ಪ್ರಯೋಜನಗಳನ್ನು ಹೇಗೆ ವಿವರಿಸುತ್ತಾನೆ?
6. ವಚನ 12 ರಲ್ಲಿ ದೇವರಿಗೆ ಭಯಪಡುವುದರಿಂದ ಆಗುವ ಲಾಭಗಳ ಬಗ್ಗೆ ಹೇಗೆ ವರ್ಣಿಸುತ್ತಾನೆ?
7. ದಾವೀದನ ಪ್ರಕಾರ, ದುಷ್ಟರು ಯಾವ ಸಮಸ್ಯೆಗಳನ್ನು ಎದುರಿಸುತ್ತಾರೆ (ವಚನ 16, 21)?
8. ದಾವಿದನ ಪ್ರಕಾರ, ನೀತಿವಂತನು ಯಾವ ಆಶಿರ್ವಾದಗಳನ್ನು ಅನುಭವಿಸುತ್ತಾರೆ (ವಚನ 15, 17–20, 22)?

ಕೀರ್ತನೆ 34 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಶಿರ್ಷಿಕೆಯಲ್ಲಿ ಅರಸನಾದ **"ಅಬೀಮೆಲೆಕನೊಂದಿಗೆ"** ಇರುವ ಸಮಸ್ಯೆಯನ್ನು ವಿವರಿಸಿರಿ.
2. 15 ನೇ ವಚನದ **"ನೀತಿವಂತರು"** ಯಾರು?
3. 18 ನೇ ವಚನದ **"ಮುರಿದ ಮನಸ್ಸುಳ್ಳವರು"** ಮತ್ತು **"ಕುಗ್ಗಿ ಹೋದವರು"** ಯಾರು?
4. ಈ ವಚನಗಳ ಕಾವ್ಯಾತ್ಮಕ ಭಾಷೆ ಮತ್ತು ರಚನೆಯನ್ನು ವಿವರಿಸಿ:
   ಅ. ವಚನ 9–10
   ಆ. ವಚನ 15–16
   ಇ. ವಚನ 21
5. ನಿಮ್ಮ ಜೀವನದಲ್ಲಿ ಸರಿಯಾದ ಆಯ್ಕೆಯನ್ನು ಮಾಡುವ ಪ್ರಾಮುಖ್ಯತೆಯನ್ನು ಬಗ್ಗೆ ಆಳವಾದ ತಿಳುವಳಿಕೆಯನ್ನು ತಲುಪಲು ಕೀರ್ತನೆ 34 ಮತ್ತು ಈ ಅಧ್ಯಯನವು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
6. ಕೀರ್ತನೆ 34 ಮತ್ತು ಈ ಅಧ್ಯಯನ ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 34 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ದೇವರು ಮಾಡಿದ ಸಹಾಯ ಮತ್ತು ವಿಮೋಚನೆಗಾಗಿ ಆತನನ್ನು ಕೊಂಡಾಡಲು ಮತ್ತು ಕೃತಜ್ಞತೆ ಸಲ್ಲಿಸಲು ತನ್ನೊಂದಿಗೆ ಸೇರಬೇಕೆಂದು ದಾವೀದನು ದೇವಜನರನ್ನು ಆಹ್ವಾನಿಸಿದನು. ನಿಮ್ಮ ಮತ್ತು ನಿಮ್ಮ ಸಭೆಯ ಬಗ್ಗೆ ಏನು? ದೇವರು ನಿಮಗೆ ಏನನ್ನು ಮಾಡಿದ್ದಾನೋ ಅದನ್ನು ನೀವು ಹಂಚಿಕೊಂಡಿದ್ದೀರಾ? ದೇವರು ನಿಮಗೆ ಮಾಡಿದ ಒಳ್ಳೆಯ ಸಂಗತಿಗಳಿಗಾಗಿ ದೇವರನ್ನು ಆರಾಧಿಸಲು ಮತ್ತು ಕೊಂಡಾಡಲು ನಿಮ್ಮ ಸಹವಿಶ್ವಾಸಿಗಳನ್ನು ನೀವು ಆಹ್ವಾನಿಸಿದ್ದೀರಾ? ಈ ಪ್ರಶ್ನೆಗಳನ್ನು ವಿಮರ್ಶಿಸಿರಿ ಮತ್ತು ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿರಿ.
2. ದಕ್ಷಿಣ ಭಾರತದಲ್ಲಿನ ದೇವಜನರಿಗೆ ದೃಷ್ಟಿ ಸಾಗುವುಕ್ಕಿಂತ ಮತ್ತು ನೀತಿವಂತರಾಗಲು ಸರಿಯಾದ ಆಯ್ಕೆ ಮಾಡಬೇಕೆಂಬುದು ಏನೆಂದು ಅರ್ಥೈಸುತ್ತದೆಂದು ವಿಮರ್ಶಿಸಿರಿ. ಬರುವ ವರ್ಷದಲ್ಲಿ ನಿಮ್ಮ ಸಭೆಯು ಒಂದು ಸರಿಯಾದ ಆಯ್ಕೆಯನ್ನು ಮಾಡಬೇಕೆಂದು ಪ್ರಾರ್ಥಿಸಿರಿ.

ಕೀರ್ತನೆ 37

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆಬರಹದಲ್ಲಿ **"ದಾವೀದನ ಕೀರ್ತನೆ"** ಎಂದು ಹೇಳುತ್ತದೆ. 22 ಶ್ಲೋಕಗಳನ್ನು ಒಳಗೊಂಡಿವೆ ಮತ್ತು ಪ್ರತೀ ಶ್ಲೋಕ ಸಹ ಇಬ್ರಿಯ ವರ್ಣಮಾಲೆಯ ತರುವಾಯದ ಅಕ್ಷರದೊಂದಿಗೆ ಪ್ರಾರಂಭವಾಗುತ್ತದೆ.

ಇದು ಇಬ್ರಿಯ ಜ್ಞಾನಸಾಹಿತ್ಯದಲ್ಲಿ ಸಾಮಾನ್ಯವಾಗಿರುವ ವಿಷಯವಸ್ತುಗಳನ್ನು ಹೊಂದಿರುವುದನ್ನು ನೋಡಿದರೆ ಇದನ್ನು ಒಂದು ಜ್ಞಾನದ ಕೀರ್ತನೆಯೆಂದು ವಿಂಗಡಿಸಬಹುದು. ದಾವೀದನು ಜೀವ ಮತ್ತು ಮರಣ, ಸರಿ ಮತ್ತು ತಪ್ಪು, ಸನ್ಮಾನ ಮತ್ತು ಶಿಕ್ಷೆಗಳ ಬಗ್ಗೆ ಮಾತನಾಡುತ್ತಾನೆ. ಆತನು ಹೇಳುವ ಅಂಶವೇನೆಂದರೆ ದುಷ್ಟರ ಬಲ, ಅಧಿಕಾರ, ದುರಾಶೆ ಮತ್ತು ಅಭಿವೃದ್ಧಿ ಮತ್ತು ನೀತಿವಂತರ ಬಾಧೆ. ಹಾಗಾಗಿ ಕೀರ್ತನೆಯ ವಿಷಯ ಮತ್ತು ಕೀರ್ತನೆಗಾರನು ಕೆಲವು ಸಂಗತಿಗಳೊಂದಿಗೆ ವ್ಯವಹರಿಸುವ ರೀತಿ ರಡೂ ಸಹ ಇದನ್ನು ಒಂದು ಜ್ಞಾನದ ಕೀರ್ತನೆಯನ್ನಾಗಿ ಮಾಡುತ್ತವೆ.

ಈ ಕೀರ್ತನೆಯು ಭಾಷಾಂತರಕಾರರು ಭಾಷಾಂತರಿಸಲು ಸಮಸ್ಯೆಯನ್ನು ಎದುರಿಸಿದ ಅನೇಕ ಇಬ್ರಿಯ ಪದ ಮತ್ತು ಹೇಳಿಕೆಗಳನ್ನು ಒಳಗೊಂಡಿದೆ. ವಿಭಿನ್ನ ಭಾಷಾಂತರಗಳನ್ನು ಹೋಲಿಸುವಾಗ ನಾವು ಇದನ್ನು ಕಾಣಬಹುದು.

ವಚನ 1: ಈ ವಚನವು ಹೆಚ್ಚೂ ಕಡಿಮೆ ಜ್ಞಾನೋಕ್ತಿ 24:19 ರೊಂದಿಗೆ ಗುರುತಿಸಿಕೊಳ್ಳುತ್ತದೆ. ಮತ್ತು ಇದು ಕೀರ್ತನೆ 37 ಜ್ಞಾನ ಸಂಪ್ರದಾಯಕ್ಕೆ ಸೇರಿದೆಯೆಂದು ತೋರಿಸುತ್ತದೆ.

ನಿನ್ನ ನೀತಿಯನ್ನು (ವಚನ 6): ಇಬ್ರಿಯ ಪದವು **"ನೀತಿ"** ಅಲ್ಲೆದೇ **"ಪ್ರತೀಕಾರ"** ಅಥವಾ **"ನ್ಯಾಯವಾದದ್ದು"** ಎಂದೂ ಅರ್ಥೈಸುತ್ತದೆ. ಈ ವಚನದ ಎರಡನೇ ಭಾಗದಲ್ಲಿನ ಸಮಾನಾರ್ಥಕ ಪದ (**"ನಿನ್ನ ನ್ಯಾಯ"**)ವನ್ನು ಗಮನಿಸಿರಿ.

ನಿರೀಕ್ಷಿಸುವವರೇ (ವಚನ 9): ಈ ಇಬ್ರಿಯ ಹೇಳಿಕೆಯು **"ಕಾಯುವುದು"**, **"ಮುನ್ನೋಡುವುದು"** ಎಂಬುದಾಗಿ ಸಹ ಅರ್ಥೈಸುತ್ತದೆ.

ದೇಶವನ್ನು ಅನುಭವಿಸುವರು (ವಚನ 9, 11, 22, 29, 34,): ಇಬ್ರಿಯ ಮತ್ತು ಗ್ರೀಕಿನಲ್ಲಿ **"ದೇಶ"** ಮತ್ತು **"ಭೂಮಿಗೆ"** ಒಂದೇ ರೀತಿಯ ಪದ ಬಳಸಲಾಗಿದೆ. ಪರ್ವತ ಪ್ರಸಂಗದಲ್ಲಿ ಯೇಸುವಿನ **"ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು"** (ಮತ್ತಾಯ 5:5) ಎಂಬ ಮಾತುಗಳೊಂದಿಗೆ ಹೋಲಿಸಿರಿ. ಮೂಲಪಠ್ಯದಲ್ಲಿ ಈ ಹೇಳಿಕೆಯು ಇಸ್ರಾಯೇಲ್ಯರು ಕಾನಾನನ್ನು ವಶಪಡಿಸುಕೊಳ್ಳುವುದನ್ನು ಸೂಚಿಸುತ್ತದೆ. ಆದರೆ ವಾಗ್ದಾನವು ಎಲ್ಲಾ ದೇವರ ಜನರಿಗೂ ಮತ್ತು ಇಡೀ ಜಗತ್ತಿಗೇ ಸಂಬಂದಿಸುವದೆಂದು ಪರ್ವತ ಪ್ರಸಂಗದಲ್ಲಿನ ಯೇಸುವಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ.

ಸ್ವಲ್ಪಕಾಲ (ವಚನ 10): ಈ ಹೇಳಿಕೆಯು ದುಷ್ಟರು ನಾಶವಾಗುವುದು ನಿಶ್ಚಯವೆಂಬುದಕ್ಕೆ ಒಂದು ಅಲಂಕಾರಿಕ ಹೇಳಿಕೆಯಾಗಿದೆ.

ದೀನರು (ವಚನ 11): ಇವರು ದೇವರ ಒಳ್ಳೆತನ ಮತ್ತು ಕೃಪೆಯ ಮೇಲೆ ದೀನರಾಗಿ ಅವಲಂಬನೆಯಾಗುವ ಜನರು.

ಹಲ್ಲು ಕಡಿಯುತ್ತಾನೆ (ವಚನ 12): ಈ ರೂಪಾಲಂಕಾರಿಕ ಹೇಳಿಕೆಯು ದುರುದ್ದೇಶಗಳನ್ನು ಸೂಚಿಸುತ್ತದೆ. ದುಷ್ಟರು ತಮ್ಮ ದ್ವೇಷ ಮತ್ತು ಕೆಟ್ಟತನವನ್ನು ಹಲ್ಲು ಕಡಿಯುವುದರ ಮೂಲಕ ವ್ಯಕ್ತಪಡಿಸುವರು.

ಅವನಿಗೆ ಶಿಕ್ಷಾಕಾಲ ಬರುತ್ತದೆ (ವಚನ 13): ಇದು ಅವರ ದಂಡನೆ ಮತ್ತು ಸೋಲಿನ ದಿನವನ್ನು ಸೂಚಿಸುತ್ತದೆ. ಕನ್ನಡ ಸತ್ಯವೇದವು ಇದನ್ನು ಭಾಷಾಂತರಿಸುವುದನ್ನು ಆಯ್ಕೆ ಮಾಡದೆ, ವ್ಯಾಖ್ಯಾನವನ್ನು ಆರಿಸಿಕೊಂಡಿದೆ.

ದೀನದರಿದ್ರರು ... ಯಥಾರ್ಥರು (ವಚನ 14): ಇವೆರಡೂ ಹೇಳಿಕೆಗಳು ದೇವಜನರನ್ನು ಸೂಚಿಸುತ್ತವೆ.

ವಚನ 16: ಈ ರೀತಿಯ ಹೋಲಿಕೆಯು ಜ್ಞಾನಸಾಹಿತ್ಯಾದಲ್ಲಿ ಸಾಮಾನ್ಯವಾಗಿದೆ (ಉದಾ: ಜ್ಞಾನೋಕ್ತಿ. 12:9, 15:16, 17, 16:18, 19, 32).

ದುಷ್ಟರ ತೋಳುಗಳು (ವಚನ 17): ಬಲ ಮತ್ತು ಶಕ್ತಿಗೆ ಇದು ಹಳೇ ಒಡಂಬಡಿಕೆಯ ಒಂದು ಸಾಮಾನ್ಯ ರೂಪಾಲಂಕಾರವಾಗಿದೆ.

ಸದ್ಭಕ್ತರ ಜೀವವಮಾನವನ್ನು ಲಕ್ಷಿಸುತ್ತಾನೆ (ವಚನ 18): ಈ ಹೇಳಿಯು ಕಾಯುವುದನ್ನು ಸೂಚಿಸುತ್ತದೆ. ದೇವರು ನೀತಿವಂತರ ಜೀವಿತವನ್ನು ಕಾಯುತ್ತಾನೆ ಮತ್ತು ಅವರಿಗಾಗಿ ಚಿಂತಿಸುತ್ತಾನೆ.

ವಚನ 20: ಈ ವಚನವು ಭಾಷಾಂತರಕಾರರಿಗೆ ಸಮಸ್ಯೆಯನ್ನು ತಂದೊಡ್ಡುತ್ತದೆ (ಉದಾಹರಣೆಗೆ ಕನ್ನಡ ಭಾಷಾಂತರಗಳನ್ನು ಹೋಲಿಸಿರಿ). ಇಬ್ರಿಯ ಪಠ್ಯವು **"ಕುರಿಮರಿ"** ಅಥವಾ **"ಹುಲ್ಲುಗಾವಲು, ಹೊಲ"** ಎಂಬುದಾಗಿ ಅರ್ಥಕೊಡುವ ಒಂದು ಶಬ್ದವನ್ನು ಒಳಗೊಂಡಿದೆ.

ವಚನ 21: ಈ ವಚನದ ಅತ್ಯುತ್ತಮ ಭಾಷಾಂತರವು ಬಹುಶಃ ಈ ರೀತಿಯಿರುತ್ತದೆ: **"ದುಷ್ಟರು ಸಾಲಮಾಡುವರು ಮತ್ತು ತೀರಿಸಲಾಗುವುದಿಲ್ಲ, ಆದರೆ ನೀತಿವಂತರು ಉದಾರವಾಗಿ ಕೊಡುವರು".**

ದ್ರೋಹಿಗಳು ... ಪಾಪಿಗಳು (ವಚನ 38): ಈ ಇಬ್ರಿಯ ಪದವು ದೇವರಿಗೆ ವಿರುದ್ಧವಾಗಿ ದಂಗೆಯೇಳುವವರನ್ನು ಸೂಚಿಸುತ್ತದೆ.

ಪ್ರಶ್ನೆಗಳು

1. ಈ ಕೀರ್ತನೆಯಲ್ಲಿ ದಾವೀದನು ಯಾರನ್ನು ಸಂಭೋದಿಸುತ್ತಾನೆ?
2. ಈ ಕೀರ್ತನೆಯಲ್ಲಿ ದಾವೀದನು ವಿವರಿಸುವ ಎರಡು ಗುಂಪುಗಳ ಜನರು ಯಾರು? ಅವರನ್ನು ವಿವರಿಸಲು ಆತನು ಬಳಸುವ ಕೆಲವು ಹೇಳಿಕೆಗಳನ್ನು ಪಟ್ಟಿ ಮಾಡಿರಿ.
3. ಈ ಎರಡು ಗುಂಪುಗಳು ಪರಸ್ಪರ ಹೇಗೆ ಸಂಬಂಧಿಸಿವೆ?
4. ಈ ಎರಡು ಗುಂಪುಗಳ **"ಅಂತ್ಯ"** ಏನು?

ಕೀರ್ತನೆ 37 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೀರ್ತನೆ 37 ಅನ್ನು **"ಜ್ಞಾನದ ಕೀರ್ತನೆ"** ಎಂದು ಏಕೆ ವಿವರಿಸಬಹುದು ಎಂಬುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
2. ಈ ಕೀರ್ತನೆಯಲ್ಲಿನ ಕೇಂದ್ರ ಸಂಗತಿಯು **"ದೇಶವನ್ನು ಅನುವಂಶಿಕವಾಗಿ ಅನುಭವಿಸುವವರು ಯಾರು?"** ಎಂಬ ಪ್ರಶ್ನೆಗೆ ಸಂಬಂದಿಸಿದೆ (ವ 9, 11, 22, 27 ಮತ್ತು 34 ಅನ್ನು ಹೋಲಿಕೆ ಮಾಡಿ). ಈ ಪ್ರಶ್ನೆಗೆ ಕೀರ್ತನೆಗಾರನು ಯಾವ ಉತ್ತರ ಕೊಡುತ್ತಾನೆ? ಮತ್ತು ಈ ಜನರು ದೇಶವನ್ನು ಏಕೆ ಅನುವಂಶಿಕವಾಗಿ ಅನುಭವಿಸುವವರು?
3. ಈ ಕೀರ್ತನೆಯು ಚಿತ್ರಣಗಳಿಂದ ತುಂಬಿದೆ. ಕೆಲವು ಉದಾಹರಣೆಗಳನ್ನು ಕೊಟ್ಟು ಅವುಗಳ ಅರ್ಥವನ್ನು ವಿವರಿಸಿರಿ.
   ಅ. ಉಪಮೆಗಳು
   ಆ. ರೂಪಾಲಂಕಾರಗಳು
   ಇ. ಮಾನವೀಕರಣ
   ಈ. ವೈಯಕ್ತಿಕ ಅನುಭವದಿಂದಾದ ದುಷ್ಟಾಂತಗಳು (ವಚನ 25–26 ಮತ್ತು 35, 36)
4. ಎರಡು ಗುಂಪುಗಳ ಜನರ ತದ್ವಿರುದ್ಧತೆಯನ್ನು ತೋರಿಸುವ ಈ ಕೀರ್ತನೆಯಲ್ಲಿ ನಾವು ಅನೇಕ ವಿರೋಧಾತ್ಮಕ ಸಮಾನಾಂತರತೆಗಳನ್ನು ಕಂಡುಕೊಳ್ಳುತ್ತೇವೆ ಎಂದು ನಿರೀಕ್ಷಿಸುತ್ತೇವೆ. ಕೆಲವು ಉದಾಹರಣೆಗಳನ್ನು ನೀಡಿ ಮತ್ತು ಅವುಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದನ್ನು ವಿವರಿಸಿ.
5. **"ಜ್ಞಾನಭೋಧನೆ"**ಯ ಒಂದು ಅಂಶವೆಂದರೆ ಅದು **"ಸತ್ಯದ ಹೇಳಿಕೆಗಳು"** ಗಿಂತ **"ನಂಬಿಕೆಯ ದೃಢೀಕರಣಗಳನ್ನು"** ಒಳಗೊಂಡಿದೆ (ಅಭ್ಯಾಸ **ಇಬ್ರಿಯ ಜ್ಞಾನ ಮತ್ತು ಮನುಷ್ಯನ ಅನುಭವ**ವನ್ನು ನೋಡಿರಿ). ಕೀರ್ತನೆ 37 ರಿಂದ ನಮ್ಮ ದೈನಂದಿನ ಅನುಭಕ್ಕೆ ವಿರುದ್ಧವಾದ ಹೇಳಿಕೆಗಳ ಉದಾಹರಣೆಗಳನ್ನು ನೀಡಿ ಮತ್ತು ಅವುಗಳನ್ನು **"ನಂಬಿಕೆಯ ದೃಢೀಕರಣಗಳು"** ಎಂದು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದನ್ನು ವಿವರಿಸಿ.
6. ದಕ್ಷಿಣ ಭಾರತದ ವಿಶ್ವಾಸಿಗಳ ನಡುವೆ ಇದು ಬಹಳ ಪ್ರಿಯವಾದ ಕೀರ್ತನೆ ಆಗಿದೆ. ಇದಕ್ಕೆ ಕಾರಣ ಏನಿರಬಹುದು? ನಮ್ಮ ಉತ್ತರವನ್ನು ಸಾಧ್ಯವಾದಷ್ಟು ನಿರ್ದಿಷ್ಟ ಮತ್ತು ವಿವರವಾಗಿ ಮಾಡಿ.
7. ಈ ಕೀರ್ತನೆಯಲ್ಲಿನ **"ದೈವಶಾಸ್ತ್ರವನ್ನು"** (ದೇವರನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ವಿಧಾನ) ಸಾರಾಂಶಗೊಳಿಸಿರಿ.

8. ಕೀರ್ತನೆ 37 ಮತ್ತು ಈ ಅಧ್ಯಯನ ಜೀವನದಲ್ಲಿ ಸರಿಯಾದ ಆಯ್ಕೆಗಳನ್ನು ಮಾಡುವ ಪ್ರಾಮುಖ್ಯತೆಯ ಬಗ್ಗೆ ಆಳವಾದ ತಿಳುವಳಿಕೆಯನ್ನು ತಲುಪಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

9. ಕೀರ್ತನೆ 37 ಮತ್ತು ಈ ಅಧ್ಯಯವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 37 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ದುಷ್ಟರು ಮತ್ತು ನೀತಿವಂತರ ಕುರಿತಾದ ದಾವೀದನ ವರ್ಣನೆಯಲ್ಲಿ ನಿಮ್ಮ ಜೀವಿತವನ್ನು ನೋಡಿಕೊಳ್ಳಿರಿ.

2. ನಿಮಗೆ ಕಂಡುಬರುವ ಸಂಗತಿಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತಂದಿಡಿರಿ. ನೀತಿಯ ಜೀವಿತವನ್ನು ಜೀವಿಸಲು ಮಾರ್ಗದರ್ಶನ ಮತ್ತು ಬಲಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ.

3. ನೀತಿವಂತರು ದುಷ್ಟರೊಂದಿಗೆ ಹೇಗೆ ವ್ಯವಹರಿಸಬೇಕೆಂದು ದಾವೀದನು ಈ ಕೀರ್ತನೆಯಲ್ಲಿ ವಿಮರ್ಶಿಸುತ್ತಾನೆ. ಆತನ ವಿಮರ್ಶೆಯಿಂದ ಸ್ವತಃ ನಿಮ್ಮ ಜೀವಿತಕ್ಕಾಗಿ ನೀವು ಏನನ್ನು ಕಲಿಯುವಿರಿ? ನೀವು ಗಮನಿಸಿದ ಸಂಗತಿಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತಂದಿಡಿರಿ.

4. ದಕ್ಷಿಣ ಭಾರತದ ವಿಶ್ವಾಸಿಗಳ ನಡುವೆ ಖಂಡಿತವಾಗಿ ಇದೊಂದು ಬಹು ಜನಪ್ರಿಯ ಕೀರ್ತನೆಯಾಗಿದೆ.

   ಅ. ಈ ಜನಪ್ರಿಯತೆಯಿಂದಾಗುವ ಅಪಾಯ ಏನಿರಬಹುದು?

   ಆ. ಈ ರೀತಿಯ ಜ್ಞಾನದ ಬೋಧನೆಯು ಹೇಗೆ ತಪ್ಪಾಗಿ ಅರ್ಥೈಸಲ್ಪಡಬಹುದು ಮತ್ತು ನಮ್ಮ ಸಭೆಗಳಲ್ಲಿ ದುರುಪಯೋಗಕ್ಕೆ ಒಳಗಾಗಬಹುದೋ?

   ಇ. ನೀವು ಎಂದಾದರೂ ಈ ಜ್ಞಾನ ಬೋಧನೆಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದೀರಾ ಮತ್ತು ದುರುಪಯೋಗ ಪಡಿಸಿದ್ದೀರಾ?

   ಈ. ನಿಮ್ಮ ಮುಕ್ತಾಯಗಳನ್ನು ಪಟ್ಟಿಮಾಡಿ ಪ್ರಾರ್ಥನೆಯಲ್ಲಿ ಅವನ್ನು ದೇವರ ಮುಂದೆ ತಂದಿಡಿರಿ.

ಪ್ರಮುಖ ದೈವಶಾಸ್ತ್ರೀಯ ವಿಷಯವಸ್ತುಗಳು

ಪೀಠಿಕೆ

ನಾವು ಈ ಹಿಂದೆ ನೋಡಿದಂತೆ ವ್ಯಕ್ತವಾದ ರೀತಿ ವಿಭಿನ್ನವಾಗಿದ್ದರೂ ಕೀರ್ತನೆಯಲ್ಲಿ ನಾವು ಕಾಣುವ ದೈವಶಾಸ್ತ್ರವು, ಉಳಿದ ಹಳೇ ಒಡಂಬಡಿಕೆಯಲ್ಲಿ ಕಾಣುವ ದೈವಶಾಸ್ತ್ರದಂತೆಯೇ ಇದೆ. ಕೀರ್ತನೆಗಳು ಪುಸ್ತಕದಲ್ಲಿನ ಪ್ರಮುಖ 9 ದೈವಶಾಸ್ತ್ರೀಯ ವಿಷಯ ವಸ್ತುಗಳು ಇಂತಿವೆ:

1. ಉನ್ನತನಾದ ದೇವರು ಕೇಂದ್ರವಾಗಿದ್ದಾನೆ.

ದೇವರು ಎಲ್ಲರ ಮೇಲೆ ಮಹಾರಾಜ. ಎಲ್ಲವೂ ಅವರಿಗೆ ಅಧೀನ.

ಪರಾತ್ಪರನಾದ ಯೆಹೋವನು ಭಯಂಕರನಾಗಿದ್ದಾನೆ;

ಆತನು ಭೂಲೋಕಕ್ಕೆಲ್ಲಾ ಅಧಿರಾಜನಾಗಿದ್ದಾನೆ.

(ಕೀರ್ತನೆ 47:2)

ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ;

ಆತನು ಸಮಸ್ತವನ್ನೂ ಆಳುತ್ತಾನೆ.

(ಕೀರ್ತನೆ 103:19)

ದೇವರು ಎಲ್ಲವುಗಳನ್ನು ಸೃಷ್ಟಿಸಿದ್ದಾನೆ. ಅಲ್ಲದೆ ಆತನು ಅವೆಲ್ಲವನ್ನು ಸಂರಕ್ಷಿಸುತ್ತಾನೆ. ಅವುಗಳನು ಆತನೇ ಧರಿಸಿಕೊಂಡಿದ್ದಾನೆ.

ಯಾವನಿಗೆ ಯಾಕೋಬನ ದೇವರು ಸಹಾಯಕನೋ

ಯಾವನು ತನ್ನ ದೇವರಾದ ಯೆಹೋವನನ್ನು ನಂಬಿರುತ್ತಾನೋ ಅವನೇ ಧನ್ಯನು.

ಭೂಮಿ, ಆಕಾಶ, ಸಾಗರ, ಚರಾಚರ ಇವುಗಳನ್ನು ನಿರ್ಮಿಸಿದವನೂ,

ವಾಗ್ದಾನವನ್ನು ಯಾವಾಗಲೂ ನೆರವೇರಿಸುವವನೂ

(ಕೀರ್ತನೆ 146:5–6)

ಯೆಹೋವನು ಆಕಾಶದಿಂದ ಮನುಷ್ಯರೆಲ್ಲರನ್ನು ನೋಡುತ್ತಾನೆ;

ತಾನಿರುವ ಸ್ಥಾನದಿಂದ ಭೂನಿವಾಸಿಗಳೆಲ್ಲರನ್ನು ದೃಷ್ಟಿಸುತ್ತಾನೆ

(ಕೀರ್ತನೆ 33:13–14)

ನನ್ನ ಮನವೇ ಯೆಹೋವನನ್ನು ಕೊಂಡಾಡು.

ಯೆಹೋವನೇ, ನನ್ನ ದೇವರೇ, ನೀನು ಸರ್ವೋತ್ಕೃಷ್ಟನು;

ಪ್ರಭಾವಮಹತ್ವಗಳಿಂದ ಭೂಷಿತನಾಗಿದ್ದೀ

(ಕೀರ್ತನೆ 104:1)

ಎಲ್ಲವುಗಳೂ ಸಹ ಆತನ ಕೈಯಿಂದ ನಡೆಸಲ್ಪಡುತ್ತವೆ ಮತ್ತು ಆತನ ದೈವಿಕ ಉದ್ದೇಶವನ್ನು ನಡೆಸುತ್ತವೆ.

ಹಗಲಿರುಳುಗಳಿಗೆ ನಿಯಾಮಕನು ನೀನು;

ಸೂರ್ಯಾದಿ ಜ್ಯೋತಿರ್ಮಂಡಲಗಳ ನಿರ್ಮಾಣಿಕನು ನೀನು.

ಭೂಮಿಯ ಎಲ್ಲಾ ಮೇರೆಗಳನ್ನು ಸ್ಥಾಪಿಸಿದವನು ನೀನು;

ಶೀತೋಷ್ಣಕಾಲಗಳನ್ನು ನೇಮಿಸಿದವನು ನೀನು

(ಕೀರ್ತನೆ 74:16–17)

ಆತನು ಆಕಾಶದಲ್ಲಿ ಮೋಡಗಳನ್ನು ಕವಿಸುತ್ತಾನೆ;

ಭೂಮಿಗೋಸ್ಕರ ಮಳೆಯನ್ನು ಸಿದ್ಧಮಾಡುತ್ತಾನೆ;

ಬೆಟ್ಟಗಳಲ್ಲಿ ಹುಲ್ಲನ್ನು ಬೆಳಸುತ್ತಾನೆ.

ಆತನು ಪಶುಗಳಿಗೂ ಕೂಗುತ್ತಿರುವ ಕಾಗೇಮರಿಗಳಿಗೂ

ಬೇಕಾದ ಆಹಾರಕೊಡುತ್ತಾನೆ

(ಕೀರ್ತನೆ 147:8–9)

ದೇವರು ಒಳ್ಳೆಯವನು, ಜ್ಞಾನಿಯು, ನೀತಿವಂತನು, ನಂಬಿಗಸ್ತನು, ಕನಿಕರ ಮತ್ತು ದಯೆಯುಳ್ಳವನು. ಹಾಗಾಗಿ ತನ್ನಲ್ಲಿ ಭರವಸವಿಡಬೇಕೆಂದು ನಮ್ಮನ್ನು ಕರೆಯುತ್ತಾನೆ.

ನಾನಾದರೋ ಯೆಹೋವನೇ, ನಿನ್ನಲ್ಲೇ ಭರವಸವಿಟ್ಟಿದ್ದೇನೆ;

ನೀನೇ ನನ್ನ ದೇವರೆಂದು ಹೇಳಿಕೊಂಡಿದ್ದೇನೆ.

(ಕೀರ್ತನೆ 31:14)

ದೇವರು ಶ್ರೇಷ್ಠ. ಆತನ ಜ್ಞಾನ, ಆಲೋಚನೆಗಳು ಮತ್ತು ಕಾರ್ಯಗಳು ಮಾನವ ಗ್ರಹಿಕೆಗೆ ಮೀರಿವೆ. ಆದ್ದರಿಂದ, ಆತನು ನಮ್ಮನ್ನು ಆತನಿಗೆ ಭಯಪಡುವಂತೆ, ಆದರೆ ಆತನನ್ನು ಪವಿತ್ರನೆಂದು ಒಪ್ಪಿಕೊಳ್ಳುವಂತೆ ಕರೆಯುತ್ತಾನೆ.

ಭೂಲೋಕದವರೆಲ್ಲರೂ ಯೆಹೋವನಿಗೆ ಭಯಪಡಲಿ;

ಭೂನಿವಾಸಿಗಳೆಲ್ಲರೂ ಆತನಿಗೆ ಹೆದರಲಿ.

(ಕೀರ್ತನೆ 33:8)

ನಮ್ಮ ಗುರಾಣಿಯಂತಿರುವ ನಮ್ಮ ಅರಸನು ಯೆಹೋವನೇ;

ಅವನು ಇಸ್ರಾಯೇಲ್ಯರ ಸದಮಲಸ್ವಾಮಿಯ ಸ್ವಕೀಯನು.

(ಕೀರ್ತನೆ 89:18)

2. ದೇವರು ಜನಾಂಗಗಳನ್ನು ಆಳುವವನಾಗಿದ್ದಾನೆ.

ದೇವರು ಸೃಷ್ಟಿ ಮತ್ತು ಇತಿಹಾಸಗಳೆರಡರಲ್ಲೂ ಉನ್ನತನಾಗಿದ್ದಾನೆ. ಆತನು ಎಲ್ಲಾ ಜನಾಂಗಗಳನ್ನು ಆಳುವ ಸಾರ್ವಭೌಮನಾಗಿದ್ದಾನೆ.

ಎಲ್ಲಾ ಜನಾಂಗಗಳು ನಿನ್ನ ಸುತ್ತಲು ಸಭೆಯಾಗಿ ಕೂಡಿರುವಲ್ಲಿ ನೀನು ಪುನಹ ಆರೋಹಣಮಾಡು.

ಯೆಹೋವನು ಎಲ್ಲಾ ಜನಾಂಗಗಳಿಗೂ ನ್ಯಾಯತೀರಿಸುವವನಾಗಿದ್ದಾನೆ.

(ಕೀರ್ತನೆ 7:7–8)

ಎಲ್ಲಾ ಜನರು ತನ್ನನ್ನು ಅರಿಯಬೇಕೆಂದು ದೇವರು ಬಯಸುತ್ತಾನೆ. ಯಾಕೆಂದರೆ ದೇವರು ಉನ್ನತೋನ್ನತನಾದ ರಾಜನಾಗಿದ್ದಾನೆ. ಎಲ್ಲಾ ವಿರೋಧವು ಸರೆಯಾಗಿ, ಆತನ ನೀತಿಯರಾಜ್ಯ ಮತ್ತು ಸಮಾಧಾನವು ಬರುವುದಾಗಿದೆ.

ನಿನ್ನನ್ನು ಅರಿಯದ ಮ್ಲೇಚ್ಛರ ಮೇಲೆಯೂ

ನಿನ್ನ ನಾಮವನ್ನು ಉಚ್ಚರಿಸದ ರಾಜ್ಯಗಳ ಮೇಲೆಯೂ ನಿನ್ನ ರೌದ್ರವನ್ನು

ಸುರಿದುಬಿಡು

(ಕೀರ್ತನೆ 79:6)

ನೀನು ಸಮಸ್ತ ದೇಶಗಳವರನ್ನು ನೀತಿಯಿಂದ ಆಳಿ

ಭೂಪ್ರಜೆಗಳನ್ನೆಲ್ಲಾ ನಡಿಸುವಾತನಾಗಿರುವದರಿಂದ

ಜನಾಂಗಗಳು ಹರ್ಷಿಸಿ ಆನಂದಘೋಷಮಾಡಲಿ

(ಕೀರ್ತನೆ 67:4)

ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವುದು;

ನಿನ್ನ ರಾಜದಂಡವು ನ್ಯಾಯಸ್ಥಾಪಕವಾದದ್ದೇ.

(ಕೀರ್ತನೆ 45:6)

3. ದೇವರು ಅಹಂಕಾರಿಗಳನ್ನು ವಿರೋಧಿಸುತ್ತಾನೆ, ಆದರೆ ದೀನರಲ್ಲಿ ಹರ್ಷಿಸುತ್ತಾನೆ.

ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ಇವರು ತಮ್ಮ ಸ್ವಂತ ಆಸ್ತಿ ಮತ್ತು ಸಂಪತನ್ನು ಆತುಕೊಳ್ಳುವವವರು ಮತ್ತು ತಮ್ಮ ಸ್ಥಾನಮಾನವು ತಮಗೆ ಇತರರನ್ನು ತುಳಿಯಲು ಮತ್ತು ಹಾಳುಮಾಡಲು ಅಧಿಕಾರವನ್ನು ಕೊಡುತ್ತದೆಂದು ಅವರು ಯೋಚಿಸುವರು. ಅವರು ತಮ್ಮ ಸ್ವಂತ ಸ್ವತ್ತಿನಲ್ಲಿ ಭದ್ರತೆಯಿದೆಯೆಂದು ಭಾವಿಸುವರು ಮತ್ತು ತಾವೇ ತಮ್ಮ ಹಣೆಬರಹವನ್ನು ನಿಯಂತ್ರಿಸಬಹುದೆಂದು ಯೋಚಿಸುವರು. ಕೀರ್ತನೆಯಲ್ಲಿ ಈ ರೀತಿಯ ಗರ್ವವು ಎಲ್ಲಾ ಕೆಟ್ಟತನಕ್ಕೆ ಮೂಲವಾಗಿದೆ. ಗರ್ವಿಷ್ಠನು ವೃದ್ಧಿಯಾದಂತೆ ಕಾಣಬಹುದು, ಆದರೆ ನಾಶನವು ಅವರ ಅಂತ್ಯವಾಗಿದೆ.

ಲೋಕದ ನ್ಯಾಯಾಧಿಪತಿಯೇ, ಏಳು;

ಗರ್ವಿಷ್ಠರಿಗೆ ಪ್ರತಿಫಲವನ್ನು ಕೊಡು.

(ಕೀರ್ತನೆ 94:2)

ಆದರೆ ದೇವರು ದೀನರಲ್ಲಿ, ಬಡವರಲ್ಲಿ ಮತ್ತು ಕೊರತೆವಿದ್ದವವರಲ್ಲಿ ಆನಂದಿಸುತ್ತಾನೆ. ಅವರು ತಮ್ಮೆಲ್ಲಾ ವಿಷಯಗಳಲ್ಲಿ ದೇವರನ್ನು ಆತುಕೊಳ್ಳುವವರಾಗಿದ್ದಾರೆ. ಯೆಹೋವನ ಭಯವೇ ಜ್ಞಾನಕ್ಕೆ ಮೂಲವಾಗಿದೆ (ಕೀರ್ತನೆ 111:10). ಖಂಡಿತವಾಗಿ ಇದನ್ನು ಒಪ್ಪಿಕೊಳ್ಳುವವರು ಭೂಮಿಗೆ ಬಾಧ್ಯರಾಗುವರು. ದೇವರ ಮುಖವನ್ನು ನೋಡುವುದರಿಂದ ಮರಣ ಸಹ ಅವರನ್ನು ತಡೆಯಲು ಸಾಧ್ಯವಿಲ್ಲ.

ಯೆಹೋವನೇ, ಕುಗ್ಗಿದವನನ್ನು ಬಲಾತ್ಕಾರಿಯಿಂದಲೂ

ದಿಕ್ಕಿಲ್ಲದ ಬಡವನನ್ನು ಸೂರೆಮಾಡುವವನಿಂದಲೂ ತಪ್ಪಿಸಿ ರಕ್ಷಿಸುವಾತನೇ

(ಕೀರ್ತನೆ 35:10)

ಯೆಹೋವನು ದೀನರಿಗೆ ಆಧಾರವಾಗಿದ್ದಾನೆ;

ದುಷ್ಟರನ್ನು ನೆಲಕ್ಕೆ ಹತ್ತಿಸಿಬಿಡುತ್ತಾನೆ.

(ಕೀರ್ತನೆ 147:6)

ಯೆಹೋವನು ತನ್ನ ಪ್ರಜೆಗೆ ಪ್ರಸನ್ನನಾದನು;

ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ.

(ಕೀರ್ತನೆ 149:4)

ಇನ್ನು ಸ್ವಲ್ಪಕಾಲದೊಳಗೆ ದುಷ್ಟನು ಕಾಣಿಸದೆ ಹೋಗುವನು;

ಅವನಿದ್ದ ಸ್ಥಳದಲ್ಲಿ ಎಷ್ಟು ವಿಚಾರಿಸಿದರೂ ಅವನು ಸಿಕ್ಕುವದೇ ಇಲ್ಲ.

ಆದರೆ ದೀನರು ದೇಶವನ್ನು ಅನುಭವಿಸುವರು;

ಅವರು ಮಹಾಸೌಖ್ಯದಿಂದ ಆನಂದಿಸುವರು.

(ಕೀರ್ತನೆ 37:10–11)

4. ಭವಿಷ್ಯಕ್ಕಾಗಿ ಒಂದು ನಿರೀಕ್ಷೆಯಿದೆ.

ದೇವರ ರಾಜ್ಯದ ಮತ್ತು ಆತನ ನೀತಿವಂತ ಜನರ ಭವಿಷ್ಯಕ್ಕಾಗಿ ಕೀರ್ತನೆಗಾರನು ಒಂದು ದೃಢವಾದ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾನೆ. ಆದರೆ ಈ ನಿರೀಕ್ಷೆಯು ಸಾಮಾನ್ಯ ವಿಧಾನಗಳಲ್ಲಿ ವ್ಯಕ್ತವಾಗಿದೆ. ಕೀರ್ತನೆಯಲ್ಲಿ ಎಲ್ಲಿಯೂ ಸಹ ನಾವು ಭವಿಷ್ಯದ ಎರಡು ಹಂತದ ದರ್ಶನವನ್ನು ಕಾಣಲಾಗುವುದಿಲ್ಲ. ಪ್ರಸ್ತುತ ದುಷ್ಟಯುಗದ ಮರಣದ ಅಂತ್ಯ ಮತ್ತು ನೀತಿ ಮತ್ತು ಸಮಾಧಾನದ ಒಂದು ಹೊಸ ಯುಗದ ಫಕ್ಕನೆ ಬರುವಿಕೆ. ಈ ರೀತಿಯ ಭವಿಷ್ಯತ್ತಿನ ತಿಳುವಳಕೆಯು ದಾನಿಯೇಲ ಮತ್ತು ಯೆಶಾಯದಿಂದ ಪೂರ್ವಭಾವಿಯಾಗಿ ಕಂಡುಬಂದಿದೆ. ಆದರೆ ಇದನ್ನು ಶತಮಾನಗಳ ನಂತರ, ಅಂದರೆ **ಅಂತರ್ ಒಡಂಬಡಿಕೆಯ ಕಾಲದಲ್ಲಿ** ಒಂದು ರೂಪಕ್ಕೆ ತರಲಾಯಿತು. ಮತ್ತು ಯೇಸು ಕ್ರಿಸ್ತನ ಮತ್ತು ಅಪೊಸ್ತಲರ ಬೋಧನೆಯೊಂದಿಗೆ ಇದು ಸಂಪೂರ್ಣವಾಗಿ ವ್ಯಕ್ತಗೊಂಡಿದೆ. ಹಾಗಾಗಿ ಕೀರ್ತನೆಗಾರನ ನಿರೀಕ್ಷೆಯು ಕ್ರಮೇಣವಾಗಿ ಹೊಸ ಒಡಂಬಡಿಕೆಯ ವಾಕ್ಯಭಾಗಗಳ ಪೂರ್ಣ ಪ್ರಕಟಣೆಗಳಿಗೆ ಬೆಳವಣಿಗೆಯಾಗುವುದನ್ನು ನಾವು ಕಾಣಬಹುದು.

ನನ್ನ ಆಯುಷ್ಯವನ್ನು ಕಡಿಮೆಮಾಡಿ ಬಿಟ್ಟಿದ್ದಾನೆ.

ಆದುದರಿಂದ – ನನ್ನ ದೇವರೇ, ಅರ್ಧಾಯುಷ್ಯದಲ್ಲಿಯೇ ನನ್ನನ್ನು ಒಯ್ಯಬೇಡ;

ನಿನ್ನ ವರುಷಗಳು ತಲತಲಾಂತರಕ್ಕೂ ಇರುತ್ತವೆ.

ಆದಿಯಲ್ಲಿ ನೀನು ಭೂಮಿಗೆ ಅಸ್ತಿವಾರವನ್ನು ಹಾಕಿದಿ;

ಗಗನಮಂಡಲವು ನಿನ್ನ ಕೈಕೆಲಸವಾಗಿದೆ.

ಅವು ನಾಶವಾಗುವವು; ಆದರೆ ನೀನು ಶಾಶ್ವತವಾಗಿರುತ್ತೀ.

ಅವೆಲ್ಲವೂ ವಸ್ತ್ರದಂತೆ ಹಳೇಯವಾಗುವವು.

ಉಡುಪಿನಂತೆ ಅವುಗಳನ್ನು ಬದಲಿಸುತ್ತೀ; ಅವು ಮಾರ್ಪಡುವವು.

ನೀನಾದರೋ ಏಕರೀತಿಯಾಗಿದ್ದೀ;

ನಿನ್ನ ವರುಷಗಳು ಮುಗಿದುಹೋಗುವದಿಲ್ಲ.

ನಿನ್ನ ಸೇವಕರ ಮಕ್ಕಳು ಬಾಳುವರು.

ಅವರ ಸಂತತಿಯವರು ನಿನ್ನ ಸನ್ನಿಧಿಯಲ್ಲಿ ಸ್ಥಿರವಾಗಿರುವರು

ಎಂದು ಮೊರೆಯಿಡುತ್ತೇನೆ.

(ಕೀರ್ತನೆ 102:24–28)

5. ದೇವರು ನ್ಯಾಯವನ್ನು ಸಾಧಿಸುವವನಾಗಿದ್ದಾನೆ.

ದೇವರು ಉನ್ನತೋನ್ನತನಾಗಿರುವ ನಿಮಿತ್ತ ಮನುಷ್ಯರ ನಡುವೆ ಆತನೊಬ್ಬ ಅತ್ಯುತ್ತಮ ನ್ಯಾಯಸಾಧಕನಾಗಿದ್ದಾನೆ. ದೀನರು ಮತ್ತು ಜ್ಞಾನಿಗಳು ನ್ಯಾಯ ಮತ್ತು ನ್ಯಾಯತೀರ್ಪನ್ನು ದೇವರಿಗೆ ಬಿಡುವರು. ಅವರ ಮನವಿಗೆ ಆತನೇ ನ್ಯಾಯಸ್ಥಾನವಾಗಿದ್ದಾನೆ. ಆದರೆ ಅಹಂಕಾರಿಗಳು ಅಥವಾ ಗರ್ವಿಷ್ಠರು ತಮಗೆ ತಾವೇ ಪ್ರತೀಕಾರವನ್ನು ಆಶಿಸುವರು.

ಯೆಹೋವನು ದೀನರ ವ್ಯಾಜ್ಯವನ್ನು ನಡೆಸುವನೆಂತಲೂ

ಬಡವರ ನ್ಯಾಯವನ್ನು ಸ್ಥಾಪಿಸುವನೆಂತಲೂ ಬಲ್ಲೆನು.

(ಕೀರ್ತನೆ 140:12)

ಯೆಹೋವನೇ, ಮುಯ್ಯಿತೀರಿಸುವ ದೇವರೇ,

ಮುಯ್ಯಿತೀರಿಸುವ ದೇವರೇ, ಪ್ರಕಾಶಿಸು.

ಲೋಕದ ನ್ಯಾಯಾಧಿಪತಿಯೇ, ಏಳು;

ಗರ್ವಿಷ್ಠರಿಗೆ ಪ್ರತಿಫಲವನ್ನು ಕೊಡು.

(ಕೀರ್ತನೆ 94:1–2)

ದೇವರು ದಿಕ್ಕಿಲ್ಲದವರಿಗೆ ಮತ್ತು ದೀನರಿಗೆ ಬಲಿಷ್ಠ ರಕ್ಷಕನಾಗಿದ್ದಾನೆ. ಪ್ರತಿಯೊಂದು ಹೃದಯದ ರಹಸ್ಯಗಳನ್ನು ಆತನು ಬಲ್ಲವನಾಗಿದ್ದಾನೆ. ಆತನು ದೀನರಿಗೆ ಮತ್ತು ದಿಕ್ಕಿಲ್ಲದವರಿಗೆ ಉಂಟಾದ ಅನ್ಯಾಯಕ್ಕೆ ವಿರುದ್ಧವಾಗಿ ನ್ಯಾಯ ಒದಗಿಸುವ ಒಬ್ಬ ಒಳ್ಳೆಯ ಮತ್ತು ನಂಬಿಗಸ್ತ ನ್ಯಾಯಾಧಿಪತಿಯಾಗಿದ್ದಾನೆ.

ಯೆಹೋವನೇ, ನೀನು ದೀನರ ಕೋರಿಕೆಯನ್ನು ನೆರವೇರಿಸುವವನೇ ಆಗಿದ್ದೀ;

ಅವರ ಹೃದಯವನ್ನು ಧೈರ್ಯಪಡಿಸುತ್ತೀ; ಅವರ ಮೊರೆಗೆ ಕಿವಿಗೋಡುತ್ತೀ.

ನೀನು ದಿಕ್ಕಿಲ್ಲದವರ ಮತ್ತು ಕುಗ್ಗಿದವರ ನ್ಯಾಯವನ್ನು ವಿಚಾರಿಸುತ್ತೀ.

ಹೀಗಿರುವಲ್ಲಿ ಇನ್ನು ಮುಂದೆ ಮಣ್ಣಿನಿಂದಾದ ಮನುಷ್ಯರಿಂದ ಅವರಿಗೆ ಹೆದರಿಕೆ ಉಂಟಾಗುವುದಿಲ್ಲ

(ಕೀರ್ತನೆ 10:17–18)

ಯೆಹೋವನೇ, ನ್ಯಾಯವಾದದ್ದನ್ನು ಆಲೈಸು; ನನ್ನ ಮೊರೆಗೆ ಲಕ್ಷ್ಯವಿಡು.

ನನ್ನ ಪ್ರಾರ್ಥನೆಗೆ ಕಿವಿಗೊಡು, ಅದು ಕಪಟವಾದ ಬಾಯಿಂದ ಬಂದದ್ದಲ್ಲ.

ನಿನ್ನಿಂದ ನನಗೆ ನ್ಯಾಯವಾದ ತೀರ್ಪು ಉಂಟಾಗಲಿ;

ನೀನು ನೀತಿಗನುಸಾರವಾಗಿ ನೋಡುವವನಲ್ಲವೇ.

(ಕೀರ್ತನೆ 17:1–2)

ದೇವರೇ, ನ್ಯಾಯವನ್ನು ನಿರ್ಣಯಿಸು;

ನನಗೋಸ್ಕರ ವ್ಯಾಜ್ಯವನ್ನು ನಡಿಸಿ ನಿರ್ದಯವಾದ ಜನಾಂಗದಿಂದ ತಪ್ಪಿಸು,

ದುರಾಚಾರಿಗಳಾದ ಮೋಸಗಾರರಿಂದ ನನ್ನನ್ನು ಬಿಡಿಸು.

(ಕೀರ್ತನೆ 43:1)

6. ಇಸ್ರಾಯೇಲು ದೇವರ ಸೇವಕ ಜನಾಂಗವಾಗಿದೆ.

ಲೋಕದಲ್ಲಿ ಎಲ್ಲರಿಗಿಂತ ಉಳಿದ ಜನಾಂಗಗಳ ನಡುವೆ ಇಸ್ರಾಯೇಲ್ಯರನ್ನು ತನ್ನ ಸೇವಕರನ್ನಾಗಿ (ಕೀರ್ತನೆ 136:22), ತನ್ನ ಸ್ವಾಸ್ತ್ಯವನ್ನಾಗಿ ದೇವರು ಆರಿಸಿಕೊಂಡನು.

ಯೆಹೋವನು ತನ್ನ ಜನರಿಗೆ ಬಲವೂ

ತಾನು ಅಭಿಷೇಕಿಸಿದವನಿಗೆ ಆಶ್ರಯದುರ್ಗವೂ ಆಗಿದ್ದಾನೆ.

ಯೆಹೋವನೇ, ನಿನ್ನ ಜನರನ್ನು ರಕ್ಷಿಸು; ನಿನ್ನ ಸ್ವಕೀಯ ಪ್ರಜೆಯನ್ನು ಆಶೀರ್ವದಿಸು.

ಅವರನ್ನು ಯಾಗಲೂ ಪರಿಪಾಲಿಸುತ್ತಾ ಆಧಾರವಾಗಿರು.

(ಕೀರ್ತನೆ 28:8–9)

ಇದಲ್ಲದೆ ಆತನು ತನ್ನ ಸೇವಕನಾದ ದಾವೀದನನ್ನು ಆರಿಸಿ

ಕುರಿಹಟ್ಟಿಯಿಂದ ತೆಗೆದುಕೊಂಡು

ಮರೀಕುರಿಗಳನ್ನು ರಕ್ಷಿಸುವ ಕೆಲಸದಿಂದ ಬಿಡಿಸಿ

ಅವನನ್ನು ತನ್ನ ಪ್ರಜೆಗಳಾದ ಯಾಕೋಬ್ಯರನ್ನು ಅಂದರೆ ತನ್ನ ಸ್ವಾಸ್ತ್ಯವಾಗಿರುವ

ಇಸ್ರಾಯೇಲ್ಯರನ್ನು ಸಾಕುವದಕ್ಕೆ ನೇಮಿಸಿದನು.

(ಕೀರ್ತನೆ 78:70–71)

ದೇವರು ತನ್ನ ಮಹಾಕಾರ್ಯಗಳ ಮೂಲಕ ಇಸ್ರಾಯೇಲ್ಯರನ್ನು ಲೋಕದ ಬಲಿಷ್ಠರ ಕೈಗಳಿಂದ ಬಿಡಿಸಿ, ಅವರಿಗೆ ಸ್ವಂತ ದೇಶವನ್ನು ಕೊಟ್ಟನು. ಬೇರೆ ದೇಶಗಳವರಿಂದ ದೇಶವನ್ನು ತೆಗೆದುಕೊಂಡು ಅದನ್ನು ಅವರಿಗೆ ಸ್ವಂತ ಸ್ವಾಸ್ತ್ಯವನ್ನಾಗಿ ಕೊಟ್ಟನು. ಅನಂತರ ಅವರನ್ನು ಆತನು ತನ್ನ ವಿಮೋಚಿಸಲ್ಪಟ್ಟ ರಾಜ್ಯವನ್ನಾಗಿ ಒಗ್ಗೂಡಿಸಿದನು.

ಆತನು ದೊಡ್ಡ ಜನಾಂಗಗಳನ್ನು ಹೊಡೆದುಬಿಟ್ಟನು;

ಬಲಿಷ್ಠರಾಜರನ್ನು ಕೊಂದುಹಾಕಿದನು.

ಅವರಲ್ಲಿ ಅಮೋರಿಯರ ಅರಸನಾದ ಸೀಹೋನನೂ

ಬಾಷಾನಿನ ಅರಸನಾದ ಓಗನೂ ಇದ್ದರು.

ಕಾನಾನ್‌ದೇಶದ ಎಲ್ಲಾ ರಾಜ್ಯಗಳನ್ನು ನಿರ್ಮೂಲ ಮಾಡಿದನು.

ಅವರ ದೇಶವನ್ನು ಇಸ್ರಾಯೇಲ್ಯರಿಗೆ ಕೊಟ್ಟನು;

ಆತನ ಪ್ರಜೆಗೆ ಅದು ಸ್ವಾಸ್ತ್ಯವಾಯಿತು

(ಕೀರ್ತನೆ 135:10–12)

ಯೆಹೋವನು ತನ್ನ ಜನರಿಗೆ ವಿಮೋಚನೆಯನ್ನುಂಟುಮಾಡಿದ್ದಾನೆ;

ತನ್ನ ಒಡಂಬಡಿಕೆಯನ್ನು ನಿತ್ಯಕ್ಕೂ ಸ್ಥಾಪಿಸಿದ್ದಾನೆ;

ಆತನ ನಾಮವು ಪರಿಶುದ್ಧವೂ ಭಯಂಕರವೂ ಆಗಿದೆ.

(ಕೀರ್ತನೆ 111:9)

ಹಾಗಾಗಿ ಇಸ್ರಾಯೇಲ್ಯರ ಹಣೆಬರಹವು ದೇವರೊಂದಿಗಿನ ಅವರ ಒಡಂಬಡಿಕೆಯ ಸಂಬಂಧದೊಂದಿಗೆ ಸಂಬಂಧವಿಟ್ಟುಕೊಂಡಿದೆ. ಇಸ್ರಾಯೇಲ್ಯರು ಜನಾಂಗಗಳ ಮಧ್ಯೆ ಜೀವಿಸುವಾಗ ತಮ್ಮ ಪರಲೋಕದ ಅರಸನಿಗೆ ಮಾತ್ರ ನಿಷ್ಠೆರಾಗಿದ್ದರು.

ಅವರು ಆತನ ಸಂರಕ್ಷಣೆಯಲ್ಲಿ ಭರವಸವಿಡಬೇಕಿತ್ತು, ಆತನ ವಾಗ್ದಾನಗಳಲ್ಲಿ ನಿರೀಕ್ಷೆಯಿಡಬೇಕಿತ್ತು, ಆತನ ಚಿತ್ತಕ್ಕನುಸಾರವಾಗಿ ಜೀವಿಸಬೇಕಿತ್ತು ಮತ್ತು ಆತನನ್ನು ಮಾತ್ರ ಆರಾಧಿಸಬೇಕಿತ್ತು. ಅವರು ಇಡೀ ಲೋಕಕ್ಕೆ ದೇವರ ಸ್ತುತಿ ಸ್ತೋತ್ರಗಳನ್ನು ಹಾಡಬೇಕು.

ಯೆಹೋವನಿಗೆ ಹಾಡಿರಿ; ಆತನ ನಾಮವನ್ನು ಕೊಂಡಾಡಿರಿ.

ಆತನ ರಕ್ಷಣೆಯನ್ನು ಪ್ರತಿನಿತ್ಯವೂ ಸಾರಿಹೇಳಿರಿ.

ಜನಾಂಗಗಳಲ್ಲಿ ಆತನ ಘನತೆಯನ್ನೂ

ಎಲ್ಲಾ ಜನರಲ್ಲಿ ಆತನ ಅದ್ಭುತಕೃತ್ಯಗಳನ್ನೂ ಪ್ರಸಿದ್ಧಪಡಿಸಿರಿ.

(ಕೀರ್ತನೆ 96:2–3)

ಯೆಹೋವನು ರಾಜ್ಯಧಿಕಾರವನ್ನು ವಹಿಸಿದ್ದಾನೆ;

ಭೂಮಿಯು ಸ್ಥಿರವಾಗಿರುವದು, ಕದಲುವದಿಲ್ಲ;

ಸರ್ವರಿಗೂ ನ್ಯಾಯಾನುಸಾರವಾಗಿ ತೀರ್ಪುಕೊಡುವನೆಂದು ಜನಾಂಗಗಳಲ್ಲಿ

ಪ್ರಸಿದ್ಧಪಡಿಸಿರಿ.

(ಕೀರ್ತನೆ 96:10)

7. ದಾವೀದನು ದೇವರ ಅಭಿಷಿಕ್ತ ಅರಸನಾಗಿದ್ದಾನೆ.

ಮಹಾರಾಜನಾದ, ಇಸ್ರಾಯೇಲಿನ ಒಡಂಬಡಿಕೆಯ ಕರ್ತನಾದ ದೇವರು ಭೂಮಿ ಮೇಲೆ ತನ್ನ ರಾಜ ಪ್ರತಿನಿಧಿಯಾಗಿರಬೇಕೆಂದು ದಾವೀದನನ್ನು ಆರಿಸಿಕೊಂಡನು. ಈ ಹುದ್ದೆಯಲ್ಲಿ ದಾವೀದನು ದೇವರ ಸೇವಕ, ಮಹಾರಾಜನ ರಾಜ್ಯಭಾರದಲ್ಲಿ ಒಬ್ಬ ಸದಸ್ಯನಾಗಿದ್ದನು. ಸ್ವತಃ ದೇವರೇ ಆತನನ್ನು ಅಭಿಷೇಕಿಸಿದನು ಮತ್ತು ತನ್ನ

ನಾಮದಲ್ಲಿ ಆಳುವುದಕ್ಕಾಗಿ ಆತನನ್ನು ತನ್ನ ಮಗನನ್ನಾಗಿ ಸ್ವೀಕರಿಸಿದನು. ಆತನ ಮೂಲಕ ದೇವರು ವಾಗ್ದಾನ ದೇಶದಲ್ಲಿ ತನ್ನ ಜನರು ಸಂರಕ್ಷಿತರಾಗಿರುವಂತೆ ಮಾಡಿದನು ಮತ್ತು ಅವರನ್ನು ಬೆದರಿಸಿದ ಎಲ್ಲಾ ಪ್ರಭುತ್ವ ಶಕ್ತಿಗಳ ಮೇಲೆ ಜಯಶಾಲಿಗಳಾಗುವಂತೆ ಮಾಡಿದನು.

ಆ ಕಾಲದಲ್ಲಿ ನೀನು ದರ್ಶನದಲ್ಲಿ ನಿನ್ನ ಭಕ್ತರಿಗೆ ಹೇಳಿದ್ದೇನಂದರೆ–

ಒಬ್ಬ ಶೂರನಿಗೆ ರಕ್ಷಾಬಲವನ್ನು ಅನುಗ್ರಹಿಸಿದ್ದೇನೆ;

ಪ್ರಜೆಗಳಲ್ಲಿ ಒಬ್ಬ ಯೌವನಸ್ಥನನ್ನು ಆರಿಸಿ ಉನ್ನತಸ್ಥಾನದಲ್ಲಿಟ್ಟಿದ್ದೇನೆ.

ನನ್ನ ಸೇವಕನಾದ ದಾವೀದನನ್ನು ಕಂಡು

ಪರಿಶುದ್ಧತೈಲದಿಂದ ಅವನನ್ನು ಅಭಿಷೇಕಿಸಿದ್ದೇನೆ.

(ಕೀರ್ತನೆ 89:19–20)

ಆತನು ನನಗೆ – ನನಗೆ ನೀನು ಮಗನು;

ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ.

(ಕೀರ್ತನೆ 2:7)

ದಾವೀದನ ಸಾಮ್ರಾಜ್ಯವನ್ನು ಸಂರಕ್ಷಿಸಲು ದೇವರು ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾನೆ. ಇದು ದಾವೀದ ಮನೆತನವನ್ನು ಆತುಕೊಳ್ಳದಿದ್ದರೂ ಸಹ ದಾವೀದನ ಆಳ್ವಿಕೆಯ ಆರಂಭದಲ್ಲಿ ಭೂಮಿಯ ಮೇಲೆ ದೇವರ ರಾಜ್ಯವು ದೇವರ ತೀರ್ಮಾನ ಮತ್ತು ಸಂಕಲ್ಪದಿಂದ ಈ ಸಾಮ್ರಾಜ್ಯದೊಂದಿಗೆ ಸಂಬಂಧ ಹೊಂದಿತ್ತು. ವೈರಿ ಜಗತ್ತನ್ನು ಎದುರಿಸುವಾಗ ಇಸ್ರಾಯೇಲಿನ ಭದ್ರತೆ ಮತ್ತು ನಿರೀಕ್ಷೆಯು ದಾವೀದನ ಮನೆತನದ ಬಲ ಮತ್ತು ಮುಂದುವರಿಕೆಯಲ್ಲಿ ನೆಲೆಗೊಂಡಿದೆ. ದಾವೀದನ ಮನೆತನದ ಅರಸರುಗಳು ಲೋಕದಲ್ಲಿ ದೇವರ ಪ್ರತಿನಿಧಿಗಳಾಗಿರಬೇಕಾಗಿತ್ತು ಮತ್ತು ಸಾಂಕೇತಿಕವಾಗಿ ದೇವರ ಬಲಗಡೆಯಲ್ಲಿ ಕೂತಿರಬೇಕಾಗಿತ್ತು. ಹಾಗಾಗಿ ಅವರ ಆಳ್ವಿಕೆಯ ವ್ಯಾಪ್ತಿಯು ವಿಶ್ವವ್ಯಾಪಿಯಾಗಿತ್ತು.

ಆತನು ತಾನು ನೇಮಿಸಿದ ಅರಸನಿಗೋಸ್ಕರ ವಿಶೇಷ ರಕ್ಷಣೆಯನ್ನು

ದಯಪಾಲಿಸುವವನಾಗಿದ್ದಾನೆ;

ತಾನು ಅಭಿಷೇಕಿಸಿದ ದಾವೀದನಿಗೂ ಅವನ ಸಂತತಿಯವರಿಗೂ

ಸದಾಕಾಲ ಕೃಪೆಯನ್ನು ಅನುಗ್ರಹಿಸುವವನಾಗಿದ್ದಾನೆ

(ಕೀರ್ತನೆ 18:50)

ನಾನು ಆರಿಸಿಕೊಂಡ ಸೇವಕನಾದ ದಾವೀದನ ಸಂಗಡ

ಒಡಂಬಡಿಕೆಮಾಡಿಕೊಂಡು ಆಣೆಯಿಟ್ಟು–

ಶಾಶ್ವತವಾಗಿ ನಿನ್ನ ಸಂತತಿಯನ್ನು ಸ್ಥಾಪಿಸುವೆನು,

ತಲತಲಾಂತರಗಳಿಗೂ ನಿನ್ನ ಸಿಂಹಾಸನವನ್ನು ಸ್ಥಿರಪಡಿಸುವೆನು ಎಂದು

ಹೇಳಿದ್ದೇನೆ ಎಂಬದೇ. ಸೇಲಾ.

(ಕೀರ್ತನೆ 89:3–4)

ಯೆಹೋವನು ನನ್ನ ಒಡೆಯನಿಗೆ –

ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ

ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು.

(ಕೀರ್ತನೆ 110:1)

ಅನಂತರ ಆತನು ಸಿಟ್ಟಾಗಿ –

ನಾನು ನೇಮಿಸಿದ ಅರಸನನ್ನು

ನನ್ನ ಪರಿಶುದ್ಧಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ

ಕೋಪಾವೇಶದಿಂದ ಅವರನ್ನು ಕಳವಳಗೊಳಿಸುವನು.

ನಾನು ಯೆಹೋವನ ಆಜ್ಞೆಯನ್ನು ತಿಳಿಸುತ್ತೇನೆ, ಕೇಳಿರಿ; ಆತನು ನನಗೆ –

ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ.

ನೀನು ಕೇಳಿಕೊಂಡರೆ ನಾನು ಅನ್ಯಜನಾಂಗಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು;

ಭೂಮಿಯ ಕಟ್ಟಕಡೆಯ ವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ

ಸ್ವಾಸ್ಥ್ಯವಾಗಿ ಕೊಡುವೆನು.

(ಕೀರ್ತನೆ 2:5–8)

ಆದರೆ ದೇವರ ಅಭಿಷಿಕ್ತನು ಯುದ್ಧವೀರ ಅರಸನಿಗಿಂತ ಹೆಚ್ಚಿನವನಾಗಿದ್ದನು. ಜನರನ್ನು ನೀತಿಯಿಂದ ಆಳಲು ದೇವರು ಆತನನ್ನು ತರಬೇತಿಗೊಳಿಸುತ್ತಿದ್ದನು. ಆತನು ಹಿಂಸೆಗೊಳಗಾದವರನ್ನು ಬಿಡಿಸಬೇಕಿತ್ತು. ದಿಕ್ಕಿಲ್ಲದವರಿಗೆ ನ್ಯಾಯಕೊಡಬೇಕಿತ್ತು ಮತ್ತು ದುಷ್ಟರನ್ನು ಶಿಕ್ಷಿಸಬೇಕಿತ್ತು ಮತ್ತು ಆಗ ದೇಶವು ಶಾಂತಿ ಸಮೃದ್ಧಿಯಿಂದ ಆಶೀರ್ವದಿಸಲ್ಪಡುತಿತ್ತು. ಅಲ್ಲದೇ ದೇಶದ ಪರವಾಗಿ ರಾಜನು ದೇವರೊಂದಿಗೆ ಮಧ್ಯಸ್ಥಿಕೆ ವಹಿಸುತ್ತಿದ್ದನು. ಆತನು ಭೂಲೋಕದಲ್ಲಿನ ದೇವರ ಅರಮನೆ ಮತ್ತು ಜನಾಂಗಗಳ ಪ್ರಾರ್ಥನಾಲಯವಾದ ದೇವಾಲಯವನ್ನು ಕಟ್ಟಿ ನಿರ್ಧರಿಸಬಹುದಿತ್ತು. ದೇವರನ್ನು ಆರಾಧಿಸಲು ಜನಾಂಗಗಳನ್ನು ಕರೆಯಬಹುದಿತ್ತು. ಈ ಕಡೆಯ ಕಾರ್ಯಗಳು ಯಾಜಕನದಾಗಿರುತ್ತವೆ. ಹಾಗಾಗಿ ರಾಜನು **"ರಾಜ"** ಮತ್ತು **"ಯಾಜಕ"** ಎರಡೂ ಆಗಿರುತ್ತಾನೆ.

ನೀನು ನೀತಿಯನ್ನು ಸಾಧಿಸಿದ ಶುಭಸಮಾಚಾರವನ್ನು ಧಾರಾಳವಾಗಿ ಮಹಾಸಭೆಯಲ್ಲಿ

ಪ್ರಕಟಿಸಿದೆನು;

ಯೆಹೋವನೇ, ನೀನೇ ಬಲ್ಲೆ.

ನಿನ್ನ ನೀತಿಸಾಧನೆಯನ್ನು ಮರೆಮಾಜಲಿಲ್ಲ;

ನಿನ್ನ ನಂಬಿಕೆಯನ್ನೂ ರಕ್ಷಣೆಯನ್ನೂ ಪ್ರಸಿದ್ಧಪಡಿಸಿದೆನು;

ನಿನ್ನ ಕೃಪಾಸತ್ಯತೆಗಳನ್ನು ಮಹಾಸಮುದಾಯದಲ್ಲಿ ತಿಳಿಸದೆ ಇರಲಿಲ್ಲ.

(ಕೀರ್ತನೆ 40:9–10)

ಯೆಹೋವನ ಮಾರ್ಗಗಳೆಲ್ಲಾ ನೀತಿಯುಳ್ಳವುಗಳು;

ಆತನು ಎಲ್ಲಾ ಕಾರ್ಯಗಳಲ್ಲಿ ಕೃಪೆತೋರಿಸುವವನು.

ಯೆಹೋವನಿಗೆ ಮೊರೆಯಿಡುವವರು

ಯಥಾರ್ಥವಾಗಿ ಮೊರೆಯಿಡುವುದಾದರೆ ಆತನು ಹತ್ತಿರವಾಗಿಯೇ ಇದ್ದಾನೆ.

ತನ್ನಲ್ಲಿ ಭಯಭಕ್ತಿಯುಳ್ಳವರ ಇಷ್ಟವನ್ನು ನೆರವೇರಿಸುತ್ತಾನೆ;

ಅವರ ಕೂಗನ್ನು ಕೇಳಿ ರಕ್ಷಿಸುತ್ತಾನೆ.

(ಕೀರ್ತನೆ 145:17–19, ದಾವೀದನ ಕೀರ್ತನೆ)

ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು ಎಂದು

ಯೆಹೋವನು ಆಣೆಯಿಟ್ಟು ನುಡಿದಿದ್ದಾನೆ; ಪಶ್ಚಾತ್ತಾಪಪಡುವುದಿಲ್ಲ.

(ಕೀರ್ತನೆ 110:4, ದಾವೀದನ ಕೀರ್ತನೆ).

8. ಯೆರೂಸಲೇಮು ದೇವರ ಪರಿಶುದ್ಧ ಪಟ್ಟಣವಾಗಿದೆ.

ಅತ್ಯುನ್ನತ ಅರಸನು, ಇಸ್ರಾಯೇಲ್ಯರ ಒಡಂಬಡಿಕೆಯ ಕರ್ತನೂ ಅದ ದೇವರು ದಾವೀದ ಮತ್ತು ಆತನ ರಾಜ್ಯವನ್ನು ತನ್ನ ರಾಜ ಪ್ರತಿನಿಧಿಗಳಾಗಿರಬೇಕೆಂದು ಆಯ್ದುಕೊಂಡನು. ಅಲ್ಲದೇ ದೇವರು ತನ್ನ ರಾಜನಗರಿ ಮತ್ತು ಭೂಮಿ ಮೇಲೆ ತನ್ನ ಸಿಂಹಸನವಾಗಬೇಕೆಂದು ದಾವೀದ ನಗರಿಯಾದ ಯೆರೂಸಲೇಮನ್ನು ಸಹ ಆರಿಸಿಕೊಂಡನು. ಅಲ್ಲದೆ ಯೆರೂಸಲೇಮು (ಚೀಯೋನ್) ಲೋಕದಲ್ಲಿ ರಾಜಧಾನಿ ಮತ್ತು ದೇವರ ರಾಜ್ಯದ ಸಂಕೇತವಾಯಿತು. ಆತನು ಲೋಕದ ಅರಮನೆ, ದೇವಾಲಯದಲ್ಲಿ ದೇವಜನರ ಮಧ್ಯದಲ್ಲಿ ಕೂತು ಸಿಂಹಾಸನಾಸೀನನಾದನು. ಅಲ್ಲಿ ಆತನ ಜನರು ಆತನಿಗೆ ಪ್ರಾರ್ಥನೆ ಮತ್ತು ಸ್ತುತಿಗಳನ್ನು ಸಲ್ಲಿಸಿದರು. ಅಲ್ಲಿ ಆ ಜನರು ಆತನ ಬಲ ಮತ್ತು ಮಹಿಮೆಯನ್ನು ಕಂಡರು. ಯೆರೂಸಲೇಮಿನಿಂದ ದೇವರು ರಕ್ಷಣೆ ಮತ್ತು ಆಶೀರ್ವಾದವನ್ನು ತಂದನು. ಅಲ್ಲಿಂದಲೇ ಆತನು ಎಲ್ಲಾ ಜನಾಂಗಗಳಿಗೆ ನ್ಯಾಯತೀರಿಸಿದನು.

ನಾನು ನೇಮಿಸಿದ ಅರಸನನ್ನು
ಚೀಯೋನೆಂಬ ನನ್ನ ಪರಿಶುದ್ಧಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ

(ಕೀರ್ತನೆ 2:5)

ದೇವರು ಯೆಹೂದದೇಶದಲ್ಲಿ ಖ್ಯಾತಿಗೊಂಡವನು;
ಇಸ್ರಾಯೇಲ್ಯರಲ್ಲಿ ಆತನ ನಾಮವು ದೊಡ್ಡದು.
ಸಾಲೇಮಿನಲ್ಲಿ ಆತನ ಬೀಡಾರವಿದೆ;
ಚೀಯೋನಿನಲ್ಲಿ ಆತನು ನಿವಾಸಿಸುತ್ತಾನೆ.

(ಕೀರ್ತನೆ 76:1–2)

ಅತ್ಯಂತ ರಮಣೀಯವಾದ ಚೀಯೋನಿನಲ್ಲಿರುವ ದೇವರು ಪ್ರಕಾಶಿಸುತ್ತಾನೆ.

(ಕೀರ್ತನೆ 50:2)

ಚೀಯೋನಿನಲ್ಲಿರುವ ಯೆಹೋವನು ನಿನ್ನನ್ನು ಆಶೀರ್ವದಿಸಲಿ;
ಜೀವಮಾನವೆಲ್ಲಾ ಯೆರೂಸಲೇಮಿನ ಸೌಭಾಗ್ಯವನ್ನು ನೋಡುವವನಾಗು.
ಮಕ್ಕಳ ಮಕ್ಕಳನ್ನು ಕಾಣುವವನಾಗು.
ಇಸ್ರಾಯೇಲ್ಯರಿಗೆ ಶುಭವಾಗಲಿ

(ಕೀರ್ತನೆ 128:5–6).

ಅವರು ಚೀಯೋನಿನಲ್ಲಿ ಯೆಹೋವನಾಮವನ್ನು ವರ್ಣಿಸುವಂತೆಯೂ
ಯೆರೂಸಲೇಮಿನಲ್ಲಿ ತನ್ನ ಕೀರ್ತನೆಯನ್ನು ಹಾಡುವಂತೆಯೂ ಮಾಡಿದ್ದಾನೆ.
ಜನಂಗಗಳೂ ರಾಜ್ಯಗಳೂ ಕೂಡಿಬಂದು ಇವರೊಡನೆ ಯೆಹೋವನನ್ನು ಸೇವಿಸುತ್ತವೆ
ಎಂದು ಹೇಳುವದು.

(ಕೀರ್ತನೆ 102:21–22)

9. ದೇವರು ಕನಿಕರವುಳ್ಳವನು ಮತ್ತು ದಯಾಮಯನೂ ಆಗಿದ್ದಾನೆ.

ದೇವರಲ್ಲಿರುವ ಒಂದು ಬಹುಪ್ರಾಮುಖ್ಯ ಸಂಗತಿಯೇನೆಂದರೆ ತಮ್ಮ ಪಾಪಗಳಿಗಾಗಿ ತಮ್ಮನ್ನು ತಗ್ಗಿಸಿಕೊಂಡು ಅರಿಕೆಮಾಡುವವರನ್ನು ಕ್ಷಮಿಸಲು ದೇವರು ಸದಾಸಿದ್ಧನಾಗಿರುತ್ತಾನೆ. ಅವರ ನಂಬಿಗಸ್ತ ಹೃದಯವೇ ಅವರ ಪಶ್ಚಾತ್ತಾಪವು ಸಮರ್ಪಕವಾದುದೆಂಬುದನ್ನು ತೋರಿಸುತ್ತದೆ. ನೀತಿವಂತನು ಭೂಮಿಗೆ ಬಾಧ್ಯನಾಗುವನು.

ಕೆಟ್ಟದ್ದಕ್ಕೆ ಹೋಗದೆ ಒಳ್ಳೆದನ್ನೇ ಮಾಡು;

ಆಗ ನೀನು ಯಾವಗಲೂ [ದೇಶದಲ್ಲಿ] ವಾಸವಾಗಿರುವಿ.

ಯೆಹೋವನು ನ್ಯಾಯವನ್ನು ಮೆಚ್ಚುವವನು; ತನ್ನ ಭಕ್ತರನ್ನು ಎಂದಿಗೂ

ಕೈಬಿಡುವವನಲ್ಲ.

ಅವರು ಸದಾಕಾಲವೂ ಸುರಕ್ಷಿತರಾಗಿರುವರು.

ದುಷ್ಟರ ಸಂತತಿ ತೆಗೆದುಹಾಕಲ್ಪಡುವದು.

ನೀತಿವಂತರೋ ದೇಶವನ್ನು ಅನುಭವಿಸುವವರಾಗಿ

ಅದರಲ್ಲಿ ಶಾಶ್ವತವಾಗಿ ವಾಸಿಸುವರು

(ಕೀರ್ತನೆ 37:27–29)

ಕೀರ್ತನೆಗಾರನು ಅವರ ಪಾಪಗಳಿಗಾಗಿ ಸಿಟ್ಟುಗೊಳ್ಳುವಾಗ, ಅವರು ತಮ್ಮ ಒಡಂಬಡಿಕೆಯ ಕರ್ತನ ಪ್ರಾಚೀನ/ ಹಿಂದಿನ ಸಾಕ್ಷಿಯನ್ನು ಜ್ಞಾಪಿಸಿಕೊಂಡರು: "ಯೆಹೋವ, ಯೆಹೋವ ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು; ಸಾವಿರಾರು ತಲೆಗಳ ವರೆಗೂ ದಯೆತೋರಿಸುವವನು; ದೋಷಾಪರಾಧಗಳನ್ನು ಕ್ಷಮಿಸುವವನು" (ವಿಮೋಚನಕಾಂಡ 34:6–7). ದೇವರು ಕನಿಕರವುಳ್ಳವನು ಮತ್ತು ದಯೆತೋರಿಸುವನೆಂತಲೂ ಅವರು ಅರಿತವರಾಗಿರುವುದರಿಂದಲೇ ಆತನಿಗೆ ತಮ್ಮನ್ನು ಒಪ್ಪಿಸಿಕೊಡಲು ಅವರು ಧೈರ್ಯತಂದುಕೊಂಡರು.

ಕರ್ತನೇ, ಯಾಹುವೇ, ನೀನು ಪಾಪಗಳನ್ನು ಎಣಿಸುವದಾದರೆ

ನಿನ್ನ ಮುಂದೆ ಯಾರು ನಿಂತಾರು?

ನೀನು ಪಾಪವನ್ನು ಕ್ಷಮಿಸುವವನಾದ್ದರಿಂದ

ಮನುಷ್ಯರ ಭಯಭಕ್ತಿಗೆ ನೀನೇ ಪಾತ್ರನು.

(ಕೀರ್ತನೆ 130:3–4)

ಇಸ್ರಾಯೇಲೇ, ಯೆಹೋವನನ್ನು ಮುಂಗಾದಿರು;

ಯೆಹೋವನು ಕೃಪಾಸಂಪನ್ನನು;

ಪೂರ್ಣವಿಮೋಚನೆಯು ಆತನಿಂದಲೇ ದೊರಕುವದು.

ಆತನೇ ಇಸ್ರಾಯೇಲನ್ನು ಅದರ ಸಕಲಪಾಪಗಳಿಂದ ವಿಮೋಚಿಸುವನು

(ಕೀರ್ತನೆ 130:7–8)

ಪ್ರಶ್ನೆಗಳು

ಈ ಪ್ರಶ್ನೆಗಳ ಉತ್ತರಗಳನ್ನು ನೀವು ಮೇಲ್ಕಂಡ ವಾಕ್ಯಭಾಗಗಳಲ್ಲಿ ಕಾಣುವಿರಿ. ಆದರೆ ಮೇಲೆ ನೋಡದೆ ನೀವೇ ಉತ್ತರಿಸಲು ಪ್ರಯತ್ನಿಸಿದರೆ ಹೆಚ್ಚಾಗಿ ಕಲಿಯುವಿರಿ.

1. ಸೃಷ್ಟಿಯ ಮತ್ತು ಇತಿಹಾಸದ ಮಹೋನ್ನತ ಅರಸನಾದ ದೇವರಿಗೆ ಮನುಷ್ಯರಾದ ನಮ್ಮ ಪ್ರತಿಕ್ರಿಯೆ ಏನು?
2. ಜನಾಂಗಗಳೊಂದಿಗೆ ದೇವರ ಸಂಬಂಧ ಏನು?
3. ಅಹಂಕಾರಿಗಳ ಜಾಗತಿಕ ನೋಟವನ್ನು ವಿವರಿಸಿರಿ.
4. ಬಡವರು ಮತ್ತು ದಿಕ್ಕಿಲ್ಲದವರು ಅಂದರೆ ಯಾರು?
5. "ಕೀರ್ತನೆಯಲ್ಲಿ ಎಲ್ಲೂ ನಾವು ಭವಿಷ್ಯದ ಎರಡು ಹಂತದ ದರ್ಶನವನ್ನು ಕಾಣಲಾಗುವುದಿಲ್ಲ" ಎಂಬ ಹೇಳಿಕೆಯನ್ನು ವಿವರಿಸಿರಿ.

6. “ದೇವರು ಒಬ್ಬ ನ್ಯಾಯಾಧಿಪತಿ” ಎಂಬುವದನ್ನು ವರ್ಣಿಸಿರಿ.

7. ದೇವರ ಸೇವಕನಾದ ಇಸ್ರಾಯೇಲನ ಪಾತ್ರವೇನು?

8. ದಾವೀದನು ಯಾವ ರೀತಿಯಲ್ಲಿ “ದೇವರ ಅಭಿಷಿಕ್ತ ಅರಸನಾಗಿದ್ದಾನೆ”?

9. ದೇವರ ಅಭಿಷಿಕ್ತ ಅರಸನು, ಯುದ್ಧವೀರ ಅರಸನಿಗಿಂತಲೂ ಹೇಗೆ ಹೆಚ್ಚಿನವನೆಂದು ವಿವರಿಸಿರಿ.

10. ಯಾವ ರೀತಿಯಲ್ಲಿ ದಾವೀದನ ನಗರಿಯಾದ ಯೆರೂಸಲೇಮ್ ದೇವರ ಸ್ವಂತ ಪಟ್ಟಣವಾಗಿದೆ?

ಅಸೈನ್‌ಮೆಂಟ್

ಕೀರ್ತನೆ 47 ಅನ್ನು ಓದಿರಿ. ಯಾವ ರೀತಿಯಲ್ಲಿ ಈ ಕೀರ್ತನೆಯು “ಅತ್ಯುನ್ನತ ಅರಸನಾದ ದೇವರ ಬಗ್ಗೆ ಮಾತನಾಡುತ್ತದೆ?

ಕೀರ್ತನೆ 38

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆಬರಹವು **"ದಾವೀದನ ಕೀರ್ತನೆ, ಜ್ಞಾಪಕಾರ್ಥವಾದದ್ದು"** ಎನ್ನುತ್ತದೆ. ಜ್ಞಾಪಕಾರ್ಥ ಎಂಬ ಪದವನ್ನು ಒಂದು ಮನವಿ ಅಥವಾ ಯಾಜಕಕಾಂಡ 2:2 ವಾಕ್ಯದೊಂದಿಗೆ **"ಜ್ಞಾಪಕಾರ್ಥ ನೈವೇದ್ಯ"** ಎಂದು ಭಾಷಾಂತರಿಸಲಾಗಿದೆ.

ಕ್ರೈಸ್ತ ಸಭೆಯ ಸಂಪ್ರದಾಯದಲ್ಲಿ ಏಳು ಅನುತಾಪ/ ಸಂತಾಪ ಸೂಚಿಸುವ ಕೀರ್ತನೆಗಳೊಗೆ ಈ ಕೀರ್ತನೆಯನ್ನೂ ಸೇರಿಸಲಾಗಿದೆ. ಮಾಡಿದ ಪಾಪಗಳಿಗಾಗಿ ಪಶ್ಚಾತ್ತಾಪ ವ್ಯಕ್ತಪಡಿಸಲು ಈ ಕೀರ್ತನೆಗಳನ್ನು ಉಪಯೋಗಿಸುತ್ತಿದ್ದರು.ಕೀರ್ತನೆ 38ರಲ್ಲಿ, ತಾನು ಮಾಡಿದ ಪಾಪದ ನಿಮಿತ್ತ ದೇವರು ತನ್ನನ್ನು ವಿಪರೀತವಾಗಿ ಬಾಧಿಸುತಿದ್ದಾನೆಂದು ಭಾವಿಸಿ ಅವುಗಳಿಂದ ತನ್ನನ್ನು ಬಿಡಿಸಬೇಕೆಂದು ದಾವೀದನು ದೇವರಲ್ಲಿ ವಿನಂತಿಸಿಕೊಳ್ಳುತ್ತಾನೆ. ವೈಯಕ್ತಿಕ ಪಾಪದಿಂದ ರೋಗಗಳು ಬರುತ್ತವೆಂದು ಸತ್ಯವೇದವು ಹೇಳುವುದಿಲ್ಲ. ಆದರೆ ಕೆಲವೂಮ್ಮೆ ಒಬ್ಬ ವ್ಯಕ್ತಿಯ ಪಾಪವು ಅನಾರೋಗ್ಯದಲ್ಲಿ ಕೊನೆಗೊಳ್ಳಬಹುದೆಂಬುದನ್ನು ಈ ಕೀರ್ತನೆಯು ತೋರಿಸುತ್ತದೆ. ಹೆಚ್ಚಿನ ಸತ್ಯವೇದ ವಿಶ್ಲೇಷಕರು ಈ ಕೀರ್ತನೆಯನ್ನು ಒಂದು ವ್ಯಕ್ತಿಗತ/ ವೈಯಕ್ತಿಕ ಪ್ರಲಾಪವನ್ನಾಗಿ ವರ್ಗೀಕರಿಸಿದ್ದಾರೆ.

ದಾವೀದನ ಬಾಧೆಗಳು ವಿವಿಧ ವರ್ಣನೆಯ ಹೊರತಾಗಿ ದಾವೀದನ ಬಾಧೆಯ ಸಂದರ್ಭ ಅಥವಾ ಸ್ವಭಾವವನ್ನು ಗುರುತಿಸುವುದು ಅಷ್ಟು ಸುಲಭವಲ್ಲ. ಆತನ ಸುತ್ತಲಿರುವ ಜನರು ಆತನನ್ನು ನೋಡಿಕೊಳ್ಳುತ್ತಿರುವ ರೀತಿಯಿಂದ ಆತನ ದುಃಖವು ಇನ್ನೂ ಅಧಿಕವಾಯಿತು. ಆತನ ಸ್ನೇಹಿತರು ಆತನನ್ನು ದೂರವಿರಿಸಿದರು ಮತ್ತು ಆತನ ವೈರಿಗಳು ಇನ್ನು ಹೆಚ್ಚಾಗಿ ಆತನನ್ನು ಹಿಂಸಿಸತೊಡಗಿದರು.

ಬಾಣಗಳು (ವಚನ 2): ಇದು ದೇವರು ದಾವೀದನನ್ನು ಶಿಕ್ಷಿಸುವದಕ್ಕಾಗಿ ಇರುವ ಒಂದು ರೂಪಾಲಂಕಾರವಾಗಿದೆ.

ನಿನ್ನ ಶಕ್ಷಾಹಸ್ತ (ವಚನ 2): ಇದು ಒಂದು ಮಾನವೀಕರಣವಾಗಿದೆ. ದೇವರು ದಾವೀದನನ್ನು ಶಿಕ್ಷಿಸಿದ್ದಾನೆ.

ಎಲುಬುಗಳು (ವಚನ 3): ಇದು, ಥಿಟಿಜಥಿಜಠಥಿಜ ಎಂದು ಕರೆಯಲ್ಪಡುವ ಶಬ್ದಾಲಂಕಾರಕ್ಕೆ ಒಂದು ಉದಾಹರಣೆಯಾಗಿದೆ. ದಾವೀದನ ಎಲುಬುಗಳು ಆತನ ಇಡೀ ದೇಹವನ್ನು ಪ್ರತಿನಿಧಿಸುತ್ತದೆ.

ಕಣ್ಣುಗಳು ಮೊಬ್ಬಾಗಿಹೋದವು (ವಚನ 10): ಇದು ಶಾರೀರಿಕ ಬಲಹೀನತೆ ಮತ್ತು ದಣಿವನ್ನು ಸೂಚಿಸುವ ಹೇಳಿಕೆಯಾಗಿದೆ.

ನನ್ನ ಆಪ್ತಸ್ನೇಹಿತರು ಓರೆಯಾಗಿ ಹೋಗುತ್ತಾರೆ (ವಚನ 11): ದೇವರು ಒಬ್ಬನನ್ನು ಕೈಬಿಟ್ಟಾಗ ಆತನ ಸ್ನೇಹಿತರು ಆತನನ್ನು ದೂರಮಾಡುವುದು ಪ್ರಾಚೀನ ಕಾಲದಲ್ಲಿ ಒಂದು ಸಾಮಾನ್ಯ ಸಂಗತಿಯಾಗಿತ್ತು.

ಪ್ರಶ್ನೆಗಳು

1. ದಾವೀದನು ಕೀರ್ತನೆ 38 ರಲ್ಲಿ ಯಾರನ್ನು ಸಂಬೋಧಿಸುತ್ತಾನೆ?
2. ಕೀರ್ತನೆ 38 ಅನ್ನು ನೀವು ಹೇಗೆ ರಚಿಸುತ್ತೀರಿ?
3. ದಾವೀದನು ತನ್ನ ಅನಾರೋಗ್ಯಕ್ಕೆ ಯಾವ ಕಾರಣವನ್ನು ಕೊಡುತ್ತಾನೆ?
4. ದಾವೀದನು ತನ್ನ ಪಾಪದ ಬಗ್ಗೆ ಏನು ಮಾಡುತ್ತಾನೆ?
5. ದಾವೀದನ ಬಾಧೆಗಳ ಪಟ್ಟಿ ಮಾಡಿ, ಆದರೆ ನಿಮ್ಮ ಅಂಶಗಳನ್ನು ಕೆಲವು ಮುಖ್ಯ ವಿಷಯಗಳಿಗೆ ಸೀಮಿತಗೊಳಿಸಿ.
6. ದೇವರಿಗೆ ದಾವೀದನ ಮನವಿಗಳ ಪಟ್ಟಿ ಮಾಡಿ, ಆದರೆ ನಿಮ್ಮ ಅಂಶಗಳನ್ನು ಮಿತಿಗೊಳಿಸಿ.

ಕೀರ್ತನೆ 38 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ದಾವೀದನ ಅನಾರೋಗ್ಯದ ಸಮಯದಲ್ಲಿ ಆತನ ಸುತ್ತಲಿನ ಜನರು ಹೇಗೆ ಪ್ರತಿಕ್ರಿಯಿಸಿದರು (ವಚನ 11–12)? ನೀವು ಅವರ ನಡವಳಿಕೆಯನ್ನು ಹೇಗೆ ಮೌಲ್ಯಮಾಪನ ಮಾಡುತ್ತೀರಿ? ಇಂದು ದಕ್ಷಿಣ ಭಾತದಲ್ಲಿ ಈ ರೀತಿಯ ನಡವಳಿಕೆಯನ್ನು ನೀವು ಕಾಣುತ್ತೀರಾ?
2. ದಾವೀದನು ತನ್ನ ಶತ್ರುಗಳ ಮೋಸದ ಪಿತೂರಿಗಳಿಗೆ ಹೇಗೆ ಪ್ರತಿಕ್ರಿಯಿಸಿದನು (ವ 13–16)?
3. ಈ ಕಿರ್ತನೆಯಲ್ಲಿ ದಾವೀದನು ದೇವರನ್ನು ಹೇಗೆ ಸಂಬೋಧಿಸುತ್ತಾನೆ? ನಿಮ್ಮ ಟಿಪ್ಪಣಿಗಳೇನು?
4. ಈ ಕೀರ್ತನೆಯಲ್ಲಿ ಕಂಡುಬರುವ ವಿವಿಧ ರೀತಿಯ ಕಾವ್ಯಾತ್ಮಕ ರಚನೆಯ ಕೆಲವು ಉದಾಹರಣೆಗಳನ್ನು ನೀಡಿ.
5. ಈ ಕೀರ್ತನೆಯಲ್ಲಿ ಕಂಡುಬರುವ ಕಾವ್ಯಾತ್ಮಕ ಚಿತ್ರಣ ಮತ್ತು ಇತರ ಕಾವ್ಯಾತ್ಮಕ ಸಾಧನಗಳ ಕುರಿತು ಉದಾಹರಣೆಗಳನ್ನು ಕೊಡಿರಿ.
6. **"**ಅನಾರೋಗ್ಯ ಮತ್ತು ಬಾಧೆಯ ಸಿದ್ಧಾಂತ**"**ದ ವಿಷಯಕ್ಕೆ ಬಂದಾಗ ವಿಶ್ವಾಸಿಗಳು ಕೆಲವೊಮ್ಮೆ ಗೊಂದಲಕ್ಕೆ ಒಳಗಾಗುತ್ತಾರೆ. ಈ ಕೀರ್ತನೆಯಲ್ಲಿ ದಾವೀದನು ಯಾವ "ಸಿದ್ಧಾಂತ**"**ವನ್ನು ಪ್ರಸ್ತುತಪಡಿಸುತ್ತಾನೆ? ನಾವು ಈ **"**ಸಿದ್ಧಾಂತ**"**ವನ್ನು ಏಕೆ ಸಮತೋಲನಗೊಳಿಸಬೇಕು? ನಿಮ್ಮ ಸ್ವಂತ **"**ಬಾಧೆಯ ಸಿದ್ಧಾಂತ**"**ವನ್ನು ಸಂಕ್ಷೇಪಿಸಿ.
7. ಕೀರ್ತನೆ 38 ಮತ್ತು ಅಧ್ಯಯನವು ಮಾನವನ ಭಾದೆಯ ಆಳವಾದ ತಿಳುವಳಿಕೆಯನ್ನು ಅರಿತುಕೊಳ್ಳಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
8. ನಿಮ್ಮ ಸಣ್ಣ ಗುಂಪಿಗಾಗಿ ಸತ್ಯವೇದ ಅಧ್ಯಯನ ಬರೆದರೆ ಕೀರ್ತನೆಯ 38 ರ ಬಗ್ಗೆ ನಿಮ್ಮ ಮುಖ್ಯ ಅಂಶಗಳು ಯಾವವು ಆಗಿರಬಹುದು?

ಕೀರ್ತನೆ 38 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನೀವು ಮಾಡಿದ ಪಾಪವು ಪರಿಣಾಮವಾಗಿ ಅನಾರೋಗ್ಯಕ್ಕೆ ತುತ್ತಾದದ್ದನ್ನು ವಿಶ್ಲೇಷಿಸಿರಿ. ಆ ಸಮಯದಲ್ಲಿ ಜನರು ಹೇಗೆ ಪ್ರತಿಕ್ರಯಿಸಿದರು? ನೀವು ಹೇಗೆ ಪ್ರತಿಕ್ರಯಿಸಿದ್ದೀರಿ? ದೇವರೊಂದಿಗಿನ ನಿಮ್ಮ ಸಂಬಂಧದ ಮೇಲೆ ಇದು ಹೇಗೆ ಪ್ರಭಾವಬೀರಿತು? ಗುಂಪಿನಲ್ಲಿ ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
2. ಅನಾರೋಗ್ಯದ ಸಮಯದಲ್ಲಿ ಆತನ ಸುತ್ತಲಿನ ಜನರು ವರ್ತಿಸಿದ ರೀತಿಯಿಂದ ದಾವೀದನ ಬಾಧೆಯು ಇನ್ನೂ ಕೆಟ್ಟುಹೋಗಿತ್ತು. ನಿಮ್ಮ ಸಭೆಯಲ್ಲಿನ ಒಂದು ಕುಟುಂಬವು ಅನಾರೋಗ್ಯಕ್ಕೆ ತುತ್ತಾದಾಗ ನೀವು ಮತ್ತು ನಿಮ್ಮ ಸಭೆಯಲ್ಲಿನ ವಿಶ್ವಾಸಿಗಳು ಹೇಗೆ ವರ್ತಿಸುತ್ತೀರೆಂಬುದನ್ನು ವಿಮರ್ಶಿಸಿರಿ. ವಿಶ್ವಾಸಿಗಳ ಬಾಧೆಗೆ ನೀವು ಮತ್ತು ನಿಮ್ಮ ಸಭೆಯು ಹೆಚ್ಚಾಗಿ ಮನಸ್ಸಿ ತೆಗೆದುಕೊಳ್ಳುವಂತೆ ಸಹಾಯ ಮಾಡಬೇಕೆಂದು ದೇವರನ್ನು ಪ್ರಾರ್ಥಿಸಿರಿ.

ಕೀರ್ತನೆ 40

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿನ ತಲೆಬರಹವು ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು, ದಾವೀದನ ಕೀರ್ತನೆ ಎಂದು ಹೇಳುತ್ತದೆ.

ಈ ಕೀರ್ತನೆಯ ಕಡೆಯ ಭಾಗವು (ವಚನ 13–17) ಅಲ್ಲದೇ ಕೆಲವು ಸಣ್ಣಪುಟ್ಟ ವಿಭಿನ್ನತೆಗಳಿಂದ ಇದು ಒಂದು ಪ್ರತ್ಯೇಕ ಕೀರ್ತನೆಯಾಗಿ ಕಂಡುಬರುತ್ತದೆ (ಕೀರ್ತನೆ 70). ಅಲ್ಲಿ ಇಬ್ರಿಯ ಪಠ್ಯವು ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು, ದಾವೀದನ ಕೀರ್ತನೆ, ಒಂದು ವಿಜ್ಞಾಪನೆ ಎಂಬ ತಲೆಬರಹವನ್ನು ಒಳಗೊಂಡಿದೆ.

ಹೆಚ್ಚಿನ ಸತ್ಯವೇದ ವಿಶ್ಲೇಷಕರು ಕೀರ್ತನೆ 70 ಅನ್ನು (ಮತ್ತು ಕೀರ್ತನೆ 40 ರ ಕಡೆಯ ಭಾಗವನ್ನು) ಒಂದು ವ್ಯಕ್ತಿಗತ ಪ್ರಲಾಪವನ್ನಾಗಿ ವರ್ಗೀಕರಿಸುತ್ತಾರೆ. ಹಾಗಾಗಿ ಇದು ಕೀರ್ತನೆ 40 ಅನ್ನು ಎರಡು ಭಾಗಗಳಾಗಿ ವಿಂಗಡಿಸಬಹುದೆಂದು ಸೂಚಿಸುತ್ತದೆ.

ಅ. ಈ ಹಿಂದೆ ತೋರಿದ ಕರುಣೆಗಾಗಿ ದಾವೀದನು ದೇವರನ್ನು ವಂದಿಸುತ್ತಾನೆ, ವಚನ 1–10

ಆ. ಸದ್ಯದ ಸಹಾಯಕ್ಕಾಗಿ ದಾವೀದನು ದೇವರನ್ನು ಕೇಳಿಕೊಳ್ಳುತ್ತಾನೆ, ವಚನ 11–17

ಇಲ್ಲಿ ಒಬ್ಬ ಅರಸನು ಮಾತನಾಡುತ್ತಿರುವದರಿಂದ ಕೆಲವು ವ್ಯಾಖ್ಯಾನಗಾರರು ಈ ಕೀರ್ತನೆಯನ್ನು ಒಂದು ರಾಜ ವೈಭವದ ಕೀರ್ತನೆಯನ್ನಾಗಿ ಕಾಣುತ್ತಾರೆ. ಇಲ್ಲಿ ರಾಜನು ಇಸ್ರಾಯೇಲ್ಯರ ಒಂದು ಮಹಾಸಭೆಯಲ್ಲಿ ಮಾತನಾಡುತ್ತಾನೆ (ವಚನ 9). ಬಹುಶಃ ದೇಶದ ಇತಿಹಾಸದಲ್ಲಿ ಈ ರೀತಿಯಾಗಿ ಮಾಡಿರಬಹುದು. ಅದು ಕೀರ್ತನೆಯ ಎರಡು ಬಗೆಯ ನೋಟವನ್ನು ವಿವರಿಸುತ್ತದೆ. ಪ್ರಾರಂಭದಲ್ಲಿ ಇದು ಹಿಂದೆ ನೋಡುತ್ತದೆ. ಮತ್ತು ಇದು ದೇವರು ತಕ್ಷಣ ಮಧ್ಯಪ್ರವೇಶಿಸಬೇಕೆಂದು ಮುನ್ನೋಡುವುದರಲ್ಲಿ ಕೊನೆಗೊಳ್ಳುತ್ತದೆ. ಇದನ್ನು ಆಧರಿಸಿ ವಿಲ್‌ಕಾಕ್ ರವರು ಈ ಮುಂದಿನ ರಚನೆಯನ್ನು ತಿಳಿಸುತ್ತಾರೆ:

ಹಿಂದೆ ನೋಡುವುದು, ವಚನ 1–3

ಮೇಲೆ ನೋಡುವುದು, ವಚನ 4–5

ಒಳಗೆ ನೋಡುವುದು, ವಚನ 6–8

ಹೊರಗೆ ನೋಡುವುದು, ವಚನ 9–11

ಸುತ್ತಮುತ್ತನೋಡುವುದು, ವಚನ 12–15

ಮುಂದೆ ನೋಡುವುದು, ವಚನ 16–17

ಈ ರೀತಿಯ ರಚನೆಯು **"ಚಿಯಾಸ್ಟಿಕ್"** ಮಾದರಿಯ ರಚನೆ ಎಂದು ಕರೆಯಲ್ಪಡುವ ರಚನೆಯು ಪ್ರಾಚೀನ ಮತ್ತು ಆಧುನಿಕ ಪದ್ಯಸಾಹಿತ್ಯದಲ್ಲಿ ಸಾಮಾನ್ಯವಾಗಿದೆ. ಈ ರೀತಿಯ ಪದ್ಯದಲ್ಲಿ ನೀವು ಎರಡು ಕೇಂದ್ರ ಭಾಗಗಳಲ್ಲಿ ಮುಖ್ಯ ವಚನವನ್ನು ಹುಡುಕುವುದನ್ನು ಅಪೇಕ್ಷಿಸುತ್ತೀರಿ (ವಚನ 6–8 ಮತ್ತು 9–11). ಇಬ್ರಿಯ ಪತ್ರಿಕೆಯ ಗ್ರಂಥಕರ್ತನು ಯೇಸು ಕ್ರಿಸ್ತನಿಗೆ ಸೂಚಿಸಿ (ಇಬ್ರಿಯ. 10:5–10) ವಚನ 6–8 ರ ಸೆಪ್ಟೊಜೆಂಟ್ ಆವೃತಿಯನ್ನು ಬಳಸುವುದು ಕುತೂಹಲಕಾರಿಯಾಗಿದೆ (ಇದು ಇಬ್ರಿಯ ಪಠ್ಯಕ್ಕಿಂತ ವಿಭಿನ್ನವಾಗಿದೆ. ಕನ್ನಡದ **ಸತ್ಯವೇದವು** ಭಾಷಾಂತರವು ಸೆಪ್ಟೊಜೆಂಟನ್ನು ಪಾಲಿಸಿದೆ).

ನೂತನ ಕೀರ್ತನೆ (ವಚನ 3): ಕೀರ್ತನೆ ನೂತನವಾಗಿದೆ. ಯಾಕೆಂದರೆ ಇದು ದೇವರ ರಕ್ಷಿಸುವ ಕಾರ್ಯವನ್ನು ತಿಳಿಸುತ್ತದೆ. ದೇವರು ಇಸ್ರಾಯೇಲ್ಯರನ್ನು ಐಗುಪ್ತದಿಂದ ಬಿಡಿಸಿದಾಗ ಮೋಶೆ ಮತ್ತು ಇಸ್ರಾಯೇಲ್ ಜನರು ಒಂದು "ಬಿಡುಗಡೆ/ ವಿಮೋವನೆಯ ಕೀರ್ತನೆಯನ್ನು ಹಾಡಿದರು (ವಿಮೋ. 15:11–2). ದೇವರ ರಕ್ಷಣೆ ಮತ್ತು ವಿಮೋಚನೆಯ ಸಂಬಂಧದಲ್ಲಿ "ನೂತನ ಕೀರ್ತನೆ" ಎಂಬ ಹೇಳಿಕೆಯು ಕೀರ್ತನೆಗಳಲ್ಲಿ ಅನೇಕಬಾರಿ ಕಂಡುಬಂದಿದೆ (ನೋಡಿರಿ. ಕೀರ್ತನೆ 33:3, 96:1, 98:1, 144:9). ಪ್ರಕಟಣೆ. 14:3 ರೊಂದಿಗೆ ಹೋಲಿಸಿರಿ.

ಅಹಂಕಾರಿಗಳಲ್ಲಿ (ವಚನ 4): ಅಹಂಕಾರಿಗಳು ದೇವರ ಮುಂದೆ ತಗ್ಗಿಸಿಕೊಂಡು ಜೀವಿಸಲು ತಿರಸ್ಕರಿಸುವವರು ಮತ್ತು ದೇವರಿಗೆ ಭಯಪಡದವರಾಗಿದ್ದಾರೆ. ಬದಲಾಗಿ ಅವರು ಸುಳ್ಳು ದೇವರುಗಳಲ್ಲಿ ಭರವಸವಿಡುವವರಾಗಿದ್ದಾರೆ. ಅಹಂಕಾರಿಗಳು **"ದುಷ್ಟರು"** ಅಥವಾ **"ಪಾಪಿಗಳು"** ಎಂದೂ ಸಹ ಹಳೇ ಒಡಂಬಡಿಕೆಯಲ್ಲಿ ಕರೆಯಲ್ಪಟ್ಟಿದ್ದಾರೆ.

ಅದ್ಭುತಕಾರ್ಯಗಳು (ವಚನ 5): ಇದು ದೇವರ ರಕ್ಷಣಾಕಾರ್ಯವನ್ನು ಸೂಚಿಸುತ್ತದೆ.

ಮಾಡಿದ ಆಲೋಚನೆಗಳು (ವಚನ 5): ಇಸ್ರಾಯೇಲ್ಯರ ಪರವಾಗಿ ದೇವರ ಕಾರ್ಯಗಳು, ಆತನ ಉದ್ದೇಶ ಮತ್ತು ಆತನ ಯೋಜನೆಗಳಿಗೆ ಅನುಸಾರವಾಗಿವೆ.

ವಚನ 6–8: ಇಲ್ಲಿ ದೇವರ ಚಿತ್ತಕ್ಕೆ ತಾನು ಬದ್ಧನಾಗಿರುವುದನ್ನು ದಾವೀದನು ವಿವಾದಿಸುತ್ತಾನೆ. ಇಬ್ರಿಯ ಗ್ರಂಥಕರ್ತನು ಈ ವಚನವನ್ನು ಯೇಸು ಕ್ರಿಸ್ತನಿಗೆ ಅಳವಡಿಸುತ್ತಾನೆ.

ನನ್ನ ಕರ್ತವ್ಯವು ಗ್ರಂಥದ ಸುರುಳಿಯಲ್ಲಿ ಬರೆದದೆ (ವಚನ 7): ಈ ಹೇಳಿಕೆಯನ್ನು ಅರ್ಥೈಸಿಕೊಳ್ಳಲು ಇರುವ ಸರಿಯಾದ ವಿಧವೆಂದರೆ – ಸುರುಳಿಯು ದೇವಜನರು ಜೀವಿಸಬೇಕೆಂಬುದನ್ನು ತೋರಿಸುತ್ತದೆ. ಈಗ ಅರಸನಾದ ದಾವೀದನು ಆ ರೀತಿಯ ವ್ಯಕ್ತಿಯಾಗಿರಬೇಕೆಂದು ವಾಗ್ದಾನ ಮಾಡುತ್ತಾನೆ.

ಮಹಾಸಭೆ (ವಚನ 9): ದೇವಜನರು, ದೇವರ ಪರಿಶುದ್ಧ ಆಲಯದಲ್ಲಿ ಆರಾಧಿಸುವ ಗುಂಪು.

ವಚನ 12: ತನ್ನ ಪಾಪವು ತನ್ನ ಪ್ರಸ್ತುತ ಸಮಸ್ಯೆಗಳಿಗೆ ಕಾರಣವಾಗಿದೆಯೆಂದು ದಾವೀದನು ಅರಿತುಕೊಳ್ಳುತ್ತಾನೆ. ಈ ತಿಳುವಳಿಕೆಯ **"ದೈವಶಾಸ್ತ್ರಕ್ಕಾಗಿ"** ಕೀರ್ತನೆ 38 ರ ಅಧ್ಯಾಯವನ್ನು ನೋಡಿ.

ನನ್ನ ಪಾಪಗಳು ನನ್ನನ್ನು ಹಿಂದಟ್ಟಿ ಹಿಡಿದಿರುತ್ತವೆ (ವಚನ 12): ಬಹುಶಃ ದಾವೀದನು ಜನರ ಮೇಲಿನ ತನ್ನ ದೈವಿಕನಾಯಕತ್ವದ ಹಿನ್ನಲೆಯಲ್ಲಿ ತನ್ನ ಪಾಪಗಳ ಬಗ್ಗೆ ಸೂಚಿಸುತ್ತಿರಬಹುದು. ದಾವೀದನು ಜನಾಂಗಗಳ (ಅಲ್ಲದೇ ಸ್ವತಃ ತನ್ನ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡು) ಮೇಲೆ ದಯೆ ತೋರಿಸಬೇಕೆಂದು ದೇವರ ಬಳಿ ಅಂಗಲಾಚುತ್ತಾನೆ. ಪಾಪದ ಪರಿಣಾಮವು ಆತನನ್ನು ಮತ್ತು ದೇವರ ಜನಾಂಗವನ್ನು ಆಳುವ ಆತನ ಸಾಮರ್ಥ್ಯವನ್ನು ಕುಂಟಿಸಿತು.

ನಾನು ಎದೆಗುಂದಿ ಹೋದೆನು (ವಚನ 12): ಇದು ನಿರಾಶೆ ಮತ್ತು ಭಯಕ್ಕಾಗಿನ ಒಂದು ರೂಪಾಲಂಕಾರವಾಗಿದೆ.

ಆಹಾ, ಆಹಾ (ವಚನ 15): ಅಪಹಾಸ್ಯವನ್ನು ವ್ಯಕ್ತಪಡಿಸುವುದು. ದಾವೀದನ ವೈರಿಗಳು ಆತನನ್ನು ನೋಡಿ ನಗುತ್ತಿದ್ದಾರೆ.

ಕುಗ್ಗಿದವನೂ ದಿಕ್ಕಿಲ್ಲದವನೂ (ವಚನ 17): ದಾವೀದನ ಬಳಿಯಲ್ಲಿ ಏನೂ ಇಲ್ಲ, ಹಾಗಾಗಿ ಆತನು ದೇವರ ಸಹಾಯದ ಅಗತ್ಯತೆಯಲ್ಲಿದ್ದಾನೆ. ಹಳೇ ಒಡಂಬಡಿಕೆಯಲ್ಲಿ ದೇವರಿಗೆ ಭಯಪಡುವವರನ್ನು **"ಕುಗ್ಗಿದವರು"** (ಬಡವರು) ಎಂದು ಕರೆಯಲಾಗುತ್ತಿತ್ತು.

ಪ್ರಶ್ನೆಗಳು

1. ಈ ಕೀರ್ತನೆಯ ವಿಷಯಗಳನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಪುನಃ ಹೇಳಿರಿ:

   ಅ. ಹಿಂದೆ ನೋಡುವುದು (ವ 1–3)

   ಆ. ಮೇಲೆ ನೋಡುವುದು (ವ –4–5)

   ಇ. ಒಳಗೆ ನೋಡುವುದು (ವ 6–8)

   ಈ. ಹೊರ ನೋಡುವುದು (ವ 9–11)

   ಉ. ಸುತ್ತಮುತ್ತಲು ನೋಡುವುದು (ವ 12–13)

   ಊ. ಮುಂದೆ ನೋಡುವುದು (ವ 16–17)

2. 2 ನೇ ವಚನದಲ್ಲಿ ದಾವೀದನು ಈ ರೂಪಲಂಕಾರಗಳನ್ನು ಬಳಸಿದಾಗ ಅವನು ಏನನ್ನು ಉಲ್ಲೇಖಿಸುತ್ತಾನೆ ಎಂದು ನೀವು ಭಾವಿಸುತ್ತೀರಿ? ಸಮಾನಾರ್ಥಕ ಸಮಾನಾಂತರತೆಯ ಅವನ ಬಳಕೆಯನ್ನು ಗಮನಿಸಿ.

   ಅ. ನಾಶನದ ಗುಂಡಿ/ಮಣ್ಣು ಮತ್ತು ಕೆಸರು

   ಆ. ಬಂಡೆ/ದೃಢವಾದ ಸ್ಥಳ

3. ದೇವರು ತನ್ನ ಬಾಯಲ್ಲಿ "ನೂತನ ಕೀರ್ತನೆ"ಯನ್ನು ಹುಟ್ಟಿಸಿದ್ದಾನೆ ಎಂದು ದಾವೀದನು ಹೇಳುವುದರ ಅರ್ಥವೇನು ಎಂದು ನೀವು ಭಾವಿಸುತ್ತೀರಿ?

4. ಈ ವಚನದ ಹಿನ್ನೆಯಲ್ಲಿ "ಅಹಂಕಾರಿಗಳ" ಬಗ್ಗೆ ವಚನ 4 ರಲ್ಲಿ ನಾವು ಏನನ್ನು ಅರ್ಥಮಾಡಿಕೊಳ್ಳುತ್ತೇವೆ?

5. ವಚನ 6 ರಲ್ಲಿ "ಯಜ್ಞ ನೈವೇದ್ಯಗಳು ನಿನಗೆ ಇಷ್ಟವಿಲ್ಲ" ಎಂದು ದಾವೀದನು ಹೇಳುತ್ತಾನೆ. ಹಾಗಾದರೆ ಈ ಕೀರ್ತನೆಯಲ್ಲಿ ದಾವೀದನು ಪ್ರಕಾರ ದೇವರು ಏನನ್ನು ಬಯಸುತ್ತಾನೆ?

6. ಈ ಕೀರ್ತನೆಯಲ್ಲಿ ದಾವೀದನು ಇಸ್ರಾಯೇಲ್ಯರಿಗೆ ಏನನ್ನು ಸಾರುತ್ತಾನೆ?

7. ದೇವರನ್ನು ಉನ್ನತಪಡಿಸುವ ಜನರು ಯಾರು?

ಕೀರ್ತನೆ 40 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಅಧ್ಯಯನದ ನನ್ನ ಪರಿಚಯದಲ್ಲಿ, ನಾನು ಕೀರ್ತನೆ 40 ಅನ್ನು ರಚಿಸಬಹುದಾದ ಎರಡು ವಿಧಾನಗಳನ್ನು ಪ್ರಸ್ತಾಪಿಸಿದೆ, ಕೇವಲ ಎರಡು ಭಾಗಗಳನ್ನು ಹೊಂದಿರುವ ಒಂದು ಮತ್ತು ಆರು ಭಾಗಗಳನ್ನು ಹೊಂದಿರುವ ಒಂದು (ಮೇಲಿನ ಪ್ರಶ್ನೆ 1 ಅನ್ನು ಸಹ ನೋಡಿ). ಈ ಎರಡು ರಚನೆಗಳಲ್ಲಿ ಯಾವುದು ಉತ್ತಮ ಎಂದು ನೀವು ಭಾವಿಸುತ್ತೀರಿ? ಏಕೆ? ಅಥವಾ ನೀವು ಕೀರ್ತನೆ 40 ಅನ್ನು ವಿಭಿನ್ನವಾಗಿ ರಚಿಸಲು ಬಯಸುತ್ತೀರಾ? ಹಾಗಿದ್ದಲ್ಲಿ, ಹೇಗೆ?

2. ರಾಜ ದಾವೀದನು ಈ ಕೀರ್ತನೆಯ ಮೂಲಕ ಇಸ್ರಾಯೇಲ್ಯರ ಸಭೆಗೆ ಮಾತನಾಡುವ ಸಂದರ್ಭದಲ್ಲಿ 6–8 ನೇ ವಚನಗಳನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

3. ವಚನ 5 ರಲ್ಲಿನ ದೇವರ ಅದ್ಭುತ ಕಾರ್ಯಗಳು "ಅಸಂಖ್ಯಾತವಾಗಿವೆ" ಎಂದು ದಾವೀದನು ಹೇಳುತ್ತಾನೆ. ಹಾಗೆಯೇ ವಚನ 12 ರಲ್ಲಿ ತಾನು "ಲೆಕ್ಕವಿಲ್ಲದ ಆಪತ್ತುಗಳಿಂದ" ಸುತ್ತಲ್ಪಟ್ಟಿದ್ದಾನೆ ಎಂದು ಸಹ ಹೇಳುತ್ತಾನೆ.

   ಅ. ಎರಡೂ ಹೇಳಿಕೆಗಳು ಅತಿಶಯೋಕ್ತಿಗಳಾಗಿವೆ. ಹೇಗೆ ಎಂಬುದನ್ನು ವಿವರಿಸಿ.

   ಆ. ಈ ಎರಡು ವಚನಗಳನ್ನು ಒಟ್ಟಾಗಿ ಓದುವುದರಿಂದ ನೀವು ಯಾವ ಆಧ್ಯಾತ್ಮಿಕ ತೀರ್ಮಾನವನ್ನು ತೆಗೆದುಕೊಳ್ಳಬಹುದು?

4. ಕನ್ನಡದ **ಪವಿತ್ರ ಗ್ರಂಥ** ಮತ್ತು **ಸತ್ಯವೇದವು** ಭಾಷಾಂತರಗಳಲ್ಲಿ 9–11 ನೇ ವಚನಗಳನ್ನು ಎಚ್ಚರಿಕೆಯಿಂದ ಓದಿ. ದಾವೀದನು ದೇವರಿಗೆ ಏನು ಮಾಡುವುದಾಗಿ ವಾಗ್ದಾನ ಮಾಡುತ್ತಾನೆ? ಮತ್ತು ದಾವೀದನು ದೇವರನ್ನು ಏನು ಮಾಡಬೇಕೆಂದು ಕೇಳುತ್ತಾನೆ?

5. ಈ ಕೀರ್ತನೆಯಲ್ಲಿನ ಸಮಾನಾಂತರತೆಗಳ ಅಧ್ಯಯನ ಮಾಡಿರಿ. ಕನ್ನಡದ ಎರಡು ಭಾಷಾಂತರಗಳನ್ನು ಉಪಯೋಗಿಸಿರಿ ಮತ್ತು ಅವು ಎಷ್ಟು ಚೆನ್ನಾಗಿ ನಿರ್ವಹಿಸುತ್ತವೆ ಎಂಬುದನ್ನು ಹೋಲಿಕೆ ಮಾಡಿ. ಮಾರ್ಗದರ್ಶಿಯಾಗಿ **ಎನ್ಐವಿ** ಅಥವಾ **ಇಎಸ್‌ವಿ** ಎಂಬ ಎರಡು ಇಂಗ್ಲಿಷ್ ಅನುವಾದಗಳಲ್ಲಿ ಒಂದನ್ನು ಬಳಸಿ.

6. ಕೀರ್ತನೆ 40 ಮತ್ತು ಅಧ್ಯಯನವು ದೇವರು ಮತ್ತು ವಿಶ್ವಾಸಿಗಳ ನಡುವಿನ ಸಂಬಂಧದ ಆಳವಾದ ತಿಳುವಳಿಕೆಯನ್ನು ತಲುಪಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಹಂಚಿಕೊಳ್ಳಿರಿ.

7. ಕೀರ್ತನೆ 40 ಮತ್ತು ಅಧ್ಯಯನವು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 40 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಹಿಂದೆ ದೇವರು ತನಗೆ ಏನೆಲ್ಲಾ ಮಾಡಿದ್ದಾನೆಂದು ದಾವೀದನು ತಿರುಗಿ ನೋಡಿದಾಗ ಆತನ ಬಾಯಿಯು ಸ್ತೋತ್ರದಿಂದ ತುಂಬಿಕೊಂಡಿತು (ವಚನ 1–3). ಹಿಂದೆ ನಿನಗಾಗಿ ದೇವರು ಏನೆಲ್ಲಾ ಮಾಡಿದ್ದಾನೆಂಬುದನ್ನು ನೋಡುವಾಗ ಯಾವುದಕ್ಕಾಗಿ ನೀವು ದೇವರನ್ನು ಸ್ತುತಿಸುವಿರಿ ಮತ್ತು ದೇವರಿಗೆ ಕೃತಜ್ಞತೆ ಹೇಳುವಿರಿ? ಪಟ್ಟಿಯನ್ನು ಮಾಡಿರಿ. ಅನಂತರ ಸ್ತೋತ್ರ ಮತ್ತು ಕೃತಜ್ಞತೆಯೊಂದಿಗೆ ಈ ಪಟ್ಟಿಯನ್ನು ದೇವರ ಮುಂದಿಡಿರಿ.

2. ವಚನ 4 ರಲ್ಲಿ ದಾವೀದನು **"ದೇವರಲ್ಲಿ ಭರವಸವಿಡುವವರನ್ನು ಮತ್ತು ಅಹಂಕಾರಿಯನ್ನು"** ತದ್ವಿರುದ್ಧವಾಗಿಡುತ್ತಾನೆ. ಸ್ವತಃ ನಿಮ್ಮ ಜೀವನ ಮತ್ತು ನಡವಳಿಕೆಯನ್ನು ಈ ವಚನದಲ್ಲಿ ನೋಡಿಕೊಳ್ಳಿರಿ. ನೀವು ಯಾವ ರೀತಿಯ ವ್ಯಕ್ತಿಯಾಗಿರುವಿರಿ? ದೇವರನ್ನು ನಿಮ್ಮ ಭರವಸೆಯನ್ನಾಗಿ ಮಾಡಿಕೊಳ್ಳುವಿರಾ? ಅಥಾವಾ ಅಹಂಕಾರಿಗಳಲ್ಲಿ ನಿಮ್ಮನ್ನು ಒಬ್ಬರನ್ನಾಗಿ ಪರಿಗಣಿಸುತ್ತೀರಾ? ನಿಮ್ಮ ಉತ್ತರಗಳಿಗೆ ಕಾರಣ ಕೊಡಿರಿ.

3. ವಚನ 12 ರಲ್ಲಿ ದಾವೀದನಂತೆ ನಿಮ್ಮ ಜೀವನದ ಬಗ್ಗೆ ಹಾಗೆ ನೀವು ಭಾವಿಸುತ್ತಿರುವಿರಾ? ಲೆಕ್ಕವಿಲ್ಲದ ಆಪತ್ತುಗಳು ನಿಮ್ಮನ್ನು ಸುತ್ತಿಕೊಂಡಿವೆಯೋ? ನಿಮಗೆ ದಿಕ್ಕೇ ತೋರದಂತೆ ನಿಮ್ಮ ಪಾಪಗಳು ನಿಮ್ಮನ್ನು ಹಿಂದಟ್ಟಿ ಹಿಡಿಯುತ್ತಿವೆಯಾ? ನೀವು ಎದೆಗುಂದಿ ಹೋಗಿರುವಿರಾ? ನಿಮ್ಮ ಪರಿಸ್ಥಿತಿ ಮತ್ತು ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಒಬ್ಬ ಉತ್ತಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿರಿ ಮತ್ತು ಈ ವಿಷಯಗಳನ್ನು ನೀವು ಪ್ರಾರ್ಥನೆಯಲ್ಲಿ ದೇವರ ಮುಂದೆ ತರಲು ಸಹಕರಿಸುವಂತೆ ಅವರನ್ನು ಕೇಳಿಕೊಳ್ಳಿರಿ.

4. ವಚನ 17 ರಲ್ಲಿನ ದಾವೀದನ ಮಾತಿನಲ್ಲಿ ನಿಮ್ಮ ಆತ್ಮೀಕ ನಡುವಳಿಕೆ/ಸ್ವಭಾವ ಮತ್ತು ಧಾರ್ಮಿಕ ಜೀವನವನ್ನು ನೋಡಿಕೊಳ್ಳಿರಿ, ಏನಾದರೂ ಮನವಿಗಳಿದ್ದರೆ ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

ಕೀರ್ತನೆಗಳು 42–43

ಪೀಠಿಕೆ ಮತ್ತು ಟಿಪ್ಪಣಿಗಳು

ಕೀರ್ತನೆಗಳ ಪುಸ್ತಕದ ಎರಡನೇ ಪುಸ್ತಕವು ಕೀರ್ತನೆ 42 ರಿಂದ ಪ್ರಾರಂಭವಾಗುತ್ತದೆ. ಮೊದಲ ಪುಸ್ತಕದಲ್ಲಿನ ಹೆಚ್ಚಿನ ಕೀರ್ತನೆಗಳೆಲ್ಲಾ ತಮ್ಮ ತಲೆಬರಹಗಳಲ್ಲಿ ದಾವೀದನ ಬಗ್ಗೆ ತಿಳಿಸುತ್ತವೆ. ಎರಡನೇ ಪುಸ್ತಕದಲ್ಲಿ ನಾವು ವಿಭಿನ್ನ ಪ್ರಸ್ತಾಪಗಳನ್ನು ಕಾಣಬಹುದು, ಅವು ಇಂತಿವೆ:

- ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು **"ಕೋರಹೀಯರ ಪದ್ಯ"** (ಕೀರ್ತನೆ 42–49)
- ಆಸಾಫನ ಕೀರ್ತನೆ (ಕೀರ್ತನೆ 50)
- ಕೀರ್ತನೆ ಎರಡು ಸಂಗ್ರಹ **"ದಾವೀದನ ಕೀರ್ತನೆ"** (ಕೀರ್ತನೆ 51–65 ಮತ್ತು 68:70).
- 3 ಅನಾಮಧೇಯ ಕೀರ್ತನೆಗಳು (ಕೀರ್ತನೆ 66–67, 71)
- ಎರಡನೇ ಪುಸ್ತಕದ ಕೊನೆಯ ಕೀರ್ತನೆ **"ಸೊಲೊಮೋನನ ಕೀರ್ತನೆ"** (ಕೀರ್ತನೆ 72)

ಕೀರ್ತನೆ 42 ಮತ್ತು 43 ಪರಸ್ಪರ ಒಂದಕ್ಕೊಂದು ಸಂಬಂಧಿಸಿದವುಗಳಾಗಿದ್ದು ಮೂಲತಃ ಒಂದೇ ಕೀರ್ತನೆಯಾಗಿ ರೂಪಿಸಲ್ಪಟ್ಟಿರಬೇಕು.

ವಿಷಯಾಂಶ ಮತ್ತು ರಚನೆ ಇವೆರಡರಿಂದಲೂ ಇದು ಸ್ಪಷ್ಟವಾಗುತ್ತದೆ. ಅವು ಶ್ಲೋಕ/ ಸಾಲುಗಳು ಪದ್ಯವನ್ನೊಳಗೊಂಡಿವೆ. ಪ್ರತೀ ಮುಕ್ತಾಯವೂ ಸಹ ಒಂದೇ ರೀತಿಯ ಪಲ್ಲವಿಯನ್ನೊಳಗೊಂಡಿದೆ:

ದೇವಾಲಯದಲ್ಲಿ ದೇವರೊಂದಿಗೆ ಇರಲು ಕೀರ್ತನೆಗಾರನು ಹಾತೊರೆಯುತ್ತಾನೆ, 42:1–4

ಪಲ್ಲವಿ, 42:5

ತನ್ನ ಜೀವಿತದಲ್ಲಿ ದೇವರ ಹೊಸ ಪ್ರಸನ್ನತೆಗಾಗಿ ಕೀರ್ತನೆಗಾರನು ಹಾತೊರೆಯುತ್ತಾನೆ, 42:6–10.

ಪಲ್ಲವಿ 42:11

ನ್ಯಾಯ ನಿರ್ಣಯಕ್ಕಾಗಿ ಕೀರ್ತನೆಗಾರನು ದೇವರಲ್ಲಿ ಬೇಡಿಕೊಳ್ಳುತ್ತಾನೆ. 43:1–4

ಪಲ್ಲವಿ, 43:5

ಎರಡೂ ಕೀರ್ತನೆಗಳ ಪ್ರಾರಂಭದಲ್ಲಿ ಮಾತ್ರ ಒಂದು ತಲೆಬರಹವಿದೆ: **"ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು"** ಕೋರಹೀಯರ ಪದ್ಯ ಎಂದಿದೆ. ಕೋರಹೀಯರು/ ಕೋರಹನ ಮಕ್ಕಳು ಲೇವಿಯರಾಗಿದ್ದರು (ಅರಣ್ಯಕಾಂಡ 26:58). ಅವರು ಮೊದಲ ದೇವದರ್ಶನಗುಡಾರ ಮತ್ತು ನಂತರ ದೇವಾಲಯದಲ್ಲಿ ಬಾಗಿಲನ್ನು ಕಾಯುವ ಕೆಲಸದಲ್ಲಿ ನೇಮಿಸಲ್ಪಟ್ಟವರಾಗಿದ್ದರು (1 ಪೂರ್ವಕಾಲವೃತ್ತಾಂತ 9:19, 26:1, 19). ತದನಂತರ ಅವರು ದೇವಾಲಯದಲ್ಲಿ ವಾದ್ಯಗಾರರಾಗಿ ಮಾಡಲ್ಪಟ್ಟರು (2 ಪೂರ್ವಕಾಲವೃತ್ತಾಂತ 20:19). ಕೀರ್ತನೆಗಳು ಅವರ ಹೆಸರನ್ನು ಒಳಗೊಂಡಿವೆ.

ಕೀರ್ತನೆ 42–43 ಅನ್ನು ಒಂದು ವೈಯಕ್ತಿಕ ಪ್ರಲಾಪವನ್ನಾಗಿ ವಿಂಗಡಿಸಬಹುದು. ಇದೊಂದು ಪ್ರಾರ್ಥನೆಯಾಗಿದೆ. ವೈರಿಗಳ ಕಾಟದಿಂದ ಬಿಡಿಸಬೇಕೆಂದು ದೇವರನ್ನು ಕೇಳಿಕೊಳ್ಳುವುದಾಗಿದೆ (ಕೀರ್ತನೆ 42:9, 43:2). ಆದರೆ ಅತೀ ಪ್ರಾಮುಖ್ಯವಾಗಿ ಇದೊಂದು ಪ್ರಾರ್ಥನೆಯಾಗಿದ್ದು, ದೇವರ ಹೊಸ ಪ್ರಸನ್ನತೆ/ಬಲಕ್ಕಾಗಿ ಅಳವಾದ ದಾಹವನ್ನು ವ್ಯಕ್ತಪಡಿಸುವುದಾಗಿದೆ (ಕೀರ್ತನೆ 42:1–2).

ಮನವು (42:1): ಹಳೇ ಒಡಂಬಡಿಕೆಯಲ್ಲಿ ಮನ ಎಂಬುದು ಒಬ್ಬ ವ್ಯಕ್ತಿಯ ಪೂರ್ಣತನವನ್ನು ಜೀವಿತಾಚಿತ್ತವನ್ನು ಸೂಚಿಸುತ್ತದೆ. ಇದು ಕೇವಲ ಒಬ್ಬ ವ್ಯಕ್ತಿಯ ಆತ್ಮೀಕ ಅಂಶಕ್ಕಷ್ಟೇ ಸೀಮಿತವಾಗಿಲ್ಲ, ಆದರೆ ಇದು ಆತ್ಮೀಕ ಮತ್ತು ಶಾರೀರಿಕ ಅಂಶಗಳೆರಡನ್ನೂ ಒಳಗೊಂಡಿದೆ. ಇದು ಒಬ್ಬ ವ್ಯಕ್ತಿಯ ಆಂತರಿಕ ಅಂಶಗಳಿಗಷ್ಟೇ ಸೀಮಿತವಾಗಿಲ್ಲ, ಆದರೆ ಬಾಹ್ಯ ಅಂಶಗಳನ್ನೂ ಸಹ ಒಳಗೊಂಡಿದೆ.

ಯೊರ್ದನ್ ಹೊಳೆಯ ದೇಶ, ಹೆರ್ಮೋನ್ ಪರ್ವತ, ಮಿಸಾರ್ ಬೆಟ್ಟ, ಇವುಗಳಲ್ಲಿರುವವನಾಗಿ (ವಚನ 6): ಕೀರ್ತನೆಗಾರನು ಯೆರೂಸಲೇಮ್ ಮತ್ತು ದೇವಾಲಯದಿಂದ ಬಹುದೂರ ಸೆರೆಯಲ್ಲಿದ್ದಾಗ ಈ ಕೀರ್ತನೆಯನ್ನು ಬರೆದಂತೆ ತೋರುತ್ತದೆ. ಹೆರ್ಮೋನ್ ಪ್ಯಾಲೆಸ್ತೇನಿನ ಉತ್ತರಕ್ಕಿರುವ ಪರ್ವತವಾಗಿದೆ. ಮಿಸಾರ್ ಬೆಟ್ಟವನ್ನು ಸತ್ಯವೇದದಲ್ಲಿ ಇಲ್ಲಿ ಮಾತ್ರ ಪ್ರಸ್ತಾಪಿಸಲಾಗಿದೆ. ಮಿಸಾರ್ ಎಂದರೆ ಚಿಕ್ಕ ಪರ್ವತ, ಬಹುಶಃ ಹೆರ್ಮೋನ್‌ನ ಕೆಳಭಾಗ ಎಂದರ್ಥವಾಗುತ್ತದೆ. ಯೊರ್ದನ್ ಹೊಳೆಯ ದೇಶವು ಬಹುಶಃ ಹೆರ್ಮೋನ್‌ನ ದಕ್ಷಿಣ ಇಳಿಜಾರಿನಲ್ಲಿನ ಯೊರ್ದನ್ ಹೊಳೆಯ ಮೂಲವನ್ನು ಸೂಚಿಸುವುದಾಗಿರಬಹುದು,

ವಚನ 7: ಕೀರ್ತನೆಗಾರನು ತನ್ನ ವ್ಯಥೆಯನ್ನು ವ್ಯಕ್ತಪಡಿಸಲು ಅಲಂಕಾರಿಕ ಭಾಷೆಯನ್ನು ಬಳಸುತ್ತಾನೆ.ವಚನದ ಮೊದಲ ಭಾಗವು (ನಿನ್ನ ಜಲಪಾತಗಳಿಂದುಂಟಾಗುವ ಮಹಾಘೋಷ) ಬಹುಶಃ ಪರಲೋಕದ ದೇವರ ಸಂಗ್ರಹಗಾರದಿಂದ ಕೆಳಗೆ ಸುರಿಯುವ ನೀರನ್ನು ಸೂಚಿಸುತ್ತಿರಬಹುದು.

ವಚನ 8: "ಯೆಹೋವನು ಹಗಲಿನಲ್ಲಿ ತನ್ನ ಪ್ರೀತಿಯನ್ನು ನನಗೆ ಅನುಗ್ರಹಿಸುವನು, ರಾತ್ರಿವೇಳೆಯಲ್ಲಿಯೂ ಆತನ ಕೀರ್ತನೆ ನನ್ನಲ್ಲಿರುವದು" ಎಂದು ಕೀರ್ತನೆಗಾರನು ಹೇಳುತ್ತಾನೆಂದು ಇಬ್ರಿಯ ಪಠ್ಯದ ವ್ಯಾಕರಣವು ಹೇಳುತ್ತದೆ. ಹಾಗಾಗಿ ವಚನ 8 ಅನ್ನು ವಚನ 4 ಕ್ಕೆ ಸಮಾನಾಂತರವಾಗಿ ಅರ್ಥೈಸಿಕೊಳ್ಳಬಹುದು. ವಚನ 4 ರಲ್ಲಿ ಕೀರ್ತನೆಗಾರನು ದೇವರ ಕಾಳಜಿಯು ತನ್ನ ಹಗಲು – ರಾತ್ರಿಯ ಅನುಭವವಾಗಿತ್ತೆಂದು ಕೀರ್ತನೆಗಾರನು ನೆನಪಿಸಿಕೊಳ್ಳುತ್ತಾನೆ.

ಯಾಕೆ ನನ್ನನ್ನು ಮರೆತುಬಿಟ್ಟಿ? (ವಚನ 9): ಈ ಪ್ರಶ್ನೆಯು ಕೀರ್ತನೆ 43:2 ರಲ್ಲಿ ಏಕೆ ನನ್ನನ್ನು ತಳ್ಳಿಬಿಟ್ಟಿ? ಎಂದು ಪ್ರತಿಧ್ವನಿಸಿದೆ.

ಎಲುಬುಗಳು (ವಚನ 10): ಇಲ್ಲಿ ಕೀರ್ತನೆಗಾರನು ಅಖಂಡದಿಂದ ಖಂಡವನ್ನು ಸೂಚಿಸುವ ಎಂದು ಕರೆಯಲ್ಪಡುವ ಶಬ್ದಾಲಂಕಾರವನ್ನು ಉಪಯೋಗಿಸುತ್ತಾನೆ. ಎಲುಬುಗಳು ಇಡೀ ವ್ಯಕ್ತಿಯನ್ನು ದೇಹ ಮತ್ತು ಪ್ರಾಣವೆಲ್ಲವನ್ನೂ ಸೂಚಿಸುತ್ತವೆ.

ನಿನ್ನ ಪರಿಶುದ್ಧಪರ್ವತ (43:3): ಯೆರೂಸಲೇಮು ಇರುವ ಮತ್ತು ದೇವಾಲಯ ಕಟ್ಟಲ್ಪಟ್ಟಿರುವ ಪರ್ವತವನ್ನು ಸೂಚಿಸುತ್ತದೆ.

ಪ್ರಶ್ನೆಗಳು

1. ಈ ಕೀರ್ತನೆಯಲ್ಲಿ ಯಾರು "ಮಾತನಾಡುತ್ತಾರೆ" ಮತ್ತು ಯಾರನ್ನು ಉದ್ದೇಶಿಸಿ ಮಾತನಾಡಲಾಗುತ್ತಿದೆ?
2. ದೇವಾಲಯದ ಪ್ರಾರ್ಥನೆಯಲ್ಲಿ ತನ್ನ ಪಾತ್ರಗಳ ಬಗ್ಗೆ ಕೀರ್ತನೆಗಾರನು ಏನು ನೆನಪಿಸಿಕೊಳ್ಳುತ್ತಾನೆ?
3. ಪ್ರತಿಯೊಂದು ಚರಣದಲ್ಲಿಯೂ ಒಂದು ಪ್ರಮುಖ ಪ್ರಶ್ನೆ ಇರುವಂತೆ ತೋರುತ್ತದೆ. ಅವು ಯಾವವು?
4. ಕೀರ್ತನೆಗಾರನು ಕೀರ್ತನೆ 42:9 ರಲ್ಲಿ ದೇವರನ್ನು ತನ್ನ "ಶರಣ"ನೆಂದು ಕರೆಯುತ್ತಾನೆ. ಈ ರೂಪಾಲಂಕಾರದ ಅರ್ಥವೇನು?
5. "ನನ್ನ ಎಲುಬುಗಳೆಲ್ಲಾ ಮುರಿದ ಹಾಗಿವೆ" ಎಂಬ ಕೀರ್ತನೆಗಾರನ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ಕೀರ್ತನೆ 42:10)?
6. ಯೆರುಸಲೇಮಿನಲ್ಲಿನ ದೇವಾಲಯಕ್ಕೆ ಕೀರ್ತನೆಗಾರನು ತಿರುಗಿ ಹೇಗೆ ಮಾರ್ಗದರ್ಶಿಸಲ್ಪಡುತ್ತಾನೆ?

ಕೀರ್ತನೆ 42–43 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೀರ್ತನೆ 42 ಮತ್ತು 43 ಮೂಲತಃ ಒಂದೇ ಕೀರ್ತನೆಯಾಗಿರಬಹುದು ಎಂಬ ಹೇಳಿಕೆಯನ್ನು ನೀವು ಒಪ್ಪುತ್ತೀರಾ? ಏಕೆ – ಏಕಿಲ್ಲಾ?
2. ಕೀರ್ತನೆ 42–43 ರ "ವಿಷಯ ಮತ್ತು ರಚನೆ"ಯ ನಿರೂಪಣೆಯನ್ನು ನೋಡಿರಿ. ಮೂರು ಚರಣಗಳ ವಿಷಯದ ಸಾರಾಂಶದಿಂದ ನೀವು ತೃಪ್ತರಾಗಿದ್ದೀರಾ? ಏಕೆ–ಏಕಿಲ್ಲ?
3. ಪಲ್ಲವಿಯ ಸ್ವರ/ಭಾವ ಮೂರು ಚರಣಗಳ ಸ್ವರ/ಭಾವಕ್ಕಿಂತ ಹೇಗೆ ಭಿನ್ನವಾಗಿದೆ?

4. ಇದೊಂದು ತೀರಾ ಭಾವನಾತ್ಮಕ ಪದ್ಯವಾಗಿದೆ. ಕೀರ್ತನೆಗಾರನು ಹೇಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ ಎಂಬುದಕ್ಕೆ ಕೆಲವು ಉದಾಹರಣೆ ಕೊಡಿರಿ.

5. ಕೀರ್ತನೆಗಾರನು ಮೂರು ಚರಣಗಳಲ್ಲಿ ಹಲವಾರು ಪ್ರಶ್ನೆಗಳನ್ನು ಹಾಕುತ್ತಾನೆ (ಕೀರ್ತನೆ 42:2, 3, 9, 10 ಕೀರ್ತನೆ 43:2 ನೋಡಿ) ಮತ್ತು ಪಲ್ಲವಿಯಲ್ಲಿ (ಕೀರ್ತನೆ 42:5, 11, 43:5 ನೋಡಿ). ಈ ಪದ್ಯದಲ್ಲಿ ಈ ಪ್ರಶ್ನೆಗಳ ಕಾರ್ಯವೇನು?

6. ಕೀರ್ತನೆ 43:1 ರಲ್ಲಿನ ಸಮಾನಾಂತರತೆಯನ್ನು ವಿವರಿಸಿರಿ.

7. ಕೀರ್ತನೆ 43–42 ಮತ್ತು ಅಧ್ಯಯನವು ದೇವರಿಗಾಗಿ ಮತ್ತು ಸಭೆಯ ಅನ್ಯೋನ್ಯತೆಗಾಗಿ ನಂಬಿಕೆಯುಳ್ಳವನ ಹಂಬಲವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ' ನಿಮಗೆ ಹೇಗೆ ಸಹಾಯವಾಯಿತು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

8. ಈ ಕವಿತೆಯು ಇಂದು ದಕ್ಷಿಣ ಭಾರತದ ವಿಶ್ವಾಸಿಗಳಿಗೆ ಯಾವ ಸಂದೇಶವನ್ನು ಹೊಂದಿದೆ ಎಂಬುದಾಗಿ ನೀವು ಭಾವಿಸುತ್ತೀರಿ? ನಿಮ್ಮ ತೀರ್ಮಾನಗಳನ್ನು ಬರೆದಿಟ್ಟುಕೊಳ್ಳಿ.

ಕೀರ್ತನೆ 42–43 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಕೀರ್ತನೆ 42–43 ರ ಮೂರು ಶ್ಲೋಕಗಳನ್ನು ನೋಡಿರಿ. ಕೀರ್ತನೆಗಾರನ ಅನುಭವಗಳಲ್ಲಿ ನಿಮ್ಮ ಜೀವತವನ್ನು ನೋಡಿಕೊಳ್ಳಿರಿ. ನಿಮ್ಮ ಜೀವಿತದಲ್ಲಿ ದೇವರೊಂದಿಗಿನ ಸಂಬಂಧದಲ್ಲಿ ನೀವು ಎಲ್ಲಿರುವಿರಿ?

   ಅ. ಮೊದಲ ಶ್ಲೋಕ: ದೇವಜನರಿಂದ ಮತ್ತು ಸಭಾಜೀವಿತದಿಂದ ನೀವು ದೂರವಾಗಿರುವಿರೆಂದು ಭಾವಿಸುವಿರಾ? ನಿಮ್ಮ ಆತ್ಮೀಕ ದಾಹವನ್ನು ತಣಿಸಲು ನೀವು ಏನನ್ನು ಮಾಡಬಲ್ಲಿರಿ? ದೇವಜನರೊಂದಿಗಿನ ಸಂಬಂಧವನ್ನು ನವೀಕರಿಸಲು ನೀವು ಏನನ್ನು ಮಾಡಬಲ್ಲಿರಿ?

   ಆ. ಎರಡನೇ ಶ್ಲೋಕ: ಕೆಲವು ವರ್ಷಗಳ ಹಿಂದಿನಂತೆ ನಿಮ್ಮ ದೈನಂದಿನ ಜೀವನದಲ್ಲಿ ದೇವರೇ ಇಲ್ಲವೆಂದು ಅನಿಸುತ್ತಿದೆಯಾ? ನಿಮ್ಮ ಆತ್ಮೀಕ ಜೀವಿತವನ್ನು ಹೇಗೆ ನವೀಕರಿಸಬಹುದು? ಕರ್ತನ ಹಾಡನ್ನು ಪುನಃ ಹಾಡಲು ನೀವು ಏನನ್ನು ಮಾಡಬಹುದು?

   ಇ. ಮೂರನೇ ಶ್ಲೋಕ: ದೇವರ ನ್ಯಾಯನಿರ್ಣಯದ ಅಗತ್ಯತೆಯಲ್ಲಿ ನೀವು ಇರುವಿರಾ? ನಿಮ್ಮನ್ನು ದೇವರ ವೇದಿಯಿಂದ ದೂರಮಾಡಿದ ವೈರಿಗಳಿಂದ ಹಿಂಸೆಗೆ ಒಳಗಾಗಿರುವಿರಾ? ಅವರು ಕರ್ತನಲ್ಲಿನ ನಿಮ್ಮ ಸಂತೋಷ ಮತ್ತು ಹರ್ಷವನ್ನು ತೆಗೆದುಬಿಟ್ಟಿದ್ದಾರೆಂದು ಭಾವಿಸುತ್ತಿರುವಿರಾ?

2. ಇವೆಲ್ಲಾ ಸಂಗತಿಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತಂದಿಡಿರಿ. ನಿಮ್ಮ ಬಯಕೆಯನ್ನು ಆತನು ತಿಳಿದಿದ್ದಾನೆ. ನಿಮ್ಮ ಪ್ರಸ್ತುತ ಸ್ಥಾನಮಾನವನ್ನು ಆತನು ಅರ್ಥಮಾಡಿಕೊಳ್ಳುತ್ತಾನೆ. ನಿಮ್ಮ ಪರವಾಗಿ ಆತನು ದುಷ್ಟಜನರ ಮೇಲೆ ಮುಯ್ಯಿತೀರಿಸುತ್ತಾನೆ.

ಕೀರ್ತನೆ 46

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದ ತಲೆಬರಹದಲ್ಲಿ "ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು, ಕೋರಹೀಯರ ಗೀತ" ಎಂದು ಹೇಳುತ್ತದೆ. ಇದು ಅಲಾಮೋತ್ ಪ್ರಕಾರವಿದೆ. ಇಬ್ರಿಯ ಪದ ಅಲಾಮೋತ್, ಹುಡುಗಿ, ಯೌವನಸ್ಥ ಸ್ತ್ರೀ ಎಂಬ ಪದದೊಂದಿಗೆ ಸಂಬಂಧ ಹೊಂದಿದೆ (ಇಮ್ಮಾನುವೇಲ ಪ್ರವಾದನೆಯಲ್ಲಿ ಬಳಸಲಾಗಿದೆ. "ಇದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು. ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗುವನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು" (ಯೆಶಾಯ 7:14). ಇಮ್ಮಾನುವೇಲ್ ಅಂದರೆ "ದೇವರು ನಮ್ಮ ಸಂಗಡ ಇದ್ದಾನೆ" ಎಂದು ಗಮನಿಸುವುದು ಆಶ್ಚರ್ಯಕರ ಸಂಗತಿಯಾಗಿದೆ ಮತ್ತು ದೇವರ ಪ್ರಸನ್ನತೆ/ಇರುವಿಕೆಯು ಕೀರ್ತನೆ 46 ರಲ್ಲಿ ಒಂದು ಮುಖ್ಯ ವಿಷಯಾಂಶವಾಗಿದೆ. ವಚನ 1, 5, 7 ಅನ್ನು ನೋಡಿರಿ). ಅಲಾಮೋತ್ ಎಂಬುದು ಬಹುಶಃ ಒಂದು ಸಂಗೀತ/ವಾದ್ಯ ರೂಪವಾಗಿರಬಹುದು. ಬಹುಶಃ ಯೌವನಸ್ಥ ಸ್ತ್ರೀಯಿಂದ ವಾದ್ಯ ಬಾರಿಸುವುದನ್ನು ಸೂಚಿಸುವುದಾಗಿರಬಹುದು.

ಈ ಕೀರ್ತನೆಯು ಮಹಾ ಇಕ್ಕಟ್ಟಿನ ಸಮಯದಲ್ಲಿ ದೇವರ ನಗರಿಯಾದ ಯೆರೂಸಲೇಮಿನ ಭದ್ರತೆಯನ್ನು ಆಚರಿಸುವ ಒಂದು ಸ್ತುತಿಗೀತೆಯಾಗಿದೆ. ಇದು ಸುಧಾರಣೆಕಾರನಾದ ಮಾರ್ಟಿನ್ ಲೂಥರ್‌ಗೆ "ನಮ್ಮ ದೇವರು ಒಂದು ಬಲವಾದ ದುರ್ಗವಾಗಿದ್ದಾನೆ" ಎಂಬ ಜನಪ್ರಿಯ ಹಾಡನ್ನು ಬರೆಯಲು ಪ್ರೇರೇಪಿಸಿತು.

ಅಲಾಮೋತ್ (ತಲೆಬರಹದಲ್ಲಿ): ಇಬ್ರಿಯ ಪದದ ಅರ್ಥ ಹುಡುಗಿಯರು.

ದೇವನಗರ (ವಚನ 4): ಯೆರೂಸಲೇಮ್

ನದಿ (ವಚನ 4): ಯೆರೂಸಲೇಮಿನಲ್ಲಿ ಯಾವುದೇ ನದಿಗಳಿರಲಿಲ್ಲ (ಆದರೆ ಕೀರ್ತನೆಗಾರನು ದೇವಾಲಯದ ಕೆಳಭಾಗದಲ್ಲಿ ಕಿದ್ರೋನ್ ಕಣಿವೆಯ ತಗ್ಗಿನಲ್ಲಿ ಯೆರೂಸಲೇಮಿಗೆ ನೀರಿನ ಮುಖ್ಯ ಮೂಲವಾಗಿರುವ ಗೀಹೋನ್ ಬುಗ್ಗೆಯ ಬಗ್ಗೆ ಯೋಚಿಸುತ್ತಿದ್ದಿರಬಹುದು). ನದಿ ಎಂಬ ಪದವನ್ನು ದೇವರ ನಿರಂತರ ಆಶೀರ್ವಾದ ಸುರಿಸುವಿಕೆಗೆ ಒಂದು ರೂಪಾಲಂಕಾರವಾಗಿ ಬಳಸಲಾಗಿದೆ. ದೇವನಗರವು ಏದೆನ್ ತೋಟದಂತಿದೆ. ಅಲ್ಲಿ ನಿರಂತರವಾಗಿ ದೇವರ ಬಲಪಡಿಸುವ ಮತ್ತು ಉಲ್ಲಾಸಗೊಳಿಸುವ ಆಶೀರ್ವಾದವು ಹರಿಯುತ್ತಾ ಇರುತ್ತದೆ.

ಪರಾತ್ಪರನ ಪರಿಶುದ್ಧನಿವಾಸಸ್ಥಾನ (ವಚನ 4): ದೇವರ ಪರಲೋಕ ವಾಸಸ್ಥಾನ (ಅಥವಾ ಸಿಂಹಾಸನ) ಯೆರೂಸಲೇಮಿನಲ್ಲಿರುವ ಆತನ ದೇವಾಲಯದಲ್ಲಿ ಭೂಮಿಯ ಮೇಲೆ ಅದರ ಪ್ರತಿರೂಪವನ್ನು ಹೊಂದಿತ್ತು.

ಉದಯಕಾಲದಲ್ಲಿ (ವಚನ 5): ಈ ಸಮಯದಲ್ಲಿಯೇ ಪಟ್ಟಣಗಳಿಗೆ ವಿರುದ್ಧವಾಗಿ ಹೆಚ್ಚು ದಾಳಿಗಳು ನಡೆಯುವವು.

ಸೇನಾಧೀಶ್ವರನಾದ ಯೆಹೋವನು (ವಚನ 7): ಈ ಇಬ್ರಿಯ ಹೇಳಿಕೆಯು "ಪರಲೋಕದ ಸೈನ್ಯ"ವನ್ನು ಸೂಚಿಸುತ್ತದೆ.

ಯಾಕೋಬವಂಶದವರ ದೇವರು (ವಚನ 7): ಆದಿಕಾಂಡದಲ್ಲಿ ಯಾಕೋಬನ ಕುರಿತಾದ ಕಥೆಗಳಲ್ಲಿ ಆತನು ಯಾವುದೇ ರೀತಿಯ ಪ್ರವಾಹವಾಗಲೀ ಭೂಕಂಪವಾಗಲೀ ಎದುರಿಸಿದನೆಂದು ಅಥವಾ ವೈರಿಗಳಿಂದ ಆಕ್ರಮಣಕ್ಕೊಳಗಾದ ಪಟ್ಟಣಗಳಲ್ಲಿ ಆತನು ವಾಸಿಸಿದನೆಂದು ನಾವು ಕಾಣುವುದಿಲ್ಲ. ಆದರೆ ಆತನ ಜೀವನ ಚರಿತ್ರೆಯು ವೈಯಕ್ತಿಕವಾದ ಏಳು ಬೀಳುಗಳಿಂದ ತುಂಬಿಕೊಂಡಿದೆ. ಉದಾ: ಕೌಟುಂಬಿಕ ಸಮಸ್ಯೆಗಳು, ಮೋಸ, ವೈಷಮ್ಯ, ದಂಗೆ ಮತ್ತು ದುಃಖ.

ಪ್ರಳಯ/ನಾಶನ (ವಚನ 8): ಈ ಇಬ್ರಿಯ ಪದವನ್ನು ದಿಗಿಲು, ಭಯ, ಭೀತಿ, ದಿಗ್ಭ್ರಮೆ ಎಂಬುದಾಗಿ ಸಹ ಭಾಷಾಂತರಿಸಬಹುದು.

ಬಿಲ್ಲುಗಳನ್ನು/ರಥಗಳನ್ನು (ವಚನ 9): ಕನ್ನಡ ಭಾಷಾಂತರದಲ್ಲಿ ರಥಗಳು ಎಂದಿವೆ (ಇದು ಯುದ್ಧರಥವನ್ನು ಸೂಚಿಸುತ್ತದೆ). ಕೆಲವು ಭಾಷಾಂತರಗಳಲ್ಲಿ ಗುರಾಣಿ ಎಂದಿದೆ (ಇವು ಗ್ರೀಕಿನ ಸೆಪ್ಟೂಜೆಂಟ್‌ನಂತೆ).

ಬಿಡಿರಿ (ವಚನ 10): "ಸಾಕು, ನಿಲ್ಲಿಸಿ" ಎಂದು ಈ ಇಬ್ರಿಯ ಹೇಳಿಕೆಯ ಅರ್ಥವಾಗಿರಬಹುದು.

ತಿಳಿದುಕೊಳ್ಳಿರಿ (ವಚನ 10): ಬಹುಶಃ ಅರಿತುಕೊಳ್ಳುವುದು ಎಂದರ್ಥ.

ಸೆಲಾ (ವಚನ 11): ಈ ಪದದ ಅರ್ಥ ಸ್ಪಷ್ಟವಾಗಿಲ್ಲ, ಬಹುಶಃ ಇದೊಂದು ಸಂಗೀತ ರೂಪವಾಗಿರಬಹುದು.

ಪ್ರಶ್ನೆಗಳು

1. ಕೀರ್ತನೆ 46 ಅನ್ನು ನೀವು ಹೇಗೆ ರಚಿಸುತ್ತೀರಿ?
2. ಪಲ್ಲವಿಯು ಎರಡು ಬಾರಿ ಕಂಡು ಬರುತ್ತದೆ. ಆದರೆ ಈ ಕೀರ್ತನೆಯಲ್ಲಿ ಇದು ಇನ್ನೊಂದು ಸ್ಥಳದಲ್ಲಿಯೂ ಸಹ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ಅದು ಎಲ್ಲಿ?
3. ವಚನ 10 ರಲ್ಲಿ ಮಾತನಾಡುವವರು ಯಾರು?
4. ಕೀರ್ತನೆಯ ಉಳಿದ ಭಾಗಗಳಲ್ಲಿ ಯಾರು ಮಾತನಾಡುವರೆಂದು ನೀವು ಯೋಚಿಸುವಿರಿ?
5. ಕೀರ್ತನೆಗಾರನು (ಯೆರೂಸಲೇಮ್ ನಿವಾಸಿಗಳು) ಯಾವುದಕ್ಕೆ ಹೆದರುತ್ತಿದ್ದರು (ವ 1–3)?
6. ಯೆರೂಸಲೇಮ್ ಅನ್ನು ಹೇಗೆ ವಿವರಿಸಲಾಗಿದೆ (4–5)?
7. 8–9 ನೇ ವಚನಗಳಲ್ಲಿ ದೇವರ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
8. ಈ ಕೀರ್ತನೆಯಲ್ಲಿ ದೇವರು ತನ್ನ ಬಗ್ಗೆ ಏನು ಹೇಳುತ್ತಾನೆ?

ಕೀರ್ತನೆ 46 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯ ಐತಿಹಾಸಿಕ ಹಿನ್ನಲೆಯು ಕ್ರಿ.ಪೂ. 701 ರಲ್ಲಿ ಹಿಜ್ಕೀಯ ರಾಜನ ಆಳ್ವಿಕೆಯಲ್ಲಿ ಅಶ್ಶೂರ್ಯರು ಯೆರೂಸಲೇಮ್ ಮೇಲೆ ನಡೆಸಿದ ದಾಳಿಯಾಗಿರಬಹುದು. ಯೆಶಾಯ 36 ಮತ್ತು 37 ನೇ ಅಧ್ಯಾಯಗಳನ್ನು ಓದಿರಿ. ಕೀರ್ತನೆಯಲ್ಲಿ 4–7 ನೇ ವಚನಗಳು ಆ ಐತಿಹಾಸಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ ಎಂದು ನೀವು ಭಾವಿಸುತ್ತೀರಾ? ಯಾಕೆ–ಯಾಕಿಲ್ಲ?
2. 8 ನೇ ವಚನವು "ಬನ್ನಿರಿ ನೋಡಿರಿ" ಎಂಬ ಆಹ್ವಾನದೊಂದಿಗೆ ಪ್ರಾರಂಭವಾಗುತ್ತದೆ ಏನನ್ನು ನೋಡುವುದು ಮತ್ತು ಯಾಕೆ?
3. "ಬಿಡಿ ನಾನೇ ದೇವರು" ಎಂದು ದೇವರು ಏಕೆ ಹೇಳುತ್ತಾನೆ ಎಂದು ನೀವು ಯೋಚಿಸುವಿರಿ (ವ–10)? ಅತನು ಯಾರೊಂದಿಗೆ ಮಾತನಾಡುತ್ತಾನೆ ಎಂದು ನೀವು ಯೋಚಿಸುವಿರಿ?
4. ಈ ಕೀರ್ತನೆಯು ಯೆರೂಸಲೇಮ್ ಜನರಿಗೆ ಮತ್ತು ನಮಗೆ ನೀಡುವ ಭವಿಷ್ಯದ ಭರವಸೆ ಏನು?
5. ಈ ಕೀರ್ತನೆಯಲ್ಲಿನ ಕೆಲವು ರೂಪಾಲಂಕಾರಗಳನ್ನು ಮತ್ತು ಮಾನವೀಕರಣಗಳನ್ನು ವಿವರಿಸಿರಿ.
6. ಕೀರ್ತನೆ 46 ಮತ್ತು ಈ ಅಧ್ಯಯನವು ನಿಮ್ಮ ಜೀವನದಲ್ಲಿ ಮತ್ತು ಸಭೆಯ ಜೀವನದಲ್ಲಿ ದೇವರ ಪ್ರಸನ್ನತೆಯನ್ನು ಆಳವಾಗಿ ಅರಿಯಲು ನಿಮಗೆ ಹೇಗೆ ಸಹಾಯಕವಾಯಿತೆಂದು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.
7. ಭಾನುವಾರದ ಆರಾಧನೆಯಲ್ಲಿ ಓದುವುದಕ್ಕೆ ಕೀರ್ತನೆ 46 ಏಕೆ ಅತ್ಯುತ್ತಮವಾದ ಆಯ್ಕೆಯಾಗಿದೆ? ಕಾರಣಗಳನ್ನು ನೀಡಿ.

ಕೀರ್ತನೆ 46 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ವಿಶ್ವಾಸಿಗಳು ಮತ್ತು ದೇವರ ಜನರಾಗಿ ನಾವು ಇಂದು ಯಾವುದಕ್ಕೆ ಭಯಪಡುತ್ತೇವೆ? ವಿಮರ್ಶಿಸಿರಿ. ಹಾಗೆಯೇ ಈ ಎಲ್ಲಾ ಭಯಭೀತಿ ಮತ್ತು ಇಕ್ಕಟ್ಟಿನ ಪರಿಸ್ಥಿತಿಗಳಲ್ಲಿ ದೇವರೇ, ನೀನು ನಮ್ಮ ಬಲ ಮತ್ತು ಆಶ್ರಯದುರ್ಗವಾಗಿರಬೇಕೆಂದು ಬೇಡಿಕೊಳ್ಳಿರಿ. ಸರ್ವಶಕ್ತನಾದ ದೇವರು ನಿಮ್ಮೊಂದಿಗಿದ್ದಾನೆ. ಆತನೇ ನಿಮ್ಮ ಕೋಟೆಯಾಗಿದ್ದಾನೆ.
2. ಈ ಕೀರ್ತನೆಯಲ್ಲಿ ಯೆರೂಸಲೇಮು ವೈರಿಗಳ ದಾಳಿಯನ್ನು ಎದುರಿಸಿತು. ನಿಮ್ಮ ಯೆರೂಸಲೇಮ್ ನಿಮ್ಮ ಸಭೆಯನ್ನು ಕುರಿತು ವಿಮರ್ಶಿಸಿರಿ. ನೀವು ವೈರಿಗಳಿಂದ ಯಾವುದೇ ದಾಳಿ ಎದುರಿಸುತ್ತಿರುವಿರಾ? ಯಾವ ರೀತಿಯ ದಾಳಿ ನಂತರ ನಿಮ್ಮ ಸಭೆಯ ಪರಿಸ್ಥಿತಿಗಳನ್ನು ಈ ಕೀರ್ತನೆಯಲ್ಲಿ ದೇವರು ಹೇಗೆ ನಿರೂಪಿಸಲ್ಪಟ್ಟಿದ್ದಾನೆ ಎಂಬುದರ ಬೆಳಕಿನಡಿಯಲ್ಲಿ ವಿಮರ್ಶಿಸಿರಿ. ನಿಮ್ಮ ಪರಿಸ್ಥಿತಿಗಳನ್ನು ದೇವರ ಮುಂದೆ ತನ್ನಿರಿ ಮತ್ತು ಸಾವಿರಾರು ವರ್ಷಗಳ ಹಿಂದೆ ಕೀರ್ತನೆಗಾರ

ಬರೆಯುವಾಗ ದೇವರು ಹೇಗಿದ್ದಾನೋ ಈಗಲೂ ಅದೇ ರೀತಿ ಸರ್ವಶಕ್ತನಾಗಿರುವದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

3. ಈ ಕೀರ್ತನೆಯು ಭವಿಷ್ಯದ ಒಂದು ಸುಂದರ ದರ್ಶನದೊಂದಿಗೆ ಮುಕ್ತಾಯವಾಗುತ್ತದೆ (ವಚನ 10). ಆಗ ದೇವರು ಸಮಸ್ತರಲ್ಲಿ ಸಮಸ್ತವೂ ಆಗುವನು (1 ಕೊರಿಂಥ. 15:28). ಆದರೆ ದೇವರು ಇರುವಾತನೇ ನಿತ್ಯತ್ವದ ದೇವರಾಗಿರುವುದರಿಂದ ಈಗಲೂ ಸಹ ನಾವು ಇಕ್ಕಟ್ಟಿನ ಸಮಯಗಳಲ್ಲಿ ಆತನ ನಿರಂತರ ಪ್ರಸನ್ನತೆಯನ್ನು ಅನುಭವಿಸಬಹುದು (ವಚನ 1).

   ಕೆಲ ಸಮಯ ತೆಗೆದುಕೊಂಡು ದೇವರ ಮಹತ್ವ ಮತ್ತು ಒಳ್ಳೆತನವನ್ನು ವಿಮರ್ಶಿಸಿರಿ. ಹಾಗೆಯೇ ನಿಮ್ಮ ಜೀವನದಲ್ಲಿನ ಆತನ ನಿರಂತರ ಪ್ರಸನ್ನತೆಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿರಿ.

ಅಸೈನ್ ಮೆಂಟ್: ಕೀರ್ತನೆ 46

ಕೀರ್ತನೆ 46 ಮತ್ತು 81 ಅಧ್ಯಯನವನ್ನು ಆಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನ (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶವನ್ನು) ಸಿದ್ಧಪಡಿಸಿರಿ.

ಕೀರ್ತನೆ 51

ಪೀಠಿಕೆ ಮತ್ತು ಟಿಪ್ಪಣಿಗಳು

ಕೀರ್ತನೆ 51 ಅನ್ನು ಒಂದು ವೈಯಕ್ತಿಕ ಪ್ರಲಾಪವನ್ನಾಗಿ ವರ್ಗೀಕರಿಸಬಹುದು. ಇದು ಜನಪ್ರಿಯ ಪಶ್ಚಾತ್ತಾಪದ ಕೀರ್ತನೆಗಳಲ್ಲಿ ಒಂದಾಗಿದೆ. ಈ ರೀತಿಯ ಕೀರ್ತನೆಗಳನ್ನು ಪಾಪವನ್ನು ಅರಿಕೆ ಮಾಡಲು ಕ್ರೈಸ್ತೀಯ ಸಂಪ್ರದಾಯದಲ್ಲಿ ಉಪಯೋಗಿಸುತ್ತಿದ್ದರು.

ಇಬ್ರಿಯ ತಲೆಬರಹವು ಕೀರ್ತನೆ 51 ಅನ್ನು ಬತ್ಷೆಬಳೊಂದಿಗಿನ ದಾವೀದನ ವ್ಯಭಿಚಾರದೊಂದಿಗೆ ಸಂಬಂಧ ಕಲ್ಪಿಸುತ್ತದೆ: **"**ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು, ದಾವೀದನು ಬತ್ಷೇಬಳ ಬಳಿಗೆ ಹೋದ ಮೇಲೆ ಪ್ರವಾದಿಯಾದ ನಾತಾನನು ಅವನ ಹತ್ತಿರ ಬಂದಾಗ ದಾವೀದನು ರಚಿಸಿದ ಕೀರ್ತನೆ**"**. ದಾವೀದನ ಪಾಪವು ಕೇವಲ ವ್ಯಭಿಚಾರವಷ್ಟೇ ಆಗಿರಲಿಲ್ಲ, ಆದರೆ ಕೊಲೆ ಸಹ ಆಗಿತ್ತು. ತನ್ನ ಮೊದಲ ಪಾಪವನ್ನು ಮುಚ್ಚಿಹಾಕಲು ದಾವೀದನು ಬತ್ಷೆಬಳ ಗಂಡನಾದ ಊರೀಯನನ್ನು ಕೊಲ್ಲಲು ಉಪಾಯ ಮಾಡಿದನು. ಈ ನೀಚಕೃತ್ಯದ ಕಥೆಯನ್ನು ನಾವು 2 ಸಮುವೇಲ. 12:1–14 ರಲ್ಲಿ ಕಾಣಬಹುದು. ಗಮನಿಸಿ, ಹೇಗೆ ಆದರೂ ಈ ಕೀರ್ತನೆಯ ಪಠ್ಯದಲ್ಲಿ ಬತ್ಷೆಬಳ ಕಥೆಯ ನೇರವಾದ ವಾಕ್ಯಭಾಗವನ್ನು ಕಾಣುವುದಿಲ್ಲ.

ದಾವೀದನು ಈ ಕೀರ್ತನೆಯನ್ನು ದೇವರ ಬಳಿಯಲ್ಲಿ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಕೇಳಿಕೊಳ್ಳಲು ಕೇವಲ ಒಂದು ವೈಯಕ್ತಿಕ ಪಾಪದರಿಕೆಯ ಪ್ರಾರ್ಥನೆಯನ್ನಾಗಿ ರಚಿಸಿಲ್ಲ. ಆತನು ದೇವರ ಮಾರ್ಗಗಳ ಬಗ್ಗೆ ಇತರ ಪಾಪಿಗಳಿಗೆ ಬೋಧಿಸಲು ತನ್ನ ಅನುಭವವನ್ನು ಉಪಯೋಗಿಸಲು ಸಹ ಬಯಸಿದನು. ದೇವರು ಒಬ್ಬ ಕ್ಷಮಿಸುವ ದೇವರಾಗಿದ್ದಾನೆ. ಹಾಗಾಗಿ ಪಾಪಿಗಳು ಭರವಸೆಯಿಂದ ಕ್ಷಮಾಪಣೆಗಾಗಿ ಆತನೆಡೆಗೆ ಬರಬಹುದು ಮತ್ತು ಆತನ ನೀತಿವಂತಿಕೆಗಾಗಿ ಆತನನ್ನು ಕೊಂಡಾಡಬಹುದು.

ಅಳಿಸಿ ಬಿಡು (ವಚನ 1–9): ಇದು ಕ್ಷಮಾಪಣೆಗಾಗಿನ ಒಂದು ರೂಪಾಲಂಕಾರವಾಗಿದೆ. ಅಳಿಸಿ ಬಿಡುವ ಕಾರ್ಯವು ಬರವಣಿಗೆಯಿಂದ ಕಪ್ಪು ಹಲಿಗೆಯನ್ನು ಶುಚಿಗೊಳಿಸಿದಾಗ ಉಂಟಾಗುತ್ತದೆ. ಇಲ್ಲಿ ದೇವರನ್ನು ತನ್ನ ಆಳ್ವಿಕೆಯಲ್ಲಿ ನಡೆಯುವ ಘಟನೆಗಳ ದಾಖಲೆಗಳನ್ನು (**"**ಪುಸ್ತಕಗಳನ್ನು ಇಡುತ್ತಾನೆ**"**) ನಿರ್ವಹಿಸುವ ರಾಜನಾಗಿ ಚಿತ್ರಿಸಲಾಗಿದೆ (ಮಾನವೀಕರಣಕ್ಕೆ ಉದಾಹರಣೆ).

ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ (ವಚನ 3): ಈ ಹೇಳಿಕೆಯು **"**ನಾನು ಯಾವಾಗಲೂ ನನ್ನ ಪಾಪದ ಬಗ್ಗೆ ಯೋಚಿಸುತ್ತೇನೆ**"** ಅಥವಾ **"**ನನ್ನ ಪಾಪವು ಯಾವಾಗಲೂ ನನ್ನ ಮನಸ್ಸಿನಲ್ಲಿದೆ**"** ಎಂದು ಅರ್ಥೈಸುತ್ತದೆ.

ನಿನಗೇ ಕೇವಲ ನಿನಗೇ ತಪ್ಪು ಮಾಡಿದ್ದೇನೆ (ವಚನ 4): ಖಂಡಿತವಾಗಿ ಈ ಹೇಳಿಕೆಯು ಅಕ್ಷರಶಃವಾಗಿ ವ್ಯಾಖ್ಯಾನಿಸಲ್ಪಡಬಾರದು. ದಾವೀದನ ವ್ಯಭಿಚಾರವು ಜನರಿಗೆ ವಿರುದ್ಧವಾಗಿ (ಬತ್ಷೆಬೆ ಮತ್ತು ಆಕೆಯ ಗಂಡ ಊರೀಯ) ಮತ್ತು ದೇವರಿಗೆ ವಿರುದ್ಧವಾಗಿ ಮಾಡಿದ ಪಾಪವಾಗಿತ್ತು. ಆದರೆ ದಾವೀದನು ಇಲ್ಲೊಂದು ಆತ್ಮೀಕ ಹೇಳಿಕೆಯನ್ನು ಕೊಡುತ್ತಾನೆ. ಆತನ ಪಾಪವು ದೇವರ ಒಡಂಬಡಿಕೆಯನ್ನು ಉಲ್ಲಂಘಿಸುವಷ್ಟು ಗಂಭೀರವಾಗಿತ್ತು. ಹಾಗಾಗಿ ಪ್ರಾಥಮಿಕವಾಗಿ ಇದು ದಾವೀದನ ಒಡಂಬಡಿಕೆಯ ಕರ್ತನಾದ ದೇವರಿಗೆ ವಿರುದ್ಧವಾದ ಪಾಪವಾಗಿತ್ತು.

ಹಿಸ್ಸೋಪ್ ಗಿಡದ ಬರಲಿನಿಂದ ... ನನ್ನ ಅಶುದ್ಧತ್ವವನ್ನು ತೆಗೆದುಬಿಡು (ವಚನ 7): ಅಶುದ್ಧತ್ವವನ್ನು ತೆಗೆದುಬಿಡು ಎಂಬದಕ್ಕೆ ಇಬ್ರಿಯ ಪದದ ಅರ್ಥ **"**ಪಾಪರಹಿತನನ್ನಾಗಿ ಮಾಡು**"** ಎಂಬುದಾಗಿದೆ. ಮತ್ತು ಇದು ಶುದ್ಧೀಕರಣಶಾಸ್ತ್ರವನ್ನು ಸೂಚಿಸುತ್ತದೆ. ಶಾಸ್ತ್ರದ ಪ್ರಕಾರ ಒಬ್ಬ ವ್ಯಕ್ತಿಯು ಅಶುದ್ಧತೆ ಮೈಲಿಗೆಯಿಂದ ವಿಮುಕ್ತನಾಗಿದ್ದಾನೆಂದು ಘೋಷಿಸುವ ಸಂದರ್ಭದಲ್ಲಿ ಹಿಸ್ಸೋಪ್ ಗಿಡವನ್ನು ಬಳಸಲಾಗುತಿತ್ತು. ಉದಾ: ಕುಷ್ಠರೋಗ.

ನನ್ನನ್ನು ತೊಳೆ (ವಚನ 7): ಸಾಮಾನ್ಯವಾಗಿ ಬಟ್ಟೆಗಳನ್ನು ತೊಳೆಯಲು ಬಳಸುವ ಒಂದು ಹೇಳಿಕೆಯಾಗಿದೆ.

ವಿಮುಖನಾಗು (ವಚನ 9): **"**ನೋಡಬೇಡಿ**"** ಎಂಬ ಪದದ ರೂಪಕ (ಮಾನವೀಕರಣದ ಉದಾಹರಣೆ). ಇಲ್ಲಿ ಪದ್ಯದ ಮೊದಲ ಸಾಲು (**"**ನನ್ನ ಪಾಪಗಳಿಂದ ನಿನ್ನ ಮುಖವನ್ನು ಮರೆಮಾಡು**"**) ಪದ್ಯದ ಎರಡನೇ ಸಾಲಿಗೆ ಸಮಾನಾರ್ಥಕವಾಗಿದೆ (**"**ನನ್ನ ಎಲ್ಲಾ ಅಕ್ರಮಗಳನ್ನು ಅಳಸಿಹಾಕು**"**).

ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು (ವಚನ 10): **"**ನಿರ್ಮಿಸು**"** ಎಂಬುದಕ್ಕಾಗಿನ ಇಬ್ರಿಯ ಪದವನ್ನು ಶೂನ್ಯದಿಂದ ಏನನ್ನಾದರೂ ಸೃಷ್ಟಿಸುವುದರ ಬಗ್ಗೆ ಉಪಯೋಗಿಸಲಾಗಿದೆ. ಕೇವಲ ದೇವರು ಮಾತ್ರ ಸೃಷ್ಟಿಸಬಲ್ಲನೆಂದು ಹಳೇ

ಒಡಂಬಡಿಕೆಯು ನಮಗೆ ಬೋಧಿಸುತ್ತದೆ. ಆತನೇ ಸೃಷ್ಟಿಕರ್ತನಾಗಿದ್ದಾನೆ. ಹೃದಯವು ಸಂಪೂರ್ಣ ವ್ಯಕ್ತಿಯನ್ನು ಪ್ರತಿನಿಧಿಸುತ್ತದೆ.

ವಚನ 11: ದಾವೀದನಿಗೆ ಕೇಡನ್ನು ಬಯಸಿದ ಅರಸನಾದ ಸೌಲನಿಗೆ ಏನಾಯಿತು ಎಂಬುದರೊಂದಿಗೆ ಹೋಲಿಸಿ (1 ಸಮುವೇಲ. 16:1, 13–14, 2 ಸಮುವೇಲ. 7:15).

ವಚನ 16–17: ಕೀರ್ತನೆ 40:6–8 ರೊಂದಿಗೆ ಹೋಲಿಸಿ (ಆ ಕೀರ್ತನೆಯ ಅಧ್ಯಯನ ಮತ್ತು ಈ ವಚನಗಳ ಕುರಿತಾದ ಪ್ರಶ್ನೆಗಳನ್ನು ನೋಡಿ).

ನ್ಯಾಯವಾದ ಯಜ್ಞಗಳನ್ನು (ವಚನ 19): ಈ ಯಜ್ಞಗಳನ್ನು ಪಶ್ಚಾತ್ತಾಪಗೊಂಡ ಹೃದಯದಿಂದ ಆತನ ಕ್ಷಮೆ ಮತ್ತು ಕರುಣೆಗಳಿಗಾಗಿ ದೇವರನ್ನು ಕೊಂಡಾಡುತ್ತಾ ಅರ್ಪಿಸಲಾಗುತಿತ್ತು.

ಪ್ರಶ್ನೆಗಳು

1. ನೀವು ಕೀರ್ತನೆ 51 ಅನ್ನು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯಲ್ಲಿ ಯಾರನ್ನು ಸಂಬೋಧಿಸಲಾಗಿದೆ?
3. ಈ ಕೀರ್ತನೆಯಲ್ಲಿನ ದಾವೀದನ ಮನವಿ ಅಥವಾ ವಿಜ್ಞಾಪನೆಗಳನ್ನು ಪಟ್ಟಿ ಮಾಡಿರಿ. ನಿಮ್ಮ ಸತ್ಯವೇದದಿಂದ ಉಲ್ಲೇಖಿಸುವ ಬದಲು ನಿಮ್ಮ ಸ್ವಂತ ಪದಗಳನ್ನು ಬಳಸಲು ಪ್ರಯತ್ನಿಸಿ.
4. 3–8 ನೇ ವಚನಗಳಲ್ಲಿ ದಾವೀದನು ಪಾಪದ ಬಗ್ಗೆ ಏನೆಂದು ತಿಳಿಸುತ್ತಾನೆ? ನಿಮ್ಮ ಸತ್ಯವೇದದಿಂದ ಉಲ್ಲೇಖಿಸುವ ಬದಲು ನಿಮ್ಮ ಸ್ವಂತ ಪದಗಳನ್ನು ಬಳಸಲು ಪ್ರಯತ್ನಿಸಿ.
5. ಕೀರ್ತನೆ 51:17 ಮತ್ತು 19 ರ ಪ್ರಕಾರ ದೇವರು ತನ್ನ ಜನರಿಂದ ಯಾವ ರೀತಿಯ ಯಜ್ಞಗಳನ್ನು ನೋಡಲು ಬಯಸುತ್ತಾನೆ?

ಕೀರ್ತನೆ 51 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಹಳೆಯ ಒಡಂಬಡಿಕೆಯ ಕಾಲಗಳಲ್ಲಿ ಈ ಕೀರ್ತನೆಯನ್ನು ಹೇಗೆ ಉಪಯೋಗಿಸಲಾಗಿದೆ ಎಂದು ನೀವು ಭಾವಿಸುತ್ತೀರಿ? ನೀವು ಏಕೆ ಹಾಗೆ ಭಾವಿಸುತ್ತೀರಿ?
2. 1–2 ನೇ ವಚನಗಳಲ್ಲಿ ಬಳಸಲಾದ ಶಬ್ದಕೋಶಗಳನ್ನು ಅಧ್ಯಯನ ಮಾಡಿ. ನಿಮ್ಮ ಅಭಿಪ್ರಾಯಗಳೇನು?
3. ಕನ್ನಡದ **ಸತ್ಯವೇದವು** ಮತ್ತು **ಪವಿತ್ರ ಗ್ರಂಥ** ಎಂಬ ಎರಡು ಭಾಷಾಂತರಗಳು 5 ನೇ ವಚನವನ್ನು ಹೇಗೆ ಅನುವಾದಿಸಿವೆ ಎಂಬುದನ್ನು ಹೋಲಿಕೆ ಮಾಡಿ. ನಿಮ್ಮ ಅಭಿಪ್ರಾಯಗಳೇನು?
4. ಈ ಕೀರ್ತನೆಯ ಮೊದಲನೆಯ ಭಾಗ (ವಚನ 1–12) ಮತ್ತು ಎರಡನೇ ಭಾಗ (ವಚನ 13–19) ಗಳ ನಡುವಿನ ತಾರ್ಕಿಕವಾದ ಸಂಪರ್ಕವನ್ನು ವಿವರಿಸಿರಿ.
5. ಯೆರೂಸಲೇಮಿನ ಬಗ್ಗೆ (ವಚನ 18–19) ದಾವೀದನ ಕಡೆಯ ವಿಜ್ಞಾಪನೆಯನ್ನು ಆಧುನಿಕ ದಕ್ಷಿಣ ಭಾರತದ ಸಭಾ ಅನ್ಯೋನ್ಯತೆಯ ಸನ್ನಿವೇಶಕ್ಕೆ ನೀವು ಹೇಗೆ ಅನ್ವಯಿಸುವಿರಿ?
6. ಕೀರ್ತನೆ 51 ಮತ್ತು ಈ ಅಧ್ಯಯನವು ಪಾಪದ ಗಂಭೀರತೆ, ದೇವರ ಕ್ಷಮಾಪಣೆಯ ಪ್ರಾಮುಖ್ಯತೆ ಮತ್ತು ನಿಜವಾದ ಆತ್ಮೀಕ ಆರಾಧನೆಯ ಮಹತ್ವದ ಬಗ್ಗೆ ಆಳವಾದ ತಿಳುವಳಿಕೆಯನ್ನು ತಲುಪಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
7. ಕೀರ್ತನೆ 51 ಮತ್ತು ಈ ಅಧ್ಯಯನವು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

ಕೀರ್ತನೆ 51 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನಮ್ಮ ಅಧುನಿಕ ಸಮಾಜದಲ್ಲಿ ಪಾಪವು ಅಷ್ಟೇನು ದೊಡ್ಡ ಸಂಗತಿಯಲ್ಲ. ಪಾಪಮಯ ಕಾರ್ಯಗಳಲ್ಲಿ ಸಿಕ್ಕಿಕೊಳ್ಳವುದು ಬಹುಶಃ ತೊಂದರೆಗೀಡುಮಾಡಬಹುದು ಮತ್ತು ಕಾನೂನಾತ್ಮಕ ಪರಿಣಾಮಗಳನ್ನು ಎದುರಿಸಬೇಕಾಗಬಹುದು (ಉದಾ: ಲಂಚ, ವ್ಯಭಿಚಾರ). ಆದರೆ ನೀವು ಸಿಕ್ಕಿಬೀಳುವವರೆಗೂ ಯಾರೂ ಸಹ ನಿಜವಾಗಲು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ. ಈ ರೀತಿಯ ನೈತಿಕ ಸಂಗತಿಯು ನಮ್ಮ ಸಭೆ ಮತ್ತು ಸಂಸ್ಥೆಗಳ ಸಂಸ್ಕೃತಿಗಳಲ್ಲಿ ಸಹ ಹರಡಿ ಹೋಗಿದೆ. ಕೀರ್ತನೆ 51 ರ ಬೆಳಕಿನಡಿಯಲ್ಲಿ ಈ ರೀತಿಯ ಪಾಪದೆಡೆಗಿನ ಆಧುನಿಕ ಸ್ವಭಾವವನ್ನು ವಿಮರ್ಶಿಸಿರಿ. ಈ ಸಂಗತಿ ಮತ್ತು ಸ್ವಭಾವಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

2. ಸ್ವತಃ ನಿಮ್ಮ ಮತ್ತು ನಿಮ್ಮ ಸಭೆಯ ಬಗ್ಗೆ ಏನು? ಕೀರ್ತನೆ 51 ರಲ್ಲಿ ಪಾಪದೊಂದಿಗಿನ ನಿಮ್ಮ ಸ್ವಭಾವವನ್ನು ನೋಡಿಕೊಳ್ಳಿರಿ. ಪಾಪದ ಗಂಭೀರತೆಯನ್ನು ಅರಿತುಕೊಳ್ಳಲು ಸಹಾಯಿಸುವಂತೆ ದೇವರನ್ನು ಕೇಳಿಕೊಳ್ಳಿರಿ. ಅರಿಕೆಮಾಡದ ಪಾಪದೊಂದಿಗಿನ ದುಃಖಮಯ ಜೀವಿತದಿಂದ ದೇವರ ಕ್ಷಮಾಪಣೆಯ ನಿಜವಾದ ಸಂತೋಷಕ್ಕೆ ಪ್ರಮುಖ 3 ಹಂತಗಳಿವೆ ಎಂಬುದನ್ನು ಅರಿತುಕೊಳ್ಳಲು ದೇವರನ್ನು ಕೇಳಿ:

   ಅ. ನಿಮ್ಮ ಜೀವಿತದಲ್ಲಿ ಪಾಪದ ಕುರಿತು ಎಚ್ಚರವಾಗಿರುವುದು ಮತ್ತು ಅರಿತುಕೊಳ್ಳುವುದು.

   ಆ. ನೀವು ಮಾಡಿದ ಪಾಪಗಳನ್ನು ಅರಿಕೆ ಮಾಡುವುದು.

   ಇ. ನಿಮ್ಮ ಪಾಪಗಳಿಗಾಗಿ ದೇವರ ಕ್ಷಮಾಪಣೆಯನ್ನು ಹೊಂದುವುದು.

3. "ನಿಜವಾದ ಆರಾಧನೆ" ಮತ್ತು ನ್ಯಾಯವಾದ ಯಜ್ಞಗಳ ಫಲವಾಗಿ ನಿಮ್ಮ ಸಭೆಯು ಹೇಗೆ ಬೆಳೆಯಬಹುದು ಮತ್ತು ಇನ್ನೂ ಹೆಚ್ಚಾಗಿ ದೇವರ ಆಶೀರ್ವಾದಗಳನ್ನು ಅನುಭವಿಸಬಹುದು ಎಂಬುದನ್ನು ವಿಮರ್ಶಿಸಿರಿ. ನಿಮ್ಮ ಸಭೆಯಲ್ಲಿ ಆರಾಧನೆಯ ಆತ್ಮ/ಮನಸ್ಸನ್ನು "ಕುಗ್ಗಿದ ಮನಸ್ಸಿನ, ಜಜ್ಜಿಹೋದ ಮನಸ್ಸೆಂಬ ಯಜ್ಞ" ವೆಂಬುದಾಗಿ ವರ್ಣಿಸಬಹುದೆಂದು ನೀವು ಪ್ರಾಮಾಣಿಕತೆಯಿಂದ ಹೇಳಬಲ್ಲಿರಾ? ಅಲ್ಲದೆ ದೇವರು ಇಷ್ಟಪಡದೇ ಇರುವ ನಿಮ್ಮ ಸಭೆಯಲ್ಲಿನ ಕಾರ್ಯಚಟುವಟಿಕೆಗಳನ್ನು ಸಹ ವಿಮರ್ಶಿಸಿರಿ.

ಅಸೈನ್‌ಮೆಂಟ್: ಕೀರ್ತನೆ 51

ಕೀರ್ತನೆ 51 ಅನ್ನು ಆಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶವನ್ನು) ಸಿದ್ಧಪಡಿಸಿರಿ.

ಕ್ರಿಸ್ತನನ್ನು ಕುರಿತು ಹೇಳುವ ಕೀರ್ತನೆಗಳು

ನಾವು ಎದುರಿಸುವ ಒಂದು ಪ್ರಶ್ನೆಯೇನೆಂದರೆ ಕೀರ್ತನೆಗಳ ಪುಸ್ತಕವು ಯೇಸು ಕ್ರಿಸ್ತನ ಬಗ್ಗೆ ಮಾತನಾಡುತ್ತದಾ? ಉತ್ತರ ಹೌದು ಎಂಬುದಾಗಿದೆ. ಇದು ಖಂಡಿತವಾಗಲೂ ಕ್ರಿಸ್ತನ ಬಗ್ಗೆ ವಿಭಿನ್ನವಾದ ರೀತಿಯಲ್ಲಿ ಮಾತನಾಡುತ್ತದೆ. ಆದರೆ ಕೀರ್ತನೆಗಾರನು ಹಳೇ ಒಡಂಬಡಿಕೆಯ ಪ್ರವಾದನಾ ಪುಸ್ತಕಗಳಲ್ಲಿ ಮಾತನಾಡುವುದಕ್ಕಿಂತ ವಿಭಿನ್ನವಾಗಿ ಮಾತನಾಡುತ್ತಾನೆ. ಪ್ರವಾದನೆಗಳಲ್ಲಿ ಮೆಸ್ಸೀಯ ಮತ್ತು ದೇವರ ಭವಿಷ್ಯದ ಆಳ್ವಿಕೆಯ ಬಗ್ಗೆ ದೈವೋಕ್ತಿಗಳಿವೆ. ಆದರೆ ಕೀರ್ತನೆಗಳನ್ನು ಪ್ರವಾದನಾ ಪುಸ್ತಕಗಳ ನಡುವೆ ಎಂದಿಗೂ ಸೇರಿಸಲ್ಪಟ್ಟಿಲ್ಲ.

ದಾವೀದನ ಸಿಂಹಾಸನದ ಮೇಲಿನ ರಾಜನ ಕುರಿತು ಕೀರ್ತನೆ ಹೇಳುವಾಗ ಇದು ಆತನೇ ದೇವಜನರನ್ನು ಮತ್ತು ಜನಾಂಗಗಳನ್ನು ಆಳುವುದಕ್ಕಾಗಿ ನೇಮಿಸಲ್ಪಟ್ಟನೆಂದು ಹೇಳುತ್ತದೆ.

ಅನಂತರ ಆತನು ಸಿಟ್ಟಾಗಿ –

ನಾನು ನೇಮಿಸಿದ ಅರಸನನ್ನು

ಚೀಯೋನೆಂಬ ನನ್ನ ಪರಿಶುದ್ಧ ಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು

(ಕೀರ್ತನೆ 2:5)

ದೇವರೇ, ಅರಸನಿಗೆ ನಿನ್ನ ನ್ಯಾಯವನ್ನು ಕಲಿಸಿಕೊಡು;

ರಾಜಕುಮಾರನಾದ ಅವನಿಗೆ ನಿನ್ನ ನೀತಿಯನ್ನು ಅನುಗ್ರಹಿಸು.

ಅವನು ನಿನ್ನ ಜನರಿಗೆ ನೀತಿಯಿಂದಲೂ

ಕುಗ್ಗಿಹೋದ ನಿನ್ನವರಿಗೆ ನ್ಯಾಯವಾಗಿಯೂ ತೀರ್ಪು ಕೊಡಲಿ.

(ಕೀರ್ತನೆ 72: 1–2)

ಯೆಹೋವನು ನನ್ನ ಒಡೆಯನಿಗೆ –

ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ

ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು.

(ಕೀರ್ತನೆ 110:1)

ಈ ಅರಸತ್ವದ ಮೂಲಕ, ದಾವೀದನು ಮತ್ತು ಆತನ ಸಾಮ್ರಾಜ್ಯದ ಮೂಲಕ ದೇವರು ಏನನ್ನು ಸಾಧಿಸುವನೆಂಬುದನ್ನು ಸಹ ಕೀರ್ತನೆಗಳು ಹೇಳುತ್ತವೆ. ಸೆರೆ ಮತ್ತು ಸೆರೆಯ ನಂತರದ ಸಮಯದಲ್ಲಿ ಯೆರೂಸಲೇಮಿನಲ್ಲಿ ಆಳುವ ಅರಸನೇ ಇಲ್ಲದಿರುವಾಗ, ಪ್ರವಾದಿಗಳು ಹೇಳಿದಂತೆ ಭವಿಷ್ಯದಲ್ಲಿ ಈತನಲ್ಲಿಯೇ ದಾವೀದನೊಂದಿಗಿನ ದೇವರ ಒಡಂಬಡಿಕೆಯು ನೆರವೇರುವದೆಂದು ಹೇಳುವ ದಾವೀದನ ಕುಮಾರನೊಂದಿಗೆ ಮಾತನಾಡುತ್ತವೆ.

ನೀನು ನುಡಿದದ್ದೇನಂದರೆ –

ನಾನು ಆರಿಸಿಕೊಂಡ ಸೇವಕನಾದ ದಾವೀದನ ಸಂಗಡ

ಒಡಂಬಡಿಕೆಮಾಡಿಕೊಂಡು ಆಣೆಯಿಟ್ಟು –

ಶಾಶ್ವತವಾಗಿ ನಿನ್ನ ಸಂತತಿಯನ್ನು ಸ್ಥಾಪಿಸುವೆನು,

ತಲತಲಾಂತರಗಳಿಗೂ ನಿನ್ನ ಸಿಂಹಾಸನವನ್ನು ಸ್ಥಿರಪಡಿಸುವೆನು.

(ಕೀರ್ತನೆ 89:3–4)

ಅವನು ನನ್ನೊಡನೆ – ನನ್ನ ತಂದೆಯೂ ದೇವರೂ

ಆಶ್ರಯದುರ್ಗವೂ ನೀನೇ ಎಂದು ಹೇಳುವನು.

ನಾನಾದರೋ ಅವನನ್ನು ಜ್ಯೇಷ್ಠಪುತ್ರನನ್ನೂ

ಭೂರಾಜರಲ್ಲಿ ಉನ್ನತನನ್ನೂ ಮಾಡಿಕೊಳ್ಳುವೆನು.

(ಕೀರ್ತನೆ 89:26–27)

ಹೊಸ ಒಡಂಬಡಿಕೆಯು ಈ ಕೀರ್ತನೆಗಳನ್ನು ಯೇಸು ಕ್ರಿಸ್ತನ ಬಗ್ಗೆ ಸಾಕ್ಷಿಯಾಗಿ ಉಪಯೋಗಿಸಿವೆ. ಯೇಸು ಕ್ರಿಸ್ತನಲ್ಲಿಯೇ ಈ ಕೀರ್ತನೆಗಳ ಪ್ರವಾದನಾ ನುಡಿಗಳು ನೆರವೇರಿವೆ.

ಕೀರ್ತನೆಗಳಲ್ಲಿ ನೀತಿವಂತನು ಬಾಡುವುದನ್ನು ನಾವು ಕಾಣುತ್ತೇವೆ. ತಾವು ನಿರ್ಮಲರಾಗಿರುವ ನಿಮಿತ್ತ ಅವರು ಬಾಧೆಪಡುತ್ತಾರೆ. ಅವರು ತಮ್ಮ ವಿರೋಧಿಗಳಿಗೆ ಯಾವ ತಪ್ಪೂಮಾಡಿಲ್ಲ. ಅವರು ಇಕ್ಕಟ್ಟಿನಲ್ಲಿ ದೇವರಿಗೆ ಮೊರೆಯಿಡುವ ಮತ್ತು ದೇವರಲ್ಲಿ ಭರವಸವಿಡುವ ದೀನರ ಮಧ್ಯದಲ್ಲಿರುವವರಾಗಿದ್ದಾರೆ. ಕೀರ್ತನೆ 22 ಮತ್ತು 69 ಶತ್ರುಗಳ ಮತ್ತು ದುಷ್ಟಲೋಕದಲ್ಲಿ ದೇವರ ಸೇವಕರು ಪಡುವ ಬಾಧೆಯನ್ನು ವ್ಯಕ್ತಪಡಿಸುತ್ತವೆ.

ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟಿದ್ದೀ?
ನೀನು ಯಾಕೆ ನನಗೆ ಸಹಾಯ ಮಾಡದೆಯೂ ನನ್ನ ಕೂಗನ್ನು ಕೇಳದೆಯೂ
ದೂರವಾಗಿದ್ದೀ?

(ಕೀರ್ತನೆ 22:1)

ನನ್ನನ್ನು ನೋಡುವವರೆಲ್ಲರೂ ಹಾಸ್ಯಮಾಡುತ್ತಾರೆ;
ಅವರು ಓರೇ ತುಟಿಮಾಡಿ ತಲೆ ಆಡಿಸುತ್ತಾರೆ.

(ಕೀರ್ತನೆ 22:7)

ನಾಯಿಗಳು ನನ್ನನ್ನು ಸುತ್ತಿಕೊಂಡಿವೆ;
ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ.
ನನ್ನ ಕೈಕಾಲುಗಳನ್ನು ತಿವಿದಿದ್ದಾರೆ.
ನನ್ನ ಎಲುಬುಗಳೆನ್ನೆಲ್ಲಾ ಎಣಿಸುವದಕ್ಕಾಗುವದು;
ಅವರೋ ನನ್ನನ್ನು ನೋಡಿ ನೋಡಿ ಹಿಗ್ಗುತ್ತಾರೆ.
ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲುಮಾಡಿಕೊಳ್ಳುತ್ತಾರೆ;
ನನ್ನ ಅಂಗಿಗೋಸ್ಕರ ಚೀಟುಹಾಕುತ್ತಾರೆ.

(ಕೀರ್ತನೆ 22:16–18)

ನನಗೆ ಉಣ್ಣುವುದಕ್ಕೆ ಕಹಿಯಾದ ವಸ್ತುವನ್ನೂ
ಬಾಯಾರಿದಾಗ ಹುಳಿತದ್ರಾಕ್ಷಾರಸವನ್ನೂ ಕೊಟ್ಟರು.

(ಕೀರ್ತನೆ 69:21)

ಯೇಸು ಕ್ರಿಸ್ತನು ಶರೀರಧಾರಿಯಾಗಿ ಬಂದಾಗ ಆತನು ಲೋಕದಲ್ಲಿನ ದೀನರೊಂದಿಗೆ ತನ್ನನ್ನು ಗುರುತಿಸಿಕೊಂಡನು. ಬೇರೆ ಎಲ್ಲರಿಗಿಂತಲೂ ಹೆಚ್ಚಾಗಿ ಆತನು ದೇವರ ನೀತಿವಂತ ಸೇವಕನಾದನು. ಹಾಗಾಗಿ ವಿಶೇಷವಾದ ರೀತಿಯಲ್ಲಿ ಈ ಪ್ರಾರ್ಥನೆಗಳು ಕ್ರಿಸ್ತನ ಪ್ರಾರ್ಥನೆಗಳಾದವು. ಈ ಪ್ರಾರ್ಥನೆಗಳು ಹೇಳುವ ಬಾಧೆ ಮತ್ತು ಬಿಡುಗಡೆಯು ಕ್ರಿಸ್ತನಲ್ಲಿ ನೆರವೇರಿದವು. ಆದರೆ ಈಗಲೂ ಸಹ ತಮ್ಮ ಶಿಲುಬೆಯನ್ನು ಹೊತ್ತು, ಕ್ರಿಸ್ತನನ್ನು ಹಿಂಬಾಲಿಸುವ ಕ್ರಿಸ್ತನ ಹಿಂಬಾಲಕರ ಪ್ರಾರ್ಥನೆಗಳಾಗಿ ಮುಂದುವರಿಯುತ್ತಿವೆ.

ಪ್ರಶ್ನೆಗಳು

ಈ ಪ್ರಶ್ನೆಗಳ ಉತ್ತರಗಳನ್ನು ಮೇಲ್ಕಂಡ ವಾಕ್ಯಭಾಗಗಳಲ್ಲಿ ನಾವು ಕಾಣಬಹುದು. ಆದರೆ ಅಲ್ಲಿ ನೋಡದೇ ನೀವೇ ಇದಕ್ಕೆ ಉತ್ತರಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದರೆ ನೀವು ಹೆಚ್ಚಾಗಿ ಕಲಿಯುವಿರಿ.

1. ಕೀರ್ತನೆಗಳು ಕ್ರಿಸ್ತನ ಬಗ್ಗೆ ಪ್ರವಾದನೆಗಳಿಗಿಂತಲೂ ವಿಭಿನ್ನವಾಗಿ ಮಾತನಾಡುತ್ತವೆ. ಅದು ಹೇಗೆ ಎಂದು ವಿವರಿಸಿರಿ.
2. ಕೀರ್ತನೆಗಳು ಕ್ರಿಸ್ತನ ಬಗ್ಗೆ ಹೇಗೆ ಮಾತನಾಡುತ್ತವೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡಿರಿ.
3. ಯೇಸು ಕ್ರಿಸ್ತನು ದೇವರ ದೀನಜನರೊಂದಿಗೆ ತನ್ನನ್ನು ಗುರುತಿಸಿಕೊಳ್ಳಲು ಹೇಗೆ ಕೀರ್ತನೆಯನ್ನು ಉಪಯೋಗಿಸಿದನೆಂದು ವಿವರಿಸಿರಿ.

ಅಸೈನ್‌ಮೆಂಟ್: ಕ್ರಿಸ್ತನನ್ನು ಕುರಿತು ಹೇಳುವ ಕೀರ್ತನೆಗಳು

ಮೆಸ್ಸೀಯನದು ಎಂದು ಕರೆಯಲ್ಪಡುವ ಅನೇಕ ಕೀರ್ತನೆಗಳಿವೆ, ಅವು ಮೆಸ್ಸೀಯನ ಬಗ್ಗೆ ಮಾತನಾಡುತ್ತವೆ ಮತ್ತು ಅದನ್ನು ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನಿಗಾಗಿ ಉಪಯೋಗಿಸಲಾಗಿದೆ. ಕೀರ್ತನೆಗಳ ಕೆಲವು ಪ್ರಮುಖ ವಚನಗಳ ಅಧ್ಯಯನವನ್ನು ಆಧರಿಸಿ **"ಕೀರ್ತನೆಗಳಲ್ಲಿ ಕ್ರಿಸ್ತನು"** ಎಂಬ ಒಂದು ಧ್ಯಾನಮಾಲಿಕೆಯನ್ನು ಬರೆಯಿರಿ. ಸತ್ಯವೇದ ಶಬ್ದಕೋಶ ಮತ್ತು ಟಿಪ್ಪಣಿಗಳನ್ನು ನೀವು ಬಳಸಬಹುದು.

ಕೀರ್ತನೆ 73

ಪೀಠಿಕೆ ಮತ್ತು ಟಿಪ್ಪಣಿಗಳು

ಹಿಂದಿನ ಈ ಪಠ್ಯಪುಸ್ತಕದಲ್ಲಿ (**ಇಬ್ರಿಯ ಜ್ಞಾನ ಮತ್ತು ಮನುಷ್ಯನ ಅನುಭವ** ಎಂಬ ಅಧ್ಯಾಯ ನೋಡಿರಿ) ಈ ಕೀರ್ತನೆಯ ಕೆಲವು ಭಾಗಗಳನ್ನು ಅಭ್ಯಾಸಿಸಿದೆವು (ವಚನ 1–5, 16–17 ಮತ್ತು 25–28). ಮತ್ತೊಮ್ಮೆ ಆ ಅಧ್ಯಾಯವನ್ನು ನೋಡಿದರೆ ನಿಮಗದು ಪ್ರಯೋಜನಕಾರಿಯಾಗಲಿದೆ. ಇಲ್ಲಿ ಈ ಸುಂದರವಾದ ಮತ್ತು ಕುತೂಹಲಕಾರಿ ವಾಕ್ಯಭಾಗದ ಇನ್ನೂ ಕೆಲವು ಹೆಚ್ಚುವರಿ ಅಂಶಗಳನ್ನು ನೋಡಲಿಕ್ಕಿದ್ದೇವೆ.

ಕೀರ್ತನೆಗಳು ಪುಸ್ತಕದ ತೃತೀಯ ಭಾಗದ ಪ್ರಾರಂಭದಲ್ಲಿ ಈ 73 ನೇ ಕೀರ್ತನೆ ಬರುತ್ತದೆ. ಅಲ್ಲದೇ ಆಸಾಫನ **"ಕೀರ್ತನೆಗಳ ಸಂಗ್ರಹದಲ್ಲಿ"** ಇದು ಮೊದಲನೇಯದಾಗಿದೆ. ನಾವು ಸತ್ಯವೇದದಲ್ಲಿ ಆಸಾಫನ ಇನ್ನೊಂದು ಕೀರ್ತನೆಯನ್ನು ಕಾಣುತ್ತೇವೆ, ಅದು ಕೀರ್ತನೆ 50. ದಾವೀದನ ಮೂವರು ಗಾಯಕರಲ್ಲಿ ಆಸಾಫನೂ ಒಬ್ಬನಾಗಿದ್ದನು, ಉಳಿದ ಇಬ್ಬರೆಂದರೆ ಯೆದುತೂನ್ (ಕೀರ್ತನೆ 39, 62, 71) ಮತ್ತು ಹೇಮಾನ್ (ಕೀರ್ತನೆ 88). ದಾವೀದನ ಗಾಯಕರು ಮತ್ತು ಸಂಗೀತಗಾರರ ವರ್ಗಕ್ಕಾಗಿ 2 ಪೂರ್ವಕಾಲವೃತ್ತಾಂತ ಅಧ್ಯಾಯ 25 ಅನ್ನು ನೋಡಿರಿ. ಅರಸನಾದ ಸೊಲೊಮೋನನು ಯೆರೂಸಲೇಮಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟ ದೇವಾಲಯಕ್ಕೆ ಒಡಂಬಡಿಕೆಯ ಮಂಜೂಷವನ್ನು ತಂದಾಗ ಸಹ ಈ ಮೂವರು ಲೇವಿಯರು ಸಂಗೀತ/ವಾದ್ಯಬಾರಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದರು (2 ಪೂರ್ವಕಾಲವೃತ್ತಾತ 5:12–13).

ಹೆಚ್ಚಿನ ವ್ಯಾಖ್ಯಾನಕಾರರು 73 ನೇ ಕೀರ್ತನೆಯನ್ನು ಒಂದು ಜ್ಞಾನದ ಕೀರ್ತನೆಯನ್ನಾಗಿ ವರ್ಗೀಕರಿಸುತ್ತಾರೆ. ಇದಕ್ಕೆ ಕಾರಣವೇನೆಂದರೆ ಇದು ಜ್ಞಾನ ಸಾಹಿತ್ಯದ ರೂಪದಲ್ಲಿದೆ – ದುಷ್ಟರು (ಪಾಪಿಗಳು), ಜ್ಞಾನಿಗಳು (ದೇವರಲ್ಲಿ ಭಯಭಕ್ತಿಯುಳ್ಳವರು) ಮತ್ತು ಅವರ ಅಂತ್ಯವನ್ನು ತದ್ವಿರುದ್ಧವಾಗಿ ತೋರಿಸುತ್ತದೆ. ದುಷ್ಟರ ಅಂತ್ಯವು ನಾಶನವಾಗಿದೆ, ಆದರೆ ದೇವರಿಗೆ ಭಯಪಡುವವರಿಗೆ ದೇವರ ಸಾನಿಧ್ಯವೇ ಭಾಗ್ಯವಾಗಿದೆ. ಈ ಕೀರ್ತನೆಯ ದೈವಶಾಸ್ತ್ರೀಯ ಅಂಶವು ಯೋಬನಂತೆಯೇ ಇದೆ. ನೀತಿವಂತನು ಬಾಧೆಪಡುವುದು, ಆದರೆ ದುಷ್ಟನು ಅಭಿವೃದ್ಧಿಹೊಂದುವ ಅನುಭವವು ಕೀರ್ತನೆಗಾರನು ದೇವರ ನೀತಿವಂತಿಕೆಯ ಮೇಲೆ ಸಂಶಯಪಡುವುದಕ್ಕೆ ಕಾರಣವಾಗುತ್ತದೆ. ಇದು ಕೀರ್ತನೆಗಾರನ ಪ್ರಾಯೋಗಿಕ ಅನುಭವವನ್ನು, ಆತನ ಸಂಶಯ ಮತ್ತು ಹೋರಾಟಗಳನ್ನು ತೀರಾ ವೈಯಕ್ತಿಕವಾದ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ. ಇದರ ಭಾವವು ಕೃತಜ್ಞತಾ ಸ್ತುತಿಗೀತೆಯನ್ನು ಜ್ಞಾಪಿಸುತ್ತದೆ. ಕೀರ್ತನೆಗಾರನು ನಂಬಿಕೆಯ ಇಕ್ಕಟ್ಟಿಗೆ ಹೋಗಿದ್ದನು ಮತ್ತು ಈಗ ದೇವರ ಪರಿಶುದ್ಧಾಲಯದಲ್ಲಿ ದೇವರ ಸಾನಿಧ್ಯದಲ್ಲಿ ಅದಕ್ಕೆ ಪರಿಹಾರವನ್ನು ಕಂಡುಕೊಂಡದಕ್ಕಾಗಿ ಕೃತಜ್ಞತಾ ಭಾವವುಳ್ಳವನಾಗಿದ್ದಾನೆ.

ನಿರ್ಮಲ ಚಿತ್ತರು (ವಚನ 1): **"**ನೀತಿವಂತರು**"** ಇದಕ್ಕೆ ಸಮಾನಾಂತರವಾಗಿದೆ.

ನನ್ನ ಕಾಲುಗಳು ಜಾರಿದವುಗಳೇ, ನನ್ನ ಹೆಜ್ಜೆಗಳು ತಪ್ಪಿದವುಗಳೇ (ವಚನ 2): ಈ ಚಿತ್ರಣವು ಜೀವಮಾರ್ಗದ ನಡಿಗೆಯಾಗಿದೆ.

ನಿನ್ನ ಮಕ್ಕಳು/ಭಕ್ತಕುಲ (ವಚನ 15): ದೇವರ ನಂಬಿಗಸ್ತ ಮತ್ತು ದೀನಜನರು.

ನನ್ನ ಪಾಲು (ವಚನ 26): ಕೀರ್ತನೆಗಾರನು ಒಬ್ಬ ಲೇವಿಯಾಗಿದ್ದನು. ವಾಗ್ದಾತ್ತ ದೇಶದಲ್ಲಿ ಲೇವಿಯರಿಗೆ ಯಾವುದೇ ಪಾಲು ಸಿಗಲಿಲ್ಲ, ಬದಲಾಗಿ ದೇವರೇ ಅವರ ಪಾಲಾಗಿದ್ದನು. ಕಾರ್ಯತಃ ಇದರರ್ಥ ಇತರ ಇಸ್ರಾಯೇಲ್ಯರು ದೇವರಿಗಾಗಿ ಕೊಟ್ಟ ದಶಮಾಂಶದಿಂದಲೇ ಇವರು ಬದುಕು ಸಾಗಿಸುತ್ತಿದ್ದರೂ ಆತ್ಮೀಕವಾಗಿ ಇದರರ್ಥವೆಂದರೆ – ಅವರ ಇಡೀ ಜೀವನವೇ ದೇವರನ್ನು ಸೇವಿಸಲು ಸಮರ್ಪಿಸಲ್ಪಟ್ಟಿತ್ತು. ಹಾಗಾಗಿ ಅವರು ವಿಶೇಷ ರೀತಿಯಲ್ಲಿ ದೇವರಿಗೆ ಮೀಸಲಾಗಿದ್ದರು ಮತ್ತು ದೇವರು ಅವರಿಗೆ ಮೀಸಲಾಗಿದ್ದನು. ಇಲ್ಲಿ ಕೀರ್ತನೆಗಾರನು ದೇವರೇ ತನ್ನ ಶರಣನೂ, ಪಾಲೂ ಎಂದು ಹೇಳುತ್ತಾನೆ.

ಪ್ರಶ್ನೆಗಳು

1. ನೀವು ಕೀರ್ತನೆ 73 ಅನ್ನು ಹೇಗೆ ರಚಿಸುತ್ತೀರಿ?

2. ಮೊದಲ ವಚನದಲ್ಲಿ ಕೀರ್ತನೆಗಾರನು ಯಾವ "ನಂಬಿಕೆಯ ವಾಕ್ಯವನ್ನು" ಹೇಳುತ್ತಾನೆ?

3. 3–12 ನೇ ವಚನಗಳಲ್ಲಿ ದುಷ್ಟರನ್ನು ಹೇಗೆ ವಿವರಿಸಲಾಗಿದೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ ಸಾರಾಂಶವನ್ನು ಮಾಡಿ. ನಿಮ್ಮ ಸತ್ಯವೇದದಿಂದ ಉಲ್ಲೇಖಿಸಬೇಡಿ.

4. ದುಷ್ಟರನ್ನು ಗಮನಿಸಿದಾಗ ಕೀರ್ತನೆಗಾರನು ಯಾವ ತೀರ್ಮಾನಕ್ಕೆ ಬಂದನು (ವಚನ 13)?

5. ದುಷ್ಟರ ಮೇಲಿನ ಕೀರ್ತನೆಗಾರನ ಅವಲೋಕನ ಮತ್ತು ತೀರ್ಮಾನವು ಕೀರ್ತನೆಗಾರನ ಮೇಲೆ ಯಾವ ಪರಿಣಾಮ ಬೀರಿತು (ವಚನ 14)?

6. ದೇವರ ಸಾನ್ನಿಧ್ಯಕ್ಕೆ ಬಂದಾಗ ಕೀರ್ತನೆಗಾರನಿಗೆ ಏನಾಯಿತು (ವಚನ 16–17)?

7. ದೇವರ ಸಾನ್ನಿಧ್ಯಕ್ಕೆ ಬಂದ ನಂತರ ದುಷ್ಟರ ಬಗ್ಗೆ ಕೀರ್ತನೆಗಾರನು ಏನು ಅರ್ಥಮಾಡಿಕೊಳ್ಳುತ್ತಾನೆ (ವಚನ 18–20)?

8. ದೇವರ ಸಾನ್ನಿಧ್ಯಕ್ಕೆ ಬಂದ ನಂತರ ಕೀರ್ತನೆಗಾರನು ತನ್ನ ಹಿಂದಿನ ಮನೋಭಾವವನ್ನು ಹೇಗೆ ಮೌಲ್ಯಮಾಪನ ಮಾಡುತ್ತಾನೇ (ವಚನ 21–22)?

9. ಕೀರ್ತನೆಗಾರನು ದೇವರು ಮತ್ತು ಆತನ ಮಕ್ಕಳ ನಡುವಿನ ಸಂಬಂಧವನ್ನು 23–26 ನೇ ವಚನಗಳಲ್ಲಿ ಹೇಗೆ ವಿವರಿಸುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ. ನಿಮ್ಮ ಸತ್ಯವೇದದಿಂದ ಮಾತ್ರ ಉಲ್ಲೇಖಿಸಬೇಡಿ.

10. ಕೀರ್ತನೆಗಾರನು ಕೀರ್ತನೆಯ ಕೊನೆಯಲ್ಲಿ (ವಚನ 27–28) ಯಾವ ದೈವಶಾಸ್ತ್ರೀಯ ತೀರ್ಮಾನವನ್ನು ತೆಗೆದುಕೊಳ್ಳುತ್ತಾನೆ?

11. ಕೀರ್ತನೆಗಾರನ ಅನುಭವಗಳ ಪ್ರಾಯೋಗಿಕ ಪರಿಣಾಮವೇನು (ವ–28)?

ಕೀರ್ತನೆ 73 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೀರ್ತನೆ 73 ರಲ್ಲಿ ಯಾರನ್ನು ಸಂಬೋಧಿಸಲಾಗಿದೆ? ಇದರಿಂದ ನಾವು ಯಾವ ತೀರ್ಮಾನವನ್ನು ತೆಗೆದುಕೊಳ್ಳಬಹುದು?

2. ಕೀರ್ತನೆಗಾರನು 15 ನೇ ವಚನದಲ್ಲಿ ಯಾವ ಅಂಶವನ್ನು ತಿಳಿಸುತ್ತಾನೆ?

3. ವಚನ 20 ರಲ್ಲಿನ ಉಪಮೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

4. ವಚನ 24 ರಲ್ಲಿನ "ತರುವಾಯ" ಎಂಬ ಪದವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

5. ಕೀರ್ತನೆ 73 ರಲ್ಲಿ ಪ್ರತಿಬಿಂಬಿಸಿದಂತೆ ಕೀರ್ತನೆಗಾರನ "ನಂಬಿಕೆಯ ಪ್ರಯಾಣವನ್ನು" ವರ್ಣಿಸಿರಿ. ನಿಮ್ಮ ಸ್ವಂತ ಪದಗಳನ್ನು ಬಳಸಿ. ನಿಮ್ಮ ಸತ್ಯವೇದದಿಂದ ಕೆಲವು ಉಲ್ಲೇಖಗಳನ್ನು ಆರಿಸಿಕೊಳ್ಳಬೇಡಿ.

6. ಕೀರ್ತನೆ 73 ಮತ್ತು ಈ ಅಧ್ಯಯನವು ದೇವಜನರು ಈ ಲೋಕದ ಜೀವನಕ್ಕೆ ಹೇಗೆ ಸಂಬಂಧಿಸಬೇಕು ಎಂಬುದರ ಬಗ್ಗೆ ಆಳವಾದ ತಿಳುವಳಿಕೆ ತಲುಪಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

7. ಕೀರ್ತನೆ 73 ಮತ್ತು ಈ ಅಧ್ಯಯನವು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 73 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. "ಲೋಕದ ಮಾರ್ಗದ" ಬಗ್ಗೆ ಕೀರ್ತನೆಗಾರನ ಅನುಭವವನ್ನು ವಿಮರ್ಶಿಸಿರಿ (ವಚನ 2–12). ನೀವು ಸಹ ಇದೇ ರೀತಿಯ ಅನುಭವವನ್ನು ಗಮನಿಸಿದ್ದೀರಾ? ಗುಂಪಿನಲ್ಲಿ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿರಿ.

2. ಕೀರ್ತನೆಗಾರನು ಒಂದು ಆತ್ಮೀಕ ಹೋರಾಟದ ಮಟ್ಟಕ್ಕೆ ಬರುತ್ತಾನೆ (ವಚನ 13–16), ಆತನು ಹತಾಶೆಗೊಂಡನು. ತೀರಾ ಗೊಂದಲಕ್ಕೆ ಈಡಾದನು. ದೇವರ ನೀತಿವಂತಿಕೆಯ ಬಗ್ಗೆ ಏನೆಂದು ಯೋಚಿಸಬೇಕು ಅಥವಾ ಏನೆಂದು ಹೇಳಬೇಕೆಂದು ಸಹ ಆತನಿಗೆ ಗೊತ್ತಾಗಲಿಲ್ಲ:

ಅ. ನೀವು ಎಂದಾದರೂ ಇದೇ ರೀತಿಯ ಸಂಶಯ ಮತ್ತು ಗೊಂದಲದ ಅನುಭವವನ್ನು ಹಾದುಹೋಗಿರುವಿರಾ? ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ.

ಆ. ಈ ರೀತಿಯ ಸಂಶಯ ಮತ್ತು ಗೊಂದಲವನ್ನು ಈಗಲೂ ಸಹ ನೀವು ಹಾದುಹೋಗುತ್ತಿರುವಿರಾ? ಗುಂಪಿನಲ್ಲಿ ಆ ಸಾಕ್ಷಿಯನ್ನು ಹಂಚಿಕೊಳ್ಳಿರಿ ಮತ್ತು ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ದೇವರನ್ನು ಪ್ರಾರ್ಥಿಸಿರಿ.

3. ಕೀರ್ತನೆಗಾರನು ದೇವರ ಸನ್ನಿಧಿಗೆ ಬಂದಾಗ ಎಲ್ಲವೂ ಬದಲಾದಂತೆ ತೋರಿತು. ಆತನ ಜೀವನವನ್ನು ಒಂದು ಹೊಸ ದೃಷ್ಟಿಕೋನದಿಂದ ನೋಡಿದನು. ದೇವರನ್ನು ಆತನು ವಿಭಿನ್ನವಾದ ರೀತಿಯಲ್ಲಿ ಅರ್ಥೈಸಿಕೊಂಡನು ಹಾಗಾಗಿ ಆತನ ಜೀವಿತ ಸಂಪೂರ್ಣವಾಗಿ ಬದಲಾಯಿತು. ಇದೇ ರೀತಿಯ ಜೀವನದ ದೃಷ್ಟಿಕೋನದ ಅನುಭವ ನಿಮಗೆ ಆಗಿದೆಯಾ? ಈಗ ದೇವರು ನಿಮಗೆ ಪಾಲಾಗಿ ಪರಿಣಮಿಸಿರುವ ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ. ಈ ರೀತಿಯ ಬದಲಾದ ಜೀವನದ ದೃಷ್ಟಿಕೋನಕ್ಕಾಗಿ ದೇವರಿಗೆ ಕೃತಜ್ಞತೆ ಮಾಡಿರಿ.

4. ಕೀರ್ತನೆ 73 ಅನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸುವಾಗ ಪರಿಶುದ್ಧಾತ್ಮನು ಮಾರ್ಗದರ್ಶಿಸುವಂತೆ ಪ್ರಾರ್ಥಿಸಿರಿ.

ಕೀರ್ತನೆ 84

ಪೀಠಿಕೆ ಮತ್ತು ಟಿಪ್ಪಣಿಗಳು

"ಪ್ರಧಾನಗಾಯಕನ ಕೀರ್ತನ ಸಂಗ್ರಹದಿಂದ ತೆಗೆದದ್ದು; ಗಿತ್ತೀಯರಾಗದಿಂದ ಹಾಡತಕ್ಕದ್ದು; ಕೋರಹೀಯರ ಕೀರ್ತನೆ" ಎಂದು ಇಬ್ರಿಯ ತಲೆಬರಹವು ಹೇಳುತ್ತದೆ. ಗಿತ್ತೀಯ ಎಂಬುದರ ಅರ್ಥ ತಿಳಿದಿಲ್ಲ (ಕೀರ್ತನೆ 8 ಮತ್ತು 81 ರಲ್ಲಿ ಸಹ ಕಾಣಬಹುದು). ಬಹುಶಃ ಪಿಲಿಷ್ಟಿಯದ ಗತ್ ಊರಿನಲ್ಲಿ ಮಾಡಿದ ಸಂಗೀತ ವಾದ್ಯವನ್ನು ಅಥವಾ ಗತ್ ಊರಿನಿಂದ ಬಂದ ರಾಗವನ್ನು ಸೂಚಿಸುತ್ತಿರಬಹುದು ಅಥವಾ ಗತ್‌ನಿಂದ ಬಂದ ಒಂದು ಮಧುರವನ್ನು ಸೂಚಿಸುತ್ತದೆ. "ಕೋರಹನ ಮಕ್ಕಳು"ಗಾಗಿ ಕೀರ್ತನೆ 42–43 ರ ಪರಿಚಯ ನೋಡಿ.

ಈ ಕೀರ್ತನೆಯು, ಒಬ್ಬ ವ್ಯಕ್ತಿಯು ಯೆಹೋವನ ಆಲಯಕ್ಕಾಗಿ ಹಾತೊರೆಯುವುದನ್ನು ವ್ಯಕ್ತಪಡಿಸುವ ಒಂದು ಪ್ರಾರ್ಥನೆಯಾಗಿದೆ. ಸ್ವರ ಮತ್ತು ಭಾವದಲ್ಲಿ ಈ ಕೀರ್ತನೆಯು 2 ನೇ ಕೀರ್ತನೆಯಂತೆಯೇ ಇದೆ. ಕೆಲವು ವಿಶ್ಲೇಷಕರು ಈ ಕೀರ್ತನೆಯನ್ನು "ಚೀಯೋನಿನ ಗೀತ" ಎಂಬುದಾಗಿ ವರ್ಗೀಕರಿಸುತ್ತಾರೆ.

ನನ್ನ ಆತ್ಮ, ನನ್ನ ತನು, ನನ್ನ ಮನ (ವಚನ 2): ಈ ಮೂರು ಹೇಳಿಕೆಗಳು ಈ ವಚನವನ್ನು ರಚನೆಗೊಳಿಸುವ ಸಮಾನಾಂತರ ಸಮಾನಾಂತರತೆಯ ಹಿನ್ನಲೆಯಲ್ಲಿ ಅರ್ಥೈಸಲ್ಪಡಬೇಕಾಗಿದೆ. ಸಾಮಾನ್ಯ ಗದ್ಯದಲ್ಲಿ ಇವು "ನನ್ನ ಪೂರ್ಣ ವ್ಯಕ್ತಿತ್ವ" ಎಂದು ಅರ್ಥೈಸುತ್ತವೆ.

ನಿನ್ನ ವೇದಿಗಳ (ವಚನ 3): ಯೆರೂಸಲೇಮಿನ ದೇವಾಲಯದಲ್ಲಿ ಎರಡು ವೇದಿಗಳಿದ್ದವು. ಯಜ್ಞ/ಬಲಿಗಳಿಗಾಗಿ ಅಂಗಳದಲ್ಲಿ ಒಂದಿತ್ತು ಮತ್ತು ದೂಪಗಳನ್ನು ಸುಡುವುದಕ್ಕಾಗಿ ದೇವಾಲಯದ ಒಳಗೆ ಇನ್ನೊಂದಿತ್ತು. ಇಲ್ಲಿ "ನಿನ್ನ ವೇದಿಗಳ"ನ್ನು ಅಲಂಕಾರಿಕವಾಗಿ ಬಳಸಲಾಗಿದೆ. ದೇವರಿಗೆ ಸಾಮೀಪ್ಯವಾಗುವುದರಲ್ಲಿ ಸುರಕ್ಷಿತತೆಯಿದೆ.

ನಿನ್ನ ಮಂದಿರದಲ್ಲಿ ವಾಸಿಸುವವರು ಧನ್ಯರು (ವಚನ 4): ಇಲ್ಲಿ ಕೀರ್ತನೆಗಾರನು ದೇವಾಲಯದ ಸಂಕೀರ್ಣ/ಪ್ರಕಾರಗಳಲ್ಲಿ ವಾಸಿಸುವ ಯಾಜಕರನ್ನು ಸೂಚಿಸುತ್ತಿಲ್ಲ, ಆದರೆ ಭವ್ಯಮಂದಿರ, ಯೆರೂಸಲೇಮಿನ ದೇವಾಲಯದಲ್ಲಿ ದೇವರ ಅತಿಥಿಗಳಾದ ಆರಾಧಕರನ್ನು ಸೂಚಿಸುತ್ತಾನೆ.

ಕಣ್ಣೀರಿನ ತಗ್ಗು (ವಚನ 6): ಈ ತಗ್ಗು ಅಪರಿಚಿತವಾದುದ್ದಾಗಿದೆ. "ಬಾಕಾ" ಎಂಬ ಪದದ ಅರ್ಥ "ಅಳುವುದು/ಕಣ್ಣೀರಿಡುವುದು" ಎಂಬುದಾಗಿದೆ.

ಒರತೆ (ವಚನ 6): ಇಬ್ರಿಯ ಪದವು "ನೀರಿನ ಒರತೆ" ಮತ್ತು "ಆಶೀರ್ವಾದಗಳು" ಎಂಬುದಾಗಿ ಸಹ ಅರ್ಥೈಸುತ್ತದೆ. ಬಹುಶಃ ಕೀರ್ತನೆಗಾರನು ಇವೆರಡೂ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು.

ನಮಗೆ ಗುರಾಣಿಯಾಗಿರುವವನು (ವಚನ 9): ತನ್ನ ಜನರನ್ನು ರಕ್ಷಿಸುವ ಅರಸನಿಗೆ ಇದೊಂದು ರೂಪಾಲಂಕಾರವಾಗಿದೆ. ಇದು "ನಿಮ್ಮ ಅಭಿಷಕ್ತ"ಕ್ಕೆ ಸಮಾನಾರ್ಥಕವಾಗಿ ಬಳಸಲ್ಪಟ್ಟಿದೆ ಎಂಬುದನ್ನು ಗಮನಿಸಿ, ಇದು ಯೆರೂಸಲೇಮ್ ಸಿಂಹಾಸನದ ಮೇಲೆ ದೇವರ ಅಭಿಷಿಕ್ತ ರಾಜನನ್ನು ಸೂಚಿಸುತ್ತದೆ.

ಬಾಗಿಲನ್ನು ಕಾಯ್ದುಕೊಂಡಿರುವದು (ವಚನ 10): ಕೋರಹೀಯರು ದೇವಾಲಯದಲ್ಲಿ ಬಾಗಿಲನ್ನು ಕಾಯುವವರೂ ಮತ್ತು ವಾದ್ಯಬಾರಿಸುವವರೂ ಆಗಿದ್ದರು.

ದುಷ್ಟರ ಗುಡಾರಗಳಲ್ಲಿ ವಾಸಿಸುವುದಕ್ಕಿಂತ (ವಚನ 10): ಇದೊಂದು ಅಲಂಕಾರಿಕ ಮತ್ತು ಪದ್ಯರೂಪಿ ಹೇಳಿಕೆಯಾಗಿದೆ. "ದೇವರ ಭಯವಿಲ್ಲದವರೊಂದಿಗೆ ಜೀವನವನ್ನು ಹಂಚಿಕೊಳ್ಳುವುದಕ್ಕಿಂತ" ಎಂದು ಅರ್ಥೈಸುತ್ತದೆ.

ಸೂರ್ಯನೂ, ಗುರಾಣಿಯೂ (ವಚನ 11): ಕೀರ್ತನೆಗಾರನಿಗೆ ದೇವರು ಎರಡು ವಿಧದಲ್ಲಿ ಉಪಕಾರಿಯಾಗಿದ್ದಾನೆ ಎಂಬುದನ್ನು ವ್ಯಕ್ತಪಡಿಸುವ ರೂಪಾಲಂಕಾರಗಳು. ದೇವರು ಆತನ ಜೀವದ ಮತ್ತು ಬೆಳಕಿನ ಮೂಲವಾಗಿದ್ದಾನೆ (ಸೂರ್ಯ) ಮತ್ತು ಆತನ ರಕ್ಷಣೆಯಾಗಿದ್ದಾನೆ (ಗುರಾಣಿ).

ಪ್ರಶ್ನೆಗಳು

1. ನೀವು ಕೀರ್ತನೆ 84 ಅನ್ನು ಹೇಗೆ ರಚಿಸುತ್ತೀರಿ?

2. ವಚನ 4–5 ಮತ್ತು 12 ರ ಪ್ರಕಾರ ಯಾರು ಆಶೀರ್ವದಿಸಲ್ಪಡುತ್ತಾರೆ?

3. 7 ನೇ ವಚನದಲ್ಲಿ ಕೀರ್ತನೆಗಾರನು ಯಾವ ಅಂಶವನ್ನು ಹೇಳುತ್ತಾನೆ?

4. 9 ನೇ ವಚನದಲ್ಲಿ ಕೀರ್ತನೆಗಾರನು ಯಾವುದರ ಬಗ್ಗೆ ಪ್ರಾರ್ಥಿಸುತ್ತಾನೆ?

5. 10 ನೇ ವಚನದ ಮೊದಲ ಭಾಗದಲ್ಲಿ ಕೀರ್ತನೆಗಾರನು ಯಾವ ಅಂಶವನ್ನು ಹೇಳುತ್ತಾನೆ?

ಕೀರ್ತನೆ 84 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಗೆ ನೀವು ಯಾವ ಶೀರ್ಷಿಕೆಯನ್ನು ನೀಡುತ್ತೀರಿ? ಏಕೆ?

2. ಈ ಕೀರ್ತನೆಯಲ್ಲಿನ **"ದೇವರು"**ಗಾಗಿ ಕೀರ್ತನೆಗಾರನು ಯಾವ ಹೇಳಿಕೆಗಳನ್ನು ಬಳಸುತ್ತಾನೆ? ಅವನು ಈ ವಿಭಿನ್ನ ಹೇಳಿಕೆಗಳನ್ನು ಏಕೆ ಬಳಸುತ್ತಾನೆ ಎಂದು ನೀವು ಭಾವಿಸುತ್ತೀರಿ?

3. 2 ನೇ ವಚನದಲ್ಲಿ ಕೀರ್ತನೆಗಾರನು ಗುಬ್ಬಿ ಮತ್ತು ಪಾರಿವಾಳಗಳ ಬಗ್ಗೆ ಏಕೆ ಮಾತನಾಡುತ್ತಾನೆ?

4. 10 ನೇ ವಚನದಲ್ಲಿ ಕೀರ್ತನೆಗಾರನು ಮಾಡುವ ಉಪಮೆಗಳನ್ನು ವಿವರಿಸಿರಿ.

5. **"ಸದ್ಭಕ್ತರು"** ದೇವರಿಂದ ಯಾವ ಉಪಕಾರಗಳನ್ನು ನಿರೀಕ್ಷಿಸಬಹುದು (ವಚನ 11)? ಈ ವಚನವನ್ನು **"ಮಾನವ ಅನುಭವದ ಹೇಳಿಕೆ"** ಎಂದು ಅರ್ಥೈಸಿಕೊಳ್ಳುವ ಬದಲು **"ನಂಬಿಕೆಯ ದೃಢೀಕರಣ"** ಎಂದು ಏಕೆ ಅರ್ಥೈಸಿಕೊಳ್ಳಬೇಕು ಎಂಬುದನ್ನು ವಿವರಿಸಿ.

6. ಭಾನುವಾರದ ಆರಾಧನೆಯ **"ಕೀರ್ತನೆಯ"** ವಿಭಾಗದಲ್ಲಿ ಬಳಸಲು ಇದು ಏಕೆ ಉತ್ತಮ ಕೀರ್ತನೆಯಾಗಿದೆ?

ಕೀರ್ತನೆ 84 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಕೀರ್ತನೆಯಲ್ಲಿ ವ್ಯಕ್ತಪಡಿಸಲಾದ ಭಾವನೆಗಳಲ್ಲಿ ನಿಮ್ಮನ್ನು ನೋಡಿಕೊಳ್ಳಿರಿ. ನಿಮಗೂ ಸಹ ಇದೇ ರೀತಿಯಲ್ಲಿ ದೇವರ ಸನ್ನಿಧಿಯಲ್ಲಿರಬೇಕೆಂದು ಬಲವಾದ ದಾಹವಿದೆಯಾ? ಯಾಕೆ – ಯಾಕಿಲ್ಲ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

2. ದೇವರ ಆಶೀರ್ವಾದಗಳಿಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿರಿ. ಮತ್ತು ದಿನದಿಂದ ದಿನಕ್ಕೆ, ವಾರದಿಂದ ವಾರಕ್ಕೆ ಆತನ ಸನ್ನಿಧಿಗೆ ಬರುವುದರ ಸಂತೋಷಕ್ಕಾಗಿ ದೇವರಿಗೆ ಸ್ತೋತ್ರ ಮಾಡಿರಿ. ಅಲ್ಲದೆ ನಿಮ್ಮ ನಿಮ್ಮ ಸಭಾಪಾಲಕರನ್ನು, ಉಳಿದ ಇತರೆ ಸಭಾನಾಯಕರುಗಳನ್ನು ಮತ್ತು ನಿಮ್ಮ ಸಭೆಯಲ್ಲಿನ ಪ್ರತಿಯೊಬ್ಬ ಸಹ ವಿಶ್ವಾಸಿಗಳನ್ನು ಆಶೀರ್ವದಿಸುವಂತೆ ದೇವರನ್ನು ಕೇಳಿಕೊಳ್ಳಿರಿ.

3. ನಿಮ್ಮ ಸಭೆಯ ವಿಶ್ವಾಸಿಗಳಿಗೆ ಭಾನುವಾರದ ಆರಾಧನೆಗಾಗಿ ದೇವರ ಸನ್ನಿಧಿ ಬಯಸುವ ಬಲವಾದ ದಾಹವಿದೆಯಾ? ಒಂದು ವೇಳೆ ಇಲ್ಲದಿದ್ದರೆ ಅದಕ್ಕೆ ಕಾರಣ ಏನಿರಬಹುದು? ಬದಲಾವಣೆಯನ್ನು ತರಲು ನೀವು ಏನನ್ನು ಮಾಡಬಹುದು?

ಕೀರ್ತನೆ 91

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ ಕೀರ್ತನೆ 91 ಯಾವುದೇ ತಲೆಬರಹವನ್ನು ಹೊಂದಿಲ್ಲ. ಅನೇಕ ವ್ಯಾಖ್ಯಾನಕಾರರು ಈ ಕೀರ್ತನೆಯನ್ನು ಇಸ್ರಾಯೇಲ್ಯರ ಇತಿಹಾಸದಲ್ಲಿ ತಡವಾಗಿ ಇಡುತ್ತಾರೆ. ಇದರಲ್ಲಿ ವ್ಯಕ್ತಪಡಿಸಿದ ಸತ್ಯಗಳು ಕಾಲತೀತವಾಗಿವೆ.

ಈ ಕೀರ್ತನೆಯನ್ನು ಭರವಸೆಯ ಹಾಡನ್ನಾಗಿ ವರ್ಗೀಕರಿಸಬಹುದು. ಈ ರೀತಿಯ ಕೀರ್ತನೆಗಳು ಕಷ್ಟದ ಸಮಯಗಳಲ್ಲಿ ಸಹ ದೇವರ ಮೇಲೆ ಭರವಸವಿಡಬಹುದೆಂಬ ವಾಸ್ತವಾಂಶಕ್ಕೆ ಹೆಚ್ಚು ಒತ್ತುಕೊಡುತ್ತವೆ. ಪರಿಸ್ಥಿತಿಗಳು ಏನೇ ಆದರೂ ಸಹ ತನ್ನಲ್ಲಿ ನಂಬಿಕೆಯಿಡುವವರಲ್ಲಿ ದೇವರು ಸಂತೋಷಪಡುತ್ತಾನೆ. ಈ ರೀತಿಯ ಬಹುತೇಕ ಕೀರ್ತನೆಗಳಲ್ಲಿ ವ್ಯಕ್ತಿಯೊಬ್ಬರು ದೇವರ ಕಾಳಜಿ ಮತ್ತು ರಕ್ಷಣೆಯಲ್ಲಿ ತಮ್ಮ ಭರವಸೆ ಮತ್ತು ನಂಬಿಕೆಯನ್ನು ವ್ಯಕ್ತಪಡಿಸುವುದನ್ನು ನಾವು ಕಾಣಬಹುದು.

ಮೊರೆಹೋಗು/ಆಶ್ರಯಿಸು (ವಚನ 1): ಇದರರ್ಥ ವಾಸಿಸು, ಇರು ಎಂಬುದಾಗಿದೆ.

ಪರಾತ್ಪರನ (ವಚನ 1): ಮೆಲ್ಕಿಜೆದೇಕನ ಸಂಬಂಧದಲ್ಲಿ (ಈತನು ಪರಾತ್ಪರನಾದ ದೇವರ ಯಾಜಕನಾಗಿದ್ದು ಅಬ್ರಹಾಮನಿಗೆ ಪರಾತ್ಪರನಾದ ದೇವರ ಹೆಸರಲ್ಲಿ ಆಶೀರ್ವದಿಸಿದವನು, ಆದಿಕಾಂಡ 14:18–19) ಮೊಟ್ಟಮೊದಲ ಬಾರಿಗೆ ದೇವರಿಗಾಗಿನ ಈ ಹೆಸರನ್ನು ನಾವು ಕಾಣುತ್ತೇವೆ.

ಸರ್ವಶಕ್ತನು (ವಚನ 1): ಇದಕ್ಕೆ ಇಬ್ರಿಯ ಹೆಸರು – **"ಎಲ್ ಶಡಾಯ್"**. ದೇವರ ಈ ಹೆಸರನ್ನು ಆದಿಕಾಂಡ 17:1 ರಲ್ಲಿ ಮೊದಲಬಾರಿಗೆ ಬಳಸಲಾಗಿದೆ. ಇಲ್ಲಿ ಅಬ್ರಹಾಮನೊಂದಿಗೆ ತಾನು ಮಾಡಿಕೊಂಡಿದ್ದ ಒಡಂಬಡಿಕೆಯನ್ನು ದೃಢೀಕರಿಸಲು ದೇವರು ಅಬ್ರಹಾಮನಿಗೆ ಕಾಣಿಸಿಕೊಂಡನು: **"ಅಬ್ರಹಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನಕೊಟ್ಟು – ನಾನು ಸರ್ವಶಕ್ತನಾದ ದೇವರು"** (ಆದಿಕಾಂಡ 17:1) ಎಂದು ಹೇಳಿದನು.

ಬೇಟೆಗಾರನ ಬಲೆ (ವಚನ 3): ಇದು ಮನುಷ್ಯ/ವೈರಿಗಳಿಂದ ಬರುವ ಅಪಾಯಗಳಿಗಾಗಿ ಒಂದು ರೂಪಾಲಂಕಾರವಾಗಿದೆ.

ತನ್ನ ರೆಕ್ಕೆಗಳಿಂದ ... ಆತನ ಪಕ್ಕೆಗಳು (ವಚನ 4): ರಕ್ಷಣೆ/ಭದ್ರತೆಗಾಗಿನ ರೂಪಾಲಂಕಾರ.

ಸಾವಿರ ಜನರು ... ಹತ್ತುಸಾವಿರ ಜನರು (ವಚನ 7): ಇದು ಸಮಾನಾಂತರತೆಯಲ್ಲಿ ಬಳಸಲಾದ ಒಂದು ಇಬ್ರಿಯ ಶಬ್ದಾಲಂಕಾರವಾಗಿದೆ (ನೋಡಿರಿ 1 ಸಮು. 18:7, ಹೋಲಿಸಿ ಕೀರ್ತನೆ 90:10, ಆಮೋಸ 1:3).

ವಚನ 9: ವಚನ 2 ರೊಂದಿಗೆ ಹೋಲಿಸಿರಿ.

ವಚನ 11–12: ಯೇಸು ಕ್ರಿಸ್ತನೊಂದಿಗಿನ ವಿವಾದದಲ್ಲಿ ಎರಡನೇ ಶೋಧನೆಯಲ್ಲಿ ಸೈತಾನನು ಈ ವಚನಗಳನ್ನು ಬಳಸುತ್ತಾನೆ (ಮತ್ತಾಯ 4:5, ಲೂಕ 4:10–11).

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ವಿಶೇಷವಾಗಿ ಇಬ್ರಿಯ ಪಠ್ಯದಲ್ಲಿ ಬಳಸಲಾದ ಎರಡು ಕ್ರಿಯಾಪದಗಳು (ಮರೆ ಮತ್ತು ಸುರಕ್ಷಿತ) ಮತ್ತು ಎರಡು ನಾಮಪದಗಳು (ಆಶ್ರಯ ಮತ್ತು ನೆರಳು) ಸಮಾನಾರ್ಥಕವಾಗಿವೆ ಎಂದು ನಾವು ಪರಿಗಣಿಸುವಾಗ ಈ ವಚನವು ಸ್ವಲ್ಪ ಗೊಂದಲಮಯವಾಗಿದೆ. ಈ ವಚನದ ಎರಡು ಸಾಲುಗಳ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
3. ಕೀರ್ತನೆಗಾರನು ವಚನ 1–2 ರಲ್ಲಿ ದೇವರಿಗೆ ಯಾವ ಮೂರು **"ಹೆಸರುಗಳನ್ನು"** ಉಪಯೋಗಿಸುತ್ತಾನೆ?
4. ವಚನ 2 ರಲ್ಲಿನ **"ಶರಣನು"** ಮತ್ತು **"ದುರ್ಗವು"** ಎಂಬ ರೂಪಾಲಂಕಾರಗಳನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
5. ವಚನ 2 ಮತ್ತು 3 ರ ನಡುವೆ ನಡೆಯುವ ವ್ಯಾಕರಣ ಬದಲಾವಣೆಯನ್ನು ವಿವರಿಸಿರಿ.
6. 3–6 ನೇ ವಚನಗಳಲ್ಲಿ ದೇವರು ರಕ್ಷಣೆ ನೀಡುವ ಬೆದರಿಕೆಗಳು ಯಾವುವು?
7. 11–13 ನೇ ವಚನಗಳಲ್ಲಿ ದೇವರು ರಕ್ಷಣೆ ನೀಡುವ ಅಪಾಯಗಳು ಯಾವುವು?

8. 14–16 ನೇ ವಚನಗಳಲ್ಲಿ ಯಾರು ಮಾತನಾಡುತ್ತಾರೆ?

9. 14–16 ನೇ ವಚನಗಳಲ್ಲಿನ ವಾಗ್ದಾನಗಳ ಪಟ್ಟಿಯನ್ನು ಮಾಡಿ.

ಕೀರ್ತನೆ 91 ಆಲೋಚಿಸಿರಿ ಮತ್ತು ಚರ್ಚಿಸಿರಿ

1. 3–6 ನೇ ವಚನಗಳ ಅಧ್ಯಯನ ಮಾಡಿ:

   ಅ. ರೂಪಾಲಂಕಾರಗಳನ್ನು ವಿವರಿಸಿರಿ.

   ಆ. ಸಮಾನಾಂತರತೆಗಳನ್ನು ವಿಶ್ಲೇಷಿಸಿರಿ.

2. ಈ ಹಿಂದಿನ ವಚನಗಳ ಹಿನ್ನೆಲೆಯಲ್ಲಿ 7–8 ನೇ ವಚನಗಳನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

3. 14–16 ನೇ ವಚನಗಳಲ್ಲಿನ ದೈವಶಾಸ್ತ್ರವನ್ನು (ದೇವರ ತಿಳುವಳಿಕೆ) ವಿವರಿಸಿ. ನಿಮ್ಮ ಸ್ವಂತ ಪದಗಳನ್ನು ಬಳಸಿ ಮತ್ತು ನಿಮ್ಮ ಸತ್ಯವೇದದಿಂದ ಪಠ್ಯವನ್ನು ನಕಲಿಸಬೇಡಿ.

4. 1 ನೇ ವಚನದ ಬಗ್ಗೆ ನಿಮ್ಮ ತಿಳುವಳಿಕೆಯೇನು? ಇದು **"ಸತ್ಯದ ಹೇಳಿಕೆ"**ಯೇ ಅಥವಾ ಅದು **"ನಂಬಿಕೆಯ ದೃಢೀಕರಣ"**ವೇ (**ಇಬ್ರಿಯ ಜ್ಞಾನ ಮತ್ತು ಮಾನವನ ಅನುಭವ** ಎಂಬ ಅಧ್ಯಾಯವನ್ನು ನೋಡಿ)?

5. ಕೀರ್ತನೆಗಾರನು ಈ ಕೀರ್ತನೆಯಲ್ಲಿ ತನ್ನ ಸಹ ಇಸ್ರಾಯೇಲ್ಯನಿಗೆ ಕೊಡುವ ಸಲಹೆಯನ್ನು ನೀವು ಹೇಗೆ ಸಾರಾಂಶಗೊಳಿಸುವಿರಿ? ನಿಮ್ಮ ಸ್ವಂತ ಪದಗಳನ್ನು ಬಳಸಿ. ನಿಮ್ಮ ಸತ್ಯವೇದಲ್ಲಿರುವ ಪಠ್ಯವನ್ನು ಅಥವಾ ನಿಮ್ಮ ಟಿಪ್ಪಣಿಗಳನ್ನು ಉಲ್ಲೇಖಿಸಬೇಡಿ.

6. ಆಲೋಚಿಸಿರಿ ಮತ್ತು ಚರ್ಚಿಸಿರಿ ಸಂಖ್ಯೆ 4 ರ ಉತ್ತರ ನೋಡಿರಿ. ನಿಮ್ಮ ಉತ್ತರವನ್ನು ರೋಮಾ. 8:35–37 ರಲ್ಲಿನ ಪೌಲನ ಬೋಧನೆಯೊಂದಿಗೆ ಹೋಲಿಸಿರಿ.

7. ಈಗ ನೀವು ಕೀರ್ತನೆ 91 ರ ಅಧ್ಯಯನವನ್ನು ಮುಗಿಸಿದ ನಂತರ, ಈ ಕೀರ್ತನೆಯನ್ನು ಹೇಗೆ ವರ್ಗೀಕರಿಸುವುದು ಎಂಬುದರ ಕುರಿತು ನಿಮ್ಮ ಸ್ವಂತ ತೀರ್ಮಾನವೇನು? ಇದು ಪ್ರಾಥಮಿಕವಾಗಿ **"ಭರವಸೆಯ ಹಾಡು"** ಆಗಿದೆಯೇ? ಅಥವಾ ಇದು ಪ್ರಾಥಮಿಕವಾಗಿ **"ಜ್ಞಾನದ ಕೀರ್ತನೆ"** ಆಗಿದೆಯೇ? ವಿವರಿಸಿ.

8. ಕೀರ್ತನೆ 91 ಮತ್ತು ಈ ಅಧ್ಯಯನವು ದೇವರ ಮೋಕ್ಷ ಮತ್ತು ರಕ್ಷಣೆಯ ಆಳವಾದ ತಿಳುವಳಿಕೆಯನ್ನು ತಲುಪಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

9. ಕೀರ್ತನೆ 91 ಮತ್ತು ಈ ಅಧ್ಯಯನವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

ಕೀರ್ತನೆ 91 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಕೀರ್ತನೆ 91 ರಲ್ಲಿ ಕೀರ್ತನೆಗಾರನ ಮಾತುಗಳ ಬೆಳಕಿನಡಿಯಲ್ಲಿ ನಿಮ್ಮ ಪ್ರಸಕ್ತ ಜೀವನದ ಸನ್ನಿವೇಶಗಳನ್ನು ವಿಮರ್ಶಿಸಿರಿ.

   ಅ. ಇಂದು ವೈರಿಗಳಿಂದ ನೀವು ಹೋರಾಟವನ್ನು ಎದುರಿಸುತ್ತಿರುವಿರಾ?

   ಆ. ಇಂದು ನೀವು ಅಥವಾ ನಿಮ್ಮ ಕುಟುಂಬದಲ್ಲಿ ಯಾರಾದರೂ ಅನಾರೋಗ್ಯಕ್ಕೆ ತುತ್ತಾಗಿದ್ದಾರಾ?

   ಇ. ನೀವು ಅಥವಾ ನಿಮ್ಮ ಪ್ರೀತಿಪಾತ್ರರಲ್ಲಿ ಯಾರಾದರೂ ಇಂದು ಅನೇಕ ಬಗೆಯ ಅಪಾಯಗಳನ್ನು ಎದುರಿಸುತ್ತಿರುವಿರಾ?

2. ನಮ್ಮ ದಕ್ಷಿಣ ಭಾರತದ ಸಭೆಗಳಲ್ಲಿ ಬಹು ಜನಪ್ರಿಯ ಕೀರ್ತನೆಗಳಲ್ಲಿ ಇದೂ ಒಂದಾಗಿದೆ.

   ಅ. ಇದೊಂದು ಜನಪ್ರಿಯ ಕೀರ್ತನೆಯಾಗಿದೆ ಎಂದು ನೀವು ಯಾಕೆ ಯೋಚಿಸುವಿರಿ?

   ಆ. ಈ ಜನಪ್ರಿಯತೆಯ ಅಪಾಯಗಳು ಏನಿರಬಹುದು?

ಇ. ನಮ್ಮ ಸಭೆಗಳಲ್ಲಿ ಹೇಗೆ ಈ ರೀತಿಯ **"ಜ್ಞಾನದ ದೈವಶಾಸ್ತ್ರವು"** ತಪ್ಪಾಗಿ ಅರ್ಥೈಸಲ್ಪಡಬಹುದು ಮತ್ತು ತಪ್ಪಾಗಿ ಉಪಯೋಗಿಸಲ್ಪಡಬಹುದು?

ಈ. ನೀವು ಎಂದಾದರೂ ಈ ಕೀರ್ತನೆಯನ್ನು ತಪ್ಪಾಗಿ ಅರ್ಥೈಸಿ ಮತ್ತು ಉಪಯೋಗಿಸಿಕೊಂಡಿರುವಿರಾ?

ಉ. ನಿಮ್ಮ ಎಲ್ಲಾ ನಿರ್ಣಯಗಳನ್ನು ಬರೆದು ಅದನ್ನು ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

ಅಸೈನ್‌ಮೆಂಟ್: ಕೀರ್ತನೆ 91

ಕೀರ್ತನೆ 91 ಅನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ಪವಿತ್ರಾತ್ಮನು ಮಾರ್ಗದರ್ಶಿಸುವಂತೆ ಪ್ರಾರ್ಥಿಸಿರಿ.

ಕೀರ್ತನೆ 102

ಪೀಠಿಕೆ ಮತ್ತು ಟಿಪ್ಪಣಿಗಳು

102 ನೇ ಕೀರ್ತನೆಯನ್ನು "ದುಃಖಿತನಾಗಿ ಯೆಹೋವನ ಮುಂದೆ ತನ್ನ ಚಿಂತೆಗಳನ್ನು ಹೇಳಿಕೊಳ್ಳುವ ದೀನನ ಪ್ರಾರ್ಥನೆಯೆಂದು" ಇಬ್ರಿಯ ತಲೆಬರಹವು ಹೇಳುತ್ತದೆ.

ಯೆಹೂದಿ ಸಂಪ್ರದಾಯದಲ್ಲಿ ಈ ಕೀರ್ತನೆಯನ್ನು ಉಪವಾಸದ ದಿನಗಳಲ್ಲಿ ಉಪಯೋಗಿಸಲಾಗುತಿತ್ತು. ಕ್ರೈಸ್ತ ಸಭೆಯ ಸಂಪ್ರದಾಯದಲ್ಲಿ ಸಂತಾಪ ಸೂಚಕ ಕೀರ್ತನೆಗಳಲ್ಲಿ ಇದನ್ನು ಸೇರಿಸಲಾಗಿದೆ (ಕೀರ್ತನೆ 6 ಮತ್ತು 38ರ ಪರಿಚಯ ನೋಡಿ).

ಇಬ್ರಿಯ ಪತ್ರಿಕೆಯ ಗ್ರಂಥಕರ್ತನು ವಚನ 25–27 ಅನ್ನು (ಕೀರ್ತನೆಗಾರನ ಮಾತುಗಳನ್ನು) ಉಪಯೋಗಿಸಿ ಅವುಗಳನ್ನು ಯೇಸು ಕ್ರಿಸ್ತನು ದೇವದೂತರಿಗಿಂತಲೂ ಹೆಚ್ಚಿನವನು ಎಂಬುದಕ್ಕೆ ಅಳವಡಿಸುತ್ತಾನೆ (ಇಬ್ರಿಯ 1:10–12).

ವಿಮುಖನಾಗಬೇಡ; ನನ್ನ ಮೊರೆಗೆ ಕಿವಿಗೊಡು (ವಚನ 2): ಕೀರ್ತನೆಗಾರನು ದೇವರು ತನಗೆ ದಯೆ ತೋರಿಸಬೇಕೆಂದು ಮತ್ತು ತನ್ನ ಪ್ರಾರ್ಥನೆಗೆ ಉತ್ತರವನ್ನು ದಯಪಾಲಿಸಬೇಕೆಂದು ಕೇಳಿಕೊಳ್ಳುವಲ್ಲಿ ಎರಡು ಮಾನವೀಕರಣವನ್ನು ಉಪಯೋಗಿಸುತ್ತಾನೆ. ಈ ಚಿತ್ರಣವು ಕನ್ನಡ ಭಾಷಾಂತರಗಳಲ್ಲಿ ಅಷ್ಟು ಸ್ಪಷ್ಟವಾಗಿಲ್ಲ.

ಎಲುಬುಗಳು ... ಹೃದಯ (ವಚನ 3–4): ಕೀರ್ತನೆಗಾರನ ಸಂಪೂರ್ಣ ದೇಹ ಮತ್ತು ಮನಸ್ಸನ್ನು ಪ್ರತಿನಿಧಿಸಲು ಆತನ ದೇಹದ ಭಾಗಗಳನ್ನು ಬಳಸಲಾಗಿದೆ. ಇದು ಅಖಂಡದಿಂದ ಖಂಡವನ್ನು/ ಖಂಡದಿಂದ ಅಖಂಡವನ್ನು ಉಪಯೋಗಿಸಿರುವ ಒಂದು ಅಲಂಕಾರವಾಗಿದೆ.

ಬಕ ... ಗೂಗೆ (ವಚನ 6): ಗೂಗೆಗೆ ಇಬ್ರಿಯದಲ್ಲಿ ಎರಡು ವಿಭಿನ್ನ ಪದಗಳಿವೆ. ಈ ವಚನದ ಪದ್ಯರೂಪಿ ರಚನೆಯು ಸಮಾನಾಂತರ ಸಮಾನಾಂತರತೆಯಾಗಿದೆ. ಒಂದೇ ಪದವನ್ನು ಪುನರಾವರ್ತಿಸಲು ಇಬ್ರಿಯ ಸಾಹಿತಿಯು ಮನಸ್ಸು ಮಾಡಿಲ್ಲ. ಗೂಗೆಯು ಮರುಭೂಮಿ ಮತ್ತು ಕೆಡುಕಿನೊಂದಿಗೆ ಸಂಬಂಧ ಹೊಂದಿದೆ (ಉದಾಹರಣೆಗೆ ನೋಡಿ ಯೆಶಾಯ 34:11, 14, ಯೆರೆಮೀಯ 50:39 ಮತ್ತು ಇದು ಶಾಸ್ತ್ರದ ಪ್ರಕಾರ ಒಂದು ಅಶುದ್ಧ ಪಕ್ಷಿಯೆಂದು ಪರಿಗಣಿಸಲ್ಪಟ್ಟಿತ್ತು).

ಶಪಿಸುವಾಗ ನನ್ನನ್ನು ದೃಷ್ಟಾಂತಮಾಡಿ ಶಪಿಸುತ್ತಾರೆ (ವಚನ 8): ಕೀರ್ತನೆಗಾರನ ಶತ್ರುಗಳು ಕೀರ್ತನೆಗಾರನಂತಯೇ ಇತರ ಜನರು ವಿಪತ್ತುಗಳಿಂದ ಬಳಲಬೇಕೆಂದು ಬಯಸಿದ್ದರು ಎಂದರ್ಥ. "ನಿಮ್ಮ ಜೀವನವು ಕೀರ್ತನೆಗಾರನ ಜೀವನದಂತೆ ದುಃಖಕರವಾಗಲಿ!"

ನಿನ್ನ ಕೋಪರೌದ್ರ (ವಚನ 10): ಕೀರ್ತನೆಗಾರನು ತನ್ನ ಬಾಧೆಗಳನ್ನು – ಅವು ದೇವರಿಂದ ಬಂದ ಶಿಕ್ಷೆ ಎಂಬಂತೆ ಬಹುಶಃ ಅರಸರ ಮತ್ತು ಇಸ್ರಾಯೇಲಿನ ದಕ್ಷಿಣ ರಾಜ್ಯದ ಜನರ ಪಾಪ ಮತ್ತು ಅವಿಧೇಯತೆಯ ಪರಿಣಾಮದಿಂದ ಯೆರೂಸಲೇಮು ನಾಶವಾಯಿತೆಂಬ ತಿಳುವಳಿಕೆಯಿಂದ ಬಾಧೆಗಳನ್ನು ವ್ಯಾಖ್ಯಾನಿಸುತ್ತಾನೆ.

ಸಿಂಹಾಸನಾರೂಢನಾಗಿರುವಿ (ವಚನ 12): ಇಬ್ರಿಯ ಪಠ್ಯದಲ್ಲಿ "ಕುಳಿತುಕೊಳ್ಳಿ" ಎಂದು ಮಾತ್ರ ಹೊಂದಿದೆ. ಇದು ದೇವರ ಆಳ್ವಿಕೆಯನ್ನು ಸೂಚಿಸುತ್ತದೆ: ದೇವರು ತನ್ನ ಸಿಂಹಾಸನದಲ್ಲಿ ಕೂತು ಯುಗಯುಗಕ್ಕೂ ಆಳುತ್ತಾನೆ ಮತ್ತು ಆತನು ಏಕರೀತಿಯಾಗಿರುತ್ತಾನೆ (ವಚನ 27 ನೋಡಿ). ಇದು ಮಾನವೀಕರಣಕ್ಕೆ ಒಂದು ಉದಾಹರಣೆಯಾಗಿದೆ.

ನೀನು ಎದ್ದು (ವಚನ 13): ಲೋಕದಲ್ಲಿ ಆಗುವ ಸಂಗತಿಗಳಲ್ಲಿ ಪ್ರಮುಖ ಪಾತ್ರವನ್ನು ತೆಗೆದುಕೊಳ್ಳಬೇಕೆಂದು ದೇವರನ್ನು ಕೇಳಿಕೊಳ್ಳುವಾಗ ಈ ಎದ್ದು ಎಂಬ ಮಾನವೀಕರಣವನ್ನು ಉಪಯೋಗಿಸಲಾಗಿದೆ. ಪರಿಸ್ಥಿತಿಯ ಬಗ್ಗೆ ಏನಾದರೂ ಮಾಡಬೇಕೆಂದು ಇಲ್ಲಿ ಕೀರ್ತನೆಗಾರನು ದೇವರನ್ನು ಕೇಳಿಕೊಳ್ಳುತ್ತಿದ್ದಾನೆ.

ಚೀಯೋನ್ (ವಚನ 13): ಇದು ಯೆರೂಸಲೇಮಿಗೆ ಒಂದು ಸಮಾನಾರ್ಥಕವಾಗಿದೆ. ವಚನ 21 ರಲ್ಲಿ ಎರಡು ಹೆಸರುಗಳನ್ನು ಉಪಯೋಗಿಸಿದ್ದನ್ನು ಗಮನಿಸಿರಿ.

ನಿಯಮಿತ ಕಾಲ (ವಚನ 13): ನ್ಯಾಯತೀರ್ಪು ಮತ್ತು ವಿಮೋಚನೆಗಾಗಿ ದೇವರಿಂದ ನೇಮಿಸಲ್ಪಟ್ಟ ಕಾಲ.

ಅದರ ಕಲ್ಲು ಕುಪ್ಪೆ ... ಅದರ ಧೂಳಿಗೆ (ವಚನ 14): ಈ ಕೀರ್ತನೆಯು ಬರೆಯಲ್ಪಟ್ಟಾಗ ಯೆರೂಸಲೇಮು ಅವನತಿಯಲ್ಲಿತೆಂದು ಸೂಚಿಸುತ್ತದೆ.

ಸೆರೆಯವರ ಗೋಳಾಟ (ವಚನ 20): ಬಹುಶಃ ಬಾಬೆಲಿನಲ್ಲಿ ಸೆರೆಯಾಗಿ ಹೋದ ಇಸ್ರಾಯೇಲ್ಯರನ್ನು ಸೂಚಿಸುತ್ತಿರಬಹುದು.

ಪ್ರಶ್ನೆಗಳು

1. ನೀವು ಕೀರ್ತನೆ 102 ಅನ್ನು ಹೇಗೆ ರಚಿಸುತ್ತೀರಿ?
2. 12 ನೇ ವಚನದಲ್ಲಿನ **"ಆದರೆ"** ಎಂಬ ಪದದ ಪ್ರಾಮುಖ್ಯತೆ ಏನು?
3. ಇಬ್ರಿಯ ಶೀರ್ಷಿಕೆಯು ಈ ಕೀರ್ತನೆಯನ್ನು ಅತ್ಯುತ್ತಮವಾಗಿ ಸಾರಾಂಶಗೊಳಿಸುತ್ತದೆ. ಈ ನಾಲ್ಕು ಅಂಶಗಳಿಗೆ ಪಠ್ಯದಿಂದ ಹೇಳಿಕೆಗಳನ್ನು ಸೇರಿಸುವುದರ ಮೂಲಕ ಹೇಗೆ ಎಂಬುದನ್ನು ವಿವರಿಸಿರಿ.

   ಅ. ಇದೊಂದು ಪ್ರಾರ್ಥನೆಯಾಗಿದೆ:

   ಆ. ಇದನ್ನು ಒಬ್ಬ ಕೃಪೆಗೆ ಪಾತ್ರನಾದ ವ್ಯಕ್ತಿ ಬರೆದಿದ್ದಾರೆ:

   ಇ. ಕೀರ್ತನೆಗಾರನು ಬಲಹೀನನಾಗಿದ್ದಾನೆ:

   ಈ. ಕೀರ್ತನೆಗಾರನು ದೇವರ ಮುಂದೆ ತನ್ನ ಆಲಾಪನೆಯನ್ನು ಹೊಯ್ಯುತ್ತಾನೆ:

4. ಈ ಕೀರ್ತನೆಯ ವಿವಿಧ ಭಾಗಗಳಲ್ಲಿ ಕೀರ್ತನೆಗಾರನು ಯಾರನ್ನು ಸಂಬೋಧಿಸುತ್ತಾನೆ?
5. ಪ್ರಾರ್ಥನೆಗೆ ದೇವರ ಉತ್ತರವನ್ನು ಬರೆಯಬೇಕೆಂದು ಕೀರ್ತನೆಗಾರನು ಯಾಕೆ ಬಯಸುತ್ತಾನೆ (ವಚನ 18)?
6. ಕೀರ್ತನೆಗಾರನ ಪ್ರಾರ್ಥನೆಗೆ ದೇವರು ಹೇಗೆ ಉತ್ತರಿಸುತ್ತಾನೆ ಮತ್ತು **"ಚಿಯೋನಿಗೆ ಕೃಪೆ ತೋರಿಸುತ್ತಾನೆ"** (ವಚನ 13–17)?
7. ರಾಷ್ಟ್ರಗಳು ಮತ್ತು ಅವುಗಳ ಅರಸರು ದೇವರಿಗೆ ಭಯಪಡುವರು ಮತ್ತು ಗೌರವಿಸುವರು (ವಚನ 17). ಯಾಕೆ?
8. ರಾಷ್ಟ್ರಗಳು ಯೆಹೋವನನ್ನು ಆರಾಧಿಸಲು ಕೂಡಿಬರುವವು ಎಂದು ಕೀರ್ತನೆಗಾರನು ಹೇಳುತ್ತಾನೆ (ವಚನ 22). ಈ ಘಟನೆಯ ಸಂದರ್ಭ ಏನು?
9. ಕೀರ್ತನೆಗಾರನು 24 ನೇ ವಚನದಲ್ಲಿ ತನ್ನ ವೈಯಕ್ತಿಕ ಬಾಧೆಗೆ ಹಿಂದಿರುಗುತ್ತಾನೆ. ಆತನು ದೇವರಿಂದ ಏನನ್ನು ಕೇಳಿಕೊಳ್ಳುತ್ತಾನೆ?
10. ಕೀರ್ತನೆಯ ಮುಕ್ತಾಯದ ಪ್ರಕಾರ ದೇವಜನರ (ಆತನ ಸೇವಕರ) ಭವಿಷ್ಯವೇನು?

ಕೀರ್ತನೆ 102 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆ ಯಾವಾಗ ರಚಿಸಲ್ಪಟ್ಟಿತೆಂದು ನೀವು ಯೋಚಿಸುವಿರಿ? ನಿಮ್ಮ ಕಾರಣಗಳನ್ನು ಕೊಡಿರಿ.
2. ಆಧುನಿಕ ಓದುಗರೂ ಆದ ನಾವು ಈ ಕೀರ್ತನೆಯ ವಿಭಿನ್ನ ಭಾಗಗಳು ಪರಸ್ಪರ ಹೊಂದಿಕೊಳ್ಳುತ್ತವೆ ಎಂಬುದನ್ನು ಕಂಡು ಹಿಡಿಯಲು ಕಷ್ಟಕರವಾಗಿದೆ. ಕೀರ್ತನೆಗಾರನ ವೈಯಕ್ತಿಕ ವೇದನೆ (ವಚನ 3–11) ಮತ್ತು ದೇವರಿಗಾಗಿನ ಆತನ **"ಎದ್ದು ಚೀಯೋನನ್ನು ಕರುಣಿಸು"** (ವಚನ 13) ಎಂಬ ಪ್ರಾರ್ಥನೆಯ ನಡುವಿನ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
3. ಈ ಕೀರ್ತನೆಯ ಸಮಯದ ದೃಷ್ಟಿಕೋನವು ಭೂಮಂಡಲದ ಸೃಷ್ಟಿಯಿಂದ **"ಹೊಸ ಆಕಾಶ ಮತ್ತು ಹೊಸ ಭೂಮಿ"** ವರೆಗೆ ವ್ಯಾಪಿಸಿದೆ. ಹೇಗೆ ಎಂಬುದನ್ನು ವಿವರಿಸಿರಿ.
4. ಬಳಸಲಾದ ಕೆಲವು ಚಿತ್ರಣಗಳನ್ನು (ಉದಾಹರಣೆಗೆ ಉಪಮೆಗಳು, ರೂಪಾಲಂಕಾರಗಳು, ಮಾನವೀಕರಣಗಳು) ಮತ್ತು ಇತರ ಕಾವ್ಯಾತ್ಮಕ ಸಾಧನಗಳನ್ನು (ಉದಾಹರಣೆಗೆ ಅತಿಶಯೋಕ್ತಿ) ವಿವರಿಸಿ.
5. ಕೆಲವು ವಚನಗಳ ಪದ್ಯರೂಪಿ ರಚನೆಯನ್ನು ವಿಶ್ಲೇಷಿಸಿರಿ. ವಿವಿಧ ರೀತಿಯ ಸಮಾನಾಂತರತೆಯ ಉದಾಹರಣೆಗಳನ್ನು ಹುಡುಕಲು ಪ್ರಯತ್ನಿಸಿ.
6. ಕೀರ್ತನೆ 102 ರ ಸ್ವರ/ಭಾವವನ್ನು ವಿವರಿಸಿರಿ.

7. ಕೀರ್ತನೆ 102 ಮತ್ತು ಈ ಅಧ್ಯಯನವು ನಿಮಗೆ ಕಷ್ಟದ ಸಮಯದಲ್ಲಿ ದೇವರನ್ನು ಹೇಗೆ ಸಮೀಪಿಸುವುದು ಎಂಬುದರ ಕುರಿತು ಆಳವಾದ ತಿಳುವಳಿಕೆಯನ್ನು ತಲುಪಲು ಹೇಗೆ ಸಹಾಯ ಮಾಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ.

ಕೀರ್ತನೆ 102 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಯೆಹೂದಿ ಸಂಪ್ರದಾಯದಲ್ಲಿ ಉಪವಾಸದ ದಿನಗಳಲ್ಲಿ ಈ ಕೀರ್ತನೆಯನ್ನು ಉಪಯೋಗಿಸಲಾಗುತಿತ್ತು. ಇದನ್ನು ನಮ್ಮ ಸಭೆಯಲ್ಲೂ ಸಹ ಮಾಡಬಹುದಾ? ಹೌದಾದರೆ ಹೇಗೆ? ನಿಮ್ಮ ಆಲೋಚನೆ ಮತ್ತು ಸಲಹೆಗಳನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

2. ಕೀರ್ತನೆಗಾರನು ತನ್ನ ಪ್ರಾರ್ಥನೆಯನ್ನು ಲಿಖಿತವಾಗಿ ದಾಖಲಿಸಲು ವಿನಂತಿಸುವ ಏಕೈಕ ಕೀರ್ತನೆ ಇದಾಗಿದೆ. ಭವಿಷ್ಯದಲ್ಲಿ ದೇವರ ಜನರು ಏನು ಮಾಡಿದ್ದಾನೆಂದು ತಿಳಿದುಕೊಳ್ಳುವಂತೆ ನೋಡಿಕೊಳ್ಳುವುದು ಅವನ ಉದ್ದೇಶವಾಗಿತ್ತು. ಇದರಿಂದ ಅವರು ಆತನನ್ನು ಸರಿಯಾಗಿ ಸ್ತುತಿಸಲು ಸಾಧ್ಯವಾಗುತ್ತದೆ. ನಿಮ್ಮ ಸಭೆಯ ಬಗ್ಗೆ ಏನು? ನೀವು "ಪ್ರಾರ್ಥನಾ ದಿನಚರಿ"ಯನ್ನು ಇಟ್ಟುಕೊಳ್ಳುತ್ತೀರಾ? ಅದರಲ್ಲಿ ನೀವು ಪ್ರಮುಖ ಪ್ರಾರ್ಥನೆ ವಿನಂತಿಗಳನ್ನು ಬರೆದಿಟ್ಟುಕೊಳ್ಳುತ್ತೀರಾ? ಮತ್ತು ನಿಮ್ಮ ಪ್ರಾರ್ಥನೆಗಳಿಗೆ ಯಾವಾಗ ಮತ್ತು ಹೇಗೆ ಉತ್ತರಿಸಲಾಗಿದೆ ಎಂಬುದನ್ನು ದಾಖಲಿಸುತ್ತೀರಾ? ನಿಮ್ಮ ಪ್ರಾರ್ಥನೆಗಳಿಗೆ ಉತ್ತರಿಸಿದ್ದಕ್ಕಾಗಿ ದೇವರಿಗೆ ಧನ್ಯವಾದ ಹೇಳಲು ಮತ್ತು ಸ್ತುತಿಸಲು ನೀವು ವಿಶೇಷ ಕೃತಜ್ಞತಾ ಸೇವೆಗಳನ್ನು ಏರ್ಪಡಿಸುತ್ತೀರಾ? ನಿಮ್ಮ ಗುಂಪಿನಲ್ಲಿ ನಿಮ್ಮ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಹಂಚಿಕೊಳ್ಳಿ.

3. ಕೀರ್ತನೆಗಾರನು ಪವಿತ್ರಭೂಮಿಯಲ್ಲಿ ಶೋಕಪರಿಸ್ಥಿತಿಯ ಪರಿಣಾಮವಾಗಿ ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಸಹ ಬಾಧೆಪಟ್ಟನು. ಯೆರೂಸಲೇಮು ಅವನತಿಯಲ್ಲಿತ್ತು ಮತ್ತು ದೇವರ ಪರಿಶುದ್ಧ ದೇವಾಲಯವು ಕಾರ್ಯನಿರ್ವಹಿಸುತ್ತಾ ಇರಲಿಲ್ಲ. ಇದರಿಂದ ಸಭಾನಾಯಕರಾಗಿ ಮತ್ತು ದೇವರ ಸೇವಕರಾಗಿ ನಾವು ಏನನ್ನು ಕಲಿಯಬಹುದು? ನಮ್ಮ ಸಭೆಯಲ್ಲಿ ಸಂಗತಿಗಳು ತಪ್ಪಾಗಿ ಪರಿಣಮಿಸುವಾಗ ನಾವು ಬಾಧೆಪಡುತ್ತೇವಾ? ಎದ್ದು ಬಂದು ಮಧ್ಯಪ್ರವೇಶಿಸು ಎಂದು ನಾವು ದೇವರನ್ನು ಕೇಳುವೆವಾ? ದೇವರು "ಗತಿಹೀನರ ಪ್ರಾರ್ಥನೆಗೆ ಸ್ಪಂದಿಸುತ್ತಾನೆ" ನಮ್ಮ ಸಭೆಯಲ್ಲಿನ ಪರಿಸ್ಥಿತಿಗಳಿಗಾಗಿ ಗತಿಹೀನರ ಮೊರೆಯನ್ನು ತಿರಸ್ಕರಿಸದೇ ನೆರವೇರಿಸಬೇಕೆಂದು ನಾವು ಅಪೇಕ್ಷಿಸುತ್ತೇವಾ? ನಿಮ್ಮ ಗುಂಪಿನಲ್ಲಿ ನಿಮ್ಮ ಭಾವನೆಗಳು ಮತ್ತು ಆಲೋಚನೆಗಳನ್ನು ಹಂಚಿಕೊಳ್ಳಿ.

ಅಸೈನ್‌ಮೆಂಟ್: ಕೀರ್ತನೆ 102

ಕೀರ್ತನೆ 102 ಮತ್ತು ಈ ಅಧ್ಯಯನವನ್ನು ಆಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನ (ಅಥವಾ ಸಭೆಗಾಗಿ ಒಂದು ಸಂದೇಶವನ್ನು) ಸಿದ್ಧಪಡಿಸಿರಿ.

ಕೀರ್ತನೆ 103

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿನ ತಲೆಬರಹವು **"ದಾವೀದನ ಕೀರ್ತನೆ"** ಎಂದು ಹೇಳುತ್ತದೆ.

ಕೀರ್ತನೆ 103 ಅನ್ನು ಸ್ತುತಿಗೀತೆ ಮತ್ತು ಕೃತಜ್ಞತಾ ಗೀತೆಯ ಸಂಯೋಗವೆಂದು ವರ್ಣಿಸಬಹುದು. ದಾವೀದನು ತನಗಾಗಿ ಮತ್ತು ದೇವ ಜನರಿಗಾಗಿ ದೇವರು ತೋರಿಸಿದ ಒಳ್ಳೇತನ, ಪ್ರೀತಿ ಮತ್ತು ಕನಿಕರಕ್ಕಾಗಿ ಸಂಭ್ರಮಿಸುತ್ತಾನೆ. ಹಾಗೆಯೇ ದೇವಜನರೆಡೆಗೆ ತನ್ನ ದೃಷ್ಟಿಕೋನವನ್ನು ವಿವರಿಸುವುದಕ್ಕಿಂತ ಮುನ್ನ ದಾವೀದನು ವೈಯಕ್ತಿಕ ಮಟ್ಟದ ಮೇಲೆ ತನ್ನ ಸ್ವಂತ ಅನುಭವದೊಂದಿಗೆ ಪ್ರಾರಂಭಿಸುತ್ತಾನೆ (ವಚನ 1–5). ಈ ವಿಶಾಲವಾದ ದೃಷ್ಟಿಕೋನವು ಐತಿಹಾಸಿಕವಲ್ಲದೆ ಪ್ರಸಕ್ತ ದೃಷ್ಟಿಕೋನವಾಗಿಯೂ ಇದೆ. ಅಲ್ಲದೆ ಇದು ದೇವರು ಮುಂದೆ ಸಾರ್ವತ್ರಿಕವಾಗಿ ತನ್ನ ರಾಜ್ಯವನ್ನು ಸ್ಥಾಪಿಸುವುದನ್ನು ಸೂಚಿಸುತ್ತದೆ. (ವಚನ 19). ದಾವೀದನು ಮುಕ್ತಾಯದಲ್ಲಿ ದೇವರ ಎಲ್ಲಾ ಸೃಷ್ಟಿಯು ದೇವರನ್ನು ಸ್ತುತಿಸಬೇಕೆಂದು ಬೋಧಿಸುತ್ತಾನೆ (ವಚನ 20–22).

ನನ್ನ ಮನವೇ (ವಚನ 1): ಇದು ತಮ್ಮನ್ನು ಸಂಬೋಧಿಸುವ ಒಂದು ಸಾಂಪ್ರದಾಯಕ ಇಬ್ರಿಯ ವಿಧಾನವಾಗಿದೆ.

ನನ್ನ ಸರ್ವೇಂದ್ರಿಯಗಳೇ (ವಚನ 1): **"ನನ್ನ ಮನವೇ"** ಎನ್ನುವುದಕ್ಕೆ ಒಂದು ಸಮಾನಾಂತರ ಪದ.

ತಪ್ಪಿಸುವವನು (ವಚನ 4): ಬಿಡಿಸುತ್ತಾನೆ, ರಕ್ಷಿಸುತ್ತಾನೆ.

ನಾಶದಿಂದ (ವಚನ 4): ಸಮಾಧಿ, ಪಾತಾಳಕ್ಕೆ ಇದೊಂದು ರೂಪಾಲಂಕಾರವಾಗಿದೆ.

ಕಿರೀಟದಿಂದ ನಿನ್ನನ್ನು ಶೃಂಗರಿಸುವನು (ವಚನ 4): ಕಿರೀಟದಿಂದ ಶೃಂಗರಿಸುವುದು ಪ್ರಾಚೀನ ಕಾಲದಲ್ಲಿ ಒಬ್ಬ ಅರಸನನ್ನು ಅಥವಾ ವರನನ್ನು ಗೌರವಿಸುವ ಒಂದು ವಿಧಾನವಾಗಿತ್ತು.

ಪ್ರೀತಿ ಕೃಪೆಗಳೆಂಬ (ವಚನ 4): ಇವು ಈ ಕೀರ್ತನೆಯಲ್ಲಿ ಪ್ರಮುಖ ಪದಗಳಾಗಿವೆ. ವಚನ 8, 11, 13, 17 ರೊಂದಿಗೆ ಹೋಲಿಸಿ.

ಹದ್ದಿಗೆ ಬರುವಂತೆಯೇ (ವಚನ 5): ಹದ್ದು ಯೌವನದ ಬಲಕ್ಕೆ ಸಂಕೇತವಾಗಿದೆ.

ನೀತಿಯನ್ನು (ವಚನ 6): ಇದೇ ವಚನದಲ್ಲಿರುವ **"ನ್ಯಾಯ"** ಪದಕ್ಕೆ ಇದು ಸಮಾನಾಂತರ ಪದವಾಗಿದೆ.

ತನ್ನ ಮಾರ್ಗವನ್ನು (ವಚನ 7): ದೇವರು ತನ್ನ ಜನರೊಂದಿಗೆ ವ್ಯವಹರಿಸುವ ಪ್ರೀತಿಯ ಬಗೆ.

ವಚನ 8: ದೇವರು ಮೋಶೆಗೆ ಸೀನಾಯ್ ಬೆಟ್ಟದಲ್ಲಿ ತನ್ನ ಮಹಿಮೆಯನ್ನು ಪ್ರಚುರ ಪಡಿಸುವುದರೊಂದಿಗೆ ಹೋಲಿಸಿರಿ. **"ಯೆಹೋವ, ಯೆಹೋವ ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು"** (ವಿಮೋಚನಕಾಂಡ 34:6).

ಆತನಲ್ಲಿ ಭಯಭಕ್ತಿಯುಳ್ಳವರು (ವಚನ 11, 13, 17): ಇವರು ದೇವಜನರು, ಆತನ ಒಡಂಬಡಿಕೆಯನ್ನು ಪಾಲಿಸುವವರು, ಆತನ ನಿಬಂಧನೆಗಳನ್ನು ಕೈಗೊಂಡು ನಡೆಯುವವರು (ವಚನ 10). ಅವರು ಆತನ ಮಕ್ಕಳು (ವಚನ 12), ಆತನಲ್ಲಿ ಭರವಸವಿಟ್ಟು ಆತನಿಗೆ ವಿಧೇಯರಾಗುವವರು.

ವಚನ 14: ಆದಿಕಾಂಡದಲ್ಲಿ ಮನುಷ್ಯನನ್ನು ಸೃಷ್ಟಿಸುವುದರ ಬಗ್ಗೆ ಉಲ್ಲೇಖ (ಯೆಹೋವದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ, ಆದಿ. 2:7) ಮತ್ತು ಪಾಪದ ಪರಿಣಾಮವಾಗಿ ಶಾಪ ಬಂದದ್ದು (ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ, ಆದಿ. 3:19).

ಯುಗಯುಗಾಂತರಗಳವರೆಗೂ (ವಚನ 17): ಇದು ತನ್ನ ಜನರಿಗಾಗಿ ದೇವರ ಅಪಾರವಾದ ಪ್ರೀತಿಯನ್ನು ವ್ಯಕ್ತಪಡಿಸುವುದಕ್ಕೆ ಒಂದು ಪದ್ಯರೂಪಿ ವಿಧಾನವಾಗಿದೆ.

ಮಕ್ಕಳು ಮೊಮ್ಮಕ್ಕಳವರೆಗೂ (ವಚನ 18): ಸಂತತಿ ಸಂತತಿಗಳವರೆಗೂ.

ಆತನ ಸೈನ್ಯಗಳೇ (ವಚನ 21): ಇದು ದೇವದೂತರನ್ನು ಅಥವಾ ನಕ್ಷತ್ರಗಳನ್ನು ಸೂಚಿಸಬಹುದು.

ಪ್ರಶ್ನೆಗಳು

1. ನೀವು 103 ನೇ ಕೀರ್ತನೆಯನ್ನು ಹೇಗೆ ರಚಿಸುತ್ತೀರಿ?
2. ದಾವೀದನು ಈ ಕೀರ್ತನೆಯನ್ನು ಹೇಗೆ ಪ್ರಾರಂಭಿಸುತ್ತಾನೆ ಮತ್ತು ಮುಕ್ತಾಯಗೊಳಿಸುತ್ತಾನೆ?
3. ದಾವೀದನು 1–5 ನೇ ವಚನಗಳಲ್ಲಿ ಯಾರನ್ನು ಸಂಬೋಧಿಸುತ್ತಾನೆ?
4. ದೇವರು ದಾವೀದನಿಗೋಸ್ಕರ ಏನು ಮಾಡಿದ್ದಾನೆ (ವಚನ 3–5)? ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. ದಾವೀದನು 6–19 ನೇ ವಚನಗಳಲ್ಲಿ ಯಾರನ್ನು ಸಂಬೋಧಿಸುತ್ತಾನೆ?
6. ದೇವರ ಆಳ್ವಿಕೆಯನ್ನು ವಚನ 6 ಮತ್ತು 19 ರಲ್ಲಿ ಹೇಗೆ ಸಾರಾಂಶಗೊಳಿಸಲಾಗಿದೆ? ಅದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
7. ದಾವೀದನು ತನ್ನ ಪಾಪಮಯ ಜನರಿಗಾಗಿ ದೇವರ ಕರುಣೆಯನ್ನು ಹೇಗೆ ವಿವರಿಸುತ್ತಾನೆ (ವಚನ 7–12)? ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
8. ದಾವೀದನು ತನ್ನ ಬಲಹೀನ ಮತ್ತು ದೂಳಿಯಂತಿರುವ ಜನರಿಗಾಗಿ ದೇವರ ಕರುಣೆಯನ್ನು ಹೇಗೆ ವರ್ಣಿಸುತ್ತಾನೆ (ವಚನ 13–18)? ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
9. ದೇವರನ್ನು ಯಾರು ಸ್ತುತಿಸಬೇಕು (ವಚನ 1, 20–22)? ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

ಕೀರ್ತನೆ 103 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯು ಅಲಂಕಾರಿಕ ಭಾಷೆಯಿಂದ ತುಂಬಿಕೊಂಡಿದೆ:

   ಅ. ನೀವು ಯಾವುದೇ ಉಪಮೆಗಳನ್ನು ಕಂಡುಕೊಂಡಿದ್ದೀರಾ? ಹಾಗಿದ್ದಲ್ಲಿ, ಅವುಗಳನ್ನು ವಿವರಿಸಿರಿ.

   ಆ. ನೀವು ಯಾವುದೇ ರೂಪಾಲಂಕಾರಗಳನ್ನು ಕಂಡುಕೊಂಡಿದ್ದೀರಾ? ಹಾಗಿದ್ದಲ್ಲಿ, ಅವುಗಳನ್ನು ವಿವರಿಸಿ.

   ಇ. 13 ಮತ್ತು 19 ನೇ ವಚನಗಳಲ್ಲಿನ ಮಾನವೀಕರಣಗಳನ್ನು ವಿವರಿಸಿ.

2. ಈ ಕೀರ್ತನೆಯು ದೇವರ ಪ್ರೀತಿ ಮತ್ತು ಕರುಣೆಯನ್ನು ಒತ್ತಿಹೇಳುತ್ತದೆ. ಹಾಗಾದರೆ ಕೀರ್ತನೆ 103 ರಿಂದ ದೇವರ ಪ್ರೀತಿ ಮತ್ತು ಕರುಣೆಯ ಬಗ್ಗೆ ನಾವು ಏನನ್ನು ಅರ್ಥಮಾಡಿಕೊಳ್ಳಬಹುದು? ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿ ಮತ್ತು ನಿಮ್ಮ ಸತ್ಯವೇದವನ್ನು ಉಲ್ಲೇಖಿಸಬೇಡಿ.
3. ಕೆಳಕಂಡ ವಚನಗಳ ಕಾವ್ಯತ್ಮಕ ರಚನೆಯನ್ನು ವಿಶ್ಲೇಷಿಸಿರಿ:

   ಅ. ವಚನ 1

   ಆ. ವಚನ 2–5: **"ಸಮಾನಾರ್ಥಕ", "ಸಂಯೋಜಿತ"** ಮತ್ತು **"ವಿರೋಧಾತ್ಮಕ"** ಮುಂತಾದ ಪದಗಳನ್ನು ಬಳಸಿಕೊಂಡು ಈ ವಚನದಲ್ಲಿನ ವಿಭಿನ್ನ ನುಡಿಗಟ್ಟುಗಳು ಪರಸ್ಪರ ಹೇಗೆ ಸಂಬಂಧಿಸಿವೆ ಎಂಬುದನ್ನು ನೋಡಲು ಪ್ರಯತ್ನಿಸಿ. ನಿಮ್ಮ ಫಲಿತಾಂಶವು ನೀವು ಬಳಸುವ ಅನುವಾದವನ್ನು ಅವಲಂಬಿಸಿರುತ್ತದೆ.

   ಇ. ವಚನ 11–12

   ಈ. ವಚನ 20–21

4. ನೀವು ಈ ಕೀರ್ತನೆಯ ಭಾವ (ಅಥವಾ ಸ್ವರ)ವನ್ನು ಹೇಗೆ ವಿವರಿಸುವಿರಿ?
5. ಕೀರ್ತನೆ 103 ಮತ್ತು ಈ ಅಧ್ಯಯನವು ದೇವರು ಯಾರಾಗಿದ್ದಾನೆ ಮತ್ತು ಆತನು ನಿನಗೆ ಮತ್ತು ತನ್ನ ಜನರಿಗೆ ಏನೆಲ್ಲಾ ಮಾಡಿದ್ದಾನೆ ಎಂಬುದಕ್ಕಾಗಿ ಆತನನ್ನು ಸ್ತುತಿಸಿ ಆರಾಧಿಸಲು ನಿಮ್ಮನ್ನು ಹೇಗೆ ಉತ್ತೇಜನಗೊಳಿಸುತ್ತದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
6. ಭಾನುವಾರದ ಆರಾಧನಾ ಸೇವೆಯಲ್ಲಿ ಕೀರ್ತನೆ ಓದಲು 103 ಏಕೆ ಅತ್ಯುತ್ತಮ ಆಯ್ಕೆಯಾಗಿದೆ? ನಿಮ್ಮ ಕಾರಣಗಳನ್ನು ತಿಳಿಸಿರಿ.

ಕೀರ್ತನೆ 103 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಸ್ವತಃ ನಮ್ಮ ಜೀವಿತದಲ್ಲಿ ನೀವು ಅನುಭವಿಸಿದ ದೇವರ ಪ್ರೀತಿಕೃಪೆಗಳನ್ನು ವಿಮರ್ಶಿಸಿರಿ. ಗುಂಪಿನಲ್ಲಿ ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
2. ನಿಮ್ಮ ಸಭಾಜೀವನದಲ್ಲಿನ ದೇವರ ಪ್ರೀತಿಕೃಪೆಗಳನ್ನು ವಿಮರ್ಶಿಸಿರಿ.
3. ದೇವರ ಪ್ರೀತಿ ಮತ್ತು ಕೃಪೆಗಳಿಗಾಗಿ ಸ್ವಲ್ಪ ಸಮಯ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

ಅಸೈನ್‌ಮೆಂಟ್: ಕೀರ್ತನೆ 103

ಕೀರ್ತನೆ 103 ಈ ಅಧ್ಯಯನವನ್ನು ಆಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನ (ಅಥವಾ ಸಭೆಗಾಗಿ ಒಂದು ಸಂದೇಶ) ವನ್ನು ಸಿದ್ಧಪಡಿಸಿರಿ.

ಕೀರ್ತನೆ 105

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ ಯಾವುದೇ ತಲೆಬರಹವಿಲ್ಲ. ಆದರೆ ಕೀರ್ತನೆಯ ಸನ್ನಿವೇಶ ನಮಗೆ ಗೊತ್ತು ಯಾಕೆಂದರೆ ಇದೇ ಕೀರ್ತನೆಯು ಮೊದಲನೇಯ ಪೂರ್ವಕಾಲವೃತ್ತಾಂತದಲ್ಲಿ ಕಂಡುಬರುತ್ತದೆ. ಅಲ್ಲಿ ಅದು ಈ ರೀತಿಯಾಗಿ ಪರಿಚಯಿಸಲ್ಪಟ್ಟಿದೆ. "ಯೆಹೋವನ ಮಂಜೂಷದ ಮುಂದೆ ದೇವಾರಾಧನೆ ನಡಿಸುವುದಕ್ಕೋಸ್ಕರ ದಾವೀದನು ಕೆಲವು ಮಂದಿ ಲೇವಿಯರನ್ನು ನೇಮಿಸಿದನು. ಇಸ್ರಾಯೇಲ್ ದೇವರಾದ ಯೆಹೋವನನ್ನು ಸ್ತುತಿಸುವದೂ ಹಾಡಿಹರಸುವದೂ ಅವರ ಕರ್ತವ್ಯ. ಅವರಲ್ಲಿ ಆಸಾಫನು ಪ್ರಧಾನನು; ಜೆಕರ್ಯನು ಎರಡನೆಯವನು. ಯೆಗೀಯೇಲ್, ಶೆಮೀರಾಮೋತ್, ಯೆಹೀಯೇಲ್, ಮತ್ತಿತ್ಯ, ಎಲೀಯಾಬ್, ಬೆನಾಯ್, ಓಬೇದೆದೊಮ್, ಯೆಗೀಯೇಲ್ ಇವರು ಸ್ವರಮಂಡಲ ಕಿನ್ನರಿ ಮೊದಲಾದ ವಾದ್ಯಗಳನ್ನು ಬಾರಿಸುವವರು; ಆಸಾಫನು ತಾಳಹೊಡೆಯುವವನು. ಬೆನಾಯ, ಯೆಹಜೀಯೇಲ್ ಎಂಬ ಯಾಜಕರು ದೇವರ ನಿಬಂಧನ ಮಂಜೂಷದ ಮುಂದೆ ನಿತ್ಯವೂ ತುತೂರಿಗಳನ್ನು ಊದುವವರು. ದಾವೀದನು ಆಸಾಫನನ್ನು ಅವನ ಸಹೋದರರನ್ನು ಯೆಹೋವ ಕೀರ್ತನೆಗೋಸ್ಕರ ಆ ದಿನದಲ್ಲೇ ಮೊದಲು ನೇಮಿಸಿದನು" (1 ಪೂರ್ವಕಾಲವೃತ್ತಾಂತ 16:4–7). ಹಾಗಾಗಿ ಇದೊಂದು ಕೃತಜ್ಞತಾ ಗೀತೆಯಾಗಿದೆ. ಇದನ್ನು ಇಸ್ರಾಯೇಲ್ಯರ ಒಂದು ಧಾರ್ಮಿಕ ಹಬ್ಬಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಈ ರೀತಿಯ ಕೀರ್ತನೆಯು ಇಸ್ರಾಯೇಲ್ ಜನರ ನಡುವೆ ದೇವರ ರಕ್ಷಣಾಕಾರ್ಯದ ಚರಿತ್ರೆಯನ್ನು ತಿಳಿಸುತ್ತದೆ. ಮತ್ತು ದೇವರು ಐಗುಪ್ತದಿಂದ ತನ್ನ ಜನರನ್ನು ಬಿಡಿಸಿ ವಾಗ್ದಾನದ ದೇಶಕ್ಕೆ ನಡೆಸುವುದಕ್ಕೆ ಒತ್ತು ಕೊಡುತ್ತದೆ.

ಆತನ ದರ್ಶನವನ್ನು ಅಪೇಕ್ಷಿಸಿರಿ (ವಚನ 4): "ದೇವರನ್ನು ಸಮೀಪಿಸಲು" ದೇವರ "ಸಾನಿಧ್ಯಕ್ಕೆ ಬರಲು" ಒಂದು ರೂಪಾಲಂಕಾರವಾಗಿದೆ.

ಸೇವಕ (ವಚನ 5, 26, 42): ಇದೊಂದು ನಾಮಧೇಯವಾಗಿದೆ. ದೇವರ ರಾಜ್ಯಾಡಳಿತದಲ್ಲಿ ಸದಸ್ಯತ್ವವನ್ನು ಸೂಚಿಸಲು ಇದನ್ನು ಒಂದು ನಾಮಧೇಯವಾಗಿ ಕೀರ್ತನೆಗಾರನು ಸಾಮಾನ್ಯವಾಗಿ ಉಪಯೋಗಿಸುತ್ತಾನೆ.

ನ್ಯಾಯನಿರ್ಣಯ (ವಚನ 6,7): ದೇವರ ನೀತಿಯಕಾರ್ಯ.

ಒಡಂಬಡಿಕೆ, ಆಣೆ (ವಚನ 9): ಈ ಹೇಳಿಕೆಯು ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು (ಆದಿ. 15:19–21) ಮತ್ತು ಅಬ್ರಹಾಮನಿಗೆ ಮತ್ತು ಯಾಕೋಬನಿಗೆ ಇಟ್ಟ ಆಣೆಯನ್ನು (ಆದಿ. 22:16–18, 26:2–5) ಸೂಚಿಸುತ್ತದೆ.

ಸಾವಿರ ತಲೆಗಳವರೆಗೂ (ವಚನ 8): ಇದು "ಅತಿಶಯೋಕ್ತಿ" ಎಂದು ಕರೆಯುವ ಶಬ್ದಾಲಂಕಾರವಾಗಿದೆ.

ರಾಜಶಾಸನ (ವಚನ 10): ದೇವರು ಯಾಕೋಬನೊಂದಿಗೆ ಮಾಡಿಕೊಂಡ ಒಟಂಬಡಿಕೆಯು ಆತನ ಭವಿಷ್ಯದ ಕಾರ್ಯಗಳನ್ನು ಆಳುವುದು.

ನಾನು ಅಭಿಷೇಕಿಸಿದವರು, ನನ್ನ ಪ್ರವಾದಿಗಳು (ವಚನ 15): ಈ ಹೇಳಿಕೆಗಳು ಇಸ್ರಾಯೇಲ್ ಪಿತೃಗಳನ್ನು ಸೂಚಿಸುತ್ತದೆಂದು ಪಠ್ಯದ ಹಿನ್ನಲೆಯು ತೋರಿಸುತ್ತದೆ. ಆದಿಕಾಂಡ 20:7 ರಲ್ಲಿ ಅಬ್ರಹಾಮನು "ಒಬ್ಬ ಪ್ರವಾದಿ" ಎಂದು ಕರೆಯಲ್ಪಟ್ಟದ್ದನ್ನು ಗಮನಿಸಿರಿ.

ಕೋಳ, ಕಬ್ಬಿಣದ ಬೇಡಿ (ವಚನ 18): ಪದ್ಯರೂಪಿ ಸ್ವಾತಂತ್ರ್ಯಕ್ಕೆ ಇದೊಂದು ಉದಾಹರಣೆಯಾಗಿದೆ. ಆದಿ. 39:20–23 ರಲ್ಲಿ ಯೋಸೇಫನ ಸೆರೆಯ ಬಗ್ಗೆ ವರ್ಣಿಸಲ್ಪಟ್ಟಿದ್ದಕ್ಕೆ ಹೋಲಿಸಿರಿ.

ಬಂಧಿಸುವುದಕ್ಕೆ (ವಚನ 22): ಕೀರ್ತನೆಗಾರನು ವಚನ 18 ರಲ್ಲಿ ಯೋಸೇಫನ ಪರಿಸ್ಥಿತಿಗಳನ್ನು ವರ್ಣಿಸಲು ಹೇಗೆ ಕೋಳ ಮತ್ತು ಕಬ್ಬಿಣದ ಬೇಡಿ ಎಂಬ ಪದಗಳನ್ನು ಉಪಯೋಗಿಸುತ್ತಾನೆ ಎಂಬುದನ್ನು ಹೋಲಿಸಿ ನೋಡಿರಿ.

ಹಾಮನ ದೇಶ (ವಚನ 23) ಐಗುಪ್ತ. ಐಗುಪ್ತ್ಯರು ಹಾಮನ ಸಂತತಿಯವರು (ಆದಿಕಾಂಡ 10:6 ಅನ್ನು ನೋಡಿರಿ. ಇಲ್ಲಿ "ಮಿಚ್ರಯಿಮ್" ಎಂಬ ಹೆಸರನ್ನು ಕಾಣಬಹುದು. ಇದರರ್ಥ "ಎರಡು ಐಗುಪ್ತಗಳು". ಇದು ಮೇಲಣ ಐಗುಪ್ತ ಮತ್ತು ಕೆಳಗಣ ಐಗುಪ್ತ ಎಂಬುದಾಗಿದೆ. ಕೀರ್ತನೆ 7:51 ರೊಂದಿಗೆ ಹೋಲಿಸಿ).

ಹರವಿದನು (ವಚನ 39): ಇದರ ಹಿನ್ನಲೆಯು ಮೋಡವು ಸಂರಕ್ಷಣೆಯ ಹೊದಿಕೆಯಾಗಿತ್ತು ಎಂಬುದನ್ನು ಸೂಚಿಸುವಂತೆ ಕಾಣುತ್ತದೆ. ಉಳಿದ ವಾಕ್ಯಭಾಗಗಳಲ್ಲಿ ಮೋಡವು "ಮಾರ್ಗದರ್ಶನ"ವನ್ನು ಸೂಚಿಸುತ್ತದೆ (ನೋಡಿ. ಕೀರ್ತನೆ 78:14, ವಿಮೋಚನಕಾಂಡ 13:21)

ದಿವ್ಯಾಹಾರ (ವಚನ 40): ಇದು ದೇವರು ಇಸ್ರಾಯೇಲ್ಯರಿಗೆ ಮರುಭೂಮಿಯಲ್ಲಿ ಒದಗಿಸಿದ ಮನ್ನವನ್ನು ಸೂಚಿಸುತ್ತದೆ.

ನದಿಯಾಗಿ ಹರಿಯಿತು (ವಚನ 41): ಇದು ಇನ್ನೊಂದು ಅತಿಶಯೋಕ್ತಿಯಾಗಿದೆ.

ಪರಜನರ ದೇಶಗಳನ್ನು (ವಚನ 44): ಇದು ಇನ್ನೊಂದು ಅತಿಶಯೋಕ್ತಿ. ವಚನ 11 ರಲ್ಲಿ ಕರೆಯಲ್ಪಟ್ಟ "ಕಾನಾನ್ಯರ ದೇಶವು" ಈಗ ಪರಜನರ ದೇಶ ಎಂದು ಕರೆಯಲ್ಪಡುತ್ತಿದೆ.

ಪ್ರಶ್ನೆಗಳು

1. ಈ ಕೀರ್ತನೆಯನ್ನು ನೀವು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯಲ್ಲಿ ಕೀರ್ತನೆಗಾರನು ಯಾರನ್ನು ಸಂಬೋಧಿಸುತ್ತಾನೆ?
3. 1–5 ನೇ ವಚನಗಳನ್ನು ನೋಡಿರಿ. ನೀವು ಎಷ್ಟು ಆಜ್ಞೆಗಳನ್ನು ಕಂಡುಕೊಂಡಿದ್ದೀರಿ? ಅವುಗಳನ್ನು ಪಟ್ಟಿ ಮಾಡಿರಿ.
4. 5 ನೇ ವಚನದಲ್ಲಿ (ಕನ್ನಡದಲ್ಲಿ 6 ನೇ ವಚನ) ಇಸ್ರಾಯೇಲ್ಯರು ಏನನ್ನು ನೆನಪು ಮಾಡಿಕೊಳ್ಳಬೇಕಿದೆ?
5. 5–6 ನೇ ವಚನಗಳಲ್ಲಿ ಕೀರ್ತನೆಗಾರನು ಇಸ್ರಾಯೇಲ್ಯರನ್ನು ಹೇಗೆ ವಿವರಿಸುತ್ತಾನೆ?
6. ಐಗುಪ್ತದಲ್ಲಿ ಇಸ್ರಾಯೇಲ್ಯರ ಜೀವಿತದ ಬಗ್ಗೆ ಕೀರ್ತನೆಗಾರನು ಏನನ್ನು ಒತ್ತಾಗಿ ಹೇಳುತ್ತಾನೆ (ವಚನ 23–25)?
7. ಮೋಶೆ ಮತ್ತು ಆರೋನರನ್ನು ಹೇಗೆ ವಿವರಿಸಲಾಗಿದೆ?
8. ವಚನ 28–36 ರಲ್ಲಿ ಐಗುಪ್ತದ ಯಾವ ಬಾಧೆಗಳನ್ನು ಉಲ್ಲೇಖಿಸಲಾಗಿದೆ (ವಿಮೋಚನಕಾಂಡ ಅಧ್ಯಾಯ 7–11 ಹೋಲಿಸಿರಿ)?
9. ವಚನ 39–41 ರಲ್ಲಿ ಅರಣ್ಯದ ಯಾವ ಘಟನೆಗಳು ಉಲ್ಲೇಖಿಸಲಾಗಿದೆ?
10. ಕೊನೆಯ ವಚನಗಳಲ್ಲಿ ಇಸ್ರಾಯೇಲ್ಯರ ಬಗ್ಗೆ ನಮಗೆ ಯಾವ ಮಾಹಿತಿ ಸಿಗುತ್ತದೆ (ವಚನ 43–45)?

ಕೀರ್ತನೆ 105 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯ ಸ್ವರ/ಭಾವವನ್ನು ವಿವರಿಸಿರಿ.
2. ಈ ಕೀರ್ತನೆಯಲ್ಲಿ "ನೆನಪು ಮಾಡಿಕೊಳ್ಳಿರಿ" ಎಂಬ ಪದ ಹೇಗೆ ಉಪಯೋಗಿಸಲ್ಪಟ್ಟಿದೆ ಎಂಬುದನ್ನು ಅಭ್ಯಾಸಿಸಿರಿ (ವಚನ 6, 8, 42 ನೋಡಿ).
3. ಈ ಕೀರ್ತನೆಯ ಮೊದಲ ಭಾಗದಲ್ಲಿ ಹಳೇ ಒಡಂಬಡಿಕೆಯ 4 ಚಿರಪರಿಚಿತ ವ್ಯಕ್ತಿಗಳನ್ನು ಉಲ್ಲೇಖಿಸಲಾಗಿದೆ (ವಚನ 8–23). ಅವರು ಯಾರು ಮತ್ತು ಯಾಕೆ ಅವರ ಬಗ್ಗೆ ಉಲ್ಲೇಖಿಸಲಾಗಿದೆ ಎಂದು ನೀವು ಯೋಚಿಸುವಿರಿ?
4. ಕೀರ್ತನೆಗಾರನು ಐಗುಪ್ತದ ಮೇಲಿನ ಹತ್ತು ಬಾಧೆಗಳನ್ನು "ಮಿಶ್ರಣ" ಮಾಡಿದ್ದಾನೆಂದು ನೀವು ಯಾಕೆ ಯೋಚಿಸುವಿರಿ (ಪ್ರಶ್ನೆ 7 ಕ್ಕೆ ನಮ್ಮ ಉತ್ತರವು "ಮಿಶ್ರಣ"ವನ್ನು ವಿವರಿಸುತ್ತದೆ)?
5. ಈ ಕೀರ್ತನೆಯಲ್ಲಿ ದೇವರನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ವಿವರಿಸಿ.
6. ಕೀರ್ತನೆ 105 ಮತ್ತು ಈ ಅಧ್ಯಯನವು ದೇವರು ಮತ್ತು ಆತನ ಜನರ ನಡುವಿನ ಸಂಬಂಧದ ಆಳವಾದ ತಿಳುವಳಿಕೆಯನ್ನು ತಲುಪಲು ನಿಮಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ಎಂದು ಗುಂಪಿನಲ್ಲಿ ಹಂಚಿಕೊಳ್ಳಿರಿ.
7. ಕೀರ್ತನೆ 105 ಮತ್ತು ಈ ಅಧ್ಯಯನವನ್ನು ನಿಮ್ಮ ಸೇವೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 105 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನೆನಪುಮಾಡಿಕೊಳ್ಳುವುದು ಹಳೇ ಮತ್ತು ಹೊಸ ಒಡಂಬಡಿಕೆಯ ಕಾಲದಲ್ಲಿ ಸಹ ಯೆಹೂದ್ಯರ ಧಾರ್ಮಿಕ ಜೀವನದ ಒಂದು ಬಹು ಮುಖ್ಯ ಭಾಗವಾಗಿತ್ತು. ರಕ್ಷಣಾ ಚರಿತ್ರೆಯ ಕೀರ್ತನೆಗಳು ದೇವರು ತನ್ನ ಜನರಿಗೆ ಏನೆಲ್ಲಾ ಮಾಡಿದ್ದಾನೆ ಎಂಬುದನ್ನು ನೆನಪು ಮಾಡಿಕೊಳ್ಳುವ ಕೀರ್ತನೆಗಳಾಗಿದ್ದವು. ಯೆಹೂದಿ ಹಬ್ಬಗಳು (ಯೇಸು ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಆಚರಿಸಿದ ಪಸ್ಕಹಬ್ಬವನ್ನು ಸೇರಿಸಿ) ಹೆಚ್ಚಾಗಿ ನೆನಪಿನ ಹಬ್ಬಗಳಾಗಿದ್ದವು. ದೇವಜನರಾದ ನಾವು ಇಂದು ಇದರಿಂದ ಏನನ್ನು ಕಲಿಯಬಹುದು? ನಮ್ಮ ವೈಯಕ್ತಿಕ ಜೀವನದಲ್ಲಿ ಹೆಚ್ಚಾಗಿ ದೇವರು ಏನೆಲ್ಲಾ ಮಾಡಿದ್ದಾನೆಂಬ ಸಂಗತಿಗಳನ್ನು ನೆನಪು ಮಾಡಿಕೊಳ್ಳುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕಾ? ನಾವು ಇದನ್ನು ಹೇಗೆ ಮಾಡಬಹುದು?

2. ಮೊದಲ 4 ವಚನಗಳು ಪ್ರಬೋಧನೆಗಳಾಗಿವೆ. ಕೃತಜ್ಞತಾಸ್ತುತಿ ಮಾಡಿರಿ, ಆತನ ನಾಮದ ಮಹತ್ತನ್ನು ವರ್ಣಿಸಿರಿ, ಆತನ ಕೃತ್ಯಗಳನ್ನು ಪ್ರಸಿದ್ಧಪಡಿಸಿರಿ, ಆತನನ್ನು ಕೀರ್ತಿಸಿರಿ, ಭಜಿಸಿರಿ, ಆತನ ದರ್ಶನವನ್ನು ಅಪೇಕ್ಷಿಸಿರಿ, ಇತ್ಯಾದಿ. ನಾವು ನಮ್ಮ ಆತ್ಮೀಕ ಜೀವಿತ ಮತ್ತು ನಮ್ಮ ಸಭೆಯ ಸೇವೆಗಾಗಿ ಈ ರೀತಿಯ ಮನೋಭಾವನೆಗಳಿಂದ ಏನನ್ನು ಕಲಿಯಬಹುದು?

3. ಕೆಲ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ:

   ಅ. ದೇವರು ನಿಮಗಾಗಿ ಏನನ್ನು ಮಾಡಿದ್ದಾನೆಂದು ನೆನಪು ಮಾಡಿಕೊಳ್ಳಿರಿ.

   ಆ. ದೇವರು ಯಾರಾಗಿದ್ದಾನೆ ಮತ್ತು ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ನಿಮಗಾಗಿ ಏನನ್ನು ಮಾಡಿದ್ದಾನೆಂಬುದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

ಕೀರ್ತನೆ 110

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆಬರಹವು **"ದಾವೀದನ ಕೀರ್ತನೆ"** ಎಂದು ಹೇಳುತ್ತದೆ.

ಇದೊಂದು ರಾಜವೈಭವದ ಕೀರ್ತನೆಯಾಗಿದೆ. ರಾಜವೈಭವದ ಕೀರ್ತನೆಯ ವಿಷಯವಸ್ತುವು ಇಸ್ರಾಯೇಲ್ ಅರಸತ್ವವಾಗಿದೆ. ದಾವೀದನು ತನ್ನ ಮಗನಾದ ಸೊಲೊಮೋನನ ಪಟ್ಟಾಭಿಷೇಕದ ಸಂದರ್ಭದಲ್ಲಿ ಈ ಕೀರ್ತನೆಯನ್ನು ರಚಿಸಿರಬಹುದೆಂಬುದು ವಿಶ್ಲೇಷಕರ ನಡುವಿನ ಒಂದು ಸಾಮಾನ್ಯ ಅನಿಸಿಕೆಯಾಗಿದೆ. ಹಾಗಾಗಿ ಆತನು **"ನನ್ನ ಒಡೆಯನು"** ಎಂದು ಮಾತನಾಡಿದನು (ವಚನ 1).

ಅದೇ ಸಮಯ ದಾವೀದನು ತನ್ನ ಮಾತುಗಳು ಪ್ರವಾದನಾ ರೂಪದಲ್ಲಿ ಸಹ ಅನ್ವಯವಾಗುತ್ತವೆಂದು ಅರಿತುಕೊಂಡಿರಬಹುದು. ಕೀರ್ತನೆ 110 ಸ್ಪಷ್ಟವಾಗಿ ಯಾವುದೇ ಚಾರಿತ್ರಿಕ ಅರಸನ ಬಗ್ಗೆ ಅಲ್ಲ ಬದಲಾಗಿ ಇದು ಒಂದು ವಿಭಿನ್ನ ಬಗೆಯ ಅರಸತ್ವ, ಮೆಸ್ಸೀಯನ ಆಳ್ವಿಕೆಯನ್ನು ಮುಂತಿಳಿಸುತ್ತದೆ. ಅಲ್ಲದೆ ಆದಿಸಭೆಯಿಂದ ತಿಳಿಸಲ್ಪಟ್ಟಂತೆ ಈ ರೀತಿಯಲ್ಲಿ ಯೆಹೂದ ಬರಹಗಾರರು ಇದರ ಸಂದೇಶವನ್ನು ಅರ್ಥೈಸಿಕೊಂಡರು.

ಈ ಕೀರ್ತನೆಯ ಮೊದನೆಯ ವಚನವು ಯೇಸು ಕ್ರಿಸ್ತನಿಗೆ ಸೂಚಿಸಿ ಹೊಸ ಒಡಂಬಡಿಕೆಯಲ್ಲಿ ಅನೇಕ ಬಾರಿ ಉಪಯೋಗಿಸಲ್ಪಟ್ಟಿದೆ (ಉದಾ: ಮತ್ತಾಯ. 22:44–45, 26:64, ಮಾರ್ಕ. 12:36–37, 14:62, 16:19, ಲೂಕ. 20:42–44, 22:69, ಅಪೊ.ಕೃತ್ಯ. 2:34–35, 7:55–56, ರೋಮಾ. 8:34, 1 ಕೊರಿ. 15:25, ಕೊಲೊ. 3:1, ಇಬ್ರಿಯ. 1:13, 8:1, 10:12, 12:2). ಇಬ್ರಿಯ ಪತ್ರಿಕೆಯು (ವಚನ 4 ರಲ್ಲಿ) ಅನೇಕ ಬಾರಿ ಯೇಸು ಕ್ರಿಸ್ತನಿಗೆ ಪೂರ್ವಛಾಯೆಯಾಗಿರುವ ಮೆಲ್ಕಿಜೆದೇಕನನ್ನು ಸೂಚಿಸುತ್ತದೆ.

ಇದರ ಪ್ರಯುಕ್ತ ಕೆಲವು ಹೇಳಿಕೆಗಳನ್ನು ಹೇಗೆ ಭಾಷಾಂತರಿಸಬೇಕು ಮತ್ತು ವ್ಯಾಖ್ಯಾನಿಸಬೇಕೆಂದು ಸತ್ಯವೇದ ಪಂಡಿತರುಗಳು ಹರಸಾಹಸಪಟ್ಟಿದ್ದಾರೆ. ಈ ಕೀರ್ತನೆಯಲ್ಲಿ **"ಯಾರು ಯಾರೆಂದು"** ಭಿನ್ನಾಭಿಪ್ರಾಯಗಳಿವೆ. 5 ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ರಚನೆಯ ಬಗ್ಗೆ ನನ್ನ ತಿಳುವಳಿಕೆಯನ್ನು ನಾನು ತಿಳಿಸಿದ್ದೇನೆ.

ಕೂತುಕೊಂಡಿರು (ವಚನ 1): ದೇವರೊಂದಿಗೆ ತನ್ನ ಸಿಂಹಾಸನದ ಮೇಲೆ ಕೂತುಕೊಳ್ಳಲು ಆಮಂತ್ರಣ.

ನನ್ನ ಬಲಗಡೆಯಲ್ಲಿ (ವಚನ 1): ಅರಸನ ಪಕ್ಕದಲ್ಲಿನ ಸ್ಥಾನವು ಒಂದು ಗೌರವದ ಸ್ಥಾನವಾಗಿದೆ. ವಚನ 5 ರೊಂದಿಗೆ ಹೋಲಿಸಿರಿ. ಇಲ್ಲಿ ವಿಭಿನ್ನ ಅರ್ಥವಿದೆ.

ಚೀಯೋನ್ (ವಚನ 2): ಚೀಯೋನ್ ಪರ್ವತವು ದಾವೀದನ ನಗರ ಯೆರೂಸಲೇಮಿನ ಒಂದು ಭಾಗವಾಗಿದೆ.

ಸದಾಕಾಲವೂ (ವಚನ 4): ಯೋಹಾನ 12:34 **"ಕ್ರಿಸ್ತನು ಸದಾಕಾಲವೂ ಇರುತ್ತಾನೆಂದು ಧರ್ಮಶಾಸ್ತ್ರದಲ್ಲಿ ಕೇಳಿದ್ದೇವೆ"** ರೊಂದಿಗೆ ಹೋಲಿಸಿರಿ.

ಮೆಲ್ಕಿಜೆದೇಕ (ವಚನ 4): ಆದಿಕಾಂಡ 14:18–20 ರಲ್ಲಿ ಮೆಲ್ಕಿಜೆದೇಕನು (ಹೆಸರಿನ ಅರ್ಥ ನೀತಿಯ ರಾಜ) ಪರಾತ್ಪರನಾದ ದೇವರ ಯಾಜಕನಾಗಿದ್ದನು, ಈತನು ಸಾಲೇಮಿನಿಂದ ಬಂದವನು (ಸಾಲೇಮ್ – ಸಮಾಧಾನ – ಇದನ್ನೇ ನಂತರ ಯೆರೂಸಲೇಮ್ ಎಂದು ಕರೆಯಲಾಯಿತು). ಈತನು ಅಬ್ರಹಾಮನನ್ನು ಆಶೀರ್ವದಿಸಿದನು ಮತ್ತು ಆದಿಕಾಂಡ 14, ಕೀರ್ತನೆ 110 ಮತ್ತು ಇಬ್ರಿಯ (15:6, 10, 6:20, 7:1, 10–11, 15, 17) ದಲ್ಲಿ ಮಾತ್ರ ಮೆಲ್ಕಿಜೆದೇಕನ ಬಗ್ಗೆ ತಿಳಿಸಲಾಗಿದೆ

ಕರ್ತನು (ವಚನ 5): ಇದು ಇಬ್ರಿಯ ಪದ **"ಯೆಹೋವ"** ಬದಲಾಗಿ **"ಅಡೋನೈ"** ಆಗಿದೆ (ವಚನ 1, 2, 4, 5 ಪ್ರಾರಂಭದಲ್ಲಿ ದೇವರ ವೈಯಕ್ತಿಕ ಹೆಸರನ್ನು ಕಾಣಬಹುದು). ಹಳೇ ಒಡಂಬಡಿಕೆಯಲ್ಲಿ ಈ ನಾಮಧೇಯವನ್ನು ದೇವರ ಬಗ್ಗೆ ಬಳಸಲಾಗಿದೆ.

ಕೋಪದ ದಿನದಲ್ಲಿ (ವಚನ 5): ಈ ಹೇಳಿಕೆಯು ದೇವರ ನ್ಯಾಯತೀರ್ಪಿನ ದಿನವನ್ನು ಸೂಚಿಸುತ್ತದೆ.

ಹೆಣಗಳಿಂದ ಅದನ್ನು ತುಂಬಿಸುವನು (ವಚನ 6): ಇದು ಯುದ್ಧಭೂಮಿಯ ಚಿತ್ರಣ.

ತಲೆಯೆತ್ತುವನು (ವಚನ 7): ಜಯ ಮತ್ತು ವಿಜಯೋತ್ಸಹಕ್ಕೆ ಇದೊಂದು ರೂಪಲಂಕಾರವಾಗಿದೆ.

ಪ್ರಶ್ನೆಗಳು

1. ನೀವು ಕೀರ್ತನೆ 110 ಅನ್ನು ಹೇಗೆ ರಚಿಸುತ್ತೀರಿ?

2. 1 ನೇ ವಚನದಲ್ಲಿ ದಾವೀದನ ಒಡೆಯನಿಗೆ ದೇವರು ನೀಡಿದ ಸಂದೇಶವೇನು? ನಿಮ್ಮ ಸ್ವಂತ ಪದಗಳನ್ನು ಬಳಸಿ. ಅಲ್ಲದೆ (“ನನ್ನ”, “ನಾನು” ಮತ್ತು “ನಿಮ್ಮ”) ಸರ್ವನಾಮಗಳು ಯಾರನ್ನು ಉಲ್ಲೇಖಿಸುತ್ತವೆ ಎಂಬುದನ್ನು ಸಹ ವಿವರಿಸಿ.

3. 2–3 ನೇ ವಚನಗಳಲ್ಲಿ ದಾವೀದನು ತನ್ನ ಒಡೆಯನಿಗೆ (ಭವಿಷ್ಯದ ರಾಜ) ಏನು ಹೇಳುತ್ತಾನೆ ಮತ್ತು “ನೀವು” ಮತ್ತು “ನಿಮ್ಮ” ಎಂಬ ಸರ್ವನಾಮಗಳು ಯಾರನ್ನು ಉಲ್ಲೇಖಿಸುತ್ತವೆ? ನಿಮ್ಮ ಸ್ವಂತ ಪದಗಳನ್ನು ಬಳಸಿ.

4. 4 ನೇ ವಚನದಲ್ಲಿ ದೇವರು ಭವಿಷ್ಯದ ಅರಸ – ಯಾಜಕನಿಗೆ ಯಾವ ವಾಗ್ದಾನವನ್ನು ನೀಡುತ್ತಾನೆ ಮಾಡುತ್ತಾನೆ ಮತ್ತು “ನೀನು” ಎಂಬ ಸರ್ವನಾಮ ಯಾರನ್ನು ಉಲ್ಲೇಖಿಸುತ್ತದೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

5. 5–7 ನೇ ವಚನಗಳಲ್ಲಿ ದಾವೀದನು ಯೆಹೋವನ (ಭವಿಷ್ಯದ ರಾಜ–ಯಾಜಕ) ಕುರಿತಾಗಿ ಏನು ಹೇಳುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ. ಸರ್ವನಾಮಗಳು (“ನಿಮ್ಮ” ಮತ್ತು “ಅವನು/ಅವನ”) ಯಾರನ್ನು ಉಲ್ಲೇಖಿಸುತ್ತವೆ ಎಂಬುದನ್ನು ಸಹ ವಿವರಿಸಿ.

ಕೀರ್ತನೆ 110 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 4 ರಲ್ಲಿನ ಮೆಲ್ಕಿಜೆದೇಕನೊಂದಿಗಿನ ಹೋಲಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

2. 3 ನೇ ವಚನದ ದ್ವಿತೀಯಾರ್ಧ ಮತ್ತು 7 ನೇ ವಚನದ ಮೊದಲಾರ್ಧದ ನಡುವೆ ಒಂದು ಸಮಾನಾಂತರತೆ ಇದ್ದಂತೆ ಕಾಣುತ್ತದೆ. ನಾವು ಇದನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ನೀವು ಆಲೋಚಿಸುವಿರಿ?

3. ಈ ಪ್ರವಾದನ ಮತ್ತು ಮೆಸ್ಸೀಯನ ಕೀರ್ತನೆಯನ್ನು ಸ್ವತಃ ದಾವೀದನು ಹೇಗೆ ಅರ್ಥಮಾಡಿಕೊಂಡಿದ್ದಾನೆಂದು ನೀವು ಯೋಚಿಸುವಿರಿ.

4. ಈ ಕೀರ್ತನೆಯ ವಿಷಯಾಂಶಗಳನ್ನು ಕೀರ್ತನೆ 2 (ಮತ್ತೊಂದು ರಾಜ ಮತ್ತು ಮೆಸ್ಸೀಯನ ಕೀರ್ತನೆ) ರೊಂದಿಗೆ ಹೋಲಿಸಿರಿ. ನಿಮ್ಮ ಅವಲೋಕನಗಳನ್ನು ಗಮನಿಸಿ.

ಕೀರ್ತನೆ 110 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಯೇಸು ಕ್ರಿಸ್ತನು ಈ ಕೀರ್ತನೆಯಲ್ಲಿನ ಪ್ರವಾದನೆಯ ನೆರವೇರಿಕೆಯ ಮೆಸ್ಸೀಯನಾಗಿದ್ದಾನೆ. ಆತನು ನಮ್ಮ ಮಹಾರಾಜನಾಗಿದ್ದಾನೆ ಮತ್ತು ನಮ್ಮ ನಿತ್ಯತ್ವದ ಮಹಾಯಾಜಕನಾಗಿದ್ದಾನೆ. ನಿತ್ಯವೂ ಆತನನ್ನು ಸೇವಿಸುತ್ತಾ ಜೀವಿಸುವ ನಿಮಗೆ ಇದು ಏನೆಂದು ಅರ್ಥೈಸುತ್ತದೆಂದು ವಿಮರ್ಶಿಸಿರಿ.

2. ನಿಮ್ಮ ಅರಸ ಮತ್ತು ಮಹಾಯಾಜಕನಾದ ಯೇಸು ಕ್ರಿಸ್ತನು ಯಾರಾಗಿದ್ದಾನೆ ಎಂಬ ಆಳವಾದ ತಿಳುವಳಿಕೆಗಾಗಿ ಪ್ರಾರ್ಥಿಸಿರಿ.

3. ಈ ಕೀರ್ತನೆಯಲ್ಲಿ “ಈಗಾಗಲೇ – ಇನ್ನೂ ಅಲ್ಲ” ಎಂಬ ತತ್ವವು ಸ್ಪಷ್ಟವಾಗಿ ಕಾಣಿಸುತ್ತದೆ. ಯೇಸು ಮೆಸ್ಸೀಯನು ಈಗಾಗಲೇ ರಾಜನಾಗಿದ್ದಾನೆ, ಆತನು ದೇವರ ಬಲಭಾಗದಲ್ಲಿ ಕುಳಿತಿದ್ದಾನೆ (ವಚನ 1). ಆದರೆ ಆತನ ಶತ್ರುಗಳು ಇನ್ನೂ ಸಂಪೂರ್ಣವಾಗಿ ಆತನಿಗೆ ಒಳಗಾಗಿಲ್ಲ, ಅವರು ಇನ್ನೂ ಸಂಪೂರ್ಣವಾಗಿ “ಆತನ ಕಾಲಿಗೆ ಪಾದಪೀಠ”ವಾಗಿಲ್ಲ (ವಚನ 1). ಇದು ಯೇಸು ಪ್ರಥಮ ಬಾರಿಗೆ ಈ ಲೋಕಕ್ಕೆ ಬಂದು ದೇವರ ರಾಜ್ಯವನ್ನು ಸ್ಥಾಪಿಸಿದ ಕಾಲ ಮತ್ತು ಆತನು ಮತ್ತೆ ಬಂದು ದೇವರ ರಾಜ್ಯವನ್ನು ಸಂಪೂರ್ಣ ಶಕ್ತಿ ಮತ್ತು ಮಹಿಮೆಯಲ್ಲಿ ಸ್ಥಾಪಿಸುವ ನಡುವಿನ ಅವಧಿ. ಈಗ ತನ್ನ ಶಕ್ತಿಯ ದಂಡವನ್ನು ಚೀಯೋನಿನಿಂದ ವಿಸ್ತರಿಸುವ ಅವಧಿಯಿದು (ವಚನ 2). ದೇವರ ರಾಜ್ಯವು ವ್ಯಾಪಿಸುತ್ತಿರುವ ಕಾಲವಿದು. ತನ್ನ “ಸೈನ್ಯವನ್ನು” (ವಚನ 3), ಅಂದರೆ ತನ್ನ ಸಭೆಯನ್ನು ಸಿದ್ಧಪಡಿಸುತ್ತಿರುವ ಸಮಯವಿದು. ಇದೇ ಯೇಸುವಿನ ಮಹಾ ಆಜ್ಞೆಯ ಅವಧಿ: “ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು

ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು" (ಮತ್ತಾಯ. 28:18–20).

ಈ ಸತ್ಯವನ್ನು ಮನನಮಾಡಿ. ದೇವರು ನಿಮ್ಮನ್ನು ಕರೆಯಲಿ ಮತ್ತು ತನ್ನ ರಾಜ್ಯದ ವಿಸ್ತಾರದ ಕಾರ್ಯದಲ್ಲಿ ಬಳಸಲೆಂದು ಪ್ರಾರ್ಥಿಸಿ.

ಕೀರ್ತನೆ 111

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ ಈ ಕೀರ್ತನೆಯು ಯಾವುದೇ ತಲೆಬರಹವನ್ನು ಹೊಂದಿಲ್ಲ. ಇದು ಹಲ್ಲೆಲೂಯದಿಂದ ಪ್ರಾರಂಭವಾಗುತ್ತದೆ. ಇಬ್ರಿಯದಲ್ಲಿ ಇದು ದೇವರಿಗೆ ಸ್ತೋತ್ರವೆಂದಾಗುತ್ತದೆ. ನಂತರ 22 ಸಾಲುಗಳನ್ನು ಕಾಣಬಹುದು. ಪ್ರತೀ ಸಾಲುಗಳು ಸಹ ಇಬ್ರಿಯ ವರ್ಣಮಾಲೆಯ ಅಕ್ಷರದಿಂದ ಪ್ರಾರಂಭವಾಗುತ್ತವೆ.

ಹಾಗಾಗಿ ಮುಂದಿನ 112ನೇ ಕೀರ್ತನೆಯಂತೆ ಕೀರ್ತನೆ 111 ಸಹ ಒಂದು **"ಒಗಟು ರೂಪದ ಕೀರ್ತನೆ"** ಯಾಗಿದೆ. ಈ ಎರಡೂ ಕೀರ್ತನೆಗಳು ಸಹ ಒಬ್ಬ ವ್ಯಕ್ತಿಯಿಂದ ಬರೆಯಲ್ಪಟ್ಟಿವೆ ಮತ್ತು ಮೂಲತಃ ಅವನ್ನು ಜೋಡಿಯಾಗಿ ಉಪಯೋಗಿಸಲಾಗುತಿತ್ತು ಎಂದು ಸತ್ಯವೇದ ಪಂಡಿತರುಗಳು ಯೋಚಿಸುತ್ತಾರೆ. ಈ ಕೀರ್ತನೆಯು ಒಂದು ಸ್ತುತಿ ಗೀತೆಯಾಗಿದ್ದು ದೇವರಿಗೆ ಹೆಚ್ಚು ಒತ್ತು ಕೊಡುತ್ತದೆ. ಮುಂದಿನ ಕೀರ್ತನೆಯು ಒಂದು ಜ್ಞಾನದ ಕೀರ್ತನೆಯಾಗಿದ್ದು ದೇವರಲ್ಲಿ ಭಯಭಕ್ತಿಯುಳ್ಳ ವ್ಯಕ್ತಿಯ ಆಶೀರ್ವಾದಕ್ಕೆ ಹೆಚ್ಚು ಒತ್ತುಕೊಡುತ್ತದೆ.

ಕೀರ್ತನೆ 111 ದೇವರ ಕರುಣೆ ಮತ್ತು ನೀತಿವಂತಿಕೆಗಾಗಿ ದೇವರಿಗೆ ಹಾಡುವ ಒಂದು ಸ್ತುತಿಗೀತೆಯಾಗಿದೆ. ಇದು ಸ್ತುತಿಯೊಂದಿಗೆ ಸಂಯೋಜಿತವಾಧ ಬುದ್ಧಿವಂತಿಕೆಯ ಟಿಪ್ಪಣಿಯೊಂದಿಗೆ ಕೊನೆಗೊಳ್ಳುತ್ತದೆ (ಕರ್ತನ ಭಯವು ಜ್ಞಾನದ ಆರಂಭವಾಗಿದೆ ... ಆತನ ಸ್ತುತಿ ಶಾಶ್ವತವಾಗಿ ಇರುತ್ತದೆ)

ಯಥಾರ್ಥರ ಕೂಟದಲ್ಲಿ (ವಚನ 1): ಇದೇ ವಚನದಲ್ಲಿರುವ ನೆರೆದ ಸಭೆಗೆ ಇದೊಂದು ಸಮಾನಾಂತರ ಪದವಾಗಿದೆ. ಇವೆರಡೂ ಸಹ ಆರಾಧನೆಗಾಗಿ ಕೂಡುವ ದೇವಜನರನ್ನು ಸೂಚಿಸುತ್ತವೆ.

ಆತನ ನೀತಿಯು (ವಚನ 3): ದೇವರ ನೀತಿವಂತಿಕೆಯು ಆತನ ಮಹಿಮೆಯ ಮತ್ತು ಘನಮಾನಗಳುಳ್ಳ ಕಾರ್ಯಗಳ ಮೂಲಕ ವ್ಯಕ್ತವಾಗುತ್ತದೆಂದು ಈ ವಚನದ ಪದ್ಯರೂಪಿ ರಚನೆಯು ತಿಳಿಸುತ್ತದೆ.

ಅದ್ಭುತಕೃತ್ಯಗಳು (ವಚನ 4): ಇದು ದೇವರ ರಕ್ಷಣಾ ಕಾರ್ಯಗಳನ್ನು ಸೂಚಿಸುತ್ತವೆ. ಕೆಲವೊಮ್ಮೆ ಇವು ಅದ್ಭುತಗಳನ್ನು ಒಳಗೊಂಡಿರುತ್ತವೆ.

ಯೆಹೋವನು ದಯೆಯೂ ಕನಿಕರವೂ ಉಳ್ಳವನು (ವಚನ 4): ಸೀನಾಯಿ ಬೆಟ್ಟದ ಮೇಲೆ ದೇವರೊಂದಿಗಿನ ಮೋಶೆಯ ಅನುಭವದೊಂದಿಗೆ ಹೋಲಿಸಿರಿ (ನೋಡಿ ವಿಮೋಚನಕಾಂಡ 34:6–7).

ಆತನ ಕೈ ಕೆಲಸಗಳು (ವಚನ 7): ದೇವರ ಕಾರ್ಯಗಳು.

ಪ್ರಶ್ನೆಗಳು

1. ನೀವು ಕೀರ್ತನೆ 111 ಅನ್ನು ಹೇಗೆ ರಚಿಸುತ್ತೀರಿ?
2. ಕೀರ್ತನೆಗಾರನು ದೇವರನ್ನು ಯಾವ ಸನ್ನಿವೇಶದಲ್ಲಿ ಸ್ತುತಿಸುತ್ತಾನೆ?
3. ಈ ಕೀರ್ತನೆಯಲ್ಲಿ ಯಾರನ್ನು ಸಂಬೋಧಿಸಲಾಗಿದೆ?
4. ಕೀರ್ತನೆಗಾರನು ದೇವರನ್ನು ಆತನ ಕೃತ್ಯಗಳು (ವಚನ 2), ಆತನ ಕಾರ್ಯಗಳು (ವಚನ 3), ಆತನ ಅದ್ಭುತ ಕೃತ್ಯಗಳು (ವಚನ 4) ಮತ್ತು ಆತನ ಕೈ ಕೆಲಸಗಳಿಗಾಗಿ (ವಚನ 7) ಸ್ತುತಿಸಬೇಕೆಂದು ಕರೆ ನೀಡುತ್ತಾನೆ.
   ಅ. ಕೀರ್ತನೆ 111 ರ ಪ್ರಕಾರ ಈ **"ಕೃತ್ಯಗಳು", "ಕಾರ್ಯಗಳು", "ಕೈ ಕೆಲಸ"** ನಿಖರವಾಗಿ ಯಾವುವು? ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿ.
   ಆ. ಕೀರ್ತನೆಗಾರನು ಈ **"ಕೃತ್ಯಗಳು", "ಕಾರ್ಯಗಳು"** ಮತ್ತು **"ಕೈ ಕೆಲಸಗಳ"** ಗುಣಮಟ್ಟ ವರ್ಣಿಸಲು ಕೀರ್ತನೆಗಾರನು ಯಾವ ಪದಗಳನ್ನು ಉಪಯೋಗಿಸುತ್ತಾನೆ?
5. 10 ನೇ ವಚನದ ಪ್ರಕಾರ ಜ್ಞಾನದ ಮೂಲ ಮತ್ತು ತಿಳುವಳಿಕೆಯ ಮೂಲ ಯಾವುದು?

ಕೀರ್ತನೆ 111 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಕೀರ್ತನೆಯ 10 ನೇ ವಚನವನ್ನು ಕೀರ್ತನೆ 112 ರ ಮೊದಲ ವಚನದೊಂದಿಗೆ ಹೋಲಿಸಿ. ನಿಮ್ಮ ಅವಲೋಕನಗಳನ್ನು ಗಮನಿಸಿ.

2. ಕೀರ್ತನೆಗಾರನು ದೇವರನ್ನು ಆತನ ಕೃತ್ಯಗಳು (ವಚನ 2), ಆತನ ಕಾರ್ಯಗಳು (ವಚನ 3), ಅದ್ಭುತ ಕೃತ್ಯಗಳು (ವಚನ 4), ಆತನ ಕೈ ಕೆಲಸ (ವಚನ 7) ಗಳಿಗಾಗಿ ಆತನನ್ನು ಕೊಂಡಾಡಬೇಕೆಂದು ಕರೆಯುತ್ತಾನೆ.

   ಅ. ಈ **"ಕೃತ್ಯಗಳ"**, **"ಕಾರ್ಯಗಳ"** ಮತ್ತು **"ಅದ್ಭುತ ಕೃತ್ಯಗಳ"** ಐತಿಹಾಸಿಕ ಹಿನ್ನಲೆಯನ್ನು ನೀವು ಹೇಗೆ ವಿವರಿಸುತ್ತೀರಿ?

   ಆ. ನೀವು ಈ **"ಕೃತ್ಯಗಳು, ಕಾರ್ಯಗಳು ಮತ್ತು ಅದ್ಭುತ ಕೃತ್ಯಗಳು"** ಆಧ್ಯಾತ್ಮಿಕ ಹಿನ್ನಲೆಯನ್ನು ಹೇಗೆ ವಿವರಿಸುತ್ತೀರಿ?

   ಇ. ಇಂದು ದೇವಜನರಾದ ನಮಗೆ ಈ ಹಿಂದಿನ ಎರಡು ಅಂಶಗಳು ಹೇಗೆ ಅನ್ವಯವಾಗುತ್ತವೆ?

3. ಕೀರ್ತನೆ 111 ಮತ್ತ ಈ ಅಧ್ಯಯನವು ದೇವರನ್ನು ಇನ್ನೂ ಉತ್ತಮವಾಗಿ ಕೊಂಡಾಡಲು ಮತ್ತು ಕೃತಜ್ಞತೆ ಸಲ್ಲಿಸಲು ನಿಮಗೆ ಹೇಗೆ ಸಹಾಯವಾಯಿತೆಂದು ನೀವು ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 111 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ದೇವರು ಇಸ್ರಾಯೇಲ್ಯರಿಗೆ ಇತರ ರಾಷ್ಟ್ರಗಳ ಭೂಮಿಯನ್ನು ಕೊಟ್ಟನು ಮತ್ತು ಇದು ದೇವರ ಕಾರ್ಯಗಳ ಶಕ್ತಿಯ ಒಂದು ಅಭಿವ್ಯಕ್ತಿಯಾಗಿತ್ತು (ವಚನ 6). ಈ ಸತ್ಯದ ಒಂದು ಅನ್ವಯ ಸುವಾರ್ತೆಯ ವಿಸ್ತರಣೆಯಾಗಿರಬಹುದು. ಸುವಾರ್ತೆ ವ್ಯಾಪಿಸುತ್ತಿರುವಾಗ ಮತ್ತು ದೇವರ ರಾಜ್ಯವು ವಿಸ್ತಾರವಾಗುತ್ತಿರುವಾಗ ದೇವರು ತನ್ನ ಜನರಿಗೆ ಇತರ ರಾಷ್ಟ್ರಗಳ ಭೂಮಿಯನ್ನು ಕನಿಷ್ಠ ಆತ್ಮೀಯ ಅರ್ಥದಲ್ಲಿ ನೀಡುತ್ತಿದ್ದಾನೆ. ಇದರ ಬಗ್ಗೆ ನಿಮ್ಮ ಗುಂಪಿನಲ್ಲಿ ಆಲೋಚನೆಗಳನ್ನು ಹಂಚಿಕೊಳ್ಳಿ. ನಂತರ ದೇವರ ಮುಂದೆ ಪ್ರಾರ್ಥಿಸಿ: ದೇವರ ಕಾರ್ಯಗಳ ಶಕ್ತಿ (ಆತ್ಮಗಳ ರಕ್ಷಣೆಯು ಮತ್ತು ಸುವಾರ್ತೆಯ ಹರಡುವಿಕೆಯು) ನಿಮ್ಮದೇ ಸಭೆಗಳ ಸೇವೆಯಲ್ಲಿ ಇನ್ನಷ್ಟು ಸ್ಪಷ್ಟವಾಗಲಿ ಎಂದು ದೇವರನ್ನು ಪ್ರಾರ್ಥಿಸಿ.

2. ದೇವರು ತನ್ನ ಜನರಿಗೆ ವಿಮೋಚನೆಯನ್ನು ಉಂಟುಮಾಡಿದ್ದಾನೆ ಮತ್ತು ಸೀನಾಯಿ ಪರ್ವತದಲ್ಲಿ ಅವರೊಂದಿಗೆ ಶಾಶ್ವತವಾದ ಒಡಂಬಡಿಕೆಯನ್ನು ಮಾಡಿಕೊಂಡನು (ವಚನ 9). ದೇವರು ನಿಮಗಾಗಿ ಸಹ ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ವಿಮೋಚನೆ (ಬಿಡುಗಡೆ) ಯನ್ನುಂಟುಮಾಡಿದ್ದಾನೆ. ಮತ್ತು ಕಲ್ವಾರಿ ಬೆಟ್ಟದಲ್ಲಿ ಯೇಸುವಿನ ರಕ್ತದ ಮೂಲಕ ಆತನು ನಿಮ್ಮೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ. ಈ ಸತ್ಯಾಂಶಗಳನ್ನು ಧ್ಯಾನಿಸಿರಿ ಮತ್ತು ಆತನ ಬಿಡುಗಡೆ ಮತ್ತು ಒಡಂಬಡಿಕೆಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

ಅಸೈನ್‌ಮೆಂಟ್: ಕೀರ್ತನೆ 111

ಕೀರ್ತನೆ 111 ಮತ್ತು ಈ ಅಧ್ಯಯವನ್ನಾದರಿಸಿ ಒಂದು ಸತ್ಯವೇದ ಅಧ್ಯಯನ ಅಥವಾ ಒಂದು ಸಂದೇಶವನ್ನು ಸಿದ್ಧಪಡಿಸಿರಿ.

ಕೀರ್ತನೆ 112

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ 112 ನೇ ಕೀರ್ತನೆಗೆ ಯಾವುದೇ ತಲೆಬರಹವಿಲ್ಲ. ಇದು ಹಲ್ಲೆಲೂಯದಿಂದ ಪ್ರಾರಂಭವಾಗುತ್ತದೆ. ಇದು **"**ಕರ್ತನನ್ನು ಸ್ತುತಿಸುವ**"** ಇಬ್ರಿಯ ಪದವಾಗಿದೆ. ಕೆಲವು ಸತ್ಯವೇದ ಆವೃತ್ತಿಗಳಲ್ಲಿ ಇದನ್ನು ಅನುವಾದಿಸಲಾಗಿಲ್ಲ. ನಂತರ 22 ಸಾಲುಗಳನ್ನು ಅನುಸರಿಸಿ (ಕನ್ನಡ **ಸತ್ಯವೇದವು** ಮತ್ತು **ಪವಿತ್ರ ಗ್ರಂಥ** ಭಾಷಾಂತರಗಳಲ್ಲಿನ ಪಠ್ಯಗಳ ವಿನ್ಯಾಸದಲ್ಲಿ ಸ್ಪಷ್ಟವಾಗಿಲ್ಲ), ಪ್ರತಿಯೊಂದೂ ಇಬ್ರಿಯ ವರ್ಣಮಾಲೆಯ ಅಕ್ಷರದೊಂದಿಗೆ ಪ್ರಾರಂಭವಾಗುತ್ತವೆ. ಆದ್ದರಿಂದ ಈ ಕೀರ್ತನೆ **"**ಅಕ್ರೋಸ್ಟಿಕ್**"** ಆಗಿದೆ.

ಕೀರ್ತನೆ 112 ಈ ಹಿಂದಿನ 111 ನೇ ಕೀರ್ತನೆಯಂತೆಯೇ ರಚನೆಯನ್ನು ಒಳಗೊಂಡಿದೆ. ಹಾಗಾಗಿ ಇವೆರಡೂ ಕೀರ್ತನೆಗಳನ್ನು ಒಬ್ಬರೇ ರಚಿಸಿದಂತೆ ತೋರುತ್ತದೆ. ಈ ಕೀರ್ತನೆಯು ದೇವರಲ್ಲಿ ಭಯಭಕ್ತಿಯುಳ್ಳವನ ಮೇಲೆ ದೃಷ್ಟಿಹರಿಸುತ್ತದೆ (ಇದು ಜ್ಞಾನದ ಕೀರ್ತನೆಯಾಗಿದೆ).

ಹಾಗಾಗಿ 112 ನೇ ಕೀರ್ತನೆಯನ್ನು ಒಂದು ಜ್ಞಾನದ ಕೀರ್ತನೆಯನ್ನಾಗಿ ವರ್ಗೀಕರಿಸಬಹುದಾಗಿದೆ. ಇದು ದೇವರಿಂದ ಆಶೀರ್ವದಿಸಲ್ಪಟ್ಟ ಭಕ್ತಿಯುತ ಮನುಷ್ಯನ ನೈತಿಕ ಗುಣಸ್ವಭಾವವನ್ನು ಕೊಂಡಾಡುತ್ತದೆ.

ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಆಜ್ಞೆಗಳಲ್ಲಿ ಅತ್ಯಾನಂದಪಡುವನೋ (ವಚನ 1): ಇದು ದೇವರಲ್ಲಿ ಭಯಭಕ್ತಿಯುಳ್ಳ ಒಬ್ಬ ಮನುಷ್ಯನ ವಿವರಣೆಯಾಗಿದೆ. ಈತನು ದೇವರ ಒಡಂಬಡಿಕೆಯನ್ನು ಪ್ರೀತಿಸುವ ಮತ್ತು ವಿಧೇಯನಾಗುವ ವ್ಯಕ್ತಿಯಾಗಿದ್ದಾನೆ.

ಕತ್ತಲೆ (ವಚನ 4): **"**ಕಷ್ಟದ ಸಮಯಗಳಿಗೆ**"** ಇದೊಂದು ರೂಪಾಲಂಕಾರವಾಗಿದೆ.

ಕೊಂಬು (ವಚನ 9): ಸಾಮಾನ್ಯವಾಗಿ **"**ಜಯ ಮತ್ತು ವಿಜಯೋತ್ಸಹಕ್ಕೆ**"** ಇದೊಂದು ರೂಪಾಲಂಕಾರವಾಗಿದೆ. ಆದರೆ ಇಲ್ಲಿ ಇಂದು **"**ಘನತೆ, ಗೌರವಕ್ಕೆ**"** ಒಂದು ಸೂಚನೆಯಾಗಿದೆ.

ಹಲ್ಲು ಕಡಿಯುತ್ತಾ (ವಚನ 10): **"**ವ್ಯರ್ಥವಾದ ಕೋಪ ಮತ್ತು ಹತಾಶೆಗೆ**"** ಇದು ಒಂದು ರೂಪಾಲಂಕಾರವಾಗಿದೆ.

ಪ್ರಶ್ನೆಗಳು

1. ನೀವು ಕೀರ್ತನೆ 112 ಅನ್ನು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯಲ್ಲಿ ಯಾರನ್ನು ಸಂಬೋಧಿಸಲಾಗಿದೆ?
3. 1 ನೇ ವಚನದಲ್ಲಿ **"**ಯೆಹೋವನ ಭಯಭಕ್ತಿ**"** ಎಂಬ ಹೇಳಿಕೆ ಹೇಗೆ ವಿವರಿಸಲ್ಪಟ್ಟಿದೆ?
4. 2–9 ನೇ ವಚನಗಳ ಆಧಾರದ ಮೇರೆಗೆ ಭಯಭಕ್ತಿಯುಳ್ಳ ಮನುಷ್ಯನು ಹೇಗೆ ಆಶೀರ್ವದಿಸಲ್ಪಡುವನು ಎಂಬುದರ ಬಗ್ಗೆ ಪಟ್ಟಿ ಮಾಡಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. ಭಕ್ತಿಹೀನ ಮನುಷ್ಯನು ಭಯಭಕ್ತಿಯುಳ್ಳ ಮನುಷ್ಯನ ಆಶೀರ್ವಾದಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾನೆ (ವಚನ 10)?
6. ಕೀರ್ತನೆಗಾರನು ದುಷ್ಟನ ಭವಿಷ್ಯವನ್ನು ಹೇಗೆ ಸಾರಾಂಶಗೊಳಿಸುತ್ತಾನೆ (ವಚನ 10)?

ಕೀರ್ತನೆ 112 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ನಿಮ್ಮ ಸತ್ಯವೇದದಲ್ಲಿರುವ 22 ಸಾಲುಗಳನ್ನು ಗುರುತಿಸಿ. ನೀವು ವಿಭಿನ್ನ ಭಾಷಾಂತರಗಳನ್ನು ಹೋಲಿಸಿದರೆ ಈ ಅಭ್ಯಾಸವು ಸುಲಭವಾಗುತ್ತದೆ.
2. ನಂಬಿಗಸ್ತನಾದ ಮತ್ತು ಉತ್ತಮ ಒಳ್ಳೆಯ ಒಬ್ಬ ಹಿರಿಯ ವಿಶ್ವಾಸಿ ನಿಮ್ಮ ಬಳಿಗೆ ಸಮಾಲೋಚನೆಗಾಗಿ ಬರುತ್ತಾರೆ. **"**ಈ ದಿನ ಮುಂಜಾನೆ ನಾನು 112 ನೇ ಕೀರ್ತನೆಯನ್ನು ಓದಿದೆ. ನಿಜವಾಗಿಯೂ ಅದು ನನ್ನನ್ನು ಗೊಂದಲಪಡಿಸಿತು.

ನಾನು ಅನೇಕ ವರ್ಷಗಳಿಂದ ನಂಬಿಗಸ್ತನಾಗಿ ದೇವರ ಸೇವೆ ಮಾಡುತ್ತಾ ಇದ್ದೇನೆ. ಆರಾಧನೆ ಕೂಟಗಳಲ್ಲಿ ಭಾಗಿಯಾಗುತ್ತೇನೆ. ಮತ್ತು ಪ್ರಾರ್ಥನೆ ಕೂಟಗಳಲ್ಲಿ ಭಾಗವಹಿಸುತ್ತೇನೆ. ಮತ್ತು ಸುವಾರ್ತೆ ಸಾರುತ್ತೇನೆ. ಮತ್ತು ಅಗತ್ಯವಿರುವವರಿಗೆ ಸಹಾಯ ಮಾಡುತ್ತೇನೆ. ನಾನು ಸಭೆಗೆ ಉದಾರವಾಗಿ ಕಾಣಿಕೆಗಳನ್ನು ಮತ್ತು ದಶಮಭಾಗವನ್ನು ಕೊಟ್ಟಿದ್ದೇನೆ. ಮತ್ತು ಯಾವಾಗಲೂ ನಮ್ಮ ಸಭಾಪಾಲಕರಿಗೆ, ಹಿರಿಯರಿಗೆ ಬೆಂಬಲವಾಗಿ ನಿಂತಿದ್ದೇನೆ. ನಾನು ಅರ್ಥ ಮಾಡಿಕೊಡಂತೆ ಮತ್ತು ನನ್ನ ಸಭಾ ಸಾಮರ್ಥ್ಯಕ್ಕೆ ಅನುಗುಣವಾಗಿ ಒಂದು ಉತ್ತಮವಾದ ಜೀವಿತವನ್ನು ಜೀವಿಸುತ್ತಾ ಇದ್ದೇನೆ. ಆದರೆ ನಾನು ತುಂಬಾ ಬಡವ. ನನ್ನ ಮಗನು ಖಾಯಿಲೆಯಲ್ಲಿ ಬಿದ್ದಿದ್ದಾನೆ. ಅವನು ಕೆಲಸ ಮಾಡಿ ಸಂಪಾದನೆ ಮಾಡಲು ಆಗುವುದಿಲ್ಲ. ನನ್ನ ಅಕ್ರೈಸ್ತ ಸ್ನೇಹಿತರು ನನ್ನನ್ನು ನೋಡಿ ಹಾಸ್ಯಮಾಡುತ್ತಾರೆ. ಮತ್ತು ಕೆಲವರು ನನ್ನನ್ನು ಹಿಂಸೆಯೂ ಮಾಡುತ್ತಾರೆ. ಸಭಾಪಾಲಕರೇ ದೇವರು ನನಗೆ ಇದನ್ನು ಯಾಕೆ ಮಾಡುತ್ತಿದ್ದಾನೆ? ದೇವರು ತನ್ನ ಮಾತನ್ನು ಏಕೆ ಪಾಲಿಸುವುದಿಲ್ಲ ಮತ್ತು ನನ್ನನ್ನು ಆಶೀರ್ವದಿಸುವುದಿಲ್ಲ? ನಾನು ಆತನಿಗೆ ಭಯಪಡುತ್ತೇನೆ ಎಂದು ಆತನಿಗೆ ತಿಳಿದಿದೆ. ನಾನು ಆತನ ಆಜ್ಞೆಗಳಿಗಳಲ್ಲಿ ಸಂತೋಷಪಡುತ್ತೇನೆ ಎಂದು ಆತನಿಗೆ ತಿಳಿದಿದೆ". ಈ ನಂಬಿಗಸ್ತನಾದ ಮತ್ತು ಉತ್ತಮವಾದ ಈ ವಿಶ್ವಾಸಿಗೆ ನೀವು ಹೇಗೆ ಸಮಾಲೋಚನೆ ಮಾಡುತ್ತೀರಿ.

ಕೀರ್ತನೆ 112 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಕೀರ್ತನೆ 112 ರಲ್ಲಿ ಕೀರ್ತನೆಗಾರನು ನೀತವಂತನನ್ನು **"ಕೆಟ್ಟ ಸುದ್ದಿಗೆ ಭಯಪಡದವನು"** ಯೆಹೋವನಲ್ಲಿ ಭರವಸವಿಟ್ಟದ್ದರಿಂದ **"ಆತನ ಹೃದಯ ಸ್ಥಿರವಾಗಿರುವುದು"** ಎಂಬುದಾಗಿ ವರ್ಣಿಸುತ್ತಾನೆ (ವಚನ 7).

   ಅ. ಈ ವರ್ಣನೆಯಲ್ಲಿ ನಿಮ್ಮನ್ನು ಗುರುತಿಸುವಿರಾ? ಯಾಕೆ–ಯಾಕಿಲ್ಲ? ಎಲ್ಲಿಯವರೆಗೆ ಗುರುತಿಸಿಕೊಳ್ಳುವಿರಿ? ಗುಂಪಿನಲ್ಲಿ ಹಂಚಿಕೊಳ್ಳಿರಿ.

   ಆ. ಈ ಕೀರ್ತನೆಯಲ್ಲಿ ವರ್ಣಿಸಲ್ಪಟ್ಟ ನೀತಿವಂತ ಮನುಷ್ಯನಂತೆ ಹೆಚ್ಚಾಗಿ ನೀವೂ ಸಹ ಆಗಬೇಕೆಂದು ಬಯಸುವಿರಾ? ಯಾವ ಕ್ಷೇತ್ರಗಳಲ್ಲಿ? ಯಾಕೆ ಈ ಕ್ಷೇತ್ರಗಳಲ್ಲಿ? ಯಾವ ಹೆಜ್ಜೆಗಳನ್ನು ನೀವು ತೆಗೆದುಕೊಳ್ಳುವಿರಿ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

2. ಈ ರೀತಿಯ ಕೀರ್ತನೆಯು ವಿಶ್ವಾಸಿಗಳನ್ನು ನ್ಯಾಯಬದ್ಧವಾದ ಮಾರ್ಗದಲ್ಲಿ ನಡೆಸಲು ಸುಲಭವಾಗಿ ಸಭಾಪಾಲಕರಿಂದ ಮತ್ತು ಸತ್ಯವೇದ ಬೋಧಕರಿಂದ ಉಪಯೋಗಿಸಲ್ಪಡಬಹುದು.

   ಅ. ಯಾಕೆ? ಮತ್ತು ಹೇಗೆ?

   ಆ. ಯಾಕೆ ಇದು ಅಪಾಯಕಾರಿ?

   ಇ. ಸಭಾಸೇವೆಯ ಹಿನ್ನಲೆಯಲ್ಲಿ ಈ ಕೀರ್ತನೆಯನ್ನು ಹೇಗೆ ಉಪಯೋಗಿಸಬಹುದು?

ಕೀರ್ತನೆ 126

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ **"ಯಾತ್ರಾರ್ಥಿಗಳ ಗೀತೆ"** ಎಂಬ ಹೇಳಿಕೆಯನ್ನು ಒಳಗೊಂಡಿದೆ. ಬಹುಶಃ ಈ ಯಾತ್ರಾಗೀತವು ಪ್ರಾಚೀನ ಇಸ್ರಾಯೇಲಿನಲ್ಲಿ ಮೂರು ವಾರ್ಷಿಕ ಯಾತ್ರೆಯ ಹಬ್ಬಗಳಲ್ಲಿ ಉಪಯೋಗಿಸಲ್ಪಡುತ್ತಿರಬಹುದು. ಕೀರ್ತನೆ 126 ಗುಡಾರಗಳ ಹಬ್ಬಗಳೊಂದಿಗೆ ಸಂಬಂಧ ಹೊಂದಿರುವ ಸಾಧ್ಯತೆಯಿದೆ. ಬೆಳೆಗಳು ಕೊಯ್ಯಲ್ಪಟ್ಟಾಗ ಮತ್ತು ಮಳೆಗಾಲವು ಪ್ರರಂಭವಾಗುವುದಕ್ಕಿಂತ ಮುನ್ನ ಶರತ್ಕಾಲದಲ್ಲಿ ಇದನ್ನು ಆಚರಿಸಲಾಗುತಿತ್ತು (ವಚನ 4–6 ಅನ್ನು ಹೋಲಿಸಿರಿ).

ವ್ಯಾಖ್ಯಾನಕಾರರು ಈ ಕೀರ್ತನೆಯನ್ನು ಒಂದು ಸಾಮುದಾಯಿಕ ಪ್ರಲಾಪವನ್ನಾಗಿ ವರ್ಗೀಕರಿಸಿದ್ದಾರೆ. ಕೀರ್ತನೆಗಾರನು ಅನಾಮಧೇಯ, ಆದರೆ ಬಾಬೆಲಿನ ಸೆರೆಯ ನಂತರ ಪಾಲೆಸ್ತೇನಿನಲ್ಲಿ ಆತನು ಜೀವಿಸಿದ್ದಿರಬಹುದು.

ಸೆರೆಯಲ್ಲಿದ್ದ ನಮ್ಮನ್ನು ಯೆಹೋವನು ತಿರುಗಿ ಚೀಯೋನಿಗೆ ಬರಮಾಡಿದಾಗ (ವಚನ 1): ಈ ಹೇಳಿಕೆಯು ಕ್ರಿ.ಪೂ. 539 ರ ನಂತರ ಬಾಬೆಲಿನ ಸೆರೆಯಿಂದ ಯೆರೂಸಲೇಮಿಗೆ ಹಿಂತಿರುಗಿ ಬರುವುದನ್ನು ಸೂಚಿಸುತ್ತದೆ. ಇದನ್ನೇ ವಚನ 4 ರಲ್ಲಿ ಸಹ ಬಳಸಲಾಗಿದೆ.

ಹಳ್ಳಗಳು (ವಚನ 4): ಇದು ಪ್ಯಾಲೆಸ್ತೇನಿನ ದಕ್ಷಿಣ ಭಾಗದ ಹೆಸರಾಗಿದೆ. ಮಳೆಗಾಲದಲ್ಲಿ ಹೊರತುಪಡಿಸಿ ಇಲ್ಲಿನ ತೊರೆಗಳು ಬತ್ತಿರುತ್ತಿದ್ದವು.

ಪ್ರಶ್ನೆಗಳು

1. ನೀವು 126 ನೇ ಕೀರ್ತನೆಯನ್ನು ಹೇಗೆ ರಚಿಸುತ್ತೀರಿ?
2. ಕೀರ್ತನೆಗಾರನು ಈ ಕೀರ್ತನೆಯ ಬೇರೆ ಬೇರೆ ಭಾಗಗಳಲ್ಲಿ ಯಾರ ಕುರಿತಾಗಿ ಹೇಳುತ್ತಿದ್ದಾನೆ?
3. ಕೀರ್ತನೆಗಾರನು ಬಾಬೆಲಿನ ಸೆರೆಮನೆ ವಾಸದಿಂದ ಹಿಂತಿರುಗಿ ಬಂದಂತಹ ಇಸ್ರಾಯೇಲ್ಯರ ಭಾವನೆಗಳನ್ನು ಹೇಗೆ ವಿವರಿಸುತ್ತಿದ್ದಾನೆ (ವಚನ 12)? ನಿಮ್ಮ ಸ್ವಂತ ಭಾಷೆಯನ್ನು ಉಪಯೋಗಿಸಿರಿ.
4. 4 ನೇ ವಚನದಲ್ಲಿ ಕೀರ್ತನೆಗಾರನು ಯಾವುದರ ಕುರಿತಾಗಿ ಪ್ರಾರ್ಥಿಸುತ್ತಾನೆ? ಮೇಲಿರುವಂತಹ ಟಿಪ್ಪಣಿಯನ್ನು ಸಹ ನೋಡಿರಿ.
5. ನಿಮ್ಮ ಸತ್ಯವೇದವನ್ನು ಉಲ್ಲೇಖಿಸದೇ 5–6 ನೇ ವಚನಗಳನ್ನು ಪುನಃ ಬರೆಯಿರಿ.

ಕೀರ್ತನೆ 126 ಆಲೋಚಿಸಿರಿ ಮತ್ತು ಚರ್ಚಿಸಿರಿ

1. 126 ನೇ ಕೀರ್ತನೆಯನ್ನು ಅರ್ಥ ಮಾಡಿಕೊಳ್ಳಲ 4 ನೇ ವಚನವು ಮುಖ್ಯವಾಗಿದೆ, ಯಾಕೆ? ವಿವರಿಸಿರಿ.
2. 4 ನೇ ವಚನದಲ್ಲಿರುವ ಚಿತ್ರಣವನ್ನು (ಉಪಮೆ) ವಿವರಿಸಿರಿ.
3. 4 ನೇ ವಚನದ ಸಂದರ್ಭಕ್ಕನುಗುಣವಾಗಿ 5–6 ನೇ ವಚನಗಳನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
4. ಕೀರ್ತನೆ 126 ರ ಹಿನ್ನಲೆಯಲ್ಲಿ ವಚನ 1 ಮತ್ತು 4 ರಲ್ಲಿ ಕಂಡುಬರುವ ಇಬ್ರಿಯ ಹೇಳಿಕೆಯ **"ಬಿಡುಗಡೆ ಅವರ ಸೌಭಾಗ್ಯ"** ಎಂಬುದು **"ಸೆರೆಯಿಂದ ಬಿಡುಗಡೆಯಾಗಿದ್ದು"** ಎಂಬುದಕ್ಕಿಂತ ಉತ್ತಮವಾದ ಭಾಷಾಂತರವಾಗಿದೆ. ಯಾಕೆ?
5. ಕೀರ್ತನೆಗಾರನು ಈ ಕೀರ್ತನೆಯನ್ನು ಯಾವ ಸಂದರ್ಭದಲ್ಲಿ ರಚಿಸಿದನೆಂದು ನೀವು ಯೋಚಿಸುವಿರಿ?
6. ಕೀರ್ತನೆ 126 ಮೂರು ಸಮಯದ ಅಂಶಗಳನ್ನು ಒಳಗೊಂಡಿದೆ. ಹೇಗೆ ಎಂದು ವಿವರಿಸಿರಿ.

7. ಕಷ್ಟದ ಸಮಯದಲ್ಲಿ ಹೆಚ್ಚು ಅರ್ಥಪೂರ್ಣವಾಗಿ ಪ್ರಾರ್ಥಿಸಲು ಕೀರ್ತನೆ 126 ಮತ್ತು ಈ ಅಧ್ಯಯನವು ನಿಮಗೆ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 126 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನಾವು ದೇವರ ಮುಂದೆ ನಮ್ಮ ಪ್ರಸ್ತುತ ಅಗತ್ಯತೆಗಳೊಂದಿಗೆ ಬರುವಾಗ, ಆತನು ಈ ಹಿಂದೆ ಏನೆಲ್ಲಾ ಮಾಡಿದ್ದಾನೆಂಬುದನ್ನು ಜ್ಞಾಪಿಸಿಕೊಳ್ಳಬೇಕೆಂಬುದು ಅತೀ ಪ್ರಾಮುಖ್ಯವಾಗಿದೆಯೆಂದು ಈ 126ನೇ ಕೀರ್ತನೆಯು ನಮಗೆ ಬೋಧಿಸುತ್ತದೆ. ಈ ಸತ್ಯಗಳನ್ನು ವಿಮರ್ಶಿಸಿರಿ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿರಿ.
2. 126 ನೇ ಕೀರ್ತನೆಯನ್ನು ಬರೆದವನು ದೇವರು ತನ್ನ ಪ್ರಾರ್ಥನೆಗೆ ಉತ್ತರಿಸುವನು ಮತ್ತು ತನ್ನ ಕಣ್ಣೀರನ್ನು ಹರ್ಷಕ್ಕೆ ಮಾರ್ಪಡಿಸುತ್ತಾನೆಂದು ಭರವಸದಿಂದಿದ್ದಾನೆ. ಆತನು ಒಡಂಬಡಿಕೆಯ ದೇವರನ್ನು ನಂಬಿದ್ದಾನೆ ಮತ್ತು ಆತನಲ್ಲಿ ಪರಿಪೂರ್ಣ ಭರವಸೆಯನ್ನು ಇಟ್ಟಿದ್ದಾನೆ. ನಿಮ್ಮ ಬಗ್ಗೆ ಏನು? ದೇವರಲ್ಲಿ ನೀವು ನಂಬಿಕೆಯಿಟ್ಟಿರುವಿರಾ? ಆತನಲ್ಲಿ ಪರಿಪೂರ್ಣ ಭರವಸೆವಿದೆಯಾ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಅಸೈನ್‌ಮೆಂಟ್: ಕೀರ್ತನೆ 126

ಕೀರ್ತನೆ 126 ಮತ್ತು ಈ ಅಧ್ಯಯನವನ್ನು ಆಧರಿಸಿ ಒಂದು ಧ್ಯಾನಮಾಲಿಕೆಯನ್ನು ಸಿದ್ಧಪಡಿಸಿರಿ.

ಕೀರ್ತನೆ 127

ಪೀಠಿಕೆ ಮತ್ತು ಟಿಪ್ಪಣಿಗಳು

127ನೇ ಕೀರ್ತನೆಯು ಒಂದು ಯಾತ್ರಾಗೀತವಾಗಿದೆಯೆಂದು ಇಬ್ರಿಯ ತಲೆಬರಹವು ಹೇಳುತ್ತದೆ. ಅಲ್ಲದೆ ಇದು ಸೊಲೊಮೋನನದು ಎನ್ನುತ್ತದೆ. ಇದೊಂದು ಜ್ಞಾನದ ಕೀರ್ತನೆಯಾಗಿದ್ದು ಇಸ್ರಾಯೇಲ್ ಯಾತ್ರಿಗಳು ಯೆರೂಸಲೇಮಿನ ಮಾರ್ಗದಲ್ಲಿದ್ದು ಒಡಂಬಡಿಕೆಯ ಕರ್ತನು ಅವರ ಜೀವದ ಮೂಲ ಮತ್ತು ಪೋಷಣೆ ಮತ್ತು ಅವರ ಭವಿಷ್ಯಕ್ಕೆ ಹೊಣೆಗಾರನಾಗಿದ್ದಾನೆ ಎಂಬುದನ್ನು ಇದು ಜ್ಞಾಪಿಸುತ್ತದೆ.

ಮನೆ (ವಚನ 1): ವಾಸಿಸುವ ಕುಟುಂಬ, ಕಟ್ಟಡ.

ಕಟ್ಟುವವರು (ವಚನ 1): ಇಬ್ರಿಯ ಪದವು ಮೂರನೇ ವಚನದಲ್ಲಿ ಬಳಸಲಾದ **"ಪುತ್ರ"** ಎಂಬ ಪದಕ್ಕೆ ಹೋಲುತ್ತದೆ.

ಪಟ್ಟಣ (ವಚನ 1): ಪಟ್ಟಣವು ಅಧಿಕಾರ/ಶಕ್ತಿಗೆ ಕೇಂದ್ರವಾಗಿತ್ತು. ಅಲ್ಲದೇ ಇದು ವೈರಿಗಳು ದೇಶವನ್ನು ಆಕ್ರಮಿಸಿದಾಗ ಒಂದು ಆಶ್ರಯತಾಣವಾಗಿತ್ತು.

ತನ್ನ ಪ್ರಿಯರಿಗೆ (ವಚನ 2): ದೇವರ ಒಡಂಬಡಿಕೆಯ ಜನರು.

ಬಹುಮಾನ (ವಚನ 3): ಇಬ್ರಿಯ ಪದದ ಅರ್ಥ **"ದೈನಂದಿನ ಕೂಲಿ"**. ಮಕ್ಕಳು ದೇವರ ಬಹುಮಾನವೆಂದರೆ ಅವು ಒಡಂಬಡಿಕೆಯ ಜನರಿಗೆ ದೇವರ ಆಶೀರ್ವಾದವಾಗಿದ್ದಾರೆ ಎಂದರ್ಥವಾಗಿದೆ.

ಊರಬಾಗಲಲ್ಲಿ (ವಚನ 5): ಪ್ರಾಚೀನ ಇಸ್ರಾಯೇಲಿನಲ್ಲಿ ಊರಬಾಗಿಲಲ್ಲಿ ಕೋರ್ಟ್ ವ್ಯಾಜ್ಯಗಳನ್ನು ನಡೆಸಲಾಗುತಿತ್ತು.

ಪ್ರಶ್ನೆಗಳು

1. ನೀವು ಕೀರ್ತನೆ 127 ಅನ್ನು ಹೇಗೆ ರಚಿಸುತ್ತೀರಿ?
2. ಕೀರ್ತನೆಗಾರನು 1 ನೇ ವಚನದಲ್ಲಿ ಏನು ಹೇಳುತ್ತಾನೆ ಎಂಬುದನ್ನು ವಿವರಿಸಿರಿ. ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.
3. ಕೀರ್ತನೆಗಾರನು 2 ನೇ ವಚನದಲ್ಲಿ ಏನು ಹೇಳುತ್ತಾನೆ ಎಂಬುದನ್ನು ವಿವರಿಸಿ. ನಿಮ್ಮ ಸ್ವಂತ ಪದಗಳನ್ನು ಬಳಸಿ.
4. ಕೀರ್ತನೆಗಾರನು 3 ನೇ ವಚನದಲ್ಲಿ ಮಕ್ಕಳ ಕುರಿತಾಗಿ ಯಾವ ಅಂಶಗಳನ್ನು ತಿಳಿಸುತ್ತಾನೆ? ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಉಪಯೋಗಿಸಿರಿ.
5. 5 ನೇ ವಚನದಲ್ಲಿ **"ಆಶೀರ್ವದಿಸಲ್ಪಟ್ಟವರು"** ಯಾರು?

ಕೀರ್ತನೆ 127 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೀರ್ತನೆ 127 ಅನ್ನು **"ಜ್ಞಾನದ ಕೀರ್ತನೆ"** ಎಂದು ಏಕೆ ವರ್ಗೀಕರಿಸಬಹುದು ಎಂಬುದನ್ನು ವಿವರಿಸಿರಿ.
2. 1 ನೇ ವಚನದ ವ್ಯಾಕರಣ ರಚನೆಯನ್ನು ವಿವರಿಸಿರಿ.
3. 1–2 ನೇ ವಚನಗಳಲ್ಲಿನ ದೈವಶಾಸ್ತ್ರವನ್ನು (ದೇವರ ತಿಳುವಳಿಕೆ) ವಿವರಿಸಿರಿ.
4. 1–2 ನೇ ವಚನಗಳಲ್ಲಿ ಮನುಷ್ಯನ ಪಾತ್ರವನ್ನು ವಿವರಿಸಿ.
5. 2 ನೇ ವಚನದ ಕಡೆಯ ಭಾಗವು ಕನ್ನಡದ **ಸತ್ಯವೇದವು** ಮತ್ತು **ಪವಿತ್ರ ಗ್ರಂಥ** ಭಾಷಾಂತರದಲ್ಲಿ ಹೆಚ್ಚಿನ ಉಳಿದ ಭಾಷಾಂತರಗಳಿಗಿಂತ ವಿಭಿನ್ನವಾಗಿದೆ. ಕನ್ನಡದ ಭಾಷಾಂತರಗಳು ಕಾರಣವಾಗಬಹುದಾದ ದೈವಶಾಸ್ತ್ರದ ಅಪಾಯಗಳನ್ನು ವಿವರಿಸಿರಿ.

6. 4 ನೇ ವಚನದಲ್ಲಿ ಕಂಡುಬರುವ ಉಪಮೆಯನ್ನು ವಿವರಿಸಿರಿ.
7. 5 ನೇ ವಚನದಲ್ಲಿ ಕೀರ್ತನೆಗಾರನು ಮಕ್ಕಳ ಬಗ್ಗೆ ಏನೆಂದು ಹೇಳುತ್ತಾನೆ?
8. 127 ನೇ ಕೀರ್ತನೆಯನ್ನು ಸುವಾರ್ತಾ ಸೇವೆಯ ಸನ್ನಿವೇಶಕ್ಕಿಂತ ಸಭೆಯ ಸನ್ನಿವೇಶದಲ್ಲಿ ಯಾಕೆ ಬಸಳಬೇಕು?
9. ಕೀರ್ತನೆ 127 ಮತ್ತು ಈ ಅಧ್ಯಯನವು ದೇವರು ತನ್ನ ಜನರೊಂದಿಗೆ ಒಡಂಬಡಿಕೆಯ ಮೂಲಕ ಅವರ ಮೇಲೆ ಮಾಡಿರುವ ಆಶೀರ್ವಾದಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಹೇಗೆ ನೀಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 127 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಪ್ರಾಚೀನ ಇಸ್ರಾಯೇಲ್ಯರು ಒಡಂಬಡಿಕೆಯ ಮೂಲಕ ತಮ್ಮ ಜೀವಿತದಲ್ಲಿ ದೇವರು ಮಾಡಿದ ಆಶೀರ್ವಾದಗಳನ್ನು (ಮನೆ, ಕುಟುಂಬ, ಭದ್ರತೆ, ಒದಗಿಸುವಿಕೆ, ಒಂದು ಉತ್ತಮವಾದ ಭವಿಷ್ಯ) ಜ್ಞಾಪಿಸಿಕೊಳ್ಳುವುದಕ್ಕಾಗಿ 127ನೇ ಕೀರ್ತನೆಯನ್ನು ಉಪಯೋಗಿಸುತ್ತಿದ್ದರು. ಯೇಸು ಕ್ರಿಸ್ತನ ರಕ್ತದಲ್ಲಿನ ಹೊಸ ಒಡಂಬಡಿಕೆಯ ಮೂಲಕ ತನ್ನ ಹೊಸ ಒಡಂಬಡಿಕೆಯ ಜನರಿಗೆ ದೇವರು ಮಾಡಿದ ಆಶೀರ್ವಾದಗಳು ಯಾವುವು? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
2. ದೇವರು ನಮಗೆ ಮಾಡಿದ ಎಲ್ಲಾ ಆಶೀರ್ವಾದಗಳಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

ಅಸೈನ್‌ಮೆಂಟ್: ಕೀರ್ತನೆ 127

ಕೀರ್ತನೆ 127 ಅಧ್ಯಯನವನ್ನು ಆಧರಿಸಿ ಒಂದು ಧ್ಯಾನಮಾಲಿಕೆಯನ್ನು ಸಿದ್ಧಪಡಿಸಿರಿ.

ಕೀರ್ತನೆ 130

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆಬರಹದಲ್ಲಿ **"ಯಾತ್ರಾಗೀತ"** ಎಂದಷ್ಟೇ ಇದೆ. ವಿಶ್ಲೇಷಕರು 130ನೇ ಕೀರ್ತನೆಯನ್ನು ಒಂದು ವೈಯಕ್ತಿಕ ಪ್ರಲಾಪ ಅಥವಾ ಒಂದು ಭರವಸೆಯ ಗೀತೆಯನ್ನಾಗಿ ವರ್ಗೀಕರಿಸಿದ್ದಾರೆ. ಕೀರ್ತನೆಗಾರನು ತನ್ನ ಒಡಂಬಡಿಕೆಯ ಕರ್ತನಲ್ಲಿ ಭರವಸವಿಡುತ್ತಾನೆ. ಆತನ ಸ್ಥಿರವಾದ ಮತ್ತು ನಂಬಿಗಸ್ತಿಕೆಯ ಪ್ರೀತಿಯ ನಿಮಿತ್ತ ದೇವರು ಒಬ್ಬ ಘೋರಪಾಪಿಯ ಕೂಗನ್ನು ಕೇಳುತ್ತಾನೆಂದು ಕೀರ್ತನೆಗಾರನಿಗೆ ತಿಳಿದಿದೆ. ಕ್ರೈಸ್ತೀಯ ಸಭಾ ಸಂಸ್ಕೃತಿ ಪ್ರಕಾರ 130ನೇ ಕೀರ್ತನೆಯು ಏಳು ಪಶ್ಚಾತ್ತಾಪದ/ಸಂತಾಪಸೂಚಕ ಕೀರ್ತನೆಗಳಲ್ಲಿ ಒಂದಾಗಿದೆ.

ಜಲಾಗಾಧದಲ್ಲಿದ್ದು (ವಚನ 1): ವೇದನೆ ಮತ್ತು ಹತಾಶೆಗೆ ಒಂದು ರೂಪಾಲಂಕಾರ.

ಕರ್ತನೇ (ವಚನ 2): ಇಬ್ರಿಯ ಪಠ್ಯದಲ್ಲಿ ಅಡೊನೈ ಎಂದಿದೆ.

ನೀನು ಪಾಪಗಳನ್ನು ಎಣಿಸುವುದಾದರೆ (ವಚನ 3): ಈ ಇಬ್ರಿಯ ಹೇಳಿಕೆಯನ್ನು **"**ನೀನು ಪಾಪಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದಾದರೆ**"** ಎಂದು ಸಹ ಭಾಷಾಂತರಿಸಬಹುದು.

ಪಾಪಗಳನ್ನು (ವಚನ 3): ಇಬ್ರಿಯದಲ್ಲಿ ಪಾಪ ಮತ್ತು ಅಪರಾಧಿ ಮನೋಭಾವಗಳವನು.

ಭಯಭಕ್ತಿಗೆ ನೀನೇ ಪಾತ್ರನು (ವಚನ 4): ಭಯಭಕ್ತಿಗೆ ಅಂದರೆ ಗೌರವಕ್ಕೆ, ಆರಾಧನೆಗೆ, ಭರವಸೆಗೆ.

ಆತನನ್ನು ಕಾದುಕೊಂಡಿದೆ (ವಚನ 5): ಕೀರ್ತನೆಗಾರನು ದೇವರ ಕ್ಷಮಾಪಣೆಗಾಗಿ ಕಾದುಕೊಂಡಿದ್ದಾನೆ.

ನನ್ನ ಅಂತರಾತ್ಮವು (ವಚನ 6): ಈ ಇಬ್ರಿಯ ಹೇಳಿಕೆಯು **"**ನಾನು**"** ಎಂದು ಅರ್ಥೈಸುತ್ತದೆ.

ವಿಮೋಚನೆ (ವಚನ 8): ಈ ಇಬ್ರಿಯ ಪದವನ್ನು ಗುಲಾಮರನ್ನು ಬಿಡಿಸುವುದಕ್ಕಾಗಿ ಬಳಸಲಾಗುತಿತ್ತು.

ಪ್ರಶ್ನೆಗಳು

1. ನೀವು ಕೀರ್ತನೆ 130 ಅನ್ನು ಹೇಗೆ ರಚಿಸುತ್ತೀರಿ?
2. ಕೀರ್ತನೆಯ ವಿವಿಧ ಭಾಗಗಳಲ್ಲಿ ಕೀರ್ತನೆಗಾರನು ಯಾರನ್ನು ಸಂಬೋಧಿಸುತ್ತಾನೆ?
3. 1–2 ನೇ ವಚನಗಳಲ್ಲಿ ಕೀರ್ತನೆಗಾರನು ಯಾವುದರ ಬಗ್ಗೆ ಪ್ರಾರ್ಥಿಸುತ್ತಾನೆ?
4. ಪಾಪದ ಗಂಭೀರತೆಯ ಬಗ್ಗೆ ಕೀರ್ತನೆಗಾರನು ಏನು ಹೇಳುತ್ತಾನೆ (ವಚನ 3)? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. ಕೀರ್ತನೆಗಾರನು ಪಾಪ ಕ್ಷಮಾಪಣೆಯ ಪರಿಣಾಮ ಏನೆಂಬುದನ್ನು ಹೇಳುತ್ತಾನೆ (ವಚನ 4)? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
6. 7–8 ನೇ ವಚನಗಳಲ್ಲಿ ಇಸ್ರಾಯೇಲ್ ಜನರಿಗೆ ಕೀರ್ತನೆಗಾರನ ಸಂದೇಶವೇನು? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

ಕೀರ್ತನೆ 130 ಆಲೋಚಿಸಿರಿ ಮತ್ತು ಚರ್ಚಿಸಿರಿ

1. 130 ಮತ್ತು 127 ಕೀರ್ತನೆಗಳನ್ನು ಇಬ್ರಿಯ ಶೀರ್ಷಿಕೆಯಲ್ಲಿ **"**ಯಾತ್ರಾಗೀತೆಗಳು**"** ಎಂದು ವಿವರಿಸಲಾಗಿದೆ. ಇದರ ಹೊರತಾಗಿಯೂ ಅವು ತುಂಬಾ ಭಿನ್ನವಾಗಿವೆ. ಮುಖ್ಯ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.
2. 130 ನೇ ಕೀರ್ತನೆಯ ಮೊದಲ ಎರಡು ವಚನಗಳಲ್ಲಿ ದೇವರನ್ನು ಹೇಗೆ ಸಂಬೋಧಿಸಲಾಗಿದೆ? ಕನ್ನಡದ **ಸತ್ಯವೇದವು** ಮತ್ತು **ಪವಿತ್ರ ಗ್ರಂಥ**ವನ್ನು ಹೋಲಿಸಿರಿ. ಯಾವ ಭಾಷಾಂತರವು ಇಬ್ರಿಯ ಪಠ್ಯಕ್ಕೆ ಹತ್ತಿರವಾಗಿದೆ (ಮೇಲಿನ ಟಿಪ್ಪಣಿ ನೋಡಿ)?

3. ಕೀರ್ತನೆ 130 ರಲ್ಲಿನ ದೈವಶಾಸ್ತ್ರವನ್ನು (ದೇವರ ತಿಳುವಳಿಕೆ) ವಿವರಿಸಿರಿ.

4. 6 ನೇ ವಚನದಲ್ಲಿನ ಉಪಮೆಯವನ್ನು ವಿವರಿಸಿರಿ.

5. ಭಾನುವಾರದ ಆರಾಧನೆಯ ಕೀರ್ತನೆ ಭಾಗದಲ್ಲಿ ಓದಲು ಕೀರ್ತನೆ 130 ಒಂದು ಅತ್ಯುತ್ತಮ ಕೀರ್ತನೆಯಾಗಿದೆ. ಯಾಕೆ? ನಿಮ್ಮ ಮುಖ್ಯ ಅಂಶಗಳನ್ನು ಪಟ್ಟಿ ಮಾಡಿ.

6. ಕೀರ್ತನೆ 130 ಮತ್ತು ಈ ಅಧ್ಯಯನವು ವಿಶ್ವಾಸಿ ಮತ್ತು ಆತನ ಒಡಂಬಡಿಕೆಯ ಕರ್ತನೊಂದಿಗಿನ ಸಂಬಂಧದ ಬಗ್ಗೆ ಆಳವಾದ ತಿಳುವಳಿಕೆಯನ್ನು ಹೇಗೆ ನೀಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 130 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಕ್ರೈಸ್ತ ವಿಶ್ವಾಸಿಗಳಾದ ನಾವು ಇಂದು 130ನೇ ಕೀರ್ತನೆಯನ್ನು ಯೇಸು ಕ್ರಿಸ್ತನ ಬೆಳಕಿನಡಿಯಲ್ಲಿ ಓದುತ್ತೇವೆ (ಆತನ ಜೀವನ, ಆತನ ಬೋಧನೆ, ಆತನ ಸೇವೆ, ಆತನ ಬಾಧೆ, ಆತನ ಮರಣ, ಪುನರುತ್ಥಾನ, ಎತ್ತಲ್ಪಡುವಿಕೆ ಮತ್ತು ಪವಿತ್ರಾತ್ಮನ ಮೂಲಕ ನಮ್ಮ ಜೀವಿತದಲ್ಲಿ ನಿರಂತರವಾದ ಆತನ ಪ್ರಸನ್ನತೆ). ನಿಮ್ಮ ಆಲೋಚನೆಗಳನ್ನು ಮತ್ತು ಅನುಭವಗಳನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ. ಪ್ರಾಮುಖ್ಯ ಅಂಶಗಳನ್ನು ಬರೆಯಿರಿ.

2. ನಿಮ್ಮ ವಿಮೋಚನೆಗಾಗಿ ಯೇಸು ಕ್ರಿಸ್ತನ ಮೂಲಕ ದೇವರು ಮಾಡಿರುವ ಎಲ್ಲಾ ಸಂಗತಿಗಳಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

3. ದೇವರ ಅಚಲ ಪ್ರೀತಿ ಮತ್ತು ಆತನ ವಿಮೋಚನೆಯ ನಮ್ಮ ಅನುಭವವು ನಮ್ಮ ಜೀವನದಲ್ಲಿ ಫಲ ನೀಡಬೇಕು. ಕೀರ್ತನೆಗಾರನು ಈ ಫಲಕ್ಕಾಗಿ **"ಕರ್ತನ ಭಯ"** ಎಂಬ ಪದವನ್ನು ಬಳಸುತ್ತಾನೆ (ವಚನ 4 ನೋಡಿ). ಈ **"ಕರ್ತನ ಭಯ"**ವನ್ನು ದಕ್ಷಿಣ ಭಾರತದ ಸಂದರ್ಭದಲ್ಲಿ ಹೇಗೆ ವ್ಯಕ್ತಪಡಿಸಬಹುದು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ:

   ಅ. ವೈಯಕ್ತಿಕ ನಂಬಿಕೆಯುಳ್ಳವರ ಆಧ್ಯಾತ್ಮಿಕ ಜೀವನದಲ್ಲಿ ಮತ್ತು ಸಭೆಯ ಸಾಂಸ್ಥಿಕ ಜೀವನದಲ್ಲಿ

   ಆ. ಸಭೆಯ ಹೊರಹೋಗುವ ಸೇವೆಯಲ್ಲಿ

   ನಂತರ ಈ ಎಲ್ಲಾ ವಿಷಯಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿ.

ಅಸೈನ್‌ಮೆಂಟ್: ಕೀರ್ತನೆ 130

ಕೀರ್ತನೆ 130 ಮತ್ತು ಈ ಅಧ್ಯಯನವನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

ಕೀರ್ತನೆ 137

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ಪಠ್ಯದಲ್ಲಿ ಯಾವುದೇ ತಲೆಬರಹವಿರದ ಈ ಕೀರ್ತನೆಯನ್ನು ಸತ್ಯವೇದ ಪಂಡಿತರು ಒಂದು ಸಾಮುದಾಯಿಕ ಪ್ರಲಾಪವನ್ನಾಗಿ ವರ್ಗೀಕರಿಸಿದ್ದಾರೆ. ಇದು ಸೆರೆಯಲ್ಲಿರುವ ದೇವಜನರ ಸನ್ನಿವೇಶ ಮತ್ತು ಭಾವನೆಗಳನ್ನು ಪ್ರತಿಬಿಂಬಿಸುತ್ತದೆ.

ನದಿಗಳು (ವಚನ 1): ಬಾಬೆಲ್ ಯೂಫ್ರೇಟೀಸ್ ನದಿಯ ದಡದ ಮೇಲೆ ಇತ್ತು. ಆದರೆ ಟೈಗ್ರಿಸ್ ನದಿ ಮತ್ತು ಇನ್ನೂ ಅನೇಕ ಕಾಲುವೆಗಳನ್ನು ಸಹ ಮೆಸೊಪೊತಾಮ್ಯದಲ್ಲಿ ಕಾಣಬಹುದು. ಸುಮಾರು ಕ್ರಿ.ಪೂ. 600 ರ ಆಸುಪಾಸಿನಲ್ಲಿ ಬಾಬೆಲಿನವರ ಸೆರೆಯ ಸಮಯದಲ್ಲಿ ಯೆಹೂದದ ದಕ್ಷಿಣ ರಾಜ್ಯದಿಂದ ಅನೇಕ ಜನರು ಮೆಸೊಪೊತಾಮ್ಯಕ್ಕೆ ಗಡಿಪಾರು ಮಾಡಲ್ಪಟ್ಟಿದ್ದರು.

ಚೀಯೋನ್ (ವಚನ 1): ಈ ಒಂದು ಬೆಟ್ಟದ ಮೇಲೆಯೇ ಯೆರೂಸಲೇಮ್ ಕಟ್ಟಲ್ಪಟ್ಟಿತ್ತು, ಹಾಗಾಗಿ ಈ ಹೆಸರು ಯೆರೂಸಲೇಮಿಗೆ ಸಮಾನಾರ್ಥಕವಾಗಿದೆ. ಕ್ರಿ.ಪೂ. 587 ರಲ್ಲಿ ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನಿಂದ ಯೆರೂಸಲೇಮ್ ಪಟ್ಟಣ ಮತ್ತು ಇದರ ದೇವಾಲಯವು ನಾಶವಾಯಿತು.

ನೆನಪುಮಾಡಿಕೋ (ವಚನ 7): ಈ ಪದವು **"ನೆನಪುಮಾಡಿಕೋ ಮತ್ತು ಶಿಕ್ಷಿಸು ಅಥವಾ ಏನಾದರೂ ಮಾಡು"** ಎಂದೂ ಅರ್ಥೈಸುತ್ತದೆ.

ಎದೋಮ್ಯರ ಹಾನಿಗಾಗಿ (ವಚನ 7): ಎದೋಮ್ಯರು ಯಾಕೋಬನ ಅಣ್ಣನಾದ ಏಸಾವನ ಸಂತತಿಯವರಾಗಿದ್ದು ಹಳೇ ಒಡಂಬಡಿಕೆಯ ಸಮಯದಲ್ಲಿ ಮೃತಸಮುದ್ರದ ದಕ್ಷಿಣ ಭಾಗದಲ್ಲಿ ವಾಸಿಸುತ್ತಿದ್ದರು. ಯೆಹೂದ ಮತ್ತು ಎದೋಮಿನ ನಡುವೆ ಆಗಾಗ್ಗೆ ವೈರತ್ವವಿತ್ತು. ಕೀರ್ತನೆ 137 ಯೆರೂಸಲೇಮಿನ ಪತನದಲ್ಲಿ ಎದೋಮ್ಯರ ಸ್ವಭಾವವನ್ನು ವರ್ಣಿಸುತ್ತದೆ. ಎದೋಮ್ಯರಿಗೆ ವಿರೋಧವಾಗಿ ಹಳೇ ಒಡಂಬಡಿಕೆಯಲ್ಲಿ ಅನೇಕ ಪ್ರವಾದನೆಗಳಿವೆ.

ಪ್ರಶ್ನೆಗಳು

1. ನೀವು 137 ನೇ ಕೀರ್ತನೆಯನ್ನು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯ ಸನ್ನಿವೇಶ ಏನಾಗಿದೆ?
3. ಕೀರ್ತನೆಯ ವಿವಿಧ ಭಾಗಗಳಲ್ಲಿ ಯಾರನ್ನು ಸಂಬೋಧಿಸಲಾಗಿದೆ?
4. 7 ನೇ ವಚನದಲ್ಲಿ ಕೀರ್ತನೆಗಾರನು ದೇವರಿಗೆ ಏನು ಬೇಡಿಕೊಳ್ಳುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
5. 8 ನೇ ವಚನದಲ್ಲಿ ಬಾಬೆಲ್ ಅನ್ನು ಹೇಗೆ ವಿವರಿಸಲಾಗಿದೆ?

ಕೀರ್ತನೆ 137 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಇಸ್ರಾಯೇಲ್ ಇತಿಹಾಸದ ಯಾವ ಸಮಯಕ್ಕೆ ಅಥವಾ ಅವಧಿಗೆ ಈ ಕೀರ್ತನೆಯನ್ನು ಸೇರಿಸಬಹುದು? ನಿಮ್ಮ ಕಾರಣಗಳನ್ನು ಕೊಡಿರಿ.
2. ಇಸ್ರಾಯೇಲ್ಯರು ತಮ್ಮನ್ನು ಸೆರೆ ಒಯ್ದವರ ಬೇಡಿಕೆಗಳನ್ನು ಏಕೆ ಈಡೇರಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.
3. 4 ನೇ ವಚನದಲ್ಲಿ ಕಂಡುಬರುವ ವಾಕ್ಯದ ರಚನೆಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
4. 5 ನೇ ವಚನದಲ್ಲಿ ಕಂಡುಬರುವ ಚಿತ್ರಣವನ್ನು ವಿವರಿಸಿರಿ.
5. ಈ ಕೀರ್ತನೆಯ ಸ್ವರ/ಭಾವವನ್ನು ಹೇಗೆ ವಿವರಿಸುತ್ತೀರಿ?

6. ಮೊದಲು **ಶಪಿಸುವ ಕೀರ್ತನೆಗಳು** ಎಂಬ ಅಧ್ಯಾಯವನ್ನು ಓದಿರಿ. ನಂತರ ಈ ಕೀರ್ತನೆಯ ಕಡೇ ಭಾಗವನ್ನು (ವಚನ 7–9) ಹೇಗೆ ಅರ್ಥೈಸಿಕೊಳ್ಳಬೇಕು ಎಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

ಕೀರ್ತನೆ 137 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. 137 ನೇ ಕೀರ್ತನೆಯು ಸೆರೆಯಲ್ಲಿ ಬರೆಯಲ್ಪಟ್ಟಿದೆ. ಇಸ್ರಾಯೇಲ್ಯರು ತಮ್ಮ ದೇಶದಿಂದ ಅಲ್ಲದೆ ತಮ್ಮ ಆರಾಧನಾ ಸ್ಥಳದಿಂದ ಸಹ ಪ್ರತ್ಯೇಕಿಸಲ್ಪಟ್ಟಿದ್ದರು. ಅವರ ದೇಶವು ಅನ್ಯದೇಶದ ವೈರಿಗಳ ವಶಕ್ಕೊಳಗಾಗಿ, ಅವರ ದೇವಾಲಯವು ಸಂಪೂರ್ಣವಾಗಿ ನಾಶಮಾಡಲ್ಪಟ್ಟಿತು. ಬಹುಶಃ ನಿಮ್ಮ ಜೀವನದಲ್ಲಿ ನೀವು ಇದೇ ರೀತಿಯ ಅನುಭವವನ್ನು ಕಂಡಿರಬಹುದು. ಹಾಗಿದ್ದರೆ ನೀವು ಗುಂಪಿನಲ್ಲಿ ಅವನ್ನು ಹಂಚಿಕೊಳ್ಳಿರಿ.

2. ಇಂದು ನಮ್ಮ ಜಗತ್ತಿನಲ್ಲಿ ಅನೇಕ ನಿರಾಶ್ರಿತರಿದ್ದಾರೆ, ಅವರು ವೈರಿಗಳಿಂದ ಅಥವಾ ವಿನಾಶಕಾರಿ ಪರಿಸ್ಥಿತಿಗಳಿಂದ ಬಲವಂತವಾಗಿ ತಮ್ಮ ವಾಸಸ್ಥಾನ ಮತ್ತು ಸ್ವಂತ ದೇಶವನ್ನು ಬಿಟ್ಟಿರುತ್ತಾರೆ (ಉದಾ: ಯುದ್ಧ, ಪ್ರವಾಹ, ಜನಾಂಗದ ಶುದ್ಧೀಕರಣ ಅಥವಾ ಧಾರ್ಮಿಕ ಹಿಂಸೆಯಿಂದ). ಅವರು ನಿರಾಶ್ರಿತರ ಶಿಬಿರಗಳಲ್ಲಿ ಬಾಧೆಪಡುತ್ತಿದ್ದಾರೆ ಅಥವಾ ಬೇರೊಂದು ದೇಶದ ವಾತಾವರಣದಲ್ಲಿ ಜೀವಿಸುತ್ತಿದ್ದಾರೆ. ಇಂತಹ ಜನರ ಬಗ್ಗೆ ನಿಮಗೆ ಏನಾದರೂ ಗೊತ್ತಿದ್ದರೆ ನಿಮ್ಮ ಗುಂಪಿನಲ್ಲಿ ಅದನ್ನು ಹಂಚಿಕೊಳ್ಳಿರಿ ಮತ್ತು ಬಾಧೆಪಡುತ್ತಿರುವ ಮತ್ತು ಹಿಂಸೆಗೊಳಗಾದ ನಿರಾಶ್ರಿತರಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ಅವರಿಗೆ ಕರುಣೆ ತೋರುವಂತೆ ಮತ್ತು ಅವರ ಪರವಾಗಿ ದೇವರು ಮಧ್ಯಪ್ರವೇಶ ಮಾಡುವಂತೆ ಪ್ರಾರ್ಥಿಸಿರಿ.

3. ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ: 8–9ನೇ ವಚನಗಳಲ್ಲಿ ಕೀರ್ತನೆಗಾರನ ಹೇಳಿಕೆಯಿಂದ ಮತ್ತು ಕೀರ್ತನೆಗಾರನಿಗೆ ಇದ್ದರಿಬಹುದಾದ ಭಾವನೆಗಳಿಂದ ನಮ್ಮಲ್ಲಿ ಹೆಚ್ಚಿನವರು ಏಕೆ ಆಘಾತಕ್ಕೊಳಗಾಗಿದ್ದೇವೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ. ಕೀರ್ತನೆಗಾರನ ಮಾತುಗಳಲ್ಲಿ ನಿಮ್ಮದೇ ಭಾವನೆಗಳನ್ನು ನೀವು ಗುರುತಿಸುತ್ತೀರಾ? ಹಾಗಾದರೆ, ನಿಮ್ಮ ಸಹೋದರರು ಮತ್ತು ಸಹೋದರಿಯರು ನಿಮ್ಮೊಂದಿಗೆ ಸೇರಿ ಪ್ರಾರ್ಥಿಸಲು ಅವರ ನೆರವನ್ನು ಕೇಳಿ. ನಿಮ್ಮ ಎಲ್ಲಾ ಸಮಸ್ಯೆಗಳನ್ನು, ಸಂಕಟಗಳನ್ನು ದೇವರ ಪಾದದ ಬಳಿ ಅರ್ಪಿಸಿ, ದೇವರು ತನ್ನ ದಯೆ ಮತ್ತು ನೀತಿಗೆ ಅನುಗುಣವಾಗಿ (ನಿಮ್ಮನ್ನು "ನೆನಪಿಟ್ಟುಕೊಳ್ಳಲು") ಆತನು ನಿಮ್ಮ ಪರಿಸ್ಥಿತಿಯಲ್ಲಿ ಮಧ್ಯೆಪ್ರವೇಶಿಸುವಂತೆ ಪ್ರಾರ್ಥಿಸಿ.

ಕೀರ್ತನೆ 138

ಪೀಠಿಕೆ ಮತ್ತು ಟಿಪ್ಪಣಿಗಳು

ಕೀರ್ತನೆಗಳ ಪುಸ್ತಕದಲ್ಲಿರುವ **"ದಾವೀದನ ಕೀರ್ತನೆಗಳು"** ಎಂಬ ಅಂತಿಮ ಸಂಗ್ರಹದಲ್ಲಿ ಕೀರ್ತನೆ 138 ಮೊದಲನೆಯದು. ಇಲ್ಲಿ ನಾವು ಎಂಟು ಸುಂದರವಾದ ಕೀರ್ತನೆಗಳನ್ನು ಕಾಣುತ್ತೇವೆ (ಕೀರ್ತನೆ 138–145). ಕಾಲಾನುಕ್ರಮವಾಗಿ ಅನೇಕ ವಿಶ್ಲೇಷಕರು ಕೀರ್ತನೆ 138 ಅನ್ನು ಬಾಬೆಲಿನ ಸೆರೆಯ ನಂತರ ಇಡುತ್ತಾರೆ. ಅವರು ಸರಿಯಾಗಿದ್ದರೆ, ಇಬ್ರಿಯ ಮೇಲ್ಬರಹದಲ್ಲಿರುವ **"ದಾವೀದನ"** ಎಂಬ ಅಭಿವ್ಯಕ್ತಿಯು **"ದಾವೀದನ ಕಾವ್ಯಾತ್ಮಕ ಶೈಲಿಯಲ್ಲಿ"** ಎಂಬ ಅರ್ಥವನ್ನು ಹೊಂದಿರಬೇಕು. ಇದು ದೇವರ ದಯೆ ಮತ್ತು ಪ್ರಾರ್ಥನೆಗೆ ಉತ್ತರಿಸಿದ್ದಕ್ಕಾಗಿ ಮಾಡುವ ಒಂದು ಕೃತಜ್ಞತೆಯ ಸ್ತೋತ್ರವಾಗಿದೆ.

ಪೂರ್ಣಮನಸ್ಸಿನಿಂದ (ವಚನ 1): ಹೃದಯವು ಒಬ್ಬ ಪೂರ್ಣವ್ಯಕ್ತಿಯನ್ನು ಪ್ರತಿನಿಧಿಸುತ್ತದೆ. ಈ ಪದ್ಯ ರೂಪವನ್ನು **"ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ"** ಎನ್ನುವರು.

ದೇವರುಗಳೆದುರಿನಲ್ಲಿ (ವಚನ 1): ವಿಶ್ಲೇಷಕರು ಈ ಹೇಳಿಕೆಯನ್ನು ವಿಭಿನ್ನವಾದ ರೀತಿಯಲ್ಲಿ ಅರ್ಥೈಸಿಕೊಂಡಿದ್ದಾರೆ. ಉದಾಹರಣೆಗೆ ಸಾಮಾನ್ಯ ಅರ್ಥದಲ್ಲಿ ಪರಲೋಕದ ಜೀವಿಗಳು/ದೂತರು (ಹೋಲಿಸಿ. ಕೀರ್ತನೆ 29:1 ಮತ್ತು ಕೀರ್ತನೆ 82:1) ಅಥವಾ **"ಅನ್ಯ ರಾಜರುಗಳು"** ಅಥವಾ **"ಅನ್ಯ ರಾಜರುಗಳ ದೇವರುಗಳು"**.

ನಿನ್ನ ಪರಿಶುದ್ಧಾಲಯ (ವಚನ 2): ಯೆರೂಸಲೇಮಿನ ದೇವಾಲಯವು ಅರಸನಾದ ದಾವೀದನ ಕಾಲದ ನಂತರ ಕಟ್ಟಲ್ಪಟ್ಟಿತು. ಒಂದುವೇಳೆ ದಾವೀದನು ಈ ಕೀರ್ತನೆಯ ಗ್ರಂಥಕರ್ತನಾಗಿದ್ದರೆ, ಪರಿಶುದ್ಧಾಲಯವು ದೇವರ ಒಡಂಬಡಿಕೆಯ ಮಂಜೂಷಕ್ಕಾಗಿ ಆತನು ಹಾಕಿದ ಗುಡಾರವನ್ನು ಸೂಚಿಸುತ್ತಿರಬಹುದು (ನೋಡಿ 2 ಸಮುವೇಲ. 6:17). **"ದೇವಾಲಯ"** ಎಂಬ ಪದವನ್ನು ಹೊಂದಿರುವ ದಾವೀದನಿಗೆ ಹೇಳಲಾದ ಇತರ ಕೀರ್ತನೆಗಳೂ ಇವೆ (ಉದಾಹರಣೆಗೆ ಕೀರ್ತನೆ 5:7, ಕೀರ್ತನೆ 11:4, ಕೀರ್ತನೆ 18:6, ಕೀರ್ತನೆ 27:4 ನೋಡಿ).

ನಿನ್ನ ನಾಮಮಹತ್ತು (ವಚನ 2): ಕರ್ತನ ನಾಮವು, ಆತನು ಯಾರಾಗಿದ್ದಾನೆ ಮತ್ತು ಆತನು ಏನೆಲ್ಲಾ ಮಾಡಿದ್ದಾನೆಂಬುದನ್ನು ಸೂಚಿಸುತ್ತದೆ.

ನೀನು ಉಸಿರಿದ ನುಡಿಗಳನ್ನು (ವಚನ 4): ತನ್ನ ಜನರಿಗಾಗಿನ ದೇವರ ವಾಗ್ದಾನಗಳು. ಇದೊಂದು ಮಾನವೀಕರಣವಾಗಿದೆ.

ಯೆಹೋವನ ಮಾರ್ಗಗಳು (ವಚನ 5): ತನ್ನ ಜನರೊಂದಿಗೆ ದೇವರು ವ್ಯವಹರಿಸುವ ರೀತಿ ಮತ್ತು ಐತಿಹಾಸಿಕ ಘಟನೆಗಳು.

ದೀನರನ್ನು ಲಕ್ಷಿಸುತ್ತಾನೆ (ವಚನ 6): ದೇವರು ತನ್ನ ಒಡಂಬಡಿಕೆಯ ಜನರಾದ **"ವಿನಮ್ರ"** ಅಥವಾ **"ದೀನ"**ರ ಬಗ್ಗೆ ಕಾಳಜಿ ವಹಿಸುತ್ತಾನೆ, ಆದರೆ ಆತನು ತನ್ನ ಶತ್ರುಗಳಾದ **"ಹೆಮ್ಮೆಯ"** ಜನರನ್ನು ವಿರೋಧಿಸುತ್ತಾನೆ.

ನಿನ್ನ ಕೈ ಚಾಚುವಿ (ವಚನ 7): **"ವ್ಯವಹರಿಸು"** ಎಂಬುದರ ರೂಪಾಲಂಕಾರವಾಗಿದೆ. ದೇವರನ್ನು **"ಕೈ"**ಯಿಂದ ವಿವರಿಸಲಾಗಿದೆ ಎಂಬುದು ಮಾನವೀಕರಣದ ಮತ್ತೊಂದು ಉದಾಹರಣೆಯಾಗಿದೆ (ವಚನ 8 ಅನ್ನು ಸಹ ನೋಡಿ)

ನಿನ್ನ ಬಲಗೈ (ವಚನ 7): ರಕ್ಷಿಸಲು ಇರುವ ದೇವರ ಶಕ್ತಿ.

ನೀನು ಕೈಹಚ್ಚಿದ ಕೆಲಸ (ವಚನ 8): ಕೀರ್ತನೆಗಾರನು ತನ್ನನ್ನು ಈ ರೂಪಾಲಂಕಾರದ ಅಭಿವ್ಯಕ್ತಿಯೊಂದಿಗೆ ವಿವರಿಸುತ್ತಾನೆ. ಅವನು ದೇವರ ಕೈಕೆಲಸ.

ಪ್ರಶ್ನೆಗಳು

1. ನೀವು ಕೀರ್ತನೆ 138 ಅನ್ನು ಹೇಗೆ ರಚಿಸುತ್ತೀರಿ?
2. ಕೀರ್ತನೆಗಾರನು ಈ ಕೀರ್ತನೆಯಲ್ಲಿ ಯಾರನ್ನು ಸಂಬೋಧಿಸುತ್ತಾನೆ?
3. ಕೀರ್ತನೆಗಾರನು ದೇವರನ್ನು ಯಾಕೆ ಸ್ತುತಿಸುತ್ತಾನೆ ಮತ್ತು ಆರಾಧಿಸುತ್ತಾನೆ (ವಚನ 1–2)?

4. ಕೀರ್ತನೆಗಾರನು ದೇವರ ನಿರಂತರ ಪ್ರೀತಿ ಮತ್ತು ನಂಬಿಗಸ್ತಿಕೆಯನ್ನು ಹೇಗೆ ಅನುಭವಿಸಿದ್ದಾನೆ (ವಚನ 3)?
5. ಭೂರಾಜರು ಭವಿಷ್ಯದಲ್ಲಿ ದೇವರೊಂದಿಗೆ ಹೇಗೆ ಸಂಬಂಧಿಸುತ್ತಾರೆ (ವಚನ 4–5)? ಮತ್ತು ಏಕೆ?
6. ದೇವರ ಮಹಿಮೆಯು ಹೇಗೆ ಪ್ರಕಟಿಸಲ್ಪಟ್ಟಿದೆ (ವಚನ 5–7)?
7. ಕೀರ್ತನೆಗಾರನು ದೇವರ ಕಾಳಜಿಯನ್ನು ಹೇಗೆ ಅನುಭವಿಸುತ್ತಾನೆ (ವಚನ 8)?

ಕೀರ್ತನೆ 138 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ನಿಮ್ಮ ಸತ್ಯವೇದವನ್ನು ನೋಡದೆ ಕೀರ್ತನೆ 138 ಅನ್ನು ನಿಮ್ಮದೇ ಮಾತಿನಲ್ಲಿ ಒಂದು ಅಥವಾ ಎರಡು ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿ.
2. ಈ ಕೀರ್ತನೆಯ ಸ್ವರ/ಭಾವವನ್ನು ನೀವು ಹೇಗೆ ನಿರೂಪಿಸುತ್ತೀರಿ?
3. ಈ ಕೀರ್ತನೆಯಲ್ಲಿ ಕಂಡುಬರುವ ಕೆಲವು ಕಾವ್ಯಾತ್ಮಕ ವೈಶಿಷ್ಟ್ಯಗಳನ್ನು ವಿವರಿಸಿರಿ.
4. ಭಾನುವಾರದ ಆರಾಧನಾ ಸೇವೆಯ ಕೀರ್ತನೆ ಓದುವ ವಿಭಾಗಕ್ಕೆ ಕೀರ್ತನೆ 138 ಬಳಸಲು ಅತ್ಯುತ್ತಮ ಕೀರ್ತನೆಯಾಗಿದೆ. ಯಾಕೆ?
5. ಕೀರ್ತನೆ 138 ಮತ್ತು ಈ ಅಧ್ಯಯನವು ನಾವು ದೇವರನ್ನು ಏಕೆ ಆರಾಧಿಸಬೇಕು ಮತ್ತು ಹೇಗೆ ಆರಾಧಿಸಬೇಕು ಎಂಬುದರ ಕುರಿತು ನಿಮಗೆ ಹೇಗೆ ಆಳವಾದ ತಿಳುವಳಿಕೆ ನೀಡಿದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 138 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಕೀರ್ತನೆಗಾರನು ದೇವರ ರಾಜ್ಯದ ಭವಿಷ್ಯಕ್ಕಾಗಿ ಒಂದು ಉನ್ನತವಾದ ದರ್ಶನವನ್ನು ಹೊಂದಿದ್ದಾನೆ. ಈ ದರ್ಶನವನ್ನು ವಿವರಿಸಿರಿ. ದಕ್ಷಿಣ ಭಾರತ ಮತ್ತು ಇಡೀ ಜಗತ್ತಿನಲ್ಲಿ ದೇವರ ರಾಜ್ಯದ ಭವಿಷ್ಯಕ್ಕಾಗಿ ಸ್ವತಃ ನಿಮ್ಮ ದರ್ಶನವನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.
2. ತನ್ನ ಪ್ರಾರ್ಥನೆಗಳು ನಿರೀಕ್ಷೆಗಿಂತಲೂ ಮಿಗಿಲಾಗಿ ಉತ್ತರಿಸಲ್ಪಟ್ಟಿದ್ದಕ್ಕಾಗಿ ಕೀರ್ತನೆಗಾರನು ದೇವರನ್ನು ಕೊಂಡಾಡಿ, ಆತನಿಗೆ ಕೃತಜ್ಞತೆ ಸಲ್ಲಿಸುತ್ತಾನೆ. ನಿಮ್ಮ ನಿರೀಕ್ಷೆಗಿಂತಲೂ ಮಿಗಿಲಾಗಿ ದೇವರು ನಿಮಗೆ ಉತ್ತರಿಸಿದ ಸನ್ನಿವೇಶಗಳನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ. ತನ್ನ ನಿರಂತರವಾದ ಪ್ರೀತಿಯ ಪ್ರಕಾರ ಆತನು ಪ್ರಾರ್ಥನೆಗೆ ಉತ್ತರಿಸುವ ದೇವರಾಗಿರುವುದಕ್ಕಾಗಿ ದೇವರನ್ನು ಸ್ತುತಿಸಿರಿ.
3. ಕೀರ್ತನೆಗಾರನು ತನಗಾಗಿ ದೇವರು ತನ್ನ ಉದ್ದೇಶಗಳನ್ನು ನೆರೆವೇರಿಸುತ್ತಾನೆಂದು ಭರವಸವುಳ್ಳವನಾಗಿದ್ದಾನೆ. ನಿಮಗಾಗಿ ಇಂದು ದೇವರ ಉದ್ದೇಶಗಳೇನು? ಅವು ನೆರವೇರುತ್ತವೆಂಬ ಭರವಸೆ ನಿಮಗುಂಟಾ? ನಿಮ್ಮ ಜೀವಿತಗಳನ್ನು ದೇವರ ಉದ್ದೇಶಗಳಿಗಾಗಿ ಸ್ವಲ್ಪಸಮಯ ಪ್ರಾರ್ಥನೆಯಲ್ಲಿ ನಿಮ್ಮನ್ನೇ ಪುನಃ ದೇವರಿಗೆ ಸಮರ್ಪಿಸಿಕೊಡಿರಿ.

ಅಸೈನ್‌ಮೆಂಟ್: ಕೀರ್ತನೆ 138

ಕೀರ್ತನೆ 138 ಮತ್ತು ಈ ಅಧ್ಯಯನವನ್ನು ಆಧರಿಸಿ ಒಂದು ಧ್ಯಾನಮಾಲಿಕೆಯನ್ನು ಸಿದ್ಧಪಡಿಸಿರಿ.

ಕೀರ್ತನೆ 139

ಪೀಠಿಕೆ ಮತ್ತು ಟಿಪ್ಪಣಿಗಳು

"ಪ್ರಧಾನಗಾಯಕನ ಕೀರ್ತನಸಂಗ್ರಹದಿಂದ ತೆಗೆದದ್ದು; ದಾವೀದನ ಕೀರ್ತನೆ" ಎಂದು ಇಬ್ರಿಯ ಪಠ್ಯದಲ್ಲಿ ತಲೆಬರಹವು ಹೇಳುತ್ತದೆ.

ಈ ಕೀರ್ತನೆಯನ್ನು ವರ್ಗೀಕರಿಸಲು ವಿಶ್ಲೇಷಕರು ಪರದಾಡುತ್ತಿದ್ದಾರೆ. ಇದು ಪ್ರಾರ್ಥನೆ ಸಹ ಆಗಿದೆ. ಸ್ತುತಿಗೀತೆ (ಅಥವಾ ಭರವಸೆಯ ಹಾಡು)ಯನ್ನಾಗಿ ವರ್ಗಿಕರಿಸಬಹುದಾಗಿದೆ. ದಾವೀದನೇ ದೇವರು ತನ್ನ ಹೃದಯವನ್ನು ಪರೀಕ್ಷಿಸಬೇಕೆಂದು ದೇವರಿಗೆ ಪ್ರಾರ್ಥನೆ ಮಾಡುತ್ತಿದ್ದಾನೆ. ಇದು ದೇವರ ನಾಲ್ಕು ಸ್ವಭಾವಗಳಿಗೆ ಒತ್ತು ಕೊಡುತ್ತದೆಂದು ಒಬ್ಬ ವಿಶ್ಲೇಷಕರು ಹೇಳಿದ್ದಾರೆ. ಆತನಿಗೆ ಎಲ್ಲವೂ ತಿಳಿದಿದೆ (ವಚನ 1–6), ಆತನು ಎಲ್ಲೆಡೆಯಲ್ಲಿಯೂ ಇರುತ್ತಾನೆ (ವಚನ 7:12), ಸೃಷ್ಟಿಯಲ್ಲಿ ಆತನ ಶಕ್ತಿಯಿದೆ (ವಚನ 13–18) ಮತ್ತು ಆತನ ಪರಿಶುದ್ಧತೆ (ವಚನ 19–24).

ಕೀರ್ತನೆಯ ಅಂತ್ಯವು ಇದರ ಪ್ರಾರಂಭವನ್ನು ಪ್ರತಿಧ್ವನಿಸುತ್ತದೆ ("ನೀನು ನನ್ನನ್ನು ಪರೀಕ್ಷಿಸಿ ತಿಳುಕೊಂಡಿದ್ದೀ" ಎಂಬ ಒಂದನೇ ವಚನವನ್ನು "ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ" ಎಂಬ ಇಪ್ಪತ್ತುಮೂರನೇ ವಚನದೊಂದಿಗೆ ಹೋಲಿಸಿ). ಈ ಸಾಹಿತ್ಯಿಕ ವೈಶಿಷ್ಟ್ಯವನ್ನು "ಆವರಣ" ಎಂದು ಕರೆಯಲಾಗುತ್ತದೆ. ದಾವೀದನು ನಿಜವಾಗಿಯೂ ತನ್ನ ಜೀವಿತವನ್ನು ದೇವರ ಮುಂದೆ ಮುಕ್ತವಾಗಿಡಬೇಕೆಂದು ಬಯಸುತ್ತಾನೆ. ಅವನು ದೇವರನ್ನು ತನ್ನನ್ನು ಮಾರ್ಗದರ್ಶನ ಮಾಡಲು ಮತ್ತು "ಶಾಶ್ವತ ಮಾರ್ಗದಲ್ಲಿ" (ವಚನ 24) ನಡೆಸುವಂತೆ ಆಹ್ವಾನಿಸುತ್ತಾನೆ.

ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ (ವಚನ 5): ಇದೊಂದು ರೂಪಾಲಂಕಾರವಾಗಿದೆ (ಮಾನವೀಕರಣಕ್ಕೆ ಒಂದು ಉದಾಹರಣೆಯಾಗಿದೆ). ದೇವರು ದಾವೀದನನ್ನು ತನ್ನಿಂದ ತಪ್ಪಿಸಿಕೊಳ್ಳದಂತೆ ತಡೆಯಲು ಹಿಡಿದುಕೊಂಡಿದ್ದನು.

ಬಹು ಆಶ್ಚರ್ಯಕರವಾಗಿದೆ (ವಚನ 6): ದೇವರ ಅದ್ಭುತಮಯವಾದ ಕಾರ್ಯವನ್ನು ವರ್ಣಿಸಲು ಈ ಪದ ಬಳಸಲಾಗಿದೆ.

ಸಮುದ್ರದ ಕಟ್ಟಕಡೆಯಲ್ಲಿ (ವಚನ 9): ಸೂರ್ಯನು ಪಶ್ಚಿಮದಲ್ಲಿ ಮುಳುಗುವುದು ಮತ್ತು ಮೆಡಿಟರೇನಿಯನ್ ಸಮುದ್ರವು ಇಸ್ರಾಯೇಲಿನ ಪಶ್ಚಿಮ ಭಾಗದಲ್ಲಿತ್ತು.

ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು (ವಚನ 16): ದೇವರು ಪುಸ್ತಕದಲ್ಲಿ ಬರೆದಿದ್ದಾನೆ ಎಂಬುದು (ಪರಲೋಕದ ದಾಖಲಾತಿ) ದೇವರು ಆತನ ಜೀವಿತವನ್ನು ತಿಳಿದಿದ್ದಾನೆಂಬುದನ್ನು ಸೂಚಿಸುತ್ತದೆ. ದಾವೀದನ ಜೀವಿತವು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿತ್ತು ಮತ್ತು ಆತನ ಪ್ರತಿಯೊಂದು ದಿನಗಳು ಸಹ ಎಣಿಸಲ್ಪಟ್ಟಿದ್ದವು (ಹೋಲಿಸಿ ಕೀರ್ತನೆ 56:8).

ನಿನ್ನನ್ನು ದ್ವೇಷಿಸುವವರನ್ನು ನಾನು ದ್ವೇಷಿಸುತ್ತೇನಲ್ಲವೋ? (ವಚನ 21): ದಾವೀದನು ದೇವರಿಗೆ ತನ್ನ ನಿಷ್ಠೆಯನ್ನು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ.

ಪ್ರಶ್ನೆಗಳು

1. ನೀವು ಕೀರ್ತನೆ 139 ಅನ್ನು ಹೇಗೆ ರಚಿಸುತ್ತೀರಿ?
2. ದೇವರು ಅವನನ್ನು ಎಷ್ಟು ಹೆಚ್ಚಾಗಿ ಅರಿತಿದ್ದಾನೆಂದು ತೋರಿಸಲು 1–4 ನೇ ವಚನಗಳಲ್ಲಿ ದಾವೀದನು ಉಪಯೋಗಿಸುವ ಪದಗಳನ್ನು ಮತ್ತು ಹೇಳಿಕೆಗಳನ್ನು ಪಟ್ಟಿಮಾಡಿ. ಈ ಪದಗಳ ಅರ್ಥವನ್ನು ಸಹ ವಿವರಿಸಿ.
3. ದೇವರು ಎಲ್ಲಾ ಕಡೆಯು ಇರುತ್ತಾನೆ ಎಂದು ತೋರಿಸಲು 8–12 ನೇ ವಚನಗಳಲ್ಲಿ ದಾವೀದನು ಬಳಸುವ ಉದಾಹರಣೆಗಳನ್ನು ಪಟ್ಟಿಮಾಡಿರಿ.
4. ದೇವರು ತನ್ನ ಸುಷ್ಟಿಕರ್ತ (ಮತ್ತು ಪ್ರತಿಯೊಬ್ಬ ಮನುಷ್ಯನ ಸೃಷ್ಟಿಕರ್ತ) ಎಂದು ವಿವರಿಸಲು 13–15 ನೇ ವಚನಗಳಲ್ಲಿ ದಾವೀದನು ವಿಭಿನ್ನ ಹೇಳಿಕೆಗಳನ್ನು ಬಳಸುತ್ತಾನೆ. ಈ ಹೇಳಿಕೆಗಳನ್ನು ಪಟ್ಟಿ ಮಾಡಿರಿ.
5. 19 ನೇ ವಚನದಲ್ಲಿ ದೇವರು ಏನು ಮಾಡಬೇಕೆಂದು ದಾವೀದನು ಬಯಸುತ್ತಾನೆ? ಮತ್ತು ದೇವರು ಇದನ್ನು ಮಾಡಬೇಕೆಂದು ದಾವೀದನು ಯಾಕೆ ಬಯಸುತ್ತಾನೆ (ವಚನ 20–21)?

6. 23–24 ನೇ ವಚನಗಳಲ್ಲಿ ದಾವೀದನು ದೇವರಿಂದ ಏನನ್ನು ಬೇಡಿಕೊಳ್ಳುತ್ತಾನೆ? ಅದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.

ಕೀರ್ತನೆ 139 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ದಾವೀದನು ಆತನ ಕುರಿತಾಗಿನ ದೇವರ ತಿಳುವಳಿಕೆಯನ್ನು 5 ನೇ ವಚನದಲ್ಲಿ ಸಾರಾಂಶಗೊಳಿಸುತ್ತಾನೆ (ವಚನ 1–4 ನೋಡಿ). ದೇವರು ಮನುಷ್ಯನ ಬಗ್ಗೆ ಹೊಂದಿರುವ ಈ ನಿಕಟ ಜ್ಞಾನವು ಅನೇಕ ಜನರಿಗೆ ತುಂಬಾ ಹೆಚ್ಚು, ಅದು ಅವರನ್ನು ತೊಂದರೆಗೊಳಿಸುತ್ತದೆ:

   ಅ. ಈ ಮಾತುಗಳನ್ನು ಉಪಯೋಗಿಸುವಾಗ ಸ್ವತಃ ದಾವೀದನು ಏನೆಂದು ಭಾವಿಸಿದನು ಎಂದು ನೀವು ಯೋಚಿಸುವಿರಿ?

   ಆ. ಈ ಮಾತುಗಳನ್ನು ಓದಿದಾಗ ನಿಮಗೆ ಏನನಿಸುತ್ತದೆ?

2. ಕೀರ್ತನೆಯ ಎರಡನೇಯ ವಿಭಾಗವು (ವಚನ 7–12) ಎರಡು ಅಲಂಕಾರಿ ಪ್ರಶ್ನೆಗಳೊಂದಿಗೆ ಪ್ರಾರಂಭವಾಗುತ್ತದೆ. ಇವು ಸಮಾನಾರ್ಥಕ ಸಮಾನಾಂತರತೆಯ ರೂಪದಲ್ಲಿದೆ. ಅವು ಹೇಗೆ ಅರ್ಥೈಸಲ್ಪಡಬೇಕೆಂದು ನೀವು ಯೋಚಿಸುವಿರಿ? ಈ ವಚನಗಳಲ್ಲಿನ (8–12) ಚಿತ್ರಣದ ಅರ್ಥ ವಿವರಣೆಯ ಮೇಲೆ ನಿಮ್ಮ ತಿಳುವಳಿಕೆ ಹೇಗೆ ಪರಿಣಾಮ ಬೀರಬಹುದು?

3. 9 ನೇ ವಚನದಲ್ಲಿನ ಚಿತ್ರಣವನ್ನು ವಿವರಿಸಿರಿ.

4. 11 ನೇ ವಚನದಲ್ಲಿನ ಸಮಾನಾಂತರತೆಯನ್ನು ವಿವರಿಸಿರಿ.

5. ಮೇಲ್ಕಂಡ 4 ನೇ ಪ್ರಶ್ನೆಯನ್ನು ಮೊದಲು ಉತ್ತರಿಸಿ. ನಂತರ 13–15 ನೇ ವಚನಗಳ ಆಧಾರದ ಮೇಲೆ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ.

   ಅ. ಅಂತರಿಂದ್ರಿಯಕ್ಕೆ (ವಚನ 13) ಇಬ್ರಿಯ ಪದದ ಅರ್ಥ (ಪಿತ್ತ ಜನಕಾಂಗ) ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರಿಕವಾಗಿದೆ. ಇದರ ಅರ್ಥ ಏನೆಂದು ವಿವರಿಸಿರಿ ಮತ್ತು 13ನೇ ವಚನದ ಆರಂಭವನ್ನು ನಾವು ಹೇಗೆ ಅರ್ಥೈಸಿಕೊಳ್ಳಬಹುದು?

   ಆ. 15 ನೇ ವಚನದ ಅರ್ಥವನ್ನು ವಿವರಿಸಿ.

6. ಈ ಕೀರ್ತನೆಯ ಮೊದಲ ಮೂರು ಭಾಗಗಳ ಸ್ವರ/ಭಾವ ಏನು (ವಚನ 1—8)? ಕೀರ್ತನೆಯ ಕಡೇ ಭಾಗದಲ್ಲಿ (ವಚನ 19–22) ಸ್ವರವು ಹೇಗೆ ಬದಲಾಗುತ್ತದೆ?

7. 21 ನೇ ವಚನದಲ್ಲಿ ನಾವು ಇನ್ನೂ ಎರಡು ಅಲಂಕಾರಿಕ ಪ್ರಶ್ನೆಗಳನ್ನು ಕಾಣುತ್ತೇವೆ. ಅವುಗಳನ್ನು ಹೇಗೆ ಅರ್ಥೈಸಬೇಕು ಎಂಬುದನ್ನು ನೀವು ಯೋಚಿಸುವಿರಿ?

8. 19–21 ನೇ ವಚನಗಳಲ್ಲಿ ದಾವೀದನು ಬಳಸುವ ಭಾಷೆ ತುಂಬಾ ಪ್ರಬಲ ಮತ್ತು ದ್ವೇಷಪೂರಿತವಾಗಿದೆ. ದಾವೀದನಂತಹ ಮಹಾನ್ ದೇವರ ಮನುಷ್ಯನು ಆ ರೀತಿಯ **"ಭಕ್ತಿಹೀನ"** ಆಲೋಚನೆಗಳನ್ನು ಹೇಗೆ ಯೋಚಿಸಲು ಸಾಧ್ಯ? ಮತ್ತು ಕೀರ್ತನೆಗಳ ಪುಸ್ತಕದಲ್ಲಿ ಈ ರೀತಿಯ ಪಠ್ಯವನ್ನು ನಾವು ಏಕೆ ಕಂಡುಕೊಳ್ಳುತ್ತೇವೆ ಎಂದು ನೀವು ಭಾವಿಸುತ್ತೀರಿ?

ಕೀರ್ತನೆ 139 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ನಿಮ್ಮ ಕುರಿತಾದ ದೇವರ ಅನ್ಯೋನ್ಯವಾದ ತಿಳುವಳಿಕೆಯನ್ನು ವಿಮರ್ಶಿಸಿರಿ (ವಚನ 1–6). ಇದರಿಂದ ನಿಮಗೆ ಹೆದರಿಕೆ ಅನಿಸುತ್ತಿದೆಯಾ? ಹಾಗಾದರೆ ಯಾಕೆ? ಅಥವಾ ಇದರಿಂದ ನಿಮಗೆ ಒಂದು ರೀತಿಯಲ್ಲಿ ಆರಾಮ ಅನಿಸುತ್ತಿದೆಯಾ? ಬಹುಶಃ ನೀವು ದೇವರ ಕಡೆಗೆ ತಿರುಗಿ ನಿಮ್ಮನ್ನೇ ಪುನಃ ಆತನಿಗೆ ಸಮರ್ಪಿಸಬೇಕಾಗಬಹುದು. ಇವುಗಳನ್ನು ವಿಮರ್ಶಿಸುವಾಗ ಸ್ವಲ್ಪಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

2. ನೀವು ದೇವರಿಂದ ಮತ್ತು ನಿಮ್ಮ ಜೀವಿತಕ್ಕಾಗಿನ ಆತನ ಯೋಜನೆಗಳಿಂದ ದೂರ ಹೋಗುತ್ತಿರುವಿರಾ? ಅಥವಾ ನಿಮ್ಮ ಜೀವಿತವನ್ನು ದೇವರ ಪ್ರಸನ್ನತೆಯಲ್ಲಿ, ಆತನ ಚಿತ್ತವನ್ನು ಮಾಡುವುದರಲ್ಲಿ ಕಳೆಯುತ್ತಿರುವಿರಾ? ಭವಿಷ್ಯದಲ್ಲಿ ಏನಿದೆ

ಎಂಬುದರ ಬಗ್ಗೆ ಭಯಪಡುತ್ತಿರುವಿರಾ? ಅಥವಾ ನಿಮ್ಮ ಭವಿಷ್ಯವನ್ನು ನೋಡಿಕೊಳ್ಳಬೇಕೆಂದು ದೇವರಲ್ಲಿ ಭರವಸವಿಡುತ್ತೀರಾ? ಈ ಪ್ರಶ್ನೆಗಳನ್ನೆಲ್ಲಾ ವಿಮರ್ಶಿಸುವಾಗ ಸ್ವಲ್ಪ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

3. ದಾವೀದನು ವಾಸ್ತವವಾಗಿ ದೇವರನ್ನು ತನ್ನ ಹೃದಯವನ್ನು ಪರೀಕ್ಷಿಸಲು ಮತ್ತು ತನ್ನ ಆಲೋಚನೆಗಳನ್ನು ಪರೀಕ್ಷಿಸಲು ಕೇಳಿಕೊಳ್ಳುತ್ತಿದ್ದಾನೆ. ದೇವರ ದೃಷ್ಟಿಯಲ್ಲಿ ಅಪರಾಧವಾಗಿರುವ ವಿಷಯವೇನಾದರೂ ತನ್ನ ಜೀವನದಲ್ಲಿ ಇದ್ದರೆ ಅದನ್ನು ತೋರಿಸಲು ಕೇಳುತ್ತಿದ್ದಾನೆ (ವಚನ 23–24). ಈ ಹಿಂದೆ ಇದ್ದ ವಚನಗಳಲ್ಲಿ, ದಾವೀದನು ದೇವರ ವಿರೋಧಿಗಳಿಗೆ ತೀವ್ರವಾದ ದ್ವೇಷವನ್ನು ವ್ಯಕ್ತಪಡಿಸಿ, ಅವರನ್ನೇ ನಾಶಮಾಡಬೇಕೆಂದು ದೇವರನ್ನು ಕೇಳಿಕೊಂಡಿದ್ದಾನೆ. ದೇವರ ಮುಂದೆ ಇರುವ ದಾವೀದನ ಆ ತೆರೆಯಿಲ್ಲದ ಉದಾರತೆ, ಆತ್ಮವಿಶ್ಲೇಷಣೆ ಮತ್ತು ದೇವರು ತನ್ನನ್ನು ಪರಿವರ್ತಿಸಲಿ ಎಂಬ ಆಳವಾದ ಪ್ರಾರ್ಥನೆಯನ್ನು ಪರಿಗಣಿಸಿ, ಆತನು **"ಸನಾತನ ಮಾರ್ಗದಲ್ಲಿ"** ತನ್ನನ್ನು ನಡೆಸಬೇಕೆಂದು ದೇವರನ್ನೇ ಬೇಡುತ್ತಾನೆ (ವಚನ 24). ಈ ಬೆಳಕಿನಲ್ಲಿ ನಿಮ್ಮದೇ ಜೀವನವನ್ನು ಮತ್ತು ಮನೋಭಾವಗಳನ್ನು ಪರಿಶೀಲಿಸಿ. ದೇವರು ನಿಮ್ಮ ಹೃದಯವನ್ನು ಪರೀಕ್ಷಿಸಿ, ಪರಿವರ್ತನೆ ಮಾಡಲು ನೀವು ಸಿದ್ಧರಿದ್ದೀರಾ? ಕೆಲವುಕ್ಷಣ ದೇವರ ಸನ್ನಿಧಿಯಲ್ಲಿ ಮೌನಪ್ರಾರ್ಥನೆಯಲ್ಲಿ ಕಾಲಕಳೆಯಿರಿ.

ಅಸೈನ್‌ಮೆಂಟ್: ಕೀರ್ತನೆ 139

ಕೀರ್ತನೆ 139 ಮತ್ತು ಈ ಅಧ್ಯಯನವನ್ನು ಆಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶವನ್ನು) ಸಿದ್ಧಪಡಿಸಿರಿ.

ಕೀರ್ತನೆ 143

ಪೀಠಿಕೆ ಮತ್ತು ಟಿಪ್ಪಣಿಗಳು

ಇಬ್ರಿಯ ತಲೆಬರಹದಲ್ಲಿ **"ದಾವೀದನ ಕೀರ್ತನೆ"** ಎಂದಷ್ಟೇ ಇದೆ. ಪ್ರಾಚೀನ ಗ್ರೀಕಿನ ಸೆಪ್ಟೂಜೆಂಟ್ ಭಾಷಾಂತರವು **"ಆತನ ಮಗನು ಈತನನ್ನು ಹಿಂಸಿಸಿದಾಗ"** ಎಂದು ಸೇರಿಸಿದೆ (ಅಬ್ಷಾಲೋಮನ ಕಥೆ ಸೂಚಿಸಿ, 2 ಸಮುವೇಲ 15–18ನೇ ಅಧ್ಯಾಯಗಳನ್ನು ನೋಡಿರಿ).

ಕೀರ್ತನೆ 143 ಅನ್ನು ಒಂದು ವೈಯಕ್ತಿಕ ಪ್ರಲಾಪವನ್ನಾಗಿ ವರ್ಗೀಕರಿಸಬಹುದು. ಕೀರ್ತನೆಗಾರನು ಇಲ್ಲಿ ತನ್ನ ಪ್ರಾರ್ಥನೆಯನ್ನು ಕೇಳಬೇಕೆಂದೂ, ವೈರಿಗಳಿಂದಾದ ಹಿಂಸೆಯಿಂದ ತನ್ನನ್ನು ಬಿಡಿಸಬೇಕೆಂದೂ ತನ್ನ ಒಡಂಬಡಿಕೆಯ ಕರ್ತನಲ್ಲಿ ಮೊರೆಯಿಡುತಿದ್ದಾನೆ. ಕ್ರೈಸ್ತ ಸಭೆಯ ಸಂಪ್ರದಾಯದಲ್ಲಿ 143ನೇ ಕೀರ್ತನೆಯು, ಕೀರ್ತನೆ ಪುಸ್ತಕದಲ್ಲಿನ ಸಂತಾಪ/ಪಶ್ಚಾತ್ತಾಪ ಸೂಚಕ ಕೀರ್ತನೆಗಳಲ್ಲಿ ಏಳನೆಯ ಮತ್ತು ಕೊನೆಯ ಕೀರ್ತನೆಯಾಗಿದೆ.

ನಿನ್ನ ನೀತಿಸತ್ಯತೆಗಳಿಗನುಸಾರವಾಗಿ (ವಚನ 1 ಮತ್ತು 11): ದಾವೀದನು ದೇವರ ನೀತಿವಂತಿಕೆಯ ನಿಮಿತ್ತ ದೇವರು ತನಗೆ ನ್ಯಾಯ ತೀರಿಸಬೇಕೆಂದೂ ಮತ್ತು ತನ್ನ ವೈರಿಗಳಿಂದ ಬಿಡುಗಡೆಯನ್ನು ಕೊಡಬೇಕೆಂದು ಅಪೇಕ್ಷಿಸುತ್ತಾನೆ. ದೇವರು ದಾವೀದನಿಗಾಗಿ ಮತ್ತು ಆತನ ಪರಿಸ್ಥಿತಿಗಾಗಿ ಚಿಂತಿಸುತ್ತಾನೆ.

ವಿಚಾರಣೆಗೆ ಗುರಿಮಾಡಬೇಡ (ವಚನ 2): ಯಾವ ಮನುಷ್ಯನೂ ದೇವರ ಮುಂದೆ ನೀತಿವಂತನಲ್ಲದ ನಿಮಿತ್ತ ದಾವೀದನು ತನ್ನನ್ನು ವಿಚಾರಣೆಗೆ ಗುರಿಮಾಡಬೇಡ ಎಂದು ದೇವರನ್ನು ಕೇಳಿಕೊಳ್ಳುತ್ತಾನೆ. ಆದರೆ ತನ್ನ ವೈರಿಯೊಂದಿಗೆ ದೇವರೇ ವ್ಯವಹರಿಸಬೇಕೆಂದು ಆತನು ಆಶಿಸುತ್ತಾನೆ.

ನಿನ್ನ ಸೇವಕನನ್ನು (ವಚನ 2): **"ನನ್ನನ್ನು"** ಎಂದು ಹೇಳಲು ಪ್ರಾಚೀನ ಇಸ್ರಾಯೇಲ್ಯನ ಇದೊಂದು ಸಾಮಾನ್ಯ ಬಗೆಯಾಗಿತ್ತು.

ನನ್ನ ಪ್ರಾಣವನ್ನು (ವಚನ 3, 11, 12): ಈ ಇಬ್ರಿಯ ಹೇಳಿಕೆಯು ಇಡೀ ವ್ಯಕ್ತಿಯನ್ನು ದೇಹ, ಆತ್ಮ, ಪ್ರಾಣವನ್ನು ಸೂಚಿಸುತ್ತದೆ.

ಕಾರ್ಗತ್ತಲೆಯಲ್ಲಿ ನನ್ನನ್ನು ಹಾಕಿದ್ದಾನೆ (ವಚನ 3): ಜೀವನದಲ್ಲಿನ ಸುಖದಿಂದ ದೂರಮಾಡುವುದಕ್ಕೆ ಇದೊಂದು ರೂಪಾಲಂಕಾರವಾಗಿದೆ.

ನನ್ನ ಆತ್ಮವು ಕುಂದಿಹೋಗಿದೆ (ವಚನ 4): ಈ ವಾಕ್ಯವು ಪದ್ಯದ ಮೊದಲಾರ್ಧದಲ್ಲಿ **"ನನ್ನ ಆತ್ಮ ನನ್ನೊಳಗೆ ಕುಗ್ಗುತ್ತದೆ"** ಎಂಬ ಪದಕ್ಕೆ ಸಮಾನಾರ್ಥಕವಾಗಿದೆ. ಇದರರ್ಥ **"ಆಳವಾದ ಹತಾಶೆಯಲ್ಲಿದ್ದೇನೆ ಮತ್ತು ಬಿಟ್ಟುಕೊಡಲು ಸಿದ್ದ"**.

ಕೈಯೊಡ್ಡಿ ಬೇಡುತ್ತೇನೆ (ವಚನ 6): ಪ್ರಾಚೀನ ಇಸ್ರಾಯೇಲ್ಯರು ದೇವರ ಮುಂದೆ ನಿಂತುಕೊಂಡು ಈ ರೀತಿಯಲ್ಲಿ ಪ್ರಾರ್ಥಿಸುತ್ತಿದ್ದರು.

ಸೆಲಾ (ವಚನ 6): ಕೀರ್ತನೆ 3:2 ರ ಟಿಪ್ಪಣಿ ನೋಡಿ.

ನೀನು ವಿಮುಖನಾದರೆ (ವಚನ 7): ದಾವೀದನ ಪ್ರಾರ್ಥನೆಗೆ ಸದುತ್ತರವನ್ನು ದಯಪಾಲಿಸಲು ನಿರಾಕರಿಸುವುದಕ್ಕೆ ಇದೊಂದು ರೂಪಾಲಂಕಾರವಾಗಿದೆ.

ಸಮಾಧಿ (ವಚನ 7): ಇಬ್ರಿಯ ಪದವು **"ಶಿಯೋಲ್"**. ಇದು ಸತ್ತವರ ವಾಸಸ್ಥಳವನ್ನು ಸೂಚಿಸುತ್ತದೆ.

ನಾನು ನಡೆಯತಕ್ಕ ಮಾರ್ಗವನ್ನು ತಿಳಿಸು (ವಚನ 8): ಈ ಹೇಳಿಕೆಯು ಹತ್ತನೇ ವಚನದಲ್ಲಿನ **"ನಿನ್ನ ಚಿತ್ತದಂತೆ** ನಡಕೊಳ್ಳುವುದನ್ನು ನನಗೆ ಕಲಿಸು" ಎಂಬ ಹೇಳಿಕೆಗೆ ಸಮಾನಾರ್ಥಕವಾಗಿದೆ.

ನನ್ನ ಮನಸ್ಸನ್ನು ನಿನ್ನಲ್ಲಿಯೇ ಇಟ್ಟಿದ್ದೇನೆ (ವಚನ 8): ಈ ರೂಪಾಲಂಕಾರದ ಅರ್ಥ **"ನಾನು** ನಿನ್ನಲ್ಲಿಯೇ ಭರವಸವಿಟ್ಟಿದ್ದೇನೆ" ಎಂಬುದಾಗಿದೆ.

ಪ್ರಶ್ನೆಗಳು

1. ನೀವು ಕೀರ್ತನೆ 143 ಅನ್ನು ಹೇಗೆ ರಚಿಸುತ್ತೀರಿ?
2. ಈ ಕೀರ್ತನೆಯು ಉದ್ದಕ್ಕೂ ಕೀರ್ತನೆಗಾರನು ಯಾರನ್ನು ಸಂಬೋಧಿಸುತ್ತಾನೆ?
3. ದಾವೀದನು 1 ನೇ ವಚನದಲ್ಲಿ ದೇವರಿಂದ ಏನು ಕೇಳುತ್ತಾನೆ?
4. ದೇವರು ತನ್ನ ಮೊರೆಗೆ ಕಿವಿಗೊಡಬೇಕೆಂದು ದಾವೀದನು ಏಕೆ ಅಪೇಕ್ಷಿಸುತ್ತಾನೆ (ವಚನ 1)?
5. ದಾವೀದನು ಎರಡನೇ ವಚನದಲ್ಲಿ ದೇವರಿಂದ ಏನನ್ನು ಬೇಡಿಕೊಳ್ಳುತ್ತಾನೆ? ಆತನು ಅದನ್ನು ಯಾಕೆ ಕೇಳಿಕೊಳ್ಳುತ್ತಾನೆ?
6. ದಾವೀದನು 3–4 ನೇ ವಚನಗಳಲ್ಲಿ ತನ್ನ ಪರಿಸ್ಥಿತಿಯನ್ನು ಹೇಗೆ ವಿವರಿಸುತ್ತಾನೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
7. ದಾವೀದನು 7 ನೇ ವಚನದಲ್ಲಿ ದೇವರಿಂದ ಏನು ಬೇಡಿಕೊಳ್ಳುತ್ತಾನೆ?
8. ಕೀರ್ತನೆಗಾರನು 8–12 ನೇ ವಚನಗಳಲ್ಲಿ ದೇವರಿಗೆ ಅನೇಕ ಮನವಿಗಳನ್ನು ಮಾಡಿಕೊಳ್ಳುತ್ತಾನೆ. ಪಟ್ಟಿ ಮಾಡಿ, ಆದರೆ ನಿಮ್ಮ ಸತ್ಯವೇದದಿಂದ ಪಠ್ಯವನ್ನು ಉಲ್ಲೇಖಿಸಬೇಡಿ. ಬದಲಿಗೆ ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
9. ದೇವರು ತನ್ನ ಪ್ರಾರ್ಥನೆಗೆ ಉತ್ತರಿಸಬೇಕೆಂದು ದಾವೀದನು ಯಾಕೆ ಅಪೇಕ್ಷಿಸುತ್ತಾನೆ (ವಚನ 8–12)? ಪಟ್ಟಿ ಮಾಡಿ, ಆದರೆ ನಿಮ್ಮ ಸತ್ಯವೇದದಿಂದ ಪಠ್ಯವನ್ನು ಉಲ್ಲೇಖಿಸಬೇಡಿ. ಬದಲಿಗೆ ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

ಕೀರ್ತನೆ 143 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೀರ್ತನೆ 143 ಅನ್ನು **"ವೈಯಕ್ತಿಕ ಪ್ರಲಾಪ"** ಎಂದು ಏಕೆ ವರ್ಗೀಕರಿಸಬಹುದು ಎಂಬುದನ್ನು ವಿವರಿಸಿರಿ.
2. 4–6 ನೇ ವಚನಗಳಲ್ಲಿ ಕೀರ್ತನೆಗಾರನು ಹೇಗೆ ತರ್ಕಿಸುತ್ತಾನೆ ಎಂಬುದನ್ನು ವಿವರಿಸಿರಿ.
3. ಕೀರ್ತನೆಗಾರನು ಕನಿಷ್ಠ ಮೂರು ರೀತಿಯ ಚಿತ್ರಣಗಳನ್ನು ಬಳಸುತ್ತಾನೆ:
   ಅ. ವಚನ 1 (ನನ್ನ ಬಿನ್ನಹಕ್ಕೆ ಕಿವಿಗೊಡು), ವಚನ 8 (ನಾವು ನಡೆಯತಕ್ಕ ಮಾರ್ಗವನ್ನು ತಿಳಿಸು) ರಲ್ಲಿನ ರೂಪಾಲಂಕಾರಗಳನ್ನು ತಿಳಿಸಿ.
   ಆ. ವಚನ 5 (ನಿನ್ನ ಕೈ ಕೆಲಸ), ವಚನ 7 (ನೀನು ಮುಖ ಮುಚ್ಚಿಕೊಳ್ಳಬೇಡ) ಮತ್ತು ವಚನ 8 (ನಡೆಯತಕ್ಕ ಮಾರ್ಗವನ್ನು ತಿಳಿಸು) ರಲ್ಲಿನ ಮಾನವೀಕರಣವನ್ನು ವಿವರಿಸಿರಿ.
   ಇ. ವಚನ 3 (ಬಹುಕಾಲದಿಂದ ಸತ್ತವರಂತಿದ್ದೇನೆ) ವಚನ 6 (ಒಣ ನೆಲದಂತೆ) ಮತ್ತು ವಚನ 7 (ಸಮಾಧಿಯಲ್ಲಿ ಸೇರಿದವರಿಗೆ ನಾನು ಸಮನಾಗಿರುವೆನು) ರಲ್ಲಿನ ಉಪಮೆಯನ್ನು ವಿವರಿಸಿ.
4. ಇದರಲ್ಲಿ ಸಮಾನಾರ್ಥಕ ಸಮನಾಂತರತೆಗಳನ್ನು ವಿವರಿಸಿರಿ:
   ಅ. ವಚನ 4
   ಆ. ವಚನ 10
   ಇ. ವಚನ 11 ಮತ್ತು 12 (ಮೊದಲಾರ್ಧ)
5. ಇದರಲ್ಲಿ ಸಂಯೋಜಿತ ಸಮಾನಾಂತರತೆಯನ್ನು ವಿವರಿಸಿರಿ:
   ಅ. ವಚನ 2
   ಆ. ವಚನ 9
   ಇ. ವಚನ 12
6. ಕೀರ್ತನೆ 143 ಮತ್ತು ಈ ಅಧ್ಯಯನವು ನಿಮ್ಮ ಪ್ರಾರ್ಥನಾ ಜೀವಿತವನ್ನು ಅಭಿವೃದ್ಧಿಗೊಳಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಕೀರ್ತನೆ 143 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ಈ ಹಿಂದೆ ದೇವರು ಮಾಡಿದೆಲ್ಲವನ್ನು ಯೋಚಿಸುವಾಗ ಕೀರ್ತನೆಗಾರನ ಹೃದಯವು ಉಜ್ಜೀವಿಸಗೊಳ್ಳುತ್ತದೆ. ಮತ್ತು ಆತನ ಸಹಾಯಕ್ಕಾಗಿ ದೇವರನ್ನು ಪ್ರಾರ್ಥಿಸುತ್ತಾನೆ. ದೇವರ ಮಹಾಕಾರ್ಯವು ಈ ಹಿಂದೆ ನಿಮ್ಮ ಪ್ರಾರ್ಥನಾ ಜೀವಿತದಲ್ಲಿ ನಿಮ್ಮನ್ನು ಹೇಗೆ ಉತ್ತೇಜಿಸಿತು ಎಂಬುದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ. ಆತನು ಯಾರಾಗಿದ್ದಾನೆ ಎಂಬುದಕ್ಕಾಗಿ ಮತ್ತು ಈ ಹಿಂದೆ ಆತನ ರಕ್ಷಣಾ ಕಾರ್ಯಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಾ ಸ್ವಲ್ಪ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

2. ಕೀರ್ತನೆಗಾರನು ದೇವರಿಗಾಗಿನ ತನ್ನ ಬಯಕೆಯನ್ನು ಈ ಉಪಮೆಯೊಂದಿಗೆ ವ್ಯಕ್ತಪಡಿಸುತ್ತಾನೆ. "ಒಣನೆಲವು ನೀರಿಗಾಗಿ ಹೇಗೋ ಹಾಗೆಯೇ ನನ್ನ ಆತ್ಮವು ನಿನಗಾಗಿ ತವಕಪಡುತ್ತದೆ". ದೇವರ ಪ್ರಸನ್ನತೆ ಮತ್ತು ಮಾರ್ಗದರ್ಶನಕ್ಕಾಗಿ ಈ ರೀತಿಯ ಬಲವಾದ ಬಯಕೆಯನ್ನು ನೀವು ಹಂಚಿಕೊಳ್ಳುವಿರಾ? ದೇವರಿಗಾಗಿನ ನಿಮ್ಮ ತವಕವನ್ನು ವ್ಯಕ್ತಪಡಿಸಲು ನೀವು ಯಾವ ರೀತಿಯ ಹೇಳಿಕೆಗಳನ್ನು ಉಪಯೋಗಿಸುವಿರಿ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ. ಕೆಲವು ಸೂಕ್ತ ಉಪಮೆಗಳನ್ನು ಪಟ್ಟಿಮಾಡಿರಿ.

3. ದಾವೀದನು 8–12ನೇ ವಚನಗಳಲ್ಲಿ ತನ್ನ ಪ್ರಾರ್ಥನಾ ಮನವಿಗಳನ್ನು ಪಟ್ಟಿಮಾಡುತ್ತಾನೆ. ಅಲ್ಲದೇ ಆತನು ದೇವರು ಪ್ರಾರ್ಥನೆಯನ್ನು ಲಾಲಿಸುತ್ತಾನೆ ಮತ್ತು ತನಗೆ ಸದುತ್ತರವನ್ನು ಕೊಡುತ್ತಾನೆ ಎನ್ನುವುದಕ್ಕಾಗಿ ಯಾಕೆ ತಾನು ಭರವಸವುಳ್ಳವನಾಗಿದ್ದಾನೆ ಎಂಬುದಕ್ಕಾಗಿ ಕಾರಣಗಳನ್ನು ಸಹ ಕೊಡುತ್ತಾನೆ. ಈ ಸಮಯದಲ್ಲಿ ನಿಮ್ಮ ಆತ್ಮೀಕ ಮತ್ತು ವೈಯಕ್ತಿಕ ಜೀವನದಲ್ಲಿನ ಪ್ರಮುಖ ಪ್ರಾರ್ಥನಾ ಮನವಿಗಳು ಯಾವುವು? ಯಾಕೆ ನೀವು ದೇವರು ನಿಮ್ಮ ಪ್ರಾರ್ಥನೆ ಕೇಳುತ್ತಾನೆ ಮತ್ತು ಪ್ರಾರ್ಥನೆಗೆ ಉತ್ತರಿಸುತ್ತಾನೆ ಎಂಬುದರ ಬಗ್ಗೆ ಭರವಸವುಳ್ಳವರಾಗಿರುವಿರಿ? ನಿಮ್ಮ ಗಂಪಿನಲ್ಲಿ ಹಂಚಿಕೊಳ್ಳಿರಿ.

ಅಸೈನ್‌ಮೆಂಟ್: ಕೀರ್ತನೆ 143

ಕೀರ್ತನೆ 143 ಮತ್ತು ಈ ಅಧ್ಯಯನವನ್ನು ಆಧರಿಸಿ ಸತ್ಯವೇದ ಅಧ್ಯಯನವನ್ನು (ಅಥವಾ ಭಕ್ತಿಗೀತೆಯನ್ನು) ಸಿದ್ಧಪಡಿಸಿ.

ಕೀರ್ತನೆ 145

ಪೀಠಿಕೆ ಮತ್ತು ಟಿಪ್ಪಣಿಗಳು

ಕೀರ್ತನೆ 145 ದಾವೀದನಿಂದ ಬರೆಯಲ್ಪಟ್ಟಿದೆ. ಇದೊಂದು ದೇವರಿಗೆ ಮಾಡುವ ಸ್ತುತಿಗೀತೆಯಾಗಿದ್ದು, ದಾವೀದನ ಸ್ವಂತ ಅನುಭವಗಳ ಮೇಲೆ ಆಧಾರಿತಗೊಂಡಿದೆ. ಭೂಲೋಕದಲ್ಲಿನ ಒಬ್ಬ ಪ್ರಸಿದ್ಧ ಅರಸನಾದ ದಾವೀದನು, ಸೃಷ್ಟಿಕರ್ತನೂ, ಸ್ಥಿರಪಡಿಸುವವನೂ ಮತ್ತು ಇಡೀ ಭೂಮಂಡಲವನ್ನು ಆಳುವವನೂ, ತನಗಿಂತಲೂ ಪ್ರಸಿದ್ಧ ಅರಸನಾಗಿರುವ (ವಚನ 1) ದೇವರನ್ನು ಸ್ತುತಿಸಿ ಕೊಂಡಾಡುತ್ತಾನೆ. ದೇವರ ಶಾಶ್ವತವಾದ ರಾಜ್ಯವು ಮಹಿಮೆ ಮತ್ತು ಪ್ರಭಾವದಿಂದ ತುಂಬಿಕೊಂಡಿದೆ (ವಚನ 11–13).

ಕೀರ್ತನೆ 145 ಒಗಟು ರೂಪದ್ದಾಗಿದೆ. ಹೇಗೆಂದರೆ ಪ್ರತೀ ವಚನದ ಮೊದಲ ಅಕ್ಷರವು ಇಬ್ರಿಯ ಭಾಷೆಯ ವರ್ಣಮಾಲೆಯನ್ನು ಪಾಲಿಸುತ್ತದೆ. ಇಬ್ರಿಯ ವರ್ಣಮಾಲೆಯಲ್ಲಿ 22 ಅಕ್ಷರಗಳಿವೆ, ಹಾಗಾಗಿ ಪ್ರತಿ ಅಕ್ಷರಕ್ಕೆ ಒಂದರಂತೆ 22 ವಚನಗಳನ್ನು ನಾವು ಕಂಡುಕೊಳ್ಳಬೇಕಿದೆ. ಆದರೆ ನಮ್ಮ ಕನ್ನಡದ ಭಾಷಾಂತರಗಳಲ್ಲಿ ಕೇವಲ 21 ವಚನಗಳಿವೆ. ಈ ರಹಸ್ಯಕ್ಕೆ ಪರಿಹಾರವೇನೆಂದರೆ ಪ್ರಾರಂಭದಲ್ಲೇ ಒಂದು ವಚನ ಕಾಣೆಯಾಗಿದೆ. ಹಾಗಾಗಿ ಯೆಹೂದಿ ಪಂಡಿತರುಗಳು ಇಬ್ರಿಯ ಸತ್ಯವೇದವನ್ನು ಜೋಡಿಸುವಾಗ ಸುರುಳಿಗಳಲ್ಲಿ ಇದು ಸೇರ್ಪಡೆಯಾಗಿಲ್ಲ. ಆದರೆ ಈ ವಚನವು ಕಾಣೆಯಾಗಿದೆಯೆಂದು ಸತ್ಯವೇದ ಪಂಡಿತರಿಗೆ ಗೊತ್ತು. ಕೀರ್ತನೆಗಳನ್ನು ಇತರೆ ಭಾಷೆಗಳಿಗೆ ಭಾಷಾಂತರಿಸುವಾಗ ಅತೀ ಪ್ರಾರಂಭಿಕ ಆವೃತ್ತಿಗಳಲ್ಲಿ ಇದನ್ನು ಸೇರಿಸಲಾಗಿದೆ. ಅಲ್ಲದೆ ಈ ಕೀರ್ತನೆಯು ಸ್ಪಷ್ಟವಾಗಿ ಒಗಟುರೂಪದ್ದಾಗಿದೆ. ಹಾಗೆಯೇ ದಾವೀದನು ಮಧ್ಯದಲ್ಲಿ ಒಂದು ಅಕ್ಷರವನ್ನು ಬಿಡದೆ ಇಬ್ರಿಯ ವರ್ಣಮಾಲೆಯ 22 ಅಕ್ಷರಗಳನ್ನೂ ಸಹ ಉಪಯೋಗಿಸಿರಬಹುದು. ಅಂತಿಮವಾಗಿ ಕಾಣೆಯಾದ ವಚನವನ್ನು 1940 ರಲ್ಲಿ ಮೃತ ಸಮುದ್ರದ ಸುರುಳಿಗಳಲ್ಲಿ ಕಂಡುಹಿಡಿಯಲಾಗಿದೆ.

ಈ ಕಾಣೆಯಾದ ವಚನವನ್ನು ನಿಮ್ಮ **ಸತ್ಯವೇದವು** ದಲ್ಲಿ ನೀವು ಬರೆಯಲು ಬಯಸಿದರೆ (ಹೆಚ್ಚಿನ ಭಾಷಾಂತರಗಳಲ್ಲಿ 13ಬಿ ಎಂದಿದೆ, **ಪವಿತ್ರ ಬೈಬಲ್** ನಲ್ಲಿ ವಚನ 14):

ಯೆಹೋವನು ತನ್ನ ವಾಗ್ದಾನಕ್ಕೆ ನಂಬಿಗಸ್ತನೂ

ಮತ್ತು ಆತನು ಮಾಡಿದ ಎಲ್ಲವುಗಳನ್ನು ಪ್ರೀತಿಸುವವನೂ ಆಗಿದ್ದಾನೆ.

145 'ೇ ಕೀರ್ತನೆಯಲ್ಲಿ ದಾವೀದನು ಆತ್ಮೀಕ ದೃಷ್ಟಿಯಿಂದ ದೇವರು ಮತ್ತು ಆತನ ರಾಜ್ಯವನ್ನು ವರ್ಣಿಸುತ್ತಾನೆ. ಆತನು ಅವನನ್ನು ಹುರುಳಿಲ್ಲಿದ ಮತ್ತು ಸಹಜವಾಗಿ ಕಾಣುವವುಗಳಿಗಿಂತ ಮಿಗಿಲಾಗಿ ನಂಬಿಕೆಯ ಕಣ್ಣಿನಿಂದ ನೋಡುತ್ತಾನೆ.

ದಾವೀದನು ಇಸ್ರಾಯೇಲಿನ ಸಿಂಹಾಸನವನ್ನು ಏರುವ ಹಾದಿಯಲ್ಲಿ ಅನೇಕ ಹೋರಾಟಗಳನ್ನು ಎದರಿಸಿದ ವ್ಯಕ್ತಿಯಾಗಿದ್ದನು. ಆತನು ರಕ್ತಪಾತ, ಯುದ್ಧ, ಮೋಸ, ನಿರಾಶೆ ಮತ್ತು ಸಾವು ಇವೆಲ್ಲವನ್ನು ತಿಳಿದವನಾಗಿದ್ದನು. ಆತನು ವೈರಿಗಳ ಕೈಯಿಂದ ಹಿಂಸಿಸಲ್ಪಟ್ಟನು. ಜೀವನವು ಕಷ್ಟಕರವಾಗಿದ್ದರೂ ಆತನು ಬಲ್ಲವನಾಗಿದ್ದನು. ತಾನು ಜೀವಿಸುವ ಜಗತ್ತು ಪಾಪದ ಪ್ರಭಾವಕ್ಕೆ ಒಳಗಾಗಿದೆಯೆಂದು ಆತನು ಅರಿತುಕೊಂಡನು. ಪಾಪ, ಬಾಧೆ, ಮರಣಗಳೆಲ್ಲವೂ ಸಹ ಮನುಷ್ಯನ ಅಸ್ತಿತ್ವದ ಭಾಗಗಳಾಗಿವೆ ಎಂದು ಆತನು ಬಲ್ಲವನಾಗಿದ್ದನು.

ಆದರೆ ಕೀರ್ತನೆ 145 ರಲ್ಲಿ ದಾವೀದನು ಇವೆಲ್ಲವನ್ನು ಮೀರಿ ನೋಡುತ್ತಾನೆ. ನಿಜವಾಗಲೂ ದೇವರು ಯಾರಾಗಿದ್ದಾನೆಂದು ಆತನು ನೋಡುತ್ತಾನೆ. ದೇವರು ಸೃಷ್ಟಿಕರ್ತನು, ಪಾಲಿಸುವವನು, ವಿಮೋಚಕನು, ನ್ಯಾಯಾಧಿಪತಿಯು ಮತ್ತು ರಾಜನೂ ಆಗಿದ್ದಾನೆ. ದಾವೀದನ ಅರಸನು, ದಯೆಯೂ ಕನಿಕರವೂ ಉಳ್ಳವನು, ದೀರ್ಘಶಾಂತನೂ, ಪ್ರೀತಿಪೂರ್ಣನೂ ತನ್ನ ಸೃಷ್ಟಿಯೊಂದಿಗಿನ ಒಡಂಬಡಿಕೆಗೆ ಮತ್ತು ತನ್ನ ಒಡಂಬಡಿಕೆಯ ಜನರಿಗೆ ನಂಬಿಗಸ್ತನೂ ಆಗಿದ್ದಾನೆ. ಈ ಕೀರ್ತನೆಯನ್ನು ದೇವರ ಕುರಿತಾಗಿನ ದಾವೀದನ ತಿಳುವಳಿಕೆ ಎಂಬುದಾಗಿ ನಾವು ಓದಬಹುದು.

ನಿನ್ನ ನಾಮವನ್ನು (ವಚನ 1): ದೇವರು ತನ್ನ ನಾಮದಿಂದಲೇ ಪ್ರತಿನಿಧಿಸಲ್ಪಟ್ಟಿದ್ದಾನೆ. ಇದು ಆತನು ಯಾರಾಗಿದ್ದಾನೆ ಮತ್ತು ಆತನು ಏನನ್ನು ಮಾಡಿದ್ದಾನೆ ಎಂಬುದನ್ನು ಸೂಚಿಸುತ್ತದೆ.

ನಿನ್ನ ಕೃತ್ಯಗಳನ್ನು (ವಚನ 4): ಇದು ದೇವರ ಮೂರು ಕ್ಷೇತ್ರಗಳಲ್ಲಿನ ಸೃಷ್ಟಿಯಲ್ಲಿ, ರಕ್ಷಣೆಯಲ್ಲಿ, ವಿಮೋಚನೆಯಲ್ಲಿನ ಕಾರ್ಯಗಳನ್ನು ಸೂಚಿಸುತ್ತದೆ.

ಯಥಾರ್ಥವಾಗಿ (ವಚನ 18): ನೀತಿಯ ಹೃದಯದಿಂದ.

ಭಯಭಕ್ತಿಯುಳ್ಳವರು (ವಚನ 19): ದೇವರನ್ನು ಪ್ರೀತಿಸಿ, ಆತನಿಗೆ ವಿಧೇಯರಾಗುವ ದೇವಜನರು.

ದುಷ್ಟರು (ವಚನ 20): ದೇರಿಗೆ ಭಯಪಡದವರು.

ಪ್ರಶ್ನೆಗಳು

1. ಈ ಕೀರ್ತನೆಯನ್ನು ರಚಿಸುವ ವಿಭಿನ್ನ ವಿಧಾನಗಳು ಇಲ್ಲಿವೆ:

   ಅ. ಒಂದು ವಿಧಾನವು ಯಾರು ಮಾತನಾಡುತ್ತಿದ್ದಾರೆ ಎಂಬುದರ ಆಧಾರದ ಮೇಲೆ. ನೀವು ಇದನ್ನು ಹೇಗೆ ಮಾಡುತ್ತೀರಿ?

   ಆ. ಇನ್ನೊಂದು ವಿಧಾನವು ವಿಷಯವಸ್ತುವಿನ ಆಧಾರದ ಮೇಲೆ. ನೀವು ಇದನ್ನು ಹೇಗೆ ಮಾಡುತ್ತೀರಿ?

2. ಕೀರ್ತನೆಯ ಒಂದು ಆಸಕ್ತಿದಾಯಕ ಲಕ್ಷಣವೆಂದರೆ ಅದು **"ಸ್ತುತಿಸುವುದು"** ಎಂಬುದನ್ನು ವಿಭಿನ್ನ ಸಮಾನಾರ್ಥಕ ಪದಗಳನ್ನು ಬಳಸುತ್ತದೆ. ಈ ಸಮಾನಾರ್ಥಕ ಪದಗಳ ಪಟ್ಟಿಯನ್ನು ಮಾಡಿ. ದಾವೀದನು ಏಕೆ ಅನೇಕ ಸಮಾನಾರ್ಥಕ ಪದಗಳನ್ನು ಬಳಸಿದ್ದಾನೆಂದು ನೀವು ಭಾವಿಸುತ್ತೀರಿ?

3. ಈ ಸ್ತುತಿಯ ದೀರ್ಘಕಾಲೀನ ಸ್ವರೂಪವನ್ನು ವಿವರಿಸಲು ದಾವೀದನು ವಿಭಿನ್ನ ಅಭಿವ್ಯಕ್ತಿಗಳನ್ನು ಬಳಸಿದ್ದಾನೆ. ನೀವು ಯಾವ ಅಭಿವ್ಯಕ್ತಿಗಳನ್ನು ಕಂಡುಕೊಂಡಿದ್ದೀರಿ?

4. 1–7 ನೇ ವಚನಗಳನ್ನು ಮತ್ತೊಮ್ಮೆ ನೋಡಿ: ದೇವರನ್ನು ಏಕೆ ಸ್ತುತಿಸಬೇಕು ಎಂಬುದಕ್ಕೆ ಕಾರಣಗಳ (ಅಥವಾ ಗುಣಗಳ) ಪಟ್ಟಿ ಮಾಡಿರಿ. ಮತ್ತು ಅವುಗಳ ಅರ್ಥವೇನೆಂದು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.

5. ಹಿಂದಿನ ತಲೆಮಾರುಗಳ ಸ್ತುತಿಯು ದಾವೀದನನ್ನು ದೇವರಿಗೆ ಮೂರು ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸಲು ಪ್ರೇರೇಪಿಸಿತು (ವಚನ 5–7, 21). ಹೇಗೆ?

6. ಮತ್ತೊಮ್ಮೆ 8–13 ನೇ ವಚನಗಳನ್ನು (ಮೊದಲಾರ್ಧ) ನೋಡಿ: ರಾಜ ದೇವರು ಮತ್ತು ಆತನ ರಾಜ್ಯದ ಗುಣಲಕ್ಷಣಗಳ ಬಗ್ಗೆ ನಾವು ಏನು ಕಲಿಯುತ್ತೇವೆ?

7. ಮತ್ತೊಮ್ಮೆ ವಚನ 13(ಎರಡನೇ ಭಾಗದಿಂದ)–20 ವರೆಗೆ ನೋಡಿರಿ. ಅಲ್ಲಿ ಉಲ್ಲೇಖಿಸಲಾಗಿರುವ ಜೀವಿಗಳು ಮತ್ತು ಜನರು ಯಾರು? ದೇವರು ಅವರ ಕಡೆಗೆ ಹೇಗೆ ವರ್ತಿಸುತ್ತಾನೆ? ಪಟ್ಟಿಯನ್ನು ಮಾಡಿ (ಅಥವಾ ಎರಡು ಕಾಲಮ್‌ಗಳನ್ನು ಹೊಂದಿರುವ ಚಾರ್ಟ್, ನಿಮಗೆ ಸುಮಾರು ಹತ್ತು ಸಾಲುಗಳು ಬೇಕಾಗಬಹುದು).

8. ದಾವೀದನು ತನ್ನ ಕೀರ್ತನೆ (ವಚನ 21) ಮುಗಿಸುವಾಗ ದೇವರ ಗುಣಲಕ್ಷಣಗಳು ಮತ್ತು ಕಾರ್ಯಗಳನ್ನು ಅವರು ಹೇಗೆ ಸ್ತುತಿಸುತ್ತಾರೆ?

ಕೀರ್ತನೆ 145 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ನೀವು 6 ನೇ ಪ್ರಶ್ನೆಗೆ (ವಚನ 8–13 ಮೊದಲ ಭಾಗ) ನೀಡಿದ ಉತ್ತರವನ್ನು ನೋಡಿರಿ: ದೇವರು ಮತ್ತು ಆತನ ರಾಜ್ಯದ ಈ ಗುಣಲಕ್ಷಣಗಳು ನಿಮ್ಮ ಸ್ವಂತ ಜೀವನ ಮತ್ತು ಸನ್ನಿವೇಶಗಳಲ್ಲಿ ಹೇಗೆ ವ್ಯಕ್ತವಾಗುತ್ತವೆ ಎಂಬುದಕ್ಕೆ ಉದಾಹರಣೆಗಳನ್ನು ನೀಡಿರಿ.

2. ನೀವು 7 ನೇ ಪ್ರಶ್ನೆಗೆ (ವಚನ 13 ರ ಎರಡನೇ ಭಾಗದಿಂದ 20 ರವರೆಗೆ) ನೀಡಿದ ಉತ್ತರವನ್ನು ನೋಡಿರಿ:

   ಅ. ಅಲ್ಲಿ ಉಲ್ಲೇಖಿಸಲಾಗಿರುವ ಜೀವಿಗಳು ಮತ್ತು ಜನರ ಕಡೆಗೆ ದೇವರು ಹೇಗೆ ವರ್ತಿಸುತ್ತಾನೆ ಎಂಬುದಕ್ಕೆ ದೈನಂದಿನ ಜೀವನದಲ್ಲಿ ನೀವು ಅನುಭವಿಸಿದ ಕೆಲವು ಉದಾಹರಣೆಗಳನ್ನು ನೀಡಿ.

   ಆ. ರಾಜನಾಗಿ ದೇವರ ಕಾರ್ಯಸೂಚಿಯ ಬಗ್ಗೆ ನೀವು ಏನು ಕಲಿಯುತ್ತೀರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿಕೊಂಡು ನಿಮ್ಮ ತೀರ್ಮಾನಗಳನ್ನು ಸಂಕ್ಷೇಪಿಸಿರಿ.

3. ಈ ಕೀರ್ತನೆಯಲ್ಲಿ ದಾವೀದನು ರಾಜ ದೇವರು ಮತ್ತು ಆತನ ರಾಜ್ಯವನ್ನು ಹೇಗೆ ವಿವರಿಸುತ್ತಾನೆ ಎಂಬುದನ್ನು ಕೆಲವು ವಾಕ್ಯಗಳಲ್ಲಿ ಸಂಕ್ಷೇಪಿಸಿರಿ. ನಿಮ್ಮ ಸ್ವಂತ ಪದಗಳನ್ನು ಬಳಸಿ.

4. ಈ ಅಧ್ಯಯನದ ಮೂಲಕ ನೀವು ಕಲಿತ ಪ್ರಮುಖ ಪಾಠವೇನು ಎಂಬುದನ್ನು ನಿಮ್ಮ ಗುಂಪಿನಲ್ಲಿ ವಿವರಿಸಿ ಮತ್ತು ನಿಮ್ಮ ಗುಂಪುಗಳಲ್ಲಿ ಹಂಚಿಕೊಳ್ಳಿ.

   (ಯಾವುದೇ ಟಿಪ್ಪಣಿಗಳನ್ನು ಒದಗಿಸಲಾಗಿಲ್ಲ)

ಕೀರ್ತನೆ 145 ವಿಮರ್ಶಿಸಿರಿ ಮತ್ತು ಪ್ರಾರ್ಥಿಸಿರಿ

1. ದಾವೀದನಿಂದ ಕಲಿಯಲು ನಮಗೆ ಬೇಕಾದಷ್ಟಿದೆ. ನಮ್ಮ ದೈನಂದಿನ ಜೀವನದ ಸಮಸ್ಯೆಗಳಿಂದ ನಿಜವಾಗಲೂ ದೇವರು ಯಾರಾಗಿದ್ದಾನೆ ಎಂಬುದನ್ನು ನೋಡುವುದಕ್ಕೆ ನಮ್ಮ ಕಣ್ಣುಗಳನ್ನು ಮೇಲೆತ್ತಬೇಕಾಗಿದೆ. ದೇವರು ನಮ್ಮ ಉನ್ನತನಾದ ರಾಜನಾಗಿದ್ದಾನೆ ಮತ್ತು ಆತನು ತನ್ನ ಸಾಮ್ರಾಜ್ಯವನ್ನು ಆಳುತ್ತಾನೆ. ಇದನ್ನು ನಾವು ಅರಿತುಕೊಳ್ಳುವಾಗ ನಮ್ಮ ಬಾಯಿ ಮತ್ತು ಹೃದಯವು ಸ್ತೋತ್ರದಿಂದ ತುಂಬಿಕೊಳ್ಳುತ್ತದೆ. ಆಗ ನಾವು ನಮ್ಮ ಜೀವಿತವನ್ನು ಆತನಿಗೆ ಮತ್ತು ಆತನ ರಾಜ್ಯದ ನಿಯಮಗಳಿಗೆ ಯೋಗ್ಯವಾಗಿ ಬದುಕುವಂತೆ ಉತ್ತೇಜಿತರಾಗುತ್ತೇವೆ. ಈ ರೀತಿ ಮಾಡುವಾಗ ನಾವು ನ್ಯಾಯತೀರಿಸಲು ಮತ್ತು ದುಷ್ಟರನ್ನು ನಾಶಮಾಡಲು ಮತ್ತು ತನ್ನಲ್ಲಿ ಭಯಭಕ್ತಿಯುಳ್ಳವರನ್ನು ರಕ್ಷಿಸಲು ನಮ್ಮ ರಾಜನು ಬರುವ ದಿನವನ್ನು ಭರವಸೆಯಿಂದ ಮುನ್ನೋಡಬಹುದು.
2. ಭಾರತವು ದೇವರ ಕಾರ್ಯಸೂಚಿಯನ್ನು ಹೆಚ್ಚು ಸಂಪೂರ್ಣವಾಗಿ ಹಂಚಿಕೊಂಡರೆ ಅದು ಹೇಗಿರುತ್ತದೆ. ನಮ್ಮ ದೇಶವು ವಿಭಿನ್ನವಾಗಿರುವ ಒಂದು ಅಥವಾ ಎರಡು ಕ್ಷೇತ್ರಗಳನ್ನು ವಿವರಿಸಿ. ನಿಮ್ಮ ಆಲೋಚನೆಗಳನ್ನು ಗಮನಿಸಿ ಅಥವಾ ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿ. ಈ ಪ್ರದೇಶಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿ.
3. ನಿಮ್ಮ ನೆರೆಹೊರೆಯಲ್ಲಿ ದೇವರು ಮತ್ತು ಆತನ ರಾಜ್ಯದ ಗುಣಲಕ್ಷಣಗಳನ್ನು ಹೆಚ್ಚು ಸ್ಪಷ್ಟವಾಗಿ ಪ್ರಕಟಿಸಲು ನಿಮ್ಮ ಸಭೆಯ ಅನ್ಯೋನ್ಯತೆಯು ಯಾವ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬಹುದು? ನಿಮ್ಮ ಅವಲೋಕನಗಳನ್ನು ಗಮನಿಸಿ. ಈ ವಿಷಯಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

ಅಸೈನ್‌ಮೆಂಟ್: ಕೀರ್ತನೆ 145

ಕೀರ್ತನೆ 145 ಮತ್ತು ಈ ಅಧ್ಯಯನವನ್ನು ಆಧರಿಸಿ ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನ (ಅಥವಾ ನಿಮ್ಮ ಸಭೆಗಾಗಿ ಒಂದು ಸಂದೇಶವನ್ನು) ಸಿದ್ಧಪಡಿಸಿರಿ.

ಪರೀಕ್ಷಾ ಪತ್ರಿಕೆ: ಕೀರ್ತನೆಗಳು

ಜೋಡಿಯಾಗಿ ಮತ್ತು ಚಿಕ್ಕ ಗುಂಪುಗಳಾಗಿ ಕಾರ್ಯಮಾಡಿರಿ ಆದರೆ ಪ್ರತಿಯೊಬ್ಬರೂ ಸಹ ಪ್ರತ್ಯೇಕ ಪತ್ರಕೆ ಸಿದ್ಧಪಡಿಸಬೇಕು. ಈ ಪುಸ್ತಕದಲ್ಲಿನ ಮಾಹಿತಿ ಮತ್ತು ನಿಮ್ಮ ನೋಟ್ಸ್‌ಗಳನ್ನು ನೀವು ಉಪಯೋಗಿಸಬಹುದು. ಆದರೆ ನಿಮ್ಮ ನೋಟ್ಸ್‌ನಿಂದ ವಿಷಯಗಳನ್ನು ಇದ್ದಂತೆಯೇ ನಕಲು ಮಾಡಬಾರದು. ನಿಮ್ಮ ಪದಗಳನ್ನು ಬಳಸಿರಿ.

1. ಕೀರ್ತನೆಗಳ ಪುಸ್ತಕಕ್ಕೆ ಒಂದು ಸಂಕ್ಷಿಪ್ತವಾದ ಪೀಠಿಕೆಯನ್ನು ಬರೆಯಿರಿ. ಇದು ಗ್ರಂಥಕರ್ತರು, ಸಂಯೋಜನೆ ಮತ್ತು ರಚನೆ, ಇಬ್ರಿಯ ಪದ್ಯಸಾಹಿತ್ಯ, ಕೀರ್ತನೆಗಳ ವಿಧಗಳು ಮತ್ತು ದೈವಶಾಸ್ತ್ರ ಇವುಗಳ ಕುರಿತಾದ ಮಾಹಿತಿಗಳನ್ನು ಒಳಗೊಂಡಿರಬೇಕು.

2. ಈ ಕೋರ್ಸಿನಲ್ಲಿ ನೀವು ಕಲಿತ ಕೀರ್ತನೆಗಳಿಂದ 3 ಕೀರ್ತನೆಗಳನ್ನು (ಮೂರು ವಿಭಿನ್ನ ಬಗೆಯ ಕೀರ್ತನೆಗಳನ್ನು ಪ್ರತಿನಿಧಿಸುವ) ಆರಿಸಿಕೊಳ್ಳಿರಿ. ಪಠ್ಯಪುಸ್ತಕ ಅಥವಾ ನೋಟ್ಸ್ ಬಳಸದೇ ನಿಮ್ಮ ಗುಂಪಿನಲ್ಲಿ ಅದನ್ನು ನಿಮಗೇ ಬೋಧಿಸಿಕೊಳ್ಳಿರಿ. ಒಬ್ಬರಿಗೊಬ್ಬರು ಸಹಾಯಿಸಿರಿ. ಆಗ ಈ 3 ಕೀರ್ತನೆಗಳ ಅನೇಕ ಅಂಶಗಳನ್ನು ನೀವು ಪೂರ್ತಿಗೊಳಿಸಬಹುದು. ಮೌಖಿಕವಾಗಿ ಇದನ್ನು ಮಾಡಿರಿ. ಇದರ ಬಗ್ಗೆ ನೀವು ಏನೂ ಬರೆಯಬೇಕಾಗಿಲ್ಲ.

3. ಜ್ಞಾನದ ಕೀರ್ತನೆಗಳ ಕುರಿತಾಗಿ ಈ ಪಠ್ಯಪುಸ್ತಕ ಮತ್ತು ನಿಮ್ಮ ನೋಟ್ಸ್‌ನಲ್ಲಿ ಸಾಧ್ಯವಾದಷ್ಟು ಮಾಹಿತಿಗಳನ್ನು ಕಂಡುಹಿಡಿಯಿರಿ.

   ನಂತರ ಈ ಪ್ರಶ್ನೆಗಳನ್ನು ಚರ್ಚಿಸಿರಿ:

   ಅ. ಜ್ಞಾನದ ಕೀರ್ತನೆಗಳು ದಕ್ಷಿಣ ಭಾರತದ ಸಭೆಗಳು ಮತ್ತು ವಿಶ್ವಾಸಿಗಳ ನಡುವೆ ಬಹು ಜನಪ್ರಿಯವಾಗಿವೆಯೆಂದು ನೀವು ಯಾಕೆ ಯೋಚಿಸುವಿರಿ?

   ಆ. ಈ ಜನಪ್ರಿಯತೆಯ ಅಪಾಯಗಳೇನು?

   ಇ. ಜ್ಞಾನದ ಕೀರ್ತನೆಗಳನ್ನು ನೀವು ಎಂದಾದರೂ ತಪ್ಪಾಗಿ ಅರ್ಥೈಸಿಕೊಂಡಿರುವಿರಾ ಅಥವಾ ತಪ್ಪಾಗಿ ಉಪಯೋಗಿಸಿರುವಿರಾ? ಹೇಗೆ?

4. ಈ ಕೋರ್ಸಿನಲ್ಲಿ ನೀವು ಅಭ್ಯಾಸಿಸದೇ ಇರುವ ಎರಡು ಕೀರ್ತನೆಗಳನ್ನು ಆಯ್ದುಕೊಳ್ಳಿರಿ. ಅವು ವಿಭಿನ್ನ ಬಗೆಯ ಕೀರ್ತನೆಗಳಾಗಿರಬೇಕು. ಇವೆರಡೂ ಕೀರ್ತನೆಗಳ ಅಧ್ಯಯನ ಮಾಡಿರಿ. ನಿಮ್ಮ ಸಾಮಾನ್ಯ ಜ್ಞಾನ ಮತ್ತು ಈ ಕೋರ್ಸಿನಲ್ಲಿ ಕಲಿತ ಅನುಭವಗಳನ್ನು ಉಪಯೋಗಿಸಿರಿ. ಒಂದಕ್ಕಿಂತ ಹೆಚ್ಚು ಕನ್ನಡ ಭಾಷಾಂತರವನ್ನು ನೀವು ಬಳಸಿದರೆ ಇನ್ನೂ ಒಳ್ಳೆಯದು ನಿಮ್ಮ ಅಧ್ಯಯನವು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.

   ಅ. ರಚನೆ: ಕೀರ್ತನೆಯು ಹೇಗೆ ರಚನೆಗೊಳ್ಳಬೇಕು? ನಿಮ್ಮ ಸಲಹೆ ನಿಮ್ಮದೇ ಕಾರಣಗಳನ್ನು ಕೊಡಿರಿ.

   ಆ. ಮಾತನಾಡುತ್ತಿರುವವರು ಯಾರು? ಯಾರನ್ನು ಕುರಿತು ಹೇಳಲಾಗುತ್ತಿದೆ?

   ಇ. ಚಿತ್ರಣ (ರೂಪಾಲಂಕಾರಗಳು, ಉಪಮೇಯಗಳು, ಮಾನವೀಕರಣ, ವ್ಯಕ್ತೀಕರಣ) ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ ಮತ್ತು ಇತರೆ ಪದ್ಯರೂಪಿ ರಚನೆಗಳು.

   ಈ. ಭಾವ/ನಾದ/ಸ್ವರ

   ಉ. ಸಮಾನಾಂತರತೆಗಳಿಗೆ ಉದಾಹರಣೆ (ಸಮಾನಾಂತರ, ವಿರೋಧಾತ್ಮಕ ಮತ್ತು ಸಂಯೋಜಿತ)

   ಊ.ಕೀರ್ತನೆಯ ದೈವಶಾಸ್ತ್ರವೇನು? ಸಂದೇಶವೇನಾಗಿದೆ? ಇದರಿಂದ ನಾವು ಏನನ್ನು ಕಲಿಯಬಹುದು?

   ಋ. ಇದು ಯಾವ ರೀತಿಯ ಕೀರ್ತನೆಯಾಗಿದೆ? ಯಾಕೆ ನೀವು ಇದನ್ನು ಆ ಗುಂಪಿನಲ್ಲಿ ಇಡುತ್ತೀರಿ? ಒಟ್ಟಾಗಿ ನೀವು ಇವೆರಡೂ ಕೀರ್ತನೆಗಳ ಈ ಎಲ್ಲಾ ಕ್ಷೇತ್ರಗಳ ಬಗ್ಗೆ ಈ ಅಧ್ಯಯನ ಮಾಡಿದ ಮೇಲೆ ವೈಯಕ್ತಿಕವಾಗಿ ನೀವು ನಿಮ್ಮ ಮುಕ್ತಾಯಗಳನ್ನು ಸಾರಾಂಶವಾಗಿ ಬರೆಯಿರಿ. ಪ್ರತೀ ಕೀರ್ತನೆಗೆ ಒಂದೊಂದು ಸಾರಾಂಶ ಬರೆಯಿರಿ.

5. ಈ ಕೋರ್ಸಿನಲ್ಲಿ ಕೀರ್ತನೆಗಳ ಪುಸ್ತಕ ಅಧ್ಯಯನದಿಂದ ನೀವು ಏನನ್ನು ಕಲಿತುಕೊಂಡಿರಿ? ಕಲಿತ ಅಂಶಗಳನ್ನು ಪಟ್ಟಿ ಮಾಡಿರಿ.

6. ಈ ಕೋರ್ಸಿನಲ್ಲಿ ನೀವು ಅಧ್ಯಯನ ಮಾಡದ ಮತ್ತು ಈ ಕೋರ್ಸಿನಲ್ಲಿ ಸೇರಿಸಬೇಕೆಂದು ನಿಮಗೆ ಅನಿಸುವ ಯಾವುದಾದರೂ ಕೀರ್ತನೆಗಳು ಇವೆಯಾ? ಸೇರಿಸಲು ಕಾರಣಗಳನ್ನು ಕೊಡಿರಿ.

ಯೋಬ ಉತ್ತರಗಳು

ಯೋಬ ಉತ್ತರಗಳು 1: ಒಳ್ಳೆಯ ಮತ್ತು ಕೆಟ್ಟ ಸಮಯ

ಪ್ರಶ್ನೆಗಳಿಗೆ ಉತ್ತರಗಳು

1. ಯೋಬನ ಭೌತಿಕ ಪರಿಸ್ಥಿತಿಗಳು ಈ ಪುಸ್ತಕದ ಪ್ರಾರಂಭದಲ್ಲಿ ಹೀಗಿದ್ದವು (1:1–5):

   ಅ. ಆತನಿಗೆ ಏಳು ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳನ್ನು ಒಳಗೊಂಡಿರುವ ಒಂದು ವಿಶಾಲವಾದ ಕುಟುಂಬವಿತ್ತು.

   ಆ. ಆತನು ಬಹು ಸಂಪತ್ತುಳ್ಳವನಾಗಿದ್ದನು.

   ಇ. ಆತನಿಗೆ ಸಮಾಜದಲ್ಲಿ ಉನ್ನತವಾದ ಸ್ಥಾನಮಾನವಿತ್ತು.

2. ಪುಸ್ತಕದ ಪ್ರಾರಂಭದಲ್ಲಿನ ಯೋಬನ ಗುಣಸ್ವಭಾವ (1:1–5):

   ಅ. ಆತನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ, ಕೆಟ್ಟದ್ದನ್ನು ನಿರಾಕರಿಸುತ್ತಾ, ನಿರ್ದೋಷಿಯೂ, ಯಥಾರ್ಥಚಿತ್ತನೂ ಆಗಿದ್ದನು.

   ಆ. ಆತನು ತನ್ನ ಮಕ್ಕಳು ಮತ್ತು ಅವರ ಆತ್ಮೀಕ ಸ್ಥಿತಿಯ ಬಗ್ಗೆ ಬಹು ಕಾಳಜಿಯುಳ್ಳವನಾಗಿದ್ದನು.

3. ಜ್ಞಾನೋಕ್ತಿ 3:1–4 ಮತ್ತು ಕೀರ್ತನೆ 1:1–3 ಮತ್ತು 6 ರ ಪ್ರಕಾರ ಯೋಬನ ಸಂಪತ್ತು ಮತ್ತು ನಿರ್ದೋಷತ್ವದ ನಡುವೆ ಒಂದು ನೇರವಾದ ಸಂಪರ್ಕವಿದೆ. ದೇವರಿಗೆ ಭಯಪಡುವ ಮತ್ತು ನೀತಿವಂತ ಮನುಷ್ಯನು ಸಂಪತ್ತುಳ್ಳವನಾಗುವನು ಮತ್ತು ದೇವರ ಮತ್ತು ಮನುಷ್ಯರ ದಯೆಯನ್ನು ಹೊಂದುವನು.

4. –

5. ಯೋಬನಿಗೆ ವಿರುದ್ಧವಾಗಿ ಸೈತಾನನ ದೂರು (1:6–22):

   ದೇವರು ಯೋಬನನ್ನು ಕಾಪಾಡುತ್ತಾ, ಆಶೀರ್ವದಿಸುತ್ತಾ ಬಂದ ನಿಮಿತ್ತವೇ ಯೋಬನು ನಿರ್ದೋಷಿಯೂ, ಯಥಾರ್ಥನೂ ಮತ್ತು ದೇವರಲ್ಲಿ ಭಯಭಕ್ತಿಯುಳ್ಳವನಾಗಿದ್ದಾನೆ. ಆದರೆ ದೇವರು ಆತನಿಂದ ಎಲ್ಲಾ ಆಶೀರ್ವಾದಗಳನ್ನು ತೆಗೆದುಬಿಟ್ಟರೆ ಖಂಡಿತವಾಗಿ ಆತನು ದೇವರನ್ನು ದೂಷಿಸೇ ದೂಷಿಸುವನು ಎಂಬುದು.

6. ಸೈತಾನನ ದೂರಿಗೆ ದೇವರ ಪ್ರತಿಕ್ರಿಯೆ (1:6–22):

   ದೇವರು ಎಲ್ಲಾ ವಿಧದಲ್ಲಿ ಯೋಬನನ್ನು ಬಾಧಿಸಲು ಸೈತಾನನಿಗೆ ಅನುಮತಿಸುತ್ತಾನೆ.

7. ಈ ವಾಕ್ಯಭಾಗದಲ್ಲಿ (1:6–22): ಯೋಬನ ಜೀವನ ಮತ್ತು ಆತನ ಎಲ್ಲಾ ಪರಿಸ್ಥಿತಿಗಳ ಮೇಲೆ ದೇವರು ಸಾರ್ವಭೌಮನಾಗಿದ್ದಾನೆ, ಆದರೆ ಆತನನ್ನು ಬಾಧಿಸಲು ಸೈತಾನನಿಗೆ ಅನುಮತಿಸುತ್ತಾನೆ.

8. ಯೋಬನನ್ನು ಬಾಧಿಸಲು ಆತನು ನಾಲ್ಕು ಘಟನೆಗಳನ್ನು ತಂದುಹಾಕುತ್ತಾನೆ (1:6–22):

   ಅ. ವೈರಿಗಳ ಆಕ್ರಮಣದಿಂದ ಯೋಬನು ಎತ್ತು ಮತ್ತು ಕತ್ತೆಗಳನ್ನು ಕಳೆದುಕೊಳ್ಳುತ್ತಾನೆ ಮತ್ತು ಆಳುಗಳನ್ನು ಕೊಂದು ಹಾಕುತ್ತಾರೆ.

   ಆ. ಆಕಾಶದಿಂದ ಬೆಂಕಿ ಬಿದ್ದು ಕುರಿಗಳನ್ನು ಮತ್ತು ಕುರಿಕಾಯುವವರನ್ನು ಸಂಹರಿಸುವುದು.

   ಇ. ವೈರಿಗಳು ಮೂರು ಗುಂಪುಗಳಾಗಿ ಬಂದು ಯೋಬನ ಒಂಟೆಗಳ ಮೇಲೆ ಬಿದ್ದು ಹೊಡೆದುಕೊಂಡು ಹೋಗುವರು ಮತ್ತು ಅದನ್ನು ಕಾಯುವ ಆಳುಗಳನ್ನು ಕೊಲ್ಲುವರು.

   ಈ. ಬಿರುಗಾಳಿ ಬೀಸಿ ಯೋಬನ ಎಲ್ಲಾ ಮಕ್ಕಳನ್ನು ಸಂಹರಿಸುವುದು.

9. ಯೋಬನ ಪ್ರತಿಕ್ರಿಯೆ (1:16–22): ಯೋಬನು ಗೋಳಾಡುತ್ತಾ (ಅಂಗಿಯನ್ನು ಹರಿದುಕೊಂಡು, ತಲೆಯನ್ನು ಬೋಳಿಸಿಕೊಂಡವನಾಗಿ) ನೆಲದಲ್ಲಿ ಅಡ್ಡಬಿದ್ದು ದೇವರಿಗೆ ನಮಸ್ಕರಿಸುತ್ತಾನೆ. ಆದರೆ ತನಗಾದ ಪರಿಸ್ಥಿತಿಗೆ ದೇವರನ್ನು ದೂಷಿಸುವುದಿಲ್ಲ.

10. –

11. ದೇವರು, ಸೈತಾನನು ಮತ್ತು ಯೋಬನ ಬಗ್ಗೆ ಅಧ್ಯಾಯ 2 ರಲ್ಲಿ ನಾವು ಕಂಡುಹಿಡಿಯಬಹುದಾದ ಹೆಚ್ಚುವರಿ ಸಂಗತಿಗಳು ಇಂತಿವೆ:

    ಅ. ದೇವರು ಸೈತಾನನಿಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸ್ವತಃ ಯೋಬನನ್ನೇ ಬಾಧಿಸಲು ಅನುಮತಿಸುತ್ತಾನೆ.

    ಆ. ಈ ಎಲ್ಲಾ ದುರಂತಗಳನ್ನು ಅನುಭವಿಸಿದರೂ ಸಹ ಯೋಬನು ದೇವರಿಗೆ ನಂಬಿಗಸ್ತನಾಗಿರುತ್ತಾನೆ. ಆತನು ದೇವರ ಮೇಲೆ ತಪ್ಪುಹೊರಿಸುವುದಿಲ್ಲ (1:22) ಮತ್ತು ಇದೆಲ್ಲದರಲ್ಲಿಯೂ ಯೋಬನು **"ಪಾಪ"** ಮಾಡಲಿಲ್ಲ (2:10).

    ಇ. ದೇವರೊಂದಿಗಿನ ಯೋಬನ ನಂಬಿಗಸ್ತಿಕೆಯಿಂದ ಸೈತಾನನಿಗೆ ತೃಪ್ತಿಯಾಗಲಿಲ್ಲ.

12. ಮೂರ್ಖಳಂತೆ ಮಾತಾಡಿದ್ದಕ್ಕಾಗಿ ಯೋಬನು ತನ್ನ ಹೆಂಡತಿಯನ್ನು ದೂರುತ್ತಾನೆ. ಇದಕ್ಕೆ ಕಾರಣವೇನೆಂದರೆ ತಮ್ಮ ಜೀವಿತದ ಮೇಲೆ ದೇವರ ನಿಯಂತ್ರಣ (ಪ್ರಭುತ್ವ)ವನ್ನು ಆಕೆಯು ಸ್ವೀಕರಿಸುವುದಿಲ್ಲ (ಅಧ್ಯಾಯ. 2).

13. ತಾನು ಯಾಕೆ ಬಾಧೆಪಡುತ್ತಿದ್ದೇನೆಂದು ಯೋಬನಿಗೆ ಅರ್ಥವಾಗಲಿಲ್ಲ ಆದರೆ ಆತನು ತಿಳಿದುಕೊಳ್ಳುತ್ತಾನೆ (2:10).

14. ಮೂವರು ಸ್ನೇಹಿತರಾದ ಎಲೀಫಜ, ಬಿಲ್ದದ ಮತ್ತು ಚೋಫರ ಯೋಬನನ್ನು ಸಂತೈಸಲು ಬರುತ್ತಾರೆ. ಅವನಿಗೆ ಸಂಭವಿಸಿದ ಆಪತ್ತಿನ ಸುದ್ದಿಯನ್ನು ಅವರು ಕೇಳಿಸಿಕೊಳ್ಳುತ್ತಾರೆ (2:11).

15. –

16. –

17. ದೇವರ ಸಾರ್ವಭೌಮತ್ವವು ಈ ಪ್ರಾರಂಭಿಕ ಅಧ್ಯಾಯಗಳಲ್ಲಿ ಪ್ರಕಟಿಸಲ್ಪಟ್ಟಿದೆ.

    ಅ. ಆತನು ಯೋಬನನ್ನು ಸಂಪತ್ತು, ಕುಟುಂಬ, ಸಂತೋಷ ಮತ್ತು ಆರೋಗ್ಯದಿಂದ ಆಶೀರ್ವದಿಸುತ್ತಾನೆ.

    ಆ. ಆದರೆ ಆತನು ಈ ಎಲ್ಲಾ ಆಶೀರ್ವಾದಗಳನ್ನು ಯೋಬನಿಂದ ತೆಗೆದುಬಿಡುತ್ತಾನೆ.

    ಇ. ಸೈತಾನನಿಗೆ ಯಾವುದೇ ಅಧಿಕಾರವಿಲ್ಲ. ದೇವರು ಅನುಮತಿಸಿದ ಮೇರೆಗೆ ಮಾತ್ರ ಆತನು ಕಾರ್ಯಮಾಡಬಹುದು.

18. –

19. –

ಟಿಪ್ಪಣಿಗಳು

ಎರಡನೇ ಅಧ್ಯಾಯದ ಕೊನೆಯಲ್ಲಿ ಯೋಬನು ಅಪಾರ ಸಂಪತ್ತಿನಿಂದ ಕಡು ಬಡತನಕ್ಕೆ, ಉತ್ತಮವಾದ ಆರಾಮದಾಯಕ ಜೀವನದಿಂದ ಭಯಂಕರ ನೋವಿನೆಡೆಗೆ, ಬಹು ಗೌರವಾನ್ವಿತ ಸ್ಥಾನದಿಂದ ಬೂದಿಯಲ್ಲಿ ಕೂತುಕೊಂಡು ಬೋಕಿಯಿಂದ ಮೈಯನ್ನು ಕೆರೆದುಕೊಳ್ಳುವ ಸ್ಥಿತಿಗೆ ಹೋಗುತ್ತಾನೆ.

ಇವೆಲ್ಲವುಗಳ ನಡುವೆ ದೇವರು ಮತ್ತು ಸೈತಾನನ ನಡುವಿನ ಸಂಭಾಷಣೆಯ ಬಗ್ಗೆ ಯೋಬನಿಗೆ ಏನೂ ಸಹ ತಿಳಿದಿರುವುದಿಲ್ಲವೆಂಬುದು ಗಮನಿಸತಕ್ಕ ಒಂದು ಸಂಗತಿಯಾಗಿದೆ. ಪರಲೋಕದಲ್ಲಿ ಏನು ನಡೆಯಿತು ಎಂಬುದರ ಬಗ್ಗೆ ಯೋಬನಿಗೆ ಏನೂ ಸಹ ಗೊತ್ತಿರುವುದಿಲ್ಲ. ಕೇವಲ ಬಾಧೆ ಮಾತ್ರ ಆತನಿಗೆ ಗೊತ್ತಾಗುತ್ತದೆ. ವಾಸ್ತವಾಂಶವೆಂದರೆ ಪುಸ್ತಕದ ಮುಂದಿನ ಭಾಗವೆಲ್ಲಾ ಯೋಬನು ತನ್ನ ಸ್ನೇಹಿತರೊಂದಿಗೆ ವಾದಿಸುತ್ತಾ, ದೇವರೊಂದಿಗೆ ಹೋರಾಡುತ್ತಾ ಯಾಕೆ ಇಂತಹ ಭಯಂಕರ ಸಂಗತಿ ತನಗೆ ಸಂಭವಿಸಿತೆಂದು ದೇವರನ್ನು ಕೇಳುವುದನ್ನು ನಾವು ಕಾಣಬಹುದು.

ಆದರೆ ಓದುಗರಾದ ನಮಗೆ ವಿಷಯವು ವಿಭಿನ್ನವಾದುದ್ದಾಗಿದೆ. ಯೋಬನು ಯಾಕೆ ಬಾಧೆ ಪಡುತ್ತಿದ್ದಾನೆಂಬುದು ನಮಗೆ ತಿಳಿದಿದೆ. ತನ್ನ ನೀತಿವಂತಿಕೆಯ ಒಂದು ಪರೀಕ್ಷಾರ್ಥವಾಗಿ ಯೋಬನು ಬಾಧೆಪಡುತ್ತಿದ್ದಾನೆ. ಓದುಗರಾದ ನಮಗೆ ಯೋಬನು ದೇವರಿಗೆ ನಂಬಿಗಸ್ತನಾಗಿ ನಿಲ್ಲುತ್ತಾನಾ ಇಲ್ಲವಾ ಎಂಬುದು ಈ ಪುಸ್ತಕದಲ್ಲಿ ಕಾಡುವ ಒಂದು ಚಿಂತೆಯಾಗಿದೆ. ಯೋಬನ ವೇದನೆಯು ದೇವರನ್ನು ಶಪಿಸುವಂತೆ ಮಾಡುವುದಾ? ಸೈತಾನನು ತಾನು ಹೇಳುವುದು ಸರಿಯೆಂಬುದಾಗಿ ಸಾಧಿಸುವನಾ?

ಯೋಬನ ಪುಸ್ತಕವನ್ನು ನಾವು ಅಧ್ಯಯನ ಮಾಡುವಾಗ, ಯೋಬನು ತನ್ನ ಬಾಧೆಯನ್ನು ಹೇಗೆ ನಿಭಾಯಿಸುತ್ತಾನೆಂಬುದನ್ನು ನಾವು ಕಾಣಬಹುದು. ಮತ್ತು ಪುನಃ ಪುನಃ ಒಂದು ಪ್ರಾಮುಖ್ಯ ಪ್ರಶ್ನೆಯನ್ನು ನಾವು ಎದುರಿಸಲೇಬೇಕು. ನಮಗೆ ಬಾಧೆಗಳು ಸಂಭವಿಸುವಾಗ ಮತ್ತು ಅವು ಯಾಕೆ ನಮಗೆ ಸಂಭವಿಸಿದವೆಂಬುದನ್ನು ನಾವು ಅರಿಯದೇ ಇರುವಾಗ ಆಧುನಿಕ ವಿಶ್ವಾಸಿಗಳಾದ ನಾವು ದೇವರೊಂದಿಗೆ ಹೇಗೆ ಪ್ರತಿಕ್ರಯಿಸುತ್ತೇವೆ?

ಒಂದು ಹಂತದಲ್ಲಿ ಯೋಬನ ಪಸ್ತಕವು ಬಾಧೆಯ ಕುರಿತಾಗಿದೆ. ಅಲ್ಲದೆ ಇದು ಯಾಕೆ ಕಷ್ಟಗಳು ಬರುತ್ತವೆಂಬುದಕ್ಕೆ ನಮಗೆ ಕೆಲವು ಒಳನೋಟಗಳನ್ನು ಕೊಡುತ್ತವೆ. ಆದರೆ ಪ್ರಾರಂಭದಿಂದ ನಾವು ಗಮನಿಸತಕ್ಕ ಅತೀ ಪ್ರಾಮುಖ್ಯ ಸಂಗತಿಯೇನಂದರೆ, ಇದೇ ಈ ಪುಸ್ತಕದ ಮುಖ್ಯ ಅಂಶವಲ್ಲ ಯೋಬನ ಪುಸ್ತಕವು ಸೈದ್ಧಾಂತಿಕಕ್ಕಿಂತಲೂ ಬಹು ಪ್ರಾಯೋಗಿಕ ಪುಸ್ತಕವಾಗಿದೆ. ಇದು ಪ್ರಾಥಮಿಕ ಚಿಕಿತ್ಸಾ ಕೈಪಿಡಿಗೆ ಹೋಲಿಸಬಹುದು. ಹೇಗೆಂದರೆ, ಇದು ಯಾಕೆ ಅಪಘಾತ ಸಂಭವಿಸಿತೆಂಬುದರ ಬಗ್ಗೆ ಅನೇಕ ವಿಭಿನ್ನವಾದ ಕಾರಣಗಳ ಕುರಿತು ಹೆಚ್ಚಾಗಿ ಹೇಳುವುದಿಲ್ಲ. ಇಂತಹ ಕೈಪಿಡಿಯ ಉದ್ದೇಶವು ಅಪಘಾತಗಳು ಸಂಭವಿಸಿದಾಗ ಹೇಗೆ ಪ್ರತಿಕ್ರಯಿಸಬೇಕೆಂಬುದನ್ನು ತಿಳಿಸುವುದಾಗಿದೆ. ಅದೇ ರೀತಿ ಯೋಬನ ಪುಸ್ತಕವು ಬಾಧೆಯು ಯಾಕೆ ಸಂಭವಿಸಿತೆಂಬುದರ ಬಗ್ಗೆ ಕಾರಣಗಳ ಪಟ್ಟಿಯನ್ನು ಕೊಡುವುದಿಲ್ಲ. ಬದಲಾಗಿ ಬಾಧೆಗಳು ಸಂಭವಿಸುವಾಗ ದೇವರೊಂದಿಗೆ ನಾವು ಹೇಗೆ ಪ್ರತಿಕ್ರಯಿಸಬೇಕೆಂಬುದರ ಬಗ್ಗೆ ಹೆಚ್ಚಿನ ಗಮನ ಕೊಡುತ್ತದೆ.

ಯೋಬನ ಪುಸ್ತಕವು ನಾವು ಬಾಧೆಪಡುವಾಗಲೂ ಸಹ ದೇವರು ಹಿಂಬಾಲಿಸಲು ಯೋಗ್ಯನಾದವನಾ ಎಂಬುದರ ಕುರಿತಾಗಿದೆ. ಇದು ದೇವರು ನಮ್ಮ ಜೀವನವನ್ನು ಶೋಚನೀಯವಾಗಿ ಮಾಡಿದರೂ ಸಹ ಆತನು ಭರವಸೆಗೆ ಯೋಗ್ಯನಾದವನಾಗಿದ್ದಾನೆ.

ಯೋಬ ಉತ್ತರಗಳು 2: "ಸುಮ್ಮನೆ ಏನೂ ಬರುವುದಿಲ್ಲ"

ಪ್ರಶ್ನೆಗಳಿಗೆ ಉತ್ತರಗಳು

1. ಯೋಬನ ಬಾಧೆಗೆ ಪ್ರತ್ಯುತ್ತರವಾಗಿ ಆತನ ಮೂವರು ಸ್ನೇಹಿತರು ಈ ರೀತಿ ಮಾಡುತ್ತಾರೆ (2:11–13):

   ಅ. ಯೋಬನ ದುರ್ದೆಶೆಯ ಬಗ್ಗೆ ಕೇಳಿದೂಡನೆ ಅವರು ಆತನನ್ನು ವೈಯಕ್ತಿಕವಾಗಿ ಸಂಧಿಸಲು ಮತ್ತು ಆಧರಿಸಲು ಬಹುದೂರದಿಂದ ಪ್ರಯಾಣಿಸಿ ಬರುತ್ತಾರೆ. ಕಷ್ಟ ಮತ್ತು ಸುಖಗಳಲ್ಲಿಯೂ ಸಹ ಅವರು ನಂಬಿಗಸ್ತ ಸ್ನೇಹಿತರಾಗಿದ್ದರೆಂಬುದನ್ನು ಇದು ತೋರಿಸುತ್ತದೆ. ಅಲ್ಲದೇ ಒಬ್ಬ ಸ್ನೇಹಿತನನ್ನು ಸಂತೈಸಲು ಮತ್ತು ಆತನ ಪರಿಸ್ಥಿತಿಯಲ್ಲಿ ಭಾಗಿಯಾಗಲು ತಮ್ಮ ಸಮಯ ಮತ್ತು ಹಣವನ್ನು ವ್ಯಯಿಸಲು ಅವರು ಸಿದ್ಧರಿದ್ದರೆಂಬುದನ್ನು ಸಹ ತೋರಿಸುತ್ತದೆ.

   ಆ. ಅವರು ಯೋಬನ ಶೋಚನೀಯ ಸ್ಥಿತಿಯನ್ನು ನೋಡಿದಾಗ ಅವರು ಗೋಳಾಡುತ್ತಾರೆ. ಅವರು ಅಳುತ್ತಾ, ತಮ್ಮ ಬಟ್ಟೆಗಳನ್ನು ಹರಿದುಕೊಂಡು ತಮ್ಮ ತಲೆಯ ಮೇಲೆ ದೂಳನ್ನು ಹಾಕಿಕೊಳ್ಳುತ್ತಾರೆ. ಇದು ತಮ್ಮ ಸ್ನೇಹಿತನ ಪರಿಸ್ಥಿತಿಗಾಗಿನ ಅವರ ಅನುತಾಪವನ್ನು ತೋರ್ಪಡಿಸುತ್ತದೆ. ನಿಜವಾಗಲೂ ಅವರಿಗೆ ಆತನ ಕುರಿತಾಗಿ ಬೇಸರವಾಗುತ್ತದೆ, ಮತ್ತು ಅವರು ಆತನೊಂದಿಗೆ ಬಾಧೆಪಡಲು ಸಹ ಸಿದ್ಧರಾಗುತ್ತಾರೆ.

   ಇ. ಯೋಬನು ಎಷ್ಟು ನಿರಾಶೆ/ಖಿನ್ನನಾಗಿದ್ದಾನೆಂಬುದನ್ನು ಅರಿತಾಗ ಅವರು ಆತನೊಂದಿಗೆ ನೆಲದ ಮೇಲೆ ಕೂತುಕೊಳ್ಳುತ್ತಾರೆ. ತಮ್ಮ ಮಾತಿನಿಂದ ಏನೂ ಆಗದೆಂದು ತಿಳಿದು ಅವರು ಮಾತನಾಡದೇ ಸುಮ್ಮನಿರುತ್ತಾರೆ. ಯೋಬನೇ ಬಾಯಿತೆರೆದು ಮಾತನಾಡಲೆಂದು ಅವರು ಏಳು ದಿನಗಳ ಕಾಲ ಕಾಯುತ್ತಾರೆ. ಆತನು ಕೇಳಿಸಿಕೊಳ್ಳಲು ಸಿದ್ಧನಾಗುವವರೆಗೂ ಅವರು ತಮ್ಮ ಸಲಹೆಯ ಮತ್ತು ಆದರಣಾ ನುಡಿಗಳನ್ನು ಕಾದುಕೊಳ್ಳುತ್ತಾರೆ.

2. ಯೋಬನ ಮೊದಲ ಮಾತು ಮತ್ತು ಆತನ ಮನೋಭಾವ (ಅಧ್ಯಾಯ 3):

   ಅ. ಯೋಬನ ಮಾತಿನ ಸಾರಾಂಶ: ಮೊದಲು ಆತನು ತನ್ನ ಜನನ ದಿನವನ್ನು ಶಪಿಸುತ್ತಾನೆ (ವಚನ 1–10). ಅನಂತರ ತನ್ನ ಹುಟ್ಟಿಗಾಗಿ ಗೋಳಾಡುತ್ತಾನೆ (11–19). ಆತನ ಅಸ್ತಿತ್ವವು ಬದುಕಿರುವುವರಿಗಿಂತಲೂ ಸತ್ತವರಿಗೆ ಸಮಾನವಾಗಿತ್ತು. ತನ್ನ ಪ್ರಸ್ತುತ ಶೋಕದ ಭಾವನೆಗಳ ಕುರಿತಾದ ಸಂಕ್ಷಿಪ್ತ ವಿವರಣೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ (ವಚನ 24–26).

   ಆ. ಸ್ವತಃ ತನ್ನ ಪರಿಸ್ಥಿತಿ ಮತ್ತು ಈ ಲೋಕದಲ್ಲಿ ಬಾಧೆಯ ಜೀವಿತಕ್ಕಾಗಿ ಹುಟ್ಟಿರುವ ಜನರ ಪರಿಸ್ಥಿತಿಗಳ ಬಗ್ಗೆ ಯೋಬನು ಬೇಸರಗೊಳ್ಳುತ್ತಾನೆ.

3. ತನ್ನ ಸ್ನೇಹಿತರೊಂದಿಗಿನ ಮೊದಲ ಪ್ರತ್ಯುತ್ತರದಲ್ಲಿ ತನ್ನ ಬಾಧೆಗಾಗಿ ಯೋಬನು ಎಲ್ಲಿಯೂ ದೇವರನ್ನು ಶಪಿಸುವುದಿಲ್ಲ (ಅಧ್ಯಾಯ 3). ಆತನು ತನ್ನ ಜನನ ದಿನವನ್ನು ಶಪಿಸುತ್ತಾನೆ ಮತ್ತು ದೇವರು ಮನುಷ್ಯನ ಜೀವಿತವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದಾನೆಂದು ಹೇಳುತ್ತಾನೆ (ವಚನ 23). ಯೋಬನು ದೇವರನ್ನು ದೂಷಿಸಿಯೇ ದೂಷಿಸುವನೆಂದು 2:5ರಲ್ಲಿ ಸೈತಾನನು ತಿಳಿಸುತ್ತಾನೆ. ಹಾಗಾಗಿ ಸೈತಾನನು ಹೇಳಿದ್ದು ತಪ್ಪೆಂಬುದಾಗಿ ಯೋಬನು ಸಾಧಿಸುತ್ತಾನೆ.

4. ಎಲೀಫಜನ ಮಾತಿನ ಸ್ವರಭಾವ (ಅಧ್ಯಾಯ 4–5):

   ನಿಜವಾಗಲೂ ಎಲೀಫಜನು ಯೋಬನ ಪರವಾಗಿ ನಿಲ್ಲುತ್ತಾನೆ ಅಥವಾ ಯೋಬನ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುತ್ತಾನೆಂದು ನಾನೆಣಿಸುವುದಿಲ್ಲ. ಬದಲಾಗಿ ಆತನು ಯೋಬನಿಗೆ ಬೋಧಿಸಿ, ಅತನ ತಪ್ಪಾದ ದೈವಶಾಸ್ತ್ರವನ್ನು ಸರಿಪಡಿಸೋ ಮತ್ತು ಯೋಬನ ಮನಸ್ಸನ್ನು ಬದಲಾಯಿಸಲು ಪ್ರಯತ್ನಿಸುವವನಂತೆ ಕಾಣುತ್ತಾನೆ. ಆದರೆ ಆತನು ಯೋಬನಿಗೆ ಸ್ವಲ್ಪ ಆಧರಣೆಯನ್ನು ನೀಡುತ್ತಾನೆ (ಉದಾ: 4:6, 5:17).

5. ಯೋಬನು ಏನನ್ನೋ ಮಾಡಿದ್ದಾನೆ, ಅದೇ ಆತನ ಬಾಧೆಗೆ ಕಾರಣವಾಗಿದೆ ಎಂದು ಎಲೀಫಜನು ಯೋಚಿಸುತ್ತಾನೆ. ಯೋಬನು ಇಂತಹ ದುರಂತವನ್ನು ಅನುಭವಿಸಲು ಯೋಬನು ಏನೋ ಪಾಪವನ್ನು ಮಾಡಿದ್ದಾನೆಂದೆ ಎಣಿಸುತ್ತಾನೆ. ಇದು ಕಾರಣ ಮತ್ತು ಪರಿಣಾಮದ ಸಂಗತಿಯಾಗಿದೆ (4:7–8).

6. ಎಲೀಫಜನು ಯೋಬನ ಕುರಿತಾಗಿನ ತನ್ನ ಮೌಲ್ಯಮಾಪನದ ಬಗ್ಗೆ ಭರವಸವುಳ್ಳವನಾಗಿದ್ದಾನೆ (4:12–16). ಯಾಕೆಂದರೆ, ಕನಸಿನಲ್ಲಿ ಆತನು ದಿಗಿಲು ಉಂಟಾಗುವ ಮತ್ತು ಭಯಂಕರವಾದ ಒಂದು ಅನುಭವವನ್ನು ಹೊಂದಿರುತ್ತಾನೆ. ಹಾಗಾಗಿ ಒಂದು ದೈವಿಕ ಪ್ರಕಟಣೆಯನ್ನು ಆಧರಿಸಿ ಆತನು ಯೋಬನಿಗೆ ಹೇಳುತ್ತಾನೆ.

7. ದೇವರ ಕಡೆಗೆ ತಿರುಗಿಕೊಂಡು ದೇವರು ಶಿಕ್ಷಿಸಿದಕ್ಕಾಗಿ ಆತನ ತಪ್ಪನ್ನು ಗ್ರಹಿಸಿಕೊಳ್ಳಬೇಕೆಂದು ಎಲೀಫಜನು ಯೋಬನಿಗೆ ಸಲಹೆಯನ್ನು ಕೊಡುತ್ತಾನೆ (5:8–17).

8. ತನ್ನ ಮೂರನೇ ಮಾತಿನಲ್ಲಿ ಸಹ (ಅಧ್ಯಾಯ 22) ಎಲೀಫಜನು ಅದೇ ಸಂಗತಿಯನ್ನು ಹೇಳುತ್ತಾನೆಂದು ನಾನೆಣಿಸುತ್ತೇನೆ. ಆದರೆ ಆತನು ಹೇಳುವ ಧಾಟಿಯು ಈಗ ಇನ್ನೂ ಕಠಿಣವಾದಂತೆ ತೋರುತ್ತದೆ. ಯಾಕೆಂದರೆ ಈ ರೀತಿಯಲ್ಲಿ ದೇವರಿಂದ ಶಿಕ್ಷಿಸಲ್ಪಟ್ಟಿದ್ದಕ್ಕೆ ತನಗೆ ಅನಿಸಿದಂತೆ ಯೋಬನು ಮಾಡಬಹುದಾದ ಪಾಪಗಳ ಉದಾಹರಣೆಗಳನ್ನೆಲ್ಲಾ (ವಚನ 5–11) ಆತನು ಕೊಡುತ್ತಾನೆ. ಪುನಃ ತನ್ನ ಪಾಪದಿಂದ ಪಶ್ಚಾತ್ತಾಪಪಡು ಎಂದು ಯೋಬನಿಗೆ ಹೇಳುವುದರ ಮೂಲಕ ಎಲೀಫಜನು ತನ್ನ ಮಾತನ್ನು ಮುಗಿಸುತ್ತಾನೆ.

9. ಪಾಪವೇ ಯೋಬನ ಬಾಧೆಯ ಹಿಂದಿರುವ ಕಾರಣವೆಂದು ಬಿಲ್ದದನು ಯೋಚಿಸುತ್ತಾನೆ (8:1–4).

10. ಯೋಬನು ತನ್ನ ಪಾಪಗಳನ್ನು ಗ್ರಹಿಸಿಕೊಂಡು ದೇವರಿಗೆ ಮೊರೆಯಿಡಬೇಕೆಂದು ಮತ್ತು ಆಗ ಮಾತ್ರ ಯೋಬನು ತನ್ನ ಆಶೀರ್ವಾದಗಳನ್ನು ಹಿಂಪಡೆಯಬಹುದೆಂದು ಸಹ ಬಿಲ್ದದನು ಯೋಚಿಸುತ್ತಾನೆ (8:5–7)

11. ಯೋಬನ ಕುರಿತಾಗಿ ಚೋಫರನ ವಿಮರ್ಶೆ (11:1–6):

    ಅ. ಯೋಬನು ತಾನು ಶುದ್ಧನೆಂಬುದಾಗಿ ಹೇಳಿಕೊಳ್ಳುವುದು ಸುಳ್ಳು ಮತ್ತು ಯೋಬನು ದೇವರನ್ನು ಪರಿಹಾಸ್ಯ ಮಾಡಿದ್ದಾನೆಂದು ಚೋಫರನು ಹೇಳುತ್ತಾನೆ.

    ಆ. ಚೋಫರನು ಸಹ ಇತರ ಇಬ್ಬರು ಸ್ನೇಹಿತರು ನಂಬಿರುವ ದೈವಶಾಸ್ತ್ರವನ್ನು ನಂಬಿದವನಾಗಿದ್ದಾನೆ. ಅಂದರೆ ಯೋಬನ ಪಾಪಗಳೇ ಆತನ ಇಂತಹ ದುರ್ದೆಶೆಗೆ ಕಾರಣವಾಗಿವೆ.

12. ತನ್ನ ಆಶೀರ್ವಾದಗಳನ್ನು ಹಿಂಪಡೆಯಲು ಯೋಬನು ಕೇವಲ ಪಶ್ಚಾತ್ತಾಪಪಡಬೇಕೆಂದು ಚೋಫರನು ಯೋಚಿಸುತ್ತಾನೆ (11:13–20).

13. ಯೋಬನ 3 ಸ್ನೇಹಿತರ ಸಲಹೆಗಳನ್ನು ನೋಡೋಣ:

    ಅ. ಅವರೆಲ್ಲರ ದೈವಶಾಸ್ತ್ರವು ಒಂದೇ ಆಗಿತ್ತು. ಯೋಬನು ಮಾಡಿರುವ ಪಾಪಗಳೇ ಆತನ ವೇದನೆಗೆ ಕಾರಣವಾಗಿವೆಯೆಂದು ಅವರೆಲ್ಲರೂ ನಂಬಿದ್ದರು.

    ಆ. ಯೋಬನೊಂದಿಗಿನ ತಮ್ಮ ಮನೋಭಾವನೆ ಅವರು ವಿಭಿನ್ನರಾಗಿದ್ದರು. ಉದಾಹರಣೆಗೆ: ಚೋಫರನು ಉಳಿದ ಇಬ್ಬರಿಗಿಂತಲೂ ಹೆಚ್ಚಾಗಿ ತಪ್ಪು ಹುಡುಕುವವನೂ ಖಂಡಿಸುವವನೂ ಆಗಿದ್ದಾನೆ.

14. ಬಾಧೆಯ ಸಮಯದಲ್ಲಿ ಒಬ್ಬರಿಗೊಬ್ಬರು ಪರಸ್ಪರ ಸಹಾಯ ಮಾಡುವುದರ ಬಗ್ಗೆ ಯೋಬನ ಸ್ನೇಹಿತರಿಂದ ನಾವು ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳೆರಡನ್ನೂ ಸಹ ಕಲಿಯಬಹುದು. ಇಲ್ಲಿ ಕೆಲವು ಉದಾಹರಣೆಗಳು ಇಂತಿವೆ:

    ಅ. ಸಕಾರಾತ್ಮಕ: ಒಬ್ಬ ಬಾಧೆಪಡುವ ಸ್ನೇಹಿತನನ್ನು ಸಂತೈಸಲು ಮತ್ತು ಆತನಿಗೆ ಸಹಾಯಿಸಲು ನಾವು ಸಿದ್ಧರಿರಬೇಕು. ನಾವು ನಮ್ಮ ಸ್ವಂತ ಸಮಯ ಮತ್ತು ಅನುಕೂಲತೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬಾರದು, ಆದರೆ ಬಾಧೆ ಪಡುತ್ತಿರುವ ನಮ್ಮ ಸ್ನೇಹಿತರೊಂದಿಗೆ ಸಮಯ ಕಳೆಯಬೇಕು.

    ಆ. ನಕಾರಾತ್ಮಕ: ಬರೀ ಬಾಯಿಮಾತಿನಿಂದ ಅಥವಾ ಸರಳ ಪರಿಹಾರಗಳಿಂದ ನಾವು ಬಾಧೆಪಡುತ್ತಿರುವ ಸ್ನೇಹಿತನನ್ನು ಸಂತೈಸಲು ಪ್ರಯತ್ನಿಸಬಾರದು. ನಮಗೆ ಯಾವುದೇ ಹಿನ್ನಲೆಯು ತಿಳಿಯದೇ ಇರುವಾಗ ನಾವು ಯಾರನ್ನೂ ಖಂಡಿಸಬಾರದು ಅಥವಾ ತೀರ್ಮಾಮಾಡಬಾರದು.

15. ಬಾಧೆಗಳಿಗೆ ಸಾಧ್ಯತೆಯಿರುವ ವಿಭಿನ್ನ ಕಾರಣಗಳ ಬಗೆಗಿನ ಹೊಸ ಒಡಂಬಡಿಕೆಯ ವಾಕ್ಯಭಾಗಗಳು:

    ಅ. 1 ಕೊರಿಂಥ. 11:27–32: ಕೊರಿಂಥದಲ್ಲಿ ಪಾಪವು ದೇವರ ನ್ಯಾಯತೀರ್ಪನ್ನು ತಂದಿತು.

    ಆ. ಇಬ್ರಿಯ. 12:7–11: ಬಾಧೆಯು ದೇವರು ತನ್ನ ಮಕ್ಕಳನ್ನು ಶಿಕ್ಷಿಸಲು (ಶಿಸ್ತಿಗೊಳಪಡಿಸಲು) ಇರುವ ಒಂದು ವಿಧವಾಗಿದೆ. ಇದು ನಮಗೆ ಒಳ್ಳೇದಾಗಬಹುದು ಮತ್ತು ನಮ್ಮನ್ನು ಇನ್ನೂ ಪರಿಶುದ್ಧರನ್ನಾಗಿಸುತ್ತದೆ.

    ಇ. ಲೂಕ. 13:1–5: ನಾವು ಪಶ್ಚಾತ್ತಾಪಪಡುವಂತೆ ಬಾಧೆಯು ನಮಗೆ ಸಹಾಯಿಸುತ್ತದೆ.

ಈ. ಯೋಹಾನ. 9:1–3: ಒಬ್ಬ ಮನುಷ್ಯನ ಕುರುಡುತನವು ಆತನ ಅಥವಾ ಆತನ ತಂದೆ ತಾಯಿಗಳ ಪಾಪದ ಫಲದಿಂದ ಬಂದಿರಲಿಲ್ಲ, ಆದರೆ ಆತನ ಬಾಧೆಗೆ ಒಂದು ಉನ್ನತವಾದ ಉದ್ದೇಶವಿತ್ತು. ದೇವರ ಮಹಿಮೆಯು ಆತನ ಸ್ವಸ್ಥತೆಯ ಮೂಲಕ ಸಹ ಪ್ರಕಟಿಸಲ್ಪಡುತ್ತದೆ.

16. ಒಬ್ಬ ಸ್ನೇಹಿತನು ಒಂದು ವೈಯಕ್ತಿಕವಾದ ಸಮಸ್ಯೆಯನ್ನು ಹಾದು ಹೋಗುತ್ತಿದ್ದಾನೆಂದು ಊಹಿಸಿಕೊಳ್ಳಿ. ಆಗ ಯಾರೋ ಒಬ್ಬರು ಆತನಿಗೆ ನಿನ್ನ ಜೀವನದಲ್ಲಿ ನೀನು ಅರಿಕೆ ಮಾಡದೇ ಇರುವ ಪಾಪವೇ ನಿನಗೆ ಈ ಬಾಧೆಯನ್ನು ತಂದಿದೆ ಎನ್ನುತ್ತಾರೆ. ಈ ರೀತಿಯ ಆಲೋಚನೆಯನ್ನು ನಾನು ಒಪ್ಪುವುದಿಲ್ಲ. ಯಾಕೆ ವಿಶ್ವಾಸಿಗಳು ಕೆಲವೊಮ್ಮೆ ಬಾಧೆ ಪಡುತ್ತಾರೆ ಎನ್ನುವುದುಕ್ಕೆ ಹೊಸ ಒಡಂಬಡಿಕೆಯು ಅನೇಕ ಕಾರಣಗಳನ್ನು ಕೊಡುತ್ತದೆ. ಒಂದು ಪ್ರಾಮುಖ್ಯ ಅಂಶವೆಂದರೆ – ಬಾಧೆಯು ಬಿದ್ದುಹೋದ ಈ ಪಾಪಮಯ ಲೋಕದಲ್ಲಿನ ಒಂದು ಭಾಗವಾಗಿದೆ.

17. ನ್ಯಾಯವಾಗಿ ತೀರ್ಪುಮಾಡುವಾತನಿಗೆ **"ಒಪ್ಪಿಸಿಕೊಡು"** (1 ಪೇತ್ರ. 2:23) ಎಂಬುದರ ಅರ್ಥವು - ಯೇಸು ಕ್ರಿಸ್ತನು ಮಾಡಿದಂತೆ ನಾವು ಸಹ ನಮ್ಮ ವಾದವನ್ನು ಪರಲೋಕದ ತೀರ್ಪುಗಾರನಾದ ದೇವರಿಗೆ ಒಪ್ಪಿಸಿಕೊಡುವುದಾಗಿದೆ. ದೇವರ ರಾಜ್ಯದ ನಿಮಿತ್ತವಾಗಿ ನಾವು ಬಾಧೆಪಡುತ್ತಿದ್ದೇವೆಂಬುದನ್ನು ಆತನು ಬಲ್ಲವನಾಗಿದ್ದಾನೆ. ಮತ್ತು ಆತನು ನಮಗೆ ನ್ಯಾಯವಾದ ತೀರ್ಪನ್ನು ಕೊಡುತ್ತಾನೆ. ಆತನು ಮನುಷ್ಯರ ಬಾಧೆಗಳನ್ನು ಅರ್ಥೈಸಿಕೊಳ್ಳುತ್ತಾನೆ.

ಈ ಲೋಕದಲ್ಲಿನ ನಮ್ಮ ಬಾಧೆಗೆ ಅನೇಕ ಕಾರಣಗಳಿವೆ. ಹಾಗಾಗಿ ಬಾಧೆಪಡುತ್ತಿರುವ ವಿಶ್ವಾಸಿಗಳೊಂದಿಗೆ ನಾವು ಮುಕ್ತವಾಗಿ, ಜಾಗ್ರತೆಯಿಂದ, ಜಾಣರಾಗಿ, ದೈವಿಕವಾಗಿ ಮತ್ತು ಸತ್ಯವೇದಕ್ಕೆ ಅನುಗುಣವಾಗಿ ವ್ಯವಹರಿಸಬೇಕು.

ಆದರೆ ಬಾಧೆಯ ಸಮಯದಲ್ಲಿ ಪರಸ್ಪರ ಒಬ್ಬರಿಗೊಬ್ಬರು ಸಹಕರಿಸಲು ಕೆಲವು ಪ್ರಾಯೋಗಿಕ ವಿಧಗಳಿವೆ:

ಅ. ಬಾಧೆಪಡುತ್ತಿರುವ ವ್ಯಕ್ತಿಯೊಂದಿಗೆ ನಾವು ಪ್ರಾರ್ಥಿಸಿ, ಆತನು ತನ್ನ ಮನಸ್ಸನ್ನು ತನ್ನ ಮೇಲೆ ಇಡದೇ ಹೆಚ್ಚಾಗಿ ದೇವರ ಮೇಲೆ ಇಡುವಂತೆ ನಾವು ಸಹಕರಿಸಬಹುದಾಗಿದೆ. ಇಂತಹ ಕಷ್ಟದ ಸಮಯದಲ್ಲಿ ದೇವರ ಆದರಣೆ, ಸಂತೈಸುವಿಕೆ ಮತ್ತು ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಬಹುದು.

ಬಾಧೆಯ ನಿಮಿತ್ತ ಆತನು ದೇವರ ಮೇಲಿನ ಭರವಸೆಯನ್ನು ಕಳಕೊಳ್ಳಬಾರದು ಅಥವಾ ಹಿಂಜಾರಿಹೋಗಬಾರದು ಅಥವಾ ಎಲ್ಲವನ್ನು ಬಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬಾರದೆಂದು ಪ್ರಾರ್ಥಿಸಿರಿ.

ಆ. ಬಾಧೆ ಪಡುತ್ತಿರುವ ವ್ಯಕ್ತಿಯೊಂದಿಗೆ ನಾವು ಮಾತನಾಡಬಹುದು ಮತ್ತು ಈ ಲೋಕದಲ್ಲಿ ವಿಶ್ವಾಸಿಗಳು ಎದುರಿಸಬೇಕಾದ ಕಷ್ಟ ಮತ್ತು ಹೋರಾಟಗಳ ಬಗ್ಗೆ ಸತ್ಯವೇದವು ಏನೆಂದು ಬೋಧಿಸುತ್ತದೆಂಬುದನ್ನು ಆತನಿಗೆ ನಾವು ನೆನಪಿಸಬೇಕು. ಈ ರೀತಿ ಮಾಡುವುದರಿಂದ ಆತನು ತನ್ನ ಶೋಧನೆ ಮತ್ತು ಹೋರಾಟಗಳನ್ನು ಸತ್ಯವೇದದ ದೃಷ್ಟಿಕೋನದಲ್ಲಿ ನೋಡುವಂತೆ ನಾವು ಆತನಿಗೆ ಸಹಕರಿಸಬಹುದಾಗಿದೆ.

ಇ. ಆತನಿಗೆ ಹಣ, ಕುಟುಂಬ, ಕೆಲಸದಲ್ಲಿ ಸಹಾಯ ಬೇಕೆನಿಸಿದರೆ ನಾವು ಕಾರ್ಯರೂಪವಾಗಿ (ಪ್ರಾಯೋಗಿಕವಾಗಿ) ಆತನಿಗೆ ಸಹಾಯಮಾಡಬಹುದು.

ಈ. ಆತನು ದೇವರಿಂದ ಹಿಂಜಾರಿದ ನಿಮಿತ್ತ ಬಾಧೆಪಡುತ್ತಿದ್ದರೆ, ಆತನು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ಹಿಂತಿರುಗುವಂತೆ ನಾವು ಹೇಳಬಹುದು.

ಟಿಪ್ಪಣಿಗಳು

"ಸುಮ್ಮನೆ ಏನೂ ಬರುವುದಿಲ್ಲ".

ಯೋಬನ ಬಾಧೆಯು ಆತನು ಅರಿಕೆಮಾಡದೇ ಇರುವ ಪಾಪದ ಪಲಿತಾಂಶವೇ ಆಗಿದೆಯೆಂದು ಆತನ ಸ್ನೇಹಿತರಾದ ಎಲೀಫಜ, ಬಿಲ್ದದ ಮತ್ತು ಚೋಫರ ಹೇಳುತ್ತಾರೆ. ಅವರ ದೈವಶಾಸ್ತ್ರವನ್ನು ಈ ರೀತಿ ಸಾರಾಂಶಗೊಳಿಸಬಹುದು: ದೇವರು ನ್ಯಾಯವಂತನಾಗಿದ್ದಾನೆ. ಇದರರ್ಥ ಒಳ್ಳೆಯವರಿಗೆ ಯಾವ ಕೆಟ್ಟದ್ದೂ ಆಗುವುದಿಲ್ಲ. ಖಂಡಿತವಾಗಿ ಯೋಬನು ಏನೋ ತಪ್ಪು ಮಾಡಿರುವ ನಿಮಿತ್ತ ಈ ರೀತಿಯ ಬಾಧೆಯನ್ನು ಅನುಭವಿಸುತ್ತಿದ್ದಾನೆ.

ಯೋಬನು ಅವರ ಆರೋಪ ಅಲ್ಲಗಳೆಯುತ್ತಾನೆ. ತಾನು ಹಾದು ಹೋಗುತ್ತಿರುವ ಭಯಂಕರ ಬಾಧೆಗೆ ಕಾರಣವಾಗತಕ್ಕ ಯಾವ ಪಾಪವನ್ನೂ ತಾನು ಮಾಡಿಲ್ಲವೆಂದು ಆತನು ತಿಳಿದಿದ್ದಾನೆ. ಇದೇ ಒಂದು ವಾದಕ್ಕೆ ನಡೆಸುತ್ತದೆ. ಯೋಬನು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಡುವಂತೆ ಮಾಡಲು ಆತನ ಸ್ನೇಹಿತರಿಂದ ಆಗುವುದಿಲ್ಲ ಮತ್ತು ಪಶ್ಚಾತ್ತಾಪಪಡುಲು ಏನೂ ಇಲ್ಲವೆಂದು ತನ್ನ ಸ್ನೇಹಿತರನ್ನು ಮನವೊಲಿಸಲು ಯೋಬನಿಂದಾಗುವುದಿಲ್ಲ.

ಯೋಬನ ಸ್ನೇಹಿತರು ಹೇಳುವುದು ತಪ್ಪೆಂದು ಓದುಗರಾದ ನಮಗೆ ತಿಳಿದಿದೆ. ಈ ಪುಸ್ತಕದ ಮೊದಲ ವಚನದಿಂದಲೇ ಯೋಬನು ಒಬ್ಬ ಯಥಾರ್ಥ ಮತ್ತು ತಪ್ಪಿಲ್ಲದ ಮನುಷ್ಯನೆಂಬುದನ್ನು ನಾವು ತಿಳಿದಿದ್ದೇವೆ. ಆತನು ದೇವರಿಗೆ ಭಯಪಡುತ್ತಾ ಕೆಟ್ಟದ್ದನು ನಿರಾಕರಿಸುವ ವ್ಯಕ್ತಿ. ಸೈತಾನನೊಂದಿಗೆ ಮಾತನಾಡುವಾಗ ಸ್ವತಃ ದೇವರ ಬಾಯಿಂದಲೇ ನಾವಿದನ್ನು ಕೇಳಿದ್ದೇವೆ (1:8). ಇದು ಬಾಧೆಯು ಯಾರಿಗೆ ಬೇಕಾದರೂ ಸಂಭವಿಸಬಹುದು, ಇದನ್ನು ಹೊಂದಲು ಯೋಗ್ಯರಲ್ಲದವರಿಗೂ ಸಹ ಇದು ಬರುತ್ತದೆಂಬ ಒಂದು ಪ್ರಾಮುಖ್ಯವಾದ ಸತ್ಯವನ್ನು ನಮಗೆ ತಿಳಿಸುತ್ತದೆ. ಈ ಪಾಪಮಯ ಲೋಕದಲ್ಲಿ ಕೆಲವೊಮ್ಮೆ ನಿರಪರಾಧಿ (ತಪ್ಪಿಲ್ಲದವರು) ಸಹ ಬಾಧೆಪಡುತ್ತಾರೆ.

ಈ ಸತ್ಯವನ್ನು ಗ್ರಹಿಸಿಕೊಳ್ಳುವಲ್ಲಿ ಯೋಬನ ಸ್ನೇಹಿತರು ಸೋತುಹೋಗುತ್ತಾರೆ. ಯಾಕೆಂದರೆ ಅವರ ದೈವಶಾಸ್ತ್ರವು ಬಹು ಜಾಣ್ಮೆಯುಳ್ಳದ್ದಾಗಿತ್ತು, ಯಾಕೆಂದರೆ ದೇವರ ಕುರಿತಾಗಿನ ಅವರ ತಿಳುವಳಿಕೆಯು ತೀರಾ ಚಿಕ್ಕದ್ದಾಗಿತ್ತು. ಅವರು ದೇವರನ್ನು ಕಾರಣ ಪರಿಣಾಮದ ಒಂದು ವ್ಯವಸ್ಥೆಯಲ್ಲಿ ಇಡುತ್ತಾರೆ. ಅವರ ತಾರ್ಕಿಕ ದೃಷ್ಟಿಯಲ್ಲಿ ಒಳ್ಳೆಯವರಿಗೆ ಒಳ್ಳೆಯದೇ ಆಗುತ್ತದೆ. ಕೆಟ್ಟವರಿಗೆ ಕೆಟ್ಟದ್ದಾಗುತ್ತದೆ. ಅವರಿಗೆ ದೇವರ ಕುರಿತಾದ ಪೂರ್ಣಸತ್ಯ ತಿಳಿದಿಲ್ಲ. ಕೊನೆಯಲ್ಲಿ ಯೋಬನಿಗೆ ಕೊಡುವ ಸಲಹೆಯು ತಿಳುವಳಿಕೆಯಿಲ್ಲದ್ದು ಮತ್ತು ಕಠಿಣವಾದುದ್ದಾಗಿದೆ.

ತಪ್ಪಿಲ್ಲದವರು ಬಾಧೆಪಡುವುದು

ಈ ಲೋಕದಲ್ಲಿ ಅನ್ಯಾಯವಾಗಿ ಮತ್ತು ತಪ್ಪಿಲ್ಲದಿದ್ದರೂ ವಿಶ್ವಾಸಿಗಳಿಗೆ ಬಾಧೆಯು ಬರುತ್ತದೆಂಬ ಸತ್ಯವನ್ನು ಯೋಬನ ಪುಸ್ತಕವು ನಮಗೆ ಜ್ಞಾಪಿಸುತ್ತದೆ. ನಮ್ಮಲ್ಲಿ ಯಾರೂ ಸಹ ಪರಿಪೂರ್ಣರಲ್ಲವೆಂಬುದು ಸತ್ಯ. ಆದರೆ ನಮ್ಮ ಅಪರಿಪೂರ್ಣತೆಯು ಯಾವಾಗಲೂ ವ್ಯಥೆ ಮತ್ತು ಬಾಧೆಗಳಾಗಿ ಪರಿಣಮಿಸುವುದಿಲ್ಲ. ಒಂದು ಸತ್ಯವೇನೆಂದರೆ – ನಮಗೆ ಅನೇಕ ಕೆಟ್ಟ ಸಂಗತಿಗಳು ಸಂಭವಿಸುತ್ತವೆ, ಆದರೆ ಅವು ನಾವು ಮಾಡಿದ ಕೆಲವು ಪಾಪಗಳ ಫಲಿತಾಂಶಗಳಲ್ಲ. ಖಂಡಿತವಾಗಿ ಇದು ಯಾಕೆ ದೇವರು ತನ್ನ ಜನರಿಗೆ ಕೆಟ್ಟದ್ದು ಆಗಲು ಬಿಡುತ್ತಾನೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದೇ ರೀತಿಯ ಪ್ರಶ್ನೆಯು ಯೋಬನಿಗೆ ಸಹ ಕಾಡಿತ್ತು.

ಆದರೆ ನಮ್ಮ ಮೊದಲ ಅಧ್ಯಯನದಲ್ಲಿ ಏನನ್ನು ಕಲಿತಿದ್ದೇವೆಂಬುದನ್ನು ನಾವು ಮರೆಯಬಾರದು. ಯೋಬನ ಪುಸ್ತಕವು ಯಾಕೆ ನಮಗೆ ಅನ್ಯಾಯವಾಗಿ ಬಾಧೆಗಳು ಬರುತ್ತವೆಂಬುದರಲ್ಲಿ ಆಸಕ್ತಿ ಹೊಂದಿಲ್ಲ, ಆದರೆ ಅನ್ಯಾಯವಾಗಿ ಬಾಧೆಗಳು ಬರುವಾಗ ದೇವರೊಂದಿಗೆ ನಾವು ಹೇಗೆ ಪ್ರತಿಕ್ರಯಿಸುತ್ತೇವೆಂಬುದರಲ್ಲಿ ಈ ಪುಸ್ತಕವು ಹೆಚ್ಚಿನ ಆಸಕ್ತಿಯನ್ನು ಹೊಂದಿದೆ. ಇದರಲ್ಲಿ ಯೇಸು ಕ್ರಿಸ್ತನು ನಮಗೆ ಒಂದು ಉನ್ನತ ಮಾದರಿಯಾಗಿ ನಿಲ್ಲುತ್ತಾನೆ.

ಒಬ್ಬನು ಅನ್ಯಾಯವಾಗಿ ಬಾಧೆಪಡುವವನಾಗಿದ್ದು ದೇವರು ನೋಡುತ್ತಾನೆಂದು ಅರಿತು ಆ ಕಷ್ಟವನ್ನು ಸಹಿಸಿಕೊಂಡರೆ ಅದು ಶ್ಲಾಘ್ಯವಾಗಿದೆ. ತಪ್ಪುಮಾಡಿ ಗುದ್ದು ತಿನ್ನುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶಾಘ್ಯವಾಗಿದೆ. ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ; ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ; ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು (1 ಪೇತ್ರ. 2:19–23).

ಯೋಬ ಉತ್ತರಗಳು 3: "ನನಗೇ ಯಾಕೆ?"

ಪ್ರಶ್ನೆಗಳಿಗೆ ಉತ್ತರಗಳು

1. ತನ್ನ ವ್ಯಥೆ (ವಿಪತ್ತು) ಕುರಿತಾದ ವರ್ಣನೆ (6:1–7):

   ಅ. ಯೋಬನ ವಿಪತ್ತು ಲೆಕ್ಕಿಸಲಾಗದ್ದು (ವಚನ 1–3).

   ಆ. ದೆವರು ಆತನಿಗೆ ನ್ಯಾಯತೀರಿಸಿದ್ದಾನೆ ಇದು ದೇವರ ಬಾಣಗಳು ನನ್ನಲ್ಲಿ ನಾಟಿವೆ ಎಂಬುದರ ಅರ್ಥವಾಗಿದೆ (ವಚನ 4)

   ಇ. ಆತನ ಸ್ನೇಹಿತರು ಆತನಿಗೆ ಪ್ರಯೋಜನವಿಲ್ಲದ ಸಲಹೆಯನ್ನು ಕೊಟ್ಟಿದ್ದಾರೆ (ಸಪ್ಪೆ ಊಟ). ಹಾಗಾಗಿ ಆತನು ದೂರದೇ ಇರಲಾದೀತೆ (ಅರಚುವ ಕಾಡುಕತ್ತೆಯಂತೆ ವಚನ 5–6).

2. ದೇವರು ತನ್ನನ್ನು ಸಾಯಿಸಿದ್ದರೆ ಒಳ್ಳೆದಾಗಿತ್ತೆಂದು ಯೋಬನು ಆಶಿಸುತ್ತಾನೆ (ನನ್ನನ್ನು ಜಜ್ಜಿ ಸಂಹರಿಸಿದರೆ, 6:8–9). ಆಗ ಆತನು ದೇವರನ್ನು ದೂಷಿಸದೆ ಸಾಯಬಹುದು. ಆತನಿಗೆ ಈ ಜೀವನದಲ್ಲಿ ನಿರೀಕ್ಷೆಯೇ ಇಲ್ಲ. ಮತ್ತು ಉತ್ತಮವಾದ ಒಂದು ಭವಿಷ್ಯದ ಬಗ್ಗೆ ನಿರೀಕ್ಷಿಸಲು ಸಹ ಆತನಲ್ಲಿ ಸಾಮರ್ಥ್ಯವಿಲ್ಲ (ವಚನ 11–13).

3. ಬರೀ ಪ್ರಯೋಜನವಿಲ್ಲದ ಸಲಹೆಗಳಿಂದ ತನ್ನ ಸ್ನೇಹಿತರು ತನ್ನನ್ನು ನಿರಾಶೆಗೊಳಿಸಿದ್ದಾರೆಂದು ಯೋಬನು ಯೋಚಿಸುತ್ತಾನೆ (6:14–15). ಯಾಕೆಂದರೆ ಆತನಲ್ಲಿ ಯಾವುದೇ ತಪ್ಪಿಲ್ಲದಿದ್ದರೂ ಸಹ ಅವರು ಅನ್ಯಾಯವಾಗಿ ಆತನಿಗೆ ತೀರ್ಪುಮಾಡುತ್ತಾರೆ (6:29–30).

4. ದೇವರೆಡೆಗೆ ಯೋಬನ ಭಾವನೆಗಳು (7:11–21):

   ಅ. ದೇವರೆಡೆಗೆ ಯೋಬನಿಗೆ ಕಹಿತನದ ಭಾವನೆ ಬರುತ್ತದೆ (ವಚನ 11), ಹಾಗಾಗಿ ಆತನು ದೇವರನ್ನು ದೂರುತ್ತಾನೆ (ವಚನ 11, 13).

   ಆ. ಕೆಟ್ಟ ಕನಸುಗಳ ಮೂಲಕ ಸಹ ದೇವರು ನಿರಂತರವಾಗಿ ತನ್ನನ್ನು ದಂಡಿಸುತ್ತಿದ್ದಾನೆಂದು ಯೋಬನು ಭಾವಿಸುತ್ತಾನೆ (ವಚನ 12–15).

   ಇ. ದೇವರು ತನ್ನನ್ನು ಏಕಾಂಗಿಯಾಗಿ ಬಿಟ್ಟುಬಿಡಬೇಕೆಂದು ಬಯಸುತ್ತಾನೆ (ವಚನ 16–19).

   ಈ. ತಾನು ಪರಿಪೂರ್ಣನೆಂದು ಯೋಬನು ಹೇಳುವುದಿಲ್ಲ. ಆದರೆ ಈ ರೀತಿ ದೇವರ ದಂಡನೆಯನ್ನು ಹೊಂದತಕ್ಕ ಯಾವುದೇ ಪಾಪ ಮಾಡಿರಲಿಲ್ಲ (ವಚನ 21), ಬದಲಾಗಿ ದೇವರು ತನ್ನನ್ನು ಕ್ಷಮಿಸಬಹುದಿತ್ತು (ವಚನ 21).

5. ದೇವರ ಕುರಿತಾಗಿ ಯೋಬನ ವರ್ಣನೆ (9:1–20):

   ಅ. ದೇವರು ನೀತಿವಂತನಾಗಿದ್ದಾನೆ ಮತ್ತು ಯಾವ ಮನುಷ್ಯನೂ ಸಹ ಆತನ ಮುಂದೆ ನೀತಿವಂತರಾಗಲು ಸಾಧ್ಯವಿಲ್ಲ (ವಚನ 1).

   ಅ. ದೇವರ ಜ್ಞಾನವು ಮನುಷ್ಯನ ತಿಳುವಳಿಕೆಗೆ ನಿಲುಕದ್ದು, ಹಾಗಾಗಿ ತನ್ನೆಲ್ಲಾ ಪ್ರಶ್ನೆಗಳಿಗೆ ದೇವರು ಉತ್ತರಿಸಬೇಕೆಂದು ಮನುಷ್ಯನು ಹೇಗೆ ನಿರೀಕ್ಷಿಸಲು ಸಾಧ್ಯ (ವಚನ 2–3)?

   ಇ. ದೇವರು ತನ್ನೆಲ್ಲಾ ಸೃಷ್ಟಿಯ ಮೇಲೆ ಸಾರ್ವಭೌಮನಾಗಿದ್ದಾನೆ (ವಚನ 4–10).

   ಈ. ಮನುಷ್ಯರಿಂದ ದೇವರನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ (ವಚನ 11)

   ಉ. ದೇವರ ಮುಂದೆ ಹೇಳಲು ಮನುಷ್ಯನಿಗೆ ಏನೂ ಇಲ್ಲ, ಹಾಗಾಗಿ ಆತನಿಗಿರುವ ಒಂದು ಆಯ್ಕೆಯೆಂದರೆ ಆತನ ಕರುಣೆಗಾಗಿ ದೇವರ ಮುಂದೆ ಬೇಡತಕ್ಕದ್ದಾಗಿದೆ (ವಚನ 15).

6. ಯೋಬನು ದೇವರಿಂದ ಈ ಎರಡು ಸಂಗತಿಗಳನ್ನು ಕೇಳಿಕೊಳ್ಳುತ್ತಾನೆ (13:20–27):

   ಅ. ದೇವರು ತನ್ನನ್ನು ಶಿಕ್ಷಿಸುವುದನ್ನು ನಿಲ್ಲಿಸಬೇಕೆಂದು (ವಚನ 20–21)

   ಆ. ಪುನಃ ದೇವರು ತನ್ನೊಂದಿಗೆ ಮಾತಾಡಬೇಕೆಂದು, ಆಗ ತನ್ನ ಸಂಗತಿಗಳನ್ನು ಆತನ ಮುಂದಿಡಬಹುದೆಂದು ಕೇಳುತ್ತಾನೆ (22–27).

7. 19:23–29 ರಲ್ಲಿ ಯೋಬನು ದೇವರ ನ್ಯಾಯದಲ್ಲಿನ ತನ್ನ ಭರವಸೆಯನ್ನು ಈ ರೀತಿ ವ್ಯಕ್ತಪಡಿಸುತ್ತಾನೆ: ದೇವರು ತನ್ನ ವಿಮೋಚಕನಾಗಿದ್ದಾನೆ. ದೇವರು ನೀತಿಯುತ ನ್ಯಾಯಾಧಿಪತಿಯಾಗಿದ್ದಾನೆ.

8. 27:1–6 ರಲ್ಲಿ ತನ್ನ ನ್ಯಾಯವನ್ನು ತಪ್ಪಿಸಿದಕ್ಕಾಗಿ ದೇವರನ್ನು ದೂಷಿಸುತ್ತಾನೆ (ವಚನ 1).

9. 27:1–6 ರಲ್ಲಿ ಯೋಬನು ತಾನು ನೀತಿವಂತನೆಂಬುದಾಗಿ ಸಾಧಿಸಿಕೊಳ್ಳುತ್ತಾನೆ.

10. ಅಧ್ಯಾಯ 25 ರಲ್ಲಿ ಯಾರೊಬ್ಬರೂ ಸಹ ದೇವರ ಮುಂದೆ ನೀತಿವಂತರಲ್ಲವೆಂದು ಬಿಲ್ದದನು ಹೇಳುತ್ತಾನೆ. ಬಿಲ್ದದನು ಹೇಳುವುದು ತಪ್ಪೆಂದು ಯೋಬನು ಹೇಳುತ್ತಾನೆ (27:5). ತಾನು ಯಥಾರ್ಥನಲ್ಲ ಮತ್ತು ದೇವರ ಮುಂದೆ ನೀತಿವಂತನಲ್ಲ ಎಂಬುದನ್ನು ಯೋಬನು ಒಪ್ಪಿಕೊಳ್ಳುವುದಿಲ್ಲ (27:5–6).

11. ತನ್ನ ಬಾಧೆಗೆ ಯೋಬನ ಪ್ರತಿಕ್ರಿಯೆ: 1:11 ಮತ್ತು 2:5 ರಲ್ಲಿ ಕಷ್ಟ ಮತ್ತು ಹತಾಶೆಯ ಸಮಯದಲ್ಲಿ ಯೋಬನು ದೇವರನ್ನು ಶಪಿಸುವನೆಂದು ಸೈತಾನನು ಹೇಳುತ್ತಾನೆ. ಆದರೆ ಆತನು ಹೇಳುವುದು ತಪ್ಪೆಂಬುದಾಗಿ ಯೋಬನು ಸಾಬೀತುಪಡಿಸುತ್ತಾನೆ. ಯೋಬನು ಎಂದಿಗೂ ಸಹ ದೇವರನ್ನು ಶಪಿಸುವುದಿಲ್ಲ, ಆದರೆ ಕಾರಣವಿಲ್ಲದೆ ದೇವರು ತನ್ನನ್ನು ಶಿಕ್ಷಿಸಿದ್ದಾನೆ ಮತ್ತು ತನ್ನ ವ್ಯಾಜ್ಯವನ್ನು ಆತನು ಕೇಳುತ್ತಿಲ್ಲವೆಂದು ಯೋಬನು ಹೇಳುತ್ತಾನೆ.

12. ತನ್ನ ಸ್ನೇಹಿತರಿಗಿಂತಲೂ ದೇವರ ಕುರಿತಾಗಿನ ಯೋಬನ ತಿಳುವಳಿಕೆಯು ವಿಭಿನ್ನವಾಗಿದೆ:

    ಅ. ಕಾರಣಕ್ಕೆ ಪರಿಣಾಮವನ್ನು ಕೊಡುವವನೆಂಬುದಾಗಿ ಯೋಬನ ಸ್ನೇಹಿತರು ದೇವರನ್ನು ಕಾಣುತ್ತಾರೆ. ಅಂದರೆ ನೀನು ಒಳ್ಳೆಯವನಾಗಿ ವರ್ತಿಸಿದರೆ ದೇವರು ನಿನಗೆ ಒಳ್ಳೆಯದನ್ನು ಮಾಡುತ್ತಾನೆ. ನೀನು ಪಾಪವನ್ನು ಮಾಡುವುದಾದರೆ ಆಗ ದೇವರು ನಿನ್ನನ್ನು ಶಿಕ್ಷಿಸಿ ನಿನ್ನ ಜೀವನವನ್ನು ಸಂಕಟಕರವಾಗಿ ಮಾಡುತ್ತಾನೆ.

    ಆ. ಯೋಬನ ದೃಷ್ಟಿಯಲ್ಲಿ ದೇವರು ದೈವಸ್ವರೂಪನು. ಆತನು ಮನುಷ್ಯರಿಗಿಂತಲೂ ಅತ್ಯುನ್ನತನಾಗಿದ್ದಾನೆ. ಹಾಗಾಗಿ ಮನುಷ್ಯರಿಗೆ ಆತನು ಪೂರ್ಣವಾಗಿ ತಿಳಿದುಕೊಳ್ಳಲು ಆಗುವುದಿಲ್ಲ. ಮನುಷ್ಯನು ಕೇವಲ ದೇವರ ಬಳಿಯಲ್ಲಿ ಬೇಡಿಕೊಂಡು ಕರುಣೆ, ದಯೆಯನ್ನು ಆತನಿಂದ ಹೊಂದಿಕೊಳ್ಳಬಹುದು.

13. –

14. ಯೇಸು ಒಬ್ಬ ಪರಿಪೂರ್ಣವಾದ ಸ್ನೇಹಿತ ಮತ್ತು ಮಧ್ಯಸ್ಥನಾಗಿದ್ದಾನೆ (ಇಬ್ರಿಯ 4:14–16):

    ಅ. ಯೇಸುವು ಈ ಲೋಕದಲ್ಲಿ ಜೀವಿಸಿದಾಗ ನಮ್ಮಂತೆ ಇದ್ದನು, ಹಾಗಾಗಿ ಆತನು ನಮ್ಮ ಪರಿಸ್ಥಿತಿ ಮತ್ತು ಬಲಹೀನತೆಗಳನ್ನು ಅರಿತುಕೊಳ್ಳುತ್ತಾನೆ.

    ಆ. ಆದರೆ ಆತನು ನಮ್ಮಂತೆ ಅಲ್ಲ, ಯಾಕೆಂದರೆ ಆತನು ಪಾಪರಹಿತನು.

    ಇ. ಹಾಗಾಗಿ ಆತನೊಬ್ಬ ಪರಿಪೂರ್ಣ ಮಹಾಯಾಜಕನಾಗಿದ್ದಾನೆ. ಆತನ ಮೂಲಕ ನಾವು ಕಷ್ಟ ಮತ್ತು ಬಾಧೆಯ ಸಮಯಗಳಲ್ಲಿ ಕೃಪೆ ಮತ್ತು ಕರುಣೆಗಾಗಿ ದೇವರನ್ನು ಸಂಧಿಸಬಹುದು.

15. ನಾವು ಬಾಧೆಪಡುವಾಗ ಯೇಸು ಕ್ರಿಸ್ತನನ್ನು ತಿಳುಕೊಳ್ಳುವುದು ನಮಗೆ ಸಹಾಯಕವಾಗುತ್ತದೆ:

    ಅ. ಯೇಸು ಕ್ರಿಸ್ತನು ನಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಬಾಧೆಪಟ್ಟನಿಮಿತ್ತ ಆತನು ನಮ್ಮನ್ನು ಅರ್ಥಮಾಡಿಕೊಳ್ಳುತ್ತಾನೆ.

    ಆ. ನಮ್ಮನ್ನು ಪೋಷಿಸಲು, ಬಲಪಡಿಸಲು ಮತ್ತು ಮಾರ್ಗದರ್ಶಿಸಲು ಪವಿತ್ರಾತ್ಮನ ಮೂಲಕ ಯೇಸುವು ಯಾವಾಗಲು ನಮ್ಮೊಂದಿಗೆ ಇರುತ್ತಾನೆ. ಹಾಗಾಗಿ ಬಾಧೆಯ ಸಮಯದಲ್ಲಿ ಸಹಾಯಕ್ಕಾಗಿ ನಾವು ಧೈರ್ಯವಾಗಿ ದೇವರ ಬಳಿ ಬರಬಹುದು.

    ಇ. ಯೇಸು ಕ್ರಿಸ್ತನು ದೇವರ ಬಲಗಡೆಯಲ್ಲಿ ಕೂತುಕೊಂಡು ನಮಗಾಗಿ ಬೇಡುವ ಒಬ್ಬ ಮಹಾಯಾಜಕನಾಗಿದ್ದಾನೆ (ರೋಮಾ. 8:34).

ಟಿಪ್ಪಣಿಗಳು

ತನ್ನ ಸ್ನೇಹಿತರ ದೂಷಣೆಗೆ ಯೋಬನ ಉತ್ತರ

ಈ ಅಧ್ಯಯನದಲ್ಲಿ ಯೋಬನು ತನ್ನ ಸ್ನೇಹಿತರಿಗೆ ಉತ್ತರಿಸುವುದನ್ನು ನಾವು ನೋಡಿದೆವು. ತನ್ನ ಬಾಧೆಗಾಗಿ ತೀರ್ಮಾಮಾಡಲೂ ತಾನೇನು ಅಂತಹ ತಪ್ಪು ಮಾಡಿಲ್ಲವೆಂದು ಆತನು ಹೇಳುತ್ತಾನೆ. ಯಾವುದೇ ಗುಪ್ತಪಾಪವೇ ತನ್ನ

ಬಾಧೆಗೆ ಕಾರಣವೆಂಬುದನ್ನು ಆತನು ಅಲ್ಲಗಳೆಯುತ್ತಾನೆ. ತಾನೇನು ಪರಿಪೂರ್ಣನೆಂಬುದಾಗಿ ಯೋಬನು ಹೇಳುತ್ತಿಲ್ಲ, ಆದರೆ ತಾನು ಹಾದು ಹೋಗುತ್ತಿರುವ ಬಾಧೆಯ ಬಗ್ಗೆ ತೀರ್ಮಾನಕೊಡುವಂತ ಕೆಟ್ಟ ಕೆಲಸವನ್ನು ತಾನೇನೂ ಮಾಡಿಲ್ಲವೆಂಬುದಾಗಿ ಹೇಳುತ್ತಾನೆ.

ಇದು ಯೋಬನನ್ನು ಒಂದು ಹತಾಶೆಯ ಪರಿಸ್ಥಿತಿಯಲ್ಲಿಡುತ್ತದೆ. ಒಂದುವೇಳೆ ಯೋಬನ ಸ್ನೇಹಿತರು ಮಾಡುವ ಆರೋಪವು ಸತ್ಯವಾಗಿದ್ದರೆ ಆತನು ತನ್ನ ಪ್ರಸ್ತುತ ಸನ್ನಿವೇಶವನ್ನು ಸುಲಭವಾಗಿ ಬಗೆಹರಿಸಬಹುದಿತ್ತು. ಕೇವಲ ಆತನು ಪಾಪದರಿಕೆ ಮಾಡಿ ಪಶ್ಚಾತ್ತಾಪಪಟ್ಟರೆ ಸಾಕಿತ್ತು, ಪುನಃ ತನ್ನ ಪೂರ್ವಸ್ಥಿತಿಯನ್ನು ಪಡೆಯಬಹುದಿತ್ತು. ಇದನ್ನೇ ಎಲೀಫಜನು ಹೇಳಿದ್ದನು (5:17–27). ಆದರೆ ಇದು ಯೋಬನಿಗೆ ಅಷ್ಟು ಸುಲಭವಾಗಿರಲಿಲ್ಲ. ಅರಿಕೆ ಮಾಡುವಂಥದ್ದು ಏನೂ ಇಲ್ಲವೆಂದು ಯೋಬನಿಗೆ ತಿಳಿದಿತ್ತು. ಆತನಿಗೆ ಉಳಿದಿರುವುದು ತನ್ನ ಸಂಕಟಕ್ಕಾಗಿ ಕೇವಲ ಗೋಳಾಡುವುದು (6:2–3), ದೇವರು ತನ್ನ ಜೀವನವನ್ನು ಅಲ್ಪವಾಗಿಸಲೆಂದು ಬೇಡುವುದು (6:8–9) ಮತ್ತು ತನಗೆ ದೇವರು ಯಾಕೆ ಈ ರೀತಿ ಮಾಡಿದನೆಂದು ಯಾತನೆ ಪಡುವುದಾಗಿತ್ತು (7:20–21).

ಯೋಬನ ಹತಾಶೆ

ತನ್ನ ಬಾಧೆಯಲ್ಲಿ ಯೋಬನು ನಮ್ಮಂತೆಯೇ ಭಾವನಾತ್ಮಕವಾಗಿರುವುದನ್ನು ನಾವು ಕಾಣಬಹುದು.

ಅನೇಕ ವಿಧಗಳಲ್ಲಿ ಯೋಬನು ಹತಾಶೆಪಡುತ್ತಾನೆ:

ಮೊದಲನೇಯದಾಗಿ, ಯೋಬನಿಗೆ ಒಬ್ಬ ನಿಜವಾದ ಸ್ನೇಹಿತನ ಅಗತ್ಯತೆ ಇತ್ತು. 6:14–15 ರಲ್ಲಿ, ಯೋಬನು **"**ಒಬ್ಬನು ಮನಗುಂದಿ ಸರ್ವಶ್ತನ ಮೇಲಣ ಭಯಭಕ್ತಿಯನ್ನು ಬಿಡುವವನಾಗಿದ್ದರೂ ಅವನ ಮಿತ್ರನು ಅವನಿಗೆ ದಯೆ ತೋರಿಸತಕ್ಕದ್ದು. ನನ್ನ ಸಹೋದರರಾದರೋ ತೊರೆಯ ಹಾಗೂ ಪ್ರವಾಹವು ಹಾದುಹೋಗಿ ಬತ್ತಿದ ಹಳ್ಳದ ಹಾಗೂ ದ್ರೋಹಿಗಳಾಗಿದ್ದಾರೆ**"** ಎಂದು ಹೇಳುತ್ತಾನೆ. ಆದ್ದರಿಂದ ಯೋಬನ ದುಃಖವು ಹೆಚ್ಚಾಗುತ್ತದೆ ಏಕೆಂದರೆ ಅವನು ಒಂಟಿಯಾಗಿದ್ದಾನೆ. ಅವನ ಸ್ನೇಹಿತರ **"**ನದಿಯಂತೆ, ಧಾರಕಾರ ಹೊಳೆಗಳಿಗಿಂತ**"** ತನ್ನ ಪಕ್ಕದಲ್ಲಿ ನಿಲ್ಲುವ ಸ್ನೇಹಿತ ಅವನಿಗೆ ತೀರಾ ಅಗತ್ಯವಾಗಿದೆ. ಅದಕ್ಕಿಂತ ಹೆಚ್ಚಾಗಿ, ಯೋಬನಿಗೆ ಅವನ ಬಗ್ಗೆ ಸಹಾನುಭೂತಿ ಹೊಂದಬಲ್ಲ, ತನ್ನ ಸ್ಥಾನದಲ್ಲಿರುವುದು ಹೇಗಿರುತ್ತದೆ ಎಂದು ತಿಳಿದಿರುವ, ಯಾವುದೇ ಸ್ಪಷ್ಟ ಕಾರಣವಿಲ್ಲದೆ ದೊಡ್ಡ ನಷ್ಟವನ್ನು ಅನುಭವಿಸಿದ ಸ್ನೇಹಿತನ ಅಗತ್ಯವಿದೆ.

ಎರಡನೇಯದಾಗಿ, ತನ್ನ ಪರವಾಗಿ ದೇವರ ಮುಂದೆ ನಿಲ್ಲುವ ಒಬ್ಬ ನ್ಯಾಯವಾದಿಯ ಅವಶ್ಯಕತೆಯನ್ನು ಯೋಬನು ವ್ಯಕ್ತಪಡಿಸುತ್ತಾನೆ. ದೇವರು ಮನುಷ್ಯರಂತೆ ಅಲ್ಲವೆಂದು ಆತನಿಗೆ ಗೊತ್ತು (9:32–33). ದೇವರು ನಿಮಗಿಂತ ಎಷ್ಟೋ ವಿಭಿನ್ನನಾಗಿದ್ದಾನೆಂದು ಯೋಬನು ಹತಾಶೆಪಡುತ್ತಾನೆ. ಹೇಗೆ ಒಬ್ಬ ಸಾಮಾನ್ಯ ಮನುಷ್ಯನು, ಸೃಷ್ಟಿಕರ್ತನೂ ಭೂಮಂಡಲದ ಪಾಲಕನೂ ಆಗಿರುವ ದೇವರೊಂದಿಗೆ ವ್ಯವಹರಿಸಲು ಹೇಗೆ ಸಾಧ್ಯ ಎಂದು ಯೋಚಿಸುತ್ತಾನೆ. ದೇವರು ಮತ್ತು ಮನುಷ್ಯನ ನಡುವಿನ ಅಂತರವನ್ನು ತುಂಬಲು ತನಗೊಬ್ಬ ಮಧ್ಯವರ್ತಿ ಬೇಕೆಂದು ಯೋಬನು ಮನಗಾಣುತ್ತಾನೆ. ಹಾಗಾಗಿ ಯೋಬನಿಗೆ ಒಬ್ಬ ಸ್ನೇಹಿತ ಮತ್ತು ಮಧ್ಯವರ್ತಿಯ ಅವಶ್ಯಕತೆಯಿದೆ.

ಯೋಬನಿಗೆ ಬೇಕಾಗಿರುವುದು **ಯೇಸು ಕ್ರಿಸ್ತನು** ಎಂಬುದಾಗಿ ನಾವು ಕಾಣಬಹುದು.

ಯೋಬ ಉತ್ತರಗಳು 4: ಜ್ಞಾನಕ್ಕಾಗಿ ಮನುಷ್ಯನ ಹುಡುಕಾಟ

ಪ್ರಶ್ನೆಗಳಿಗೆ ಉತ್ತರಗಳು

1. ಜ್ಞಾನೋಕ್ತಿ 3:1–20 ರ ಪ್ರಕಾರ ಜ್ಞಾನವು ಬೆಳ್ಳಿ, ಬಂಗಾರ ಮತ್ತು ಹವಳಕ್ಕಿಂತಲೂ ಅಮೂಲ್ಯವಾದುದ್ದಾಗಿದೆ (ವಚನ 14–15).

2. ಜ್ಞಾನೋಕ್ತಿ 3:1–20 ರ ಪ್ರಕಾರ ಒಬ್ಬ ಜ್ಞಾನಿಯ ಗುಣಲಕ್ಷಣಗಳು:

   ಅ. ಜ್ಞಾನಿಯು ದೇವರ ಆಜ್ಞೆಗಳನ್ನು ಪಾಲಿಸುತ್ತಾನೆ (ವಚನ 1).

   ಆ. ಜ್ಞಾನಿಯು ಪ್ರೀತಿಯುಳ್ಳವನಾಗಿದ್ದು ಮತ್ತು ನಂಬಿಗಸ್ತನಾಗಿರುತ್ತಾನೆ (ವಚನ 2).

   ಇ. ಜ್ಞಾನಿಯು ದೇವರಲ್ಲಿ ಭರವಸವಿಡುತ್ತಾನೆ (ವಚನ 5).

   ಈ. ಜ್ಞಾನಿಗೆ ದೇವರ ಕುರಿತಾದ ತಿಳುವಳಿಕೆಯಿರುತ್ತದೆ (ವಚನ 6).

   ಉ. ಜ್ಞಾನಿಯು ಕೇವಲ ತನ್ನ ದೃಷ್ಟಿಯಲ್ಲಷ್ಟೇ ಜ್ಞಾನಿಯಾಗಿರದೆ ದೇವರಿಗೆ ಭಯಪಡುತ್ತಾನೆ (ವಚನ 7).

   ಋ. ಜ್ಞಾನಿಯು ತನಗಿರುವ ಎಲ್ಲಾ ಸಂಪತ್ತಿನಿಂದ ದೇವರನ್ನು ಸನ್ಮಾನಿಸುತ್ತಾನೆ (ವಚನ 9).

   ಎ. ಜ್ಞಾನಿಯು ದೇವರ ಶಿಕ್ಷೆಯನ್ನು ಸ್ವೀಕರಿಸುತ್ತಾನೆ (ವಚನ 11).

3. ಜ್ಞಾನೋಕ್ತಿ 3:–20 ರ ಪ್ರಕಾರ ಜ್ಞಾನಯುತ ಜೀವಿತದ ಪಲಿತಾಂಶ:

   ಅ. ದೀರ್ಘಾಯಸ್ಸು (2, 16)

   ಆ. ಸುಕ್ಷೇಮ, ಧನಘನತೆ (2, 16)

   ಇ. ದೇವರ ಮತ್ತು ಮನುಷ್ಯರ ದಯೆ (ವಚನ 4, 16)

   ಈ. ಸರಾಗವಾದ ಮಾರ್ಗ, ಸಮಾಧಾನಕರ ಜೀವನ (ವಚನ 6, 17)

   ಉ. ಆರೋಗ್ಯ ಮತ್ತು ಬಲ(ವಚನ 8)

   ಋ. ಒಳ್ಳೆಯ ಬೆಳೆ (ವಚನ 10)

   ಎ. ಆಶೀರ್ವಾದ (ವಚನ 13, 18)

4. ಯೋಬ 1:1–5ರಲ್ಲಿ ಯೋಬನನ್ನು ಜ್ಞಾನಿಗೆ (ಜ್ಞಾನವುಳ್ಳ ವ್ಯಕ್ತಿಗೆ) ಒಂದು ಪರಿಪೂರ್ಣವಾದ ಮಾದರಿಯಾಗಿ ವರ್ಣಿಸಲಾಗಿದೆ:

   ಅ. ಆತನು ತಪ್ಪಿಲ್ಲದವನು ಮತ್ತು ಯಥಾರ್ಥನು (ವಚನ 1). ಹೋಲಿಸಿ 2ಅ, 3ಇ.

   ಅ. ಆತನು ದೇವರಿಗೆ ಭಯಪಡುವವನು (ವಚನ 1) ಹೋಲಿಸಿ ನೋಡಿ 2ಇ

   ಇ. ಕೆಟ್ಟದ್ದನು ನಿರಾಕರಿಸುವವನು (ವಚನ 1)

   ಈ. ಪೂರ್ಣದೇಶದಲ್ಲೇ ಆತನು ಬಹುಪ್ರಸಿದ್ಧನು (ವಚನ 3)

   ಉ. ಆತನು ಬಹುಧನವಂತನು (ವಚನ 3).

   ಋ. ದೇವರಿಗೆ ಭಕ್ತಿತೋರಿಸುವವನು (ವಚನ 5)

5. ಬೆಳ್ಳಿ, ಚಿನ್ನ, ಕಬ್ಬಿಣ, ತಾಮ್ರ ಮತ್ತು ಇಂದ್ರನೀಲ ಮಣಿಗಳೆಲ್ಲವೂ ಬೆಲೆಬಾಳುವ ವಸ್ತುಗಳಾಗಿವೆ. ಅವನ್ನು ಮಣ್ಣಿನಾಳದಲ್ಲಿ ಕಾಣಬಹುದು (ಯೋಬ 28:1–11).

6. ಮನುಷ್ಯನ ಸಾಧನೆಗಳೆಲ್ಲವೂ ಸಹ ಮನತಟ್ಟುವಂಥವುಗಳು (ಯೋಬ 28:1–11). ಆತನು ಭೂಮಿಯಲ್ಲಿನ ನಿಧಿಗಳೆಲ್ಲವನ್ನು ಸಹ ಹುಡುಕಿ ಕಂಡುಹಿಡಿಯುತ್ತಾನೆ. ಆದರೆ ಆತನು ಈ ಸಂಪತ್ತುಗಳನ್ನು ಅಗೆದು ಬೆಳಕಿಗೆ ತರುತ್ತಾನೆ.

7. ಯೋಬ 28:12–28 ರಲ್ಲಿ ಜ್ಞಾನದ ಬೆಲೆಯನ್ನು ಚರ್ಚಿಸಲಾಗಿದೆ. ಜ್ಞಾನದ ಕ್ರಯವು ಮನುಷ್ಯನ ತಿಳುವಳಿಕೆಗೂ ಮೀರಿದ್ದಾಗಿದೆ (ವಚನ 13). ಇದು ಅಧ್ಯಾಯದ ಮೊದಲ ಭಾಗದಲ್ಲಿ ತಿಳಿಸಲಾದ ಎಲ್ಲಾ ನಿಧಿಗಳಿಗಿಂತಲೂ ಬೆಲೆಬಾಳುವಂಥದ್ದಾಗಿದೆ.

8. ಜ್ಞಾನವನ್ನು ಕೇವಲ ದೇವರ ಮೂಲಕ ಮಾತ್ರ ಕಂಡುಕೊಳ್ಳಬಹುದಾಗಿದೆ (ವಚನ 23). ಜ್ಞಾನದ ಮೂಲಕನೇ ದೇವರು ಎಲ್ಲವನ್ನು ಸೃಷ್ಟಿಸಿದನು (ವಚನ 24–26). ಹಾಗಾಗಿ ಸೃಷ್ಟಿಯ ಸಮಯದಿಂದಲೇ ಜ್ಞಾನವೂ ದೇವರೊಂದಿಗಿತ್ತು. ದೇವರು ತನ್ನ ಸೃಷ್ಟಿಯಿಂದ ಜ್ಞಾನವನ್ನು ಲಕ್ಷಿಸಿದನು, ಸ್ಥಾಪಿಸಿದನು ಮತ್ತು ವಿಮರ್ಶೆಮಾಡಿದನು. (ವಚನ 27). ದೇವರೇ ಜ್ಞಾನವನ್ನು ಕೊಡುವಾತನು.

9. **"ದೇವರಿಗೆ ಭಯಪಡುವುದು"** (28:28) ಎಂದರೆ ನಮ್ಮ ಸೃಷ್ಟಿಕರ್ತನಾದ ದೇವರಿಗೆ ಅಧೀನರಾಗಿ, ಗೌರವದಿಂದ ನಡೆದುಕೊಳ್ಳವುದಾಗಿದೆ. ಇದು ನಿಜವಾದ ಜ್ಞಾನವಾಗಿದೆ.

10. 1 ಕೊರಿಂಥ. 1:18–25 ರ ಪ್ರಕಾರ ಯೇಸುವೇ ನಿಜವಾದ ಜ್ಞಾನವಾಗಿದ್ದಾನೆ.

11. ದೆವರ ಜ್ಞಾನವು ಯೆಹೂದ್ಯರು ಮತ್ತು ಗ್ರೀಕರು ಬಯಸುವ ಜ್ಞಾನಕ್ಕಿಂತಲೂ ವಿಭಿನ್ನವಾದುದ್ದಾಗಿದೆ (1 ಕೊರಿಂಥ. 1:18–5):

    ಅ. ಯೆಹೂದ್ಯರು ಅದ್ಭುತಕಾರ್ಯಗಳನ್ನು ಅಪೇಕ್ಷಿಸುತ್ತಾರೆ. ಹಾಗಾಗಿ ಅವರಿಗೆ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನು ಒಂದು ಅಡ್ಡಿಯಾಗಿದ್ದಾನೆ.

    ಆ. ಗ್ರೀಕರು ಮಾನುಷಿಕವಾದ ಜ್ಞಾನವನ್ನು ಅಪೇಕ್ಷಿಸುತ್ತಾರೆ. ಹಾಗಾಗಿ ಅವರಿಗೆ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನು ಒಂದು ರೀತಿಯ ಮೂರ್ಖತನವೆನಿಸುತ್ತದೆ.

12. ಕೊಲೊಸ್ಸೆ. 2:2–35 ರ ಪ್ರಕಾರ ಜ್ಞಾನ ವಿಧ್ಯಾ ಸಂಬಂಧವಾದ ಎಲ್ಲಾ ನಿಕ್ಷೇಪಗಳು ಕ್ರಿಸ್ತನಲ್ಲಿ ಕಂಡುಬರುತ್ತವೆ.

13. ಯೇಸು ಕ್ರಿಸ್ತನ ಮತ್ತು ಜ್ಞಾನದ ನಡುವಿನ ಸಮಾನಾಂತರತೆ (ಜ್ಞಾನೋಕ್ತಿ 3:19–20 ಅನ್ನು ಕೊಲೊಸ್ಸೆ. 1:15–20 ರೊಂದಿಗೆ ಹೋಲಿಸಿದರೆ): ಜ್ಞಾನದಿಂದ ದೇವರು ಭೂಮ್ಯಾಕಾಶಗಳನ್ನು ಸೃಷ್ಟಿಸಿದನು (ಜ್ಞಾನೋಕ್ತಿಗಳು). ಕ್ರಿಸ್ತನಿಂದ ಎಲ್ಲವೂ ಸೃಷ್ಟಿಸಲ್ಪಟ್ಟವು (ಕೊಲೊಸ್ಸೆ).

ಟಿಪ್ಪಣಿಗಳು

ಜ್ಞಾನದ ಲಕ್ಷಣ

ಸತ್ಯವೇದವು ಜ್ಞಾನದ ಕುರಿತಾಗಿ ಮಾತನಾಡುವುದನ್ನು ನಾವು ಜ್ಞಾನೋಕ್ತಿಗಳಲ್ಲಿ ಕಾಣಬಹುದು. ಇದು ಕೇವಲ ಬೌದ್ಧಿಕ ತಿಳುವಳಿಕೆ ಮತ್ತು ಪುಸ್ತಕದ ಜ್ಞಾನಕ್ಕಿಂತಲೂ ಮಿಗಿಲಾದುದನ್ನು ಸೂಚಿಸುತ್ತದೆ. ಜ್ಞಾನಿಯಾಗಿರುವುದೆಂದರೆ ಚತುರನಾಗಿರುವುದು, ಉತ್ತಮ ಅಂಕಗಳೊಂದಿಗೆ ಪರೀಕ್ಷೆ ಪಾಸಾಗುವುದು ಎದು ಅರ್ಥವಲ್ಲ. ಜ್ಞಾನವು ಪ್ರಾಯೋಗಿಕವಾದ ತಿಳುವಳಿಕೆಯಾಗಿದೆ. ಜ್ಞಾನಿಯಾಗಿರುವುದ ಎಂದರೆ – ಹೇಗೆ ಉತ್ತಮವಾಗಿ ಜೀವಿಸುವುದು ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಜ್ಞಾನವು ದೇವರನ್ನು ಮತ್ತು ಆತನು ಸೃಷ್ಟಿಸಿದ ಜಗತ್ತನ್ನು ಅರಿತುಕೊಳ್ಳುವುದರ ಮೇಲೆ ಆಧರಿತಗೊಂಡಿದೆ. ಕೇವಲ ಆ ತಿಳುವಳಿಕೆಯ ಮೂಲಕ ಮಾತ್ರ ಜ್ಞಾನದ ಜೀವಿತವನ್ನು ಜೀವಿಸಲು ಸಾಧ್ಯ.

ನಿಜವಾದ ಜ್ಞಾನ

ಜ್ಞಾನವು ದೇವರಿಂದ ಬರುತ್ತದೆ. ಅದು ಯೋಬ 20ನೇ ಅಧ್ಯಾಯದಲ್ಲಿ ಮುಖ್ಯ ಅಂಶವಾಗಿದೆ. ದೇವರು ಎಲ್ಲದರ ಸೃಷ್ಟಿಕರ್ತನಾಗಿದ್ದಾನೆ. ಯಾವುದು ವಿವೇಕವುಳ್ಳದ್ದು ಮತ್ತು ಯಾವುದು ಮೂರ್ಖತನ ಎಂಬುದನ್ನು ದೇವರು ಮಾತ್ರ ಬಲ್ಲವನಾಗಿದ್ದಾನೆ. ತನ್ನ ಸೃಷ್ಠಿಯೊಳಗೆ ಉತ್ತಮವಾದ ಜೀವಿತವನ್ನು ಜೀವಿಸುವ ಬಗೆಯನ್ನು ದೇವರು ಮಾತ್ರ ತಿಳಿದವನಾಗಿದ್ದಾನೆ. ಒಬ್ಬನ ಜೀವಿತವನ್ನು ದೇವರಿಗೆ ಒಪ್ಪಿಸಿಕೊಟ್ಟು ಸೃಷ್ಠಿಕರ್ತನಿಗೆ ಗೌರವಯುತವಾಗಿ ಬದುಕುವುದೇ ನಿಜವಾದ ಜ್ಞಾನವಾಗಿದೆ. ಇದು ದೇವರಿಗೆ ಭಯಪಡುವುದಾಗಿದೆ (ವಚನ 28).

ಯೋಬನ ಪುಸ್ತಕದಲ್ಲಿನ ನಿಜವಾದ ಜ್ಞಾನವು ಯಾಕೆ ಬಾಧೆಯುಂಟಾಗುತ್ತದೆ ಎಂಬುದನ್ನು ತಿಳಿಯುವುದಲ್ಲ, ಬದಲಾಗಿ ಯಾಕೆ ಬಾಧೆಗಳು ಸಂಭವಿಸುತ್ತವೆ ಎಂಬುದನ್ನು ಬಲ್ಲವನಾದ ದೇವರನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನವಾಗಿದೆ.

ಬಾಧೆಪಡದೇ ಇರುವುದಕ್ಕಿಂಲೂ ದೇವರನ್ನು ತಿಳಿದುಕೊಳ್ಳುವುದು ಅತೀ ಪ್ರಾಮುಖ್ಯವಾದುದ್ದಾಗಿದೆ. ಅಲ್ಲದೆ ಇದು ಇಡೀ ಯೋಬನ ಪುಸ್ತಕದಲ್ಲಿನ ಒಂದು ಪ್ರಮುಖ ಪಾಠವಾಗಿದೆ.

ಯೇಸು ಮತ್ತು ಜ್ಞಾನ

ಬಾಧೆಪಡುತ್ತಿರುವ ಈ ಲೋಕದಲ್ಲಿ ಯಾಕೆ ಬಾಧೆಪಡುತ್ತೇವೆಂಬುದನ್ನು ತಿಳಿಯುವುದಕ್ಕಿಂತ, ಎಲ್ಲಾ ಜ್ಞಾನಗಳ ಮೂಲನಾದ ದೇವರನ್ನು ಅರಿತುಕೊಂಡು ಆತನಿಗೆ ಭಯಪಡುವುದು ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ ಎಂಬುದನ್ನು ನಾವು ಯೋಬ 28ನೇ ಅಧ್ಯಾಯದಲ್ಲಿ ಕಾಣುತ್ತೇವೆ. ಇದರ ಒಳನೋಟವು ಯೇಸು ಕ್ರಿಸ್ತನ ಪ್ರಾಮುಖ್ಯತೆಯನ್ನು ಮುಂತಿಳಿಸುತ್ತದೆ. ಯೇಸು ಕ್ರಿಸ್ತನ ಮೂಲಕ ಮಾತ್ರ ನಾವು ದೇವರನ್ನು ಸಂಪೂರ್ಣವಾಗಿ ತಿಳಿದುಕೊಳ್ಳುತ್ತೇವೆ.

ಅಧ್ಯಯನ 2 ರಲ್ಲಿ ಅನ್ಯಾಯವಾಗಿ ಬಾಧೆಪಡುವುದಕ್ಕೆ ಯೇಸು ಕ್ರಿಸ್ತನು ಒಂದು ಅತ್ಯುತ್ತಮ ಉದಾಹರಣೆಯಾಗಿದ್ದನೆಂಬುದನ್ನು ಕಾಣುತ್ತೇವೆ (ನೋಡಿ 1 ಪೇತ್ರ. 2:19–23). ಆದರೆ ಕ್ರಿಸ್ತನಲ್ಲಿ ಅದರಲ್ಲೂ ವಿಶೇಷವಾಗಿ ಆತನ ಶಿಲುಬೆಗೆ ಏರಿಸುವಿಕೆಯಲ್ಲಿ ದೇವರ ಜ್ಞಾನದ ಒಂದು ಅತ್ಯುನ್ನತದ ಮಾದರಿಯನ್ನು ನಾವು ಕಾಣುತ್ತೇವೆ (ನೋಡಿ 1 ಕೊರಿಂಥ. 1:18–25). ಲೋಕದ ಎಲ್ಲಾ ಜ್ಞಾನಗಳಿಗೆ ವಿರೋಧವಾಗಿ ದೇವರು ಜನರನ್ನು ರಕ್ಷಿಸಲು ಮತ್ತು ಶಿಲುಬೆಯಲ್ಲಿನ ತನ್ನ ಮಗನ ಬಲಿದಾನದ ಮೂಲಕ ತನ್ನನ್ನು ಅವರು ಅರಿತುಕೊಳ್ಳಬೇಕೆಂದು ಬಯಸಿದನು (1 ಕೊರಿಂಥ. 1:18–2:10). ಯೇಸು ಕ್ರಿಸ್ತನ ಮೂಲಕ ನಾವು ದೇವರೊಂದಿಗೆ ಸಂಧಾನವಾಗುತ್ತೇವೆ ಮತ್ತು ಜೀವಿತದ ಪರಿಪೂರ್ಣತೆಗೆ ಸೇರುತ್ತೇವೆ (ಕೊಲೊಸ್ಸೆ. 2:9–10). ಕ್ರಿಸ್ತನಲ್ಲಿ ನಾವು ಎಲ್ಲಾ ಆತ್ಮೀಕ ಆಶೀರ್ವಾದಗಳನ್ನು ಅನುಭವಿಸಬಹುದು (ಎಫೆಸ. 1:3). ಕ್ರಿಸ್ತನಲ್ಲಿ ನಮ್ಮ ಜೀವಿತಕ್ಕೆ ಮತ್ತು ಭಕ್ತಿಗೆ ಬೇಕಾಗಿರುವುದೆಲ್ಲವೂ ಸಹ ಉಂಟು (2 ಪೇತ್ರ. 1:3). ಇವು ಸುಂದರವಾದ ಸತ್ಯ. ಯೇಸು ಕ್ರಿಸ್ತನನ್ನು ನಾವು ತಿಳಿದುಕೊಳ್ಳುವಾಗ ದೇವರ ಯೋಜನೆ ಮತ್ತು ಸೃಷ್ಟಿಗಾಗಿನ ಆತನ ಗುರಿಯ ಬಳಿಯಲ್ಲಿ ಇರುವವರಾಗಿದ್ದೇವೆ. ಈ ನಿಮಿತ್ತವೇ ಯೇಸು ಕ್ರಿಸ್ತನು ದೇವರ ಜ್ಞಾನವಾಗಿದ್ದಾನೆ.

ಯೋಬ ಉತ್ತರಗಳು 5: "ನಾನು ನಿರ್ಮಲನು"

ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 29ರಲ್ಲಿ ತಾನು ದುರಂತಕ್ಕೆ ಈಡಾಗುವುದಕ್ಕಿಂತ ಮುಂಚಿನ ತನ್ನ ಜೀವಿತವನ್ನು ನೆನಪು ಮಾಡಿಕೊಳ್ಳುತ್ತಾನೆ. ಆತನು ಈ ಹಿಂದೆ ಅನುಭವಿಸಿದ ಮತ್ತು ಈಗ ವಂಚಿತವಾಗಿರುವ ಆಶೀರ್ವಾದಗಳ ಸಾರಾಂಶ ಇಂತಿದೆ:

   ಅ. ದೇವರ ಆಶೀರ್ವಾದ ಮತ್ತು ಸಾನಿಧ್ಯ, ಸ್ನೇಹ, ರಕ್ಷಣೆ, ಮಕ್ಕಳು (ವಚನ 1–6)

   ಆ. ಸಮಾಜದಲ್ಲಿ ಗೌರವ (ವಚನ 7–11)

   ಇ. ಯೋಬನ ಕರುಣೆಯ ಕಾರ್ಯ (ವಚನ 12–18)

   ಈ. ದೀರ್ಘ ಮತ್ತು ಆಶೀರ್ವದಿಸಲ್ಪಟ್ಟ ಜೀವಿತದ ನಿರೀಕ್ಷೆ (ವಚನ 19–20)

   ಉ. ಸಾಮಾಜಿಕ ಸ್ಥಾನಮಾನ (ವಚನ 21–25)

2. ಅಧ್ಯಾಯ 30 ರಲ್ಲಿ ತನ್ನ ಪ್ರಸ್ತುತ ಪರಿಸ್ಥಿತಿಗಾಗಿ ಯೋಬನು ಪ್ರಲಾಪಿಸುತ್ತಾನೆ. ಆತನ ಎರಡು ಮುಖ್ಯ ಕಾರಣಗಳು:

   ಅ. ಆತನು ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಕಳಕೊಂಡಿದ್ದಾನೆ (ವಚನ 1–15).

   ಆ. ಆತನು ದೇವರ ರಕ್ಷಣೆ (ಭದ್ರತೆ) ಮತ್ತು ಸ್ನೇಹವನ್ನು ಕಳಕೊಂಡಿದ್ದಾನೆ (ವಚನ 16–31).

3. ಅಧ್ಯಾಯ 31 ರಲ್ಲಿ ಯೋಬನು ತನ್ನ ನಿರ್ಮಲತ್ವವನ್ನು ತಿಳಿಸುತ್ತಾನೆ. ಆತನು ಹೇಳುವ ಅಂಶಗಳು ಇಂತಿವೆ:

   ಅ. ಆತನು ಮೋಹಿಸುವಾತನಾಗಿರಲಿಲ್ಲ (ವಚನ 1–8).

   ಆ. ತನ್ನ ವಿವಾಹದಲ್ಲೂ ಆತನು ಅಪನಂಬಿಗಸ್ತನಾಗಿರಲಿಲ್ಲ (ವಚನ 9–12).

   ಇ. ತನ್ನ ಸೇವಕರೊಂದಿಗೆ ಆತ ನ್ಯಾಯಯುತವಾಗಿದ್ದನು (ವಚನ 13–15).

   ಈ. ಬಡವರ, ವಿಧವೆಯರ ಮತ್ತು ಅನಾಥರ ಇಷ್ಟವನ್ನು ಆತನು ನೆರವೇರಿಸಿದನು (ವಚನ 16–25).

   ಉ. ತನ್ನ ಸಂಪತ್ತು ದೇವರಿಗಿಂತ ಮಿಗಿಲಾದದ್ದು ಎಂದು ಆತನು ಪರಿಗಣಿಸಲಿಲ್ಲ (ವಚನ 24–25).

   ಊ. ಆತನು ಎಂದೂ ಆಕಾಶಕಾಯಗಳನ್ನು ಆರಾಧಿಸಲಿಲ್ಲ (ವಚನ 26–28).

   ಋ. ತನ್ನ ವೈರಿಗಳೊಂದಿಗೆ ಆತನು ಉತ್ತಮವಾಗಿ ನಡಕೊಂಡನು (ವಚನ 29–30).

   ಎ. ಪರಸ್ಥಳದವರು ಬಂದಾಗ ಉಪಚರಿಸುತ್ತಿದ್ದನು (ವಚನ 31–32).

   ಏ. ಆತನ ಜೀವಿತವು ಯಥಾರ್ಥವಾಗಿಯೂ ಮುಕ್ತವಾಗಿಯೂ ಇತ್ತು (ವಚನ 33–34).

   ಐ. ಸಾಮಾಜಿಕ ನ್ಯಾಯಕ್ಕಾಗಿ ಸಂಪೂರ್ಣವಾಗಿ ತನ್ನನ್ನು ಸಮರ್ಪಿಸಿಕೊಂಡವನಾಗಿದ್ದನು (ವಚನ 38–40).

4. 31:35–37 ರಲ್ಲಿನ ಯೋಬನ ಮಾತುಗಳು ನ್ಯಾಯಕ್ಕಾಗಿ ಆತನ ಅಂತಿಮ ಮೊರೆಯನ್ನು ಒಳಗೊಂಡಿವೆ. ಪುನಃ ಯೋಬನು ತನಗೊಬ್ಬ ಮಧ್ಯವರ್ತಿಯ ಅಗತ್ಯವಿದೆಯೆಂಬ ಇಂಗಿತವನ್ನು ವ್ಯಕ್ತಪಡಿಸುತ್ತಾನೆ (ಹೋಲಿಸಿ 9:33, 16:19–21).

5. ಅಧ್ಯಾಯ 29–31 ರಲ್ಲಿ ದೇವರ ಕುರಿತಾದ ಯೋಬನ ತಿಳುವಳಿಕೆ ಮತ್ತು ಭಾವನೆಗಳು:

   ಅ. ಈ ಹಿಂದೆ ದೇವರು ತನ್ನೊಂದಿಗಿದ್ದನು ಮತ್ತು ಆಶೀರ್ವದಿಸಿದ್ದನೆಂದು ಯೋಬನಿಗೆ ತಿಳಿದಿತ್ತು. ದೇವರು ಆತನೊಂದಿಗೆ ಒಬ್ಬ ಸ್ನೇಹಿತನಂತಿದ್ದನು (29:2–6).

   ಆ. ಈ ಪುಸ್ತುತ ನೋವುಗಳೆಲ್ಲವನ್ನು ದೇವರೇ ಅನುಮತಿಸಿದನೆಂದು ಆತನು ತಿಳಿದುಕೊಳ್ಳುತ್ತಾನೆ. ದೇವರೇ ತನ್ನನ್ನು ಬಾಧಿಸುತ್ತಿದ್ದಾನೆಂದು ಆತನು ಭಾವಿಸುತ್ತಾನೆ (30:11, 18–23).

   ಇ. ದೇವರು ತನ್ನ ಕೂಗಿಗೆ ಪ್ರತಿಕ್ರಿಯಿಸುತ್ತಿಲ್ಲವೆಂದು ಆತನು ಭಾವಿಸುತ್ತಾನೆ (30:20).

   ಈ. ದೇವರು ತೀರ್ಮಾಮಾಡುವುದರಲ್ಲಿ ನೀತಿವಂತನಾಗಿದ್ದಾನೆಂದು ಆತನಿಗೆ ತಿಳಿದಿದೆ (31:2–3, 6, 14, 23, 28).

ಉ. ತಾನು ದೇವರನ್ನು ಸಂಧಿಸಿ, ತನ್ನ ನಿರ್ದೋಷತ್ವದ ಬಗ್ಗೆ ಆತನ ಮನವೊಲಿಸಲು ತನ್ನಿಂದ ಸಾಧ್ಯವಿಲ್ಲವೆಂದು ಆತನು ಭಾವಿಸುತ್ತಾನೆ. ಹಾಗಾಗಿ ಆತನಿಗೆ ಒಬ್ಬ ಮಧ್ಯಸ್ಥನು ಬೇಕಾಗಿದ್ದಾನೆ (31:35).

6. ಅಧ್ಯಾಯ 29–31 ರಿಂದ ಉಪಮೆ/ರೂಪಾಲಂಕಾರಗಳಿಗೆ ಐದು ಉದಾಹರಣೆಗಳು:

ಅಧ್ಯಾಯ 29:

ಅ. **"ಆತನ ದೀಪವು ನನ್ನ ತಲೆಯ ಮೇಲೆ ಪ್ರಕಾಶಿಸುತಿತ್ತು"** (ವಚನ 3): ದೇವರ ಆಶೀರ್ವಾದ ಮತ್ತು ಆತನ ಮಾರ್ಗದರ್ಶನವು ನನ್ನೊಂದಿಗಿತ್ತು.

ಆ. **"ನನ್ನ ಹೆಜ್ಜೆಗಳು ಮೊಸರಿನಲ್ಲಿ ಮುಣುಗುತ್ತಿದ್ದವು"** (ವಚನ 6): ದೇವರು ನನ್ನನ್ನು ಆಶೀರ್ವದಿಸಿದ್ದನು.

ಇ. **"ಬಂಡೆಯು ನನಗೋಸ್ಕರ ಎಣ್ಣೆಯನ್ನು ಪ್ರವಾಹವಾಗಿ ಸುರಿಸುತ್ತಿತ್ತು"** (ವಚನ 6): ದೇವರು ನನ್ನನ್ನು ಆಶೀರ್ವದಿಸಿದ್ದನು.

ಈ. **"ನಾನು ಧರ್ಮವನ್ನು ಧರಿಸಿಕೊಂಡೆನು, ಧರ್ಮವು ನನ್ನನ್ನು ಧರಿಸಿತು"** (ವಚನ 14): ನನ್ನ ನೀತಿ ಮತ್ತು ನ್ಯಾಯಗಳು ಪ್ರತಿಯೊಬ್ಬರಿಗೂ ಸಹ ಸ್ಪಷ್ಟವಾಗಿದ್ದವು.

ಉ. **"ಅನ್ಯಾಯಗಾರನ ಕೋರೆಗಳನ್ನು ಮುರಿದು ಅವನ ಹಲ್ಲುಗಳಿಂದ ಬೇಟೆಯನ್ನು ಕಿತ್ತು ತರುತ್ತಿದ್ದೆನು"** (ವಚನ 17): ದುಷ್ಟರಿಂದ ಜನರನ್ನು ನಾನು ಕಾಪಾಡುತ್ತಿದ್ದೆನು.

ಅಧ್ಯಾಯ 30

ಅ. **"ತಾನು ಹಾಕಿದ್ದ ಕಟ್ಟನ್ನು ಸಡಿಲಿಸಿ"** (ವಚನ 11): ದೇವರು ಯೋಬನ ಜೀವಿತವನ್ನು ಸಂಪೂರ್ಣವಾಗಿ ಬದಲಿಸಿದ್ದಾನೆ ಮತ್ತು ಆತನಿಂದ ಎಲ್ಲಾ ಮಹಿಮೆಯನ್ನು ತೆಗೆದುಹಾಕಿದ್ದಾನೆ.

ಆ. **"ನನ್ನ ನಾಶನಕ್ಕಾಗಿ ದಿಬ್ಬಹಾಕಿದ್ದಾರೆ"** (ವಚನ 12–13): ಅಂದರೆ ಜನರು ಯೋಬನನ್ನು ವಿರೋಧಿಸುತ್ತಿದ್ದಾರೆ.

ಇ. **"ಅವನು ನುಗ್ಗಿ ಹಾಳುಬೀಳಿನಲ್ಲಿ ನಿಂತಿರುವ ನನ್ನ ಮೇಲೆ ಹೊರಳುತ್ತಾರೆ"** (ವಚನ 14): ಉಪಮೆಯು ಯೋಬನನ್ನು ಜನರು ವಿರೋಧಿಸುತ್ತಾರೆ ಎಂದು ತಿಳಿಸುತ್ತದೆ.

ಈ. **"ನನ್ನನ್ನು ಬಿರುಗಾಳಿಗೆ ಎತ್ತಿ ತೂರಿಬಿಟ್ಟು ಅದರ ಅರ್ಭಟದಲ್ಲಿ ಮಾಯಮಾಡುತ್ತಿ"** (ವಚನ 22): ದೇವರು ತನ್ನನ್ನು ಬಾಧಿಸುತ್ತಿದ್ದಾನೆ ಎಂದು ಯೋಬನು ಭಾವಿಸುತ್ತಾನೆ.

ಉ. **"ನಾನು ನರಿಗಳ ತಮ್ಮನೂ ಉಷ್ಟ್ರಪಕ್ಷಿಗಳ ಗೆಳೆಯನೂ ಆಗಿದ್ದೇನೆ"** (ವಚನ 29): ಯೋಬನು ಈಗ ತೊರೆಯಲ್ಪಟ್ಟವನಾಗಿದ್ದಾನೆ.

ಅಧ್ಯಾಯ 31:

ಅ. **"ನನ್ನ ಕಣ್ಣುಗಳೊಂದಿಗೆ ನಿಬಂಧನೆಯನ್ನು ಮಾಡಿಕೊಂಡಿದ್ದೇನೆ"** (ವಚನ 1): ನನ್ನ ಕಣ್ಣುಗಳಿಂದ ಪಾಪ ಮಾಡುವುದಿಲ್ಲವೆಂದು ನಿಬಂಧನೆ ಮಾಡಿಕೊಂಡಿದ್ದೇನೆ.

ಆ. **"ಒಂದು ವೇಳೆ ನಾನು ಕಪಟದ ಜೊತೆಯಲ್ಲಿ ನಡೆದು ಮೋಸವನ್ನು ಹಿಂಬಾಲಿಸಿ ಓಡಿ ನನ್ನ ನಡತೆಯಲ್ಲಿ ದಾರಿತಪ್ಪಿದ್ದರೆ"** (ವಚನ 6): ಒಂದು ವೇಳೆ ಸುಳ್ಳುಗಾರ/ ಮೋಸಗಾರನಾಗಿದ್ದರೆ.

ಇ. **"ದೇವರು ನನ್ನನ್ನು ನ್ಯಾಯವಾದ ತ್ರಾಸಿನಲ್ಲಿ ತೂಗಿ"** (ವಚನ 5): ದೇವರು ನನಗೆ ನ್ಯಾಯವಾಗಿ ತೀರ್ಪುಮಾಡಲಿ.

ಈ. **"ಇದೇ ನನ್ನ ಕೈಗುರುತು"** (ವಚನ 35): ನಾನು ಹೇಳಿರುವದು ಸತ್ಯವೆಂಬುದಕ್ಕೆ ಗುರುತು.

ಉ. **"ಅದನ್ನು ಹೆಗಲ ಮೇಲೆ ಇಟ್ಟುಕೊಳ್ಳುತ್ತಿದ್ದೆನು, ಕಿರೀಟವನ್ನಾಗಿ ಧರಿಸುತ್ತಿದ್ದೆನು"** (ವಚನ 36): ಅವರ ದೂಷಣೆಗೆ ನಾನು ನಾಚಿಕೆಪಡುವುದಿಲ್ಲ.

7. "ಇಲ್ಲಿಗೆ ಯೋಬನ ಮಾತುಗಳು ಮುಕ್ತಾಯವಾಯಿತು" ಎಂಬ ಪದಗಳೊಂದಿಗೆ ಅಧ್ಯಾಯ 31 ಮುಕ್ತಾಯವಾಗುತ್ತದೆ. ಇನ್ನು ಹೇಳಲು ಯೋಬನಿಗೆ ಏನೂ ಇಲ್ಲವೆಂಬುದಾಗಿ ನಾವು ಇದರಿಂದ ನಿರ್ಣಯಿಸಬಹುದು. ಆತನು ಇಲ್ಲಿ ತನ್ನ ಸ್ನೇಹಿತರೊಂದಿಗೆ ಮತ್ತು ದೇವರೊಂದಿಗೆ ಸಹ ಒಂದು ವ್ಯಾಜ್ಯವಾಡುವ ರೀತಿಯಲ್ಲಿ ಬಿಂಬಿಸಲ್ಪಟ್ಟಿದ್ದಾನೆ.

8. ಅಧ್ಯಾಯ 32 ರಲ್ಲಿ ಎಲೀಹು ಎಂಬ ಒಬ್ಬ ಹೊಸ ವ್ಯಕ್ತಿಯು ಓದುಗರಿಗೆ ಪರಿಚಯಿಸಲ್ಪಡುತ್ತಾನೆ:

   ಅ. ಎಲೀಹು ಇಲ್ಲಿಯವರೆಗೂ ಮಾತಾಡಿರಲಿಲ್ಲ, ಯಾಕೆಂದರೆ ಆತನು ಇನ್ನೂ ಯೌವನಸ್ಥನಾಗಿದ್ದನು (32:4) ಮತ್ತು ಯೋಬನ ಹಿರಿಯ ಸ್ನೇಹಿತರ ಮಧ್ಯೆ ಬಾಯಿಹಾಕುವುದು ಆತನಿಗೆ ಸಮಂಜಸವೆನಿಸಲಿಲ್ಲ (32:6–7).

   ಆ. ಯೋಬನ ಸ್ನೇಹಿತರು ತಮ್ಮ ವಾದವನ್ನು ಸಾರಾಂಶಗೊಳಿಸಲು ಅಥವಾ ನಿರ್ಣಾಯಕವಾಗಿ ತೆಗೆದುಕೊಳ್ಳಲು ಎಲೀಹು ಬಿಡಲಿಲ್ಲ. ಅವರಿಗಿಂತಲೂ ತಾನು ಇನ್ನೂ ಉತ್ತಮವಾಗಿ ಮಾತಾಡಬಲ್ಲೆನೆಂದು ಆತನು ಯೋಚಿಸುತ್ತಾನೆ (32:14–22). ಯೋಬನ ಪಾಪಗಳಿಗಾಗಿ ಆತನನ್ನು ಮನವರಿಕೆಮಾಡುವಲ್ಲಿ ಅವರು ವಿಫಲರಾಗುತ್ತಾರೆ (32:3,12). ಯೋಬನ ಸ್ನೇಹಿತರೊಂದಿಗೆ ಎಲೀಹು ಕೋಪಗೊಳ್ಳುತ್ತಾನೆ (32:3).

   ಇ. ಯೋಬನ ಕುರಿತಾಗಿ ಎಲೀಹುನ ಅಭಿಪ್ರಾಯ: ತನ್ನಲ್ಲಿ ಪಾಪವೇ ಇಲ್ಲವೆಂದು ಯೋಬನು ಹೇಳುವುದು ತಪ್ಪು (33:9–10). ಅಲ್ಲದೇ ದೇವರನ್ನು ಪ್ರಶ್ನಿಸುವುದರ ಮೂಲಕ ಯೋಬನು ದೇವರಿಗೆ ಅಗೌರವ ಸೂಚಿಸಿದ್ದಾನೆ (33:10–13).

9. ಅಧ್ಯಾಯ 36 ಮತ್ತು 37 ರಲ್ಲಿ ಎಲೀಹು ದೇವರ ಪರವಾಗಿ ಮಾತಾಡುತ್ತಾನೆ. 36:1–9 ಮತ್ತು 37:14–24 ರಲ್ಲಿ ಆತನು ದೇವರ ಕುರಿತಾಗಿ ಹೇಳಿದ ಕೆಲವು ಅಂಶಗಳು ಇಂತಿವೆ:

   ಅ. ದೇವರು ಸೃಷ್ಟಿಕರ್ತನಾಗಿದ್ದಾನೆ (36:3).

   ಆ. ದೇವರು ಸರ್ವಶಕ್ತನಾಗಿದ್ದಾನೆ (36:5).

   ಇ. ದೇವರು ನ್ಯಾಯವಂತನಾಗಿದ್ದಾನೆ (36:6–9).

   ಈ. ದೇವರು ತನ್ನ ಸೃಷ್ಟಿಯನ್ನು ಹತೋಟಿಯಲ್ಲಿಟ್ಟುಕೊಂಡಿದ್ದಾನೆ (37:19–16).

   ಉ. ದೇವರು ಮನುಷ್ಯರಿಗಿಂತಲೂ ಉನ್ನತನಾಗಿದ್ದಾನೆ. ಹಾಗೆ ಮನುಷ್ಯನು ಹೇಗೆ ದೇವರನ್ನು ಪ್ರಶ್ನಿಸಲು ಸಾಧ್ಯ (37:14–23)?

   ಊ. ಬದಲಾಗಿ ಮನುಷ್ಯನು ದೇವರನ್ನು ಗೌರವಿಸಬೇಕು (37:24).

ಟಿಪ್ಪಣಿಗಳು

ಅಧ್ಯಾಯ 3 ರಲ್ಲಿ ಯೋಬ ಮತ್ತು ಆತನ ಸ್ನೇಹಿತರ ನಡುವೆ ಪ್ರಾರಂಭವಾದ ವಾದವು ಈಗ ಮುಗಿದಿದೆ. ಎರಡೂ ಕಡೆಯವರು ಸಹ ತಮ್ಮ ವಾದವನ್ನು ಮಂಡಿಸಿದ್ದಾರೆ. ಮತ್ತೊಮ್ಮೆ ಯೋಬನು ತನ್ನ ವ್ಯಥೆಯನ್ನು ವರ್ಣಿಸಿದ್ದಾನೆ ಮತ್ತು ಮತ್ತೊಮ್ಮೆ ದೇವರು ತನಗೆ ಮಾಡಿದ ಅನ್ಯಾಯವನ್ನು ಸಹ ವಿವರಿಸಿದ್ದಾನೆ. ಇನ್ನೊಂದು ಕಡೆಯಲ್ಲಿ ಏನೋ ಆಶ್ಚರ್ಯಕರವಾದ ಸಂಗತಿ ನಡೆದಿದೆ. ಪ್ರತಿಯೊಬ್ಬರ ಮನೋನೇತ್ರವನ್ನು ಬೆಳಗಲು ಮತ್ತು ತಾನು ಹೇಳುವುದೇ ಅತ್ಯುತ್ತಮವಾದ ವಾದವೆನ್ನುತ್ತಾ ಎಲೀಹು ಎಂಬ ವ್ಯಕ್ತಿ ಪ್ರತ್ಯಕ್ಷವಾಗುತ್ತಾನೆ (32:14–18). ಎಲೀಹು ಬಹಳಷ್ಟು ಮಾತನಾಡುತ್ತಾನೆ. ದೇವರ ನೀತಿ ಮತ್ತು ನ್ಯಾಯದ ಪರವಾಗಿ ಆತನು ಹೇಳುವುದು ಸಮಂಜಸವಾದುದ್ದು. ಆದರೆ ಯೋಬನ ಅರಿಕೆ ಮಾಡದ ಪಾಪದ ಕುರಿತಾಗಿ ಆತನು ಹೇಳುವುದು ತಪ್ಪಾಗಿದೆ.

ಹಾಗಾಗಿ ಈ ಎರಡೂ ವಾದಗಳನ್ನು ಲಾಲಿಸಿ ಸಾರಾಂಶಗೊಳಿಸಲಾಗಿದೆ. ಈಗ ನ್ಯಾಯಾಧಿಪತಿಯು ಒಂದು ತೀರ್ಪನ್ನು ಕೊಡುವುದೊಂದೇ ಉಳಿದಿದೆ ದೇವರು ಮಾತನಾಡಲು ಸಮಯ ಬಂದದೆ. ನಮ್ಮ ಮುಂದಿನ ಅಧ್ಯಯನದಲ್ಲಿ ದೇವರು ಏನು ಅನ್ನುತ್ತಾನೆ ಎಂಬುದನ್ನು ನೋಡೋಣ.

ಯೋಬ ಉತ್ತರಗಳು 6: ದೇವರು ಮಾತನಾಡುತ್ತಾನೆ

ಪ್ರಶ್ನೆಗಳಿಗೆ ಉತ್ತರಗಳು

1. ತನ್ನ ಮೊದಲ ಪ್ರತ್ಯುತ್ತರದಲ್ಲಿ ದೇವರು ತನ್ನ ಕುರಿತಾಗಿ ಮತ್ತು ತನ್ನ ಸೃಷ್ಟಿಯ ಕುರಿತಾಗಿ ಮಾತನಾಡುತ್ತಾನೆ (38:1–40:2): ಇದರಲ್ಲಿ ಆತನು ಲೋಕದ ಅಸ್ತಿವಾರ, ನೀರು, ಸೂರ್ಯ, ನಕ್ಷತ್ರಗಳು, ಸಮುದ್ರ, ಭೂಮಿ, ಬೆಳಕು ಮತ್ತು ಕತ್ತಲು, ವಾತಾವರಣ ಮತ್ತು ಅನೇಕ ಬಗೆಯ ಪ್ರಾಣಿಗಳ ಬಗ್ಗೆ ಮಾತನಾಡುತ್ತಾನೆ. "ಆಕ್ಷೇಪಕನು ಸರ್ವಶಕ್ತನ ಸಂಗಡಲೂ ವ್ಯಾಜ್ಯವಾಡುವನೋ? ದೇವರೊಂದಿಗೆ ವಿವಾದ ಮಾಡುವವನು ಇದಕ್ಕೆಲ್ಲಾ ಉತ್ತರಕೊಡಲಿ" ಎಂದು ಯೋಬನಿಗೆ ಸವಾಲಿಡುವುದರೊಂದಿಗೆ ದೇವರು ತನ್ನ ಮಾತನ್ನು ಮುಗಿಸುತ್ತಾನೆ.

2. ಯೋಬನು ತನ್ನ ಜೀವಿತ ಮತ್ತು ಬಾಧೆಗಳನ್ನು ಸರ್ವಶಕ್ತನಾದ ದೇವರ ಬೆಳಕು ಮತ್ತು ಸೃಷ್ಟಿಯ ಮೇಲಣ ಆತನ ನಿಯಂತ್ರಣದಡಿಯಲ್ಲಿ ನೋಡಬೇಕೆನ್ನುವ ಸಲುವಾಗಿ ದೇವರು ಈ ರೀತಿ ಮಾತನಾಡುತ್ತಾನೆ (38:1–41:2).

3. ದೇವರ ಸವಾಲಿನ ಪ್ರಶ್ನೆಗಳಿಗೆ ತನ್ನಲ್ಲಿ ಉತ್ತರವಿಲ್ಲವೆಂಬ ಮನವರಿಕೆಯೊಂದಿಗೆ ಯೋಬನು ದೇವರ ಮೊದಲ ಮಾತಿಗೆ ಪ್ರತಿಕ್ರಿಯಿಸುತ್ತಾನೆ. ದೇವರ ಮುಂದೆ ತನ್ನ ಅಯೋಗ್ಯತೆಯನ್ನು ಸಹ ಆತನು ಅರಿವಿಗೆ ತಂದುಕೊಳ್ಳುತ್ತಾನೆ (42:3–5).

4. ದೇವರು ಮೊದಲಿನಂತೆಯೇ ತನ್ನ ಎರಡನೇ ಮಾತನ್ನು ಪ್ರಾರಂಭಿಸುತ್ತಾನೆ. ಕ್ಲಿಷ್ಟಕರವಾದ ಪ್ರಶ್ನೆಗಳಿಗೆ ಉತ್ತರಿಸಲು ನಡುಕಟ್ಟಿಕೋ ಎಂದು ಆತನು ಯೋಬನಿಗೆ ಹೇಳುತ್ತಾನೆ (40:7).

5. ಯೋಬನ ಕುರಿತಾಗಿ ದೇವರ ಟೀಕೆ ಏನೆಂದರೆ – ದೇವರ ನ್ಯಾಯಕ್ಕೆ ಸವಾಲಿಡಲು ಯೋಬನು ಮೀತಿಮೀರಿದ ಭರವಸವುಳ್ಳವನಾಗಿದ್ದಾನೆ ಎಂಬುದಾಗಿದೆ (40:6–14).

6. ನೀರಾನೆ (40:15–24) ಮತ್ತು ಮೊಸಳೆ (41:1–34)ಯ ಕುರಿತಾದ ಸಂಗತಿಯು ಯೋಬನ ಮೇಲೆ ದೇವರ ಟೀಕೆಗೆ ಒಂದು ಉದಾಹರಣೆಯಾಗಿದೆ (ನೋಡಿ 41:10–1): ಇಂತಹ ಭಯಂಕರ ಶಕ್ತಿಯುಳ್ಳ ಪ್ರಾಣಿಗಳನ್ನು ಸೃಷ್ಟಿಸಿದ ದೇವರನ್ನು ಪ್ರಶ್ನಿಸಲು ಯೋಬನು ಯಾರು?

7. ಯೋಬನ ಮೇಲೆ ದೇವರ ಮಾತುಗಳ ಪರಿಣಾಮ (42:1–6):

   ಅ. ದೇವರ ಬಲಾತಿಶಯದ ಕುರಿತಾದ ಯೋಬನ ತಿಳುವಳಿಕೆ ಆಳವಾಗಿದೆ ("ನೀನು ಸಕಲ ಕಾರ್ಯಗಳನ್ನು ನಡೆಸಬಲ್ಲಿಯೆಂತಲೂ ತಿಳಿದುಕೊಂಡೇ ಇದ್ದೇನೆ"), ವಚನ 2.

   ಆ. ದೇವರ ಬಗ್ಗೆ ತಾನು ಹೇಳಿದ್ದು ತಪ್ಪೆಂದು ಆತನು ಗ್ರಹಿಸಿಕೊಳ್ಳುತ್ತಾನೆ ("ನನಗೆ ಗೊತ್ತಿಲ್ಲದೆ ಬುದ್ದಿಗೆ ಮೀರಿರುವ ಅದ್ಭುತಗಳನ್ನು ಕುರಿತು ಮಾತಾಡಿದ್ದೇನೆ"), ವಚನ 3.

   ಇ. ದೇವರು ಯಾರಾಗಿದ್ದಾನೆಂಬ ಆತನ ತಿಳುವಳಿಕೆ ಸಹ ಹೆಚ್ಚಾಗಿದೆ ("ಈಗಲಾದರೋ ನಿನ್ನನ್ನೇ ಕಣ್ಣಾರೆ ಕಂಡೆನು"), ವಚನ 5.

   ಈ. ಆತನು ದೂಳು ಮತ್ತು ಬೂದಿಯಲ್ಲಿ ಕೂತುಕೊಂಡು ಪಶ್ಚಾತ್ತಾಪಪಡುತ್ತಾನೆ, (ವಚನ 6).

8. ಟಿಪ್ಪಣಿ ನೋಡಿ

9. –

10. ದೇವರು ಯೋಬನಿಗೆ ಕೇಳುವ ಹೆಚ್ಚಿನ ಪ್ರಶ್ನೆಗಳೆಲ್ಲವೂ ಸಹ ಅಲಂಕಾರಿಕವಾಗಿವೆ. ಯಾಕೆ ಅವು ಅಲಂಕಾರಿಕವಾಗಿವೆ ಎಂಬುದನ್ನು ವಿವರಿಸಿರಿ ಮತ್ತು ಅದಕ್ಕೆ ಉದಾಹರಣೆ ಕೊಡಿರಿ. ಯಾಕೆ ದೇವರು ಯೋಬನೊಂದಿಗೆ ಈ ರೀತಿ ವ್ಯವಹರಿಸುತ್ತಾನೆಂದು ನೀವುಯೋಚಿಸುವಿರಿ?

    ನನ್ನ ಉತ್ತರ: ಅಲಂಕಾರಿಕ ಪ್ರಶ್ನೆಯು ಒಂದು ಶಬ್ದಾಲಂಕಾರವಾಗಿದೆ. ಇಲ್ಲಿ ಒಂದು ಹೇಳಿಕೆಯು ಒಂದು ಪ್ರಶ್ನೆಯ ರೂಪದಲ್ಲಿರುತ್ತದೆ. ಇದರ ಉತ್ತರವು ಸ್ಪಷ್ಟವಾಗಿದೆ ಮತ್ತು ಕೇಳುಗನು ಇದಕ್ಕೆ ಉತ್ತರಿಸಬೇಕಾಗಿಲ್ಲ. ಆದರೆ ಈ ಹೇಳಿಕೆಯನ್ನು ಸ್ವೀಕರಿಸಬೇಕು. ದೇವರ ಮಾತಿನಿಂದ ಇಲ್ಲೊಂದು ಉದಾಹರಣೆಯಿದೆ (38:12):

    "ನಿನ್ನ ಜೀವಮಾನದಲ್ಲಿ ಬೆಳಗಿಗೆ ಇರತಕ್ಕ ಸ್ಥಳವನ್ನು ಗೊತ್ತುಮಾಡಿದಿಯಾ?"

ಯೋಬನು ಉತ್ತರಿಸಬೇಕೆಂದು ದೇವರು ಅಪೇಕ್ಷಿಸುತ್ತಿಲ್ಲ, ಇದು ಮನುಷ್ಯರಿಗೆ ಅಸಾಧ್ಯವೆಂದು ಎಲ್ಲರಿಗೂ ಗೊತ್ತು. ಕೇವಲ ದೇವರು ಮಾತ್ರ ಪ್ರಕೃತಿಯನ್ನು ಈ ರೀತಿ ನಿಯಂತ್ರಿಸಲು ಸಾಧ್ಯ. ಹಾಗಾಗಿ ದೇವರು ಆತನೊಂದಿಗಿನ ಸಂಬಂಧದಲ್ಲಿ ತಾನು ಯಾರಾಗಿದ್ದೇನೆ ಎಂಬುದನ್ನು ಯೋಬನು ಅರಿತುಕೊಳ್ಳಬೇಕೆಂದು ದೇವರು ಅಪೇಕ್ಷಿಸುತ್ತಾನೆ.

ದೇವರ ಮಾತುಗಳೆಲ್ಲವೂ ಅಲಂಕಾರಿಕ ಪ್ರಶ್ನೆಗಳಿಂದ ತುಂಬಿವೆ. ಯೋಬನು ದೇವರ ಕುರಿತಾಗಿ ಮತ್ತು ತನ್ನ ಕುರಿತಾಗಿ ಇನ್ನೂ ಉತ್ತಮವಾದ ತಿಳುವಳಿಕೆಗೆ ಬರಬೇಕೆಂದು ದೇವರು ಬಯಸುತ್ತಾನೆ.

11. 38:21 ರಲ್ಲಿ ಯೋಬನನ್ನು ಸಂಬೋಧಿಸುವಲ್ಲಿ ದೇವರು ವ್ಯಂಗ್ಯವನ್ನು ಉಪಯೋಗಿಸುತ್ತಾನೆ. ತನ್ನ ಸೃಷ್ಟಿಯ ಕುರಿತಾಗಿನ ದೇವರ ಪ್ರಶ್ನೆಯಲ್ಲಿ ವ್ಯಂಗ್ಯವಿದೆ.

ವಚನ 21 ರಲ್ಲಿ ದೇವರು ಹೇಳುತ್ತಾನೆ. "ನಿನಗೆ ತಿಳಿದಿರಬೇಕು; ಆಗಲೂ ಹುಟ್ಟಿದ್ದೆಯಲ್ಲವೆ; ನಿನ್ನ ದಿನಗಳ ಸಂಖ್ಯೆ ಬಹಳ ದೊಡ್ಡದು!" ಇಲ್ಲಿ ದೇವರು ಹೇಳುತ್ತಿರುವುದು "ಈ ಎಲ್ಲಾ ಸಂಗತಿಗಳ ಬಗ್ಗೆ ಯೋಬನಿಗೆ ಎನೂ ಗೊತ್ತಿಲ್ಲ ಮತ್ತು ದೇವರ ಕಾಲನಿಯಮಗಳಿಗೆ ಹೋಲಿಸಿದರೆ ಯೋಬನ ಆಯುಷ್ಕಾಲವು ಅಲ್ಪವಾದದು ಎಂಬುದಾಗಿದೆ. ಹಾಗಾಗಿ ಇಲ್ಲಿ ದೇವರ ಮಾತಿನಲ್ಲಿ ವ್ಯಂಗ್ಯ ಕಾಣಬಹುದು.

12. ನೀರಾನೆ (40:15–24) ಮತ್ತು ಮೊಸಳೆ ಕುರಿತಾದ ವರ್ಣನೆ (41:1–34)ಯಲ್ಲಿ ನಾವು ಅತಿಶಯೋಕ್ತಿ ಮತ್ತು ರೂಪಾಲಂಕಾರಗಳಿಗೆ ಅನೇಕ ಉದಾಹರಣೆಗಳನ್ನು ಕಾಣಬಹುದು. ಅವುಗಳಲ್ಲಿ ಕೆಲವು ಇಂತಿವೆ:

ಅ. ನೀರಾನೆ (ವಚನ 17–18):

- "ಬಾಲ ದೇವದಾರು ಮರದಂತಿದೆ, ಮೂಳೆಗಳು ತಾಮ್ರದ ನಳಗಳಂತಿವೆ, ಎಲುಬುಗಳು ಕಬ್ಬಿಣದ ಹಾರೆಗಳಂತಿವೆ". ಈ ಅತಿಶಯೋಕ್ತಿಯ ವರ್ಣನೆಯಲ್ಲಿ ಒಂದು ರೂಪಾಲಂಕಾರ ಮತ್ತು ಎರಡು ಉಪಮೆಗಳಿವೆ.

- "ಅದು ದೇವರ ಸೃಷ್ಟಿಗಳಲ್ಲಿ ಮುಖ್ಯವಾದದ್ದು" (ವಚನ 19): ಈ ಹೇಳಿಕೆಯು ಅಕ್ಷರಶಃ ನಿಜವಲ್ಲ. ಇದು ನೀರಾನೆಯ ಬಲಿಷ್ಠತೆ ಮತ್ತು ಪ್ರಾಮುಖ್ಯತೆಗೆ ಹೆಚ್ಚು ಒತ್ತು ಕೊಡುತ್ತದೆ. ಹಾಗಾಗಿ ಇದು ಅತಿಶಯೋಕ್ತಿಯ ಹೇಳಿಕೆಯಾಗಿದೆ.

ಆ. ಮೊಸಳೆ:

- "ಆಹಾ ಅದನ್ನು ಹಿಡಿಯಬೇಕೆಂಬ ನಿರೀಕ್ಷೆಯು ವ್ಯರ್ಥ" (ವಚನ 9) ಮತ್ತು "ಅದನ್ನು ಕೆಣಕಲು ಧೈರ್ಯಗೊಳ್ಳುವಷ್ಟು ಉಗ್ರತೆಯು ಯಾರಲ್ಲಿಯೂ ಇಲ್ಲ" (ವಚನ 10): ಈ ಹೇಳಿಕೆಗಳು ಅಕ್ಷರಶಃ ನಿಜವಲ್ಲ. ಹಾಗಾಗಿ ಅವು ಅತಿಶಯೋಕ್ತಿಗಳಾಗಿವೆ.

- "ಅದರ ಸೀನಿನ ತುಂತುರುಗಳು ತಳತಿಳಿಸುವವು, ಕಣ್ಣು ಅರುಣ ನೇತ್ರಕ್ಕೆ ಸಮಾನವಾಗಿವೆ" (ವಚನ 18): ಮೊದಲ ಹೇಳಿಕೆಯು ಅತಿಶಯೋಕ್ತಿಯಾಗಿದೆ, ಎರಡನೇಯದು ಒಂದು ಉಪಮೆಯಾಗಿದೆ.

- "ಅದರ ಉಸಿರೇ ಇದ್ದಿಲನ್ನು ಹೊತ್ತಿಸುವದು, ಜ್ವಾಲೆಯು ಬಾಯಿಂದೇಳುವದು" (ವಚನ 21): ಇವು ಅತಿಶಯೋಕ್ತಿಗೆ ಎರಡು ಉದಾಹರಣೆಗಳಾಗಿವೆ.

- "ಬಿರ್ರನೆ ಬರುವ ಈಟಿಗೆ ನಗುವದು" (ವಚನ 29): ಒಂದು ಪ್ರಾಣಿಯು ನಗುವುದು ಎಂದು ಹೇಳುವುದಾದರೆ ಅದು "ಮಾನವೀಕರಣ" ಎನ್ನುವ ಒಂದು ರೂಪಾಲಂಕಾರವಾಗಿದೆ (ಇದು ಮನುಷ್ಯನಂತೆ ನಗುವುದು).

13. ಕೆಳಕಂಡ ಸತ್ಯವೇದ ಭಾಗಗಳನ್ನು ಓದಿ ಕಷ್ಟದ ಸಮಯದಲ್ಲಿ ದೇವರೊಂದಿಗೆ ಹೇಗೆ ವ್ಯವಹರಿಸಬೇಕು ಎಂಬುದಕ್ಕೆ ಅವು ಹೇಗೆ ಸಕಾರಾತ್ಮಕವಾದ ಉದಾಹರಣೆಯನ್ನು ಕೊಡುತ್ತವೆ ಎಂಬುದನ್ನು ಬರೆಯಿರಿ.

ಅ. ಕೀರ್ತನೆ 57:

- ಕಷ್ಟ ಮತ್ತು ಆಪತ್ತುಗಳನ್ನು ಹಾದುಹೋಗುವಾಗ ನಾವು ದೇವರನ್ನು ಆಶ್ರಯಿಸಬಹುದು.

- ದೇವರು ಕರುಣೆಯುಳ್ಳ ದೇವರಾಗಿದ್ದಾನೆ.

- ದೇವರು ನಮಗಾಗಿ ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದಾನೆ. ನಮ್ಮ ಬಾಧೆಗಳನ್ನು ಉಪಯೋಗಿಸಿ ಆತನು ನಮ್ಮ ಜೀವಿತಗಳಲ್ಲಿ ತನ್ನ ಉದ್ದೇಶವನ್ನು ನೆರವೇರಿಸಬಹುದು.
- ದಾವೀದನಂತೆ ಕಷ್ಟದ ಸಮಯದಲ್ಲಿ ಸಹ ನಾವು ದೇವರನ್ನು ಘನಪಡಿಸಬೇಕು. ನಮ್ಮ ಕಷ್ಟ ಮತ್ತು ಬಾಧೆಗಳು ಆತನ ಮಹಿಮೆಗೆ ಸೇರುವಂತೆ ನಾವು ಪ್ರಾರ್ಥಿಸಬೇಕು. ದೇವರು ಸದಾ ನಮ್ಮ ಸ್ತುತಿಸ್ತೋತ್ರಕ್ಕೆ ಯೋಗ್ಯನಾಗಿದ್ದಾನೆ.
- ವೈರಿಗಳು ನಮಗೆ ತಂದೊಡ್ಡುವ ತಂತ್ರಗಳನ್ನು ತಡೆಯಲು ದೇವರು ಶಕ್ತನಾಗಿದ್ದಾನೆ.

ಆ. ಪ್ರಲಾಪಗಳು 3:19–33:

- ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಕಷ್ಟದ ಸಮಯದಲ್ಲಿ ಆತನ ಪ್ರೀತಿ ನಮಗೆ ಆಧಾರವಾಗಿರುತ್ತದೆ.
- ನಮಗಾಗಿನ ದೇವರ ಕರುಣೆಯು ನಿಂತುಹೋಗುವುದಿಲ್ಲ.
- ದೇವರ ನಂಬಿಗಸ್ತಿಕೆಯು ಎಂದಿಗೂ ಬಿದ್ದುಹೋಗುವುದಿಲ್ಲ.
- ನಾವು ಶಾಂತರಾಗಿದ್ದು ನಿರೀಕ್ಷೆಯುಳ್ಳವರಾಗಿ ಆತನಲ್ಲಿ ಭರವಸೆ ಇಡಬೇಕೆಂದು ದೇವರು ಅಪೇಕ್ಷಿಸುತ್ತಾನೆ.
- ನಾವು ಸದಾಕಾಲವು ಬಾಧೆಪಡಲು ದೇವರು ಬಿಡುವುದಿಲ್ಲ.

ಇ. ಹಬಕ್ಕೂಕ 3:17–19:

- ದೇವರು ನಮ್ಮ ರಕ್ಷಕನಾಗಿದ್ದಾನೆ.
- ಹಾಗಾಗಿ ಕಷ್ಟದ ಸಮಯದಲ್ಲಿ ಸಹ ನಾವು ಆತನಲ್ಲಿ ಹರ್ಷಿಸಬಹುದು.

ಈ. ಲೂಕ 22:39–46: ಯೇಸು ಕ್ರಿಸ್ತನು ನಮ್ಮೆಲ್ಲರಿಗಿಂತಲೂ ಮಿಗಿಲಾದ ಬಾಧೆಯನ್ನು ಅನುಭವಿಸಿದನು. ಹಾಗಾಗಿ ನಾವು ಬಾಧೆಪಡುವಾಗೆಲ್ಲಾ ಆತನು ನಮ್ಮನ್ನು ಅರ್ಥೈಸಿಕೊಳ್ಳುತ್ತಾನೆ.

14. ನಾವು ಬಾಧೆಪಡುವಾಗ ಅಸಮಾಧಾನಗೊಳ್ಳದಂತೆ ತಡೆಯಲು ಮಾಡುವಂತ ಕೆಲವು ಪ್ರಾಯೋಗಿಕ ಸಂಗತಿಗಳು ಇಂತಿವೆ:

ಅ. ಒಬ್ಬ ಅನುಭವಿ ಸಭಾಪಾಲಕರ ಅಥವಾ ಸಭಾನಾಯಕರ ಮಾರ್ಗದರ್ಶನ ಮತ್ತು ಸಮಾಲೋಚನೆಯನ್ನು ನಾವು ಕೇಳಬಹುದು.

ಆ. ಒಬ್ಬ ಬುದ್ಧಿವಂತ ಮತ್ತು ನಂಬಿಗಸ್ತ ಕ್ರೈಸ್ತ ಸ್ನೇಹಿತನ ಸಹಾಯ ಮತ್ತು ತಿಳುವಳಿಕೆಯನ್ನು ನಾವು ಅಪೇಕ್ಷಿಸಬಹುದಾಗಿದೆ.

ಇ. ನಮ್ಮ ಕಷ್ಟಗಳನ್ನು ಹಂಚಿಕೊಳ್ಳಲು ಇತರ ವಿಶ್ವಾಸಿಗಳನ್ನು ಸಂಪಾದಿಸಬಹುದು.

ಈ. ಸತ್ಯವೇದದಲ್ಲಿ, ವಿಶೇಷವಾಗಿ ಕೆಲ ಕೀರ್ತನೆಗಳಲ್ಲಿ ನಾವು ಆದರಣೆ ಮತ್ತು ಬಲವನ್ನು ಕಂಡುಕೊಳ್ಳಬಹುದು.

15. ಯೋಬ 42:2 ರಲ್ಲಿ **"ನೀನು ಸಕಲ ಕಾರ್ಯಗಳನ್ನು ನಡಿಸಬಲ್ಲಿಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ"** ಎಂದು ಯೋಬನು ಹೇಳುತ್ತಾನೆ. ಈ ತಿಳುವಳಿಕೆ ಬಾಧೆಗಳೊಂದಿಗೆ ವ್ಯವಹರಿಸಲು ನಮಗೆ ಸಹಕರಿಸುತ್ತದೆ. ಇದರಿಂದ ನಾವು ದೇವರೊಂದಿಗೆ ಸರಿಯಾದ ರೀತಿಯಲ್ಲಿ ವ್ಯವಹರಿಸಬಹುದು:

ಅ. ಯೋಬನಂತೆ ನಾವೂ ಸಹ ದೇವರು ಮತ್ತು ಆತನ ಶಕ್ತಿಯ ಬಗ್ಗೆ ಹೆಚ್ಚಿನ ತಿಳುವಳಿಕೆ ಹೊಂದಬಹುದು.

ಬಿ. ಇದು ಕೆಲವೊಮ್ಮೆ ಅತಿಯಾದ ಬಾಧೆಯ ಸಂದರ್ಭಗಳಲ್ಲಿ ನಾವು ಇದನ್ನು ಕಾಣದಿದ್ದರೂ ಸಹ ದೇವರು ನಮ್ಮ ಜೀವಿತಗಳನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾನೆ ಎಂಬುದನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ.

ಟಿಪ್ಪಣಿಗಳು

ದೇವರ ತೀರ್ಪು

ಕೊನೆಯಲ್ಲಿ ದೇವರು ಮಾತನಾಡುವಾಗ ಆತನು ಹೇಳದೇ ಇರುವುದರ ಬಗ್ಗೆ ನಮಗೆ ಆಶ್ಚರ್ಯವಾಗುತ್ತದೆ. ಯೋಬನು ಯಾಕೆ ಬಾಧೆಪಡುತ್ತಿದ್ದಾನೆ ಎಂಬುದಕ್ಕೆ ದೇವರು ಯಾವುದೇ ಕಾರಣವನ್ನು ಕೊಡುವುದಿಲ್ಲ. ಹಾಗೆಯೇ ಮೊದಲೆರಡು ಅಧ್ಯಾಯಗಳಲ್ಲಿ ಅಂದರೆ ಪುಸ್ತಕದ ಪ್ರಾರಂಭದಲ್ಲಿ ಸೈತಾನನೊಂದಿಗಿನ ದೇವರ ಸಂಭಾಷಣೆಯಲ್ಲಿ ಏನಾಯಿತು ಎಂಬುದನ್ನು ದೇವರು ಏನನ್ನೂ ಹೇಳುವುದಿಲ್ಲ, ಯೋಬನಿಗೆ ಪ್ರತ್ಯುತ್ತರ ನೀಡುವುದರ ಬದಲಾಗಿ ಆತನಿಗೇ ದೇವರು ಅನೇಕ ಪ್ರಶ್ನೆಗಳನ್ನು ಕೇಳುತ್ತಾನೆ. ಈ ಎಲ್ಲಾ ಪ್ರಶ್ನೆಗಳು ಪ್ರಕೃತಿಯ ಕುರಿತಾಗಿವೆ. ಭೂಮಿಗೆ ನೀನು ಆಕಾರವನ್ನು ಕೊಡುವಿಯಾ? ಕತ್ತಲೆ ಎಲ್ಲಿರುತ್ತದೆಂದು ನಿನಗೆ ಗೊತ್ತಾ? ಆಕಾಶದಲ್ಲಿನ ನಕ್ಷತ್ರಗಳನ್ನು ನೀನು ಕದಲಿಸುವಿಯಾ? ಮರುಭೂಮಿಯನ್ನು ಮಳೆಬಿದ್ದು ಹಸಿರು ಭೂಮಿಯನ್ನಾಗಿ ಮಾರ್ಪಡಿಸುವೆಯಾ? ಇದನ್ನು ನೀನು ಮಾಡಬಲ್ಲೆಯಾ? ಅದನ್ನು ಮಾಡಬಲ್ಲೆಯಾ? ಇದು ನಿನಗೆ ಗೊತ್ತಾ? ಅದು ಗೊತ್ತಾ? ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಾನೆ.

ಈ ಪ್ರಶ್ನೆಗಳು ದೇವರು ದೇವರೇ ಮತ್ತು ಯೋಬನು ದೇವರಲ್ಲ ಎಂಬುದನ್ನು ನೆನಪಿಸುತ್ತವೆ. ಇದನ್ನು ಗ್ರಹಿಸಿಕೊಂಡಾಗ ಯೋಬನು ಸಂಪೂರ್ಣವಾಗಿ ದೀನನಾಗುತ್ತಾನೆ. ಆ ನಿಮಿತ್ತ ಯೋಬನು ಪಶ್ಚಾತ್ತಾಪಪಡುತ್ತಾನೆ (42:6):

ಆದರೆ ಯಾವುದಕ್ಕಾಗಿ ಯೋಬನು ಪಶ್ಚಾತ್ತಾಪಪಡುತ್ತಾನೆ? ಈ ಕ್ಲಿಷ್ಟಕರವಾದ ಪ್ರಶ್ನೆಗೆ ಬ್ರೈಸನ್ ಸ್ಮಿತ್‌ರವರು ಈ ರೀತಿ ಉತ್ತರಿಸುತ್ತಾರೆ:

- ತನಗೆ ಬಾಧೆಗಳನ್ನು ತಂದಿತ್ತ ಪಾಪಗಳಿಗಾಗಿ ಯೋಬನು ಪಶ್ಚಾತ್ತಾಪಪಡುತ್ತಿಲ್ಲ ಎಂಬುದನ್ನು ತಿಳುಕೊಳ್ಳುವುದು ಪ್ರಾಮುಖ್ಯವಾದುದ್ದಾಗಿದೆ. ತನ್ನ ಪಾಪದ ಶಿಕ್ಷೆಯಾಗಿ ಯೋಬನು ಬಾಧೆಯನ್ನು ಅನುಭವಿಸಲಿಲ್ಲ ಎಂಬುದನ್ನು ನಾವು ಪ್ರಾರಂಭಿಕ ಅಧ್ಯಾಯದಿಂದ ನಮಗೆ ತಿಳಿದುಬಂದಿದೆ. ಅರಿಕೆ ಮಾಡದ ಪಾಪಗಳೇ ಯೋಬನ ಬಾಧೆಗೆ ಕಾರಣ ನ್ನುವ ಆತನ ಸ್ನೇಹಿತರ ಮಾತುಗಳು ಸತ್ಯವಲ್ಲ. ಹಾಗಾದರೆ ಯಾವುದಕ್ಕಾಗಿ ಯೋಬನು ಪಶ್ಚಾತ್ತಾಪಪಡುತ್ತಾನೆ?

- ಪ್ರಶ್ನೆಗಳ ಸರಣಿಯಲ್ಲಿ 41:10–11 ರಲ್ಲಿ ದೇವರು ಲಿವ್ಯಾತಾನನ ಬಗ್ಗೆ ಹೇಳುತ್ತಾನೆ: "ಅದನ್ನು ಕೆಣಕಲು ಧೈರ್ಯಗೊಳ್ಳುವಷ್ಟು ಉಗ್ರತೆಯೂ ಯಾರಲ್ಲಿಯೂ ಇಲ್ಲ, ಹೀಗಿರಲು ನನ್ನ ಮುಂದೆ ನಿಲ್ಲಬಲ್ಲವರು ಯಾರು? ನಾನು ಸಾಲತೀರಿಸಬೇಕಾದರೆ ಮೊದಲು ಅದನ್ನು ನನಗೆ ಕೊಟ್ಟವರು ಯಾರು? ಆಕಾಶಮಂಡಲದ ಕೆಳಗಿರುವ ಸರ್ವಸ್ವವೂ ನನ್ನದೇ". ಇದರಿಂದ ತಾನು ಮಿತಿಮೀರಿ ದೇವರಲ್ಲಿ ಬೇಡಿಕೆಯಿಡುತ್ತಿದ್ದೇನೆ ಎಂಬುದನ್ನು ಯೋಬನು ಅರಿತುಕೊಳ್ಳುತ್ತಾನೆ. ತನ್ನ ಬಾಧೆಯನ್ನು ಸರಿಯಾದ ರೀತಿಯಲ್ಲಿ ನಿಭಾಯಿಸದ ತಪ್ಪಿಗಾಗಿ ಆತನು ಪಶ್ಚಾತ್ತಾಪಪಡುತ್ತಾನೆ. ದೇವರ ಸಲಹೆಯನ್ನು ಮರೆಮಾಡಿ ದೇವರಿಂದ ವಿವರಣೆಯನ್ನು ಬಯಸುತ್ತಾನೆ.

ಯೋಬನಿಂದ ಕಲಿಯಬಹುದಾದ ಎರಡು ಪ್ರಮುಖ ಪಾಠಗಳು

ದೇವರ ತೀರ್ಪು ಮತ್ತು ಯೋಬನ ಮಾನಸಾಂತರವು (ಪಶ್ಚಾತ್ತಾಪ) ನಮಗೆ ಎರಡು ಪ್ರಮುಖ ಪಾಠಗಳನ್ನು ಕಲಿಸುತ್ತದೆ.:

1. ದೇವರಿಗೆ ಅತಿಯಾಗಿ ಬೇಡಿಕೆ ಇಡುವುದರ ಅಪಾಯದ ಬಗ್ಗೆ ನಾವು ಎಚ್ಚರವಾಗಿರಬೇಕು. ಕ್ರಿಸ್ತನಲ್ಲಿ ನಾವು ದೇವರೊಂದಿಗೆ ಸುಂದರವಾದ ಸಾಮೀಪ್ಯತೆ, ಧೈರ್ಯ ಮತ್ತು ಭರವಸೆಯನ್ನು ಅನುಭವಿಸುತ್ತೇವೆ ಆದರೆ ನಾವು ದೇವರೊಂದಿಗೆ ಅಗೌರವ ಸೂಚಿಸುವಂತಹ ಮೋಸದ ಬಲೆಯೊಳಗೆ ಸಿಕ್ಕಿಬೀಳದಂತೆ ನಾವು ಎಚ್ಚರಿಕೆಯಾಗಿರಬೇಕು. ಆತನು ಸೃಷ್ಟಿಕರ್ತನಾಗಿದ್ದಾನೆ ಮತ್ತು ನಾವು ಆತನ ಸೃಷ್ಟಿಗಳಾಗಿದ್ದೇವೆ ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಆತನ ಮಾರ್ಗಗಳನ್ನು ಪ್ರಶ್ನಿಸಲು ಅಥವಾ ಆತನ ತೀರ್ಪನ್ನು ತೀರಿಸಲು ನಮಗೆ ಯಾವುದೇ ಹಕ್ಕಿಲ್ಲ. ಆತನ ಇತರ ಸೃಷ್ಟಿಯಂತೆ ನಾವೂ ಸಹ ಆತನಿಗೆ ಸಂಬಂಧಿಸಿದ್ದೇವೆ. ಆತನು ನಮ್ಮಿಂದ ಏನನ್ನೂ ಸಾಲಪಡೆದಿಲ್ಲ. ಹಾಗಾಗಿ ಆತನಿಗೆ ವಿರುದ್ಧವಾಗಿ ಹೇಳಲು ನಮಗೆ ಏನೂ ಇಲ್ಲ.

   ನಾವು ಬಾಧೆಪಡುವಾಗ ಸಹ ಈ ದೃಷ್ಟಿಕೋನವನ್ನು ನೆನಪಿಸಿಕೊಳ್ಳಬೇಕು. ನೋವು, ಬಾಧೆ ಮತ್ತು ನಷ್ಟದ ಮಧ್ಯೆ ಸಾಮಾನ್ಯವಾಗಿ ಆಗಾಗ್ಗೆ ನಾವು ಸ್ವಾರ್ಥಿಗಳಾಗುತ್ತೇವೆ. ಆದರೆ ನಮ್ಮ ಕಷ್ಟಗಳು ನಾವು ದೇವರಿಗೆ ಅಗೌರವವುಳ್ಳವರಾಗಿರಲು ಎಂದಿಗೂ ಒಂದು ನೆವಗಳಾಗಬಾರದು. ಖಂಡಿತವಾಗಿ ದೇವರು ನಮ್ಮ ಎಲ್ಲಾ ಕಷ್ಟಗಳನ್ನು ಆತನ ಮುಂದೆ ಹೊಯ್ಯಬೇಕೆಂದು ಬಯಸುತ್ತಾನೆ. ಯಾಕೆ ಆತನು ಈ ಸಂಗತಿಗಳು ಸಂಭವಿಸುವಂತೆ ಅನುಭವಿಸಿದನೆಂಬುದರ ಬಗ್ಗೆ ನಾವು ನಮ್ಮ ಗೊಂದಲ ಮತ್ತು ದುಃಖವನ್ನು ವ್ಯಕ್ತಪಡಿಸಬೇಕೆಂದು ಆತನು

ಅಪೇಕ್ಷಿಸುತ್ತಾನೆ. ಆದರೆ ಜೀವನದ ಕಷ್ಟಗಳೊಂದಿಗೆ ನಮ್ಮ ಹೋರಾಟಗಳಲ್ಲಿ ದೇವರಿಗೆ ಮೀಸಲಾದ ಗೌರವವನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾವು ನಮ್ಮ ಸ್ಥಾನವನ್ನು ನೆನಪಿಸಿಕೊಳ್ಳಬೇಕು. ಆತನು ನಮ್ಮ ನ್ಯಾಯಾಧಿಪತಿಯಾಗಿದ್ದಾನೆ. ದೇವರಿಗೆ ತೀರ್ಪು ಮಾಡಲು ನಾವು ಯಾರು? ನಾವು ಊಹಿಸಿಕೊಳ್ಳುವುದಕ್ಕಿಂತಲೂ ಮಿಗಿಲಾದ ಬಾಧೆಯನ್ನು ಯೋಬನು ಅನುಭವಿಸಿದನು. ಆತನು ತನ್ನ ಮಕ್ಕಳನ್ನು ಕಳಕೊಂಡನು, ತನ್ನ ಸೊತ್ತನ್ನೆಲ್ಲಾ ಕಳಕೊಂಡನು ಮತ್ತು ಕಡೆಯದಾಗಿ ತನ್ನ ಆರೋಗ್ಯವನ್ನೂ ಸಹ ಆತನು ಕಳಕೊಂಡನು.

2. ಯೋಬನೊಂದಿಗಿನ ಸಂಬಂಧವನ್ನು ಪುನರ್‌ಸ್ಥಾಪಿಸುವುದೇ ದೇವರ ಮೊದಲ ಆಧ್ಯತೆ ಎಂಬುದನ್ನು ಯೋಬನಿಗೆ ದೇವರು ಕೇಳುವ ಪ್ರಶ್ನೆಗಳು ತೋರಿಸುತ್ತವೆ. ಯೋಬನಿಗೆ ಯಾಕೆ ಬಾಧೆ ಸಂಭವಿಸಿತು ಎಂಬುದನ್ನು ವಿವರಿಸುವುದಕ್ಕಿಂತಲೂ ಇದು ಬಹು ಪ್ರಾಮುಖ್ಯವಾದುದ್ದಾಗಿದೆ. ಯೋಬನು ತನ್ನ ಬಾಧೆಗಳ ಕಾರಣಗಳಿಗೆ ಉತ್ತರವನ್ನು ತಿಳಿದುಕೊಳ್ಳುವುದಕ್ಕಿಂತ ಮಿಗಿಲಾಗಿ ಯೋಬನು ದೇವರೊಂದಿಗೆ ಸರಿಯಾದ ಸಂಬಂಧವನ್ನು ಇಟ್ಟುಕೊಳ್ಳುವುದು ಮತ್ತು ಆತನು ಎಲ್ಲಾ ವಿಷಯಗಳಲ್ಲಿ ದೇವರಿಗೆ ಅಧೀನನಾಗಿರುವುದರ ಬಗ್ಗೆ ದೇವರು ಹೆಚ್ಚು ಕಾಳಜಿಯುಳ್ಳವನಾಗಿದ್ದಾನೆ. ಇದು ಈ ಹಿಂದಿನ ಅಧ್ಯಯನದಲ್ಲಿ ಕಂಡುಹಿಡಿದ **"**ಯೆಹೋವನ ಭಯ–ಅದುವೇ ಜ್ಞಾನ(ತಿಳುವಳಿಕೆ)**"** ಎಂಬ ಪ್ರಾಮುಖ್ಯವಾದ ಮೂಲ ಪಾಠವನ್ನು ನೆನಪಿಸುತ್ತದೆ (28:28). ಜ್ಞಾನಕ್ಕೆ ಕೀಲಿಕೈ ಜೀವನದಲ್ಲಿ ಅತ್ಯುತ್ತಮವಾದುದ್ದನ್ನು ಮಾಡುವುದಾಗಿದೆ. ಸಂಗತಿಗಳು ಯಾಕೆ ಸಂಭವಿಸುತ್ತವೆ ಎಂಬುದನ್ನು ತಿಳಿಯುವುದಲ್ಲ, ಯಾಕೆ ಸಂಗತಿಗಳು ಸಂಭವಿಸುತ್ತವೆ ಎಂಬುದನ್ನು ಬಲ್ಲ ದೇವರನ್ನು ತಿಳಿದುಕೊಳ್ಳುವುದು ಅತೀ ಪ್ರಾಮುಖ್ಯವಾದುದ್ದಾಗಿದೆ. ಅದನ್ನೇ ದೇವರು ಯೋಬನಿಂದ ಬಯಸಿದನು. ದೇವರ ಮಾತುಗಳು ಯೋಬನಿಗೆ ದೇವರನ್ನು ಪ್ರಕಟಪಡಿಸುವ ಪ್ರಭಾವವನ್ನು ಹೊಂದಿವೆ. ಈಗ ಆತನು ದೇವರು ಯಾರಾಗಿದ್ದಾನೆ ಎಂಬುದನ್ನು ಕಾಣುತ್ತಾನೆ ಮತ್ತು ಈ ಹಿಂದೆ ಎಂದೆಂದೂ ಭಯಪಡದ ರೀತಿಯಲ್ಲಿ ದೇವರಿಗೆ ಭಯಪಡುತ್ತಾನೆ (ಬ್ರೈಸನ್ ಸ್ಮಿತ್ ಆಧಾರದ ಮೇಲೆ).

ಯೋಬ ಉತ್ತರಗಳು 7: ಒಂದು ಸುತಸಮಯ ಅಂತ್ಯ ಮತ್ತು ಉತ್ತರಿಸಲಾರದ ಪ್ರಶ್ನೆಗಳು

ಪ್ರಶ್ನೆಗಳಿಗೆ ಉತ್ತರಗಳು

1. ಯೋಬನ ಸ್ನೇಹಿತರು ದೇವರ ವಿಷಯವಾಗಿ ಯಥಾರ್ಥವನ್ನು ನುಡಿಯದೇ ಇರುವ ನಿಮಿತ್ತ ದೇವರು ಅವರ ಮೇಲೆ ಕೋಪಗೊಳ್ಳುತ್ತಾನೆ (42:7,8).

2. ದೇವರು ಎಲೀಫಜನಿಗೆ ಹೇಳುವ ಮಾತನ್ನು ನಾನು ಈ ರೀತಿ ವಿವರಿಸುತ್ತೇನೆ, "ಯೋಬನು ನನ್ನ ವಿಷಯವಾಗಿ ಯಾಥಾರ್ಥವನ್ನಾಡಿದಂತೆ ನೀವು ಆಡಲಿಲ್ಲ" (ವಚನ 7,8):

   ಅ. ಮೂವರು ಸ್ನೇಹಿತರು ದೇವರ ಕುರಿತಾಗಿ ಹೇಳುತ್ತಿರುವುದು ಸಂಪೂರ್ಣವಾಗಿ ತಪ್ಪಾಗಿರಲಿಲ್ಲ, ಯಾಕೆಂದರೆ ಅವರು ದೇವರು ಮತ್ತು ಆತನ ನೀತಿವಂತಿಕೆಯ ಬಗ್ಗೆ ಅನೇಕ ಸತ್ಯಸಂಗತಿಗಳನ್ನು ಹೇಳಿದ್ದರು. ಆದರೆ ದೇವರ ಕುರಿತಾದ ಅವರ ಜ್ಞಾನವು ಆತನೊಂದಿಗಿನ ಅವರ ವೈಯಕ್ತಿಕ ಅನುಭವದ ಮೇಲೆ ಆಧಾರಿತವಾಗಿರಲಿಲ್ಲ. ಅವರು ಕೇವಲ ದೇವರ ಬಗ್ಗೆ ಮಾತನಾಡಿದರೇ ವಿನಃ ದೇವರೊಂದಿಗೆ ಅಲ್ಲ.

   ಆ. ದೇವರು ಅವರಿಗೆ ತೀರ್ಪನ್ನು ವಿಧಿಸಿದನು. ಯಾಕೆಂದರೆ, ಯೋಬನ ಅರಿಕೆ ಮಾಡದ ಪಾಪವೇ ಆತನ ಬಾಧೆಗೆ ಕಾರಣವೆಂದು ಅವರು ತಪ್ಪಾಗಿ ನುಡಿದಿದ್ದರು. ಯೋಬನು ಪಾಪ ಮಾಡಿದ್ದಾನೆ, ಆತನ ಅರಿಕೆ ಮಾಡದ ಪಾಪದ ನಿಮಿತ್ತ ದೇವರು ಆತನನ್ನು ಶಿಕ್ಷಿಸಿದ್ದಾನೆಂದು ಅವರು ಹೇಳಿದ್ದರು. ಹಾಗಾಗಿ ಆತ್ಮೀಕವಾಗಿ ಅವರು ಸೊಕ್ಕಿನವರಾಗಿದ್ದರು, ನಿಜವಾಗಲೂ ತಮಗೆ ಅತಂಹ ತಿಳುವಳಿಕೆ ಇಲ್ಲದಿದ್ದರೂ ತಮಗೆ ದೇವರ ಕುರಿತಾದ ತಿಳುವಳಿಕೆಯಿದೆ ಎಂದು ಪ್ರತಿಪಾದಿಸಿದರು.

3. ಯೋಬನು ಯಥಾರ್ಥವಾದುದ್ದನ್ನೇ ನುಡಿದಿದ್ದಾನೆಂದು ದೇವರು ಎಲೀಫಜನಿಗೆ ಹೇಳಿದನು (ವಚನ 7, 8), ಯಾಕಂದರೆ ತನ್ನ ಬಾಧೆ ಮತ್ತು ದೇವರೊಂದಿಗಿನ ಕೋಪದ ನಡುವೆಯೂ ಯೋಬನು ದೇವರ ಮುಂದೆ ಯಥಾರ್ಥವಾಗಿ ನುಡಿದನು. ಯೋಬನು ದೇವರೊಂದಿಗೆ ಸಂಪೂರ್ಣವಾಗಿ ತೆರೆದ ಮನಸ್ಸಿನಿಂದ ಇದ್ದನು.

4. ಯೋಬನು ತನ್ನ ಸ್ನೇಹಿತರಿಗಾಗಿ ಪ್ರಾರ್ಥಿಸಿದ ಮೇಲೆ ದೇವರು ಆತನ ದುಸ್ಥಿತಿಯನ್ನು ಹೋಗಲಾಡಿಸಿ ಅವನ ಸೊತ್ತು ಮತ್ತು ಸ್ಥಾನಮಾನವನ್ನು ಮೊದಲಿಗಿಂತ ಎರೆಡರಷ್ಟಾಗಿ ಹೆಚ್ಚಿಸಿದನು. ಪುನಃ ಸಮಾಜದಿಂದ ಸ್ವೀಕರಿಸಲ್ಪಟ್ಟನು. ಎರೆಡರಷ್ಟು ಕುರಿ, ಒಂಟೆ, ಎತ್ತು ಮತ್ತು ಕತ್ತೆಗಳನ್ನು ಪಡೆದನು. ಪುನಃ ಏಳು ಗಂಡುಮಕ್ಕಳು ಮತ್ತು ಮೂವರು ಹೆಣ್ಣುಮಕ್ಕಳನ್ನು ಪಡೆದನು. ಆತನ ಹೆಣ್ಣುಮಕ್ಕಳಷ್ಟು ಸುಂದರಿಯರು ಯಾರು ಇರಲಿಲ್ಲ. ಹಾಗೇ ಆತನು ಅನೇಕ ವರುಷ ಸಂತೋಷವಾಗಿ ಬಾಳಿ ಸಂತಾನದ ನಾಲ್ಕು ತಲೆಗಳನ್ನು ಕಂಡನು.

5. ಪುಸ್ತಕದ ಕೊನೆಯಲ್ಲಿ ಓದುಗರಿಗೆ ಅನೇಕ ವಿಭಿನ್ನವಾದ ಭಾವನೆಗಳು ಬರಬಹುದು:

   ಅ. ಯೋಬನು ಪುನಃ ಸುಸ್ಥಿತಿಗೆ ಬಂದ ನಿಮಿತ್ತ ನಮಗೆ ಸಂತೋಷವಾಗಬಹುದು. ಎಲ್ಲವೂ ಉತ್ತಮವಾಗಿ ಮುಕ್ತಾಯವಾಗುತ್ತದೆ.

   ಆ. ಯಾಕೆ ಯೋಬನು ಪುನಃ ಸುಸ್ಥಿತಿಗೆ ಬಂದನೆಂಬುದನ್ನು ನಾವು ಕಂಡುಕೊಳ್ಳದೇ ಇರುವ ನಿಮಿತ್ತ ನಮಗೆ ಗೊಂದಲವಾಗುತ್ತದೆ ಮತ್ತು ಕಥೆಯಲ್ಲಿ ಸೈತಾನನು ಮತ್ತು ಆತನ ಪಾತ್ರದ ಬಗ್ಗೆ ಇನ್ನೂ ಸಹ ನಮಗೆ ಉತ್ತರಿಸಲ್ಪಡದ ಪ್ರಶ್ನೆಗಳಿವೆ.

   ಇ. ಯೋಬನು ಮತ್ತು ಆತನ ಸ್ನೇಹಿತರ ವಿಷಯದಲ್ಲಿನ ದೇವರ ಮೌಲ್ಯಮಾಪನವು ನಾವು ನಿರೀಕ್ಷಿಸಿದಂತೆ ಇರದೆ ಇರುವುದರಿಂದ ನಮಗೆ ಆಶ್ಚರ್ಯವಾಗಬಹುದು.

6. ನಾನು ಇನ್ನೂ ಹೆಚ್ಚಾಗಿ ತಿಳಿಯಲು ಬಯಸುವಂತಹ ಹಲವು ಸಂಗತಿಗಳು ಮತ್ತು ವ್ಯಕ್ತಿಗಳು ಯೋಬನ ಪುಸ್ತಕದಲ್ಲಿವೆ.

   ಉದಾಹರಣೆಗೆ:

   ಅ. ದೇವರು ಸೈತಾನನು ಯೋಬನನ್ನು ಅಷ್ಟೊಂದು ಭಯಂಕರ ರೀತಿಯಲ್ಲಿ ಪರೀಕ್ಷಿಸುವಂತೆ ಯಾಕೆ ಅನುಮತಿಸಿದನು?

ಆ. ನಿಜವಾಗಲೂ ದೇವರು ಮತ್ತು ಸೈತಾನನ ನಡುವಿನ ಸಂಬಂಧವೇನು? ಸೈತಾನನು ದೇವರ ಮುಂದೆ ಹಾಗೆ ಕಾಣಿಸಿಕೊಳ್ಳಲು ಹೇಗೆ ಸಾಧ್ಯ?

ಇ. ಯಾಕೆ ಗ್ರಂಥಕರ್ತನು ಎಲಿಹುನ ಬಗ್ಗೆ ಇನ್ನೂ ಹೆಚ್ಚಾಗಿ ಹೇಳುವುದಿಲ್ಲ?

ಈ. ಇಷ್ಟೆಲ್ಲಾ ವೇದನೆಗಳನ್ನು ಸಹಿಸಿಕೊಂಡು, ದೇವರನ್ನು ಶಪಿಸದೆ ಮತ್ತು ದೇವರಿಂದ ದೂರವಾಗದೆ ಇರಲು ಯೋಬನಿಗೆ ಹೇಗೆ ಸಾಧ್ಯವಾಯಿತು?

7. ಈ ಪುಸ್ತಕದಲ್ಲಿ ಕಂಡುಬರುವ ಎಲ್ಲಾ ವ್ಯಕ್ತಿಗಳನ್ನು ಮತ್ತೊಮ್ಮೆ ಯೋಚಿಸಿ ನೋಡಿರಿ. ಪ್ರತೀ ವ್ಯಕ್ತಿಗಳಿಗೂ ಸಹ ಎಲ್ಲಾ ಸಂಗತಿಗಳು ತಿಳಿದಿಲ್ಲ:

ಅ. ಯೋಬನ ನೀತಿವಂತಿಕೆಯ ಲಕ್ಷಣ ಮತ್ತು ಗುಣಮಟ್ಟವನ್ನು ಅರಿತುಕೊಳ್ಳಲು ಸೈತಾನನಿಗೆ ಆಗಲಿಲ್ಲ.

ಆ. ತನ್ನ ನೀತಿವಂತಿಕೆಯ ಹೊರತಾಗಿಯೂ ತಾನು ಯಾಕೆ ಬಾಧೆಪಡುತ್ತಿದ್ದೇನೆ ಎಂಬುದು ಯೋಬನಿಗೆ ಅರ್ಥವಾಗಲಿಲ್ಲ.

ಇ. ಯೋಬನ ಸ್ನೇಹಿತರಿಗೆ ಆತನ ಬಾಧೆಗಳ ಕಾರಣವನ್ನು ತಿಳಿಯಲಾಗಲಿಲ್ಲ.

ಈ. ಯೋಬನ ಕುರಿತಾಗಿ ತನ್ನ ತಿಳುವಳಿಕೆ ಸಹ ತಪ್ಪಾಗಿದೆ ಎಂಬುದನ್ನು ಎಲಿಹುವಿಗೆ ಅರ್ಥವಾಗಲಿಲ್ಲ.

8. ಯೋಬನ ಪುಸ್ತಕದಲ್ಲಿ ಎಲ್ಲವೂ ಗೊತ್ತಿರುವ ಮತ್ತು ಎಲ್ಲವನ್ನು ಅರ್ಥೈಸಿಕೊಳ್ಳುವ ಏಕೈಕ ವ್ಯಕ್ತಿಯೆಂದರೆ ದೇವರು.

9. ಜೀವನದ ಬಗ್ಗೆ ಯೋಬನ ಪುಸ್ತಕವು ಈ ಸಂಗತಿಗಳನ್ನು ತಿಳಿಸುತ್ತದೆ:

ಅ. ಬಾಧೆಯು ಒಳ್ಳೆಯವರಿಗೆ, ಕೆಟ್ಟವರಿಗೆ ಎಂದೆನ್ನದೆ ಯಾರಿಗೆ ಬೇಕಾದರೂ ಬರಬಹುದು.

ಆ. ಕೆಲವೊಮ್ಮೆ ನಮಗೆ ಗ್ರಹಿಸಲು ಆಗದೆ ಇರುವಾಗ ಸಹ ದೇವರು ನಮ್ಮ ಜೀವನವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದಾನೆ.

ಇ. ಸೈತಾನನು ಭೂಮಿಯ ಮೇಲೆಲ್ಲಾ ಸಂಚರಿಸುತ್ತಾ ಜನರಿಗೆ ಕೆಡುಕನ್ನು ಮತ್ತು ವೇದನೆಯನ್ನು ತರಲು ತನ್ನಿಂದಾದಷ್ಟು ಪ್ರಯತ್ನವನ್ನು ಮಾಡಬಹುದು, ಆದರೆ ಅಂತಿಮ ನುಡಿ ದೇವರದಾಗಿದೆ.

ಈ. ಪ್ರಸ್ತುತ ಜೀವಿತದಲ್ಲಿ ನಾವು ಉತ್ತರಿಸದ ಅನೇಕ ಪ್ರಶ್ನೆಗಳು ಮತ್ತು ಸಂಗತಿಗಳು ಮನುಷ್ಯ ಜೀವನದಲ್ಲಿವೆ.

ಉ. ನಾವು ಯೋಬನಂತೆ ಇರಬೇಕು: ದೇವರು ಯಾಕೆ ನಮಗೆ ಬಾಧೆಯನ್ನು ಅನುಮತಿಸುತ್ತಾನೆಂದು ಅರಿಯಲಾಗದಿದ್ದರೂ ಸಹ ನಾವು ಆತನೊಂದಿಗೆ ಮುಕ್ತವಾಗಿ ಮತ್ತು ಯಥಾರ್ಥವಾಗಿ ಇರಬೇಕು.

ಊ.ಬಾಧೆಯ ಸಮಯದಲ್ಲಿ ಸಹ ನಾವು ಶಾಂತರಾಗಿ ದೇವರೊಂದಿಗೆ ನಂಬಿಗಸ್ತರಾಗಿರಬೇಕು.

10. ನಾವು ದೇವರಲ್ಲಿ ನಂಬಿಕೆ ಇಟ್ಟಿದ್ದೇವೆ ಎಂದು ಹೇಳುತ್ತೇವೆ, ಆದರೆ ದೇವರನ್ನು ಹೆಚ್ಚಾಗಿ ತಿಳಿದುಕೊಳ್ಳಲು ಯಾಕೆ ಬಯಸುವುದಿಲ್ಲ? ವಿಶ್ವಾಸಿಗಳು ದೇವರನ್ನು ತಿಳಿದುಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಪ್ರಾಮುಖ್ಯತೆ ಕೊಡುವ ಸಂಗತಿಗಳು ಇಂತಿವೆ:

ಅ. ಕುಟುಂಬ ಮತ್ತು ಸ್ನೇಹಿತರು

ಆ. ಶಿಕ್ಷಣ

ಇ. ಕೆಲಸ, ಉದ್ಯೋಗ, ವ್ಯವಹಾರ

ಈ. ಹಣ ಮತ್ತು ಆಸ್ತಿ

ಉ. ಮನೋರಂಜನೆ ಮತ್ತು ಕ್ರೀಡೆ

11. –

ಟಿಪ್ಪಣಿಗಳು

ಮತ್ತು ಅವರು ಹಿಂದೆಗಿಂತಲೂ ಸಂತೋಷವಾಗಿ ಬಾಳಿ ಬದುಕಿದರು

ಬ್ರೈಸನ್ ಸ್ಮಿತ್‌ರವರು ಯೋಬನ ಪುಸ್ತಕವನ್ನು ಈ ರೀತಿ ಸಾರಾಂಶಗೊಳಿಸುತ್ತಾರೆ:

"ಯೋಬನ ಪುಸ್ತಕವು ನಮ್ಮನ್ನು ಊಹಿಸಲಾಗದಷ್ಟು ಬಾಧೆಯನ್ನು ಅನುಭವಿಸುವ ವ್ಯಕ್ತಿಯೊಬ್ಬನ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ". ಪುಸ್ತಕದ ಪ್ರಾರಂಭದಲ್ಲಿ ಯೋಬನು ಲಾಭಕ್ಕಾಗಿ ದೇವರನ್ನು ಹಿಂಬಾಲಿಸುತ್ತಾನೆಂದು ಸೈತಾನನು ದೂರುತ್ತಾನೆ. ಆ ನಿಮಿತ್ತ ದೇವರು ಯೋಬನನ್ನು ಪರೀಕ್ಷಿಸಲು ಸೈತಾನನಿಗೆ ಅನುಮತಿಸುತ್ತಾನೆ. ಯೋಬನ ಜೀವನವನ್ನು ದುಃಖಮಯವನ್ನಾಗಿ ಮಾಡುವ ಕಾರ್ಯವನ್ನು ಸೈತಾನನು ಅಚ್ಚುಕಟ್ಟಾಗಿ ಮಾಡುತ್ತಾನೆ. ಯೋಬನು ಎಲ್ಲವನ್ನು ಕಳಕೊಳ್ಳುತ್ತಾನೆ.

ಯಾಕೆ ತನಗೆ ಇಂತಹ ವಿಪತ್ತು ಸಂಭವಿಸಿತೆಂದು ಯೋಬನಿಗೆ ಯಾವ ಸುಳಿವೂ ಸಿಗಲಿಲ್ಲ. ಆತನಿಗೆ ಯಾಕೆ ಬಾಧೆಯುಂಟಾಯಿತೆಂಬುದು ತಮಗೆ ತಿಳಿದಿದೆಯೆಂದು ಯೋಬನ ಸ್ನೇಹಿತರು ಯೋಚಿಸುತ್ತಾರೆ. ಅರಿಕೆ ಮಾಡದೆ ಇರುವ ಪಾಪವೇ ಇದಕ್ಕೆ ಕಾರಣ ಎನ್ನುತ್ತಾರೆ. ಆದರೆ ವಾಸ್ತವಾಂಶ ಅದಲ್ಲವೆಂದು ಓದುಗರಿಗೆ ಮತ್ತು ಯೋಬನಿಗೆ ಗೊತ್ತು. ಕೊನೆಗೆ ಯೋಬ ಮತ್ತು ಆತನ ಸ್ನೇಹಿತರ ವಾದವೂ ಮುಗಿಯದೇ ಇರುವಾಗ ಸ್ವತಃ ದೇವರು ಕಾಣಿಸಿಕೊಳ್ಳುತ್ತಾನೆ. ಯೋಬನು ಯಾಕೆ ಬಾಧೆಪಡುತ್ತಾನೆಂಬುದನ್ನು ದೇವರು ಆತನಿಗೆ ಹೇಳುವುದಿಲ್ಲ. ಅಲ್ಲದೆ ಅದಕ್ಕೆ ವಿವರಣೆಯನ್ನು ಸಹ ದೇವರು ಕೊಡುವುದಿಲ್ಲ. ಬದಲಾಗಿ ದೇವರು ತಾನು ಯಾರಾಗಿದ್ದೇನೆಂಬುದನ್ನು ಯೋಬನಿಗೆ ಜ್ಞಾಪಕ ಮಾಡಿಕೊಡುತ್ತಾನೆ. ಯೋಬನು ಉತ್ತರಗಳನ್ನು ಅಪೇಕ್ಷಿಸಿದ್ದಕ್ಕಾಗಿ ಆತನನ್ನು ದೇವರು ಗದರಿಸುತ್ತಾನೆ.

ಯೋಬನ ಜೀವನವೇ ಒಂದು ಮರ್ಮವಾಗುತ್ತದೆ. ಆತನ ಮಕ್ಕಳು ಸಾಯುತ್ತಾರೆ, ಆತನ ಆರೋಗ್ಯ ಹಾಳಾಗುತ್ತದೆ, ದೇವರನ್ನು ಶಪಿಸಿ ಸಾಯಿ ಎಂದು ಆತನ ಪತ್ನಿ ಹೇಳುತ್ತಾಳೆ, ನಿನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಡು ಎಂದು ಆತನ ಸ್ನೇಹಿತರು ಹೇಳುತ್ತಾರೆ. ಇವೆಲ್ಲದರ ಕೊನೆಯಲ್ಲಿ ತನ್ನ ಜೀವನವು ಯಾಕೆ ದುಃಖಮಯವಾಯಿತೆಂಬುದು ಯೋಬನಿಗೆ ತಿಳಿಯಲಾಗಲಿಲ್ಲ.

ಆದರೂ ಕೊನೆಯಲ್ಲಿ ಪರಿಸ್ಥಿತಿಯು ಕೇಡಾಗಿ ಪರಿವರ್ತನೆಯಾದಷ್ಟೇ ಕ್ಷಿಪ್ರಗತಿಯಲ್ಲಿ ಪರಿಸ್ಥಿತಿಯು ಒಳ್ಳೇಯದಾಗಿ ಮಾರ್ಪಡುತ್ತದೆ. ಯೋಬನಿಗೆ ಮತ್ತೊಂದು ಕುಟುಂಬ ಒದಗುತ್ತದೆ: ಆತನಿಗೆ ಏಳು ಗಂಡುಮಕ್ಕಳು ಮತ್ತು ಮೂರು ಹೆಣ್ಣುಮಕ್ಕಳು ಹುಟ್ಟುತ್ತಾರೆ. ಆತನ ಹೆಣ್ಣುಮಕ್ಕಳಷ್ಟು ಸುಂದರ ಸ್ತ್ರೀಯರು ಯಾರೂ ಇರಲಿಲ್ಲ. ಯೋಬನು ಈ ಹಿಂದೆಂದಿಗಿಂತಲೂ ಹೆಚ್ಚು ಸಂಪತ್ತುಳ್ಳವನಾದನು. ಯೋಬನು ನೆರೆಯ ಮುದುಕನಾಗಿ ಮಕ್ಕಳು ಮೊಮ್ಮಕ್ಕಳು ಅಂತೂ ನಾಲ್ಕು ತಲೆಮಾರನ್ನು ಕಾಣುತ್ತಾನೆ. ಅಬ್ರಹಾಮ, ದಾವೀದನಂತೆ ದಿನತುಂಬಿದ ಮುದುಕನಾಗಿ ಸಾಯುತ್ತಾನೆ.

ಜೀವನವು ಒಂದು ರಹಸ್ಯವಾಗಿದೆ

ಯೋಬನ ಪುಸ್ತಕವು ಒಂದು ಜೀವನದಂತಿದೆ. ಜೀವನವು ಕೆಲವೊಮ್ಮೆ ಗೊಂದಲಮಯವಾಗಿಯೂ, ಆಶ್ಚರ್ಯಕರವಾಗಿಯೂ ಇರುತ್ತದೆ. ಅನಿರೀಕ್ಷಿತವಾದ ದುರಂತಗಳು ಸಂಭವಿಸಬಹುದು, ಅಲ್ಲದೆ ಅನಿರೀಕ್ಷಿತವಾದ ಆಶೀರ್ವಾದಗಳು ಸಹ ಬರಬಹುದು. ದೀರ್ಘಕಾಲದ ಕಷ್ಟ, ವೇದನೆ ಮತ್ತು ಗೋಳಾಟಗಳು ಬರಬಹುದು. ಜೀವನದಲ್ಲಿ ಅನೇಕಬಾರಿ ಯಾಕೆ ಒಳ್ಳೆಯ ಮತ್ತು ಕೆಟ್ಟಸಂಗತಿಗಳು ಸಂಭವಿಸಲ್ಪಟ್ಟವೆಂದು ದೇವರು ಹೇಳಬೇಕೆಂದು ಬಯಸುತ್ತೇವೆ. ಯೋಬನು ತಾನು ಯಾಕೆ ಬಾಧೆಪಡುತ್ತಿದ್ದೇನೆಂದು ಹೇಳಬೇಕೆಂದು ದೇವರ ಬಳಿ ಬೇಡಿದಂತೆ ನಾವೂ ಸಹ ಬೇಡುತ್ತೇವೆ.

ಈ ಎಲ್ಲಾ ಅನಿಶ್ಚಿತತೆಗಳು ಯೋಬನ ಪುಸ್ತಕದ ಮುಖ್ಯ ಪಾಠವನ್ನು ಪ್ರತಿಬಿಂಬಿಸುತ್ತವೆ. ಈ ಪಾಠವನ್ನು ನಾವು ಅಧ್ಯಯನ 4 ರಲ್ಲಿ ಕಲಿತಿದ್ದೇವೆ. "ಜೀವನವನ್ನು ಪೂರ್ಣಮಟ್ಟಿಗೆ ಜೀವಿಸಬೇಕೆಂದರೆ, ಯಾಕೆ ವ್ಯತಿರಿಕ್ತ ಸಂಗತಿಗಳು ಸಂಭವಿಸುತ್ತವೆ ಎಂಬುದನ್ನು ತಿಳಿಯುವುದು ಪ್ರಾಮುಖ್ಯವಲ್ಲ, ಆದರೆ ಯಾಕೆ ವ್ಯತಿರಿಕ್ತ ಸಂಗತಿಗಳು ಸಂಭವಿಸುತ್ತವೆ ಎಂಬುದನ್ನು ಬಲ್ಲ ದೇವರನ್ನು ತಿಳಿದುಕೊಳ್ಳುವುದು ಪ್ರಾಮುಖ್ಯ ಸಂಗತಿಯಾಗಿದೆ.

ಇಂದು ದಕ್ಷಿಣ ಭಾರತದ ವಿಶ್ವಾಸಿಗಳಾದ ನಮ್ಮನ್ನು ಕಾಡುತ್ತಿರುವ ಪ್ರಶ್ನೆ ಕೆಟ್ಟ ಅಥವಾ ಒಳ್ಳೆಯ ಸಂಗತಿಗಳು ಸಂಭವಿಸುವಾಗ – "ಯಾಕೆ ನನಗೆ ಹೀಗಾಯಿತು?" ಎಂಬುವುದರಲ್ಲಿ ಮುಖ್ಯ ಪ್ರಶ್ನೆಯೇನಂದರೆ "ಇಂತಹ ಸಂಗತಿಗಳು ಸಂಭವಿಸುವಾಗ, ಯೇಸು ಕ್ರಿಸ್ತನ ಮೂಲಕ ದೇವರನ್ನು ಇನ್ನೂ ಸರಿಯಾಗಿ ತಿಳಿದುಕೊಳ್ಳಲು ಇದನ್ನು ನಾನು ಹೇಗೆ ಉಪಯೋಗಿಸಬಹುದು?" ಎಂಬುದಾಗಿದೆ.

ಇಬ್ರಿಯ ಪದ್ಯ ಮತ್ತು ಜ್ಞಾನ – ಉತ್ತರಗಳು

ಇಬ್ರಿಯ ಜ್ಞಾನದ ಸನ್ನಿವೇಶಗಳು – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ತನ್ನ ಜನರೊಂದಿಗಿನ ದೇವರ ಒಡಂಬಡಿಕೆಯ ಸಂಬಂಧದ ಎರಡು ಮುಖ್ಯ ಅಂಶಗಳನ್ನು "ಪ್ರೀತಿ ಮತ್ತು ನಂಬಿಗಸ್ತಿಕೆ ಮತ್ತು ನ್ಯಾಯ ಮತ್ತು ನೀತಿ" ಎಂಬ ವಿಧಗಳಿಂದ ವರ್ಗಿಕರಿಸಬಹುದು (ಗುರುತಿಸಬಹುದು).
2. ಒಡಂಬಡಿಕೆಯಲ್ಲಿ ದೇವರ ಜನರು ಆತನೊಂದಿಗೆ ಹೇಗೆ ವ್ಯವಹರಿಸಬೇಕೆಂಬುದಕ್ಕೆ ಇರುವ ಪ್ರಮುಖ ಅಂಶ "ಯೆಹೋವನ ಭಯ".
3. ದೇವಜನರ ಜೀವಿತವನ್ನು "ಜ್ಞಾನದ ಮಾರ್ಗ"ವೆಂಬುದಾಗಿ ವರ್ಣಿಸಬಹುದು.
4. ಜ್ಞಾನ ಮಾರ್ಗದ ಎರಡು ದಿಕ್ಕುಗಳೆಂದರೆ (ಆಯಾಮ):
   ಅ. ಆತ್ಮೀಕ ದಿಕ್ಕು, (ಆಯಾಮ): ಇದು ದೇವರೊಂದಿಗಿನ ದೇವಜನರ ಸಂಬಂಧದ ಕುರಿತಾಗಿದೆ.
   ಆ. ಪ್ರಾಯೋಗಿಕ ದಿಕ್ಕು (ಆಯಾಮ): ಇದು ದೇವರು ಸೃಷ್ಟಿಸಲ್ಪಟ್ಟ ಜಗತ್ತಿನೊಂದಿಗೆ ಇರುವ ದೇವಜನರ ಸಂಬಂಧದ ಕುರಿತಾಗಿದೆ.
5. ದೇವ ಜನರು ಆತನ ಸೃಷ್ಟಿಸಲ್ಪಟ್ಟ ಜಗತ್ತಿನೊಂದಿಗೆ ಈ ರೀತಿ ವ್ಯವಹರಿಸಬೇಕು:
   ಅ. ಪ್ರೀತಿಯಿಂದ
   ಆ. ನ್ಯಾಯದಿಂದ
   ಇ. ಪ್ರಾಮಾಣಿಕತೆಯಿಂದ
6. ಜ್ಞಾನ ಮಾರ್ಗದ ಪ್ರಾಯೋಗಿಕ ಆಯಾಮದಡಿಯಲ್ಲಿ ಕಂಡುಬರುವ ಮನುಷ್ಯ ಜೀವನದ 5 ಪ್ರಾಮುಖ ಕ್ಷೇತ್ರಗಳೆಂದರೆ:
   ಅ. ಕುಟುಂಬ
   ಆ. ಕೆಲಸ
   ಇ. ಆರೋಗ್ಯ ಮತ್ತು ಭದ್ರತೆ
   ಈ. ಭೌತಿಕ ಪೂರೈಕೆ
   ಉ. ನಾಲಿಗೆಯ ಉಪಯೋಗ (ಬಳಕೆ)
7. ಮನುಷ್ಯ ಜೀವನದ ಈ 5 ಕ್ಷೇತ್ರಗಳು 'ಪ್ರಾಯೋಗಿಕ'ವಾಗಿವೆ, ಯಾಕಂದರೆ, ಅವು ಜೀವನ ಶೈಲಿಗೆ ಸಂಬಂಧಿಸಿದ ವಿಷಯಗಳಾಗಿವೆ. ಜನರೊಂದಿಗೆ ಹೇಗೆ ವರ್ತಿಸುವುದು, ದೇವರ ಸೃಷ್ಟಿಯೊಂದಿಗೆ, ಪರಿಸ್ಥಿತಿಗಳೊಂದಿಗೆ ಮತ್ತು ನಮ್ಮ ಸುತ್ತಲಿನ ಪರಿಸ್ಥಿತಿಗಳೊಂದಿಗೆ ಹೇಗೆ ವ್ಯವಹರಿಸುವುದು ಎಂಬ ವಿಷಯಗಳ ಕುರಿತಾಗಿ ಪ್ರಾಯೋಗಿಕತೆಗೆ ವಿರುದ್ಧವಾದದ್ದು ಸೈದ್ಧಾಂತಿಕವಾಗಿದೆ (ಅಥವಾ ಬೌದ್ಧಿಕ). ಇಬ್ರಿಯ ಜ್ಞಾನವು ಸಿದ್ಧಾಂತ ಮತ್ತು ಕಲ್ಪನೆಗಳಿಗಿಂತಲೂ ಹೆಚ್ಚಾಗಿ ಪ್ರಾಯೋಗಿಕ ಅಂದರೆ ದೈನಂದಿನ ವಿಷಯಗಳೆಡೆಗೆ ಹೆಚ್ಚಿನ ಗಮನ ಕೊಡುತ್ತದೆ. "ಜ್ಞಾನದ ಮಾರ್ಗವು" ತತ್ವಶಾಸ್ತ್ರವಲ್ಲ ಆದರೆ (ಅಭ್ಯಾಸ) ಪ್ರಾಯೋಗಿಕತೆಯಾಗಿದೆ.
8. ಮನುಷ್ಯ ಜೀವನದ ಈ 5 ಪ್ರಾಮುಖ್ಯ ಕ್ಷೇತ್ರಗಳಲ್ಲಿನ ದೇವಜನರ ಜೀವಿತವು ಪ್ರೀತಿ, ನ್ಯಾಯ ಮತ್ತು ನೀತಿಯಿಂದ ಗುರುತಿಸಲ್ಪಡಬೇಕು.
9. ಚಿತ್ರಣದ ಕೇಂದ್ರಭಾಗದಲ್ಲಿ ಒಡಂಬಡಿಕೆಯನ್ನು ನಾವು ಕಾಣುತ್ತೇವೆ. ಇದು ಬಹು ಸಮರ್ಪಕವಾದದ್ದು, ಯಾಕಂದರೆ ಒಬ್ಬ ಪ್ರೀತಿಸುವ, ನಂಬಿಗಸ್ತ ಮತ್ತು ನೀತಿವಂತ ದೇವರ ಮತ್ತು ಆತನ ಜನರ ನಡುವಿನ ಒಡಂಬಡಿಕೆಯಾಗಿದೆ.

10. ದೇವಜನರು ಆತನು ಸೃಷ್ಟಿಸಲ್ಪಟ್ಟ ಜಗತ್ತಿನೊಂದಿಗೆ ಪ್ರೀತಿ, ನ್ಯಾಯ ಮತ್ತು ಪ್ರಾಮಾಣಿಕತೆಯಿಂದ ವ್ಯವಹರಿಸಬೇಕು. ಯಾಕೆಂದರೆ ದೇವರು ಅಂಥವನಾಗಿದ್ದಾನೆ. ದೇವರು ತನ್ನ ಜನರು ಸಹ ತನ್ನಂತೆ ಇರಬೇಕೆಂದು ಬಯಸುತ್ತಾನೆ: *"ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವುದರಿಂದ ನೀವೂ ಪರಿಶುದ್ಧರಾಗಿರಬೇಕು"* (ಯಾಜಕಕಾಂಡ 19:2).

ಕೀರ್ತನೆಗಳು – ಉತ್ತರಗಳು

ಕೀರ್ತನೆ 1 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 1 ಅನ್ನು ನಾನು ಈ ರೀತಿ ರಚನೆಗೊಳಿಸುತ್ತೇನೆ:

   ಅ. ನೀತಿವಂತನ ಮಾರ್ಗ, ವಚನ 1–3

   ಆ. ದುಷ್ಟರ ಮಾರ್ಗ, ವಚನ 4–5

   ಇ. ಮುಕ್ತಾಯ, ವಚನ 6

2. ಈ ಕೀರ್ತನೆಯು ನೀತಿವಂತರು ಮತ್ತು ದುಷ್ಟರು ಎಂಬ ಎರಡು ಬಗೆಯ ಜನರ ನಡುವಿನ ತದ್ವಿರುದ್ಧತೆ ಹೊಂದಿದೆ:

   ಅ. ಲೋಕದಲ್ಲಿ ಅವರ ಜೀವನ: ನೀತಿವಂತರು ದೇವರ ವಾಕ್ಯದಲ್ಲಿ ಆನಂದಿಸುವರು ಮತ್ತು ಜಾಗರೂಕರಾಗಿ ಅದನ್ನು ಅಭ್ಯಾಸಿಸುವರು. ಅವರು ದೇವರಿಂದ ಆಶೀರ್ವದಿಸಲ್ಪಡುವರು ಮತ್ತು ಜೀವನದಲ್ಲಿ ಸಫಲರಾಗುವರು. ಆದರೆ ದುಷ್ಟರು ಪಾಪಿಷ್ಟರೂ ಮತ್ತು ಧರ್ಮನಿಂದಕರೂ ಆಗಿದ್ದಾರೆ.

   ಆ. ಅವರ ಅಂತ್ಯ: ನೀತಿವಂತರು ದೇವರ ನ್ಯಾಯತೀರ್ಪಿನ ದಿನದಲ್ಲಿ ನಿಲ್ಲುವರು ಆದರೆ ದುಷ್ಟರು ದೇವಜನರ ಮಧ್ಯದಲ್ಲಿರುವುದಿಲ್ಲ. ಅವರು ನಾಶವಾಗುವರು.

3. ವಚನ 1 ಮತ್ತು 2 ಎರಡು ರೀತಿಯಲ್ಲಿ ಪರಸ್ಪರ ಜೋಡಿಸಲ್ಪಟ್ಟಿವೆ:

   ಅ. ವ್ಯಾಕರಣಬದ್ಧವಾಗಿ: ವಚನ 2 **"ಆದರೆ"** ಎಂಬ ತದ್ವಿರುದ್ಧ ಪದದಿಂದ ಪ್ರಾರಂಭವಾಗುತ್ತದೆ. ಇದು ಮಾನವನಿಗಿರುವ ಜೀವನದ ಎರಡು ತದ್ವಿರುದ್ಧ ಆಯ್ಕೆಗಳನ್ನು ತೋರಿಸುತ್ತದೆ. ಈ ವ್ಯಾಕರಣಬದ್ಧವಾದ ತದ್ವಿರುದ್ಧತೆಯನ್ನು ಕನ್ನಡದ **ಪವಿತ್ರ ಗ್ರಂಥ** ಮತ್ತು **ಸತ್ಯವೇದವು** ಭಾಷಾಂತರಗಳಲ್ಲಿ ಕಾಣಲಾಗುವುದಿಲ್ಲ. ಆದರೆ **ಪವಿತ್ರ ಬೈಬಲ್**ನಲ್ಲಿ ಇದನ್ನು ಕಾಣಬಹುದು.

   ಆ. ತಾರ್ಕಿಕವಾಗಿ: ವಚನ 1 ಜೀವನದ ಕೆಟ್ಟ ಮತ್ತು ತಪ್ಪಾದ ಆಯ್ಕೆಯನ್ನು ಹೊಂದಿದೆ (ದುಷ್ಟ, ಪಾಪಾತ್ಮ, ಧರ್ಮನಿಂದಕ). ವಚನ 2 ಜೀವನದ ಉತ್ತಮವಾದ ಆಯ್ಕೆಯನ್ನು ಹೊಂದಿದೆ (ದೇವರ ವಾಕ್ಯಕ್ಕೆ ಅನುಸಾರವಾದ ಜೀವನ).

4. ವಚನ 1 ರಲ್ಲಿ ಮೂರು ಬಗೆಯ ಕೆಟ್ಟಜನರ ಬಗ್ಗೆ ತಿಳಿಸಲಾಗಿದೆ: ದುಷ್ಟರು, ಪಾಪಾತ್ಮರು ಮತ್ತು ಧರ್ಮನಿಂದಕರು. ಈ ಗುಂಪನ್ನು ಒಂದು ಸಮಾನಾರ್ಥಕ ಸಮಾನಾಂತರತೆಯಾಗಿ ನೋಡಿದರೆ ಸುಲಭವಾಗಿ ಅರ್ಥೈಸಿಕೊಳ್ಳಬಹುದು. ದುಷ್ಟತನ, ಪಾಪ ಮತ್ತು ಧರ್ಮನಿಂದನೆಯು ದೇವಭಯವಿಲ್ಲದ ಜೀವನದ 3 ಅಂಶಗಳಾಗಿವೆ. ಇಂತಹ ಜೀವನವು ದೇವರ ನ್ಯಾಯತೀರ್ಪಿಗೊಳಗಾಗುವ ಜೀವನವಾಗಿದ್ದು ಅದು ನಾಶನದಲ್ಲಿ ಕೊನೆಗೊಳ್ಳುತ್ತದೆ.

   ಅದೇ ರೀತಿ **"ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಮತ್ತು ಧರ್ಮನಿಂದಕರೊಡನೆ ಕೂತುಕೊಳ್ಳದೆ"** ಎಂಬ ಹೇಳಿಕೆಗಳನ್ನು ಸಮಾನಾರ್ಥಕಗಳಾಗಿ ಅರ್ಥೈಸಿಕೊಳ್ಳಬೇಕಿದೆ. ಪಾಪಾತ್ಮರು ನಿಂತುಕೊಂಡಿರುವಾಗ ಮತ್ತು ಧರ್ಮನಿಂದಕರು ಕುಳಿತಿರುವಾಗ, ದುಷ್ಟರು ನಡೆಯುವರು ಎಂದು ಕೀರ್ತನೆಗಾರನು ಹೇಳುತ್ತಿಲ್ಲ. ಇಲ್ಲಿ ನಡೆಯುವುದು, ನಿಂತುಕೊಳ್ಳುವುದು ಮತ್ತು ಕೂತುಕೊಳ್ಳುವುದು ಮನುಷ್ಯ ಜೀವನದ ಅಂಶಗಳಾಗಿವೆ. ದುಷ್ಟರು, ಪಾಪಾತ್ಮರು ಮತ್ತು ಧರ್ಮನಿಂದಕರೊಂದಿಗೆ ನಾವು ಬೆರೆಯಬಾರದೆಂಬುದು ಕೀರ್ತನೆಗಾರನು ಹೇಳುವ ಅಂಶವಾಗಿದೆ. ದೇವಭಯವಿಲ್ಲದ ಜನರಿಂದ ನಾವು ದೂರವಿರಬೇಕು. ನಮ್ಮ ಜೀವಿತವು ಅವರಿಗಿಂತ ವಿಭಿನ್ನವಾಗಿರಬೇಕು.

5. ಕೀರ್ತನೆಗಾರನ ಪ್ರಕಾರ ನೀತಿವಂತನು ಯೆಹೋವನ ಧರ್ಮಶಾಸ್ತ್ರದೊಂದಿಗೆ ಎರಡು ರೀತಿಯಲ್ಲಿ ವ್ಯವಹರಿಸುತ್ತಾನೆ:

   ಅ. ಆತನು ದೇವರ ವಾಕ್ಯದಲ್ಲಿ ಆನಂದಿಸುತ್ತಾನೆ. ಆತನು ಅದನ್ನು ಇಷ್ಟಪಡುತ್ತಾನೆ ಮತ್ತು ಹೊಗಳುತ್ತಾನೆ.

ಆ. ಆತನು ಜಾಗರೂಕತೆಯಿಂದ ಮತ್ತು ಎಡಬಿಡದೆ ದೇವರ ವಾಕ್ಯವನ್ನು ಅಭ್ಯಾಸಿಸುವನು (ಹಗಲಿರುಳು ಧ್ಯಾನಿಸುವನು).

6. ನೀತಿವಂತನು ಮತ್ತು ದುಷ್ಟನನ್ನು ವರ್ಣಿಸಲು ಕೀರ್ತನೆಗಾರನು ಉಪಮೆಗಳನ್ನು ಬಳಸುತ್ತಾನೆ:

ಅ. ನೀತಿವಂತನು ಮರದ ಹಾಗಿರುವನು. ಆ ಮರವು ಸಾಕಷ್ಟು ನೀರಿರುವ ಕಾಲುವೆಗಳ ಬಳಿಯಲ್ಲಿರುವುದು. ಹಾಗೇ ಇದು ಫಲಕೊಡುವ ಮರವಾಗಿದೆ. ನೀತಿವಂತನು ದೇವರಿಂದ ಆಶೀರ್ವದಿಸಲ್ಪಡುವನು. ಆತನು ಬೆಳೆದು ಬಹಳಷ್ಟು ಫಲಕೊಡುವನು.

ಅ. ದುಷ್ಟರು ಹೊಟ್ಟಿನಂತಿದ್ದಾರೆ. ಹೊಟ್ಟು ಪ್ರಯೋಜನಕ್ಕೆ ಬಾರದ್ದು. ಇದು ಗಾಳಿಯಿಂದ ಬಡಕೊಂಡು ಹೋಗುತ್ತದೆ. ಅದೇ ರೀತಿ ದುಷ್ಟರ ಜೀವನವು ಸಹ ಪ್ರಯೋಜನಕ್ಕೆ ಬಾರದ್ದಾಗಿದೆ. ಅವರಿಗೆ ಉತ್ತಮ ಭವಿಷ್ಯವೇ (ನಿರೀಕ್ಷೆ) ಇಲ್ಲ.

7. ಈ ಕೀರ್ತನೆಯು ಒಂದು ಜ್ಞಾನದ ಕೀರ್ತನೆಯಾಗಿದೆ. ಇದು ಜ್ಞಾನದ ವಿಷಯ ವಸ್ತುಗಳನ್ನು ಪದ್ಯರೂಪದಲ್ಲಿಡುತ್ತದೆ. ನಾವು ಹೇಗೆ ಜೀವಿಸಬೇಕು ಎಂಬುದರ ಬಗ್ಗೆ ಇಬ್ರಿಯ ಜ್ಞಾನವು ಹೆಚ್ಚು ಗಮನ ಹರಿಸುತ್ತದೆ. ಹಾಗಾಗಿ ತತ್ವಶಾಸ್ತ್ರದ ವಿಷಯಗಳಿಗಿಂತಲೂ ಹೆಚ್ಚಾಗಿ ಪ್ರಾಯೋಗಿಕ ಜೀವನಶೈಲಿಯ ವಿಷಯಗಳೊಂದಿಗೆ ವ್ಯವಹರಿಸುತ್ತದೆ. ಇಬ್ರಿಯ ಜ್ಞಾನದ ಒಂದು ಪ್ರಾಮುಖ್ಯವಾದ ವಿಷಯವಸ್ತುವು ಧರ್ಮಶಾಸ್ತ್ರ ಮತ್ತು ಒಡಂಬಡಿಕೆಗೆ ನಂಬಿಗಸ್ತರಾಗಿರುವುದರ ಪ್ರಾಮುಖ್ಯತೆಯಾಗಿದೆ. ಧರ್ಮಶಾಸ್ತ್ರಕ್ಕನುಸಾರವಾದ ಜೀವನವು ಈ ನಂಬಿಗಸ್ತಿಕೆಯನ್ನು ವ್ಯಕ್ತಪಡಿಸುತ್ತದೆ.

ಕೀರ್ತನೆ 1 ಆಲೋಚಿಸಿರಿ ಮತ್ತು ಚರ್ಚಿಸಿರಿ ಮೇಲಿನ ಟಿಪ್ಪಣಿಗಳು

1. ಈ ಕೀರ್ತನೆಯು ಇಡೀ ಪುಸ್ತಕವನ್ನು ಪರಿಚಯಿಸುತ್ತದೆ. ಪುಸ್ತಕದ ಕೊನೆಯ ತಿದ್ದುಪಡಿಗಾರರು ತಮ್ಮ ಓದುಗರು ಕೀರ್ತನೆಯ ಇಡೀ ಸಂಗ್ರಹವನ್ನು ಇಬ್ರಿಯ ಜ್ಞಾನವು ಪದ್ಯರೂಪದಲ್ಲಿ ವ್ಯಕ್ತಗೊಂಡ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕೆಂದು ನಮಗೆ ಹೇಳುತ್ತದೆ. ಅವರು ತನ್ನ ಜನರೊಂದಿಗಿನ ದೇವರ ಒಡಂಬಡಿಕೆಯ ಹಿನ್ನಲೆಯಲ್ಲಿ ಓದುಗರು ಕೀರ್ತನೆ ಪುಸ್ತಕವನ್ನು (ಇದರ ಪ್ರಾರ್ಥನೆ, ಸ್ತುತಿಗಳು, ಬೋಧನೆಗಳನ್ನು) ಉಪಯೋಗಿಸಬೇಕೆಂದು ಬಯಸಿದರು. ಕೀರ್ತನೆಗಳು ದೇವರಿಗೆ ಮತ್ತು ಆತನ ವಾಕ್ಯಕ್ಕೆ ಅಧೀನರಾಗುವ ಜೀವನ, ದೇವರೊಂದಿಗಿನ ಜೀವನದ ಭಾವನೆಗಳಾಗಿರಬೇಕೆಂದು ಬಯಸಿದರು.

2. ನೀತಿವಂತನನ್ನು ಮತ್ತು ದುಷ್ಟನನ್ನು ವರ್ಣಿಸಲು ಕೀರ್ತನೆಗಾರನು ಉಪಮೆಗಳನ್ನು ಉಪಯೋಗಿಸುತ್ತಾನೆ. ಅವು ಆ ದಿನಮಾನಗಳಲ್ಲಿ ದೈನಂದಿನ ಜೀವನದಿಂದಾಯ್ದ ಉಪಮೆಗಳಾಗಿದ್ದು ಕೃಷಿ ಸಮುದಾಯದಲ್ಲಿ ವಾಸಿಸುವ ಜನರಿಗೆ ಅರ್ಥೈಸಿಕೊಳ್ಳಲು ಅವು ಸುಲಭವಾಗಿದ್ದವು. ಆಳವಾಗಿ ಬೇರೂರಿ ಸದಾ ನೀರುಣಿಸಲ್ಪಡುವ ಮರವು ಹಸುರಾಗಿ ಬೆಳೆಯುತ್ತದೆ ಮತ್ತು ಅದು ಫಲವನ್ನು ಕೊಡುವುದು ಒಂದು ಸಕರಾತ್ಮಕ ಅಂಶವಾಗಿದೆ. ಹಾಗೆಯೇ ಒಬ್ಬ ದೇವರಲ್ಲಿ ಭಯಭಕ್ತಿಯುಳ್ಳ ನೀತಿವಂತ ವ್ಯಕ್ತಿಯ ಬಗ್ಗೆ ತನ್ನ ಓದುಗರು ಒಂದು ಸಕರಾತ್ಮಕ ಭಾವನೆಯನ್ನು ಹೊಂದಿರಬೇಕೆಂದು ಬಯಸುತ್ತಾನೆ.

ಹೊಟ್ಟನ್ನು ಪ್ರಯೋಜನಕ್ಕೆ ಬಾರದ ಮತ್ತು ಹಾರಿಹೋಗುವುದಕ್ಕಾಗಿ ಒಂದು ಸಂಕೇತವಾಗಿ ಬಳಸಲಾಗುತ್ತದೆ. ಇದು ಬಹು ರೀತಿ ನಕಾರಾತ್ಮಕ ಭಾವನೆ ಹೊಂದಿದೆ. ತನ್ನ ಓದುಗ ದುಷ್ಟಜೀವನವು ಪ್ರಯೋಜನಕ್ಕೆ ಬಾರದ್ದು ಮತ್ತು ನಾಶನಕ್ಕಾಗಿ ಇಡಲ್ಪಟ್ಟದೆಂದು ತಿಳಿದುಕೊಳ್ಳಬೇಕೆಂದು ಅಪೇಕ್ಷಿಸುತ್ತಾನೆ.

3. –

4. ಈ ಕೀರ್ತನೆಯಲ್ಲಿನ ಮೂರು ಬಗೆಯ ಸಮಾನಾಂತರತೆಗಳು ಇಂತಿವೆ:

ಅ. ಸಮಾನಾರ್ಥಕ ಸಮಾನಾಂತರತೆಯೆಂದರೆ – ಒಂದೇ ಬಗೆಯ ಆಲೋಚನೆಯು ಪುನರಾವರ್ತನೆಯಾಗುವುದಾಗಿದೆ:

- ವಚನ 1: ನಾಲ್ಕನೇ ಪ್ರಶ್ನೆಯ ಉತ್ತರ ನೋಡಿರಿ
- ವಚನ 5: **"ದುಷ್ಟರು"** ಮತ್ತು **"ಪಾಪಾತ್ಮರು"** ಸಮಾನರಾಗಿದ್ದಾರೆ. ಅವರು ದೇವಜನರ ಗಣಕ್ಕೆ ಸೇರಿದವರಲ್ಲ, ಆ ನಿಮಿತ್ತ ನ್ಯಾಯವಿಚಾರಣೆಯಲ್ಲಿ ಅವರು ನಿಲ್ಲುವುದಿಲ್ಲ.

ಆ. ವಿರೋಧಾತ್ಮಕ ಸಮಾನಾಂತರತೆಯೆಂದರೆ – ಎರಡು ಸಂಗತಿಗಳು ಪರಸ್ಪರ ತದ್ವಿರುದ್ಧವಾಗಿರುವುದು

- ವಚನ 1–2: ಮೂರನೇ ಪ್ರಶ್ನೆಯ ಉತ್ತರ ನೋಡಿರಿ.
- ವಚನ 6: ಇದು ನೀತಿವಂತ ಮತ್ತು ದುಷ್ಟನ ತದ್ವಿರುದ್ಧವಾದ ಅಂತ್ಯಗಳ ಕುರಿತಾಗಿದೆ.

ಇ. ಸಂಯೋಜಿತ ಸಮಾನಾಂತರತೆಯೆಂದರೆ – ಹೇಳಿಕೆಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಸೇರಿಸುವುದಾಗಿದೆ (ಕಾರಣ, ಪರಿಣಾಮ, ಫಲಿತಾಂಶದಂತ ಮಾಹಿತಿ).

- ವಚನ 3: ಉಪಮೆಗೆ ಹೆಚ್ಚಿನ ಮಾಹಿತಿಯನ್ನು ಸೇರಿಸಿರುವುದು – "ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದಂತಿರುವನು".
- ವಚನ 4: "ಹೊಟ್ಟು" ಎಂಬ ಉಪಮೆಗೆ ಹೆಚ್ಚಿನ ಮಾಹಿತಿ ಸೇರಿಸಲಾಗಿದೆ. ಆದರೆ ಇದನ್ನು ಕನ್ನಡ ಭಾಷಾಂತರದಲ್ಲಿ ಕಾಣಲಾಗುವುದಿಲ್ಲ.

5. 5 ನೇ ವಚನವು "ಕೈಯಾಸ್ಮಸ್" (ಎಕ್ಸ್ ರೀತಿಯ ರಚನೆ) ಎಂಬ ಅಲಂಕಾರಿಕ ರಚನೆಯನ್ನು ಒಳಗೊಂಡಿದೆ. ಇದನ್ನು ಕನ್ನಡ ಭಾಷಾಂತರದಲ್ಲಿ ಕಾಣಲಾಗುವುದಿಲ್ಲ. ಇದು ವಾಕ್ಯಭಾಗವನ್ನು ಎಕ್ಸ್ ರೀತಿಯಲ್ಲಿ ಜೋಡಿಸಿರುವುದಾಗಿದೆ.

ಅ. ಮೊದಲ ಮಾರ್ಗದಲ್ಲಿ ನಡೆಯುವವರಿಗೆ ಏನಾಗುತ್ತದೆ (ದೇವರು ಅವರನ್ನು ಕಾಯುತ್ತಾನೆ.

ಆ. ಮೊದಲ ಮಾರ್ಗ (ನೀತಿವಂತರ ಮಾರ್ಗ)

ಆ. ಎರಡನೇ ಮಾರ್ಗ (ದುಷ್ಟರ ಮಾರ್ಗ)

ಅ. ಎರಡನೇ ಮಾರ್ಗದಲ್ಲಿ ನಡೆಯುವವರಿಗೆ ಏನಾಗುತ್ತದೆ (ಅವರು ನಾಶವಾಗುವರು).

ಕೀರ್ತನೆ 2 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ಕೀರ್ತನೆಯನ್ನು ಈ ರೀತಿ ರಚನೆ ಮಾಡಬಹುದು:

   ಅ. ದಂಗೆಯೇಳುವ ರಾಜ್ಯಗಳು ಹೇಗೆ ದೇವರನ್ನು ವಿರೋಧಿಸುತ್ತಾವೆಂದು ಕೀರ್ತನೆಗಾರನು ವಿವರಿಸುವುದು, ವಚನ 1–3

   ಆ. ದೊಂಬಿಮಾಡುವವರನ್ನು ದೇವರು ಗದರಿಸುತ್ತಾನೆ, ವಚನ 4–6

   ಇ. ಅರಸನು ಮಾತನಾಡುತ್ತಾನೆ, ವಚನ 7–9

   ಈ. ಕೀರ್ತನೆಗಾರನು ಲೋಕದ ಅರಸರನ್ನು ಎಚ್ಚರಿಸುತ್ತಾನೆ, ವಚನ 10–12

2. ಕೀರ್ತನೆಯ ವಿಷಯಾಂಶಗಳು:

   ಅ. ಜನಾಂಗಗಳು: ದೊಂಬಿ ಮಾಡುವರು, ವ್ಯರ್ಥಕಾರ್ಯಗಳನ್ನು ಯೋಚಿಸುವರು, ದೇವರಿಗೆ ವಿರೋಧವಾಗಿ ಸನ್ನದ್ಧರಾಗಿ ನಿಂತಿದ್ದಾರೆ. ದೇವರು ಮತ್ತು ಆತನ ಅಭಿಷಕ್ತನ ಆಳ್ವಿಕೆಯಿಂದ ಹೊರಬರಬೇಕೆಂದು ಯೋಚಿಸುತ್ತಾರೆ, ಆದರೆ ದೇವರು ಗದರಿಸುವಾಗ ಅವರು ಕಳವಳಗೊಳ್ಳುವರು.

   ಆ. ಯೆಹೋವನು (ಕರ್ತನು): ಜನಾಂಗಗಳ ದೊಂಬಿಯ ಬಗ್ಗೆ ದೇವರು ತಲೆಕೆಡಿಸಿಕೊಳ್ಳುತ್ತಿಲ್ಲ. ಆತನು ಅವರನ್ನು ನೋಡಿ ನಗುವನು ಮತ್ತು ಪರಿಹಾಸ್ಯ ಮಾಡುವನು. ಅಲ್ಲದೆ ಅವರನ್ನು ಗದರಿಸುವನು. ತನ್ನ ಚಿತ್ತ ಮತ್ತು ಉದ್ದೇಶದ ಬಗ್ಗೆ ಆತನು ಜನಾಂಗಗಳಿಗೆ ಮತ್ತು ತನ್ನ ಅಭಿಷಕ್ತನಿಗೆ ತಿಳಿಸುತ್ತಾನೆ.

   ಇ. ಅಭಿಷಿಕ್ತನು: ಈತನು ಚೀಯೋನಿನಿಂದ ಜನಾಂಗಗಳನ್ನು ಆಳುವುದಕ್ಕಾಗಿ ದೇವರಿಂದ ನೇಮಿಸಲ್ಪಟ್ಟ ಅರಸನಾಗಿದ್ದಾನೆ. ಅಲ್ಲದೇ ಈತನು ದೇವರ ಮಗನಾಗಿದ್ದಾನೆ. ದೇವರು ಈತನಿಗೆ ಆಶೀರ್ವದಿಸಲು ಮತ್ತು ನಾಶಮಾಡಲು ಅಧಿಕಾರವನ್ನು ಕೊಟ್ಟಿದ್ದಾನೆ.

   ಈ. ಈ ರೀತಿಯಲ್ಲಿ ಒಬ್ಬರು ದೇವರೊಂದಿಗೂ ಆತನ ಮಗನೊಂದಿಗೂ ವ್ಯವಹರಿಸಬೇಕಿದೆ: ಪ್ರತಿಯೊಬ್ಬರು ಯೆಹೋವನನ್ನು ಸೇವಿಸಬೇಕು ಮತ್ತು ಆತನ ಮಗನಿಗೆ ಮುದ್ದಿಡಬೇಕು (ಅಧೀನರಾಗಬೇಕು). ಅಲ್ಲದೇ ಆತನ ಮಗನನ್ನು ಆಶ್ರಯಿಸಬೇಕು.

3. ಈ ಕೀರ್ತನೆಯಲ್ಲಿ ಒಂದೇ ವ್ಯಕ್ತಿಯ ಬಗ್ಗೆ 3 ರೀತಿಯ ವಿಭಿನ್ನವಾದ ಹೇಳಿಕೆಗಳನ್ನು ಬಳಸಲಾಗಿದೆ (ವಚನ 2, 5, 7):

   ಅ. **"ಆತನು ಅಭಿಷೇಕಿಸಿದವನು"**: ಹಳೇ ಒಡಂಬಡಿಕೆಯ ಕಾಲದಲ್ಲಿ ಎಣ್ಣೆಯನ್ನು ಆತನ ತಲೆಯ ಮೇಲೆ ಹೊಯ್ಯುವುದರ ಮೂಲಕ ಒಬ್ಬ ಅರಸನನ್ನು ನೇಮಿಸಲಾಗುತ್ತಿತ್ತು. **"ಅಭಿಷಕ್ತನು"** ಎಂಬ ಪದವು **"ಮೆಸ್ಸೀಯ"** ಎಂಬ ಇಬ್ರಿಯ ಶೀರ್ಷಿಕೆಯ ಮೂಲವಾಗಿದೆ. ನಂತರ ಗ್ರೀಕ್ ಭಾಷಾಂತರದಲ್ಲಿ **"ಕ್ರಿಸ್ತನು"** ಎಂದಾಯಿತು.

   ಆ. **"ನನ್ನ ಅರಸನು"**: ಯೆರೂಸಲೇಮಿನ ಸಿಂಹಾಸನದ ಮೇಲಿನ ಅರಸನ ಬಗ್ಗೆ ದೇವರು **"ನನ್ನ ಅರಸನು"** ಎಂದು ಹೇಳುತ್ತಾನೆ. ಇಸ್ರಾಯೇಲ್ ಅರಸನನ್ನು ನೇಮಿಸುವವನು ಮತ್ತು ಸ್ಥಾಪಿಸುವವನು ದೇವರೇ ಆಗಿದ್ದಾನೆ.

   ಇ. **"ನನಗೆ ಮಗನು"**: ಇಸ್ರಾಯೇಲ್ ಅರಸನು ದೇವರ **"ಮಗ"** ಎಂಬುದಾಗಿ ಪರಿಗಣಿಸಲ್ಪಡುತ್ತಿದ್ದನು (ಆತನು ಜನರೊಂದಿಗೆ ದೇವರನ್ನು ಪ್ರತಿನಿಧಿಸುವ ರೀತಿ). ಹೊಸ ಒಡಂಬಡಿಕೆಯಲ್ಲಿ ತನ್ನ ದೀಕ್ಷಾಸ್ನಾನದ ಸಮಯದಲ್ಲಿ ತಂದೆಯಾದ ದೇವರ ಹೇಳಿಕೆಯ ಮೂಲಕ ಒಂದು ವಿಶಿಷ್ಠವಾದ ರೀತಿಯಲ್ಲಿ ಯೇಸು ಕ್ರಿಸ್ತನು ದೇವರ ಮಗನಾಗಿದ್ದಾನೆ (ಮತ್ತಾಯ 3:17, ಮಾರ್ಕ 1:11, ಲೂಕ 3:22).

4. ಕೀರ್ತನೆಗಾರನು ಮಗನನ್ನು ಆಶ್ರಯಿಸುವವರು ಆಶೀರ್ವದಿಸಲ್ಪಡುವರು ಎಂದು ಹೇಳುತ್ತಾನೆ.

ಕೀರ್ತನೆ 2 ಆಲೋಚಿಸಿರಿ ಮತ್ತು ಚರ್ಚಿಸಿರಿ ಮೇಲಿನ ಟಿಪ್ಪಣಿಗಳು

1. "ಧನ್ಯರು" ಎಂಬ ಪದವನ್ನು ಕೀರ್ತನೆ 2:12 ಮತ್ತು 1:1 ರಲ್ಲಿ ಕಾಣಬಹುದು. ಇದು ಕೀರ್ತನೆ 1 ಮತ್ತು 2 ಅನ್ನು ಇದೇ ಕೀರ್ತನೆ ಪುಸ್ತಕಕ್ಕೆ ಒಂದು ಪೀಠಿಕೆಯಾಗಿ ಅರ್ಥೈಸಿಕೊಳ್ಳಲು ಸಹಾಯಿಸುತ್ತದೆ. ಈ ಪೀಠಿಕೆಯು ಎರಡು ದೃಷ್ಟಿಕೋನಗಳನ್ನು ಹೊಂದಿದೆ:

   ಅ. ಕೀರ್ತನೆ 1 ರ ದೃಷ್ಟಿಕೋನವು ವೈಯಕ್ತಿಕವಾದುದ್ದಾಗಿದೆ: ನೀತಿವಂತಿಕೆಯ ಮಾರ್ಗವನ್ನು ಅನುಸರಿಸಿದಾಗ ಪ್ರತಿಯೊಬ್ಬ ದೇವಜನರು ಆಶೀರ್ವಾದವನ್ನು ಅನುಭವಿಸುವರೆಂದು ಇದು ಸಾರಿ ಹೇಳುತ್ತದೆ.

   ಆ. ಕೀರ್ತನೆ 2 ರ ದೃಷ್ಟಿಕೋನವು ಜಾಗತಿಕವಾಗಿದೆ: ದೇವರು ಮತ್ತು ಆತನ ಅಭಿಷಕ್ತ ಅರಸನ ಒಡೆಯತ್ವವನ್ನು ಅರಿತವರೆಲ್ಲರ ಆಶೀರ್ವಾದವನ್ನು ಇದು ತಿಳಿಸುತ್ತದೆ.

2. ಕೀರ್ತನೆ 2 ರ ಕೆಲವು ಸಾಹಿತ್ಯದ ಲಕ್ಷಣಗಳು:

   ಅ. ವಚನ 3, 4 ಮತ್ತು 5 ರಲ್ಲಿನ ಸಮಾನಾಂತರತೆಗಳು:

   - ಸಮಾನಾರ್ಥಕ ಸಮಾನಾಂತರತೆ, ವಚನ 3: "ಬಂಧನಗಳನ್ನು ಕಿತ್ತು" ಮತ್ತು "ಬೇಡಿಗಳನ್ನು ಮುರಿದು" ಎರಡು ಸಾಲುಗಳಲ್ಲಿರುವ ಈ ಹೇಳಿಕೆಗಳು ಸಮಾನಾರ್ಥಕವಾಗಿವೆ. ಅವುಗಳ ಅರ್ಥ ಒಂದೇ ಆಗಿದೆ.

   - ವಚನ 4 ರಲ್ಲಿನ ಸಮಾನಾರ್ಥಕ ಸಮಾನಾಂತರತೆ: ಮೊದಲ ಸಾಲಿನಲ್ಲಿನ "ಪರಲೋಕದಲ್ಲಿ ಆಸನಾರೂಢನಾಗಿರುವಾತನು" ಮತ್ತು ಎರಡನೇ ಸಾಲಿನಲ್ಲಿನ "ಕರ್ತನು" ಎಂಬ ಪದ ಅಲ್ಲದೆ "ನಗುವನು" ಮತ್ತು "ಪರಿಹಾಸ್ಯ ಮಾಡುವನು" ಎಂಬ ಪದಗಳ ಅರ್ಥ ಸಹ ಹೆಚ್ಚೂ ಕಡಿಮೆ ಒಂದೇ ಆಗಿವೆ.

   - ಸಂಯೋಜಿತ ಸಮಾನಾಂತರತೆ, ವಚನ 5: ಮೊದಲ ಸಾಲು ಒಂದು ಹೇಳಿಕೆ ("ಆತನು ಸಿಟ್ಟಾಗಿ") ಯನ್ನು ಒಳಗೊಂಡಿದೆ. ಎರಡನೆಯ ಸಾಲು ಇದಕ್ಕೆ ಮಾಹಿತಿಗಳನ್ನು ಸೇರಿಸುತ್ತದೆ.

   ಆ. ವಚನ 3 ರಲ್ಲಿ ಕರ್ತನು ಮತ್ತು ಆತನ ಅಭಿಷಿಕ್ತನೊಂದಿಗಿನ ಸಂಬಂಧದಲ್ಲಿ ತಮ್ಮ ಸ್ಥಿತಿಗತಿಗಳ ಬಗ್ಗೆ ಜನಾಂಗಗಳ ಅರಸರು ಮಾತನಾಡುತ್ತಾರೆ. ತಮ್ಮ ಮೇಲಣ ದೇವರ ಒಡೆಯತ್ವವನ್ನು, ಸ್ವಾತಂತ್ರ್ಯದ ಕೊರತೆಯೆಂಬುದಾಗಿ ಅವರು ಕಾಣುತ್ತಾರೆ. ಹಾಗಾಗಿ ಇದನ್ನು ತಿಳಿಸಲು ಎರಡು ನಕಾರಾತ್ಮಕವಾದ ರೂಪಾಲಂಕಾರಗಳನ್ನು ಅವರು ಉಪಯೋಗಿಸುತ್ತಾರೆ:

   - ಬಂಧನಗಳು

   - ಬೇಡಿಗಳು

   ಇ. ಮಾನವೀಕರಣವೆಂದರೆ – ದೇವರನ್ನು ಮನುಷ್ಯನ ಸ್ವಭಾವಗಳಿಂದ ವರ್ಣಿಸುವುದು. ವಚನ 4 ರಲ್ಲಿ 3 ಮಾನವೀಕರಣಗಳನ್ನು ನಾವು ಕಾಣುತ್ತೇವೆ.:

   - ದೇವರು ಆಸನಾರೂಡನಾಗಿರುವನು (ಕುಳಿತಿದ್ದಾನೆ): ಇದರರ್ಥ ದೇವರ ಅಧಿಕಾರವನ್ನು ಭೂಲೋಕದ ಅರಸನ ಅಧಿಕಾರದೊಂದಿಗೆ ಹೋಲಿಸಿರುವುದು. ಆದರೆ ಅಲ್ಲಿ ಒಂದು ಪ್ರಾಮುಖ್ಯವಾದ ವ್ಯತ್ಯಾಸವಿದೆ. ದೇವರು "ಪರಲೋಕದಲ್ಲಿ" ಆಸನಾರೂಢನಾಗಿದ್ದಾನೆ. ಇದರರ್ಥ ದೇವರ ಶಕ್ತಿ (ಬಲವು) ಸಾರ್ವತ್ರಿಕವಾಗಿದೆ.

   - ದೇವರು ನಗುವನು: ಜನಾಂಗಗಳ ಅರಸರೊಂದಿಗಿನ ದೇವರ ಸ್ವಭಾವವನ್ನು ಭೂಲೋಕದ ಪ್ರಸಿದ್ಧ ರಾಜರುಗಳು ತಮ್ಮ ವಿರೋಧಿ ಮತ್ತು ಬಲಹೀನ ಅರಸರನ್ನು ಹೇಗೆ ನೋಡುವರು ಎಂಬುದರೊಂದಿಗೆ ಹೋಲಿಸಲಾಗಿದೆ. ಅವರ ಮಾತನ್ನು ಆತನು ಗಂಭೀರವಾಗಿ ಪರಿಗಣಿಸುವುದಿಲ್ಲ, ಬದಲಾಗಿ ಅವರನ್ನು ನೋಡಿ ನಕ್ಕು ಪರಿಹಾಸ್ಯ ಮಾಡುವನು.

   - ಕರ್ತನು ಪರಿಹಾಸ್ಯ ಮಾಡುವನು: ಇದರರ್ಥ ಸಹ ಹೆಚ್ಚೂ ಕಡಿಮೆ ಈ ಹಿಂದಿನ ಮಾನವೀಕರಣದಂತಿದೆ.

   ಈ. ವಚನ 9 ರಲ್ಲಿ ಮೆಸ್ಸೀಯನ ಭವಿಷ್ಯತ್ತಿನ ಆಳ್ವಿಕೆಯ ಎರಡು ರೂಪಾಲಂಕಾರಗಳೊಂದಿಗೆ ವರ್ಣಿಸಲ್ಪಟ್ಟಿದೆ.

   - ಕಬ್ಬಿಣದ ಗದೆಯಿಂದ ಅವರನ್ನು ಆಳುವಿ (ನಾಶಮಾಡುವಿ). ಸಾಮಾನ್ಯವಾಗಿ ಗದೆಯು ರಾಜ್ಯಾಧಿಕಾರದ ಸಂಕೇತವಾಗಿದೆ. ಕಬ್ಬಿಣವು ಬಲವನ್ನು ಸೂಚಿಸುತ್ತದೆ. ಹಾಗೆಯೇ ಮುಂದಿನ ಮೆಸ್ಸೀಯನ ರಾಜ್ಯಾಡಳಿತವು ಬಲಪರಾಕ್ರಮದಿಂದಿರುತ್ತದೆ.

- ಮಣ್ಣಿನ ಮಡಿಕೆಯಂತೆ ಒಡೆದು ಹಾಕುವಿ: ಮಡಿಕೆಯನ್ನು ಒಡೆದು ಹಾಕುವುದು ವೈರಿಯನ್ನು ತುಳಿದು ಹಾಕುವ ಸಂಕೇತವಾಗಿದೆ. ಹಾಗೆಯೇ ಮೆಸ್ಸೀಯನು ತನ್ನೆಲ್ಲಾ ವೈರಿಗಳನ್ನು ಜಯಿಸುವನು. ಯೆರೆಮೀಯ 19:11 ರಲ್ಲಿ ದೇವರು ಯೆಹೂದ ಸಾಮ್ರಾಜ್ಯದೊಂದಿಗೆ ಹೇಗೆ ವ್ಯವಹರಿಸುವನು ಎಂಬುದರ ಕುರಿತಾಗಿ ಈ ರೂಪಾಲಂಕಾರವನ್ನು ಬಳಸಿದ್ದಾನೆ.

ಉ. ಈ ಕೀರ್ತನೆಯ ಅಲಂಕಾರಿಕ ಪ್ರಾರಂಭವನ್ನು **ಪೀಠಿಕೆ ಮತ್ತು ಟಿಪ್ಪಣಿಯಲ್ಲಿ** ವಿವರಿಸಲಾಗಿದೆ.

ಊ. ಈ ಕೀರ್ತನೆಯ ನಾಲ್ಕು ಭಾಗಗಳು ನಾಲ್ಕು ಬಗೆಯ ದೃಷ್ಟಿಕೋನಗಳನ್ನು ವ್ಯಕ್ತಪಡಿಸುತ್ತವೆ. ಇದನ್ನು ಮೇಲ್ಕಂಡ ಮೊದಲ ಉತ್ತರದಲ್ಲಿ ನೀವು ಗಮನಿಸಿರಬಹುದು.

- ಮೊದಲ ಮತ್ತು ನಾಲ್ಕನೇಯ ಭಾಗವು ಕೀರ್ತನೆಗಾರನ ದೃಷ್ಟಿಕೋನವನ್ನು ತಿಳಿಸುತ್ತವೆ.

- ಎರಡನೇಯ ಭಾಗದಲ್ಲಿ ದೇವರು ದೊಂಬಿಮಾಡುವ ರಾಷ್ಟ್ರಗಳ ಮೇಲಿನ ತನ್ನ ದೃಷ್ಟಿಕೋನವನ್ನು ತಿಳಿಸುತ್ತಾನೆ. ಅಲ್ಲದೆ ಆತನು ದೇವರ ಮಾತುಗಳನ್ನು ಬಳಸುತ್ತಾನೆ. ಮೂರನೇ ಭಾಗದಲ್ಲಿ ಕರ್ತನ ಅಭಿಷಕ್ತ ಅರಸನು ಮಾತನಾಡುತ್ತಾನೆ. ಹಾಗೆಯೇ ಕೀರ್ತನೆಯ ಮಧ್ಯದೆರಡು ಭಾಗಗಳಲ್ಲಿ ದೇವರ ದೃಷ್ಟಿಕೋನಗಳನ್ನು ಕಾಣಬಹುದು.

3. ಎರಡನೇ ಕೀರ್ತನೆಯು **"ಮೆಸ್ಸೀಯನ ಕೀರ್ತನೆ"** ಗಳಲ್ಲಿ ಒಂದಾಗಿದ್ದು ಅನೇಕ ಬಾರಿ ಹೊಸ ಒಡಂಬಡಿಕೆಯಲ್ಲಿ ಇದು ಕಂಡುಬರುತ್ತದೆ. ಈ ಹೇಳಿಕೆಗಳ ಮೂಲಕ ಯೇಸು ಕ್ರಿಸ್ತನ ಬಗ್ಗೆ ಈ ಸಂಗತಿಯನ್ನು ನಾವು ಕಲಿಯುತ್ತೇವೆ:

ಅ. ಕೀರ್ತನೆ 2:2, ಅಪೊ.ಕೃತ್ಯ 4:25–26 (ಯೆರೂಸಲೇಮಿನ ವಿಶ್ವಾಸಿಗಳು ಪ್ರಾರ್ಥಿಸುವದು):

ಯೇಸು ಕ್ರಿಸ್ತನು ಕೀರ್ತನೆ 2 ರ ಅಭಿಷಕ್ತನೆಂಬುದಾಗಿ ಹೊಸ ಒಡಂಬಡಿಕೆಯ ಸಭೆಯು ತಿಳಿದುಕೊಂಡಿತು. ಆತನು ಮೆಸ್ಸೀಯನಾಗಿದ್ದಾನೆ. ಯೋಹಾನ 1:25 ಮತ್ತು 41 ಅನ್ನು ಹೋಲಿಸಿರಿ.

ಆ. ಕೀರ್ತನೆ 2:7:

- ಮತ್ತಾಯ 3:17 (ಯೇಸು ಕ್ರಿಸ್ತನ ದೀಕ್ಷಾಸ್ನಾನ): ಕೀರ್ತನೆ 2 ರಲ್ಲಿ ತಿಳಿಸಲ್ಪಟ್ಟಂತೆ ಯೇಸುವು ತನ್ನ ಮಗನೆಂಬುದಾಗಿ ದೇವರು ದೃಢೀಕರಿಸಿದನು.

- ಮತ್ತಾಯ 4:3 (ಸೈತಾನನು ಯೇಸುವನ್ನು ಶೋಧಿಸುವುದು): ಕೀರ್ತನೆ 2 ರ ಪ್ರಕಾರ ಯೇಸು ಕ್ರಿಸ್ತನು ದೇವರ ಮಗನಾಗಿದ್ದಾನೆಂಬುದಾಗಿ ಸೈತಾನನು ತಿಳಿದುಕೊಂಡನು.

- ಮತ್ತಾಯ 7:21 (ಯೇಸುವು ದೇವರ ಬಗ್ಗೆ ಹೇಳುವುದು) ಮತ್ತು ಮಾರ್ಕ 1:1 (ಯೇಸು ಕ್ರಿಸ್ತನ ಗುರುತಿನ ಬಗ್ಗೆ): ಎಲ್ಲಾ ಸುವಾರ್ತೆಗಳಲ್ಲಿ **"ನನ್ನ ತಂದೆ"** ಮತ್ತು **"ಪರಲೋಕದಲ್ಲಿರುವ ನನ್ನ ತಂದೆ"** ಎಂಬುದಾಗಿ ಅನೇಕಬಾರಿ ಯೇಸು ಕ್ರಿಸ್ತನು ಹೇಳಿದನು.

  ಸುವಾರ್ತೆಗಳಲ್ಲಿ ಅನೇಕಬಾರಿ ಆತನು **"ದೇವಕುಮಾರನು"** ಎಂಬುದಾಗಿ ಕರೆಯಲ್ಪಟ್ಟನು. ದೇವರೊಂದಿಗಿನ ಯೇಸುವಿನ ಸಂಬಂಧದ ಕುರಿತಾದ ಈ ಹೇಳಿಕೆಗಳು ಕೀರ್ತನೆ 2 ಅನ್ನು ಪ್ರತಿಧ್ವನಿಸುತ್ತವೆ.

- ಅಪೊ.ಕೃತ್ಯ 13:33, 38 (ಪಿಸಿದ್ಯದ ಅಂತಿಯೋಕ್ಯದಲ್ಲಿನ ಸಭಾಮಂದಿರದಲ್ಲಿ ಪೌಲನು ಮಾತನಾಡುವುದು): ಕೀರ್ತನೆ 2:7 ರಲ್ಲಿ ಅಭಿಷಕ್ತ ಅರಸನ ಕುರಿತಾಗಿ ದೇವರು ಹೇಳಿದ ಮಾತು ಯೇಸು ಕ್ರಿಸ್ತನಲ್ಲಿ ನೆರವೇರಿದೆ ಎಂದು ಪೌಲನು ಹೇಳುತ್ತಾನೆ.

- ಇಬ್ರಿಯ 1:5 ಮತ್ತು 5:5 (ಯೇಸು ಕ್ರಿಸ್ತನ ಗುರುತಿನ ಬಗ್ಗೆ): ಮಗನ ಕುರಿತಾದ ದೇವರ ಮಾತು (ದೇವರ ಅಭಿಷಿಕ್ತನು) ಯೇಸು ಕ್ರಿಸ್ತನಲ್ಲಿ ನೆರವೇರಿದೆ ಎಂಬುದನ್ನು ತಿಳಿಸಲು ಇಬ್ರಿಯ ಗ್ರಂಥಕರ್ತನು ಕೀರ್ತನೆ 2:7 ಅನ್ನು ಎರಡು ಬಾರಿ ಉಪಯೋಗಿಸುತ್ತಾನೆ.

ಇ. ಕೀರ್ತನೆ 2:8–9:

- ಪ್ರಕಟಣೆ 2:26–27: ಯೋಹಾನನು ಥುವಥ್ಯೆರ ಸಭೆಗೆ ಬರೆಯುವ ತನ್ನ ಪತ್ರದಲ್ಲಿ ಕೀರ್ತನೆ 2 ಅನ್ನು ಬಳಸಲಾಗಿದೆ. ಜಯಶಾಲಿಯಾದವನಿಗೆ ಆತನು ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವನು.

- ಪ್ರಕಟಣೆ 12:5: ಇಲ್ಲಿ ಯೋಹಾನನು ಸೂರ್ಯನನ್ನು ಧರಿಸಿಕೊಂಡಿದ್ದ ಸ್ತ್ರೀಯು ಹೆತ್ತ ಗಂಡು ಮಗುವಿನ ಬಗ್ಗೆ ತಿಳಿಸಲು ಕೀರ್ತನೆ 2 ರಿಂದ "ಆತನು ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳುವನು" ಎಂಬ ಹೇಳಿಕೆಯನ್ನು ಉಪಯೋಗಿಸುತ್ತಾನೆ.

- ಪ್ರಕಟಣೆ 19:15: ಇಲ್ಲಿ ಯೋಹಾನನು ಬಿಳೀ ಕುದುರೆಯ ಮೇಲೆ ಕುಳಿತಿರುವವನ ಬಗ್ಗೆ "ಆತನು ಎಲ್ಲಾ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳುವನು" ಎಂಬ ಮಾತನ್ನು ಉಪಯೋಗಿಸುತ್ತಾನೆ. ಕೀರ್ತನೆ 2 ರ ಈ ಹೇಳಿಕೆಯ ಹಿನ್ನಲೆ (ಸನ್ನಿವೇಶವು) ಈ ಸವಾರನು ಯೇಸು ಕ್ರಿಸ್ತನಾಗಿದ್ದಾನೆಂದು ಸ್ಪಷ್ಟವಾಗುತ್ತದೆ.

4. ಇದೊಂದು ರಾಜವರ್ಣನೆಯ (ವೈಭವದ) ಕೀರ್ತನೆಯಾಗಿದೆ, ಯಾಕೆಂದರೆ ಇದು ಯೆರೂಸಲೇಮಿನಲ್ಲಿ ಆಳ್ವಿಕೆ ಮಾಡುತ್ತಿರುವ ಇಸ್ರಾಯೇಲ್ ಅರಸನ ಕುರಿತಾಗಿದೆ. ಹೆಚ್ಚಿನ ರಾಜವೈಭವದ ಕೀರ್ತನೆಗಳಂತೆ ಇದೂ ಸಹ ಒಂದು ಮೆಸ್ಸೀಯನ ಕೀರ್ತನೆಯಾಗಿದೆ. ಇದು ಯೇಸು ಕ್ರಿಸ್ತನು ದೇವರ ಮಗನು ಮತ್ತು ಅಭಿಷಕ್ತ ಅರಸನು ಎಂಬುದನ್ನು ಸೂಚಿಸುತ್ತದೆ. ಆದರೆ ಕೀರ್ತನೆಯಲ್ಲಿನ ಪ್ರತಿಯೊಂದು ಹೇಳಿಕೆ ಮತ್ತು ಮಾತು ಸಹ ಯೇಸು ಕ್ರಿಸ್ತನಿಗೆ ಹೊಂದಿಕೆಯಾಗುತ್ತದೆ ಎಂದರ್ಥವಲ್ಲ. ಬದಲಾಗಿ ಕೀರ್ತನೆಯನ್ನು ಎರಡು ಹಂತಗಳಲ್ಲಿ ಅರ್ಥೈಸಿಕೊಳ್ಳಬೇಕೆಂಬುದು ಇದರರ್ಥವಾಗಿದೆ.

   ಅ. ಐತಿಹಾಸಿಕ ಮಟ್ಟದಲ್ಲಿ ಪ್ರಾಚೀನ ಇಸ್ರಾಯೇಲ್ ರಾಜಪ್ರಭುತ್ವ

   ಆ. ಮೆಸ್ಸೀಯನ ಮಟ್ಟದಲ್ಲಿರುವ ಯೇಸು ಕ್ರಿಸ್ತನನ್ನು ಸೂಚಿಸುವ ಹೇಳಿಕೆಗಳು.

ಕೀರ್ತನೆ 3 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 3 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ದೇವರನ್ನು ಸಂಬೋಧಿಸುವುದು, ವಚನ 1

   ಆ. ಕಷ್ಟದ ವರ್ಣನೆ, ವಚನ 1–2

   ಇ. ದೇವರ ರಕ್ಷಣೆ ಮತ್ತು ಸಹಾಯದ ಕುರಿತಾದ ಭರವಸೆ, ವಚನ 3–4

   ಈ. ದೇವರಲ್ಲಿ ಭರವಸೆಯಿಡುವುದು, ವಚನ 5–6

   ಉ. ಪ್ರಾರ್ಥನೆ, ವಚನ 7–8

2. ದಾವೀದನು ತಾನು ನಿಜವಾಗಲು ದೇವರಲ್ಲಿ ಭರವಸವಿಟ್ಟಿದ್ದೇನೆ ಎಂಬುದಕ್ಕೆ ಎರಡು ಉದಾಹರಣೆಗಳನ್ನು ಕೊಡುತ್ತಾನೆ (ವಚನ 5–6):

   ಅ. ರಾತ್ರಿ ಮತ್ತು ಇಕ್ಕಟ್ಟಿನ ಸಮಯದಲ್ಲಿ ಸಹ ಮಲಗಿಕೊಂಡು ಸುಖವಾಗಿ ನಿದ್ದೆಮಾಡುವುದು.

   ಅ. ತನ್ನನ್ನು ಎದುರಿಸುತ್ತಿರುವ ವೈರಿಗಳಿಗೂ ಹೆದರದೆ ಇರುವುದು (ವಚನ 6).

3. ಕರ್ತನು ದಾವೀದನಿಗೆ **"ಪರಿಶುದ್ಧಪರ್ವತದಿಂದ"** ಉತ್ತರಿಸುತ್ತಾನೆ (ವಚನ 4). ಇದು ಯೆರೂಸಲೇಮ್ ಮತ್ತು ದೇವದರ್ಶನ ಗುಡಾರದಲ್ಲಿನ ಒಡಂಬಡಿಕೆಯ ಮಂಜೂಷದೊಡನೆ ಇದ್ದ ದೇವರ ಪ್ರಸನ್ನತೆಯನ್ನು ಸೂಚಿಸುತ್ತದೆ. ಆ ಸಮಯದಲ್ಲಿ ಇನ್ನೂ ಯೆರೂಸಲೇಮ್ ದೇವಾಲಯವು ಕಟ್ಟಲ್ಪಟ್ಟಿರಲಿಲ್ಲ.

4. ದಾವೀದನು ದೇವರು ತನ್ನ ವೈರಿಗಳನ್ನು ದವಡೆಯ ಮೇಲೆ ಹೊಡೆದು ಹಲ್ಲುಗಳನ್ನು ಉದುರಿಸುವುದರ ಮೂಲಕ ಕಠಿಣವಾಗಿ ಶಿಕ್ಷಿಸಬೇಕೆಂದು ಆಶಿಸುತ್ತಾನೆ (ವಚನ 7).

ಕೀರ್ತನೆ 3 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಮೊದಲ ಪರ್ಯಾಯ ಸಂಗತಿ ಉತ್ತಮವಾದುದ್ದಾಗಿದೆ (ದಾವೀದನು ವೈರಿಗಳಿಂದ ದೂಷಣೆಗಳನ್ನು ಎದುರಿಸುತ್ತಿದ್ದಾನೆ ಮತ್ತು ಈಗ ತನ್ನ ವ್ಯಾಜ್ಯವನ್ನೆಲ್ಲಾ ನ್ಯಾಯಾಧಿಪತಿಯಾದ ದೇವರ ಬಳಿ ತರುತ್ತಾನೆ). ವಚನ 6 ಅನ್ನು ಒಂದು ಯುದ್ಧದ ಸನ್ನಿವೇಶದ ವರ್ಣನೆಯಾಗಿ ತಿಳಿದುಕೊಳ್ಳಬಹುದು. ಇಡೀ ಕೀರ್ತನೆಯ ಸ್ವರ/ಭಾವವು ವೈಯಕ್ತಿಕ ಬಾಧೆಯಲ್ಲಿರುವ ವ್ಯಕ್ತಿಯೊಬ್ಬನು ದೇವರ ರಕ್ಷಣೆಯನ್ನು ಬಯಸುವುದನ್ನು ಸೂಚಿಸುತ್ತದೆ.

2. ದಾವೀದನು ಕರ್ತನೊಂದಿಗಿನ ತನ್ನ ಸಂಬಂಧವನ್ನು ವರ್ಣಿಸಲು ವಚನ 3 ರಲ್ಲಿ 2 ರೂಪಾಲಂಕಾರಗಳನ್ನು ಬಳಸುತ್ತಾನೆ.

   ಅ. ಗುರಾಣಿ: ರಕ್ಷಣೆಗಾಗಿ ಹಳೇ ಒಡಂಬಡಿಕೆಯಲ್ಲಿ ಇದು ಸರ್ವೇಸಾಮಾನ್ಯವಾಗಿದೆ. ಎಲ್ಲಾ ಕಡೆಯಿಂದಲೂ ದೇವರು ತನ್ನ ಸಂರಕ್ಷಕನಾಗಿದ್ದಾನೆಂದು ದಾವೀದನು ನಂಬಿದ್ದಾನೆ.

   ಆ. **"ತಲೆಯೆತ್ತುವಂತೆ ಮಾಡು"** – ದೇವರು ದಾವೀದನ ತಲೆಯನ್ನು ಎತ್ತುವಾಗ, ಆತನು ದಾವೀದನ ವೈರಿಗಳ ಮೇಲೆ ಆತನಿಗೆ ಜಯವನ್ನು ಕೊಡುತ್ತಾನೆ.

3. ಈ ಕೀರ್ತನೆಯಲ್ಲಿ ದಾವೀದನು ಮಾಡಿದಂತೆ ನಮ್ಮ ವೈರಿಗಳನ್ನು ಶಾರೀರಿಕವಾಗಿ ಶಿಕ್ಷಿಸಬೇಕೆಂದು ದೇವರಲ್ಲಿ ಪ್ರಾರ್ಥಿಸಲು ನನಗೆ ಕಷ್ಟಕರವೆನಿಸುತ್ತದೆ. ವಿಶ್ವಾಸಿಗಳು ಹೀಗೆ ಮಾಡಬೇಕೆಂದು ಯೇಸುವು ತಿಳಿಸಲಿಲ್ಲ. ಬದಲಾಗಿ ನಮ್ಮ ವೈರಿಗಳನ್ನು ಪ್ರೀತಿಸಬೇಕು ಮತ್ತು ನಮ್ಮನ್ನು ಹಿಂಸಿಸುವವರಿಗಾಗಿ ಪ್ರಾರ್ಥಿಸಬೇಕೆಂದು ಯೇಸು ನಮಗೆ ಹೇಳಿದ್ದಾನೆ.

   ನಾವು ನಮ್ಮ ವೈರಿಗಳನ್ನು ಆಶೀರ್ವದಿಸಬೇಕು, ಶಪಿಸಬಾರದು ಹಾಗಾಗಿ ನಮ್ಮನ್ನು ವಿರೋಧಿಸಿ, ಹಿಂಸಿಸುವವರನ್ನು ಶಿಕ್ಷಿಸಬೇಕೆಂದು ದೇವರ ಬಳಿಯಲ್ಲಿ ಬೇಡುವುದನ್ನು ನಮ್ಮ ವಿಶ್ವಾಸಿಗಳಿಗೆ ಕಲಿಸಿದರೆ ಕೀರ್ತನೆ 3:7 ಅನ್ನು ನಾವು ತಪ್ಪಾಗಿ ಉಪಯೋಗಿಸುವವರಾಗಿದ್ದೇವೆ.

ನಾನೆಣಿಸುತ್ತೇನೆ "ನನ್ನ ಎಲ್ಲಾ ಶತ್ರುಗಳ ದವಡೆಯ ಮೇಲೆ ಬಡಿದು ಅವರ ಹಲ್ಲುಗಳನ್ನು ಉದುರಿಸಿ ಬಿಡು" ಎಂಬ ದಾವೀದನ ಮಾತುಗಳನ್ನು ಅರ್ಥವಿವರಣೆಗೊಳಿಸಲು 2 ಉತ್ತಮವಾದ ವಿಧಗಳಿವೆ.:

ಅ. ಇಲ್ಲಿ ದಾವೀದನು "ಅತಿಶಯೋಕ್ತಿ" ಯೆಂದು ಕರೆಯಲ್ಪಡುವ ತಂತ್ರವನ್ನು ಉಪಯೋಗಿಸುತ್ತಾನೆ. ದಾವೀದನ ಪ್ರಾರ್ಥನೆಯನ್ನು ನಾವು ಈ ರೀತಿ ಮಾಡಬಹುದು. "ದೇವರೇ ನನ್ನ ವೈರಿಗಳ ಬಗ್ಗೆ ನನಗೇನನಿಸುತ್ತದೆಂದು ನೀನು ತಿಳಿದಿರುವಿ, ನನ್ನೆಲ್ಲಾ ಪರಿಸ್ಥಿತಿಯನ್ನು ನಿನಗೆ ಒಪ್ಪಿಸುತ್ತೇನೆ, ನಿನ್ನ ಚಿತ್ತದ ಪ್ರಕಾರ ಅವರೊಂದಿಗೆ ನೀನು ವ್ಯವಹರಿಸು".

ಆ. ಕೀರ್ತನೆ 3:7 **ಶಪಿಸುವ ಕೀರ್ತನೆಗೆ** ಒಂದು ಉದಾಹರಣೆಯಾಗಿದೆ.

4. ಈ ಕೀರ್ತನೆಯ ಕೆಲವು ಸಾಹಿತ್ಯದ ಲಕ್ಷಣಗಳು ಇಂತಿವೆ:

ಅ. ವಚನ 7 ರಲ್ಲಿನ ಸಮಾನಾಂತರತೆಗಳು:

- ವಚನದ ಮೊದಲ ಭಾಗದಲ್ಲಿನ ಸಂಯೋಜಿತ ಸಮಾನಾಂತರತೆ (ಕನ್ನಡದಲ್ಲಿ ಸ್ಪಷ್ಟವಾಗಿಲ್ಲ) "ಎದ್ದು ಬಂದು ನನ್ನನ್ನು ರಕ್ಷಿಸು" ಎರಡನೇಯ ಸಾಲು ಮೊದಲ ಸಾಲಿನ ಪರಿಣಾಮವನ್ನು ತೋರಿಸುತ್ತದೆ. ದೇವರು ದಾವೀದನನ್ನು ಆತನ ವೈರಿಗಳಿಂದ ಬಿಡಿಸಲು ಏಳುತ್ತಾನೆ.

- ವಚನದ ಎರಡನೇ ಭಾಗದಲ್ಲಿ ಸಮಾನಾರ್ಥಕ ಸಮಾನಾಂತರತೆಯಿದೆ:

  "ದವಡೆಯ ಮೇಲೆ ಬಡಿದು" "ಅವರ ಹಲ್ಲುಗಳನ್ನು ಉದುರಿಸಿಬಿಡು" ಇವೆರಡರ ಅರ್ಥ ಹೆಚ್ಚೂ ಕಡಿಮೆ ಒಂದೇ ಆಗಿದೆ. ವೈರಿಗಳು ಮತ್ತು ದುಷ್ಟರು ಒಂದೇ ವರ್ಗದ ಜನರನ್ನು ಸೂಚಿಸುತ್ತವೆ.

ಆ. ಈ ಕೀರ್ತನೆಯಲ್ಲಿನ ನಿರೂಪಕನು ಒಬ್ಬನೇ ವ್ಯಕ್ತಿಯಾಗಿದ್ದಾನೆ (ಆತನು ಅರಸನಾದ ದಾವೀದನು ಎಂದು ಶೀರ್ಷಿಕೆ ಹೇಳುತ್ತದೆ). ತನ್ನ ಬಗ್ಗೆ ಆತನು ವ್ಯಕ್ತಿಗತವಾದ ನನ್ನ ವಿರೋಧಿಗಳು ನನಗೆ ವೈರಿಗಳಾಗಿ, ನಾನು ಮೊರೆಯಿಡುವಾಗ ಎಂಬ ನಾಮ ಪದಗಳನ್ನು ಬಳಸುತ್ತಾನೆ. ವಚನ 2 ರಲ್ಲಿ ತನ್ನ ವೈರಿಗಳು ದೇವರಿಗೆ ಬೆಲೆ ಕೊಡುತ್ತಿಲ್ಲವೆಂದು ಹೇಳುತ್ತಾನೆ. ಈ ಕೀರ್ತನೆಯನ್ನು ಒಂದು ವ್ಯಕ್ತಿಗತವಾದ ಪ್ರಲಾಪವನ್ನಾಗಿ ವರ್ಗೀಕರಿಸಬಹುದು.

ಇ. ವಚನ 2 ರಲ್ಲಿನ ಅಂಶವನ್ನು ಹೊರತುಪಡಿಸಿ ಈ ಕೀರ್ತನೆಯು ದಾವೀದನೊಬ್ಬನ ದೃಷ್ಟಿಕೋನವನ್ನು ಒಳಗೊಂಡಿದೆ.

5. ಈ ಕೀರ್ತನೆಯ ಭಾವ/ಸ್ವರವು ದೇವರಲ್ಲಿ ಭರವಸವಿಡುವುದಾಗಿದೆ. ಇದಕ್ಕೆ ಪ್ರತೀ ವಚನಗಳಲ್ಲೂ ಸಹ ನಾವು ಭಾವನೆಗಳನ್ನು (ಹೇಳಿಕೆ) ಕಾಣಬಹುದು. ತನ್ನ ಇಕ್ಕಟ್ಟಿನ ಸನ್ನಿವೇಶದ ಹೊರತಾಗಿಯೂ ಸಹ ದಾವೀದನು ನಿರೀಕ್ಷೆಗೆಡುವುದಿಲ್ಲ. ದೇವರು ತನ್ನನ್ನು ಬಿಡುಗಡೆಗೊಳಿಸುತ್ತಾನೆಂದು ಆತನು ತಿಳಿದಿದ್ದಾನೆ.

6. ಈ ಕೀರ್ತನೆಯಲ್ಲಿನ ದೇವರ ಕುರಿತಾದ ದಾವೀದನ ತಿಳುವಳಿಕೆಯನ್ನು ಈ ರೀತಿ ಸಾರಾಂಶಗೊಳಿಸಬಹುದು.

- ದೇವರಿಗೆ ಸಂರಕ್ಷಿಸಲು ಮತ್ತು ಬಿಡುಗಡೆ ಮಾಡಲು ಶಕ್ತಿಯಿದೆ.

- ದೇವರಿಗೆ ಕಾಪಾಡಲು ಮತ್ತು ಬಿಡುಗಡೆ ಮಾಡಲು ಮನಸ್ಸಿದೆ: ಆತನು ಪ್ರಾರ್ಥನೆಗೆ ಉತ್ತರಿಸುತ್ತಾನೆ, ಆತನು ಕಾಪಾಡುತ್ತಾನೆ, ಆತನು ಆಶೀರ್ವದಿಸುತ್ತಾನೆ ಮತ್ತು ಆತನು ನಂಬಿಗಸ್ತನಾಗಿದ್ದಾನೆ.

ಕೀರ್ತನೆ 4 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 4 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ದಾವೀದನು ದೇವರಿಗೆ ಕಷ್ಟದಲ್ಲಿ ಮೊರೆಯಿಡುತ್ತಾನೆ, ವಚನ 1

   ಅ. ದಾವೀದನು ಜನರ ಕಡೆಗೆ ತಿರಿಗಿಕೊಂಡು ಮಾತನಾಡುತ್ತಾನೆ, ವಚನ 2–5

   ಇ. ದಾವೀದನು ದೇವರ ಕಡೆಗೆ ತಿರಿಗಿಕೊಂಡು ಮಾತನಾಡುತ್ತಾನೆ, ವಚನ 6–8

2. ಕೀರ್ತನೆಯ ವಿಷಯಾಂಶಗಳು:

   ಅ. ವಚನ 1: ದಾವೀದನು ದೇವರು ಒಬ್ಬ ನೀತಿವಂತ ಮತ್ತು ಕರುಣಾಮಯನಾದ ದೇವರಾಗಿದ್ದು, ತನ್ನ ಮೊರೆಗೆ ಉತ್ತರಿಸುವವನೂ ಮತ್ತು ಇಕ್ಕಟ್ಟಿನ ಸಮಯದಲ್ಲಿ ತನಗೆ ಸಹಾಯ ಮಾಡುವವನಾಗಿದ್ದಾನೆಂದು ದೇವರನ್ನು ವರ್ಣಿಸುತ್ತಾನೆ.

   ದಾವೀದನು ಈ ಬಾರಿಯೂ ಸಹ ತನ್ನ ಪ್ರಾರ್ಥನೆಗೆ ಉತ್ತರಿಸಿ, ಕಷ್ಟಗಳಿಂದ ತನ್ನನ್ನು ರಕ್ಷಿಸಬೇಕೆಂದು ದೇವರನ್ನು ನಿರೀಕ್ಷಿಸುತ್ತಾನೆ.

   ಆ. ವಚನ 2: ದಾವೀದನು ದೇವರನ್ನು ಬಿಟ್ಟು ಸುಳ್ಳು ದೇವರುಗಳನ್ನು ಹಿಂಬಾಲಿಸುವವರನ್ನು ದೂಷಿಸುತ್ತಾನೆ. ದೇವಜನರ ದ್ರೋಹವು ಅರಸನಾದ ದಾವೀದನಿಗೆ ನಾಚಿಕೆಯನ್ನು ತಂದಿತು.

   ಇ. ವಚನ 3: ದೇವರು ತನ್ನ ಜನರ ಕುರಿತಾಗಿ ಚಿಂತಿಸುತ್ತಾನೆ ಮತ್ತು ದಾವೀದನ ಪ್ರಾರ್ಥನೆಯನ್ನೂ ಸಹ ಕೇಳುತ್ತಾನೆಂದು ಹೇಳುವುದು.

   ಈ. ವಚನ 4–5: ದಾವೀದನು ಜನರನ್ನು ತಮ್ಮ ಇಕ್ಕಟ್ಟಿನ ಸಮಯದಲ್ಲಿ ಪಾಪಮಾಡಬಾರದೆಂದು ಎಚ್ಚರಿಸುತ್ತಾನೆ. ಬದಲಾಗಿ ಅವರು ತಮ್ಮ ದೇವದ್ರೋಹಕ್ಕಾಗಿ ಪಶ್ಚಾತ್ತಾಪಪಟ್ಟು ದೇವರಿಗೆ ನ್ಯಾಯವಾದ ಯಜ್ಞವನ್ನು ಸಮರ್ಪಿಸಿ, ಆತನಲ್ಲಿ ಭರವಸವಿಡಬೇಕು.

   ಉ. ವಚನ 6: ದಾವೀದನು ದೇವರನ್ನು ತನ್ನ ಜನರನ್ನು ಪ್ರಸನ್ನಮುಖದಿಂದ ನೋಡಬೇಕೆಂದು ಕೇಳಿಕೊಳ್ಳುತ್ತಾನೆ.

   ಊ. ವಚನ 7: ದಾವೀದನು ದೇವರು ತನ್ನ ಜನರಿಗೆ ಕೊಡುವ ಸಂತೋಷವು ಧಾನ್ಯದ್ರಾಕ್ಷೇಗಳು ಸಮೃದ್ಧಿಯಾಗಿ ಬೆಳೆದಾಗ ಸಿಗುವ ಆನಂದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿದೆಯೆಂದು ಸಾಕ್ಷೀಸುತ್ತಾನೆ.

   ಎ. ವಚನ 8: ದಾವೀದನು ಪ್ರತೀ ಸಂದರ್ಭದಲ್ಲೂ ಸಹ ದೇವರ ಮೇಲೆ ಭರವಸವಿಟ್ಟಿದ್ದಾನೆಂಬುದನ್ನು ತಿಳಿಸುತ್ತದೆ.

3. ಶೀರ್ಷಿಕೆಯು ಈ ಕೀರ್ತನೆಯ ಬಗ್ಗೆ ಎರಡು ಸಂಗತಿಗಳನ್ನು ನಮಗೆ ತಿಳಿಸುತ್ತದೆ:

   ಅ. ಈ ಕೀರ್ತನೆ ದಾವೀದನದೆಂದು ಹೇಳಲಾಗಿದೆ.

   ಆ. ಈ ಕೀರ್ತನೆಯನ್ನು ತಂತಿವಾದ್ಯದೊಂದಿಗೆ ಹಾಡತಕ್ಕದ್ದು.

ಕೀರ್ತನೆ 4 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 8 ಅನ್ನು ಆಧರಿಸಿ ಅನೇಕ ಸತ್ಯವೇದತಜ್ಞರು ಇದನ್ನು "ಅಸ್ತಮಾನ ಗೀತ" (ಸಂಜೆಯ ಕೀರ್ತನೆ) ಎಂದು ಕರೆಯುತ್ತಾರೆ (ಮಲಗಿಕೊಂಡು ಕೂಡಲೆ ನಿದ್ದೆ ಮಾಡುವೆನು). ಆದರೆ ಈ ಕೀರ್ತನೆಯಲ್ಲಿನ ಬೇರಾವುದು ಸಹ ಈ ಕಲ್ಪನೆಯನ್ನು ಬೆಂಬಲಿಸುವುದಿಲ್ಲ. ಹಾಗಾಗಿ ಈ ಕೀರ್ತನೆಯನ್ನು ದಿನದಲ್ಲಿ ಯಾವಾಗ ಬೇಕಾದರೂ ಉಪಯೋಗಿಸಬಹುದಾಗಿದೆ. ಇದೊಂದು ಇಕ್ಕಟ್ಟಿನ ಸಮಯದಲ್ಲಿನ ಭರವಸೆಯ ಹಾಡಾಗಿದೆ. ಹಾಗೆಯೇ ಅಂತಹ ಸಮಯದಲ್ಲಿ ದೇವರಲ್ಲಿನ ತಮ್ಮ ನಂಬಿಕೆ ಮತ್ತು ಭರವಸವನ್ನು ವ್ಯಕ್ತಪಡಿಸಲು ದೇವಜನರಿಂದ ಉಪಯೋಗಿಸಲ್ಪಟ್ಟಿದೆ. ವಿಶೇಷವಾಗಿ ಹಗಲು ನಮಗೆ ಕಷ್ಟಕರವಾಗಿದ್ದರೆ ಸಾಯಂಕಾಲದಲ್ಲಿ ಓದಲು ಖಂಡಿತವಾಗಿ ಇದೊಂದು ಸುಂದರವಾದ ಕೀರ್ತನೆಯಾಗಿದೆ.

2. ದಾವೀದನು ಈ ಕೀರ್ತನೆಯನ್ನು ಬರೆಯುವಾಗ ಎದುರಿಸಿದ ಸನ್ನಿವೇಶದ ಬಗ್ಗೆ ವಚನ 2 ಮತ್ತು 7 ರಲ್ಲಿ ಸುಳಿವುಗಳಿವೆ.

   ಅ. ಇಸ್ರಾಯೇಲ್ಯರು ದೇವರನ್ನು ಬಿಟ್ಟು ಸುಳ್ಳುದೇವತೆಗಳನ್ನು ಹಿಂಬಾಲಿಸಿದರೆಂದು ವಚನ 2 ಹೇಳುತ್ತದೆ. ದೇವರ ಸಾಮರ್ಥ್ಯವನ್ನು ಪ್ರಶ್ನಿಸುವಂತ ಸನ್ನಿವೇಶವನ್ನು ಅವರು ಹಾದು ಹೋಗಿರಬಹುದು. ಆ ನಿಮಿತ್ತ ಈಗ ಅವರು ದೇವರ ಮೇಲೆ ಕೋಪಗೊಂಡಿದ್ದಾರೆ (ವಚನ 4).

   ಆ. ವಚನ 7 ರಲ್ಲಿ ಧಾನ್ಯದ್ರಾಕ್ಷೆಯ ಬಗ್ಗೆ ತಿಳಿಸಲಾಗಿದೆ. ಇದು ಬಹುಶಃ ಪ್ರವಾಹದ ನಿಮಿತ್ತ ದೇಶವು ಕೊರತೆಯನ್ನು ಹಾದುಹೋಗಿರಬಹುದು ಎಂಬುದನ್ನು ಸೂಚಿಸುತ್ತದೆ. ಹಾಗಾಗಿ ಜನರು ಕಾನಾನ್ಯರ ದೇವರುಗಳು ತಮಗೆ ದೇಶದಲ್ಲಿ ಸಮೃದ್ಧಿಯಾಗಿ ಬೆಳೆ ಬೆಳೆಯಲು ಬೇಕಾದ ಮಳೆಯನ್ನು ನೀಡಬಹುದೆಂದು ನೀರಿಕ್ಷಿಸಿ ಅನ್ಯದೇವತೆಗಳ ಕಡೆಗೆ ತಿರುಗಿರುವಂತೆ ತೋರುತ್ತದೆ.

   ಇ. ಹಾಗೆಯೇ ಇಸ್ರಾಯೇಲ್ಯರು ಒಡಂಬಡಿಕೆಗೆ ಅಪನಂಬಿಗಸ್ತರಾದರು. ಇದು ಅರಸನಾದ ದಾವೀದನ ಮಹಿಮೆಯನ್ನು ನಾಚಿಕೆಗೀಡುಮಾಡಿತು (ವಚನ 2). ಆದರೆ ದೇವರು ತನ್ನ ಜನರಿಗೆ ಭದ್ರತೆಯನ್ನು ಕೊಟ್ಟು ಬೇಕಾದಷ್ಟು ಆಹಾರ ಮತ್ತು ಪಾನವನ್ನು ಕೊಡಬಲ್ಲನೆಂದು ದಾವೀದನು ದೇವರಲ್ಲಿ ಭರವಸವುಳ್ಳವನಾಗಿದ್ದನು (ವಚನ 8)

3. ಈ ಕೀರ್ತನೆಯಲ್ಲಿ ದಾವೀದನ ಭಾವನೆಗಳನ್ನು ಸಿಟ್ಟು ಮತ್ತು ನಿರಾಶೆ, ಅಲ್ಲದೆ ಭರವಸವುಳ್ಳದೆಂಬುದಾಗಿದೆ ವರ್ಗೀಕರಿಸುತ್ತೇನೆ.

4. ದಾವೀದನು ವಚನ 6 ರಲ್ಲಿ **"ಪ್ರಸನ್ನಮುಖದಿಂದ ನಮ್ಮನ್ನು ನೋಡಬೇಕೆಂದು"** ದೇವರನ್ನು ಕೇಳಿಕೊಳ್ಳುತ್ತಾನೆ. ಕೀರ್ತನೆ ಪುಸ್ತಕದ ಇತರ ವಚನಗಳ ಬೆಳಕಿನಡಿಯಲ್ಲಿ ಈ ವಚನದ ನಮ್ಮ ತಿಳುವಳಿಕೆಯು ಆಳವಾಗುತ್ತದೆ.

   ಅ. ಇದು ದೇವರು ನಮ್ಮನ್ನು ಮರೆತುಬಿಡುವುದರ ವಿರುದ್ಧವಾಗಿದೆ (ಕೀರ್ತನೆ 13:1).

   ಆ. ಇದು ದೇವರು ಕೋಪದಲ್ಲಿ ನಮ್ಮನ್ನು ತನ್ನಿಂದ ದೂರ ಮಾಡುವುದರ ವಿರುದ್ಧವಾಗಿದೆ (ಕೀರ್ತನೆ 27:9).

   ಇ. ಇದು ದೇವರ ದಯೆಯನ್ನು ಅನುಭವಿಸುವುದಾಗಿದೆ (ಕೀರ್ತನೆ 30:7).

   ಈ. ಇದು ದೇವರು ನಮ್ಮ ವೇದನೆ ಮತ್ತು ಶೋಷಣೆಯನ್ನು ಮರೆತುಬಿಡುವುದರ ವಿರುದ್ಧವಾಗಿದೆ (ಕೀರ್ತನೆ 44:24).

   ಉ. ಇದು ದೇವರು ನಮ್ಮನ್ನು ತಳ್ಳಿಬಿಡುವುದರ ವಿರುದ್ಧವಾಗಿದೆ (ಕೀರ್ತನೆ 88:14).

ಕೀರ್ತನೆ 6 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ವಚನ 1 ರಲ್ಲಿ ದಾವೀದನು ದೇವರನ್ನು ಸಂಬೋಧಿಸುತ್ತಾನೆ. ನಂತರ ವಚನ 8–10 ರಲ್ಲಿ ಆತನು ದುಷ್ಟರನ್ನು ಸಂಬೋಧಿಸುತ್ತಾನೆ.

2. ನನ್ನ ಈ ಹಿಂದಿನ ಪ್ರಶ್ನೆಯ ಉತ್ತರಕ್ಕನುಸಾರವಾಗಿ, ಈ ಕೀರ್ತನೆಯನ್ನು ಈ ರೀತಿ ರಚನೆ ಮಾಡಬಹುದು:

   ಅ. ದಾವೀದನು ದೇವರನ್ನು ಪ್ರಾರ್ಥಿಸುತ್ತಾನೆ, ವಚನ 1–7

   ಆ. ದಾವೀದನು ತನ್ನ ವಿರೋಧಿಗಳನ್ನು ಸಂಬೋಧಿಸುತ್ತಾನೆ, ವಚನ 8–10

3. ಎರಡು ವಿಭಾಗಗಳಿಗೆ ಇವು ಉತ್ತಮವಾದ ತಲೆಬರಹಗಳೆಂದು ನಾನು ಎಣಿಸುತ್ತೇನೆ.

   ಅ. ಕಣ್ಣೀರಿನ ಪ್ರಾರ್ಥನೆ (ವಚನ 1–7).

   ಆ. ನಿರೀಕ್ಷೆ ಮತ್ತು ಭರವಸೆ (ವಚನ 8–10).

4. ದಾವೀದನು ವಚನ 1–3 ರಲ್ಲಿ ತನ್ನ ಪರಿಸ್ಥಿತಿಯನ್ನು ಈ ರೀತಿ ವರ್ಣಿಸುತ್ತಾನೆ: ದೇವರು ತನ್ನನ್ನು ದಂಡಿಸುತ್ತಿದ್ದಾನೆಂದು ಆತನು ಭಾವಿಸುತ್ತಾನೆ. ಆತನ ದೇಹವು ನಿಶ್ಯಕ್ತವಾಗಿದೆ ಮತ್ತು ಆತನ ಪ್ರಾಣವು ತತ್ತರಿಸುತ್ತಿದೆ. ಇದು ಎಷ್ಟು ಕಾಲ ಇರುವುದೆಂದು ಆತನು ಕಳವಳಗೊಳ್ಳುತ್ತಿದ್ದಾನೆ.

5. ದಾವೀದನು ವಚನ 6–7 ರಲ್ಲಿ ತನ್ನ ಪರಿಸ್ಥಿತಿಯನ್ನು ಈ ರೀತಿ ವರ್ಣಿಸುತ್ತಾನೆ: ಆತನು ಬಹು ದುಃಖಿತನಾಗಿದ್ದಾನೆ ಮತ್ತು ಅಳುವುದನ್ನು ನಿಲ್ಲಿಸಲಾಗುತ್ತಿಲ್ಲ. ತನ್ನ ಕಷ್ಟಗಳು ಮತ್ತು ವೈರಿಗಳ ಬಗ್ಗೆ ಅವನ ಚಿಂತೆಗಳು ಅವನನ್ನು ಸಂಪೂರ್ಣವಾಗಿ ಬಳಲಿಸುತ್ತವೆ.

6. ಈ ಕೀರ್ತನೆಯು ಒಂದು ಸಕಾರಾತ್ಮಕ ಸಂಗತಿಯೊಂದಿಗೆ ಮುಕ್ತಾಯವಾಗುತ್ತದೆ. ದೇವರು ದಾವೀದನ ಪ್ರಾರ್ಥನೆಯನ್ನು ಕೇಳಿದ್ದಾನೆ.

7. ಶೀರ್ಷಿಕೆಯು ಈ ಕೀರ್ತನೆಯ ಬಗ್ಗೆ ಎರಡು ಸಂಗತಿಗಳನ್ನು ನಮಗೆ ತಿಳಿಸುತ್ತದೆ:

   ಅ. ಈ ಕೀರ್ತನೆಯು ಅರಸನಾದ ದಾವೀದನಿಗೆ ಸಂಬಂಧಿಸಿದ್ದಾಗಿದೆ.

   ಆ. ಈ ಕೀರ್ತನೆಯನ್ನು ತಂತಿವಾದ್ಯದೊಡನೆ ಹಾಡತಕ್ಕದ್ದಾಗಿದೆ.

ಕೀರ್ತನೆ 6 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –

2. ದಾವೀದನು ದೇವರು ಯಾಕೆ ತನ್ನನ್ನು ರಕ್ಷಿಸಬೇಕೆಂಬುದಕ್ಕೆ ವಚನ 4–5 ರಲ್ಲಿ ಎರಡು ಕಾರಣಗಳನ್ನು ಕೊಡುತ್ತಾನೆ:

   ಅ. ದಾವೀದನಿಗಾಗಿನ ದೇವರ ಕೃಪೆಯ ನಿಮಿತ್ತ (ವಚನ 4): ಇದೊಂದು ಅತ್ಯುತ್ತಮವಾದ ಕಾರಣವಾಗಿದೆ. ಇದು ದೇವರ ಗುಣಸ್ವಭಾವವನ್ನು ಸೂಚಿಸುತ್ತದೆ. ಆತನು ಪ್ರೀತಿಸ್ವರೂಪಿ, ಕರುಣಾಮಯನು ಮತ್ತು ತನ್ನ ಜನರಿಗೆ ನಂಬಿಗಸ್ತನೂ ಆಗಿದ್ದಾನೆ.

   ಅ. ಹಾಗಾಗಿ ದಾವೀದನು ಬದುಕಿ ಎಡಬಿಡದೆ ದೇವರನ್ನು ಸ್ತುತಿಸಿ ಹೋಗಬಹುದಾಗಿದೆ (ವಚನ 5).

3. ಈ ಕೀರ್ತನೆಯ ಕೆಲವು ಸಾಹಿತ್ಯದ ಲಕ್ಷಣಗಳು:

   ಅ. ಕೀರ್ತನೆ 6 ರ ಸ್ವರ/ಭಾವವು ಕರಾಳ ಮತ್ತು ಖಿನ್ನತೆಯಿಂದ ಕೂಡಿದೆ. ತನ್ನ ಪರಿಸ್ಥಿತಿಯ ಬಗ್ಗೆ ದಾವೀದನು ನಿಜವಾಗಲೂ ಖಿನ್ನನಾಗಿದ್ದಾನೆ. ಆದರೆ ನಮಗೆ ಇದು ಆಧರಣೆಯಾಗಿದೆ, ಕೆಲವೊಮ್ಮೆ ನಮ್ಮ ಜೀವನವು ಸಂಪೂರ್ಣವಾಗಿ ಕತ್ತಲೆಮಯವಾಗಿ ನಿರೀಕ್ಷೆಯಿಲ್ಲದ್ದಾಗಿ ಕಂಡರೂ ಸಹ ಕೊನೆಯಲ್ಲಿ ಯಾವಾಗಲೂ ಒಂದು

ಬೆಳಕಿದೆ ಎಂಬುದನ್ನು ಆಧುನಿಕ ಓದುಗರಾದ ನಮಗೆ ಒಂದು ರೀತಿಯ ಆಧರಣೆಯಾಗಿದೆ ಎಂಬುದನ್ನು ನಾವು ಗಮನಿಸಬೇಕು. ಇದಕ್ಕೆ ಕಾರಣ ನಿರೀಕ್ಷೆ ಮತ್ತು ಬೆಳಕು ದೇವರಲ್ಲಿದೆ.

ಆ. ವಚನ 1 ಸಮಾನಾರ್ಥಕ ಸಮಾನಾಂತರತೆಗೆ ಉತ್ತಮ ಉದಾಹರಣೆ ಹೊಂದಿದೆ:

- "ಶಿಕ್ಷಿಸಬೇಡ" (1ನೇ ಸಾಲು) ಮತ್ತು "ದಂಡಿಸಬೇಡ" (2ನೇ ಸಾಲು) ಇವೆರಡೂ ಹೆಚ್ಚೂಕಡಿಮೆ ಒಂದೇ ಅರ್ಥವನ್ನು ಕೊಡುತ್ತವೆ.
- "ಕೋಪದಿಂದ" (1ನೇ ಸಾಲು) "ರೋಷದಿಂದ" (2ನೇ ಸಾಲು) ಇವೆರಡೂ ಸಮಾನಾರ್ಥಕಗಳಾಗಿವೆ.

ಇ. ವಚನ 2 ರಲ್ಲಿನ "ಎಲುಬುಗಳು" ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರಕ್ಕೆ ಉದಾಹರಣೆಯಾಗಿದೆ.

ಇದು ವಸ್ತುವಿನ ಒಂದು ಭಾಗವು ಇಡೀ ವಸ್ತುವನ್ನು ಪ್ರತಿನಿಧಿಸುವುದಾಗಿದೆ. ಇಲ್ಲಿ ದಾವೀದನ "ಎಲುಬುಗಳು" ಆತನ ಇಡೀ ದೇಹವನ್ನು ಪ್ರತಿನಿಧಿಸುತ್ತವೆ. ವಚನ 2–3 ಅನ್ನು ನಾವು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು: ದಾವೀದನು ದೇವರು ತನಗೆ ಕರುಣೆತೋರಬೇಕೆಂದು ಮತ್ತು ತನ್ನನ್ನು ವಾಸಿಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ಯಾಕೆಂದರೆ ಆತನು ಬಹು ಕಷ್ಟದಲ್ಲಿದ್ದಾನೆ ತನ್ನ ದೇಹದೊಂದಿಗೆ ಮನಸ್ಸಿನಲ್ಲಿ ಸಹ ಬಾಧೆಯನ್ನು ಅನುಭವಿಸುತ್ತಿದ್ದಾನೆ.

ಈ. ಈ. ವಚನ 6 ರಲ್ಲಿ ಎರಡು ಅತಿಶಯೋಕ್ತಿಗಳಿವೆ:

- ಪ್ರತಿರಾತ್ರಿಯೂ ನನ್ನ ಕಣ್ಣೀರಿನಿಂದ ಮಂಚವು ತೇಲಾಡುತ್ತದೆ. ಇದರರ್ಥ ರಾತ್ರಿವೇಳೆಯಲ್ಲಿ ನಾನು ಬಹಳವಾಗಿ ಅಳುತ್ತೇನೆ ಎಂಬುದಾಗಿದೆ.
- ಹಾಸಿಗೆಯು ಕಣ್ಣೀರಿನಿಂದ ನೆನೆದು ಹೋಗುತ್ತದೆ. ದಾವೀದನು ಅದೇ ಸಂಗತಿಯನ್ನು ಪುನರಾವರ್ತಿಸುತ್ತಾನೆ. ಹಾಗಾಗಿ ಇಲ್ಲಿ ಸಮಾನಾರ್ಥಕ ಸಮಾನಾಂತರತೆಯನ್ನು ನಾವು ಕಾಣಬಹುದು.

4. ವಚನ 4 ರಲ್ಲಿ ದಾವೀದನು ದೇವರು ತನ್ನನ್ನು ಯಾಕೆ ರಕ್ಷಿಸಬೇಕೆಂಬುದಕ್ಕೆ ಕಾರಣಗಳನ್ನು ತಿಳಿಸುತ್ತಾನೆ.

ಅ. "ಹೇಸೆದ್" ಎಂಬ ಇಬ್ರಿಯ ಪದವು ವಿಭಿನ್ನ ಸತ್ಯವೇದ ಮತ್ತು ಸತ್ಯವೇದದ ವಿಭಿನ್ನ ಭಾಗಗಳಲ್ಲಿ ವಿಧವಿಧವಾಗಿ ಭಾಷಾಂತರಿಸಲ್ಪಟ್ಟಿದೆ. ಈ ವಿವಿಧತೆಗೆ ಕಾರಣ ಇಬ್ರಿಯದಲ್ಲಿ ಹೇಸೆದ್ ಅರ್ಥದಲ್ಲಿ ಶ್ರೀಮಂತಿಕೆಯನ್ನು ಹೊಂದಿದೆ. ಭರವಸೆಯ ಇಬ್ರಿಯ – ಇಂಗ್ಲೀಷ್ ಶಬ್ದಕೋಶವು ಈ ಆಯ್ಕೆಗಳನ್ನು ನಮಗೆ ಕೊಡುತ್ತದೆ: ತಪ್ಪಿಹೋಗದ (ಬಿದ್ದುಹೋಗದ) ಪ್ರೀತಿ, ಪ್ರಾಮಾಣಿಕ ಪ್ರೀತಿ, ಭಕ್ತಿ, ದಯೆ. ಸಮರ್ಪಕವಾದ ರೀತಿಯಲ್ಲಿ ಹೆಸೆದ್‌ನ್ನು ಬಿಂಬಿಸುವ ಒಂದು ಪದ ಅಥವಾ ಹೇಳಿಕೆಯನ್ನು ತನ್ನದೇ ಭಾಷೆಯಲ್ಲೂ ಅನುವಾದಕನು ಆರಿಸಿಕೊಳ್ಳುವನು. ಇನ್ನೊಬ್ಬ ಭಾಷಾಂತರಕಾರನು ಬೇರೆ ಪದ ಸೂಕ್ತವಾಗಿದೆಯೆಂದು ಅದನ್ನು ಆರಿಸಿಕೊಳ್ಳುವನು. ಅದರ ಪರಿಣಾಮ ಈ ರೀತಿಯ ವಿಭಿನ್ನತೆಯಾಗಿದೆ.

ಆ. ಫಲಿತಾಂಶವು ಈ ರೀತಿಯ ವ್ಯತಾಸಗಳಾಗಿವೆ. ದೇವರು ಮಧ್ಯಪ್ರವೇಶಿಸುತ್ತಾನೆ ಎಂಬ ದಾವೀದನ ನಿರೀಕ್ಷೆಯ ಹಳೇ ಒಡಂಬಡಿಕೆಯ ಹಿನ್ನಲೆಯನ್ನು ಧರ್ಮೋಪದೇಶಕಾಂಡ 7:9 ರಲ್ಲಿ ಕಾಣಬಹುದು ("ಆದದರಿಂದ ನಿಮ್ಮ ದೇವರಾದ ಯೆಹೋವನೊಬ್ಬನೇ ದೇವರೆಂದು ತಿಳಿದುಕೊಳ್ಳಬೇಕು. ಆತನು ನಂಬಿಗಸ್ತನಾದ ದೇವರು; ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗಳನ್ನು ಅನುಸರಿಸುವವರಿಗೆ ಮಾಡಿದ ವಾಗ್ದಾನವನ್ನೂ ಕೃಪೆಯನ್ನೂ ಅವನ ಸಂತತಿಯವರಲ್ಲಿ ಸಾವಿರ ತಲೆಗಳವರೆಗೂ ನೆರವೇರಿಸುವನು") ಮತ್ತು 7:12 ರಲ್ಲಿ ("ನೀವು ಈ ವಿಧಿಗಳನ್ನು ಲಕ್ಷವಿಟ್ಟು ಅನುಸರಿಸದರೆ ಅದಕ್ಕೆ ಪ್ರತಿಯಾಗಿ ನಿಮ್ಮ ದೇವರಾದ ಯೆಹೋವನು ನಿಮ್ಮ ಪಿತೃಗಳಿಗೆ ಪ್ರಮಾಣಪೂರ್ವಕವಾಗಿ ಮಾಡಿದ ವಾಗ್ದಾನವನ್ನೂ ಕೃಪೆಯನ್ನೂ ನಿಮ್ಮಲ್ಲಿ ನೆರವೇರಿಸುವನು"). ತನ್ನ ಕಣ್ಣೀರಿನ ದುಃಖದಲ್ಲಿ, ದಾವೀದನು ಸಹಾಯಕ್ಕಾಗಿ ತನ್ನ ಒಡಂಬಡಿಕೆಯ ಕರ್ತನ ಕಡೆಗೆ ತಿರುಗುತ್ತಾನೆ.

ಕೀರ್ತನೆ 8 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 8 ಅನ್ನು ಈ ರೀತಿ ರಚನೆಮಾಡಬಹುದು:

   ಅ. ದೇವರ ಮಹಿಮೆಯ ಪ್ರಾರಂಭಿಕ ಸ್ತುತಿ, ವಚನ 1

   ಅ. ಆಕಾಶಮಂಡಲದಲ್ಲಿ ದೇವರ ಮಹಿಮೆಯ ಆಳ್ವಿಕೆ, ವಚನ 1–3

   ಇ. ದೇವರ ಸೃಷ್ಟಿಯ ಭಾಗವಾದ ಮನುಷ್ಯನ ಕಿರಿಮೆ, ವಚನ 4

   ಈ. ದೇವರ ಸೃಷ್ಟಿಯನ್ನು ಆಳ್ವಿಕೆ ಮಾಡುವವನಾಗಿ ಮನುಷ್ಯನ ಹಿರಿಮೆ, ವಚನ 5–8

   ಉ. ದೇವರ ಮಹಿಮೆಯ ಮುಕ್ತಾಯದ ಸ್ತುತಿ, ವಚನ 9.

2. ಕೀರ್ತನೆಯ ಮೊದಲ ವಚನವು ಕೀರ್ತನೆಯ ಕೊನೆಯಲ್ಲಿ ಮರುಕಳಿಸಿದೆ. ಈ ಪದ್ಯರೂಪಿ ಲಕ್ಷಣವನ್ನು **"ಪಲ್ಲವಿ"** ಎಂದು ಕರೆಯುವರು.

3. ಪುನರಾವರ್ತನೆಗೊಂಡ ಈ ವಚನವು ಕೀರ್ತನೆಯು ಮುಖ್ಯ ವಿಷಯವಸ್ತುವಿಗೆ ಮಹತ್ವ ಕೊಡುತ್ತದೆ: ಇದು ಭೂಲೋಕವನ್ನಾಳುವ ದೇವರಿಗೆ ಹಾಡುವ ಸ್ತುತಿಗೀತೆಯಾಗಿದೆ.

4. ದಾವೀದನು ಈ ಕೀರ್ತನೆಯುದ್ದಕ್ಕೂ ದೇವರನ್ನು ಸಂಬೋಧಿಸುತ್ತಾನೆ. ಹಾಗಾಗಿ ಆತನು ಹೇಳುವ **"ನೀನು" "ನಿನ್ನ"** ಪದಗಳು ದೇವರನ್ನು ಸೂಚಿಸುತ್ತವೆ.

5. ದಾವೀದನು ವಚನ 4–8 ರಲ್ಲಿ ಮನುಷ್ಯನನ್ನು ಎರಡು ದೃಷ್ಟಿಕೋನಗಳಿಂದ ವರ್ಣಿಸುತ್ತಾನೆ:

   ಅ. ಮೊದಲ ದೃಷ್ಟಿಕೋನ: ದೇವರ ಸೃಷ್ಟಿಯ ಬಹುದೊಡ್ಡ ಚಿತ್ರಣದಲ್ಲಿ ಮನುಷ್ಯನ ಅಲ್ಪತ್ವ ಇಡೀ ಭೂಮಂಡಲದ ವಿಶಾಲತೆಗೆ ಹೋಲಿಸಿದರು ಮನುಷ್ಯನು ಏನಾಗಿದ್ದಾನೆ? ನಿಶ್ಚಿತವಲ್ಲದ ಮನುಷ್ಯನಂಥವನನ್ನು ದೇವರು ಏಕೆ ಅಷ್ಟು ಲಕ್ಷಿಸಬೇಕು?

   ಆ. ಎರಡನೇ ದೃಷ್ಟಿಕೋನ: ಮನುಷ್ಯನ ಶ್ರೇಷ್ಠತೆಯು ದೇವರು ಆತನನ್ನು ತನ್ನ ಸೃಷ್ಟಿಯ ಮೇಲೆ ಆಳ್ವಿಕೆ ಮಾಡಲು ನೇಮಿಸಿದ್ದರ ಫಲಿತಾಂಶವಾಗಿದೆ. ದೇವರು ಮನುಷ್ಯನನ್ನು ಹೆಚ್ಚೂಕಡಿಮೆ ದೈವೀಕವಾಗಿ ಮಾಡಿದನು.

ಕೀರ್ತನೆ 8 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ನಾನೆಣಿಸುತ್ತೇನೆ ದಾವೀದನು ಈ ಕೀರ್ತನೆಯನ್ನು ಬರೆದ ಸನ್ನಿವೇಶವು – ದಾವೀದನು ಒಂದು ಶುಭ್ರವಾದ ರಾತ್ರಿಯಲ್ಲಿ ಹೊಲದಲ್ಲಿ ತನ್ನ ಕುರಿಗಳನ್ನು ಕಾಯುತ್ತಿದ್ದಾಗ, ಮೇಲೆ ಆಕಾಶದೆಡೆಗೆ ನೋಡಿದಾಗ ನಕ್ಷತ್ರಗಳು ಮಿನುಗುತ್ತಿದ್ದಿರಬಹುದು. ಆಗ ಆತನ ಹೃದಯವು ತನ್ನ ಸೃಷ್ಟಿಕರ್ತನಾದ ದೇವರಿಗಾಗಿ ಸ್ತುತಿಯಿಂದ ತುಂಬಿರಬಹುದು.

2. ಈ ಕೀರ್ತನೆಯ ಕೆಲವು ಸಾಹಿತ್ಯದ ಲಕ್ಷಣಗಳು:

   ಅ. ದಾವೀದನು ತನ್ನ ಕೀರ್ತನೆಯನ್ನು ಒಂದು **"ಸ್ತುತಿ ಪದ್ಯ"** ವನ್ನಾಗಿ ಮಾಡುವ ಸಲುವಾಗಿ ಈ ಪದ ಮತ್ತು ಹೇಳಿಕೆಗಳನ್ನು ಉಪಯೋಗಿಸುತ್ತಾನೆ: ಮಹಿಮೆ (ವಚನ 1, 9), ವೈಭವ (ವಚನ 2), ಸಾಕ್ಷಿ (ಸ್ತೋತ್ರ) (ವಚನ 2), ಆಕಾಶಮಂಡಲ (ವಚನ 3).

   ಆ. ಪ್ರಲಾಪಗಳೆಂದು ಕರೆಯಲ್ಪಡುವ ಕೀರ್ತನೆ 3, 4 ಮತ್ತು 6 ರೊಂದಿಗೆ ಹೋಲಿಸಿದರೆ ಸ್ತುತಿ ಪದ್ಯವಾಗಿರುವ ಈ ಕೀರ್ತನೆಯಲ್ಲಿ ಸ್ವತಃ ದಾವೀದನು ಚಿಕ್ಕ ಪಾತ್ರ ವಹಿಸುತ್ತಾನೆ. ಈ ವಾಸ್ತವಾಂಶಗಳಿಂದ **"ಸ್ತುತಿ/ಸ್ತೋತ್ರ ಪದ್ಯವು"** ದೇವರಿಗೆ ಹೆಚ್ಚು ಒತ್ತು ಕೊಡುತ್ತದೆ ಮತ್ತು ಪ್ರಲಾಪವು ಕೀರ್ತನೆಗಾರನಿಗೆ ಹೆಚ್ಚು ಒತ್ತು ಕೊಡುತ್ತದೆ ಎಂಬುದನ್ನು ನಾವು ನಿರ್ಣಯಿಸಬಹುದಾಗಿದೆ.

ಇ. ನಾವು ವಚನ 3 ರಲ್ಲಿ ಮಾನವೀಕರಣಕ್ಕೆ ಒಂದು ಉದಾಹರಣೆಯನ್ನು ಕಾಣುತ್ತೇವೆ. ಇಲ್ಲಿ ದೇವರನ್ನು ಒಬ್ಬ ಕುಶಲಕರ್ಮಿಯೋ ಎಂಬಂತೆ ವರ್ಣಿಸಲಾಗಿದೆ. ತನ್ನ ಬೆರಳಿನಿಂದ ಆತನು ಕೆಲಸ ಮಾಡುತ್ತಾನೆ (ಈ ಹೇಳಿಕೆಯನ್ನು ಕನ್ನಡ ಭಾಷಾಂತರವು ಸರಿಯಾಗಿ ಭಾಷಾಂತರಿಸಿಲ್ಲ).

ಈ. ವಚನ 1 ಮತ್ತು 9 **"ಆವರಣ"** ವೆಂದು ಕರೆಯಲ್ಪಡುವ ಸಾಹಿತ್ಯದ ಲಕ್ಷಣಕ್ಕೆ ಒಂದು ಉದಾಹರಣೆಯಾಗಿದೆ. ಈ ಆವರಣದ ಉದ್ದೇಶವು ಲೋಕದಲ್ಲಿ ದೇವರ ಪ್ರಭಾವ ಮತ್ತು ಶಕ್ತಿಗೆ ದೇವರನ್ನು ಸ್ತುತಿಸುವ ಕೀರ್ತನೆಯ ವಿಷಯಾಂಶಕ್ಕೆ ಹೆಚ್ಚು ಒತ್ತು ಕೊಡುವುದಾಗಿದೆ.

3. ಓದುಗನು ಈ ಕೀರ್ತನೆಯಲ್ಲಿ **"ಮೊದಲ ಮನುಷ್ಯ"** ಮತ್ತು **"ಕೊನೆಯ ಮನುಷ್ಯ"** ರಿಬ್ಬರನ್ನು ಕಾಣಬಹುದು:

ಅ. ಮೊದಲ ಮನುಷ್ಯ ಆದಾಮನಾಗಿದ್ದಾನೆ: ಮನುಷ್ಯ ದೇವರ ಸೃಷ್ಟಿಯಲ್ಲಿಯೇ ಶ್ರೇಷ್ಠವಾಗಿದ್ದನು. ದೇವರು ಮನುಷ್ಯನನ್ನು ತನ್ನ ಸೃಷ್ಟಿಯನ್ನೆಲ್ಲಾ ಆಳ್ವಿಕೆ ಮಾಡಲು ನೇಮಿಸಿದನು. ಹಾಗಾಗಿ ಐತಿಹಾಸಿಕ ಮಟ್ಟದಲ್ಲಿ ಈ ಕೀರ್ತನೆಯನ್ನು ದೇವರ ಸಂಕಲ್ಪಕ್ಕನುಸಾರವಾಗಿ ಮನುಷ್ಯಜೀವಿಗಳ ವರ್ಣನೆಯೆಂಬುದಾಗಿ ಓದಬಹುದಾಗಿದೆ.

ಆ. ಕೊನೆಯ ಮನುಷ್ಯನು ಯೇಸು ಕ್ರಿಸ್ತನಾಗಿದ್ದಾನೆ: ಹಾಗಾಗಿ ಪ್ರವಾದನೆಯ ಮಟ್ಟದಲ್ಲಿ ಈ ಕೀರ್ತನೆಯನ್ನು ಮನುಷ್ಯರೊಂದಿಗೆ ಯೇಸು ಕ್ರಿಸ್ತನ ಮೂಲಕ ದೇವರ ಯೋಜನೆಯ ನೆರವೇರಿಕೆಯೆಂಬುದಾಗಿ ಓದಬಹುದಾಗಿದೆ. ದೇವರ ಯೋಜನೆಯು ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಮೂಲಕ ಮಾನವರಿಗಾಗಿನ ಮರುಸ್ಥಾಪಿಸಲ್ಪಟ್ಟಿತು.

4. ಈ ಕೀರ್ತನೆಯು ದೈವಶಾಸ್ತ್ರ ಮತ್ತು ಸಿದ್ಧಾಂತಗಳಿಂದ ತುಂಬಿಕೊಂಡಿದೆ:

ಅ. ದೇವರ ಬಗ್ಗೆ ಈ ಸಂಗತಿಗಳನ್ನು ನಾವು ಕಲಿಯುತ್ತೇವೆ:

- ದೇವರು ಸೃಷ್ಟಿಕರ್ತನಾಗಿದ್ದಾನೆ.
- ದೇವರು ತನ್ನ ಸೃಷ್ಟಿಯ ಮೇಲೆ ಪ್ರಭುತ್ವವನ್ನು ಸಾಧಿಸಿದ್ದಾನೆ.
- ದೇವರು ಮನುಷ್ಯನನ್ನು ತನ್ನ ಸೃಷ್ಟಿಯನ್ನು ಆಳುವುದಕ್ಕಾಗಿ ನೇಮಿಸಿದನು.
- ದೇವರು ಮಹಿಮಸ್ವರೂಪನೂ ಮತ್ತು ನಮ್ಮ ಸ್ತೋತ್ರಕ್ಕೆ ಯೋಗ್ಯನೂ ಆಗಿದ್ದಾನೆ.

ಆ. ಸೃಷ್ಟಿಯಲ್ಲಿ ಮನುಷ್ಯನ ಬಗ್ಗೆ ಈ ಸಂಗತಿಗಳನ್ನು ನಾವು ಕಲಿಯುತ್ತೇವೆ.

- ದೇವರ ಸಂಪೂರ್ಣ ಸೃಷ್ಟಿಯ ದೃಷ್ಟಿಕೋನದಿಂದ ಮನುಷ್ಯನು ಅತ್ಯಲ್ಪನಾಗಿದ್ದಾನೆ.
- ಮನುಷ್ಯನ ಅಲ್ಪತೆಯ ಹೊರತಾಗಿಯೂ ದೇವರು ಆತನಿಗಾಗಿ ಕಾಳಜಿವಹಿಸುತ್ತಾನೆ.
- ಮನುಷ್ಯನ ಅಲ್ಪತೆಯ ಹೊರತಾಗಿಯೂ ದೇವರು ಆತನಿಗೆ **"ಪ್ರಭಾವ, ಮಾನ"** ಗಳೆಂಬ ಗುಣಲಕ್ಷಣಗಳನ್ನು ಕೊಟ್ಟಿದ್ದಾನೆ.
- ಮನುಷ್ಯನ ಅಲ್ಪತೆಯ ಹೊರತಾಗಿಯೂ, ದೇವರು ಆತನಿಗೆ ತಾನು ಸೃಷ್ಟಿಸಲ್ಪಟ್ಟ ಜಗತ್ತಿನ ಮೇಲೆಲ್ಲಾ ಆಳ್ವಿಕೆ ಮಾಡುವ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದಾನೆ.

ಇ. ಯೇಸುವಿನ ಕುರಿತಾಗಿ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

- ಯೇಸುವು ದೇವರಾಗಿದ್ದಾನೆ. ಮತ್ತಾಯ 21:16 ರಲ್ಲಿ ತನ್ನ ಬಗ್ಗೆ ತಿಳಿಸಲು ಯೇಸುವು 2ನೇ ವಚನವನ್ನು ಉಪಯೋಗಿಸಿದ ವಾಸ್ತವಾಂಶದಿಂದ ತಿಳಿದುಕೊಳ್ಳಬಹುದಾಗಿದೆ.

  ಈ ಕೀರ್ತನೆಯಲ್ಲಿ ಕರ್ತನಾದ ದೇವರು ಬಾಲಕರ (ಮಕ್ಕಳ) ಬಾಯಿಂದ ಸ್ತುತಿ ಸ್ತೋತ್ರಗಳನ್ನು ಸ್ವೀಕರಿಸುತ್ತಾನೆ. ಸುವಾರ್ತೆಯಲ್ಲಿ ಯೇಸುವು ಬಾಲಕರ ಬಾಯಿಂದ ಸ್ತುತಿಗಳನ್ನು ಹೊಂದುತ್ತಾನೆ.

- ಮಾನವರಿಗಾಗಿನ ದೇವರ ಯೋಜನೆಯ ಸಂಪೂರ್ಣತೆಯ ಪ್ರಕಾರ ಯೇಸುವು ಮನುಷ್ಯನಾಗಿದ್ದಾನೆ. ಯೇಸುವು **"ಮನುಷ್ಯಕುಮಾರನು"** ಎಂಬ ಇಬ್ರಿಯ ಪದವನ್ನು ತೆಗೆದುಕೊಂಡು, ಅದನ್ನು ತನಗಾಗಿ ಬಳಸಿದ ರೀತಿಯಿಂದ ಇದನ್ನು ನಾವು ತಿಳಿದುಕೊಳ್ಳಬಹುದು. ಯೇಸು (ಮತ್ತು ಹೊಸ ಒಡಂಬಡಿಕೆಯ ಬರಹಗಾರರು) ಸ್ಪಷ್ಟವಾಗಿ ಈ ಕೀರ್ತನೆಯನ್ನು ಮೆಸ್ಸೀಯನ ಕೀರ್ತನೆಯೆಂಬುದಾಗಿ ವ್ಯಾಖ್ಯಾನಿಸಿದ್ದಾರೆ.

- ಯೇಸುವು ದೇವರ ಸೃಷ್ಟಿಯಲ್ಲೆಲ್ಲಾ ಅತ್ಯುನ್ನತನಾಗಿದ್ದಾನೆ. ಯೇಸು ಕ್ರಿಸ್ತನ ಅತ್ಯುನ್ನತ, ಆತನ ವಿಜಯೋತ್ಸವ, ಮತ್ತು ಆತನ ಎರಡನೇ ಬರೋಣವನ್ನು ಸೂಚಿಸಿ ಪೌಲನು **"**ನೀನು ಎಲ್ಲವನ್ನು (ಸಮಸ್ತವನ್ನು) ಕ್ರಿಸ್ತನ ಪಾದಗಳ ಕೆಳಗೆ ಹಾಕಿದಿ**"** (1 ಕೊರಂಥ. 15:27 ಮತ್ತು ಎಫೆಸ. 1:22) ಎಂದು ಹೇಳುವ ಹೇಳಿಕೆಯಿಂದ ಅರಿತುಕೊಳ್ಳಬಹುದು.

- ಯೇಸುವು ಭೂಮಿ ಮೇಲಿನ ತನ್ನ ಜೀವಿತಾವಧಿಯಲ್ಲಿ ಅವಮಾನಿಸಲ್ಪಟ್ಟನು, ಆದರೆ ದೇವರು ಆತನನ್ನು ಹೆಚ್ಚಿಸಿದನು (ಉನ್ನತಕ್ಕೇರಿಸಿದನು). ಹೊಸ ಒಡಂಬಡಿಕೆಯ ಈ ಸಿದ್ಧಾಂತವನ್ನು ಬೆಂಬಲಿಸಲು ಇಬ್ರಿಯ ಗ್ರಂಥಕರ್ತನು ವಚನ 5–6 ಅನ್ನೂ ಬಳಸುತ್ತಾನೆ (ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ, ಮಾನವನ್ನೂ ಅವನಿಗೆ ಕೀರಿಟವಾಗಿ ಇಟ್ಟಿ; ಎಲ್ಲವನ್ನೂ ಅವನ ಪಾದಗಳ ಕೆಳಗೆ ಹಾಕಿ ಅವನಿಗೆ ಅಧೀನ ಮಾಡಿದ್ದೀಯಲ್ಲವೇ, ಇಬ್ರಿಯ 2:7–8). ಕನ್ನಡ ಸತ್ಯವೇದ ಭಾಷಾಂತರಕಾರರು **"**ಬ್ರಾಚೈಸ್**"** ಎಂಬ ಗ್ರೀಕ್ ಪದವನ್ನು **"**ಸ್ವಲ್ಪವೇ ಕಡಿಮೆಯಾಗಿ**"** (ಸ್ಥಾನಮಾನವನ್ನು ಸೂಚಿಸಿ) ಎಂದು ಭಾಷಾಂತರಿಸಿದ್ದಾರೆ ವಿನಃ **"**ಸ್ವಲ್ಪಕಾಲ**"** (ಸಮಯವನ್ನು ಸೂಚಿಸಿ) ಎಂದಲ್ಲ.

ಈ. ದೇವರೆಡೆಗಿನ ನಮ್ಮ ಮನೋಭಾವವು ಸ್ತುತಿ ಸ್ತೋತ್ರದಿಂದ ಕೂಡಿರಬೇಕು.

ಕೀರ್ತನೆ 16 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 16 ಅನ್ನು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ದಾವೀದನು ದೇವರನ್ನು ತನ್ನನ್ನು ಕಾಪಾಡಬೇಕೆಂದು ಕೇಳಿಕೊಳುತ್ತಾನೆ, ವಚನ 1.

   ಆ. ದಾವೀದನು ಯೆಹೋವನನ್ನೇ ಆರಿಸಿಕೊಂಡಿದ್ದಾನೆ, ವಚನ 2–8.

   ಇ. ದೇವರು ದಾವೀದನನ್ನು ಜೀವಮಾರ್ಗದಲ್ಲಿ ನಡೆಸುತ್ತಾನೆ, ವಚನ 9–11.

2. ಇದು ಕೀರ್ತನೆಯ ವಿಷಯಾಂಶವಾಗಿದೆ:

   ಅ. ದಾವೀದನು ದೇವರನ್ನು ಆಶ್ರಯಿಸಿಕೊಂಡು, ತನ್ನನ್ನು ಕಾಪಾಡಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ (ವಚನ 1).

   ಆ. ದಾವೀದನು ದೇವರಿಂದ ಅನೇಕ ಆಶೀರ್ವಾದಗಳನ್ನು ಹೊಂದಿಕೊಂಡಿದ್ದಾನೆ (ವಚನ 2–8):

   - ಎಲ್ಲಾ ಒಳ್ಳೇ ಸಂಗತಿಗಳು ದೇವರಿಂದಲೇ ಬರುತ್ತವೆಂದು ಆತನು ಮನವರಿಕೆ ಮಾಡಿಕೊಳ್ಳುತ್ತಾನೆ.
   - ಅನ್ಯದೇವರುಗಳನ್ನು ಹಿಂಬಾಲಿಸದೆ, ಯೆಹೋವನನ್ನೇ ಹಿಂಬಾಲಿಸುವ ದೇವಜನರ ವಿಷಯದಲ್ಲಿ ಸಂತೋಷಿಸುತ್ತಾನೆ.
   - ತನ್ನ ಸ್ವಾಸ್ತ್ಯಕ್ಕೆ (ದೇಶಕ್ಕೆ) ದೇವರು ಕೊಟ್ಟ ಭದ್ರತೆಗಾಗಿ ದೇವರನ್ನು ಸ್ತುತಿಸುತ್ತಾನೆ.
   - ಹಗಲು ರಾತ್ರಿಯಲ್ಲಿನ ದೇವರ ಆಲೋಚನೆ (ನಡೆಸುವಿಕೆ) ಗಾಗಿ ಆತನು ದೇವರನ್ನು ಸ್ತುತಿಸುತ್ತಾನೆ.
   - ದೇವರೇ ತನಗೆ ಬಲವನ್ನು ಕೊಡುವವನಾಗಿದ್ದಾನೆಂದು ಆತನಿಗೆ ಗೊತ್ತು.

   ಇ. "ಜೀವಮಾರ್ಗದ" ಕುರಿತಾಗಿ ದಾವೀದನ ವರ್ಣನೆ (ವಚನ 9–11):

   - ಆತನು ಇಲ್ಲಿಯೇ ಸಂತೋಷವನ್ನು ಕಂಡುಕೊಳ್ಳುತ್ತಾನೆ.
   - ಆತನು ಇದರಲ್ಲಿಯೇ ಭದ್ರತೆಯನ್ನು ಕಂಡುಕೊಳ್ಳುತ್ತಾನೆ.
   - ಇದು ಆತನನ್ನು ಮರಣ ಮತ್ತು ನಾಶನಕ್ಕೆ ನಡೆಸುವುದಿಲ್ಲ.
   - ಆದರೆ ಇದು ಆತನನ್ನು ಜೀವ, ಸಂತೋಷ ಮತ್ತು ದೇವರ ಸನ್ನಿಧಿಯಲ್ಲಿನ ಶಾಶ್ವತ ಭಾಗ್ಯಕ್ಕೆ ನಡೆಸುತ್ತದೆ.

ಕೀರ್ತನೆ 16 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಮೊದಲ ವಚನವು ಪರಸ್ಪರ ಒಂದಕ್ಕೊಂದು ನಿಕಟ ಸಂಬಧವಿರುವ ಎರಡು ಭಾಗಗಳನ್ನು ಒಳಗೊಂಡಿದೆ: ದಾವೀದನು ಭರವಸೆಯಿಂದ ದೇವರಲ್ಲಿ ರಕ್ಷಣೆಗಾಗಿ ಬೇಡಬಹುದು. ಯಾಕೆಂದರೆ ಆತನು ದೇವರಲ್ಲಿ ಆಶ್ರಯ ಪಡೆದಿದ್ದಾನೆ ದೇವರಲ್ಲಿ ಆಶ್ರಯವನ್ನು ಹುಡುಕುವವರಿಗೆ ಭದ್ರತೆ (ರಕ್ಷಣೆ) ಯಿದೆ ಎಂಬುದು ದಾವೀದನಿಗೆ ತಿಳಿದಿದೆ.

2. "ಪಾನ" ಎಂಬ ರೂಪಾಲಂಕಾರವು ಅತಿಥೇಯನು ತನ್ನ ಬಳಿ ಬರುವ ಅತಿಥಿಗೆ ಕೊಡುವ ಸ್ವಾಗತ ಪಾನವನ್ನು ಸೂಚಿಸುತ್ತದೆ. ವಚನ 5 ರಲ್ಲಿ ಇದನ್ನು "ಪಾಲು"ಗೆ ಒಂದು ಸಮಾನಾರ್ಥಕವಾಗಿ ಬಳಸಲಾಗಿದೆ. ಈ ಹೇಳಿಕೆಯಿಂದ ದಾವೀದನು ದೇವರು ತನಗೆ ಮತ್ತು ಸಂತತಿಗೆ ಕೊಟ್ಟ ವಾಗ್ದತ್ತ ದೇಶವನ್ನು ಸೂಚಿಸಿ ಹೇಳುತ್ತಾನೆ.

3. ಈ ಕೀರ್ತನೆಯನ್ನು ಹೊಸ ಒಡಂಬಡಿಕೆಯಲ್ಲಿ ಎರಡು ಬಾರಿ ಉಪಯೋಗಿಸಲಾಗಿದೆ:

   ಅ. ಅಪೊ.ಕೃತ್ಯ. 2:25–28 ರಲ್ಲಿ ಪೇತ್ರನು ಪಂಚಾಶತ್ತಮ ದಿನದಲ್ಲಿನ ತನ್ನ ಬೋಧನೆಯಲ್ಲಿ ವಚನ 8–11 ಅನ್ನು ಉಪಯೋಗಿಸುತ್ತಾನೆ. ಈ ವಚನಗಳು ಯೇಸುವಿನ ಕುರಿತಾಗಿ ದಾವೀದನಿಂದ ಬರೆಯಲ್ಪಟ್ಟಿವೆ ಎಂದು

ಹೇಳುವುದರಿಂದ ಹೇಳಿಕೆಯನ್ನು ಪೇತ್ರನು ಪರಿಚಯಿಸುತ್ತಾನೆ. ಹೇಳಿಕೆಯ ನಂತರ ಆತನು ದಾವೀದನು ತನ್ನ ಬಗ್ಗೆ ಇದನ್ನು ಬರೆಯದೇ ಇದ್ದಿರಬಹುದು, ಯಾಕೆಂದರೆ ಆತನು ಸತ್ತು ಯೇರೂಸಲೇಮಿನಲ್ಲಿ ಹೂಣಲ್ಪಟ್ಟನು. ಆದರೆ ಯೇಸು ಕ್ರಿಸ್ತನ ಪುನರುತ್ಥಾನದ ಬಗ್ಗೆ ಆತನು ಪ್ರವಾದನಾಪೂರ್ವಕವಾಗಿ ಬರೆದಿದ್ದಾನೆ.

ಆ. ಅಪೊ.ಕೃತ್ಯ. 13:35 ರಲ್ಲಿ ಪೌಲನು ತನ್ನ ಮೊದಲ ಮಿಷನರಿ ಪ್ರಯಾಣದ ಸಮಯದಲ್ಲಿ ಪಿಸಿದ್ಯದ ಅಂತಿಯೋಕ್ಯದ ಸಭಾಮಂದಿರದಲ್ಲಿ ತನ್ನ ಸಂದೇಶದಲ್ಲಿ 10ನೇ ವಚನ ಭಾಗವನ್ನು ಉಪಯೋಗಿಸುತ್ತಾನೆ. ಪೇತ್ರನು ಮಾಡಿದ ರೀತಿಯಲ್ಲಿಯೇ ಈತನು ಇದನ್ನು ವ್ಯಾಖ್ಯಾನಿಸುತ್ತಾನೆ: ದಾವೀದನು ಇದನ್ನು ತನ್ನ ಕುರಿತಾಗಿ ಬರೆದಿರಲು ಸಾಧ್ಯವಿಲ್ಲ, ಯಾಕೆಂದರೆ ಆತನು ಸತ್ತನು ಮತ್ತು ಆತನ ದೇಹ ಕೊಳೆಯಿತು. ಆದರೆ ದೇವರು ಮರಣದಿಂದ ಎಬ್ಬಿಸಿದ ಮತ್ತು ಕೊಳೆಯುವ ಅವಸ್ಥೆಯನ್ನು ತಲುಪದ ಯೇಸುವಿನ ಬಗ್ಗೆ ಈತನು ಪ್ರವಾದಿಸಿದನು.

4. ಆಧುನಿಕ ಓದುಗರಾದ ನಾವು 16ನೇ ಕೀರ್ತನೆಯನ್ನು 3 ಮಟ್ಟದಲ್ಲಿ ಓದಬೇಕಾಗಿದೆ:

ಅ. ಐತಿಹಾಸಿಕ ಮಟ್ಟ: ಈ ಕೀರ್ತನೆಯು ದಾವೀದನಿಂದ ಬರೆಯಲ್ಪಟ್ಟಿದೆ ಮತ್ತು ಇದು ಆ ಸಮಯದಲ್ಲಿನ ದಾವೀದನ ಜೀವನ ಮತ್ತು ಸನ್ನಿವೇಶವನ್ನು ಪ್ರತಿಬಿಂಬಿಸುತ್ತದೆ. ದೇವರ ರಕ್ಷಣೆ (ಭದ್ರತೆ) ಮತ್ತು ಆಶೀರ್ವಾದಕ್ಕಾಗಿ ಆತನು ದೇವರಿಗೆ ಕೃತಜ್ಞನಾಗಿದ್ದಾನೆ. "ಜೀವಮಾರ್ಗದ" ಆತನ ವರ್ಣನೆಯು "ನೀತಿವಂತರು ಬಾಳುವರು ಮತ್ತು ದುಷ್ಟರು ನಾಶವಾಗುವರು" ಎಂಬ ಕೀರ್ತನೆ 1 ರ ಸಾರಾಂಶವನ್ನು ನೆನಪಿಸುತ್ತದೆ. ಇದನ್ನೇ ಇಬ್ರಿಯ ಜ್ಞಾನವು ಸಹ ಬೋಧಿಸುತ್ತದೆ.

ಆ. ಪ್ರವಾದನಾ ಮಟ್ಟ: ದೈವಪ್ರೇರಣೆ ಹೊಂದಿದ ಹೊಸ ಒಡಂಬಡಿಕೆಯ ಬೋಧಕರುಗಳಾದ ಪೇತ್ರ ಮತ್ತು ಪೌಲನ ಮೂಲಕ ಕೀರ್ತನೆ 16:8–11 ಒಂದು ಪ್ರವಾದನಾ ಆಯಾಮವನ್ನೂ ಸಹ ಹೊಂದಿದೆ ಎಂಬುದನ್ನು ನಾವು ಕಲಿಯುತ್ತೇವೆ. ಇದು ಯೇಸು ಕ್ರಿಸ್ತನ ಪುನರುತ್ಥಾನದ ಕುರಿತಾದ ಒಂದು ಪ್ರವಾದನೆಯಾಗಿದೆ.

ಇ. ಭಕ್ತಿಯ ಮಟ್ಟ: ಉಳಿದ ಕೀರ್ತನೆಯಂತೆ ಕೀರ್ತನೆ 16 ಕ್ಕೆ ಭಕ್ತಿಯ ಮಟ್ಟ ಸಹ ಇದೆ. ದೇವರ ಸಂರಕ್ಷಣೆಯ ಕುರಿತಾದ ದಾವೀದನ ಅನುಭವ ಮತ್ತು ಆಶೀರ್ವಾದಗಳನ್ನು ನಮ್ಮ ಆತ್ಮೀಕ ಜೀವಿತ ಮತ್ತು ಅದರ ಬೆಳೆವಣಿಗೆಗೆ ಒಂದು ಕನ್ನಡಿಯಾಗಿ ನಾವು ಉಪಯೋಗಿಸಬಹುದು.

5. ವಚನ 10–11 ರ ಪದ್ಯರೂಪಿ ರಚನೆಯನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು:

ಅ. ವಚನ 10 ರಲ್ಲಿ ಸಮಾನಾರ್ಥಕ ಸಮಾನಾಂತರತೆಗೆ ಒಂದು ಉದಾಹರಣೆ: ಈ ವಚನದ ಎರಡೂ ಭಾಗಗಳು ಹೆಚ್ಚೂಕಡಿಮೆ ಒಂದೇ ಅರ್ಥ ಕೊಡುತ್ತವೆ.

ಆ. ವಿರೋಧಾತ್ಮಕ ಸಮಾನಾಂತರತೆಗೆ ಒಂದು ಉದಾಹರಣೆ: ವಚನ 10 ಮತ್ತು 11 ರ ನಡುವೆ ಎರಡು ವಿಭಿನ್ನ ಮಾರ್ಗಗಳನ್ನು ತಿಳಿಸುವ ತದ್ವಿರುದ್ಧತೆಯಿದೆ. ದೇವರಲ್ಲಿ ಭದ್ರತೆಯನ್ನು ಪಡೆಯದೇ ಇರುವವರು ಮರಣ ಮತ್ತು ನಾಶನವನ್ನು ಎದುರಿಸುವರು. ಆದರೆ ದಾವೀದನಂತೆ ದೇವರಲ್ಲಿ ಆಶ್ರಯ ಪಡಕೊಂಡವರು ದೇವರ ಸನ್ನಿಧಿಯಲ್ಲಿ ಜೀವ, ಸಂತೋಷ ಮತ್ತು ಆನಂದವನ್ನು ಅನುಭವಿಸುವರು.

ಇ. ವಚನ 11 ರಲ್ಲಿ ಸಂಯೋಜಿತ ಸಮಾನಾಂತರತೆಗೆ ಒಂದು ಉದಾಹರಣೆಯಿದೆ. ಮೊದಲ ಸಾಲು ಜೀವ ಮಾರ್ಗದ ಕುರಿತಾಗಿ ತಿಳಿಸುತ್ತದೆ, ಮತ್ತು ಉಳಿದ ಎರಡು ಸಾಲುಗಳು ಈ ಮಾರ್ಗವನ್ನು ಹಿಂಬಾಲಿಸಿದವರಿಗೆ ಏನಾಗುತ್ತದೆಂಬುದನ್ನು ವಿವರಿಸುತ್ತವೆ.

6. ವಚನ 11 ರಲ್ಲಿನ "ನಿನ್ನ ಬಲಗೈಯಲ್ಲಿ" ಎಂಬ ಹೇಳಿಕೆಯನ್ನು "ನಿನ್ನ ಸನ್ನಿಧಿಯಲ್ಲಿ" ಎಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ.

7. –

8. ಈ ಕೀರ್ತನೆಯ ದೈವಶಾಸ್ತ್ರವನ್ನು ಈ ರೀತಿಯಾಗಿ ಸಾರಾಂಶಗೊಳಿಸಬಹುದು:

ಅ. ದೇವರು ತನ್ನ ಶರಣಾಗತರನ್ನು ಕಾಪಾಡುತ್ತಾನೆ. ಆತನೇ ತನ್ನ ಜನರಿಗೆ ಭದ್ರತೆಯಾಗಿದ್ದಾನೆ.

ಆ. ದೇವರು ತನ್ನ ಜನರು ಅನುಭವಿಸುವ ಎಲ್ಲಾ ಆಶೀರ್ವಾದಗಳಿಗೆ ಮೂಲವಾಗಿದ್ದಾನೆ.

ಇ. ದೇವರು ತನ್ನ ಜನರನ್ನು ಮಾರ್ಗದರ್ಶಿಸುತ್ತಾನೆ. ಆತನು ಅವರಿಗೆ ಆಲೋಚನೆ ಹೇಳಿ ಉಪದೇಶಿಸುತ್ತಾನೆ.

ಈ. ದೇವರು ತನ್ನ ಜನರನ್ನು ಜೀವಮಾರ್ಗದಲ್ಲಿ ನಡೆಸುತ್ತಾನೆ. ಈ ಮಾರ್ಗವು ಅವರಿಗೆ ಆತನ ಸನ್ನಿಧಿಯಲ್ಲಿ ಶಾಶ್ವತ ಸಂತೋಷವನ್ನು ತಂದುಕೊಡುತ್ತದೆ.

ಕೀರ್ತನೆ 19 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 19 ಅನ್ನು ಈ ರೀತಿ ರಚಿಸಬಹುದು:

   ಅ. ಆಕಾಶ ಮತ್ತು ಸೂರ್ಯರು ದೇವರ ಪ್ರಭಾವವನ್ನು ಪ್ರಚುರಪಡಿಸುವರು, ವಚನ 1–6

   ಆ. ಧರ್ಮಶಾಸ್ತ್ರವು ದೇವರ ಸೇವಕನಾದ ದಾವೀದನಿಗೆ ಆನಂದವನ್ನು ತಂದುಕೊಡುತ್ತದೆ, ವಚನ 7–11

   ಇ. ದೇವರ ಸೇವಕನಾದ ದಾವೀದನು ವಿಮರ್ಶಿಸಿ ಪ್ರಾರ್ಥಿಸುತ್ತಾನೆ, ವಚನ 11–14

2. ವಚನ 1 ಅನ್ನು ಸಮಾನಾರ್ಥಕ ಸಮಾನಾಂತರತೆಗೆ ಒಂದು ಉದಾಹರಣೆಯಾಗಿ ಅರ್ಥೈಸಿಕೊಳ್ಳಬಹುದು:

   - ಮೊದಲ ಸಾಲಿನಲ್ಲಿನ **"ಆಕಾಶ"** ಮತ್ತು ಎರಡನೇ ಸಾಲಿನಲ್ಲಿನ **"ಗಗನ"** ಸಹ ಒಂದೇ ಸಂಗತಿಯಾಗಿವೆ.
   - ಮೊದಲ ಸಾಲಿನಲ್ಲಿನ **"ಪ್ರಚುರಪಡಿಸುತ್ತದೆ"** ಮತ್ತು ಎರಡನೇ ಸಾಲಿನಲ್ಲಿ **"ತಿಳಿಸುತ್ತದೆ"** ಎಂಬ ಮಾತು ಒಂದೇ ಸಂಗತಿಯನ್ನು ತಿಳಿಸುತ್ತವೆ.
   - ಮೊದಲ ಸಾಲಿನಲ್ಲಿನ **"ದೇವರ ಪ್ರಭಾವವನ್ನು"** ಎರಡನೇ ಸಾಲಿನಲ್ಲಿ **"ಕೈ ಕೆಲಸ"** ವೆಂಬುದಾಗಿ ವಿವರಿಸಲಾಗಿದೆ. ಇದರರ್ಥ ದೇವರ ಸೃಷ್ಟಿ, ಆತನ ಕೈಕೆಲಸವು ಆತನ ಮಹಿಮೆಯನ್ನು ಸಾಕ್ಷೀಕರಿಸುತ್ತದೆ. ಅಥವಾ ಇನ್ನೂ ಅರ್ಥವತ್ತಾಗಿ ಹೇಳಬೇಕೆಂದರೆ – ದೇವರು ತನ್ನ ಸೃಷ್ಟಿಯ ಮೂಲಕ ತನ್ನ ಪ್ರಭಾವವನ್ನು ಪ್ರಕಟಿಸುತ್ತಾನೆ.

3. ದಾವೀದನು ವಚನ 7–9 ರಲ್ಲಿ **"ಯೆಹೋವನ ಧರ್ಮಶಾಸ್ತ್ರಕ್ಕೆ"** 5 ಸಮಾನಾರ್ಥಕಗಳನ್ನು ಕೊಡುತ್ತಾನೆ.

   ಅ. ಯೆಹೋವನ ಕಟ್ಟಳೆ

   ಆ. ಯೆಹೋವನ ನಿಯಮ

   ಇ. ಯೆಹೋವನ ಆಜ್ಞೆ

   ಈ. ಯೆಹೋವನ ಭಯ

   ಉ. ಯೆಹೋವನ ವಿಧಿ

4. ದಾವೀದನು ವಚನ 7–9 ರಲ್ಲಿ ಧರ್ಮಶಾಸ್ತ್ರವನ್ನು ವರ್ಣಿಸಲು ಬಳಸುವ 9 ಪದಗಳು:

   ಅ. ಅದು ಲೋಪವಿಲ್ಲದ್ದು

   ಆ. ಅದು ನಂಬಿಕೆಗೆ ಯೋಗ್ಯವಾದದ್ದು

   ಇ. ಅದು ನೀತಿಯುಳ್ಳದ್ದು

   ಈ. ಅದು ಪವಿತ್ರವಾದದ್ದು

   ಉ. ಅದು ಪರಿಶುದ್ಧವಾದದ್ದು

   ಊ. ಅದು ಯಥಾರ್ಥವಾದದ್ದು

   ಋ. ಅದು ಕಳೆಗೊಳಿಸುವಂಥದ್ದು

   ಏ. ಅದು ಶಾಶ್ವತವಾದದ್ದು

   ಏ. ಅದು ಅಮೂಲ್ಯವಾದದ್ದು.

5. ವಚನ 7–9 ರಲ್ಲಿ ದೇವರ ಸೇವಕನಾದ ದಾವೀದನ ಮೇಲೆ ಧರ್ಮಶಾಸ್ತ್ರವು ಬೀರುವ ಪರಿಣಾಮಗಳು:

   ಅ. ಇದು ಆತನ ಪ್ರಾಣವನ್ನು ಉಜ್ಜೀವಿಸಮಾಡುತ್ತದೆ. ನಾನೆಣಿಸುತ್ತೇನೆ ಇದರರ್ಥ – ದಾವೀದನು ದೇವರ ವಾಕ್ಯದಿಂದ ಆತ್ಮೀಕವಾಗಿ ಉತ್ತೇಜಿಸಲ್ಪಟ್ಟನು.

ಆ. ಇದು ಬುದ್ಧಿಹೀನರನ್ನು ವಿವೇಕಿಗಳನ್ನಾಗಿಸುತ್ತದೆ.

ಇ. ಇದು ಆತನ ಮನಸ್ಸಿಗೆ ಹರ್ಷವನ್ನು ಕೊಡುತ್ತದೆ. ದೇವರ ವಾಕ್ಯವು ದಾವೀದನನ್ನು ಸಂತೋಷಗೊಳಿಸಿತು. ದೇವರ ವಾಕ್ಯವನ್ನು ಅಭ್ಯಾಸಿಸುವುದರಲ್ಲಿ ಆತನು ಖುಷಿಪಟ್ಟಿರಬಹುದು.

ಈ. ಇದು ಆತನ ಕಣ್ಣುಗಳನ್ನು ಕಳೆಗೊಳಿಸಿತು.

6. ದಾವೀದನು ಧರ್ಮಶಾಸ್ತ್ರದ ಬಗ್ಗೆ ವಚನ 10 ರಲ್ಲಿ ಎರಡು ತೀರ್ಮಾನಗಳನ್ನು ಮಾಡುತ್ತಾನೆ.

ಅ. ಧರ್ಮಶಾಸ್ತ್ರವು ಬಹು ಬೆಲೆಬಾಳುವಂಥದ್ದು. ಅಂದರೆ ಇದು ಬಂಗಾರ, ಅಪರಂಜಿಗಿಂತಲೂ ಅಪೇಕ್ಷಿಸುವಂತದ್ದು.

ಆ. ಧರ್ಮಶಾಸ್ತ್ರವು ಅತ್ಯುತ್ತಮವಾದದ್ದು ಮತ್ತು ಮನೋಹರವಾದದ್ದು. ಹಾಗಾಗಿ ಇದು ಆತನಿಗೆ ಸಿಹಿಯಾದ ಜೇನುತುಪ್ಪಕ್ಕಿಂತಲೂ ಮಧುರವಾಗಿ ಕಾಣಿಸಿತು.

7. ದಾವೀದನು ದೇವರಿಗೆ ವಚನ 12–13 ರಲ್ಲಿ ಎರಡು ಪ್ರಾರ್ಥನೆ ಮಾಡುತ್ತಾನೆ.

ಅ. ಮೊದಲನೇಯದಾಗಿ ಆತನು ಮರೆಯಾದ ಪಾಪಗಳಿಗಾಗಿ ತನ್ನನ್ನು ಕ್ಷಮಿಸಬೇಕೆಂದು ಬೇಡುತ್ತಾನೆ.

ಆ. ಆ ನಂತರ ಆತನು ಬೇಕೆಂದು ಮಾಡುವ ಪಾಪಗಳಿಂದ ತನ್ನನ್ನು ಕಾಪಾಡಬೇಕೆಂದು ಬೇಡುತ್ತಾನೆ.

8. ದಾವೀದನು ವಚನ 14 ರಲ್ಲಿ ಎರಡು ಸಂಗತಿಗಳ ಬಗ್ಗೆ ಪ್ರಾರ್ಥಿಸುತ್ತಾನೆ:

ಅ. ಮೊದಲನೇದಾಗಿ ಆತನು ದೇವರಿಗೆ ಮೆಚ್ಚಿಕೆಯಾಗುವ ರೀತಿಯು ತಾನು ಆಡುವ ಮಾತನ್ನು ಮಾರ್ಗದರ್ಶಿಸಬೇಕೆಂದು ಬೇಡುತ್ತಾನೆ.

ಆ. ಎರಡನೇಯದಾಗಿ ತನ್ನ ಆಲೋಚನೆಗಳನ್ನು ಮಾರ್ಗದರ್ಶಿಸಬೇಕೆಂದು ದೇವರನ್ನು ಬೇಡುತ್ತಾನೆ.

ಕೀರ್ತನೆ 19 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 4 ರಲ್ಲಿನ ಇಬ್ರಿಯ ಹೇಳಿಕೆಯ ಪ್ರತೀ ವಿವರವನ್ನು ಅರ್ಥೈಸಿಕೊಳ್ಳಲು ಕಷ್ಟಕರವಾಗಿದ್ದರೂ 3–4ನೇ ವಚನಗಳಲ್ಲಿನ ದಾವೀದನ ಸಂದೇಶವು ಸ್ಪಷ್ಟವಾಗಿದೆ: ಜಗತ್ತಿನಾದ್ಯಂತ ಯಾವುದೇ ದೇಶಗಳು, ಯಾವುದೇ ಭಾಷೆಯನ್ನಾಡಿದರೂ ದೇವರ ಸೃಷ್ಟಿಯ ಸಾಕ್ಷಿಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಸೂರ್ಯ, ಚಂದ್ರ, ನಕ್ಷತ್ರಗಳನ್ನೊಳಗೊಂಡ ಆಕಾಶದ ಅದ್ಭುತತೆಯು, ಇನ್ನೂ ಅತ್ಯದ್ಭುತಮಯವಾದ ದೇವರ ಬಗ್ಗೆ ಮಾತನಾಡುತ್ತದೆ.

2. 4ಬಿ–6 ರಲ್ಲಿನ ಪದ್ಯರೂಪಿ ಭಾಷೆಗಳು.

ಅ. ಎರಡು ರೂಪಾಲಂಕಾರಗಳು:

- ಗುಡಾರ: ದೇವರು ಆಕಾಶವನ್ನು ಸೂರ್ಯನಿಗಾಗಿ ಒಂದು ಗುಡಾರವಾಗಿ ಮಾಡಿದ್ದಾನೆ.
- ಮಂಟಪ: ಇದು ಮದಲಿಂಗನು ಹೊರಟುಬರುವ ಒಂದು ಸ್ಥಳವಾಗಿದೆ.

ಆ. ಎರಡು ಉಪಮೆಗಳು:

- ಮದಲಿಂಗನಂತೆ: ಸೂರ್ಯನ ವೈಭವ (ಕಾಂತಿಯು) ಮದಲಿಂಗನ ವೈಭವದಂತಿರುತ್ತದೆ.
- ಶೂರನಂತೆ: ಆಕಾಶದಲ್ಲೆಲ್ಲಾ ಸೂರ್ಯನ ವೈಭವವು ಶೂರನ ಓಟದಂತಿದೆ.

ಈ ವಚನಗಳಲ್ಲಿ ದಾವೀದನು ಬಳಸುವ ಚಿತ್ರಣವು ಪ್ರಾಚೀನ ಬ್ಯಾಬಿಲೋನಿಯನ್ ಸಾಹಿತ್ಯದಲ್ಲೂ ಕಂಡುಬರುತ್ತದೆ. ಆದರೆ ಒಂದು ಪ್ರಮುಖ ವ್ಯತ್ಯಾಸವಿದೆ: ಪ್ರಾಚೀನ್ ಬ್ಯಾಬಿಲೋನಿಯಾದಲ್ಲಿ ಸೂರ್ಯನನ್ನು ದೇವರಾಗಿ ಪೂಜಿಸಲಾಗುತ್ತಿತ್ತು. ಮತ್ತೊಂದೆಡೆ ದಾವೀದನಿಗೆ, ಸೂರ್ಯನ ಮಹಿಮೆಯು ಸೂರ್ಯನ ಸೃಷ್ಟಿಕರ್ತನಾದ ದೇವರಿಗೆ ಸಾಕ್ಷಿಯಾಗಿದೆ. ಹಳೇ ಒಡಂಬಡಿಕೆಯಲ್ಲಿ ಬೇರೆಡೆ, "ಸೂರ್ಯನನ್ನು" ದೇವರ ಮಹಿಮೆ ಮತ್ತು ವೈಭವಕ್ಕೆ ರೂಪಾಲಂಕಾರವಾಗಿ ಬಳಸಲಾಗುತ್ತದೆ (ಉದಾಹರಣೆಗೆ ಕೀರ್ತನೆ 84:11 ನೋಡಿ).

ಇ. ಸ್ವರ/ಭಾವ: ಈ ವಾಕ್ಯಭಾಗದ ಭಾವವು ಒಂದು ಸಂಭ್ರಮಾಚರಣೆ, ಉತ್ಸವ, ಮಹಿಮೆ, ವೈಭವದ ಸನ್ನಿವೇಶವಾಗಿದೆ.

3. ವಚನ 7–9 ರಲ್ಲಿ ಧರ್ಮಶಾಸ್ತ್ರ ಮತ್ತು ದಾವೀದನ ಮೇಲೆ ಇದು ಬೀರುವ ಪರಿಣಾಮದ ಬಗ್ಗೆ ವರ್ಣಿಸಲಾಗಿದೆ. ಮುಖ್ಯ 3 ಭಾಗಗಳ ರಚನೆಯು ಎಲ್ಲಾ ವಚನಗಳಲ್ಲಿ ಒಂದೇ ರೀತಿಯಿದೆ. ಆದರೆ ವಚನ 9 ರ ಸಮಾನಾರ್ಥಕ ರಚನೆಯು ವಚನ 7–8 ರ ಸಮಾನಾರ್ಥಕ ರಚನೆಗಿಂತ ಸ್ವಲ್ಪ ವಿಭಿನ್ನವಾಗಿದೆ:

   ಅ. ವಚನ 7–8 ರಲ್ಲಿ 3 ಭಾಗಗಳ ರೂಪವು (ವಿಧಾನ) ನಾಲ್ಕುಬಾರಿ ಪುನರಾವರ್ತನೆಯಾಗಿದೆ: ಧರ್ಮಶಾಸ್ತ್ರ ಮತ್ತು ಅದರ ಸಕಾರಾತ್ಮಕವಾದ ವರ್ಣನೆ. ಅನಂತರ ಈ ಸಕಾರಾತ್ಮಕ ಧರ್ಮಶಾಸ್ತ್ರವು ದಾವೀದನ ಮೇಲೆ ಬೀರಿದ ಪ್ರಭಾವ ಹಾಗಾಗಿ ಇಲ್ಲಿನ ಸಮಾನಾಂತರತೆಯು ಸಂಯೋಜಿತವಾಗಿದೆ.

   ಆ. ವಚನ 4 ರಲ್ಲಿ ಸಹ 3 ಭಾಗಗಳು ರೂಪವು (ವಿಧಾನ) ಮರುಕಳಿಸಿದೆ. ಇಲ್ಲಿಯೂ ಧರ್ಮಶಾಸ್ತ್ರದ ಸಮಾನಾರ್ಥಕ ಮತ್ತು ಧರ್ಮಶಾಸ್ತ್ರದ ಸಕಾರಾತ್ಮಕ ವರ್ಣನೆ ಅನಂತರ ಧರ್ಮಶಾಸ್ತ್ರದ ಹೆಚ್ಚುವರಿ ವರ್ಣನೆ ಕಂಡುಬರುತ್ತದೆ. ಇದನ್ನೂ ಬಹುಶಃ ಒಂದು ಸಮಾನಾರ್ಥಕವಾಗಿ ಅರ್ಥೈಸಿಕೊಳ್ಳಬೇಕು. ಹಾಗಾಗಿ ಇದು ಸಂಯೋಜಿತಕ್ಕಿಂತ ಸಮಾನಾಂತರತೆಯಾಗಿ ತೋರಿಬರುತ್ತದೆ.

4. ದಾವೀದನು ಧರ್ಮಶಾಸ್ತ್ರ, ದೇವರ ವಾಕ್ಯ ಮತ್ತು ದೇವರೊಂದಿಗಿನ ತನ್ನ ಸಂಬಂಧದ ವಿಚಾರದಲ್ಲಿ ತನ್ನ ಜೀವಿತವನ್ನು ಈ ರೀತಿಯಲ್ಲಿ ವರ್ಣಿಸುತ್ತಾನೆ, ವಚನ 9–14:

   ಅ. ಮೊದಲನೇಯದಾಗಿ ದಾವೀದನು ಧರ್ಮಶಾಸ್ತ್ರದ ಒಂದು ಸಕಾರಾತ್ಮಕ ವರ್ಣನೆಯನ್ನು ಕೊಡುತ್ತಾನೆ. ಇದು ಪರಿಶುದ್ಧವಾದದ್ದು, ಶಾಶ್ವತವಾದದ್ದು, ಯಥಾರ್ಥವಾದದ್ದು, ನೀತಿಯುಳ್ಳದ್ದು, ಅಮೂಲ್ಯವಾದದ್ದು, ಸಿಹಿಯಾದದ್ದು (9–10). ಹಾಗೆಯೇ ನಿಜವಾಗಲೂ ದಾವೀದನು ಧರ್ಮಶಾಸ್ತ್ರವನ್ನು ಹೊಗಳುತ್ತಾನೆ (ದೇವರ ವಾಕ್ಯ).

   ಆ. ಅನಂತರ ದಾವೀದನು ಧರ್ಮಶಾಸ್ತ್ರವು ತನಗಾಗಿ ಹೊಂದಿರುವ ಎರಡು ಉದ್ದೇಶಗಳನ್ನು ತಿಳಿಸುತ್ತಾನೆ. (ವಚನ 11):

      - ದೇವರು ಬಯಸುವಂತ ಜೀವಿತವನ್ನು ಜೀವಿಸಬೇಕೆಂಬುದಕ್ಕೆ ಇದು ದಾವೀದನಿಗೊಂದು ಎಚ್ಚರಿಕೆಯಾಗಿದೆ. ಇದರರ್ಥ ದೇವರು ತನ್ನ ವಾಕ್ಯದ ಮೂಲಕ ತನ್ನ ಚಿತ್ತವನ್ನು ದಾವೀದನು ತಿಳಿದುಕೊಳ್ಳುವಂತೆ ಮಾಡುತ್ತಾನೆ.

      - ಇದು ದಾವೀದನು ಧರ್ಮಶಾಸ್ತ್ರಕ್ಕೆ ವಿಧೇಯನಾಗಿರಲು ಅತೀ ಪ್ರಯೋಜನಕಾರಿಯಾಗಿದೆ. ಖಂಡಿತವಾಗಿ ಇದು ತನ್ನ ಜನರೊಂದಿಗಿನ ದೇವರ ಒಡಂಬಡಿಕೆಯನ್ನು ಪ್ರತಿಬಿಂಬಿಸುತ್ತದೆ. ಒಂದು ವೇಳೆ ದೇವಜನರು ದೇವರ ಒಡಂಬಡಿಕೆಯ ವಿಧಿಗಳಿಗೆ ನಂಬಿಗಸ್ತರಾಗಿದ್ದರೆ ದೇವರು ಅವರನ್ನು ಮತ್ತು ಅವರ ದೇಶವನ್ನು ಆಶೀರ್ವದಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ. ಆದರೆ ದೇವಜನರು ಒಡಂಬಡಿಕೆಯನ್ನು ಮೀರಿದರೆ ಅವರ ದೇಶವು ಶಾಪವನ್ನು ಅನುಭವಿಸಬೇಕಾಗುತ್ತದೆ.

   ಇ. ಅನಂತರ ದಾವೀದನು ತಾನು ಪಾಪ ಮಾಡದಂತೆ ದೇವರ ಸಹಾಯವನ್ನು ಕೇಳಿಕೊಳ್ಳುತ್ತಾನೆ. ತಾನು ತಿಳಿದು ಮತ್ತು ತಿಳಿಯದೆ ಮಾಡಿದ ಪಾಪಗಳನ್ನು ಕ್ಷಮಿಸಬೇಕೆಂದು ದೇವರಲ್ಲಿ ಕೇಳಿಕೊಳ್ಳುತ್ತಾನೆ. ಆತನು ದೇವರ ಮುಂದೆ ನಿರ್ಮಲನಾಗಿರಬೇಕೆಂದು ಬಯಸುತ್ತಾನೆ (ವಚನ 12).

   ಈ. ಕೊನೆಯದಾಗಿ ದಾವೀದನು ದೇವರು ತನ್ನ ಮಾತು ಮತ್ತು ಆಲೋಚನೆಗಳೆರಡನ್ನು ಶುದ್ಧೀಕರಿಸಬೇಕೆಂದು ಪ್ರಾರ್ಥಿಸುತ್ತಾನೆ.

5. ದಾವೀದನು ವಚನ 14 ರಲ್ಲಿ ಎರಡು ಹೆಸರುಗಳನ್ನು ಉಪಯೋಗಿಸುವುದರಿಂದ ದೇವರನ್ನು ಸಂಬೋಧಿಸುತ್ತಾನೆ:

   ಅ. **"ನನ್ನ ಶರಣನೇ"**: ಈ ರೂಪಾಲಂಕಾರವು ಬಲ ಮತ್ತು ಸ್ಥಿರತೆಯನ್ನು ಸೂಚಿಸುತ್ತದೆ. ಇದು ಆಶ್ರಯಕ್ಕಾಗಿ ಒಂದು ಸುರಕ್ಷಿತ ಸ್ಥಳದ ಸೂಚನೆಯಾಗಿದೆ. ಅಪಾಯ ಸಮಯದಲ್ಲಿ ದೇವರು ತನಗೆ ಹೇಗೆ ಬಲ ಮತ್ತು ಸ್ಥಿರತೆಯನ್ನು ಕೊಟ್ಟದ್ದನ್ನು ದಾವೀದನು ಅನುಭವಿಸಿದ್ದಿರಬಹುದು. ಅಲ್ಲದೆ ವೈರಿಗಳ ಕೈಯಿಂದ ದೇವರು ಆತನನ್ನು ಸುರಕ್ಷಿತವಾಗಿ ಕಾಪಾಡಿದ್ದನ್ನೂ ಸಹ ಆತನು ಅನುಭವಿಸಿದನು.

   ಆ. **"ನನ್ನ ವಿಮೋಚಕನೇ"**: ವಿಮೋಚನಕಾಂಡ 6:6 ರಲ್ಲಿ ದೇವರು ತನ್ನ ಬಗ್ಗೆ ಈ ಹೆಸರನ್ನು ಉಪಯೋಗಿಸುತ್ತಾನೆ. ಅಲ್ಲಿ ಆತನು ಮೋಶೆಗೆ ತಾನು ಯಾರಾಗಿದ್ದೇನೆ ಮತ್ತು ಐಗುಪ್ತದಲ್ಲಿ ಗುಲಾಮರಾಗಿರುವ ಇಸ್ರಾಯೇಲ್ಯರೊಂದಿಗೆ ಏನನ್ನು ಮಾಡಲು ಹೊರಟಿರುವೆನೆಂಬುದನ್ನು ವಿವರಿಸುತ್ತಾನೆ. ದೇವರು ತನ್ನಜನರನ್ನು ಕೇವಲ ಐಗುಪ್ತ್ಯರಿಂದಷ್ಟೇ ಅಲ್ಲ, ಪಾಪ ಮತ್ತು ದುಷ್ಟ ವೈರಿಗಳಿಂದ ಸಹ ಬಿಡಿಸುವ ವಿಮೋಚಕನಾಗಿದ್ದಾನೆ. ದಾವೀದನು ತನ್ನ ಬಾಲ್ಯದಲ್ಲಿ ತಂದೆಯ ಕುರಿಗಳನ್ನು ಕಾಯುತ್ತಿದ್ದಾಗ ದುಷ್ಟಮೃಗಗಳಿಂದ ದೇವರು ತನ್ನನ್ನು ಹೇಗೆ ಬಿಡಿಸಿದನೆಂಬುದನ್ನು ವೈಯಕ್ತಿಕ ಅನುಭವ ಹೊಂದಿರಬಹುದು.

ಕೀರ್ತನೆ 23 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 23 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ದೇವರು ದಾವೀದನಿಗೆ ಕುರುಬನಾಗಿರುವುದು, ವಚನ 1–3

   ಆ. ದೇವರು ದಾವೀದನಿಗೆ ಪ್ರಯಾಣದಲ್ಲಿ ಒಬ್ಬ ಸಂಗಡಿಗನಾಗಿರುವುದು, ವಚನ 4

   ಇ. ದೇವರು ದಾವೀದನ ಅತಿಥೇಯನಾಗಿರುವುದು, ವಚನ 5

   ಈ. ದೇವರ ಒಳ್ಳೇತನ ಮತ್ತು ಪ್ರೀತಿಯ ಕುರಿತಾಗಿ ದಾವೀದನ ಸಾರಾಂಶ, ವಚನ 6

2. ಕೀರ್ತನೆಯನ್ನು ಈ ರೀತಿ ಹೇಳಬಹುದು:

   ಅ. ದಾವೀದನು ದೇವರು ಕಾಳಜಿವಹಿಸುವ ಒಬ್ಬ ಕುರುಬನೆಂಬುದಾಗಿ ಪರಿಗಣಿಸುವುದು. ದೇವರು ಆತನ ಅವಶ್ಯಕತೆಗಳನ್ನು ನೋಡಿಕೊಳ್ಳುತ್ತಾನೆ. ಆತನು ದಾವೀದನಿಗೆ ಆಹಾರ, ಪಾನ, ಒಳ್ಳೆಯ ವಿಶ್ರಾಂತಿ ಮತ್ತು ಚೈತನ್ಯವನ್ನು ಒದಗಿಸುತ್ತಾನೆ. ಅಲ್ಲದೆ ದೇವರು ದಾವೀದನ ಆತ್ಮೀಕ ಅಗತ್ಯತೆಯನ್ನೂ ಸಹ ಪೂರೈಸುತ್ತಾನೆ. ಹಾಗಾಗಿ ದಾವೀದನು ದೇವರು ತನಗೆ ಒದಗಿಸುವನು ಎಂಬುದಾಗಿ ಆತನಲ್ಲಿ ಸಂಪೂರ್ಣ ಭರವಸವಿಡುತ್ತಾನೆ (ವಚನ 1–3).

   ಆ. ಅಲ್ಲದೇ ದೇವರು ದಾವೀದನಿಗೆ ಪ್ರಯಾಣದಲ್ಲಿ ಸಹ ಒಬ್ಬ ಒಳ್ಳೆಯ ಸಂಗಡಿಗನಾಗಿದ್ದಾನೆ (ವಚನ 4). ಜೀವನದ ಭಯಾನಕ ಪ್ರಯಾಣಗಳಲ್ಲಿ ದೇವರು ದಾವೀದನನ್ನು ಕಾಪಾಡಿ, ಆದರಿಸುತ್ತಾನೆ. ಹಾಗಾಗಿ ದಾವೀದನಿಗೆ ಯಾವುದಕ್ಕೂ ಭಯಪಡುವ ಪ್ರಮೇಯವೇ ಇಲ್ಲ.

   ಇ. ಅಲ್ಲದೇ ದಾವೀದನು ದೇವರನ್ನು ಒಬ್ಬ ಒಳ್ಳೆಯ ಮತ್ತು ಉದಾರವಾದ ಅತಿಥೇಯನು ಎಂಬುದಾಗಿ ಪರಿಗಣಿಸುತ್ತಾನೆ. ಒಬ್ಬ ಒಳ್ಳೆಯ ಅತಿಥೇಯನು ತನ್ನ ಅತಿಥಿಗಳನ್ನು ಸ್ವಾಗತಿಸಿ ಅವರಿಗೆ ಬೇಕಾದಷ್ಟು ಒಳ್ಳೆಯ ಆಹಾರ ಮತ್ತು ಪಾನದಿಂದ ಸತ್ಕರಿಸುತ್ತಾನೆ. ಅಲ್ಲದೆ ಅವರು ವೈರಿಗಳಿಂದ ಸುರಕ್ಷಿತವಾಗಿರುವಂತೆ ಸಹ ನೋಡಿಕೊಳ್ಳುತ್ತಾನೆ (ವಚನ 5).

   ಈ. ದಾವೀದನು ತಾನು ದೇವರ ಸಾನಿಧ್ಯವನ್ನು ಎಲ್ಲಿಯವರೆಗೆ ಹುಡುಕುತ್ತೇನೋ ಅಲ್ಲಿಯವರೆಗೂ, ತನ್ನ ಜೀವನದುದ್ದಕ್ಕೂ ದೇವರ ಒದಗಿಸುವಿಕೆಯು ಇರುತ್ತದೆಂಬುದಾಗಿ ಮುಕ್ತಾಯಗೊಳಿಸುತ್ತಾನೆ (ವಚನ 6).

3. ನಮ್ಮ ಆಧುನಿಕ ಭಾಷಾಂತರಗಳು ಈ ಕೀರ್ತನೆಯಲ್ಲಿ ವಿಭಿನ್ನವಾದ ಕ್ರಿಯಾಪದ ಕಾಲಗಳನ್ನು ಬಳಸುತ್ತವೆ. ವಚನ 1–5 ರಲ್ಲಿ ನಾವು ವರ್ತಮಾನ ಕಾಲವನ್ನು ಕಾಣುತ್ತೇವೆ, ಆದರೆ ವಚನ 6 ರಲ್ಲಿ ಭವಿಷ್ಯತ್ ಕಾಲವನ್ನು ಕಾಣಬಹುದು.

ಕೀರ್ತನೆ 23 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಹೆಚ್ಚಿನ ಸತ್ಯವೇದ ವಿಶ್ಲೇಷಕರು ಕೀರ್ತನೆ 23 ಅನ್ನು ಈ ರೀತಿ ರಚನೆಮಾಡುತ್ತಾರೆ.

   ಅ. ಕುರುಬನ ರೂಪಾಲಂಕಾರ, ವಚನ 1–4

   ಆ. ಅತಿಥೇಯನ ರೂಪಾಲಂಕಾರ, ವಚನ 5

   ಇ. ಮುಕ್ತಾಯ, ವಚನ 6

   ಹಾಗಾಗಿ ವ್ಯತ್ಯಾಸವಾದದ್ದೇನೆಂದರೆ ವಚನ 4 ಅನ್ನು ನಾವು ಹೇಗೆ ನೋಡುತ್ತೇವೆ ಎಂಬುದಾಗಿದೆ. **"ಕೋಲು"** ಮತ್ತು **"ದೊಣ್ಣೆ"** ಇವೆರಡೂ ಕುರುಬನ ಸಲಕರಣೆಗಳಾಗಿವೆ. ಹಾಗಾಗಿ ಈ ಪದಗಳು ಸರಳವಾದ ಒಂದು ರಚನೆ ಬಗ್ಗೆ ಮಾತನಾಡುತ್ತವೆ. ಆದರೆ ಸರ್ವನಾಮಗಳ ಬದಲಾವಣೆ (ವಚನ 2–3 ರಲ್ಲಿನ **"ಆತನು"** ಎಂಬ ವಚನ **"ನೀನು"** ಎಂಬುವರೆಗೆ) ಮತ್ತು ಭಯಂಕರವಾದ ಕಣಿವೆಗಳಲ್ಲಿ ನಡೆಯುವುದು ಪ್ರಯಾಣದ ಸಂಗಡಿಗನಿಗೆ ಒಂದು ಹೆಚ್ಚುವರಿ ರೂಪಾಲಂಕಾರಗಳನ್ನು ಸೂಚಿಸಿ ಮಾತನಾಡುತ್ತದೆ (ವಚನ 4).

ಕೆಲವು ವಿಶ್ಲೇಷಕರು ಕೀರ್ತನೆಯುದ್ದಕ್ಕೂ ಕುರುಬನ ರೂಪಾಲಂಕಾರಕ್ಕೆ ಪ್ರಾಶಸ್ತ್ಯಕೊಡುತ್ತಾರೆ. ಆದರೆ ವಚನ 5 ಅನ್ನು ಒಬ್ಬ ಕುರುಬನ ಸನ್ನಿವೇಶಕ್ಕೆ ಹೇಗೆ ಸರಿಹೊಂದಿಸುವುದೆಂಬುವಲ್ಲಿ ಅವರು ಪರದಾಡುತ್ತಾರೆ.

2. ನನ್ನ ವೀಕ್ಷಣೆಗಳು:

   ಅ. ದಾವೀದನು ಕೀರ್ತನೆಯ ಪ್ರಾರಂಭದಲ್ಲಿ ದೇವರನ್ನು ಸಂಬೋಧಿಸುವುದಿಲ್ಲ (1–3). ಬದಲಾಗಿ ಆತನು ದೇವರ ಬಗ್ಗೆ ಮಾತನಾಡುತ್ತಾನೆ (“ಆತನು” ಮತ್ತು “ಆತನ”). ಆದರೆ ವಚನ 4–5 ರಲ್ಲಿ ದಾವೀದನು ನೇರವಾಗಿ ದೇವರನ್ನು ಸಂಬೋಧಿಸುತ್ತಾನೆ (“ನೀನು” ಮತ್ತು “ನಿನ್ನ”). ಕಡೆಯ ವಚನದಲ್ಲಿ ದಾವೀದನು ದೇವರ ಬಗ್ಗೆ ಯಾವುದೇ ಸರ್ವನಾಮವನ್ನು ಬಳಸುವುದಿಲ್ಲ, ಆದರೆ ನನ್ನ ಪ್ರಕಾರ ಆತನು ಪುನಃ ದೇವರ ಬಗ್ಗೆ ಮಾತನಾಡುತ್ತಾನೆ ವಿನಃ ಆತನೊಂದಿಗಲ್ಲ.

   ಆ. ಈ ಕೀರ್ತನೆಯಲ್ಲಿ ಮಾತ್ರ ದಾವೀದನು “ಯೆಹೋವನು” ಎಂಬ ದೇವರ ಒಡಂಬಡಿಕೆಯ ಹೆಸರನ್ನು (ಮತ್ತು ವೈಯಕ್ತಿಕ) ಉಪಯೋಗಿಸುತ್ತಾನೆ. ಆತನದನ್ನು ಎರಡು ಬಾರಿ ಅಂದರೆ ಮೊದಲ ಮತ್ತು ಕೊನೆಯ ವಚನದಲ್ಲಿ ಉಪಯೋಗಿಸುತ್ತಾನೆ. ಹಾಗಾಗಿ ದಾವೀದನು ಕರ್ತನ ಒಡಂಬಡಿಕೆಯ ನಾಮವನ್ನು ಒಂದು ರೀತಿಯ ಆವರಣದಂತೆ ಉಪಯೋಗಿಸುತ್ತಾನೆ (ಇಬ್ರಿಯ ಪದ್ಯದಲ್ಲಿ ವಿವರಿಸಲಾಗಿದೆ).

   ಇ. ವಚನ 3 ರಲ್ಲಿ “ನಿನ್ನ ಹೆಸರಿಗೆ ತಕ್ಕಂತೆ” ಎಂಬ ಹೇಳಿಕೆಯನ್ನು ಕಾಣುತ್ತೇವೆ. ಇದು ದೇವರು ಇಸ್ರಾಯೇಲಿನ ಒಡಂಬಡಿಕೆಯ ಕರ್ತನಾಗಿದ್ದಾನೆ ಎಂಬುದನ್ನು ಸೂಚಿಸುವುದಾಗಿದೆ.

   ಈ. ಕೀರ್ತನೆ 23 ಅನ್ನು ಒಡಂಬಡಿಕೆಯ ಹಿನ್ನಲೆಯಲ್ಲಿಯೇ ನಾವು ಅರ್ಥೈಸಿಕೊಳ್ಳಬೇಕಿದೆ. ದೇವರನ್ನು ನಮ್ಮ ಒಡಂಬಡಿಕೆಯ ಕರ್ತನು ಮತ್ತು ವೈಯಕ್ತಿಕ ರಕ್ಷಕನೆಂಬುದಾಗಿ ಅಂಗೀಕರಿಸಿದಾಗ ಮಾತ್ರ ನಾವು ಮಾರ್ಗದರ್ಶನ, ಸಂರಕ್ಷಣೆ ಮತ್ತು ಪೂರೈಸುವಿಕೆಗಾಗಿ ಅಂದರೆ ಪ್ರಸ್ತುತ ಮತ್ತು ನಿತ್ಯತ್ವದ ಜೀವಿತಕ್ಕಾಗಿ ಆತನಲ್ಲಿ ಭರವಸೆಯಿಡಬಹುದಾಗಿದೆ.

3. “ಯೆಹೋವನು ನನಗೆ ಕುರುಬನು” ಎಂಬುದು ಒಂದು ರೂಪಾಲಂಕಾರವಾಗಿದೆ. ಕುರುಬನು ಹೇಗೆ ತನ್ನ ಕುರಿಗಳನ್ನು ನೋಡಿಕೊಳ್ಳುತ್ತಾನೆ ಎಂಬುದರ ಬಗ್ಗೆ ಬರೆಯುವಾಗ ದಾವೀದನು ಈ ರೂಪಾಲಂಕಾರವನ್ನು ರೂಪಿಸುತ್ತಾನೆ. ಆದರೆ ವಚನ 3 ರಲ್ಲಿ ಆತನು ಕುರುಬ/ಕುರಿಗಳ ರೂಪಾಲಂಕಾರವನ್ನು ಮೀರಿ ಹೋಗುತ್ತಾನೆ: ಕುರಿಗಳಿಗೆ ಆಹಾರ, ನೀರು ಮತ್ತು ಸಂರಕ್ಷಣೆಯಿಲ್ಲ. ಆದರೆ ಅವರ ಪ್ರಾಣವು ಪುನಶ್ಚೇತನಗೊಳ್ಳಬೇಕಿದೆ ಮತ್ತು ಅವುಗಳಿಗೆ ನೀತಿವಂತಿಕೆಯ ಅಗತ್ಯವಿಲ್ಲ. ಆದರೆ ಜನರಿಗೆ ಬೇಕಾಗಿದೆ.

4. ಪಾತ್ರೆಯು ಹೊರಸೂಸುತ್ತದೆ ಎಂಬುದು (ವಚನ 5) ಮಿತಿಯಿಲ್ಲದ ಉದಾರತೆಯಾಗಿದೆ. ದೇವರು ಕೇವಲ ನಮ್ಮ ಅಗತ್ಯಗಳನ್ನು ಮಾತ್ರ ನೋಡಿಕೊಳ್ಳುವುದಿಲ್ಲ. ಆತನು ನಮ್ಮ ಅಗತ್ಯತೆಗಳಿಗಿಂತ ಹೆಚ್ಚಾಗಿ ಕೊಡುತ್ತಾನೆ. ಆತನ ಉದಾರತೆಯು ಹೊರಸೂಸುತ್ತದೆ.

5. ವಚನ 6 ರಲ್ಲಿ ನಾವು “ವ್ಯಕ್ತೀಕರಣ” ಎಂದು ಕರೆಯಲ್ಪಡುವ ಒಂದು ಪದ್ಯರೂಪಿ ರಚನೆಯನ್ನು ಕಾಣುತ್ತೇವೆ. ದಾವೀದನು ತನ್ನ ಜೀವಮಾನದಲ್ಲೆಲ್ಲಾ “ಶುಭವೂ ಮತ್ತು ಕೃಪೆಯೂ” ತನ್ನನ್ನು ಹಿಂಬಾಲಿಸುವವು ಎಂದು ಹೇಳುತ್ತಾನೆ.

6. “ಯೆಹೋವನ ಮಂದಿರದಲ್ಲಿ ವಾಸಿಸುವೆನು” ಎಂಬುದನ್ನು ಒಂದು ರೂಪಾಲಂಕಾರವಾಗಿ ಅರ್ಥೈಸಿಕೊಳ್ಳಬೇಕೆಂದು ನಾನು ಯೋಚಿಸುತ್ತೇನೆ:

   ಅ. ಅರಸನಾದ ದಾವೀದನ ಸಮಯದಲ್ಲಿ ಯೆರೂಸಲೇಮಿನಲ್ಲಿ ಯಾವುದೇ ದೇವಾಲಯವಿರಲಿಲ್ಲ. ಆದರೆ ಬಹುಶಃ ದಾವೀದನು ತಾನು ಯೆರೂಸಲೇಮಿಗೆ ತಂದ ದೇವದರ್ಶನ ಗುಡಾರವನ್ನು ಸೂಚಿಸಿ ಹೇಳುತ್ತಿರಬಹುದು.

   ಆ. ಅರಸರು ದೇವಾಲಯದಲ್ಲಿ ವಾಸಿಸುವುದಿಲ್ಲ. ಹಾಗಾಗಿ ಶಾರೀರಕವಾದ ರೀತಿಯಲ್ಲಿ ತಾನು ದೇವಾಲಯದಲ್ಲಿ ವಾಸಿಸಲು ಬಯಸುವನು ಎಂದು ದಾವೀದನು ಹೇಳದೇ ಇರಬಹುದು.

   ಇ. ದಾವೀದನ ರೂಪಾಲಂಕಾರವು ಈ ರೀತಿ ಅರ್ಥೈಸಿಕೊಳ್ಳಬಹುದು: “ನಾನು ಯಾವಾಗಲೂ ದೇವರು ಮತ್ತು ಆತನ ಒಡಂಬಡಿಕೆಗೆ ನಂಬಿಗಸ್ತನಾಗಿರಲು ಬಯಸುವೆನು”, “ನಾನು ಯಾವಾಗಲೂ ದೇವರಿಗೆ ಹತ್ತಿರವಾಗಿರಲು ಬಯಸುವೆನು”. ದಾವೀದನ ಕಾಲಮಿತಿಯ ದೃಷ್ಟಿಕೋನ ನಮಗೆ ತಿಳಿಯಲಾಗಲ್ಲ. ಆತನು ಈ ಲೋಕದಲ್ಲಿನ ತನ್ನ ಜೀವನವನ್ನು ಸೂಚಿಸಿ ಹೇಳುತ್ತಿರುವನಾ? ಅಥವಾ ಅಲ್ಲದೆ “ನಿತ್ಯತ್ವ”ದ ಬಗ್ಗೆಯೂ ಸೂಚಿಸಿ ಹೇಳುತ್ತಿರುವನಾ?

7. ಇದೊಂದು ಭರವಸೆಯ ಹಾಡಾಗಿದೆ. ನಮ್ಮ ಆಧುನಿಕ ಭಾಷಾಂತರಗಳಲ್ಲಿನ ಕ್ರಿಯಾಪದ ಕಾಲಗಳು ಯೆಹೋವನಲ್ಲಿನ ದಾವೀದನ ಭರವಸೆಗೆ ಒತ್ತು ಕೊಡುತ್ತವೆ. ವಚನ 1–5 ರಲ್ಲಿನ ವರ್ತಮಾನ ಕಾಲವು ಹೇಗೆ ದೇವರು ಈಗ

ದಾವೀದನಿಗೆ ಒದಗಿಸುತ್ತಾನೆ ಮತ್ತು ಆತನನ್ನು ಸಂರಕ್ಷಿಸುತ್ತಾನೆ ಎಂಬುದನ್ನು ವಿವರಿಸುತ್ತದೆ. ಅಲ್ಲದೆ ಹಿಂದೆ ದೇವರ ಕುರಿತಾದ ದಾವೀದನ ಸಕರಾತ್ಮಕವಾದ ಅನುಭವವನ್ನು ಸಹ ಪ್ರತಿಬಿಂಬಿಸುತ್ತವೆ. ವಚನ 6 ರಲ್ಲಿನ ಭವಿಷ್ಯತ್‌ಕಾಲವು ದಾವೀದನು ದೇವರ ನಿರಂತರವಾದ ಒದಗಿಸುವಿಕೆ, ಸಂರಕ್ಷಣೆ (ಭದ್ರತೆ) ಮತ್ತು ಭವಿಷ್ಯಕ್ಕಾಗಿನ ಮಾರ್ಗದರ್ಶನದ ಬಗ್ಗೆ ಭರವಸವುಳ್ಳವನಾಗಿದ್ದಾನೆ ಎಂಬುದನ್ನು ತೋರಿಸುತ್ತದೆ.

ಕೀರ್ತನೆ 27 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 27 ಅನ್ನು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ದಾವೀದನು ದೇವರಲ್ಲಿಯೇ ತನ್ನ ಭರವಸೆಯನ್ನು ವ್ಯಕ್ತಪಡಿಸುತ್ತಾನೆ, ವಚನ 1–6

   ಆ. ದಾವೀದನು ದೇವರು ತನಗೆ ಕಿವಿಗೊಡಬೇಕೆಂದು ಮತ್ತು ಆತನ ಮಾರ್ಗಗಳನ್ನು ತನಗೆ ಬೋಧಿಸಬೇಕೆಂದು ಕೇಳಿಕೊಳ್ಳುತ್ತಾನೆ, ವಚನ 7–12

   ಇ. ದಾವೀದನು ದೇವರ ಒಳ್ಳೇತನದಲ್ಲಿ ತನ್ನ ಭರವಸೆಯನ್ನು ವ್ಯಕ್ತಪಡಿಸುತ್ತಾನೆ, ವಚನ 13–14

2. ವಚನ 1 ಅನ್ನು ಈ ರೀತಿ ಭಾವಾನುವಾದಗೊಳಿಸಬಹುದು:

   ದೇವರು, ನನ್ನ ಒಡಂಬಡಿಕೆಯ ಕರ್ತನೂ ನನ್ನನ್ನು ಆಶೀರ್ವದಿಸುವವನೂ ಮತ್ತು ನನ್ನ ಜೀವನವನ್ನು ಸಂತೋಷಗೊಳಿಸುವವನೂ ಆಗಿದ್ದಾನೆ. ಆತನು ನನಗೆ ಬಲವನ್ನು ಕೊಟ್ಟು ನನ್ನ ಎಲ್ಲಾ ಭಯವನ್ನು ತೆಗೆದುಬಿಡುತ್ತಾನೆ. ಹಾಗಾಗಿ ನನ್ನ ವೈರಿಗಳಿಗೆ ನಾನು ಭಯಪಡಬೇಕಿಲ್ಲ.

3. ದಾವೀದನು ವಚನ 4–5 ರಲ್ಲಿ ದೇವರನ್ನು ದೇವದರ್ಶನಗುಡಾರದ ಸೇವಾ ಕೈಂಕರ್ಯಗಳ ಮೂಲಕ ಯಾವಾಗಲೂ ದೇವರ ಹತ್ತಿರದಲ್ಲಿಯೇ ಇರಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅದರಲ್ಲಿಯೇ ಆತನು ಬಲ ಮತ್ತು ಭದ್ರತೆಯನ್ನು ಕಂಡುಕೊಳ್ಳುತ್ತಾನೆ.

4. ದಾವೀದನು **"ಉತ್ಸಾಹಧ್ವನಿಯೊಡನೆ ಯಜ್ಞಗಳನ್ನು ಸಮರ್ಪಿಸುತ್ತಾನೆ"** ಮತ್ತು **"ದೇವರನ್ನು ಹಾಡುತ್ತಾ ವಾದ್ಯ ಬಾರಿಸುತ್ತಾನೆ"** (ವಚನ 6), ಯಾಕೆಂದರೆ ದೇವರು ಆತನಿಗೆ ಆತನ ವೈರಿಗಳ ಮೇಲೆ ಜಯವನ್ನು ಕೊಡುತ್ತಾನೆ.

5. ದಾವೀದನು ವಚನ 9 ರಲ್ಲಿ ತನ್ನನ್ನು **"ನಿನ್ನ ಸೇವಕ"** ಎಂದು ಕರೆದುಕೊಳ್ಳುತ್ತಾನೆ. ಈ ರೀತಿಯಲ್ಲಿ ಪ್ರಾಚೀನ ಕಾಲದಲ್ಲಿ ಸಭ್ಯತೆಯನ್ನು ತೋರ್ಪಡಿಸಿಕೊಳ್ಳಲಾಗುತ್ತಿತ್ತು.

6. ದಾವೀದನು ವಚನ 9 ರಲ್ಲಿ ಈ ಹಿಂದೆ ಮಾಡಿದಂತೆ ಈಗಲೂ, ದೇವರು ತನ್ನ ಮೊರೆಗೆ ಕಿವಿಗೊಡಲು ಮತ್ತು ತನಗೆ ಸಹಾಯ ಮಾಡಲು ಮನಸ್ಸುಳ್ಳವನಾಗಿದ್ದಾನೆಂಬುದರ ಬಗ್ಗೆ ಪ್ರಾರ್ಥಿಸುತ್ತಾನೆ.

7. ದಾವೀದನು ವಚನ 11–12 ರಲ್ಲಿ ದೇವರು ತನಗೆ ಸಹಾಯ ಮತ್ತು ಮಾರ್ಗದರ್ಶನ ಮಾಡಬೇಕೆಂದು, ಆ ಮೂಲಕ ತಾನು ಎದುರಿಸುತ್ತಿರುವ ಸಮಸ್ಯೆಗಳು, ವಿರೋಧಗಳು ಮತ್ತು ಸುಳ್ಳುಸಾಕ್ಷಿಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದೆಂದು ಪ್ರಾರ್ಥಿಸುತ್ತಾನೆ.

8. ದಾವೀದನು ವಚನ 13 ರಲ್ಲಿ ತನ್ನ ವೈರಿಗಳಿಂದ ತಪ್ಪಿಸಿಕೊಂಡು, ದೇವರ ದಯೆಯನ್ನು ಅನುಭವಿಸುವೆನೆಂದು ಭರವಸವುಳ್ಳವನಾಗಿದ್ದಾನೆ.

ಕೀರ್ತನೆ 27 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಕೀರ್ತನೆ 27 ರಲ್ಲಿ ದಾವೀದನು ಕೆಳಕಂಡ ವ್ಯಕ್ತಿಗಳನ್ನು ಸಂಬೋಧಿಸುತ್ತಾನೆ:

   ಅ. ವಚನ 1–6: ಬಹುಶಃ ತನ್ನ ಬಗ್ಗೆಯೇ. ಇಲ್ಲಿ ಆತನು ದೇವರು ಯಾರಾಗಿದ್ದಾನೆ ಮತ್ತು ತನ್ನ ಪ್ರಸಕ್ತ ಸನ್ನಿವೇಶದಲ್ಲಿ ತನಗೆ ಸಹಾಯ ಮಾಡಲು ದೇವರು ಏನನ್ನು ಮಾಡಬಹುದು ಎಂದು ಜ್ಞಾಪಿಸಿಕೊಳ್ಳುತ್ತಾನೆ. ಆದರೆ ಈ ವಾಕ್ಯಭಾಗದಲ್ಲಿ ದಾವೀದನು ದೇವರ ಮಕ್ಕಳ ಒಂದು ಸಮೂಹಕ್ಕೆ ಹೇಳುತ್ತಿದ್ದಾನೆಂದು ಸಹ ಅರ್ಥೈಸಿಕೊಳ್ಳಲು ಸಾಧ್ಯತೆಯಿದೆ.

   ಆ. ವಚನ 7–12: ದೇವರು ತನ್ನ ಒಡಂಬಡಿಕೆಯ ಕರ್ತನು ತನ್ನ ಪ್ರಸಕ್ತ ಇಕ್ಕಟ್ಟಿನಲ್ಲಿ ದಾವೀದನಿಗೆ ಆತನೊಬ್ಬನೇ ಸಹಾಯ ಮಾಡಲು ಶಕ್ತನಾಗಿದ್ದಾನೆ.

   ಇ. ವಚನ 13–14: ಬಹುಶಃ ತನ್ನ ಬಗ್ಗೆ.

2. ಈ ಕೀರ್ತನೆಯನ್ನು 4 ಶೀರ್ಷಿಕೆಗಳಲ್ಲಿ ಸಾರಾಂಶಗೊಳಿಸಬಹುದಾಗಿದೆ:

   ಅ. ವಚನ 1–6: ದೇವರು ನನಗೆ ಬೆಳಕು ಮತ್ತು ರಕ್ಷಣೆಯಾಗಿದ್ದಾನೆ

   ಆ. ವಚನ 7–10: ದೇವರೇ ನನಗೆ ವಿಮುಖನಾಗಬೇಡ

   ಇ. ವಚನ 11–13: ದೇವರೇ ನಿನ್ನ ಮಾರ್ಗವನ್ನು ನನಗೆ ತೋರಿಸು

   ಈ. ವಚನ 14: ನನ್ನ ಮನವೇ ಯೆಹೋವನನ್ನೇ ನಿರೀಕ್ಷಿಸಿಕೊಂಡಿರು

3. ದಾವೀದನು ತನ್ನ ವೈರಿಗಳಿಗಾಗಿ ಈ ಕೀರ್ತನೆಯಲ್ಲಿ ಅನೇಕ ಪದಗಳನ್ನು ಉಪಯೋಗಿಸುತ್ತಾನೆ:

   ಅ. ದುರ್ವೈರಿಗಳು, ವಚನ 2

   ಆ. ದಂಡು, ವಚನ 3

   ಇ. ಯುದ್ಧಸನ್ನದ್ಧ, ವಚನ 3

   ಈ. ಹೊಂಚುಹಾಕಿರುವವರು, ವಚನ 11

   ಉ. ಸುಳ್ಳುಸಾಕ್ಷಿಗಳು, ವಚನ 12

4. ದಾವೀದನು ಈ ಕೀರ್ತನೆಯಲ್ಲಿ ದೇವರಲ್ಲಿ ದೊಡ್ಡ ಅಪೇಕ್ಷೆಯನ್ನಿಟ್ಟುಕೊಂಡಿದ್ದಾನೆ. ಆತನ ಬಯಕೆಗಳ ಪಟ್ಟಿ ಇಂತಿದೆ:

   ಅ. ತನ್ನ ವೈರಿಗಳಿಗೆ ವಿರುದ್ಧವಾಗಿ ತನಗೆ ಸಹಾಯ ಮಾಡಬೇಕೆಂದು ಆತನು ಅಪೇಕ್ಷಿಸುತ್ತಾನೆ.

   ಆ. ತನ್ನ ಜೀವನದುದ್ದಕ್ಕೂ ದೇವರ ನಿರಂತರವಾದ ಪ್ರಸನ್ನತೆಯನ್ನು ಅಪೇಕ್ಷಿಸುತ್ತಾನೆ.

   ಇ. ತನ್ನ ಜೀವನದಲ್ಲಿ ದೇವರ ಸಂರಕ್ಷಣೆಯನ್ನು ಆತನು ಅಪೇಕ್ಷಿಸುತ್ತಾನೆ.

   ಈ. ದೇವರು ದಯೆತೋರಿ ತನ್ನ ಪ್ರಾರ್ಥನೆಗೆ ಉತ್ತರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ.

   ಉ. ದೇವರು ತನ್ನನ್ನು ಒಂದು ಸಂತೋಷದ ಮತ್ತು ಆಶೀರ್ವದಿತ ಜೀವಿತಕ್ಕೆ ನಡೆಸಬೇಕೆಂದು ಅಪೇಕ್ಷಿಸುತ್ತಾನೆ.

   ಊ. ತನ್ನ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ದೇವರು ತನಗೆ ಸಹಾಯ ಮಾಡಬೇಕೆಂದು ಆತನು ಅಪೇಕ್ಷಿಸುತ್ತಾನೆ.

5. ಈ ಕೀರ್ತನೆಯ ಪದ್ಯರೂಪಿ ರಚನೆಗೆ ಕೆಲವು ಉದಾಹರಣೆ:

   ಅ. ವಚನ 1 ರಲ್ಲಿನ ಸಮಾನಾರ್ಥಕ ಸಮಾನಾಂತರತೆ: **"ನನಗೆ ಬೆಳಕೂ ರಕ್ಷಣೆಯೂ ಆಗಿದ್ದಾನೆ"** ಮತ್ತು **"ನನ್ನ ಪ್ರಾಣದ ಆಧಾರವು"** ಎಂಬ ಹೇಳಿಕೆಗಳೆರಡೂ ಹೆಚ್ಚೂ ಕಡಿಮೆ ಒಂದೇ ಅಂಶದ ಬಗ್ಗೆ ಹೇಳುತ್ತವೆ. ಎರಡೂ ಸಹ ಸಮಾನಾರ್ಥಕವಾಗಿರುವ ಪ್ರಶ್ನೆಯೊಂದಿಗೆ ಮುಕ್ತಾಯಗೊಳ್ಳುತ್ತವೆ (**"ನಾನು ಯಾರಿಗೆ ಭಯಪಟ್ಟೇನು?"** ಮತ್ತು **"ನಾನು ಯಾರಿಗೆ ಹೆದರೇನು?"**). ಸಮಾನಾರ್ಥಕ ಸಮಾನಾಂತರತೆಗೆ ಇನ್ನೊಂದು ಉದಾಹರಣೆಯನ್ನು ನಾವು ವಚನ 3 ಮತ್ತು 7 ರಲ್ಲಿ ಕಾಣಬಹುದು.

   ಆ. ವಚನ 2 ರಲ್ಲಿನ ಸಂಯೋಜಿತ ಸಮಾನಾಂತರತೆ: ಮೊದಲರ್ಧ ವಚನವು ದುಷ್ಟರು ಮತ್ತು ದಾವೀದನಿಗೆ ವಿರುದ್ಧವಾಗಿ ಅವರ ಯೋಚನೆಯನ್ನು ತಿಳಿಸುತ್ತದೆ. ವಚನದ ಎರಡನೇ ಭಾಗವು ಈ ದುರ್ವೈರಿಗಳನ್ನು ವಿವರಿಸುತ್ತದೆ ಮತ್ತು ಅವರ ಆಕ್ರಮಣದ ಪರಿಣಾಮವನ್ನು ತಿಳಿಸುತ್ತದೆ. ಸಂಯೋಜಿತ ಸಮಾನಾಂತರತೆಗೆ ಉಳಿದ ಉದಾ: ವಚನ 4, 5, 6, 8, 11, 12.

   ಇ. ವಚನ 10 ರಲ್ಲಿನ ವಿರೋಧಾತ್ಮಕ ಸಮಾನಾಂತರತೆ: ಒಬ್ಬ ವ್ಯಕ್ತಿಯನ್ನು ದೇವರು ಸೇರಿಸಿಕೊಳ್ಳುವ ನಿಶ್ಚಯವು, ತಂದೆ ತಾಯಿಗಳೂ ಆತನನ್ನು ತೊರೆದುಬಿಡುವ ಸಾಧ್ಯತೆಯೊಂದಿಗೆ ತದ್ವಿರುದ್ಧವಾಗಿದೆ.

6. ಈ ಕೀರ್ತನೆಯ ಚಿತ್ರಣಗಳ ಕೆಲವು ಅವಲೋಕನ ಇಂತಿದೆ:

   ಅ. ಅನೇಕ ರೂಪಾಲಂಕಾರಗಳನ್ನು ನಾವು ಕಾಣಬಹುದು:

   - ದೇವರು ದಾವೀದನಿಗೆ **"ಬೆಳಕಾಗಿದ್ದಾನೆ"**, ವಚನ 1
   - ದೇವರು ದಾವೀದನಿಗೆ **"ಪ್ರಾಣದ ಆಧಾರವಾಗಿದ್ದಾನೆ"**, ವಚನ 1

- ದುಷ್ಟರು ದಾವೀದನನ್ನು "ನುಂಗಿಬಿಡಬೇಕೆಂದು" ಬಯಸುತ್ತಾರೆ, ವಚನ 2
- ದಾವೀದನು "ದೇವರ ಮನೆಯಲ್ಲಿ ವಾಸಮಾಡಬೇಕೆಂದು" ಬಯಸುತ್ತಾನೆ, ವಚನ 4
- ದಾವೀದನು ಗುಡಾರದಲ್ಲಿ ಆಶ್ರಯವನ್ನು ಕಂಡುಕೊಳ್ಳುತ್ತಾನೆ, ವಚನ 5

ಆ. ಮಾನವೀಕರಣಕ್ಕೆ ಉದಾಹರಣೆಯನ್ನು ನಾವು ಕಾಣಬಹುದು:

- ದಾವೀದನು ವಚನ 9 ರಲ್ಲಿ ದೇವರಿಗೆ ಒಂದು ಮುಖವನ್ನು ಕೊಟ್ಟು ಆತನು ಕೋಪದಿಂದ ತಳ್ಳಿಬಿಡುವುದಿಲ್ಲ ಎನ್ನುತ್ತಾನೆ.
- ದಾವೀದನು ವಚನ 11 ರಲ್ಲಿ ದೇವರನ್ನು "ಬೋಧಕ" ಮಾರ್ಗದರ್ಶನವನ್ನು ಬೋಧಿಸುವವನು ಎನ್ನುತ್ತಾನೆ.

ಇ. ನಮಗೆ ಶ್ರೀಮಂತ ಕಾವ್ಯಾತ್ಮಕ ಭಾಷೆ ಸಿಗುತ್ತದೆ, ಉದಾಹರಣೆಗೆ:

- "ಶತ್ರು" ಎಂಬ ಪದದ ಎಲ್ಲಾ ವರ್ಣರಂಜಿತ ಸಮಾನಾರ್ಥಕ ಪದಗಳು – ಮೇಲಿನ ಟಿಪ್ಪಣಿ 3 ಅನ್ನು ನೋಡಿ.
- ದೇವಾಲಯದ ಯಜ್ಞದ ಆರಾಧನೆಯ ಮೂಲಕ ದೇವರ ಸಾನಿಧ್ಯದ ದಾವೀದನ ಅನುಭವ ಮತ್ತು ಬಯಕೆ (ವಚನ 4–6).

ಈ. ಇಸ್ರಾಯೇಲ್ಯರ ಕರ್ತನ (ಮತ್ತು ದಾವೀದನ) ಒಡಂಬಡಿಕೆಯ ಮೇಲಿನ ಮಹತ್ವವನ್ನು ದಾವೀದನು ತನ್ನ ಕೀರ್ತನೆಯನ್ನು "ಕರ್ತ" ಎಂದು ಪ್ರಾರಂಭಿಸಿ ಕೊನೆಗೊಳಿಸುವ ರೀತಿಯಲ್ಲಿ ಕಾಣಬಹುದು. ಕಾವ್ಯಾತ್ಮಕ ವೈಶಿಷ್ಟ್ಯವನ್ನು "ಆವರಣ" ಎಂದು ಕರೆಯಬಹುದು.

ಕೀರ್ತನೆ 32 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 32 ಅನ್ನು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ಕ್ಷಮಾಪಣೆಯ ಆಶೀರ್ವಾದ, ವಚನ 1–2

   ಆ. ಅಪರಾಧಿ ಮನೋಭಾವ, ಪಾಪದರಿಕೆ ಮತ್ತು ಕ್ಷಮಾಪಣೆಯ ವಿಷಯದಲ್ಲಿ ಸ್ವತಃ ದಾವೀದನ ಅನುಭವ, ವಚನ 3–5

   ಇ. ದೇವರ ಸಂರಕ್ಷಣೆಯ ಬಗ್ಗೆ ದಾವೀದನು ಸಾಕ್ಷೀಕರಿಸುವುದು, ವಚನ 6–7

   ಈ. ಜ್ಞಾನಕ್ಕಾಗಿ ದೇವರ ವಾಗ್ದಾನ, ವಚನ 8–10

   ಉ. ದೇವರ ಕ್ಷಮಾಪಣೆಯಲ್ಲಿ ಆನಂದಿಸುವುದು, ವಚನ 11

2. ಈ ಕೀರ್ತನೆಯಲ್ಲಿ ದೇವರು ಮತ್ತು ದೇವಜನರು ಸಂಬೋಧಿಸಲ್ಪಟ್ಟಿದ್ದಾರೆ:

   ಅ. ವಚನ 4–7 ರಲ್ಲಿ ಸ್ಪಷ್ಟವಾಗಿ ದೇವರನ್ನು ಸಂಬೋಧಿಸಲಾಗಿದೆ. ಇದನ್ನು ಸರ್ವನಾಮಗಳಲ್ಲಿ (“ನಿನ್ನ” ಮತ್ತು “ನೀನು”) ಕಾಣಬಹುದು. ಆದರೆ ದಾವೀದನು ದೇವರಿಗೆ ಮಾಡುವ ಪ್ರಾರ್ಥನೆ 3ನೇ ವಚನದಿಂದ ಪ್ರಾರಂಭವಾಗುತ್ತದೆ.

   ಆ. ದೇವಜನರು ವಚನ 11 ರಲ್ಲಿ ಸಂಬೋಧಿಸಲ್ಪಟ್ಟಿದ್ದಾರೆ. ಇಲ್ಲಿ ನಾವು “ನೀತಿವಂತರೇ” ಎಂಬ ಹೇಳಿಕೆಯನ್ನು ಕಾಣಬಹುದು. ಹಾಗಾಗಿ ಇಲ್ಲಿ ದಾವೀದನು ದೇವಜನರಿಗೆ ಹೇಳಿದಂತೆ ತೋರುತ್ತದೆ (10–11).

   ಇ. ಕೀರ್ತನೆಯ ಉಳಿದ ವಚನಗಳಲ್ಲಿ ಯಾರನ್ನು ಸಂಬೋಧಿಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ. ನಾನೆಣಿಸುತ್ತೇನೆ:

   - ದಾವೀದನು ದೇವಜನರ ಸಮೂಹವನ್ನು ಸಂಬೋಧಿಸುವುದರೊಂದಿಗೆ ಈ ಕೀರ್ತನೆಯನ್ನು ಪ್ರಾರಂಭಿಸುತ್ತಾನೆ (ವಚನ 1–2).

   - ದೇವರು ವಚನ 8–10 ರಲ್ಲಿ ದಾವೀದನನ್ನು ಸಂಬೋಧಿಸುತ್ತಾನೆ. ಇದರರ್ಥ “ನಾನು” “ನನ್ನ” ದೇವರನ್ನು ಸೂಚಿಸಿದರೆ “ನಿನ್ನನ್ನು” ದಾವೀದನನ್ನು ಸೂಚಿಸುತ್ತಾನೆ.

3. ಈ ಕೀರ್ತನೆಯ ಪ್ರಕಾರ ಯಾರ ಪಾಪವು ಕ್ಷಮಿಸಲ್ಪಟ್ಟಿದೆಯೋ ಮತ್ತು ಯಾರ ದ್ರೋಹವು ಪರಿಹಾರವಾಗಿದೆಯೋ ಅವರು ಧನ್ಯರಾಗಿದ್ದಾರೆ. ಇದರರ್ಥ ಕೇವಲ ದೇವರು ಮಾತ್ರ ಒಬ್ಬ ವ್ಯಕ್ತಿಯನ್ನು ಆಶೀರ್ವದಿಸಲು ಸಾಧ್ಯ, ಯಾಕೆಂದರೆ ಕೇವಲ ದೇವರೊಬ್ಬನೇ ಪಾಪವನ್ನು ಕ್ಷಮಿಸಲು ಸಾಧ್ಯ. ದಾವೀದನು ಈ ದೈವಿಕ ಕ್ಷಮಾಪಣೆಯನ್ನು ವಿವರಿಸಲು ಎರಡು ಸಮಾನಾರ್ಥಕ ಹೇಳಿಕೆಗಳನ್ನು ಉಪಯೋಗಿಸುತ್ತಾನೆ (ದ್ರೋಹ ಪರಿಹಾರವಾಗಿದೆಯೋ ಮತ್ತು ಪಾಪಗಳು ಕ್ಷಮಿಸಲ್ಪಟ್ಟಿವೆಯೋ).

4. ದಾವೀದನು ತನ್ನ ಪಾಪವನ್ನು ದೇವರ ಮುಂದೆ ಅರಿಕೆ ಮಾಡುವುದಕ್ಕಿಂತ ಮೊದಲು ತನ್ನ ಜೀವನವು ಸಂಪೂರ್ಣವಾಗಿ ಮತ್ತು ನಿರಂತರವಾಗಿ ಬಾಧೆಯಿಂದ ಕೂಡಿದೆಯೆಂದು ವರ್ಣಿಸುತ್ತಾನೆ. ಆತನು ಹಗಲಿರುಳೂ, ದೈಹಿಕವಾಗಿ ಮತ್ತು ಮಾನಸಿಕವಾಗಿ ಬಾಧೆಪಟ್ಟಿದ್ದಾನೆ.

5. ದಾವೀದನು ವಚನ 5 ರಲ್ಲಿ ತನ್ನ ಪಾಪವನ್ನು ಅರಿತುಕೊಂಡು ದೇವರ ಮುಂದೆ ಅದನ್ನು ಅರಿಕೆ ಮಾಡುತ್ತಾನೆ. ಆಗ ಮಾತ್ರವೇ ಆತನು ದೇವರ ಕ್ಷಮಾಪಣೆಯನ್ನು ಹೊಂದಿಕೊಳ್ಳುತ್ತಾನೆ.

6. ದಾವೀದನಿಗೆ ದೇವರು ತನ್ನನ್ನು ಕ್ಷಮಿಸಿದ ಮೇಲೆ ನಿರಾಳವೆನಿಸಿರಬಹುದು. ಅಲ್ಲದೆ ಆತನು ದೇವಜನರು ಉತ್ಸಾಹಧ್ವನಿ ಮಾಡಬೇಕೆಂದು ಹೇಳುತ್ತಾನೆ (ವಚನ 11).

7. ದಾವೀದನು ಯೆಹೋವನಲ್ಲಿ ಭರವಸವಿಡುವವನ ಜೀವನ ಮತ್ತು ದುಷ್ಟನ ಜೀವಿತಕ್ಕೂ ತದ್ವಿರುದ್ಧತೆಯನ್ನು ತೋರಿಸುವುದರೊಂದಿಗೆ ಕೀರ್ತನೆಯನ್ನು ಮುಕ್ತಾಯಗೊಳಿಸುತ್ತಾನೆ. ದುಷ್ಟನ ಜೀವನವು ಅನೇಕ ಕಷ್ಟನಷ್ಟಗಳಿಂದ ತುಂಬಿರುವುದು.

ಕೀರ್ತನೆ 32 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಕೀರ್ತನೆ 1 ರಲ್ಲಿನ ಆಶೀರ್ವದಿಸಲ್ಪಟ್ಟ ವ್ಯಕ್ತಿಯೊಂದಿಗೆ (ಧನ್ಯ) ಈ ಕೀರ್ತನೆಯಲ್ಲಿ ಆಶೀರ್ವದಿಸಲ್ಪಟ್ಟ ವ್ಯಕ್ತಿಯ (ಧನ್ಯ) ಹೋಲಿಕೆ:

   ಅ. ಸಮಾನತೆಗಳು:

   - ಎರಡೂ ಕೀರ್ತನೆಗಳಲ್ಲಿ ನೀತಿವಂತನು ಧನ್ಯನಾಗಿದ್ದಾನೆ
   - ಎರಡೂ ಕೀರ್ತನೆಗಳು ದೇವರ ವಾಕ್ಯವನ್ನು ನೀತಿವಂತಿಕೆ ಮತ್ತು ಆಶೀರ್ವಾದಕ್ಕೆ ಒಂದು ಮಾರ್ಗವನ್ನಾಗಿ ಕಾಣುತ್ತೇವೆ (ಕೀರ್ತನೆ 1:1–2, ಕೀರ್ತನೆ 32:8).

   ಆ. ವ್ಯತ್ಯಾಸಗಳು:

   - ಕೀರ್ತನೆ 32 **"ಮನುಷ್ಯನ ಅನುಭವವನ್ನು"** ಪ್ರತಿಬಿಂಬಿಸಿದರೆ, ಕೀರ್ತನೆ 1 **"ನಂಬಿಕೆಯ ಹೇಳಿಕೆ"** ಯಾಗಿದೆ.
   - ಕೀರ್ತನೆ 32 ರಲ್ಲಿನ ದೃಷ್ಟಿಕೋನವು ಇಬ್ರಿಯ ಜ್ಞಾನದ ಮೇಲಿಲ್ಲ (**"**ನೀತಿವಂತನ ಮಾರ್ಗವು ಆಶೀರ್ವಾದಕ್ಕೆ ನಡೆಸುತ್ತದೆ ಕೀರ್ತನೆ 1 ಹೊಂದಿರುವ ದೃಷ್ಟಿಕೋನ). ಆದರೆ ಇದು ಪಾಪ, ಪಾಪದರಿಕೆ ಮತ್ತು ಕ್ಷಮಾಪಣೆಯ ಮೇಲೆ ಗಮನ ಹರಿಸುತ್ತದೆ. ಹಾಗಾಗಿ ಕೀರ್ತನೆ 32 ರಲ್ಲಿ ನೀತಿ ಮತ್ತು ಆಶೀರ್ವಾದಕ್ಕೆ ಇರುವ ಮಾರ್ಗವು ದೇವರ ಕರುಣೆ, ದಯೆ, ಕ್ಷಮಾಪಣೆ ಮತ್ತು ನಂಬಿಗಸ್ತಿಕೆಯಲ್ಲಿ ಭರವಸವಿಡುವುದಾಗಿದೆ.

2. ವಚನ 1–5 ರ **"ಸಿದ್ಧಾಂತ"** ವನ್ನು ಈ ರೀತಿಯಾಗಿ ಸಾರಾಂಶಗೊಳಿಸಬಹುದು: ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರು ಮಾತ್ರ ನಿಜವಾಗಲೂ ಧನ್ಯರಾಗಿದ್ದಾರೆ.

3. ಈ ಸಿದ್ಧಾಂತದ **"ಅಳವಡಿಕೆಯನ್ನು"** (ವಚನ 6–11) ಈ ರೀತಿಯಾಗಿ ಸಾರಾಂಶಗೊಳಿಸಬಹುದು: ಪಾಪದರಿಕೆ ಮಾಡುವುದು, ದೇವರಲ್ಲಿ ಭರವಸವಿಡುವುದೇ ದೇವಜನರು ಕ್ಷಮಾಪಣೆ, ಆತನ ಆಶೀರ್ವಾದ ಮತ್ತು ನಿಜವಾದ ಸಂತೋಷವನ್ನು ಅನುಭವಿಸಲು ಇರುವ ಮಾರ್ಗವಾಗಿದೆ. ನಾವೂ ಸಹ ಇದನ್ನೇ ಮಾಡಬೇಕಾಗಿದೆ.

4. ಈ ಕೀರ್ತನೆಯಲ್ಲಿನ ಕೆಲವು ಸಾಹಿತ್ಯದ ಲಕ್ಷಣಗಳು:

   ಅ. ಈ ಕೀರ್ತನೆಯ ಒಂದು ಸರಳ ರಚನೆಯನ್ನು ಈ ಹಿಂದಿನ ಎರಡು ಅಂಶಗಳಲ್ಲಿ ಕಾಣಬಹುದು:

   - ಸಿದ್ಧಾಂತ: ಕೇವಲ ದೇವರಲ್ಲಿನ ಕ್ಷಮಾಪಣೆ ಮಾತ್ರ ನಿಜವಾದ ಆಶೀರ್ವಾದಕ್ಕೆ ನಡೆಸುತ್ತದೆ, ವಚನ 1–5
   - ಅಳವಡಿಕೆ: ನಮ್ಮ ಪಾಪಗಳ ಅರಿಕೆ ಮಾಡುವುದು, ವಚನ 6–4

   ಆ. ಈ ಕೀರ್ತನೆ ಬಲವಾದ ಭಾವನೆಗಳಿಂದ ಕೂಡಿದೆ. ಇದರ ಭಾವ/ಸ್ವರವು (ನಾದ) ಪ್ರಾರಂಭದ ಹಂತದಲ್ಲಿನ ಹರ್ಷ ಮತ್ತು ಸಂತೋಷದಿಂದ, ಅರಿಕೆ ಮಾಡದಿರುವ ಪಾಪದ ವರ್ಣನೆಯಲ್ಲಿನ ವೇದನೆಗೆ ಸಾಗುತ್ತಾ ದೇವರ ದಯೆ ಮತ್ತು ಕ್ಷಮಾಪಣೆಯನ್ನು ಅನುಭವಿಸಿದ ನೀತಿವಂತರ ಹರ್ಷೋಲ್ಲಾಸದಲ್ಲಿ ಕೊನೆಗೊಳ್ಳುತ್ತದೆ.

   - ಅವನು ಸಾಮಾನ್ಯ ಸ್ವಭಾವದ ಹೇಳಿಕೆಯೊಂದಿಗೆ ಪ್ರಾರಂಭಿಸುತ್ತಾನೆ (ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟ ಸಂತೋಷ, ವಚನ 1–2), ಮತ್ತು ಅವನು ಸಾಮಾನ್ಯ ಸ್ವಭಾವದ ಮತ್ತೊಂದು ಹೇಳಿಕೆಯೊಂದಿಗೆ ಕೊನೆಗೊಳ್ಳುತ್ತಾನೆ, ನಂತರ ಒಂದು ಉಪದೇಶ (ದುಷ್ಟರು ಮತ್ತು ದೇವರನ್ನು ನಂಬುವವರ ಭವಿಷ್ಯವನ್ನು ವ್ಯತಿರಿಕ್ತಗೊಳಿಸುವುದು – ಆದ್ದರಿಂದ ನೀತಿವಂತರು, ದೇವರನ್ನು ನಂಬುವವರು ಮತ್ತು ಅವರ ಪಾಪಗಳನ್ನು ಕ್ಷಮಿಸಿದವರು ಸಂತೋಷಪಡಬೇಕು, ವಚನ 10–11).
   - ನಡುವೆ (ವಚನ 3–9) ಅವನು ಪಾಪ, ತಪ್ಪೊಪ್ಪಿಗೆ ಮತ್ತು ಕ್ಷಮೆಯ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಾನೆ. ಆದ್ದರಿಂದ ದಾವೀದನು ತನ್ನ ಬೋಧನೆಯನ್ನು (ಅಥವಾ **"**ಸಿದ್ಧಾಂತ**"**) ತನ್ನ ಅನುಭವದೊಂದಿಗೆ (ಅಥವಾ **"**ಜೀವನ**"**) ಸಂಪರ್ಕಿಸುತ್ತಾನೆ.

   ಇ. ಈ ಕೀರ್ತನೆಯ ಭಾವನೆಯು ಬಲವಾದ ಭಾವನೆಗಳಿಂದ ಕೂಡಿದೆ. ಆರಂಭಿಕ ಹೇಳಿಕೆಯಲ್ಲಿನ ಭಾವ/ಸ್ವರವು ಸಂತೋಷ ಮತ್ತು ಸಂತೋಷದಿಂದ ತಪ್ಪೊಪ್ಪಿಕೊಳ್ಳದ ಪಾಪದ ದುಃಖದ ವಿವರಣೆಯಲ್ಲಿ ಸಂಕಟಕ್ಕೆ ತಿರುಗುತ್ತದೆ ಮತ್ತು ದೇವರ ಒಳ್ಳೆಯತನ ಮತ್ತು ಕ್ಷಮೆಯನ್ನು ಅನುಭವಿಸಿದ ನೀತಿವಂತರ ಸಂತೋಷದ ಸಂತೋಷದಲ್ಲಿ

ಕೊನೆಗೊಳ್ಳುತ್ತದೆ. ಭಾವ/ಸ್ವರದಲ್ಲಿ ಈ ಬದಲಾವಣೆಗಳನ್ನು ಸಾಧಿಸಲು ದಾವೀದನು ವಿವಿಧ ಸಾಧನಗಳನ್ನು ಬಳಸುತ್ತಾನೆ:

- ಶಬ್ದಕೋಶವು ಭಾವನಾತ್ಮಕ ಪದಗಳು ಮತ್ತು ಅಭಿವ್ಯಕ್ತಿಗಳನ್ನು ಒಳಗೊಂಡಿದೆ (ಅವು ಬಲವಾದ ಭಾವನೆಗಳೊಂದಿಗೆ ಸಂಪರ್ಕ ಹೊಂದಿವೆ) ಮತ್ತು ಸಹವಾಸಗಳಿಂದ ಸಮೃದ್ಧವಾಗಿರುವ ಪದಗಳು/ಅಭಿವ್ಯಕ್ತಿಗಳು (ಇದರರ್ಥ ಅವು ಹಿಂದಿನ ರಾಷ್ಟ್ರೀಯ/ಸಾಮೂಹಿಕ ಅಥವಾ ವೈಯಕ್ತಿಕ ಅನುಭವಗಳನ್ನು ಯೋಚಿಸುವಂತೆ ಮಾಡುತ್ತವೆ – ಐತಿಹಾಸಿಕ, ಒಡಂಬಡಿಕೆಯ, ಭಕ್ತಿ): ಧನ್ಯ (ವಚನ 1–2), ಪಾಪಗಳು (ವಚನ 1), ನರಳುವಿಕೆ (ವಚನ 3), ಬೇಸಿಗೆಯ ಶಾಖ (ವಚನ 4), ನನ್ನ ಪಾಪದ ಅಪರಾಧ (ವಚನ 5), ವಿಮೋಚನೆ (ವಚನ 7), ದುಷ್ಟರ ಸಂಕಟಗಳು (ವಚನ 10), ದೇವರ ವಿಫಲ ಪ್ರೀತಿ (ವಚನ 10), ದೇವರಲ್ಲಿ ನಂಬಿಕೆ ಇರಿಸಿ (ವಚನ 10), ಆನಂದಿಸಿ (ವಚನ 11)
- ಸಮಾನಾರ್ಥಕ ಪದಗಳು ಪ್ರಮುಖ ಪರಿಕಲ್ಪನೆಗಳನ್ನು ಬಲಪಡಿಸುತ್ತವೆ ಮತ್ತು ಭಾವನೆಯ ಶ್ರೀಮಂತಿಕೆಯನ್ನು ಹೆಚ್ಚಿಸುತ್ತವೆ: ಅಪರಾಧಗಳು/ ಪಾಪಗಳು/ಅಧರ್ಮ (ವಚನ 1, 2, 5), ಕ್ಷಮಿಸಲಾಗಿದೆ/ಮುಚ್ಚಲಾಗಿದೆ (ವಚನ 1–2), ನನ್ನ ಮರೆಮಾಚುವ ಸ್ಥಳ/ನನ್ನನ್ನು ರಕ್ಷಿಸಿ/ನನ್ನನ್ನು ಸುತ್ತುವರೆದಿರಿ (ವಚನ 7), ಸೂಚನೆ/ಬೋಧಿಸಿ/ಸಲಹೆ ನೀಡಿ (ವಚನ 8), ಆನಂದಿಸಿ/ಸಂತೋಷಿಸಿ/ಹಾಡಿ (ವಚನ 11).
- ವ್ಯತ್ಯಾಸಗಳು ತೂಗಾಡುತ್ತಿರುವ ಭಾವನೆಗಳನ್ನು ಒತ್ತಿಹೇಳುತ್ತವೆ: ತಪ್ಪೊಪ್ಪಿಗೆಯ ಮಾತುಗಳು (ವಚನ 5) ತಪ್ಪೊಪ್ಪಿಕೊಳ್ಳದ ಪಾಪದ ಮೌನವನ್ನು ಅನುಸರಿಸುತ್ತವೆ (ವಚನ 3). ಅಪರಾಧವನ್ನು ಕ್ಷಮೆಯಿಂದ ಬದಲಾಯಿಸಲಾಗುತ್ತದೆ (ವಚನ 5). ಮಹಾ ನೀರಿನ ಅಪಾಯಗಳು (ವಚನ 6) ದೇವರ ರಕ್ಷಣೆಯ ಸುರಕ್ಷತೆಗೆ ಶರಣಾಗುವುದು (ವಚನ 7). ದೈವಿಕ ಸೂಚನೆ ಮತ್ತು ಮಾರ್ಗದರ್ಶನ (ವಚನ 8) ಕುದುರೆಗಳು ಮತ್ತು ಹೇಸರಗತ್ತೆಗಳನ್ನು ನೆನಪಿಸುವ ಜನರ ಮೊಂಡತನ ಮತ್ತು ತಿಳುವಳಿಕೆಯ ಕೊರತೆಯನ್ನು ಬದಲಾಯಿಸುತ್ತದೆ (ವಚನ 9). ಕರ್ತನಲ್ಲಿ ನೀತಿವಂತರ ಸಂತೋಷ (ವಚನ 11) ದುಷ್ಟರ ಸಂಕಟದೊಂದಿಗೆ ವ್ಯತಿರಿಕ್ತವಾಗಿದೆ (ವಚನ 10).
- ಚಿತ್ರಣವು ಸತ್ಯಗಳು ಮತ್ತು ಹೇಳಿಕೆಗಳಿಗೆ ಜೀವ ಮತ್ತು ಭಾವನೆಯನ್ನು ಸೇರಿಸುತ್ತದೆ: ನನ್ನ ಮೂಳೆಗಳು ಕ್ಷಯಿಸಿ ಹೋದವು (ವಚನ 3), ನಿನ್ನ ಕೈ ನನ್ನ ಮೇಲೆ ಭಾರವಾಗಿತ್ತು (ವಚನ 4), ನನ್ನ ಶಕ್ತಿ ಬೇಸಿಗೆಯ ಶಾಖದಲ್ಲಿ ಇದ್ದಂತೆ ಕಡಿಮೆಯಾಯಿತು (ವಚನ 4), ಮಹಾ ನೀರು ಏರಿತು (ವಚನ 6), ಕುದುರೆ ಅಥವಾ ಹೇಸರಗತ್ತೆಯಂತೆ (ವಚನ 9).
- ಉದ್ಗಾರಗಳು ಅಥವಾ ಬಲವಾದ ಹೇಳಿಕೆಗಳನ್ನು ಹೊಂದಿರುವ ವಾಕ್ಯ ಪ್ರಕಾರ (ವಚನ 1–2, ವಚನ 11) ಈ ಕೀರ್ತನೆಯಲ್ಲಿ ದಾವೀದನ ಸಂದೇಶದ ಮಹತ್ವವನ್ನು ಒತ್ತಿಹೇಳುತ್ತದೆ.

ಈ. ಚಿತ್ರಣ (ಭಾಷಣದ ಕೆಲವು ಉದಾಹರಣೆಗಳು):

- ರೂಪಾಲಂಕಾರಗಳು: **"**ಯಾವನ ದ್ರೋಹ ಪರಿಹಾರವಾಗಿದೆಯೋ**"** (ವಚನ 1) ಎಂದರೆ ಅವರು ಕ್ಷಮಿಸಲ್ಪಟ್ಟಿದ್ದಾರೆ (ಇದನ್ನು ವಚನ 2 ರಲ್ಲಿ ಸ್ಪಷ್ಟಪಡಿಸಲಾಗಿದೆ). **"**ನನ್ನ ಮೂಳೆಗಳು ಸವೆದುಹೋಗಿವೆ**"** (ವಚನ 3) ಎಂದರೆ ದಾವೀದನು ಭಾವನಾತ್ಮಕವಾಗಿ ನರಳಿದನು (ವಚನ 3 ರಲ್ಲಿ ನನ್ನ ಟಿಪ್ಪಣಿ ನೋಡಿ). **"**ನನ್ನ ಮರೆಯು**"** (ವಚನ 7) ಎಂದರೆ ದಾವೀದನು ದೇವರಲ್ಲಿ ಭದ್ರತೆ ಮತ್ತು ರಕ್ಷಣೆಯನ್ನು ಕಂಡುಕೊಂಡನು. **"**ನೀನು ನನ್ನನ್ನು ಬಿಡುಗಡೆಯ ಹಾಡುಗಳಿಂದ ಸುತ್ತುವರೆದಿರುವೆ**"** (ವಚನ 7) ಎಂದರೆ ದೇವರ ಕ್ಷಮೆ ಮತ್ತು ರಕ್ಷಣೆಯು ದಾವೀದನನ್ನು ದೇವರ ಮೋಕ್ಷದ ಬಗ್ಗೆ ಹಾಡುವಂತೆ ಮಾಡಿತು. **"**ಕರ್ತನಲ್ಲಿ ಭರವಸೆ ಇಡುವ ಮನುಷ್ಯನನ್ನು ಆತನ ನಿರಂತರ ಪ್ರೀತಿ ಸುತ್ತುವರೆದಿದೆ**"** (ವಚನ 11) ಎಂದರೆ ದೇವರ ಪ್ರೀತಿ ಯಾವಾಗಲೂ ಆ ವ್ಯಕ್ತಿಯೊಂದಿಗೆ ಇರುತ್ತದೆ. **"**ಯಥಾರ್ಥ ಹೃದಯ**"** (ವಚನ 11) ಹೊಂದಿರುವ ವ್ಯಕ್ತಿ ಎಂದರೆ ಅವನು ನೀತಿವಂತ (ಇದು ಸಮಾನಾಂತರತೆಯಿಂದ ಸ್ಪಷ್ಟವಾಗಿದೆ).
- ಮಾನವೀಕರಣ: 8ನೇ ವಚನವು ದೇವರನ್ನು ಒಬ್ಬ ಶಿಕ್ಷಕನಾಗಿ (ಅವನು ತನ್ನ ಜನರಿಗೆ ಸೂಚನೆ ನೀಡುತ್ತಾನೆ ಮತ್ತು ಕಲಿಸುತ್ತಾನೆ) ಮತ್ತು ಸಲಹೆಗಾರನಾಗಿ (ಅವನು ತನ್ನ ಜನರಿಗೆ ಸಲಹೆ ನೀಡುತ್ತಾನೆ) ಚಿತ್ರಿಸುತ್ತದೆ. **"**ಮಾನವೀಕರಣ**"** ಎಂಬ ಪದಕ್ಕಾಗಿ **ಇಬ್ರಿಯ ಕಾವ್ಯ – ಚಿತ್ರಣ** ಅಧ್ಯಾಯವನ್ನು ನೋಡಿ.
- ಉಪಮೆಗಳು: 9ನೇ ವಚನದಲ್ಲಿ ದೇವರ ಜನರು ಮೂರ್ಖ ಮತ್ತು ಮೊಂಡುತನದ ಕುದುರೆ ಮತ್ತು ಹೇಸರಗತ್ತೆಯಂತೆ ಇರಬಾರದು ಎಂದು ಹೇಳಲಾಗಿದೆ.

ಉ. ಪದ್ಯರೂಪಿ ರಚನೆ:

- ವಚನ 1 ರಲ್ಲಿ (ದ್ರೋಹ ಪರಿಹಾರವಾಗಿದೆ, ಪಾಪವು ಕ್ಷಮಿಸಲ್ಪಟ್ಟಿದೆ), ವಚನ 5 ರಲ್ಲಿ (ದ್ರೋಹವನ್ನು ಒಪ್ಪಿಕೊಳ್ಳುವೆನು ಮತ್ತು ಪಾಪವನ್ನು ಮರೆಮಾಡದೆ) ಮತ್ತು ವಚನ 8 ಮತ್ತು 11 ರಲ್ಲಿ ಸಮಾನಾರ್ಥಕ ಸಮಾನಾಂತರತೆಗೆ ಉದಾಹರಣೆಗಳನ್ನು ಕಾಣಬಹುದು.

- ವಚನ 10 ರಲ್ಲಿ ವಿರೋಧಾತ್ಮಕ ಸಮಾನಾಂತರತೆಗೆ ಒಂದು ಉದಾಹರಣೆಯನ್ನು ಕಾಣಬಹುದು. ಇಲ್ಲಿ ದಾವೀದನು **"ದುಷ್ಟರಿಗಾಗುವ ಕಷ್ಟನಷ್ಟ"** ಮತ್ತು **"ಯೆಹೋವನಲ್ಲಿ ಭರವಸವಿಡುವವರಿಗಿರುವ ದೇವರ ಕೃಪೆಯ"** ನಡುವಿನ ತದ್ವಿರುದ್ಧತೆಯನ್ನು ತಿಳಿಸುತ್ತಾನೆ.

- ವಚನ 3–4 ರಲ್ಲಿ ಸಂಯೋಜಿತ ಸಮಾನಾಂತರತೆಗೆ ಉದಾಹರಣೆಯನ್ನು ಕಾಣಬಹುದು. ಇಲ್ಲಿ ದಾವೀದನು ದೇವರ ಮುಂದೆ ಪಾಪವನ್ನು ಅರಿಕೆ ಮಾಡದಿರುವುದರಿಂದಾದ ಪರಿಣಾಮವನ್ನು ವಿಭಿನ್ನ ಭಾಷೆಗಳಲ್ಲಿ ವಿವರಿಸುತ್ತಾನೆ. ಅಲ್ಲದೆ ವಚನ 5 ಮತ್ತು 6–7 ರಲ್ಲಿ ಸಹ ಇದಕ್ಕೆ ಉದಾಹರಣೆ ಕಾಣಬಹುದಾಗಿದೆ.

ಊ. ಶಬ್ದಕೋಶ: ಸಮಾನಾರ್ಥಕ ಸಮಾನಾಂತರತೆಯ ಪರಿಣಾಮವೆಂದರೆ ಸಮಾನಾರ್ಥಕ ಪದಗಳನ್ನು ಒಂದೇ ಪರಿಕಲ್ಪನೆಯನ್ನು ತಿಳಿಸಲು ಬಳಸಲಾಗುತ್ತದೆ. ಉದಾಹರಣೆಗೆ 1–2ನೇ ವಚನಗಳಲ್ಲಿ ಮತ್ತು 5ನೇ ವಚನಗಳಲ್ಲಿ ಸಮಾನಾರ್ಥಕ ಪದಗಳ ಬಳಕೆಯಲ್ಲಿ ಇದನ್ನು ಕಾಣಬಹುದು.

ಕೀರ್ತನೆ 34 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 34 ಅನ್ನು ಒಂದು ಕೃತಜ್ಞತಾ ಕೀರ್ತನೆಯನ್ನಾಗಿ ವಿಂಗಡಿಸಬಹುದು. ಅಲ್ಲದೆ ಇದು ಅಧಿಕವಾಗಿ ಇಬ್ರಿಯ ಜ್ಞಾನವನ್ನು ಸಹ ಒಳಗೊಂಡಿದೆ. ಇದು ಒಬ್ಬ ವ್ಯಕ್ತಿ ಕೃತಜ್ಞತೆಯನ್ನು ಸಲ್ಲಿಸುವ ಕೀರ್ತನೆಯಾಗಿದೆ. ಯಾಕೆಂದರೆ ಇಲ್ಲಿ ದಾವೀದನು ಇಕ್ಕಟ್ಟಿನಲ್ಲಿ ದೇವರು ತನಗೆ ಮಾಡಿದ ಸಹಾಯದ ಅನುಭವವನ್ನು ಸೂಚಿಸಿ ಹೇಳುತ್ತಿದ್ದಾನೆ.

2. ಈ ಕೀರ್ತನೆಯನ್ನು ಈ ರೀತಿಯಾಗಿ 2 ಭಾಗಗಳಾಗಿ ರಚನೆ ಮಾಡಬಹುದು:

   ಅ. ದೇವರ ಮಧ್ಯಪ್ರವೇಶಕ್ಕಾಗಿ ಕೃತಜ್ಞತೆ ಸಲ್ಲಿಸುವುದು, ವಚನ 1–10

   ಆ. ದೇವರ ಮಧ್ಯಪ್ರವೇಶದ ಅನುಭವದಿಂದ ಜ್ಞಾನವನ್ನು ಪಡಕೊಳ್ಳುವುದು, ವಚನ 11–22

   ಇನ್ನೂ ವಿವರವಾಗಿ ರಚನೆ ಮಾಡಬೇಕೆಂದರೆ:

   ಅ. ದಾವೀದನು ದೇವರನ್ನು ಕೊಂಡಾಡುತ್ತಾನೆ, 1–3

   ಆ. ದೇವರು ಬಿಡುಗಡೆ ಕೊಟ್ಟಿದ್ದಕ್ಕಾಗಿ ದಾವೀದನು ಸಾಕ್ಷೀಕರಿಸುತ್ತಾನೆ, 4–7

   ಇ. ದೇವರನ್ನು ಹುಡುಕಬೇಕೆಂದು ದಾವೀದನು ದೇವಜನರಿಗೆ ಆಮಂತ್ರಿಸುತ್ತಾನೆ, ವಚನ 8–10

   ಈ. ದಾವೀದನು ದೇವರ ಭಯದ ಬಗ್ಗೆ ಬೋಧಿಸುತ್ತಾನೆ, ವಚನ 11–14

   ಉ. ದೇವರು ನೀತಿವಂತರನ್ನು ಕಾಪಾಡಿ ರಕ್ಷಿಸುತ್ತಾನೆ, ವಚನ 15–18

   ಊ. ನೀತಿವಂತರು ಮತ್ತು ದುಷ್ಟರು ಪರಸ್ಪರ ತದ್ವಿರುದ್ಧವಾಗಿದ್ದಾರೆ, ವಚನ 19–22

3. ಈ ಕೀರ್ತನೆಯಲ್ಲಿ ಎಲ್ಲಿಯೂ ಸಹ ದಾವೀದನು ನೇರವಾಗಿ ದೇವರನ್ನು ಸಂಬೋಧಿಸುವುದಿಲ್ಲ. ಹಾಗಾಗಿ ಇದು ದೇವರಿಗೆ ಮಾಡುವ ಒಂದು ಪ್ರಾರ್ಥನೆಯಲ್ಲ. ಬದಲಾಗಿ ದಾವೀದನು ದೇವರ ಸಹಾಯದ ಬಗ್ಗೆ ಸಾಕ್ಷೀಕರಿಸುತ್ತಾ ದೇವರ ಜನರನ್ನು ಸಂಬೋಧಿಸಿ ನೀತಿವಂತರಾಗಲು ಮತ್ತು ದೇವರಿಗೆ ಭಯಪಡಲು ಅವರನ್ನು ಆಹ್ವಾನಿಸುತ್ತಾನೆ.

4. ಕೀರ್ತನೆ 34 ರ ಸಾರಾಂಶ:

   ಅ. ವಚನ 1–3: ದಾವೀದನು ದೇವರನ್ನು ಸ್ತುತಿಸುತ್ತಾ, ದೇವರನ್ನು ಕೊಂಡಾಡುವುದರಲ್ಲಿ ತನ್ನೊಂದಿಗೆ ಸೇರಬೇಕೆಂದು ದೇವಜನರನ್ನು ಆಹ್ವಾನಿಸುತ್ತಾನೆ.

   ಆ. ವಚನ 4–7: ದೇವಜನರಿಗೆ ದಾವೀದನು ತನ್ನ ಸಾಕ್ಷಿಯನ್ನು ಕೊಡುತ್ತಾನೆ. ಕಷ್ಟಕಾಲದಲ್ಲಿ ದೇವರು ಆತನ ಪ್ರಾರ್ಥನೆಗೆ ಉತ್ತರ ಕೊಟ್ಟನು, ಕಾಪಾಡಿದನು, ಸಹಾಯ ಮಾಡಿದನು ಮತ್ತು ಬಿಡುಗಡೆ ನೀಡಿದನು.

   ಇ. ವಚನ 8–10: ದೇವಜನರಿಗಾಗಿ ದಾವೀದನಲ್ಲಿ ಎರಡು ಆಮಂತ್ರಣಗಳಿವೆ. ಅವರು ದೇವರನ್ನು ಅನುಭವಿಸಬೇಕು ಮತ್ತು ಆತನಿಗೆ ಶರಣರಾಗಬೇಕು.

   ಈ. ವಚನ 11–14: ದಾವೀದನು ನೀತಿವಂತಿಕೆಗೆ ಇರುವ ಮಾರ್ಗ, ಅಂದರೆ ಯೆಹೋವನಿಗೆ ಭಯಪಡುವುದರ ಬಗೆಗಿನ ತನ್ನ ಬೋಧನೆಯನ್ನು ಕೇಳಲು ದೇವಜನರನ್ನು ಆಹ್ವಾನಿಸುತ್ತಾನೆ.

   ಉ. ವಚನ 15–18: ಮೊದಲನೇಯದಾಗಿ, ದಾವೀದನು ನೀತಿವಂತರು ಮತ್ತು ದುಷ್ಟರನ್ನು ತದ್ವಿರುದ್ಧಗಳನ್ನಾಗಿ ತೋರಿಸುತ್ತಾನೆ, ಆನಂತರ ಆತನು ದೇವರು ನೀತಿವಂತರೊಂದಿಗೆ ಹೇಗೆ ವ್ಯವಹರಿಸುತ್ತಾನೆಂದು ವರ್ಣಿಸುತ್ತಾನೆ (17–18).

   ಊ. ವಚನ 19–22: ದಾವೀದನು ಪುನಃ ಮನುಷ್ಯರಾದ ನಮಗಿರುವ ಎರಡು ಆಯ್ಕೆಗಳನ್ನು ತೋರಿಸುವುದರ ಮೂಲಕ ತನ್ನ ಈ ಕೀರ್ತನೆಯ ಜ್ಞಾನದ ವಿಭಾಗವನ್ನು ಮುಗಿಸುತ್ತಾನೆ. ನೀತಿವಂತರಾಗುವುದು ಮತ್ತು ದುಷ್ಟರಾಗುವುದು ಇದರಲ್ಲಿ ಯಾವುದನ್ನು ಬೇಕಾದರೂ ನಾವು ಆರಿಸಿಕೊಳ್ಳಬಹುದು. ಆದರೆ ಖಂಡಿತವಾಗಿ ನಾವು ನಮ್ಮ ಆಯ್ಕೆಯ ಪರಿಣಾಮವನ್ನು ಎದುರಿಸಲೇಬೇಕು.

5. ದಾವೀದನು ವಚನ 9 ರಲ್ಲಿನ "ಯೆಹೋವನಿಗೆ ಭಯಪಡುವುದರ" ಪ್ರಯೋಜನಗಳನ್ನು ಈ ರೀತಿಯಾಗಿ ವರ್ಣಿಸುತ್ತಾನೆ: ಯೆಹೋವನಿಗೆ ಭಯಪಡುವವರು ಯಾವುದಕ್ಕೂ ಕೊರತೆಪಡುವುದಿಲ್ಲ.

6. ದಾವೀದನು ವಚನ 12 ರಲ್ಲಿನ "ಯೆಹೋವನಿಗೆ ಭಯಪಡುವುದರ" ಪ್ರಯೋಜನಗಳನ್ನು ಈ ರೀತಿ ವರ್ಣಿಸುತ್ತಾನೆ: ಯೆಹೋವನಿಗೆ ಭಯಪಡುವವರ ಜೀವನವು ಬಹುಕಾಲ ಸುಖಮಯವಾಗಿರುತ್ತದೆ.

7. ದಾವೀದನ ಪ್ರಕಾರ ದುಷ್ಟರು ಈ ಸಮಸ್ಯೆಗಳನ್ನು ಎದುರಿಸುವರು (ವಚನ 16,21):

   ಅ. ಅವರು ದೇವರ ಆಶೀರ್ವಾದವನ್ನು ಅನುಭವಿಸುವುದಿಲ್ಲ

   ಆ. ಈ ಜೀವಿತದ ನಂತರ ಅವರ ಜ್ಞಾಪಕ ಇರುವುದಿಲ್ಲ

   ಇ. ಅವರು ತಮ್ಮ ಕೆಡುಕಿನ ನಿಮಿತ್ತ ತೆಗೆದುಹಾಕಲ್ಪಡುವರು (ನಾಶವಾಗುವರು)

   ಈ. ಅವರು ನೀತಿವಂತರ ವಿರೋಧಿಗಳು

8. ದಾವೀದನ ಪ್ರಕಾರ ನೀತಿವಂತರು ಈ ಆಶೀರ್ವಾದಗಳನ್ನು ಅನುಭವಿಸುವರು (ವಚನ 15, 17–20, 22):

   ಅ. ದೇವರು ಅವರನ್ನು ಕಟಾಕ್ಷಿಸುವನು ಮತ್ತು ಕಷ್ಟದಿಂದ ಬಿಡಿಸುವನು

   ಆ. ದೇವರು ಅವರ ಮೊರೆಗೆ ಕಿವಿಗೊಡುವನು

   ಇ. ದೇವರು ಅವರ ಜೀವವನ್ನು ಕಾಪಾಡುವನು

   ಈ. ದೇವರು ಅವರಿಗೆ ಭದ್ರತೆ ಮತ್ತು ಆಶ್ರಯಸ್ಥಾನವಾಗಿರುವನು

ಕೀರ್ತನೆ 34 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಶೀರ್ಷಿಕೆಯಲ್ಲಿನ "ಅರಸನಾದ ಅಬೀಮೆಲೆಕ"ನೊಂದಿಗಿನ ಸಮಸ್ಯೆಯನ್ನು ಈ ಅಧ್ಯಯನದ **ಪೀಠಿಕೆಯಲ್ಲಿ** ವಿವರಿಸಲಾಗಿದೆ.

2. ವಚನ 15 ರ "ನೀತಿವಂತರು" ಯಾರೆಂದರೆ ವಚನ 9 ಮತ್ತು 11 ರಲ್ಲಿ ದೇವರಿಗೆ ಭಯಪಡುವವರಾಗಿದ್ದಾರೆ. ಅವರೇ ದಾವೀದನ ಮಾತನ್ನು ಕೇಳಿ ಪಾಲಿಸುವವರಾಗಿದ್ದಾರೆ (ವಚನ 11). ದೇವರು ಕಷ್ಟದಿಂದ ಬಿಡಿಸಿದಂತ ಜನರು ಅವರಾಗಿದ್ದಾರೆ (ವಚನ 6). ಇವರು ಕುಗ್ಗಿದವರು ಮತ್ತು ಮುರಿದ ಮನಸ್ಸುಳ್ಳವರು, ದೇವರು ಇವರಿಗೆ ನೆರವಾಗಿದ್ದಾನೆ (ವಚನ 18). ಇವರು ಕೆಟ್ಟದ್ದನ್ನಾಗಲೀ, ಸುಳ್ಳನ್ನಾಗಲೀ ಆಡುವುದಿಲ್ಲ (ವಚನ 13). ಅವರು ಕೆಟ್ಟದ್ದನ್ನು ಬಿಟ್ಟು ಒಳ್ಳೇದನ್ನೇ ಮಾಡುವರು (ವಚನ 14). ಅವರು ಸಮಾಧಾನವನ್ನು ಬಯಸಿ ಅದಕ್ಕಾಗಿ ಪ್ರಯತ್ನಪಡುವವರು (ವಚನ 14). ನೀತಿವಂತರು ದೇವರ ಕೃಪೆಯನ್ನು ಆತುಕೊಂಡವರಾಗಿದ್ದು ಪ್ರತಿಯೊಂದರಲ್ಲೂ ಆತನಿಗೇ ಅಧೀನರಾಗುವವರು. ಅವರೇ ದೇವಜನರಾಗಿದ್ದಾರೆ.

3. "ಮುರಿದ ಮನಸ್ಸುಳ್ಳವರು" ಮತ್ತು "ಕುಗ್ಗಿದವರು" ಎಂದರೆ (ವಚನ 18) ಕಷ್ಟದಲ್ಲಿದ್ದ ಮನುಷ್ಯ (ವಚನ 6), ದೇವರನ್ನು ಬೇಡಿಕೊಳ್ಳುವವ (ವಚನ 10), ಯೆಹೋವನಿಗೆ ಭಯಪಡುವವ (ವಚನ 7 ಮತ್ತು 9) ಮತ್ತು ಇತರ ವಚನಗಳಲ್ಲಿನ ನೀತಿವಂತರಾಗಿದ್ದಾರೆ. ದೇವಜನರು ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾರೆ.

4. ಪದ್ಯರೂಪಿ ಭಾಷೆ ಮತ್ತು ರಚನೆ:

   ಅ. ವಚನ 9–10: "ಯೆಹೋವನ ಜನರೇ ಆತನಲ್ಲಿ ಭಯಭಕ್ತಿಯುಳ್ಳವರಾಗಿರಿ" ಎಂಬ ಪ್ರಬೋಧನೆಯ ನಂತರ ಆ ರೀತಿ ಮಾಡುವುದರಿಂದ "ಅವರಿಗೆ" ಕೊರತೆಯಿರುವುದಿಲ್ಲ ಎಂದು ತಿಳಿಸಲಾಗಿದೆ. ಹಾಗಾಗಿ ವಚನ 9 ಸಂಯೋಜಿತ ಸಮಾನಾಂತರತೆಗೆ ಉದಾಹರಣೆಯನ್ನು ಒಳಗೊಂಡಿದೆ. ಹಿಂದಿನ ವಚನದಲ್ಲಿ ಹೇಳಿದ ಸಂಗತಿಯನ್ನು ವಚನ 10 ವಿವರಿಸುತ್ತದೆ. ಹಾಗಾಗಿ ವಚನ 9–10 ಎರಡೂ ಸೇರಿ, ಸಂಯೋಜಿತ ಸಮಾನಾಂತರತೆಗೆ ಇನ್ನೊಂದು ಉದಾಹರಣೆಯನ್ನು ಕೊಡುತ್ತವೆ. ವಚನ 10 ಎರಡು ತದ್ವಿರುದ್ಧ ಅಂಶಗಳನ್ನು ಒಳಗೊಂಡಿದೆ ("ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು" ಮತ್ತು "ದೇವಜನರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ"). ಹಾಗಾಗಿ ಇದು ವಿರೋಧಾತ್ಮಕ ಸಮಾನಾಂತರತೆಗೆ ಒಂದು ಉದಾಹರಣೆಯಾಗಿದೆ.

   ಆ. ವಚನ 15–16: ದಾವೀದನು ಈ ವಚನಗಳಲ್ಲಿ 3 ಮಾನವೀಕರಣಗಳನ್ನು ಬಳಸುತ್ತಾನೆ. ದೇವರ "ಕಣ್ಣುಗಳು" ನೀತಿವಂತರ ಮೇಲೆ ಇವೆ" (ಇದರರ್ಥ ದೇವರು ಅವರನ್ನು ಕಾಳಜಿವಹಿಸುತ್ತಾನೆ ಮತ್ತು ರಕ್ಷಿಸುತ್ತಾನೆ) ಮತ್ತು

ದೇವರ **"ಕಿವಿಗಳು"** ಅವರ ಕೂಗಿಗೆ ಪ್ರೇರಕವಾಗಿವೆ (ಇದರರ್ಥ ಆತನು ಅವರ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಉತ್ತರಿಸುತ್ತಾನೆ) ಎಂದು ದಾವೀದನು ಹೇಳುತ್ತಾನೆ. ನಂತರ ದೇವರ **"ಮುಖ"** ದುಷ್ಟರ ವಿರುದ್ಧವಾಗಿದೆ (ಇದರರ್ಥ ಆತನು ಅವರನ್ನು ವಿರೋಧಿಸುತ್ತಾನೆ ಮತ್ತು ಅವರನ್ನು ಪ್ರತಿಕೂಲವಾಗಿ ನೋಡುತ್ತಾನೆ). **"ಮಾನವೀಕರಣ"** ಎಂಬ ಪದಕ್ಕಾಗಿ **ಇಬ್ರಿಯ ಕಾವ್ಯ – ಚಿತ್ರಣ** ಎಂಬ ಅಧ್ಯಾಯವನ್ನು ನೋಡಿ.

ಈ ವಚನಗಳಲ್ಲಿ ನಾವು ಮೂರು ಪ್ರಮುಖ ವಿಧದ ಕಾವ್ಯಾತ್ಮಕ ಸಮಾನಾಂತರತೆಯನ್ನು ಕಾಣುತ್ತೇವೆ: 15ನೇ ವಚನದ ಎರಡು ಭಾಗಗಳಲ್ಲಿ ಸಮಾನಾರ್ಥಕ ಸಮಾನಾಂತರತೆ, 15ನೇ ವಚನ ಮತ್ತು 16ನೇ ವಚನದ ನಡುವಿನ ವ್ಯತ್ಯಾಸದಲ್ಲಿ ವಿರೋಧಾತ್ಮಕ ಸಮಾನಾಂತರತೆ ಮತ್ತು 16ನೇ ವಚನದೊಳಗಿನ ಸಂಯೋಜಿತ ಸಮಾನಾಂತರತೆ (ವಚನದ ದ್ವಿತೀಯಾರ್ಧವು ದೇವರು **"ಕೆಟ್ಟದ್ದನ್ನು ಮಾಡುವವರ ವಿರುದ್ಧ"** ಹೇಗೆ ಎಂದು ವಿವರಿಸುತ್ತದೆ).

ಇ. ವಚನ 21: **"ದುಷ್ಟನು"** ಎಂಬುದು **"ವ್ಯಕ್ತೀಕರಣಕ್ಕೆ"** ಒಂದು ಉದಾಹರಣೆಯಾಗಿದೆ (ಈ ಪದವನ್ನು **ಇಬ್ರಿಯ ಕಾವ್ಯ – ಚಿತ್ರಣ** ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ)

ಪದ್ಯದ ಎರಡು ಭಾಗಗಳು ಸಮಾನಾರ್ಥಕ ಸಮಾನಾಂತರತೆಗೆ ಉದಾಹರಣೆಯಾಗಿದೆ. ಆದರೆ ಗಮನಿಸಬೇಕಾದ ಅಂಶವೆಂದರೆ – ಎರಡು ಭಾಗಗಳನ್ನು ಸಮಾನಾರ್ಥಕವೆಂದು ಪರಿಗಣಿಸಬಹುದಾದರೂ ಮೊದಲಾರ್ಧದ **"ದುಷ್ಟರು"** ದ್ವಿತೀಯಾರ್ಧದ **"ನೀತಿವಂತರ ಶತ್ರುಗಳು"** ಎಂದು ವಿವರಿಸಲಾಗಿದೆ. ಸಮಾನಾರ್ಥಕ ಅಭಿವ್ಯಕ್ತಿಯ ಈ ರೀತಿಯ **"ವಿಸ್ತರಣೆ"** ಇಬ್ರಿಯ ಕಾವ್ಯದಲ್ಲಿ ಬಹಳ ಸಾಮಾನ್ಯವಾಗಿದೆ. ಇದು ಭಾಷೆಯನ್ನು ಶ್ರೀಮಂತಗೊಳಿಸುತ್ತದೆ ಮತ್ತು ಪರಿಕಲ್ಪನೆಗಳಿಗೆ ಸಂಕೀರ್ಣತೆಯನ್ನು ಸೇರಿಸುತ್ತದೆ.

ಕೀರ್ತನೆ 37 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ದಾವೀದನು ಇಲ್ಲಿ ತನ್ನ ಸಹವಿಶ್ವಾಸಿಗಳಿಗೆ ಹೇಳುತ್ತಿದ್ದಾನೆ. ಕೀರ್ತನೆ ಪುಸ್ತಕದಲ್ಲಿನ ದಾವೀದನ ಈ ಹಿಂದಿನ ಕೀರ್ತನೆಗಳಂತೆ ಇದು ಒಂದು ಪ್ರಾರ್ಥನೆ ಅಥವಾ ಸ್ತೋತ್ರ (ಸ್ತುತಿ) ಅಲ್ಲ, ಬದಲಾಗಿ ಇದು ದೇವಜನರಿಗಾಗಿ ಸಲಹೆ ಮತ್ತು ಎಚ್ಚರಿಕೆಗಳನ್ನು ಒಳಗೊಂಡಿದೆ.

2. ದಾವೀದನು ಈ ಕೀರ್ತನೆಯಲ್ಲಿ ವರ್ಣಿಸುವ ಎರಡು ಗುಂಪಿನ ಜನರೆಂದರೆ:

   ಅ. ಕೆಡುಕರು (ದುಷ್ಟರು): ಅವರು ಕೆಟ್ಟ ನಡತೆಯವರಾಗಿದ್ದಾರೆ (ವಚನ 1). ಅವರು ನೀತಿವಂತರಿಗೆ ವಿರೋಧವಾಗಿ ಆಲೋಚಿಸುತ್ತಾರೆ (ವಚನ 12, 32). ಅವರು ದೀನದರಿದ್ರರನ್ನು ಕೆಡವಿಬಿಡಲು ಪ್ರಯತ್ನಿಸುತ್ತಾರೆ (ವಚನ 14). ಅವರು ಸಮೃದ್ಧರಾಗಿದ್ದರೂ ನೀತಿವಂತಿಕೆಯಲ್ಲಿ ಕೊರತೆಪಡುವವರಾಗಿದ್ದಾರೆ (ವಚನ 16). ಅವರು ಕ್ರೂರಿಗಳಾಗಿದ್ದಾರೆ (ವಚನ 14, 35).

   ಆ. ನೀತಿವಂತರು: ಇವರು ದೇವರಲ್ಲಿ ಭರವಸವಿಟ್ಟು ಒಳ್ಳೇಯದನ್ನೇ ಮಾಡುತ್ತಾರೆ (ವಚನ 3). ಇವರು ಯೆಹೋವನಲ್ಲಿ ಸಂತೋಷಿಸುತ್ತಾರೆ (ವಚನ 4). ಇವರು ತಮ್ಮ ಮಾರ್ಗಗಳನ್ನು ದೇವರಿಗೆ ವಹಿಸಿಕೊಡುತ್ತಾರೆ (ವಚನ 7). ಇವರು ಉರಿಗೊಳ್ಳದೆ ಕೋಪವನ್ನು ಅಣಗಿಸಿಕೊಳ್ಳುತ್ತಾರೆ (ವಚನ 7, 8). ಇವರ ನಿರೀಕ್ಷೆಯು ಯೆಹೋವನಲ್ಲಿದೆ (ವಚನ 9). ಇವರು ದೀನರಾಗಿದ್ದಾರೆ (ವಚನ 11). ಇವರು ಯಥಾರ್ಥರಾಗಿದ್ದಾರೆ (ವಚನ 14). ಇವರು ಉದಾರಿಗಳಾಗಿದ್ದಾರೆ (ವಚನ 21). ಇವರು ಬಿದ್ದೇ ಹೋಗುವುದಿಲ್ಲ (24). ದೇವರು ಇವರನ್ನು ಕಾಪಾಡುತ್ತಾನೆ (ವಚನ 28). ಇವರು ಜ್ಞಾನದ ಮತ್ತು ನ್ಯಾಯವಾದ ಮಾತನ್ನಾಡುತ್ತಾರೆ (ವಚನ 30). ದೇವರ ಧರ್ಮೋಪದೇಶವು ಇವರ ಹೃದಯದಲ್ಲಿರುತ್ತದೆ (ವಚನ 31). ಇವರು ಒಳ್ಳೇನಡತೆಯುಳ್ಳವರೂ ಯಥಾರ್ಥರೂ ಮತ್ತು ಶಾಂತರೂ ಆಗಿದ್ದಾರೆ (ವಚನ 37). ಇವರು ಯೆಹೋವನನ್ನೇ ಆಶ್ರಯಿಸಿಕೊಂಡಿರುತ್ತಾರೆ (ವಚನ 40).

3. ಈ ಎರಡು ಗುಂಪುಗಳು ಈ ರೀತಿಯಲ್ಲಿ ಪರಸ್ಪರ ವ್ಯವಹರಿಸುತ್ತವೆ:

   ಅ. ದುಷ್ಟನು ನೀತಿವಂತನಿಗೆ ವಿರೋಧವಾಗಿ ಆಲೋಚಿಸುತ್ತಾನೆ ಮತ್ತು ಆತನನ್ನು ನೋಡಿ ಹಲ್ಲು ಕಡಿಯುತ್ತಾನೆ (ವಚನ 12).

   ಆ. ದುಷ್ಟನು ನೀತಿವಂತನನ್ನು ಕಡಿದುಬಿಡಲು ಯತ್ನಿಸುತ್ತಾನೆ (ವಚನ 14).

   ಇ. ಹಾಗಾಗಿ ನೀತಿವಂತರು ದುಷ್ಟರ ಸಂತ್ರಸ್ಥರಾಗಿದ್ದಾರೆ. ದುಷ್ಟರ ಕೆಟ್ಟ ಮಾರ್ಗಗಳ ಪರಿಣಾಮಾರ್ಥವಾಗಿ ಅವರು ಬಾಧೆಪಡುತ್ತಾರೆ.

   ಈ. ನೀತಿವಂತನು ದುಷ್ಟನನ್ನು ನೋಡಿ ಉರಿಗೊಳ್ಳಬಾರದು (ವಚನ 1 ಅವರ ಯಶಸ್ಸು, ಭಾಗ್ಯ), ಯಾಕೆಂದರೆ ದೇವರು ಅವರಿಗೆ ನಾಶನವನ್ನು ಇಟ್ಟಿದ್ದಾನೆ (ವಚನ 20). ದುಷ್ಟನ ಕೆಟ್ಟತನಕ್ಕಾಗಿ ನೀತಿವಂತನು ಚಿಂತಿಸಬಾರದು (ವಚನ 7–8, 32), ಯಾಕೆಂದರೆ ದೇವರು ನೀತಿವಂತನನ್ನು ಉದ್ಧಾರ ಮಾಡುತ್ತಾನೆ (ವಚನ 24) ಮತ್ತು ಸುರಕ್ಷಿತವಾಗಿ ಕಾಪಾಡುತ್ತಾನೆ (ವಚನ 20), ಆದರೆ ದುಷ್ಟರ ಸಂತಾನವನ್ನು ತೆಗೆದು ಹಾಕುತ್ತಾನೆ (ವಚನ 38).

4. ಈ ಎರಡು ಗುಂಪುಗಳ ಅಂತ್ಯ ಇಂತಿದೆ:

   ಅ. ದುಷ್ಟನು ಒಣಗಿ ಮತ್ತು ಬಾಡಿ ಹೋಗುತ್ತಾನೆ (ವಚನ 1). ಅವರು ಇದ್ದ ಸ್ಥಳದಲ್ಲಿ ಮತ್ತೆ ಸಿಗುವುದೇ ಇಲ್ಲ (ವಚನ 10). ದುಷ್ಟರ ಬಲವು ಮುರಿದು ಹೋಗುತ್ತದೆ (ವಚನ 17). ಅವರು ನಾಶ ಮತ್ತು ಮರೆಯಾಗಿ ಹೋಗುವರು (ವಚನ 20). ದೇಶದಿಂದ ತೆಗೆದು ಹಾಕಲ್ಪಡುವರು (ವಚನ 22). ಅವರ ಸಂತತಿ ತೆಗೆದುಹಾಕಲ್ಪಡುವದು (ವಚನ 28).

   ಆ. ನೀತಿವಂತರ ಇಷ್ಟಾರ್ಥವು ನೆರವೇರುವುದು (ವಚನ 4). ಅವರು ದೇಶವನ್ನು ಅನುಭವಿಸುವರು (ವಚನ 9, 22, 29, 34) ಮತ್ತು ಯಾವಾಗಲೂ ದೇಶದಲ್ಲಿ ವಾಸವಾಗಿರುವರು (ವಚನ 27, 29). ಅವರ ಸ್ವಾಸ್ಥ್ಯವು ಶಾಶ್ವತವಾಗಿ ನಿಲ್ಲುವುದು (ವಚನ 18). ಅವರಿಗೆ ಸಂತತಿಯಿರುವುದು (ವಚನ 25). ದೇವರು ಅವರನ್ನು ಕೈಬಿಡುವುದಿಲ್ಲ (ವಚನ 28) ಮತ್ತು ದುಷ್ಟರ ಕೈಯಿಂದ ಅವರನ್ನು ಕಾಪಾಡುವನು (ವಚನ 40). ಅವರು ದೇವರ ರಕ್ಷಣೆಯನ್ನು ಅನುಭವಿಸುವರು (ವಚನ 39, 40).

ಕೀರ್ತನೆ 37 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಅಧ್ಯಯನದ ಪೀಠಿಕೆಯಲ್ಲಿ ಈ ಕೀರ್ತನೆಯನ್ನು **"ಜ್ಞಾನದ ಕೀರ್ತನೆ"** ಎಂದು ಏಕೆ ವರ್ಗೀಕರಿಸಬೇಕೆಂದು ನಾನು ವಿವರಿಸಿದ್ದೇನೆ.

2. ಈ ಕೀರ್ತನೆಯಲ್ಲಿನ ಕೇಂದ್ರ ವಿಷಯವು **"ದೇಶವನ್ನು ಅನುಭವಿಸುವವರು ಯಾರು?"** ಎಂಬ ಪ್ರಶ್ನೆಗೆ ಸಂಬಂಧಿಸಿದ್ದಾಗಿದೆ (ಹೋಲಿಸಿ ವಚನ 9, 11, 22, 29, 34).

   ಅ. ನೀತಿವಂತರು ದೇಶವನ್ನು ಅನುಭವಿಸುವರು ಎಂಬುದಾಗಿ ಕೀರ್ತನೆಗಾರನು ತಿಳಿಸುತ್ತಾನೆ.

   ಆ. ನೀತಿವಂತರು ದೇಶವನ್ನು ಯಾಕೆ ಅನುಭವಿಸುತ್ತಾರೆ ಎಂದರೆ: ಅವರು ತಮ್ಮ ನಿರೀಕ್ಷೆಯನ್ನು ದೇವರ ಮೇಲಿಟ್ಟಿದ್ದಾರೆಯೇ ವಿನಃ ತಮ್ಮ ಮೇಲಲ್ಲ (ವಚನ 9). ಅವರು ದೀನರಾಗಿದ್ದಾರೆ (ವಚನ 11). ದೇವರು ನ್ಯಾಯವನ್ನು ಮೆಚ್ಚುವನು. ಆತನು ಅವರಿಗೆ ನಂಬಿಗಸ್ತನಾಗಿದ್ದು, ಅವರನ್ನು ಮರೆಯುವುದಿಲ್ಲ, ಅಲ್ಲದೇ ಆತನು ನೀತಿವಂತರನ್ನು ಕಾಪಾಡಿ ಅವರುಗಳು ದೇಶದಲ್ಲಿ ಶಾಶ್ವತವಾಗಿ ವಾಸಿಸುವಂತೆ ಮಾಡುತ್ತಾನೆ (ವಚನ 28–29). ಅವರು ದೇವರಿಗಾಗಿ ಕಾಯುತ್ತಾರೆ ಮತ್ತು ಆತನ ಮಾರ್ಗಗಳನ್ನು ಅನುಸರಿಸುತ್ತಾರೆ, ಹಾಗಾಗಿ ಆತನು ದೇಶವನ್ನು ಅನುಭವಿಸಲು ಅವರನ್ನು ಮೇಲಕ್ಕೆತ್ತುತ್ತಾನೆ.

3. ಈ ಕೀರ್ತನೆಯು ಚಿತ್ರಣಗಳಿಂದ ತುಂಬಿಕೊಂಡಿದೆ.

   ಅ. ಉಪಮೆಗಳು:

   - ಅವರು ಹುಲ್ಲಿನಂತೆ ಬೇಗ ಒಣಗಿ ಹೋಗುವರು ... ಸೊಪ್ಪಿನ ಪಲ್ಯದಂತೆ (ವಚನ 2): ದುಷ್ಟರ ಕುತಂತ್ರಗಳು ಕ್ಷಣಿಕವಾದವುಗಳಾಗಿವೆ.
   - ಉದಯದ ಬೆಳಕಿನಂತೆ ... ಮಧ್ಯಾಹ್ನದ ತೇಜಸ್ಸಿನಂತೆ (ವಚನ 6): ಆ ರೀತಿ ಪ್ರಜ್ವಲಿಸುತ್ತದೆ ಎಂಬುದಾಗಿದೆ.
   - ಹುಲ್ಲುಗಾವಲುಗಳ ಸೊಗಸಿನಂತಿದ್ದು ... ಹಬೆಯಂತೆ (ವಚನ 20): ದುಷ್ಟರು ಸುಂದರವಾದ ಹೂವು ಬೇಗ ಒಣಗಿ ಮರೆಯಾಗುವಂತೆ ಮರೆಯಾಗುವರು.
   - ಹಸುರಾಗಿ ಬೆಳೆದ ಮರದಂತೆ (ವಚನ 35): ದುಷ್ಟನನ್ನು ಸ್ವಸ್ಥಳದಲ್ಲಿ ಬಲವಾಗಿ ಹಸುರಾಗಿ ಬೆಳೆದ ಮರಕ್ಕೆ ಹೋಲಿಸಲಾಗಿದೆ.

   ಆ. ರೂಪಾಲಂಕಾರಗಳು:

   - ಕತ್ತಿಯನ್ನು ಹಿಡಿದಿದ್ದಾರೆ ಮತ್ತು ಬಿಲ್ಲನ್ನು ಎತ್ತಿದ್ದಾರೆ (ವಚನ 14): ಈ ಯುದ್ಧಾಯುಧಗಳು ನೀತಿವಂತನಿಗೆ ವಿರೋಧವಾಗಿ ದುಷ್ಟನು ಕಲ್ಪಿಸಿಕೊಂಡಿರುವ ಅಪಾಯಕಾರಿ ತಂತ್ರಗಳನ್ನು ಸೂಚಿಸುತ್ತದೆ.
   - ಅವರ ಕತ್ತಿ ಅವರ ಎದೆಯನ್ನೇ ಇರಿದು ಬಿಡುವುದು, ಅವರ ಬಿಲ್ಲುಗಳು ಸಿಡಿದು ಮುರಿದು ಹೋಗುವವು (ವಚನ 15): ದುಷ್ಟರ ಆಲೋಚನೆಗಳು ಅವರಿಗೇ ಕಂಟಕವಾಗುವವು. ಈ ರೀತಿ ದುಷ್ಟನು ನಾಶವಾಗುವನು.
   - ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು (ವಚನ 24): ದೇವರು ನೀತಿವಂತನನ್ನು ಕಾಪಾಡುತ್ತಾನೆ.
   - ಆತನೇ ಅವರಿಗೆ ದುರ್ಗಸ್ಥಾನ (ವಚನ 39): ದೇವರೇ ನೀತಿವಂತನಿಗೆ ಭದ್ರತೆಯಾಗಿದ್ದಾನೆ.

   ಇ. ಮಾನವೀಕರಣ:

   - ಕರ್ತನು ನಗುತ್ತಾನೆ (ವಚನ 13): ಇಲ್ಲಿ ದೇವರನ್ನು ಒಬ್ಬ ಮನುಷ್ಯನಿಗೆ ಹೋಲಿಸಲಾಗಿದೆ.

   ಈ. ದಾವೀದನ **"ವೈಯಕ್ತಿಕ ಅನುಭವದ"** (ವಚನ 25–26 ಮತ್ತು ವಚನ 35–36): ಎರಡು ಕಥೆಗಳನ್ನು **"ವೈಯಕ್ತಿಕ ಸಾಕ್ಷಿಗಳೆಂಬುದಾಗಿ"** ಅರ್ಥೈಸಬಾರದು. ಆದರೆ **"ನಂಬಿಕೆಯ ಹೇಳಿಕೆಗಳ"** ಉದಾಹರಣೆಗಳು ಎಂಬುದಾಗಿ ಅರ್ಥೈಸಿಕೊಳ್ಳಬೇಕು.

4. ವಿರೋಧಾತ್ಮಕ ಸಮಾನಾಂತರತೆಗೆ ಕೆಲವು ಉದಾಹರಣೆಗಳು ಇಂತಿವೆ:

ಅ. ವಚನ 9 ರಲ್ಲಿ ದುಷ್ಟರ ಅಂತ್ಯವು (ತೆಗೆದುಹಾಕಲ್ಪಡುವರು) ಯೆಹೋವನಲ್ಲಿ ನಿರೀಕ್ಷಿಸುವವರ ಭವಿಷ್ಯಕ್ಕೆ (ದೇಶವನ್ನು ಅನುಭವಿಸುವರು) ತದ್ವಿರುದ್ಧವಾಗಿದೆ.

ಆ. ವಚನ 12–13 ರ ಪ್ರಾರಂಭದಲ್ಲಿ ದುಷ್ಟರು ಹೇಗೆ ನೀತಿವಂತರನ್ನು ನೋಡಿಕೊಳ್ಳುತ್ತಾರೆಂಬ ಸಮಾನಾರ್ಥಕ ಸಮಾನಾಂತರತೆಯಿದೆ. 13ನೇ ವಚನದ ಉಳಿದರ್ಧ ಭಾಗವು ಮೊದಲ ಭಾಗಕ್ಕೆ ಮಾಹಿತಿಗಳನ್ನು ಸೇರಿಸುತ್ತದೆ, ಹಾಗಾಗಿ ನಾವಿಲ್ಲಿ ಸಂಯೋಜಿತ ಸಮಾನಾಂತರತೆಗೆ ಉದಾಹರಣೆಯನ್ನು ಕಾಣಬಹುದು.

ಇ. ವಚನ 17 ಒಂದು ವಿರೋಧಾತ್ಮಕ ಸಮಾನಾಂತರತೆಯನ್ನು ಒಳಗೊಂಡಿದೆ. ಇಲ್ಲಿ ದುಷ್ಟರ ಬಲ ಮತ್ತು ನೀತಿವಂತರ ಸ್ಥಿತಿಗತಿಯು ತದ್ವಿರುದ್ಧವಾಗಿರುವುದನ್ನು ಕಾಣಬಹುದು.

ಈ. 21ನೇ ವಚನವು ದುಷ್ಟರ ಆರ್ಥಿಕ ದಿವಾಳಿತನವನ್ನು (ಇಬ್ರಿಯ ಅಭಿವ್ಯಕ್ತಿಯನ್ನು ಅರ್ಥಮಾಡಿಕೊಳ್ಳಲು ಇದು ಬಹುಶಃ ಅತ್ಯುತ್ತಮ ಮಾರ್ಗವಾಗಿದೆ, ಈ ಅಧ್ಯಯನದ ಪೀಠಿಕೆಯಲ್ಲಿ ನನ್ನ ಟಿಪ್ಪಣಿಯನ್ನು ನೋಡಿ: ದುಷ್ಟರು ಹಣವನ್ನು ಎರವಲು ಪಡೆಯುತ್ತಾರೆ ಆದರೆ ಅವರ ಸಾಲವನ್ನು ಮರುಪಾವತಿಸಲು ಸಾಧ್ಯವಾಗುವುದಿಲ್ಲ) ನೀತಿವಂತರ ಔದಾರ್ಯದೊಂದಿಗೆ ಹೋಲಿಸುತ್ತದೆ.

ಉ. ವಚನ 22 ರಲ್ಲಿ ನೀತಿವಂತರಿಗಾಗಿನ ದೇವರ ಯೋಜನೆಯು ದುಷ್ಟರಿಗಾಗಿನ ಯೋಜನೆಯೊಂದಿಗೆ ತದ್ವಿರುದ್ಧವಾಗಿದೆ.

ಊ. ವಚನ 28 ರ ದ್ವಿತೀಯಾರ್ಧ, ವಚನ 32–33, ವಚನ 35–36 ಮತ್ತು ವಚನ 37–38 ರಲ್ಲಿ ಹೆಚ್ಚು ವಿರೋಧಾತ್ಮಕ ಸಮಾನಾಂತರತೆಯನ್ನು ಕಾಣಬಹುದು.

5. ಕೀರ್ತನೆ 37 ರಲ್ಲಿನ ಕೆವಲ ಹೇಳಿಕೆಗಳು: ಇವು ನಮ್ಮ ದೈನಂದಿನ ಜೀವನದ ಅನುಭವಗಳಿಗೆ ತದ್ವಿರುದ್ಧವೆನಿಸುವಂತಿದ್ದು, ಇವನ್ನೂ **"ನಂಬಿಕೆಯ ಹೇಳಿಕೆಗಳು"** ಎಂಬುದಾಗಿ ಅರ್ಥೈಸಿಕೊಳ್ಳಬೇಕು.

ಅ. ವಚನ 4: ಒಬ್ಬ ವ್ಯಕ್ತಿಯು ಯೆಹೋವನಲ್ಲಿ ಸಂತೋಷಿಸಿದರೆ, ದೇವರು ಆತನ ಇಷ್ಟಾರ್ಥಗಳನ್ನು ನೆರವೇರಿಸುವನು. ನಮ್ಮ ದೈನಂದಿನ ಅನುಭವವು ಈ ಹೇಳಿಕೆಯನ್ನು ಖಚಿತಪಡಿಸುವದಿಲ್ಲ. ದೇವರಲ್ಲಿ ಆನಂದಿಸುತ್ತಾ, ನಂಬಿಗಸ್ಥರಾಗಿ ಆತನನ್ನು ಹಿಂಬಾಲಿಸುವ ಅನೇಕ ವಿಶ್ವಾಸಿಗಳು ಬಡತನ, ಹಸಿವೆ, ಅನಾರೋಗ್ಯ, ಹಿಂಸೆ ಮತ್ತು ಇನ್ನಿತರ ಅನೇಕ ಬಾಧೆಗಳನ್ನು ಅನುಭವಿಸಿದ್ದಾರೆ. ಹಾಗಾಗಿ ಇದೊಂದು ನಂಬಿಕೆಯ ಹೇಳಿಕೆಯಾಗಿದೆ. ನಾವು ಆತನಲ್ಲಿ ಆನಂದಿಸಬೇಕೆಂದು ದೇವರು ಬಯಸುತ್ತಾನೆ ಮತ್ತು ಲೋಕದಲ್ಲಿ ನಾವು ಅಲ್ಪಕಾಲ ಬಾಧೆ ಅನುಭವಿಸಬೇಕಾಗಿ ಬಂದರೂ ಸಹ ಖಂಡಿತವಾಗಿ ಆತನು ನಮ್ಮ ಹೃದಯದ ಆಶೆಗಳನ್ನು ಪೂರೈಸುತ್ತಾನೆ.

ಆ. ವಚನ 5–6: ಒಬ್ಬ ವ್ಯಕ್ತಿಯು ತನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿದರೆ ಆತನ ನ್ಯಾಯವು ಮಧ್ಯಾಹ್ನದ ತೇಜಸ್ಸಿನಂತಿರುತ್ತದೆ ಎಂದು ಹೇಳುತ್ತದೆ. ನಮ್ಮ ದಿನನಿತ್ಯದ ಅನುಭವವು ಈ ಹೇಳಿಕೆಯನ್ನು ಖಚಿತಪಡಿಸುವುದಿಲ್ಲ. ತಮ್ಮ ಮಾರ್ಗಗಳನ್ನೆಲ್ಲಾ ದೇವರಿಗೆ ವಹಿಸಿಯೂ ಅನ್ಯಾಯಕ್ಕೊಳಗಾದ ನಂಬಿಗಸ್ತ ವಿಶ್ವಾಸಿಗಳನ್ನು ನಾವು ಸಂದಿಸುತ್ತೇವೆ. ಅವರ ಮೇಲೆ ತಪ್ಪಾಗಿ ದೋಷಾರೋಪಣೆ ಹೊರಿಸಲಾಗಿದೆ. ಅವರನ್ನು ಲೂಟಿ ಮಾಡಲಾಗಿದೆ. ಏನೂ ತಪ್ಪು ಮಾಡದಿದ್ದರೂ ಸಹ ಅವರನ್ನು ಸೆರೆಮನೆಗೆ ಅಟ್ಟಲಾಗಿದೆ. ಹಾಗಾಗಿ ಇದೊಂದು ನಂಬಿಕೆಯ ಹೇಳಿಕೆಯಾಗಿದೆ. ನಾವು ತನ್ನ ಮಾರ್ಗಗಳನ್ನೇ ಪಾಲಿಸಬೇಕೆಂದು ದೇವರು ಅಪೇಕ್ಷಿಸುತ್ತಾನೆ ಮತ್ತು ಖಂಡಿತವಾಗಿ ನ್ಯಾಯತೀರ್ಪಿನ ದಿನದಲ್ಲಿ ನಮ್ಮ ನ್ಯಾಯವು ಮಧ್ಯಾಹ್ನದ ತೇಜಸ್ಸಿನಂತೆ ಹೊಳೆಯುತ್ತದೆ.

ಇ. 19 ನೇ ವಚನವು ನೀತಿವಂತನು ವಿಪತ್ತಿನ ಸಮಯದಲ್ಲಿ ಒಣಗುವುದಿಲ್ಲ ಅಥವಾ ಕ್ಷಾಮದ ಸಮಯದಲ್ಲಿ ಹಸಿವಿನಿಂದ ಬಳಲುವುದಿಲ್ಲ ಎಂದು ಹೇಳುತ್ತದೆ. ಆದರೆ ನಮ್ಮ ದೈನಂದಿನ ಅನುಭವ ಈ ಹೇಳಿಕೆಯನ್ನು ದೃಢೀಕರಿಸುವುದಿಲ್ಲ. ನಮ್ಮಲ್ಲಿ ಬಹುತೇಕರು ವಿಪತ್ತಿನ ಕಾಲಗಳಲ್ಲಿ ದುಃಖಿತರಾಗಿದ್ದೇವೆ ಮತ್ತು ಸ್ನೇಹಿತರು ಹಾಗೂ ಕುಟುಂಬ ಸದಸ್ಯರು ಸತ್ತಿದ್ದಾರೆ. ಅಲ್ಲದೆ, ನಾವು ಕ್ಷಾಮದ ಸಮಯದಲ್ಲಿ ಹಸಿವಿನಿಂದ ಬಳಲಿದ್ದೇವೆ. ಈ ವಿಷಯಗಳು ದುಷ್ಟರು ಮತ್ತು ನೀತಿವಂತರು ಇಬ್ಬರಿಗೂ ಸಂಭವಿಸಿವೆ. ಇದು ನಂಬಿಕೆಯ ಹೇಳಿಕೆ. ದೇವರು ನಮ್ಮಿಂದ ನಿರೀಕ್ಷಿಸುವುದು ನಿರ್ದೋಷತೆ ಮತ್ತು ಧರ್ಮನಿಷ್ಠೆ. ಈ ಲೋಕದಲ್ಲಿ ಉಂಟಾಗುವ ವಿಪತ್ತುಗಳು ಹಾಗೂ ಬರದಲ್ಲಿ ದೇವರು ನಮ್ಮೊಂದಿಗೆ ಇದ್ದು ಕೊನೆಗೆ, ದೇವರು ತನ್ನ ಪರಲೋಕವನ್ನು ನಮ್ಮ ಶಾಶ್ವತ ಸ್ವತ್ತಾಗಿ ನೀಡುತ್ತಾನೆ. ಅಲ್ಲಿ ಯಾವ ವಿಧದ ದುಃಖವಿಲ್ಲ. ದೇವರು ನಮ್ಮ ಕಣ್ಣುಗಳಿಂದ ಪ್ರತೀ ಕಣ್ಣೀರನ್ನು ಒರೆಸುತ್ತಾನೆ. ಇನ್ನು ಮುಂದೆ ಸಾವು ಇರುವುದಿಲ್ಲ, ದುಃಖ ಅಥವಾ ಅಳುವುದು ಅಥವಾ ನೋವು ಇರುವುದಿಲ್ಲ. ಏಕೆಂದರೆ ಹಳೆಯ ವಿಷಯಗಳು ಕಳೆದುಹೋಗಿವೆ (ಪ್ರಕಟಣೆ 21:4).

ಈ. ವಚನಗಳು 25–26 ಮತ್ತು 35–36 ರಲ್ಲಿ ನೀಡಲಾಗಿರುವ ಎರಡು ಚಿಕ್ಕ ಉದಾಹರಣೆಗಳನ್ನು ಸಹ **"ನಂಬಿಕೆಯ ಹೇಳಿಕೆಗಳು"** ಎಂದು ಅರ್ಥಮಾಡಿಕೊಳ್ಳಬೇಕು. ದಾವೀದನು ತನ್ನ ಜೀವನಕಾಲದಲ್ಲಿ ನೀತಿವಂತರ ಮಕ್ಕಳು ಭಿಕ್ಷುಕರಾದಾಗ ಅಥವಾ ನೀತಿವಂತ ಮನುಷ್ಯನು ಉದಾರವಾಗಿ ಮತ್ತು ಉಚಿತವಾಗಿ ಸಾಲ ನೀಡದಿದ್ದಾಗ ಅಥವಾ ದುಷ್ಟ ಮತ್ತು ನಿರ್ದಯ ಮನುಷ್ಯನು ಸಂಪತ್ತನ್ನು ಮುಂದುವರಿಸಿ ತನ್ನ ಮಕ್ಕಳಿಗೆ ವರ್ಗಾಯಿಸಿರುವುದನ್ನು ದಾವೀದನು ನೋಡಿರಬಹುದು. ದಾವೀದನು ಈ ಎರಡು ದುಷ್ಟಾಂತಗಳ ಮೂಲಕ ಹೇಳುತ್ತಿರುವ ಅಂಶವೆಂದರೆ, ನೀತಿವಂತ ಮನುಷ್ಯನು ಉದಾರವಾಗಿರಬೇಕೆಂದು ಕರ್ತನು ಬಯಸುತ್ತಾನೆ ಮತ್ತು ದೇವರು ಅಂತಿಮವಾಗಿ ಅವನ ವಂಶವನ್ನು ಆಶೀರ್ವದಿಸುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ, ದುಷ್ಟ ಮನುಷ್ಯನು ಅಂತಿಮವಾಗಿ ಕಣ್ಮರೆಯಾಗುವಂತೆ ಮತ್ತು ಅವನಿಂದ ಯಾವುದೇ ಕುರುಹು ಉಳಿಯದಂತೆ ಕರ್ತನು ಖಚಿತಪಡಿಸಿಕೊಳ್ಳುತ್ತಾನೆ.

6. –

7. ಈ ಕೀರ್ತನೆಯಲ್ಲಿನ ದೈವಶಾಸ್ತ್ರ:

ಅ. ದೇವರು ಎಲ್ಲಾ ಮನುಷ್ಯರ ಜೀವನವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ, ದುಷ್ಟರ (ವಚನ 13) ಮತ್ತು ನೀತಿವಂತರ ಜೀವಿತಗಳೆಲ್ಲವೂ ಸಹ ಆತನ ನಿಯಂತ್ರಣದಲ್ಲಿವೆ (ವಚನ 18).

ಆ. ದೇವರು ದುಷ್ಟರನ್ನು ವಿರೋಧಿಸುತ್ತಾನೆ. ಅವರ ದುರುದ್ದೇಶಗಳನ್ನು ಆತನು ನಿಶ್ಚಲಗೊಳಿಸುತ್ತಾನೆ (ವಚನ 14–15).

ಇ. ದೇವರು ನೀತಿವಂತರನ್ನು ಆಶೀರ್ವದಿಸುತ್ತಾನೆ. ಆತನು ಅವರನ್ನು ರಕ್ಷಿಸುತ್ತಾನೆ ಮತ್ತು ಉದ್ಧರಿಸುತ್ತಾನೆ. ಅವರಿಗೆ ಸ್ವಾಸ್ಥ್ಯವನ್ನು ಕೊಡುತ್ತಾನೆ.

ಈ. ದೇವರು ತನ್ನ ಜನರು ಕೆಟ್ಟದ್ದಕ್ಕೆ ಹೋಗದೆ ಒಳ್ಳೇದನ್ನೇ ಮಾಡಬೇಕೆಂದು ಬಯಸುತ್ತಾನೆ (ವಚನ 27).

ಕೀರ್ತನೆ 38 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. 38 ನೇ ಕೀರ್ತನೆಯುದ್ದಕ್ಕೂ ದಾವೀದನು ದೇವರನ್ನು ಸಂಬೋಧಿಸುತ್ತಾನೆ. ಹಾಗಾಗಿ ಇದೊಂದು ಪ್ರಾರ್ಥನೆಯ ಕೀರ್ತನೆಯಾಗಿದೆ, ಅನಾರೋಗ್ಯದ ಸಮಯದಲ್ಲಿ ದೇವರಿಗೆ ಮಾಡುವ ಒಂದು ಪ್ರಲಾಪವಾಗಿದೆ.

2. ಕೀರ್ತನೆ 38 ಅನ್ನು ರಚನೆ ಮಾಡುವುದು ಕಷ್ಟಕರವಾಗಿದೆ. ಇಲ್ಲಿ ಎರಡು ಉದಾಹರಣೆಗಳಿವೆ. ಒಂದು ಸರಳ ಇನ್ನೊಂದು ಸಂಕೀರ್ಣವಾದದ್ದು.

   ಅ. ಒಂದು ಸರಳವಾದ ರಚನೆ:

   - "ಯೆಹೋವನೇ ಕೋಪದಿಂದ ನನ್ನನ್ನು ಶಿಕ್ಷಿಸಬೇಡ" ವಚನ 1–10
   - "ನನ್ನ ಆಪ್ತಸ್ನೇಹಿತರು ನನ್ನನ್ನು ತಿರಸ್ಕರಿಸುತ್ತಾರೆ ಮತ್ತು ನನ್ನ ಶತ್ರುಗಳು ನನಗೆ ನಾಶನವನ್ನು ಬಯಸುತ್ತಾರೆ" ವಚನ 11–12

   ಆ. ಸಂಕೀರ್ಣವಾದ ಒಂದು ರಚನೆ:

   - ಪ್ರಸ್ತುತ ಶಿಕ್ಷೆಯಿಂದ ತನ್ನನ್ನು ಬಿಡಸಬೇಕೆಂದು ದಾವೀದನು ದೇವರ ಬಳಿ ಬೇಡಿಕೊಳ್ಳುತ್ತಾನೆ, ವಚನ 1–4
   - ದಾವೀದನು ತನ್ನ ಬಾಧೆಯನ್ನು ವರ್ಣಿಸುತ್ತಾನೆ, ವಚನ 5–8
   - ದಾವೀದನು ದೇವರಿಗೆ ತನ್ನ ಮನವಿಯನ್ನು ಪುನಃ ಸಲ್ಲಿಸುತ್ತಾನೆ ಮತ್ತು ತನ್ನ ಬಾಧೆಯ ಬಗ್ಗೆ ಹೆಚ್ಚುವರಿ ಮಾಹಿತಿಗಳನ್ನು ಸೇರಿಸುತ್ತಾನೆ, ವಚನ 9–12
   - ದಾವೀದನು ವೈರಿಗಳಿಗೆ ತೋರುವ ತನ್ನ ಪ್ರತಿಕ್ರಿಯೆಯನ್ನು ವಿವರಿಸುತ್ತಾನೆ, ವಚನ 13–16
   - ದಾವೀದನು ತನ್ನ ದ್ರೋಹಗಳನ್ನು ಒಪ್ಪಿಕೊಂಡು ಶೀಘ್ರ ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳುತ್ತಾನೆ, ವಚನ 17–22

3. ದಾವೀದನು ತನ್ನ ಅನಾರೋಗ್ಯಕ್ಕೆ ತಾನು ಮಾಡಿದ ಪಾಪ ಅಪರಾಧಗಳೇ ಕಾರಣವೆಂದು ಹೇಳುತ್ತಾನೆ (3, 5, 18): ಆತನು ಈ ಹಿಂದೆ ಮಾಡಿದ ಪಾಪಗಳಿಗಾಗಿ ದೇವರು ಆತನನ್ನು ಶಿಕ್ಷಿಸುತ್ತಿರುವಂತೆ ತೋರುತ್ತದೆ.

4. ದಾವೀದನು ತನ್ನ ಪಾಪದೊಂದಿಗೆ ಎರಡು ವಿಧದಲ್ಲಿ ವ್ಯವಹರಿಸುತ್ತಾನೆ:

   ಅ. ಆತನು ಅದನ್ನು ದೇವರ ಮುಂದೆ ಅರಿಕೆ ಮಾಡುತ್ತಾನೆ (ಒಪ್ಪಿಕೊಳ್ಳುತ್ತಾನೆ) (ವಚನ 18)

   ಆ. ಆತನು ದೇವರ ಕಡೆಗೆ ತಿರುಗಿಕೊಳ್ಳುತ್ತಾನೆ (ವಚನ 21–22)

5. ದಾವೀದನ ಬಾಧೆಗಳನ್ನು ಈ ರೀತಿ ನಾಲ್ಕು ಗುಂಪುಗಳಲ್ಲಿ ಇಡಬಹುದು:

   ಅ. ದಾವೀದನು ಘೋರವಾದ ವೇದನೆಯಲ್ಲಿದ್ದಾನೆ, ಯಾಕೆಂದರೆ – ಆತನು ದೇವರು ತನ್ನನ್ನು ಶಿಕ್ಷಿಸುತ್ತಿದ್ದಾನೆಂದು ಭಾವಿಸುತ್ತಾನೆ. ಇದು ಪಾಪ ಮತ್ತು ಅಪರಾಧದ ಬಾಧೆಯಾಗಿದೆ (ವಚನ 1–4). ನಾವು ಇದನ್ನು "ಆತ್ಮೀಕ ಬಾಧೆ" ಎಂಬುದಾಗಿ ಕರೆಯಬಹುದು.

   ಆ. ದಾವೀದನು ತನ್ನ ದೇಹದಲ್ಲಿ ಅಸ್ವಸ್ಥನಾಗಿದ್ದಾನೆ ಮತ್ತು ಆತನು ತನ್ನ ಅಸ್ವಸ್ಥತೆಯನ್ನು ಬಗೆಬಗೆಯಾಗಿ ವರ್ಣಿಸುತ್ತಾನೆ (ವಚನ 5–7, 17). ಆದರೆ ಈ ವಿಧವಾದ ವರ್ಣನೆಯ ಹೊರತಾಗಿಯೂ, ನಿಜವಾಗಲೂ ಆತನು ಯಾವ ರೀತಿಯ ಅನಾರೋಗ್ಯದಿಂದ ಬಳಲುತ್ತಿದ್ದನೆಂಬುದರ ಸ್ಪಷ್ಟವಾದ ಚಿತ್ರಣವು ನಮಗೆ ಸಿಗುವುದಿಲ್ಲ. ಏನೇ ಆದರೂ ದಾವೀದನಿಗೆ ಶಾರೀರಿಕವಾಗಿಯೂ ಬಾಧೆಗಳಿದ್ದವು. ನಾವು ಇದನ್ನು "ಶಾರೀರಿಕ ಬಾಧೆ" ಎಂಬುದಾಗಿ ಕರೆಯಬಹುದು.

ಇ. ದಾವೀದನ ಶಾರೀರಿಕವಾದ ಬಾಧೆಯು ಆತನ ಬಲ ಮತ್ತು ಚೈತನ್ಯವನ್ನೆಲ್ಲಾ ಕುಗ್ಗಿಸಿಬಿಟ್ಟಿತು (ವಚನ 10). ಇದು ಆತನ ಭಾವನೆ ಮತ್ತು ಮನಸ್ಸಿನ ಮೇಲೆಯೂ ಪ್ರಭಾವ ಬೀರಿತು. ನಾವು ಇದನ್ನು **"ಭಾವನಾತ್ಮಕ ಬಾಧೆ"** ಎಂಬುದಾಗಿ ಕರೆಯಬಹುದು.

ಈ. ಅಲ್ಲದೆ ದಾವೀದನು ತನ್ನ ಸ್ನೇಹಿತರು ಮತ್ತು ವೈರಿಗಳಿಂದಲೂ ಬಾಧೆಪಟ್ಟನು. ಹಾಗಾಗಿ ಆತನ ಸಾಮಾಜಿಕ ಜೀವನ ಸಹ ಬಾಧೆಗೊಳಗಾಗಿದೆ. ನಾವು ಇದನ್ನು **"ಸಾಮಾಜಿಕ ಬಾಧೆ"** ಎಂಬುದಾಗಿ ಕರೆಯಬಹುದು.

6. ದಾವೀದನು ದೇವರ ಬಳಿ ಮೂರು ಮುಖ್ಯ ವಿಜ್ಞಾಪನೆಯನ್ನು ಇಟ್ಟುಕೊಂಡಿದ್ದಾನೆ:

ಅ. ದಾವೀದನು ದೇವರಲ್ಲಿ ಇನ್ನೂ ಹೆಚ್ಚಾಗಿ ತನ್ನನ್ನು ದಂಡಿಸಬೇಡ ಎಂದು ಕೇಳಿಕೊಳ್ಳುತ್ತಾನೆ (ವಚನ 1–3). ತನ್ನ ಮನವಿಯನ್ನು ವಿವರಿಸಲು ಆತನು ಸಮಾನಾರ್ಥಕ ಮತ್ತು ಎರಡು ರೂಪಾಲಂಕಾರಗಳನ್ನು ಉಪಯೋಗಿಸುತ್ತಾನೆ.

ಆ. ದಾವೀದನು ದೇವರು ತನಗೆ ಸದುತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾನೆ (ವಚನ 15, 22).

ಇ. ದಾವೀದನು ತನ್ನನ್ನು ಕೈಬಿಡಬಾರದು ಮತ್ತು ತನ್ನಿಂದ ದೂರವಾಗಿರಬಾರದೆಂದು ದೇವರಲ್ಲಿ ಕೇಳಿಕೊಳ್ಳುತ್ತಾನೆ.

ಕೀರ್ತನೆ 38 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ದಾವೀದನ ಅಸ್ವಸ್ಥತೆಯ ಸಮಯದಲ್ಲಿ ಆತನ ಸುತ್ತಲಿದ್ದ ಜನರು ಈ ರೀತಿಯಾಗಿ ಪ್ರತಿಕ್ರಿಯಿಸಿದರು (ವಚನ 11–12):

ಅ. ಆತನ ಸ್ನೇಹಿತರು ಮತ್ತು ಬಂಧುಗಳು ಆತನನ್ನು ದೂರ ಮಾಡಿದರು. ಈ ಪ್ರತಿಕ್ರಿಯೆಯನ್ನು ನಾನು ಬಲವಾಗಿ ಒಪ್ಪುವುದಿಲ್ಲ. ಪರಿಸ್ಥಿತಿಗಳೂ ಏನೇ ಆದರೂ ಒಬ್ಬ ನಿಜ ಸ್ನೇಹಿತನು ನಂಬಿಗಸ್ತನಾಗಿ ನಿಲ್ಲಬೇಕು. ಇಂದು ಕೆಲವು ಸಭೆಗಳಲ್ಲಿ ಸಹ ಇಂತಹ ಬಾಧೆಪಡುತ್ತಿರುವ ಜನರನ್ನು ದೂರವಿರಿಸುವ ಜನರು ಕಾಣುವರೋ ಎಂದು ನನಗೆ ಭಯವೆನಿಸುತ್ತದೆ. ಇದು ಮಾನುಷಿಕವಾಗಿರಬಹುದು, ಆದರೆ ಬಾಧೆಪಡುತ್ತಿರುವ ಜನರನ್ನು ದೂರವಿರಿಸುವುದು ಸತ್ಯವೇದಕ್ಕೆ ಅಮುಸಾರವಾದುದ್ದಲ್ಲ.

ಆ. ಆತನ ವೈರಿಗಳು ಆತನ ಮೇಲಣ ದಾಳಿಯನ್ನು ತೀವ್ರಗೊಳಿಸಿದ್ದಾರೆ. ಅವರ ಪ್ರತಿಕ್ರಿಯೆಯನ್ನು ಸಹ ನಾನು ಒಪ್ಪುವುದಿಲ್ಲ. ಆದರೆ ಲೌಕಿಕ ಮತ್ತು ದುಷ್ಟ ಜನರಿಂದ ನೀವು ಮತ್ತೇನು ಅಪೇಕ್ಷಿಸುವಿರಿ? ಖಂಡಿತವಾಗಿ ಅಂತಹ ಜನರು ತಮ್ಮ ವೈರಿಗಳನ್ನು ಹಿಂಸಿಸಲು ಪ್ರತಿಯೊಂದು ಅವಕಾಶವನ್ನು ಬಳಸಿಕೊಳ್ಳುತ್ತಾರೆ. ಇದು ದಕ್ಷಿಣ ಭಾರತದಲ್ಲಿಯೂ ಸಹ ಎಲ್ಲೆಡೆ ಸಾಮಾನ್ಯ ನಡವಳಿಕೆಯಾಗಿದೆ. ಆದರೆ ಇದು ಸಭೆಯನ್ನು ಪ್ರವೇಶಿಸಲು ಅನುಮತಿಸಬಾರದು. ನಮ್ಮ ಸಭೆಯಲ್ಲಿ ನಮಗೆ ಹೆಚ್ಚು ಇಷ್ಟವಿಲ್ಲದ ಜನರು ಇರಬಹುದು ಅಥವಾ ಅವರ ಆಲೋಚನೆಗಳು ಮತ್ತು ಜೀವನ ವಿಧಾನವನ್ನು ನಾವು ಒಪ್ಪುವುದಿಲ್ಲ. ಆದರೆ ಅವರು ಅನಾರೋಗ್ಯ ಮತ್ತು ಇತರ ಸಮಸ್ಯೆಗಳನ್ನು ಅನುಭವಿಸಿದಾಗ ನಾವು ಅವರನ್ನು ಬೆಂಬಲಿಸಬೇಕು ಮತ್ತು ಅವರಿಗೆ ಸಹಾಯ ಮಾಡಬೇಕು ಮತ್ತು ಅವರ ವಿರುದ್ಧ ಪಿತೂರಿ ಮಾಡಬಾರದು ಅಥವಾ ಅವರನ್ನು ನಿಂದಿಸಬಾರದು ಅಥವಾ ಅವರಿಗೆ **"ಬಲೆಗಳನ್ನು ಹಾಕಬಾರದು".**

2. ದಾವೀದನು ತನ್ನ ವೈರಿಗಳ ವಂಚನೆಯ ಪಿತೂರಿಗಳಿಗೆ ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾನೆ (ವಚನ 13–16):

ಅ. ತನ್ನ ವೈರಿಗಳ ಕೇಡಿನ ಮಾತುಗಳನ್ನು ಕೇಳಿಸಿಕೊಳ್ಳದೆ ಇರಲು ಆತನು ಪ್ರಯತ್ನಿಸುತ್ತಾನೆ (ವಚನ 13–16)

ಆ. ಆತನು ಅವರೊಂದಿಗೆ ವಾದಿಸುವುದಿಲ್ಲ (ವಚನ 13, 14).

ಇ. ಬದಲಾಗಿ ದೇವರು ಮಧ್ಯಪ್ರವೇಶಿಸಬೇಕು ಮತ್ತು ತನ್ನ ಪ್ರಾರ್ಥನೆಗೆ ಉತ್ತರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ (ವಚನ 15).

ಈ. ಆದರೆ ಅವನು ತನ್ನ ಪರಿಸ್ಥಿತಿಯನ್ನು ದೇವರಿಗೆ ವ್ಯಕ್ತಪಡಿಸಿದನು ಮತ್ತು ವಿವರಿಸಿದನು (ವಚನ 16). ಈ ಇಡೀ ಕೀರ್ತನೆಯು ಕಾವ್ಯಾತ್ಮಕ ಪ್ರಲಾಪದ ರೂಪದಲ್ಲಿ ಒಂದು ಪ್ರಾರ್ಥನೆಯಾಗಿದೆ. ಖಂಡಿತ, ದೇವರು ದಾವೀದ ಮತ್ತು ಅವನ ಪರಿಸ್ಥಿತಿಯ ಬಗ್ಗೆ ಈಗಾಗಲೇ ಎಲ್ಲವನ್ನು ತಿಳಿದಿದ್ದನು. ಆದರೆ ಅದು ದಾವೀದನು ದೇವರಿಗೆ ತನ್ನ ಕಾರಣವನ್ನು ಪ್ರಸ್ತುತಪಡಿಸುವುದನ್ನು ಮತ್ತು ಮಧ್ಯಪ್ರವೇಶಿಸಿ ಅವನಿಗೆ ಸಹಾಯ ಮಾಡುವಂತೆ (ಅವನನ್ನು ಗುಣಪಡಿಸಲು ಮತ್ತು ರಕ್ಷಿಸಲು) ಬೇಡಿಕೊಳ್ಳುವುದನ್ನು ತಡೆಯಲಿಲ್ಲ. ದಾವೀದನ ಉತ್ತಮ ಉದಾಹರಣೆಯನ್ನು ಅನುಸರಿಸಲು ಈ ಕೀರ್ತನೆಯು ನಮ್ಮನ್ನು ಪ್ರೋತ್ಸಾಯಿಸುತ್ತದೆ.

ಉ. ನನ್ನ ಟಿಪ್ಪಣಿಗಳು ಮತ್ತು ನಾನು ಏನು ಮಾಡುತ್ತಿದ್ದೆ: ಖಂಡಿತ, ತಿಳಿದುಕೊಳ್ಳುವುದು ಕಷ್ಟ, ಏಕೆಂದರೆ ಈ ಕೀರ್ತನೆಯ ಸಂದರ್ಭದಲ್ಲಿ ದಾವೀದನು ಅನುಭವಿಸಿದ ರೀತಿಯಲ್ಲಿ ನಾನು ಎಂದಿಗೂ ಅನುಭವಿಸಿಲ್ಲ. ಆದರೆ ಬಹುಶಃ ನಾನು ನನ್ನ ಸುತ್ತಲಿನ ಜನರಿಗೆ ನನ್ನ ಪರಿಸ್ಥಿತಿಯನ್ನು ವಿವರಿಸಲು ಪ್ರಯತ್ನಿಸುತ್ತಿದ್ದೆ ಮತ್ತು ನನ್ನ ಎಲ್ಲಾ ಶಕ್ತಿ ಮತ್ತು ಸೃಜನಶೀಲತೆಯನ್ನು ನನ್ನ ಶತ್ರುಗಳೊಂದಿಗೆ ವ್ಯವಹರಿಸಲು ಬಳಸುತ್ತಿದ್ದೆ – ಮೌನವಾಗಿ ಉಳಿಯುವ ಮತ್ತು ದೇವರಿಗೆ ಎಲ್ಲವನ್ನೂ ನಿರ್ವಹಿಸುವ ದಾವೀದನ ಉದಾಹರಣೆಯನ್ನು ಅನುಸರಿಸುವ ಬದಲು.

3. ದಾವೀದನು ದೇವರನ್ನು ಈ ಕೀರ್ತನೆಯಲ್ಲಿ ನಾಲ್ಕು ರೀತಿಯಲ್ಲಿ ಸಂಬೋಧಿಸುತ್ತಾನೆ:

   ಅ. **"ಯೆಹೋವನೇ"** (ವಚನ 1, 9, 15, 21): ದಾವೀದನು ತನ್ನ ಒಡಂಬಡಿಕೆಯ ಕರ್ತನನ್ನು ಉಚ್ಚರಿಸುವುದರ ಮೂಲಕವೇ ಈ ಪ್ರಲಾಪವನ್ನು ಪ್ರಾರಂಭಿಸುತ್ತಾನೆ ಮತ್ತು ಮುಕ್ತಾಯಗೊಳಿಸುತ್ತಾನೆ. ದಾವೀದನಿಗೆ ದೇವರು ಉಳಿದ ದೇವರುಗಳಂತೆ ಅಲ್ಲ, ಆದರೆ ಆತನು ಸೀನಾಯಿ ಒಡಂಬಡಿಕೆಯ ಮತ್ತು ನಿರಂತರವೂ ದಾವೀದನ ಮನೆ ಮತ್ತು ದೇವರ ನಡುವಿನ ಒಡಂಬಡಿಕೆಯ ದೇವರಾಗಿದ್ದಾನೆ. ಆತನ ಹೆಸರು **"ಯೆಹೋವನು"** – **"ಇರುವಾತನು"** (ವಿಮೋಚನಕಾಂಡ 3:14). ಆತನು ಸದಾಕಾಲವೂ ಇರುವ ದೇವರಾಗಿದ್ದಾನೆ.

   ಆ. **"ನನ್ನ ಕರ್ತನೇ, ನನ್ನ ದೇವರೇ"** (ವಚನ 15, 21): ಈ ಒಡಂಬಡಿಕೆಯ ದೇವರು ದೂರವಿರುವ ದೇವರಲ್ಲ, ಆದರೆ ಆತನು ದಾವೀದನ ವೈಯಕ್ತಿಕ ದೇವರಾಗಿದ್ದಾನೆ. ದಾವೀದನು ಈಗಾಗಲೇ ಆತನ ಸಂಬಂಧದಲ್ಲಿದ್ದಾನೆ, ಹಾಗಾಗಿ ಆತನು ದೇವರ ಗುಣಲಕ್ಷಣ ಮತ್ತು ಬಲವನ್ನು ತಿಳಿದವನಾಗಿದ್ದಾನೆ. ದೇವರಲ್ಲಿ ಭರವಸವಿಡಬಹುದೆಂದು ದಾವೀದನಿಗೆ ಗೊತ್ತು. ಈಗಾಗಲೇ ದಾವೀದನು ದೇವರ ಪ್ರೀತಿಯನ್ನು ಅನೇಕಬಾರಿ ಅನುಭವಿಸಿದ್ದಾನೆ.

   ಇ. **"ನನ್ನ ದೇವರೇ"** (ವಚನ 21): ಇಲ್ಲಿ ದಾವೀದನು ಎರಡನೇ ಭಾಗದಲ್ಲಿನ **"ಯೆಹೋವನೇ"** ಎಂಬ ಪದಕ್ಕೆ ಸಮಾನಾರ್ಥಕವಾಗಿ ಪದವನ್ನು ಮೊದಲ ಭಾಗದಲ್ಲಿ ಉಪಯೋಗಿಸುತ್ತಾನೆ.

   ಈ. **"ನನ್ನ ರಕ್ಷಕನೇ"** (ವಚನ 22): ದೇವರು ತನಗೆ ಸಹಾಯ ಮಾಡಲು, ಬಿಡಿಸಲು, ಕಾಪಾಡಲು, ಗುಣಪಡಿಸಲು, ಬಿಡುಗಡೆ ಮಾಡಲು ಮತ್ತು ರಕ್ಷಿಸಲು ಶಕ್ತನಾಗಿದ್ದಾನೆಂಬ ಭರವಸೆಯೊಂದಿಗೆ ದಾವೀದನು ತನ್ನ ಪ್ರಾರ್ಥನೆಯನ್ನು ಅಂತ್ಯಗೊಳಿಸುತ್ತಾನೆ.

4. ಈ ಕೀರ್ತನೆಯಲ್ಲಿನ ವಿಭಿನ್ನ ಬಗೆಯ ಪದ್ಯರೂಪಿ ರಚನೆಗಳ ಉದಾಹರಣೆಗಳು:

   ಅ. ಸಮಾನಾರ್ಥಕ ಸಮಾನಾಂತರತೆ: ವಚನ 1, 2, 7, 9, 19, 20 ಮತ್ತು 21. ವಚನ 13–14 ರಲ್ಲಿ ನಾವು ಎರಡು ರೀತಿಯ ಸಮಾನಾರ್ಥಕ ಸಮಾನಾಂತರತೆಗಳನ್ನು ಕಾಣಬಹುದು. ಮೊದಲನೇಯದಾಗಿ ಇಡೀ 13ನೇ ವಚನವು ಪೂರ್ತಿ 14 ನೇ ವಚನದೊಂದಿಗೆ ಸಮಾನಾರ್ಥಕವಾಗಿದೆ. ಎರಡನೇಯದಾಗಿ, ಕಿವುಡನಂತೆ ಮತ್ತು ಮೂಕನಂತೆ ಎಂಬ ಅಂಶವು ವ್ಯಕ್ತಪಡಿಸಲಾರದ (ಅಂದರೆ ಏನೂ ಮಾಡಲಾಗದೆ ಇರುವ) ಅಂಶದೊಂದಿಗೆ ಸಮಾನಾರ್ಥಕವಾಗಿದೆ (ವಚನ 15 ರಲ್ಲಿ ದಾವೀದನು **"ಯೆಹೋವನೇ ನಿನ್ನನ್ನೇ ನಿರೀಕ್ಷಿಸಿಕೊಂಡಿದ್ದೇನೆ"** ಎಂದು ವಿಭಿನ್ನವಾದ ರೀತಿಯಲ್ಲಿ ತಿಳಿಸುತ್ತಾನೆ).

   ಆ. ಸಂಯೋಜತೆ ಸಮಾನಾಂತರತೆ, ಉದಾ: ವಚನ 3 ರಲ್ಲಿ ದಾವೀದನ ಅಸ್ವಸ್ಥತೆಯನ್ನು ಕಾಣಬಹುದು. ಇಲ್ಲಿ ದಾವೀದನ ಪಾಪದಿಂದ ದೇವರ ಕೋಪ ಆತನ ಮೇಲೆ ಬಂದಿರುವುದರಿಂದ ಆತನ ಶರೀರದಲ್ಲಿ ಸ್ವಸ್ಥವಿಲ್ಲ. ಆತನ ಎಲುಬುಗಳಲ್ಲಿ ಕ್ಷೇಮವೇ ಇಲ್ಲದಾಗಿದೆ. ವಚನ 4 ರ ಮೊದಲ ಭಾಗದಲ್ಲಿ ತಿಳಿಸಲಾದ ಅಪರಾಧವನ್ನು ಎರಡನೇ ಭಾಗವು ವಿವರಿಸುತ್ತದೆ (ವಚನ 5 ಆತನ ಬಾಸುಂಡೆ ಮತ್ತು ಗಾಯಗಳು ಆತನ ಮೂರ್ಖತನದ ಫಲಗಳಾಗಿವೆ).

   ಇ. ಸಮಾನಾರ್ಥಕ ಮತ್ತು ಸಂಯೋಜಿತ ಸಮಾನಾಂತರತೆಗಳನ್ನು ಸಹ ಸಂಯೋಜಿಸಬಹುದು (ಉದಾಹರಣೆಗಳಿಗಾಗಿ 11 ಮತ್ತು 12 ನೇ ವಚನವನ್ನು ನೋಡಿ). ಆದರೆ ಎಲ್ಲಾ ಅನುವಾದಗಳಲ್ಲಿ ಇದು ಸ್ಪಷ್ಟವಾಗಿಲ್ಲ.

   ಈ. ಈ ಕೀರ್ತನೆಯಲ್ಲಿ ವಿರೋಧಾತ್ಮಕ ಸಮಾನಾಂತರತೆಯ ಯಾವುದೇ ಉದಾಹರಣೆಯಿಲ್ಲ.

   ಉ. ಕೀರ್ತನೆಯ ಆರಂಭ ಮತ್ತು ಅಂತ್ಯದ ನಡುವೆ ವಿಷಯಾಧಾರಿತ ಮತ್ತು ಕಾವ್ಯಾತ್ಮಕ ಸಂಪರ್ಕವಿದೆ: ಎರಡೂ ಓ "ಕರ್ತನೇ" ಅನ್ನು ಒಳಗೊಂಡಿವೆ. ಆದರೆ ಅದು ದೇವರನ್ನು ಖಂಡಿಸುವವನು ಮತ್ತು ಶಿಸ್ತು ನೀಡುವವನು ಎಂದು ಪ್ರಾರಂಭವಾಗುತ್ತದೆ ಮತ್ತು ದೇವರನ್ನು ರಕ್ಷಕ ಮತ್ತು ವಿಮೋಚಕ ಎಂದು ಕೊನೆಗೊಳಿಸುತ್ತದೆ.

5. ಈ ಕೀರ್ತನೆಯಲ್ಲಿ ಕಂಡುಬರುವ ಕೆಲವು ಪದ್ಯರೂಪಿ ಚಿತ್ರಣ ಮತ್ತು ಪದ್ಯರೂಪಿ ರಚನೆಗಳು ಇಂತಿವೆ:

   ಅ. ರೂಪಾಲಂಕಾರಗಳು:

- “ನಿನ್ನ ಬಾಣಗಳು” (ವಚನ 2): ಬಾಣಗಳು ಶಿಕ್ಷೆಯನ್ನು ಸೂಚಿಸುತ್ತವೆ.

- “ಉರುಲುಗಳನ್ನು ಒಡ್ಡಿದ್ದಾರೆ” (ವಚನ 12): ಯಾರನ್ನಾದರೂ ತಪ್ಪು ದಾರಿಗೆ ಎಳೆಯುವ ಅಥವಾ ಮೂರ್ಖತನ ಮಾಡುವ ತಂತ್ರಕ್ಕೆ ಉರುಲು ಸಾಮಾನ್ಯ ರೂಪಾಲಂಕಾರವಾಗಿದೆ.

ಆ. ಮಾನವೀಕರಣ:

- “ನಿನ್ನ ಬಾಣಗಳು” ಮತ್ತು “ನಿನ್ನ ಶಿಕ್ಷಾಹಸ್ತವು” (ವಚನ 2): ಇಲ್ಲಿ ದೇವರನ್ನು ಬಿಲ್ಲು ಬಾಣದೊಂದಿಗಿನ ಯುದ್ಧವೀರನೆಂಬ ರೀತಿಯಲ್ಲಿ ಚಿತ್ರಿಸಲಾಗಿದೆ.

- “ಬೇಗಬಂದು ಸಹಾಯ ಮಾಡು” (ವಚನ 22): ಇಲ್ಲಿ ದಾವೀದನು ದೇವರನ್ನು ತಾನು ಕರೆದಾಗ ಕೂಡಲೇ ಬಂದು ಸಹಾಯ ಮಾಡುವ ಒಬ್ಬ ವ್ಯಕ್ತಿಯೇನೋ ಎನ್ನುವ ರೀತಿಯಲ್ಲಿ ಬಿಂಬಿಸಲಾಗಿದೆ.

ಇ. ಉಪಮೆಗಳು:

- “ಹೊರಲಾರದಷ್ಟು ಭಾರವಾದ ಹೊರೆಯಂತೆ” (ವಚನ 4): ದಾವೀದನು ತನ್ನ ಅಪರಾಧವನ್ನು ಭಾರವಾದ ಹೊರೆಗೆ ಹೋಲಿಸುತ್ತಾನೆ.

- “ನಾನಂತೂ ಕಿವುಡನಂತೆ, ಮೂಕನಂತೆ” (ವಚನ 13–14): ದಾವೀದನು ತನ್ನ ಶತ್ರುಗಳ ಪಿತೂರಿಗಳಿಗೆ ಪ್ರತಿಕ್ರಿಯಿಸದಿರುವುದನ್ನು ಕಿವುಡ ವ್ಯಕ್ತಿಯು ತನ್ನೊಂದಿಗೆ ಮಾತನಾಡುವ ಜನರಿಗೆ ಪ್ರತಿಕ್ರಿಯಿಸದಿರುವಂತೆ ಹೋಲಿಸುತ್ತಾನೆ.

ಈ. ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ:

- “ನನ್ನ ಎಲುಬುಗಳು” (ವಚನ 3): ಇವು ಇಡೀ ದೇಹವನ್ನು ಪ್ರತಿನಿಧಿಸುತ್ತವೆ.

ಉ. ಅತಿಶಯೋಕ್ತಿ:

- ತನ್ನ ಬಾಧೆಯ ಕುರಿತಾದ ದಾವೀದನ ವಿಧವಿಧವಾದ ವರ್ಣನೆಗಳು (ವಚನ 5, 8, 10) ಉದ್ದೇಶಪೂರ್ವಕವಾಗಿಯೇ ಎಳೆದು ವಿವರಿಸಿದಂತೆ ಕಾಣುತ್ತವೆ. ಈ ರೀತಿಯ ಪದ್ಯರೂಪಿ ರಚನೆಯನ್ನು “ಅತಿಶಯೋಕ್ತಿ” ಎಂದು ಕರೆಯುವರು.

- “ದಿನವಿಡೀ” (ವಚನ 12) ಎಂಬುದು “ಬಹಳಷ್ಟು” ಅಥವಾ “ತುಂಬಾ” ಎಂಬುದಕ್ಕೆ ಸಾಮಾನ್ಯವಾದ ಉತ್ಪ್ರೇಕ್ಷೆಯಾಗಿದೆ.

6. “ಅಸ್ವಸ್ಥತೆ ಮತ್ತು ಬಾಧೆಯ ಸಿದ್ಧಾಂತ” ಕ್ಕೆ ಬರುವಾಗ ಕೆಲವೊಮ್ಮೆ ವಿಶ್ವಾಸಿಗಳು ಗೊಂದಲಕ್ಕೊಳಗಾಗುವರು. ಈ ಕೀರ್ತನೆಯಲ್ಲಿ “ನನ್ನ ಹಿಂದಿನ ಪಾಪವೇ ನನ್ನ ಪ್ರಸ್ತುತ ಅನಾರೋಗ್ಯಕ್ಕೆ ಕಾರಣವಾಗಿದೆ” ಎಂಬುದು ದಾವೀದನ “ಸಿದ್ಧಾಂತ”ವಾಗಿದೆ. ಆದರೆ ಈ “ಸಿದ್ಧಾಂತ”ವು ಸತ್ಯವೇದದಲ್ಲಿನ ಇತರ ಹೇಳಿಕೆಗಳ ಬೆಳಕಿನಡಿಯಲ್ಲಿಯೇ ಸಮತೋಲದಲ್ಲಿರಿಸಬೇಕು ಮತ್ತು ಅಭಿವೃದ್ಧಿಪಡಿಸಬೇಕು (ಉದಾಹರಣೆಗೆ ಯೋಹಾನ 9:3 ರಲ್ಲಿ ಹುಟ್ಟು ಕುರುಡನಾದ ಮನುಷ್ಯನ ಬಗ್ಗೆ ಯೇಸುವಿನ ಮಾತುಗಳು, “ಇವನೂ ಪಾಪಮಾಡಲಿಲ್ಲ, ಇವರ ತಂದೆತಾಯಿಗಳೂ ಪಾಪಮಾಡಲಿಲ್ಲ; ದೇವರ ಕ್ರಿಯೆಗಳು ಇವರಲ್ಲಿ ತೋರಿಬರುವುದಕ್ಕೆ ಇದಾಯಿತು”).

ನನ್ನ “ಬಾಧೆಯ ಸಿದ್ಧಾಂತ”ವನ್ನು 3 ಅಂಶಗಳಲ್ಲಿ ಸಾರಾಂಶಗೊಳಿಸಬಹುದು:

ಅ. ಅನಾರೋಗ್ಯ ಮತ್ತು ಬಾಧೆಯು ಪಾಪದ ಪರಿಣಾಮವಾಗಿದೆ. ಹಾಗಾಗಿ ಅವು ಮನುಷ್ಯನ ಅಸ್ತಿತ್ವದ ಭಾಗವಾಗಿವೆ. ಇದರರ್ಥ ಒಂದೆಡೆ ಪಾಪಿಷ್ಠನು ಉತ್ತಮವಾದ ಆರೋಗ್ಯದೊಂದಿಗೆ ಸುಖಪಡುವಾಗ, ಇನ್ನೊಂದಡೆ ಒಬ್ಬ ನೀತಿವಂತ ವ್ಯಕ್ತಿಯು ಜೀವನದುದ್ದಕ್ಕೂ ಅನಾರೋಗ್ಯದಿಂದ ಬಾಧೆ ಪಡಬಹುದಾಗಿದೆ. ಆದರೆ ಇದು ಇನ್ನೊಂದು ರೀತಿಯಲ್ಲಿ ಸಹ ಆಗಬಹುದು. ಅದೇನಂದರೆ ಒಂದೆಡೆ ನೀತಿವಂತನು ಒಳ್ಳೆಯ ಆರೋಗ್ಯದೊಂದಿಗೆ ಸುಖ ಪಡುವಾಗ, ದುಷ್ಟನು ಅನಾರೋಗ್ಯದಿಂದ ಬಾಧೆ ಪಡಬಹುದು. ಹಾಗಾಗಿ ನಾವು ಒಬ್ಬ ವ್ಯಕ್ತಿಯ ಪಾಪವು ಯಾವಾಗಲೂ ಅನಾರೋಗ್ಯವಾಗಿ ಪರಿಣಮಿಸುತ್ತದೆಂದು ಹೇಳಲಾಗದು. ಅಲ್ಲದೆ ನೀತಿವಂತನ ವ್ಯಕ್ತಿಗತ ಕಾರ್ಯವು ಅಥವಾ ಪರಿಶುದ್ಧತೆಯು ಯಾವಾಗಲೂ ಉತ್ತಮ ಆರೋಗ್ಯದಲ್ಲಿ ಪರಿಣಮಿಸುತ್ತದೆಂದು ಸಹ ಹೇಳಲಾಗುವುದಿಲ್ಲ.

ಆ. ಆದರೆ, ಪಾಪಮಯ ಜೀವಿತವು ಖಂಡಿತವಾಗಿ ಎಲ್ಲಾ ರೀತಿಯ ಸಮಸ್ಯೆ, ಅನಾರೋಗ್ಯಕ್ಕೆ ನಡೆಸುವುದು. ಒಬ್ಬ ಕುಡುಕನು ಬಿಕಾರಿಯಾಗಿ ತನ್ನ ಕುಟುಂಬವನ್ನು ನಾಶ ಮಾಡಬಹುದು ಮತ್ತು ತನ್ನ ಪಾಪಮಯವಾದ ಜೀವನ ಶೈಲಿಯ ಫಲಿತಾಂಶವಾಗಿ ತನ್ನ ಆರೋಗ್ಯವನ್ನು ಹಾಳು ಮಾಡಿಕೊಳ್ಳಬಹುದು. ಒಬ್ಬ ಕಳ್ಳನು ಒಂದು ರಾತ್ರಿಯಲ್ಲಿ ಪೊಲೀಸರ ಗುಂಡಿಗೆ ಸಿಲುಕಿ, ತನ್ನ ಅಪರಾಧಿ ಚಟುವಟಿಕೆಗಳ ನಿಮಿತ್ತ ಜೀವನದುದ್ದಕ್ಕೂ ಕುಂಟನಾಗಿ ಇರಬೇಕಾಗಬಹುದು. ಒಬ್ಬ ಅನೈತಿಕ ವ್ಯಕ್ತಿಯು ತನ್ನ ಹೊಲಸಾದ ಜೀವನ ಶೈಲಿಯ ಫಲಿತಾಂಶವಾಗಿ ಹೆಚ್.ಐ.ವಿ ಗೆ ತುತ್ತಾಗಿ ಏಡ್ಸ್‌ನಿಂದ ಸಾಯಬಹುದು.

ಇ. ನಮ್ಮ ಜೀವನದಲ್ಲಿ ನಾವು ಏನನ್ನೇ ಎದುರಿಸಿದರೂ ದೇವರು ನಮ್ಮ ಆಶ್ರಯವೂ, ಆಧರಿಸುವವನೂ, ನಮ್ಮನ್ನು ಗುಣಪಡಿಸುವವನೂ ಮತ್ತು ನಮ್ಮ ರಕ್ಷಕನೂ ಆಗಿದ್ದಾನೆ. ಹಾಗಾಗಿ ಅನಾರೋಗ್ಯ ಮತ್ತು ಬಾಧೆಯ ಸಮಯದಲ್ಲಿ ನಾವು ಯಾವಾಗಲೂ ಆತನೆಡೆಗೆ ಬರಬೇಕು. ಆತನು ಯಾವಾಗಲೂ ನಮಗೆ ಸಹಾಯ ಮಾಡುತ್ತಾನೆ ಮತ್ತು ನಮ್ಮನ್ನು ಪೋಷಿಸುತ್ತಾನೆ. ಕೆಲವೊಮ್ಮೆ ಆತನು ನಮ್ಮನ್ನು ಕೂಡಲೇ ಗುಣಪಡಿಸದಿದ್ದರೂ, ನಮ್ಮ ನಿತ್ಯತ್ವದ ಭವಿಷ್ಯವು ಆತನೊಂದಿಗಿದೆಯೆಂದು ನಮಗೆ ಗೊತ್ತು. ಒಂದು ದಿನ ಆತನು ನಮ್ಮ ಕಣ್ಣೀರನ್ನೆಲ್ಲಾ ಒರೆಸಿಬಿಡುವನು. ಆಗ ಮರಣವಾಗಲೀ, ಗೋಳಾಟವಾಗಲೀ, ಕಣ್ಣೀರಾಗಲೀ, ನೋವಾಗಲೀ ಇರುವುದಿಲ್ಲ (ನೋಡಿ ಪ್ರಕಟಣೆ 21:4). ಇದು ಆತನ ವಾಗ್ದಾನ ಮತ್ತು ನಮ್ಮ ನಿರೀಕ್ಷೆಯಾಗಿದೆ.

ಕೀರ್ತನೆ 40 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 40 ರ ವಿಷಯಾಂಶಗಳು:

   ಅ. ಹಿಂದೆ ನೋಡುವುದು (ವಚನ 1–3): ದಾವೀದನು ಈ ಹಿಂದೆ ದೇವರು ಮಾಡಿದ ಉಪಕಾರವನ್ನು ಸಾಕ್ಷೀಕರಿಸುತ್ತಾನೆ. ದಾವೀದನು ಕಷ್ಟದಲ್ಲಿದ್ದಾಗ ದೇವರು ಮಧ್ಯಪ್ರವೇಶಿಸಿ ಆತನನ್ನು ರಕ್ಷಿಸಿದನು. ಹಾಗಾಗಿ ಈಗ ದಾವೀದನು ದೇವರನ್ನು ಸ್ತುತಿಸುತ್ತಾನೆ.

   ಆ. ಮೇಲೆ ನೋಡುವುದು (ವಚನ 4–5): ಆದರೆ ಇಸ್ರಾಯೇಲ್ಯರ ಇತಿಹಾಸದುದ್ದಕ್ಕೂ ದೇವರು ಬೇರೆ ಸಮಯಗಳಲ್ಲಿ ಅಪರಿಮಿತವಾಗಿ ತನ್ನ ಸಹಾಯ ಮತ್ತು ಆಶೀರ್ವಾದಗಳನ್ನು ಅನುಗ್ರಹಿಸಿದ್ದಾನೆ. ದೇವರಿಗೆ ಭಯಪಡುವುದು ಮತ್ತು ಆತನಲ್ಲಿ ಭರವಸವಿಡುವುದು ಎಷ್ಟು ಉತ್ತಮವೆಂಬುದನ್ನು ನಾವು ಅನುಭವಿಸಿದ್ದೇವೆ. ಹಾಗಾಗಿ ಅನ್ಯದೇವತೆಗಳನ್ನು ಪೂಜಿಸುವ ಪಾಪಿಗಳ ಮಾದರಿಯನ್ನು ನಾವು ಅನುಸರಿಸಬಾರದು. ಬದಲಾಗಿ ಮೇಲೆ, ದೇವರನ್ನು ನೋಡಬೇಕು.

   ಇ. ಒಳಗೆ ನೋಡುವುದು (ವಚನ 6–8): ದೇವರಿಗೆ ಭಯಪಡುವುದು ಎಂದರೇನು? ಮತ್ತು ಆತನಿಗೆ ಮೆಚ್ಚಿಗೆಯಾಗಿ ಜೀವಿಸುವುದನ್ನು ಕಂಡುಕೊಳ್ಳುವುದು ಹೇಗೆ? ಇದು ದೇವರ ವಾಕ್ಯದ ಮೂಲಕವಾಗಿದೆ. ಇದರರ್ಥ ದೇವಾಲಯದಲ್ಲಿ ಯಜ್ಞಗಳನ್ನು ಅರ್ಪಿಸುವುದು ಮತ್ತು ಸಭೆಯಲ್ಲಿ ಸ್ತುತಿ ಪದಗಳನ್ನು ಹಾಡುವುದಕ್ಕಿಂತ ದೇವರ ವಾಕ್ಯವನ್ನು ಅಧ್ಯಯನ ಮಾಡಲು ಮತ್ತು ನಮ್ಮ ಜೀವಿತವನ್ನು ಆತನ ಚಿತ್ತಕ್ಕೆ ಒಪ್ಪಿಸಿಕೊಡಲು ಒಳಗೆ ನೋಡುವುದು ಅತೀ ಪ್ರಾಮುಖ್ಯವಾಗಿದೆ.

   ಈ. ಹೊರಗೆ ನೋಡುವುದು (ವಚನ 9–11): ದೇವರು ಯಾರು? ದಾವೀದನು ತನಗಾಗಿ ದೇವರು ಏನೆಲ್ಲಾ ಮಾಡಿದ್ದಾನೆ ಎಂಬುದನ್ನು ಇತರ ಜನರು ತಿಳಿದುಕೊಳ್ಳಬೇಕೆಂದು ಬಯಸುತ್ತಾನೆ. ಆತನ ಸಾಕ್ಷಿಯು ಕೇವಲ ದೇವಜನರಿಗಾಗಿ ಮಾತ್ರ ಸೀಮಿತವಾಗಿರದೆ, ಪ್ರತಿಯೊಬ್ಬರಿಗೂ ಸಹ ಇರುವುದಾಗಿದೆ. ದೇವರ ದಯೆ, ಕರುಣೆ, ಪ್ರೀತಿ, ಸತ್ಯ ಮತ್ತು ಸಂರಕ್ಷಣೆಯ ಅನುಭವವು ಇತರರಿಗೆ ಆತನ ಸಂದೇಶವಾಗಿದೆ.

   ಉ. ಸುತ್ತ ನೋಡುವುದು (ವಚನ 12–15): ದಾವೀದನು ತನ್ನ ಸುತ್ತ ಮುತ್ತ ಏನಾಗುತ್ತದೆ ಎಂಬುದನ್ನು ನೋಡುವಾಗ, ಆತನು ನಿರಾಶೆ ಮತ್ತು ಭಯಗೊಳ್ಳುತ್ತಾನೆ. ಕಷ್ಟ ಮತ್ತು ವೈರಿಗಳು ಆತನಿಗೆ ಅಪರಿಮಿತವಾಗಿ ಕಾಣಿಸುತ್ತವೆ. ಅರಸನಾಗಿ ಆತನಿಗೂ ಸಹ ಜನರಿಗಾಗಿ ಜವಬ್ದಾರಿಗಳಿವೆ. ಹಾಗಾಗಿ ಆತನು ಸಹಾಯಕ್ಕಾಗಿ ದೇವರಿಗೆ ಮೊರೆಯಿಡುತ್ತಾನೆ. ದೇವರೇ ತನ್ನ ವೈರಿಗಳೊಂದಿಗೆ ವ್ಯವಹರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ.

   ಊ. ಮುನ್ನೋಡುವುದು (ವಚನ 16–17): ದಾವೀದನು ತನ್ನ ಹಿಂದಿನ ಅನುಭವದ ನಿಮಿತ್ತ, ಈಗ ಭರವಸೆಯಿಂದ ತನ್ನ ಪ್ರಸ್ತುತ ಕಷ್ಟಗಳಲ್ಲಿ ದೇವರ ಸಹಾಯಕ್ಕಾಗಿ ಮುನ್ನೋಡಬಹುದು. ಈ ಸಹಾಯವು ಬೇಗನೇ ಬರಲಿ ಎಂದು ಆತನು ಪ್ರಾರ್ಥಿಸುತ್ತಾನೆ.

2. ದಾವೀದನು ವಚನ 2 ರಲ್ಲಿ ರೂಪಾಲಂಕಾರಗಳನ್ನು ಬಳಸಿ ಈ ವಾಸ್ತವಾಂಶಗಳನ್ನು ಸೂಚಿಸುತ್ತಾನೆ:

   ಅ. ನಾಶನದ ಗುಂಡಿ/ಕೆಸರು: ದಾವೀದನ ಈ ಹಿಂದಿನ ಸಮಸ್ಯೆಯ ತೀವ್ರತೆಯು ಈ ಎರಡು ರೂಪಾಲಂಕಾರಗಳ ಮೂಲಕ ಉದಾಹರಿಸಲ್ಪಟ್ಟಿದೆ. ಹೊರಗಿನ ಸಹಾಯವಿಲ್ಲದೆ ಇಂಥ ಸ್ಥಳದಿಂದ ಹೊರಬರಲು ಒಬ್ಬ ವ್ಯಕ್ತಿಗೆ ಕಷ್ಟಕರವಾಗುತ್ತದೆ.

   ಆ. ಬಂಡೆ/ಸ್ಥಿರವಾದ ಸ್ಥಳ: ದೇವರ ರಕ್ಷಣೆ ಮತ್ತು ಬಿಡುಗಡೆಯ ಶ್ರೇಷ್ಠತೆಯು ಈ ಎರಡು ರುಪಾಲಂಕಾರಗಳಲ್ಲಿ ತಿಳಿಸಲ್ಪಟ್ಟಿದೆ. ಅವು ಬಲ, ಸ್ಥಿರತೆಯನ್ನು ಸೂಚಿಸುತ್ತವೆ.

3. ದೇವರು ದಾವೀದನ ಬಾಯಲ್ಲಿ ಒಂದು **"ಹೊಸ ಹಾಡನ್ನು"** ಇಟ್ಟಿದ್ದಾನೆ: ಇದರರ್ಥ ದಾವೀದನು ತನ್ನ ಇಕ್ಕಟ್ಟಿನಲ್ಲಿ ದೇವರ ಸಹಾಯ ಮತ್ತು ರಕ್ಷಣೆಗಾಗಿ ಮತ್ತು ವೈರಿಗಳು ಮತ್ತು ಸಮಸ್ಯೆಗಳಿಂದ ಬಿಡುಗಡೆ ಕೊಟ್ಟದ್ದಕ್ಕಾಗಿ ದೇವರನ್ನು ಸ್ತುತಿಸಬಹುದಾಗಿದೆ ಎಂಬುದು.

4. ವಚನ 4 ರ ಹಿನ್ನಲೆಯಲ್ಲಿ "ಅಹಂಕಾರಿಗಳು" ಎಂಬ ಪದ ದೇವರನ್ನು ಬಿಟ್ಟು ದೂರವಾದವರನ್ನು ಸೂಚಿಸುತ್ತದೆ. ಅವರು ಆತನಿಗೆ ಭಯಪಡುವುದಿಲ್ಲ. ಬದಲಾಗಿ ಅವರು ಇತರ ದೇವರುಗಳನ್ನು ಹಿಂಬಾಲಿಸಿ ಒಡಂಬಡಿಕೆಯನ್ನು ಮುರಿದಿದ್ದಾರೆ.

5. ದಾವೀದನು ವಚನ 6 ರಲ್ಲಿ "ಯಜ್ಞನೈವೇದ್ಯಗಳು ನಿನಗೆ ಇಷ್ಟವಿಲ್ಲ" ಎಂದು ಹೇಳುತ್ತಾನೆ. ಹಾಗಾದರೆ ದೇವರು ಏನನ್ನು ಅಪೇಕ್ಷಿಸುತ್ತಾನೆ. ದಾವೀದನ ಪ್ರಕಾರ ಒಬ್ಬ ಮನುಷ್ಯನ ಹೃದಯದಲ್ಲಿನ ನೀತಿವಂತಿಕೆಯನ್ನು ಅಪೇಕ್ಷಿಸುತ್ತಾನೆ. ದಾವೀದನು ಈ ಕೀರ್ತನೆಯನ್ನು ಬರೆಯುವಾಗ ತನ್ನ ಹಿಂದಿನ ಅರಸನಾದ ಸೌಲನ ಬಗ್ಗೆ ಯೋಚಿಸಿದ್ದಿರಬಹುದು. ದೇವರು ಅವಿಧೇಯತೆಯ ನಿಮಿತ್ತ ಇಸ್ರಾಯೇಲ್ಯರ ಅರಸತ್ವದಿಂದ ಹೇಗೆ ತಳ್ಳಿಬಿಟ್ಟನೆಂಬುದನ್ನು ನಾವು 1 ಸಮುವೇಲದಲ್ಲಿ ಓದುತ್ತೇವೆ. ದೇವರ ತೀರ್ಮಾನವನ್ನು ಸೌಲನು ಪ್ರಶ್ನಿಸಿದಾಗ "ದೇವರು ಯಜ್ಞಹೋಮಗಳಿಗಿಂತ ಹೆಚ್ಚಾಗಿ ವಿಧೇಯತೆಗೆ ಮೆಚ್ಚುತ್ತಾನೆ" ಎಂದು ಹೇಳುತ್ತಾನೆ (1 ಸಮು. 15:23–24).

6. ದಾವೀದನು ಈ ಕೀರ್ತನೆಯಲ್ಲಿ ಇಸ್ರಾಯೇಲ್ಯರಿಗೆ ಇದನ್ನು ಹೇಳುತ್ತಾನೆ (ವಚನ 10):

   ಅ. ದೇವರ ನೀತಿವಂತಿಕೆ

   ಆ. ದೇವರ ನಂಬಿಗಸ್ತಿಕೆ

   ಇ. ದೇವರ ರಕ್ಷಣೆ

   ಈ. ದೇವರ ಪ್ರೀತಿ

   ಉ. ದೇವರ ಸತ್ಯ

7. ದೇವರನ್ನು ಕೊಂಡಾಡುವ ಜನರೆಂದರೆ (ವಚನ 16):

   ಅ. ಆತನ ದರ್ಶನವನ್ನು ಅಪೇಕ್ಷಿಸುವವರು

   ಆ. ಆತನಲ್ಲಿ ಉಲ್ಲಾಸದಿಂದ ಸಂತೋಷಿಸುವವರು

   ಇ. ಆತನ ರಕ್ಷಣೆಯನ್ನು ಪ್ರೀತಿಸುವವರು

ಕೀರ್ತನೆ 40 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಪೀಠಿಕೆಯಲ್ಲಿ ತಿಳಿಸಲ್ಪಟ್ಟ ಕೀರ್ತನೆ 40 ರ ಎರಡು ಬಗೆಯ ರಚನೆಗಳು ವಿಭಿನ್ನವಾಗಿದ್ದರೂ ಸಹ ಉತ್ತಮವಾಗಿವೆ. ಇದರ ರಚನೆಯು ಈ ಕೀರ್ತನೆಯ ಕೃತಜ್ಞತಾ ಹಾಡು ಮತ್ತು ಕಷ್ಟದಲ್ಲಿನ ಒಂದು ಪ್ರಲಾಪ ಎಂಬ ವಾಸ್ತವಾಂಶಕ್ಕೆ ಒತ್ತುಕೊಡುತ್ತದೆ. ಎರಡನೇಯ ರಚನೆಯು "ಎಕ್ಸ್" ರೀತಿಯ ಕೀರ್ತನೆಯನ್ನು ಆಧರಿಸಿದೆ. ಈ ರೀತಿಯ ರಚನೆಯನ್ನು ಕಂಡುಹಿಡಿಯುವುದು ಅನುಭವಿ ಓದುಗರಿಗೆ ಸಹ ಕಷ್ಟವೆನಿಸುತ್ತದೆ. ಆದರೆ ಇದು ಕೀರ್ತನೆಯ ವಿಷಯಾಂಶಗಳ ವಿವರವಾದ ತಿಳುವಳಿಕೆಯನ್ನು ನಮ್ಮ ಮುಂದಿಡುತ್ತದೆ.

   ಎನ್ಐವಿ ಅಧ್ಯಯನವು ಸತ್ಯವೇದವು ಈ ಕೀರ್ತನೆಯ 4 ಭಾಗದ ಒಂದು ರಚೆನೆಯನ್ನು ತಿಳಿಸುತ್ತದೆ:

   ಅ. ದಾವೀದನು ಈ ಹಿಂದಿನ ಕರುಣೆಗಾಗಿ ದೇವರನ್ನು ಸ್ತುತಿಸುತ್ತಾನೆ, ವಚನ 1–5

   ಆ. ದಾವೀದನು ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಡುತ್ತಾನೆ, ವಚನ 6–8

   ಇ. ದಾವೀದನು ತನ್ನ ಜನರ ಪರವಾಗಿ ದೇವರ ನಂಬಿಗಸ್ತಿಕೆ ಮತ್ತು ಪ್ರೀತಿಯ ಕಾರ್ಯಗಳನ್ನು ಸಾರುತ್ತಾನೆ, ವಚನ 9–10

   ಈ. ದಾವೀದನು ಸಹಾಯಕ್ಕಾಗಿ ಪ್ರಾರ್ಥಿಸುತ್ತಾನೆ, ವಚನ 11–17

   ಇನ್ನೊಬ್ಬ ವಿಶ್ಲೇಷಕರು 3 ಭಾಗದ ಒಂದು ರಚನೆಯನ್ನು ತಿಳಿಸುತ್ತಾರೆ:

   ಅ. "ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು", ವಚನ 1–5

   ಆ. "ಯಜ್ಞನೈವೇದ್ಯಗಳು ನಿನಗೆ ಇಷ್ಟವಿಲ್ಲ", ವಚನ 6–11

ಇ. "ಯೆಹೋವನೇ ಬೇಗ ಬಂದು ಸಹಾಯ ಮಾಡು", ವಚನ 12–17

ನಾವು ಈ ನಾಲ್ಕು ಪ್ರಸ್ತಾಪಗಳನ್ನು ಅಧ್ಯಯನ ಮಾಡಿ ಮೌಲ್ಯಮಾಪನ ಮಾಡಿದಾಗ, ನಾವು ನಿಸ್ಸಂದೇಹವಾಗಿ ಕೀರ್ತನೆಯನ್ನು ಆಳವಾಗಿ ತಿಳಿದುಕೊಳ್ಳುತ್ತೇವೆ. ಅವೆಲ್ಲವೂ ಒಳ್ಳೆಯದು – ಆದರೆ ವಿಭಿನ್ನ ರೀತಿಯಲ್ಲಿ.

2. ದಾವೀದನು ಇಸ್ರಾಯೇಲ್ಯರ ಸಭೆಯ ಮುಂದೆ ಈ ಕೀರ್ತನೆಯ ಮೂಲಕ ಮಾತನಾಡುತ್ತಿರುವ ಸಂದರ್ಭದಲ್ಲಿ, 6–8ನೇ ವಚನಗಳನ್ನು ಈ ಕೆಳಗಿನ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು (ಕನ್ನಡ **ಸತ್ಯವೇದವು**ದಲ್ಲಿ ಇದನ್ನು ನೋಡಲಾಗುವುದಿಲ್ಲ, ಏಕೆಂದರೆ ಅದು ಇಬ್ರಿಯ ಪಠ್ಯವನ್ನು ಅನುಸರಿಸುವುದಿಲ್ಲ):

   - ವಚನ 6: ದೇವರು ಆರಾಧನೆಯ ಆಚರಣೆಗಳಿಗಿಂತ (ಯಜ್ಞಗಳು ಮತ್ತು ಅರ್ಪಣೆಗಳು) ಅವರ ಹೃದಯ ಸ್ಥಿತಿಯ (ಅವರ ಆಧ್ಯಾತ್ಮಿಕ ಜೀವನ ಮತ್ತು ಬದ್ಧತೆ) ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾನೆ ಎಂದು ರಾಜ ದಾವೀದನು ಇಸ್ರಾಯೇಲ್ಯರಿಗೆ ಘೋಷಿಸುತ್ತಾನೆ. ದಾವೀದನ ಸ್ವಂತ ಕಿವಿಗಳು ದೇವರ ಆಜ್ಞೆಗಳಿಗೆ ತೆರೆದಿರುತ್ತವೆ.

   - ವಚನ 7–8: ದಾವೀದನು ದೇವರ ಹಾಗೂ ಇಸ್ರಾಯೇಲ್ಯರ ಮುಂದೆ ತಾನು ದೇವರ ವಿಧಿಗಳನ್ನು ಪಾಲಿಸಲು ಮತ್ತು ಮೋಶೆಯ ಧರ್ಮಶಾಸ್ತ್ರದಲ್ಲಿ ("ಸುರುಳಿ") ಬರೆದಿರುವ ದಾರಿಯಲ್ಲಿ ದೇವಭಕ್ತಿಯಿಂದ ನಡೆಯಲು ಇಚ್ಛಿಸುತ್ತೇನೆ ಎಂದು ಹೇಳುತ್ತಾನೆ.

3. ದಾವೀದನು ವಚನ 5 ರಲ್ಲಿ ನಿನ್ನ "ಅದ್ಭುತಕಾರ್ಯಗಳು ಅಸಂಖ್ಯಾತವಾಗಿವೆ" ಎಂದು ಹಾಗೆಯೇ ವಚನ 12 ರಲ್ಲಿ "ಲೆಕ್ಕವಿಲ್ಲದಷ್ಟು ಆಪತ್ತುಗಳು ನನ್ನನ್ನು ಸುತ್ತಿಕೊಂಡಿವೆ" ಎಂದೂ ಹೇಳುತ್ತಾನೆ.

   ಅ. ಎರಡು ಹೇಳಿಕೆಗಳೂ ಸಹ ಅತಿಶಯೋಕ್ತಿಗಳಾಗಿವೆ, ಇದರರ್ಥ ಅವು ಉದ್ದೇಶಪೂರ್ವಕವಾಗಿ ಕವಿಯಿಂದ ಅತಿಯಾಗಿ ವಿವರಿಸಲ್ಪಟ್ಟಿವೆ. ವಚನ 5 ರಲ್ಲಿ ದಾವೀದನು ಹೇಳುವುದೇನೆಂದರೆ – ಈ ಹಿಂದೆ ದೇವರು ಮಾಡಿದ ಅದ್ಭುತ ಕಾರ್ಯಗಳು ಅಸಂಖ್ಯಾತವಾಗಿವೆ ಮತ್ತು ಉನ್ನತವಾಗಿವೆ. ವಚನ 12 ರಲ್ಲಿ ಆತನು ಹೇಳುವ ಅಂಶವೇನೆಂದರೆ – ಪ್ರಸ್ತುತದಲ್ಲಿ ಆತನು ಎದುರಿಸುವ ಕಷ್ಟಗಳು ತಡೆಯಲಾರದಷ್ಟು ಅಸಂಖ್ಯಾತವಾಗಿವೆ.

4. ವಚನಗಳು 9–11:

   ಅ. ದಾವೀದನು ದೇವರಿಗೆ ಮಾತು ಕೊಡುತ್ತಾನೆ:

   - ದೇವರ ನೀತಿಯನ್ನು ಮರೆಮಾಡುವುದಿಲ್ಲ
   - ದೇವರ ನಂಬಿಗಸ್ತಿಕೆ ಮತ್ತು ರಕ್ಷಣೆಯನ್ನು ಸಾರುತ್ತೇನೆ
   - ದೇವರ ಕೃಪಾಸತ್ಯತೆಯನ್ನು ಮರೆಮಾಡುವುದಿಲ್ಲ

   ಆ. ದಾವೀದನು ದೇವರಿಂದ:

   - ತನಗೆ ದಯೆ ತೋರಿಸಬೇಕೆಂದು
   - ಕೃಪಾಸತ್ಯತೆಯಿಂದ ಯಾವಾಗಲೂ ತನ್ನನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತಾನೆ.

5. ಕೀರ್ತನೆ 40 ರಲ್ಲಿನ ಸಮಾನಾಂತರತೆಗಳು:

   ಅ. ಉದಾಹರಣೆಗೆ, ವಚನ 2 ರಲ್ಲಿ ಸಮಾನಾರ್ಥಕ ಸಮಾನಾಂತರತೆಗಳನ್ನು ಕಾಣಬಹುದು (ಪದ್ಯದ ಎರಡು ಭಾಗಗಳಲ್ಲಿ ಪ್ರತಿಯೊಂದು ಸಮಾನಾರ್ಥಕ ಅಭಿವ್ಯಕ್ತಿಗಳನ್ನು ಒಳಗೊಂಡಿದೆ: "ಭಯಾನಕ ಗುಂಡಿಯಿಂದ ಹೊರಗೆ"/ "ಮಣ್ಣು ಮತ್ತು ಕೆಸರಿನಿಂದ ಹೊರಗೆ" ಮತ್ತು "ನನ್ನ ಪಾದಗಳನ್ನು ಬಂಡೆಯ ಮೇಲೆ ಇರಿಸಿ"/ "ನನಗೆ ನಿಲ್ಲಲು ಒಂದು ಸ್ಥಳವನ್ನು ಕೊಟ್ಟನು". ಇದರ ಜೊತೆಗೆ, ವಚನದ ಎರಡು ಭಾಗಗಳನ್ನು "ಮೋಕ್ಷ" ಎಂಬ ಆಧಾರವಾಗಿರುವ ಆದರೆ ಉಲ್ಲೇಖಿಸದ ಪರಿಕಲ್ಪನೆಯೊಂದಿಗೆ "ಸಮಾನಾರ್ಥಕ" ಎಂದು ಕಾಣಬಹುದು: ದೇವರು ನಮ್ಮನ್ನು ರಕ್ಷಿಸಿದಾಗ, ಅವನು ನಮ್ಮನ್ನು ಭೂತಕಾಲದಿಂದ, "ಭಯಾನಕ ಗುಂಡಿಯಿಂದ" ರಕ್ಷಿಸುತ್ತಾನೆ ಮತ್ತು ನಮ್ಮ ಶಕ್ತಿ, ಸ್ಥಿರತೆ ಮತ್ತು ರಕ್ಷಣೆ, "ನಮ್ಮ ಬಂಡೆ" ಆಗುತ್ತಾನೆ), ವಚನ 8, ವಚನ 9–10, ವಚನ 13, ವಚನ 14–15, ವಚನ 16.

ಈ. ವಚನ 1 ರಲ್ಲಿ ಸಂಯೋಜಿತ ಸಮಾನಾಂತರತೆಗೆ ಉದಾಹರಣೆಯನ್ನು ಕಾಣಬಹುದು (ವಚನದ ಎರಡನೇ ಭಾಗವು ವಚನದ ಮೊದಲಾರ್ಧದಲ್ಲಿ ದಾವೀದನು ಮಾಡಿದ ಪರಿಣಾಮವಾಗಿ ಏನಾಯಿತು ಎಂದು ನಮಗೆ ಹೇಳುತ್ತದೆ), ವಚನ 2 (ಮೊದಲಾರ್ಧದಲ್ಲಿ ದಾವೀದನು ಮೊದಲು ಎನಾಯಿತು ಎಂದು ಹೇಳುತ್ತಾನೆ, ದ್ವಿತೀಯಾರ್ಧದಲ್ಲಿ ನಂತರ ಏನಾಯಿತು – ಸಹ **"ಸಮಾನಾರ್ಥಕ"** ಎಂದು ಅರ್ಥೈಸಿಕೊಳ್ಳಬಹುದಾದರೆ, ಹಿಂದಿನ ಪ್ಯಾರಾಗ್ರಾಫ್ ನೋಡಿ), ವಚನ 3 (ದ್ವಿತೀಯಾರ್ಧವು ಮೊದಲಾರ್ಧದಲ್ಲಿ ಮಾಡಿದ ಪರಿಣಾಮಗಳನ್ನು ವಿವರಿಸುತ್ತದೆ), ವಚನ 12 (ದಾವೀದನು ತನ್ನ ಪಾಪಗಳ ಪರಿಣಾಮವಾಗಿ ತನ್ನ ತೊಂದರೆಗಳನ್ನು ಮೊದಲು ಅರ್ಥಮಾಡಿಕೊಳ್ಳುತ್ತಾನೆ ನಂತರ ಅವನು ತನ್ನ ಪಾಪಗಳ ಪ್ರಮಾಣದ ಬಗ್ಗೆ ಮಾಹಿತಿಯನ್ನು ಸೇರಿಸುತ್ತಾನೆ. ಅಂತಿಮವಾಗಿ ಅವನು ಇದೆಲ್ಲದರ ಪರಿಣಾಮವನ್ನು ಉಲ್ಲೇಖಿಸುತ್ತಾನೆ, **"ನನ್ನ ಹೃದಯವು ನನ್ನೊಳಗೆ ವಿಫಲಗೊಳ್ಳುತ್ತದೆ"**).

ಇ. ವಚನ 4 ರಲ್ಲಿ ವಿರೋಧಾತ್ಮಕ ಸಮಾನಾಂತರತೆಗೆ ಉದಾಹರಣೆಯನ್ನು ಕಾಣಬಹುದು (ಆಶೀರ್ವಾದವು ಎರಡು ವ್ಯತಿರಿಕ್ತ ಬದಿಗಳನ್ನು ಹೊಂದಿದೆ, ಒಂದು ಸಕಾರಾತ್ಮಕ, **"ದೇವರಲ್ಲಿ ನಂಬಿಕೆ ಇಡುವುದು"** ಮತ್ತು ಒಂದು ನಕಾರಾತ್ಮಕ **"ಅನ್ಯ ದೇವರುಗಳ ಆರಾಧನೆಯಲ್ಲಿ ಪಾಪಿಗಳನ್ನು ನಕಲಿಸದಿರುವುದು"**), ವಚನ 11 (**"ದೇವರು ಕರುಣೆಯನ್ನು ತಡೆಹಿಡಿಯುವುದು"** ಮತ್ತು **"ದೇವರು ತನ್ನ ಪ್ರೀತಿ ಮತ್ತು ಸತ್ಯದಿಂದ ರಕ್ಷಿಸುವುದು"** ವ್ಯತಿರಿಕ್ತವಾಗಿದೆ). ವಚನ 14–17 ರಲ್ಲಿ ದಾವೀದನ ದುರಹಂಕಾರಿ ಮತ್ತು ದುಷ್ಟ ಶತ್ರುಗಳು ಮತ್ತು **"ಬಡವ ಮತ್ತು ನಿರ್ಗತಿಕ"** ದೇವಭಯವುಳ್ಳ ದಾವೀದನ ನಡುವೆ ಒಂದು ಪ್ರಮುಖ ವ್ಯತ್ಯಾಸವಿದೆ.

ಕೀರ್ತನೆ 42–43 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ಕೀರ್ತನೆಯಲ್ಲಿ ಒಬ್ಬ ವ್ಯಕ್ತಿ ಮಾತನಾಡುತ್ತಾರೆ. ಇದು ವೈಯಕ್ತಿಕವಾದುದ್ದಾಗಿದೆ. ಶೀರ್ಷಿಕೆಯಲ್ಲಿನ **"ಕೋರಹೀಯರ ಪದ್ಯ"** ಎಂದು ಹೇಳಿರುವುದು ಸ್ವಲ್ಪ ಆಶ್ಚರ್ಯಕರವಾಗಿ ತೋರುತ್ತದೆ.

   ಈ ಕೀರ್ತನೆಯು ದೇವರನ್ನು ಸಂಬೋಧಿಸುವುದರೊಂದಿಗೆ ಪ್ರಾರಂಭವಾಗುತ್ತದೆ (ಕೀರ್ತನೆ 42:1). ಅನಂತರ ಆತನು ತನ್ನನ್ನೇ ಸಂಬೋಧಿಸುವಂತೆ ಕಾಣುತ್ತದೆ (ವಚನ 1–4). ಅಂದರೆ ಪಲ್ಲವಿಗಳಲ್ಲಿ (**"ನನ್ನ ಮನವೇ"**, 42:5, 11, 43:5) 2ನೇ ವಚನದ ಪ್ರಾರಂಭದಲ್ಲಿ (42:6–7) ಮತ್ತೆ ಕೀರ್ತನೆಗಾರನು ದೇವರೆಡೆಗೆ ತಿರುಗುತ್ತಾನೆ. 3ನೇ ವಚನದುದ್ದಕ್ಕೂ ದೇವರನ್ನು ಸಂಬೋಧಿಸಲಾಗಿದೆ (ಕೀರ್ತನೆ 43:1–4).

2. ಕೀರ್ತನೆಗಾರನು ರಾಷ್ಟ್ರೀಯ ಸಂಭ್ರಮದಲ್ಲಿ (ಆಚರಣೆ) ತಾನು ಹೇಗೆ ಭಾಗವಹಿಸಿದ್ದೇನೆ ಎಂಬುದನ್ನು ನೆನಪುಮಾಡಿಕೊಳ್ಳುತ್ತಾನೆ. ಆದರೆ ಆತನು ದೇವಾಲಯದ ಸಂಸ್ಕಾರಗಳಲ್ಲಿ ಸಹ ನಾಯಕತ್ವದ ಪಾತ್ರವನ್ನು ವಹಿಸಿರಬಹುದು.

3. ಪ್ರತೀ ಚರಣ ಸಹ ಒಂದು ಮುಖ್ಯ ಪ್ರಶ್ನೆಯಿರುವಂತೆ ತೋರುತ್ತದೆ:

   ಅ. ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ ಸೇರುವೆನೋ (42:2)?

   ಆ. ಯಾಕೆ ನನ್ನನ್ನು ಮರೆತುಬಿಟ್ಟಿ (42:9)?

   ಇ. ಯಾಕೆ ನನ್ನನ್ನು ತಳ್ಳಿಬಿಟ್ಟಿ (43:2)?

4. ಕೀರ್ತನೆಗಾರನು ಕೀರ್ತನೆ 42:9 ರಲ್ಲಿ ದೇವರನ್ನು **"ನನ್ನ ಶರಣನು"** ಎಂದು ಕರೆಯುತ್ತಾನೆ. ಈ ರೂಪಾಲಂಕಾರವು ದೇವರ ಬಲ, ಶಕ್ತಿ ಮತ್ತು ಭರವಸೆಯನ್ನು ಸೂಚಿಸುತ್ತದೆ. ಹಳೇ ಒಡಂಬಡಿಕೆಯ ಪದ್ಯಗಳಲ್ಲಿ ಇದು ಸಾಮಾನ್ಯವಾಗಿ ಕಂಡುಬರುವ ಒಂದು ರೂಪಾಲಂಕಾರವಾಗಿದೆ.

5. **"ಎಲುಬುಗಳು ಮುರಿದ ಹಾಗಿವೆ"** (ಕೀರ್ತನೆ 42:10) ಎಂಬ ಕೀರ್ತನೆಗಾರನ ಹೇಳಿಕೆಯನ್ನು ನಾನು ಈ ರೀತಿ ಅರ್ಥೈಸಿಕೊಳ್ಳುವೆ: ಆತನು ಆಥವಾ ಎಲುಬುಗಳಲ್ಲಿ ಒಂದು ರೀತಿಯ ರೋಗದಿಂದ ಬಾಧೆ ಪಡುತ್ತಿರಲಿಲ್ಲ, **"ಎಲುಬುಗಳು"** ಕೀರ್ತನೆಗಾರನ ಶಾರೀರಿಕ ಮತ್ತು ಆತ್ಮೀಕ ಅಂದರೆ ಆತನ ಇಡೀ ಅಸ್ತಿತ್ವವನ್ನು ಸೂಚಿಸುತ್ತವೆ. ತನ್ನ ವೈರಿಗಳ ಉಪಟಳದ ಫಲಿತಾಂಶವಾಗಿ ಕೀರ್ತನೆಗಾರನ ಇಡೀ ಜೀವಿತವು ನಕರಾತ್ಮಕವಾಗಿ ಪರಿಣಮಿಸಲ್ಪಟ್ಟಿದೆ.

6. ಕೀರ್ತನೆಗಾರನು ದೇವರ ಪ್ರಸನ್ನತೆ ಮತ್ತು ಸತ್ಯದ ಮೂಲದಿಂದ ಯೆರೂಸಲೇಮಿನಲ್ಲಿನ ದೇವಾಲಯಕ್ಕೆ ನಡೆಸಲ್ಪಡುತ್ತಾನೆ.

ಕೀರ್ತನೆ 42–43 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಕೀರ್ತನೆ 42 ಮತ್ತು 43 ಮೂಲತಃ ಒಂದೇ ಪದ್ಯವಾಗಿದ್ದಿರಬಹುದೆಂಬ ಹೇಳಿಕೆಯನ್ನು ನಾನು ಒಪ್ಪುತ್ತೇನೆ. ಇದಕ್ಕೆ ಕಾರಣಗಳು ಇಂತಿವೆ:

   ಅ. ಎರಡೂ ಕೀರ್ತನೆಗಳಲ್ಲಿ ಕಂಡುಬರುವ ಪಲ್ಲವಿ (ಕೀರ್ತನೆ 42:5, 11, 43:5)

   ಆ. ಕೀರ್ತನೆ 43 ಕ್ಕೆ ಯಾವುದೇ ಶೀರ್ಷಿಕೆಯಿಲ್ಲ, ಹಾಗಾಗಿ ಮೂಲತಃ ಇದು ಒಂದು ಪ್ರತ್ಯೇಕ ಕೀರ್ತನೆಯಲ್ಲ ಎಂಬುದನ್ನು ಸೂಚಿಸುತ್ತದೆ.

   ಇ. 3 ಪ್ರಮುಖ ಪ್ರಶ್ನೆಗಳು 3 ಶ್ಲೋಕಗಳನ್ನು ಒಟ್ಟಾಗಿ ಕಟ್ಟುವುದು:

   - ಮೊದಲ ಚರಣ: ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ ಸೇರುವೆನೋ?
   - ಎರಡನೇ ಚರಣ: ಯಾಕೆ ನನ್ನನ್ನು ಮರೆತುಬಿಟ್ಟಿ? (ಕೀರ್ತನೆ 42:9)

- ಮೂರನೇ ಚರಣ: ಯಾಕೆ ನನ್ನನ್ನು ತಳ್ಳಿಬಿಟ್ಟಿ? (ಕೀರ್ತನೆ 43:2)

ಈ. ಯೆರೂಸಲೇಮ್ ದೇವಾಲಯವನ್ನು ಎರಡೂ ಕೀರ್ತನೆಗಳಲ್ಲಿ ಪ್ರಸ್ತಾಪಿಸಲಾಗಿದೆ: **"ದೇವಾಲಯಕ್ಕೆ ಹೋಗುತ್ತಿದ್ದುದ್ದನ್ನೇ"** (ಕೀರ್ತನೆ 42:4) ಮತ್ತು **"ಅವೇ ನಿನ್ನ ಪರಿಶುದ್ಧ ಪರ್ವತಕ್ಕೆ ನನ್ನನ್ನು ಕರೆದುಕೊಂಡು ಹೋಗಿ"** (ಕೀರ್ತನೆ 43:3–4). ಈ ವಾಸ್ತವಾಂಶಗಳು ಪಠ್ಯಗಳೆರಡನ್ನೂ ಒಗ್ಗೂಡಿಸುತ್ತವೆ.

ಇ. ಎರಡೂ ಕೀರ್ತನೆಗಳಲ್ಲಿನ ಭಾವ ಮತ್ತು ಶೈಲಿಗಳು ಏಕ ರೀತಿಯಾಗಿವೆ.

2. –

3. ಪಲ್ಲವಿಯ ಸ್ವರ/ಮನಸ್ಥಿತಿ ಮೂರು ಚರಣಗಳ ಸ್ವರ/ಮನಸ್ಥಿತಿಗಿಂತ ಈ ರೀತಿ ಭಿನ್ನವಾಗಿದೆ: ಪಲ್ಲವಿಯು ಚರಣಗಳಿಗಿಂತ ಹೆಚ್ಚು ಆಶಾದಾಯಕವಾಗಿದೆ, ಬಹುಶಃ ಕೀರ್ತನೆಗಾರನು ದೇವರ ಸಮರ್ಥನೆಯನ್ನು ನಿರೀಕ್ಷಿಸುತ್ತಿರುವ ಮೂರನೇ ಚರಣವನ್ನು ಹೊರತುಪಡಿಸಿ.

4. ಇದೊಂದು ಭಾವನಾತ್ಮಕವಾದ ಪದ್ಯವಾಗಿದೆ. ಕೀರ್ತನೆಗಾರನು ತನ್ನ ಭಾವನೆಗಳನ್ನು ಹೇಗೆ ವ್ಯಕ್ತಪಡಿಸುತ್ತಾನೆಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ:

ಅ. ಆತನು ಭಾವನಾತ್ಮಕ ಪದಗಳನ್ನು ಬಳಸುತ್ತಾನೆ: ನನ್ನ ಮನವು ಹಾರೈಸುತ್ತದೆ, ಕಣ್ಣೀರು, ವ್ಯಥೆಪಡುವುದು.

ಆ. ಆತನು ಭಾವನಾತ್ಮಕ ಚಿತ್ರಣ ಉಪಯೋಗಿಸುತ್ತಾನೆ: ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹಾರೈಸುವಂತೆ, ಹಗಲಿರುಳು ಕಣ್ಣೀರೇ ನನಗೆ ಆಹಾರವಾಯಿತು, ನನ್ನ ಎಲುಬುಗಳೆಲ್ಲಾ ಮುರಿದ ಹಾಗಿವೆ.

ಇ. ಆತನು ಅತಿಶಯೋಕ್ತಿಗಳನ್ನು ಬಳಸುತ್ತಾನೆ: ಹಗಲಿರುಳು

ಈ. ಆತನು ತನಗೆ ತಾನೇ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾನೆ.

ಉ. ತನ್ನನ್ನು **"ನನ್ನ ಮನವೇ"** ಎಂಬುದಾಗಿ ಸಂಬೋಧಿಸಿಕೊಳ್ಳುತ್ತಾನೆ.

5. ಕೀರ್ತನೆಗಾರನು ಮೂರು ಚರಣಗಳಲ್ಲಿ (42:2, 3, 9, 10, 43:2 ನೋಡಿ) ಮತ್ತು ಪಲ್ಲವಿಯಲ್ಲಿ (42:5, 11, 43:5 ನೋಡಿ) ಹಲವಾರು ಪ್ರಶ್ನೆಗಳನ್ನು ಕೇಳುತ್ತಾನೆ. ಬಹುಶಃ ಈ ಪ್ರಶ್ನೆಗಳು ಕವಿತೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯಗಳನ್ನು ಹೊಂದಿವೆ:

ಅ. ಅವು ಕವಿತೆಯನ್ನು ಹೆಚ್ಚು ವೈಯಕ್ತಿಕ ಮತ್ತು ಎದ್ದುಕಾಣುವಂತೆ ಮಾಡುತ್ತವೆ.

ಆ. ಅವು ಕವಿಯ ವೇದನೆ ಮತ್ತು ದೇವರೊಂದಿಗೆ ಹೋರಾಡುವ ಧೈರ್ಯವನ್ನು ವ್ಯಕ್ತಪಡಿಸುವುದರಿಂದ, ಕವಿತೆಯನ್ನು ಹೆಚ್ಚು ತೀವ್ರಗೊಳಿಸುತ್ತವೆ.

ಇ. ಆದರೆ ಅವು ಕವಿಗೆ ದೇವರೊಂದಿಗಿನ ವೈಯಕ್ತಿಕ ಸಂಬಂಧ ಮತ್ತು ಅನ್ಯೋನ್ಯತೆಯನ್ನು ಸಹ ವ್ಯಕ್ತಪಡಿಸುತ್ತವೆ.

6. ಕೀರ್ತನೆ 43:1 ರಲ್ಲಿರುವ ಸಮಾನಾಂತರತೆಯನ್ನು **"ಸಂಯೋಜಿತ"** ಎಂದು ಅರ್ಥೈಸಿಕೊಳ್ಳಬಹುದು: ದೇವರ ಸಮರ್ಥನೆಯು ಎರಡು ಅಂಶಗಳನ್ನು ಒಳಗೊಂಡಿದೆ: ಮೊದಲನೇಯದಾಗಿ, ದೇವರು ಭಕ್ತಿಹೀನ ರಾಷ್ಟ್ರದ ವಿರುದ್ಧ ಕೀರ್ತನೆಗಾರನ ಪರವಾಗಿ ವಾದಿಸುತ್ತಾನೆ (ಚಿತ್ರಣವು ನ್ಯಾಯಾಲಯದ ದೃಶ್ಯವಾಗಿದೆ). ನಂತರ, ಫಲಿತಾಂಶವು ಕೀರ್ತನೆಗಾರನು ಮೋಸಗಾರ ಮತ್ತು ದುಷ್ಟ ಮನುಷ್ಯರಿಂದ ರಕ್ಷಿಸಲ್ಪಡುತ್ತಾನೆ.

ಕೀರ್ತನೆ 46 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 46 ಮೂರು ಸಮ್ಮತೀಯ ಚರಣ ಮತ್ತು ಎರಡು ಪಲ್ಲವಿಗಳಿಂದ ರಚಿಸಲ್ಪಟ್ಟಿದೆ.

   ಅ. ದೇವರು ನಮಗೆ ಇಕ್ಕಟ್ಟಿನಲ್ಲಿ ಆಶ್ರಯದುರ್ಗವಾಗಿದ್ದಾನೆ, ವಚನ 1–3

   ಆ. ದೇವರು ಯೆರೂಸಲೇಮಿನ ಸಂರಕ್ಷಕನಾಗಿದ್ದಾನೆ, ವಚನ 4–6.

   - ಪಲ್ಲವಿ, ವಚನ 7

   ಇ. ಜನಾಂಗಗಳ ಮೇಲೆ ದೇವರ ಜಯೋತ್ಸವ, ವಚನ 8–10

   - ಪಲ್ಲವಿ, ವಚನ 11

2. ಎರಡು ಬಾರಿ ಪಲ್ಲವಿ ಕಂಡುಬರುತ್ತದೆ. ಆದರೆ ಇದು ಕೀರ್ತನೆಯಲ್ಲಿ ಇನ್ನೊಂದು ಸ್ಥಳದಲ್ಲಿ ಸರಿಹೊಂದುತ್ತದೆ. ಅದು 3 ಮತ್ತು 4 ನೇ ವಚನಗಳ ನಡುವೆ ಆಗಿದೆ.

3. ವಚನ 10 ರಲ್ಲಿ ಸ್ವತಃ ದೇವರೇ ಮಾತನಾಡುತ್ತಾನೆ. ಇದನ್ನು **"ನಾನೇ ದೇವರು"** ಎಂಬ ನಾಮಪದದಿಂದ ತಿಳಿದುಕೊಳ್ಳಬಹುದು.

4. ಉಳಿದ ಕೀರ್ತನೆಯಲ್ಲಿ ಸ್ಪೀಕರ್ (ಅಥವಾ **"ಗಾಯಕರ"**, ಸೂಪರ್‌ಸ್ಕ್ರಿಪ್ಷನ್ ಇದನ್ನು **"ಹಾಡು"** ಎಂದು ಕರೆಯುತ್ತಾರೆ) ಜನರ ಗುಂಪಾಗಿರಬೇಕು. **"ನಾವು"** ಮತ್ತು **"ನಮ್ಮ"** ಬಹುವಚನ ಸರ್ವನಾಮಗಳ ಬಳಕೆಯಿಂದ ಇದನ್ನು ನೋಡಬಹುದು. ಕೀರ್ತನೆಯ ರಚನೆಯು ಇದನ್ನು ದೇವಾಲಯದ ಸೇವೆಗಳಲ್ಲಿ ಆಂಟಿಫೋನ್ ಆಗಿ ಬಳಸಲಾಗಿದೆ ಎಂದು ಸೂಚಿಸುತ್ತದೆ. ಆಂಟಿಫೋನ್ ಒಂದು ಹಾಡು, ಅಲ್ಲಿ ಒಬ್ಬ ನಾಯಕ (ಅಥವಾ ಗಾಯಕರ) ಮತ್ತು ಸಭೆಯು ದೇವಾಲಯದ (ಅಥವಾ ಚರ್ಚ್) ಸೇವೆಯ ಪ್ರಾರ್ಥನೆಯಲ್ಲಿ ಹಾಡುವ ತಿರುವುಗಳನ್ನು ಪಡೆಯುತ್ತದೆ. ವ್ಯಾಖ್ಯಾನುಕಾರರು ಈ ರೀತಿಯಲ್ಲಿ ಅದನ್ನು ಸೂಚಿಸಿದ್ದಾರೆ.

   ಅ. ಇಡೀ ಸಭೆ ಹಾಡಿದೆ, ವಚನ 1–3. ಇದು ಹಾಡಿನ ಮೊದಲ ಚರಣ. ಬಹುಶಃ ಇದನ್ನು ಪಲ್ಲವಿ (ಸತ್ಯವೇದದಲ್ಲಿ ಕಂಡುಬರುವುದಿಲ್ಲ) ಅನುಸರಿಸಲಾಗಿದೆ.

   ಆ. ಸೇವೆಯ ಉಸ್ತುವಾರಿ ಪಾದ್ರಿ ಹಾಡಿದ್ದಾರೆ, ವಚನ 4–6. ಇದು ಹಾಡಿನ ಎರಡನೇ ಚರಣ

   ಇ. ಇಡೀ ಸಭೆಯು ಪ್ರತಿಕ್ರಿಯೆಯನ್ನು ಹಾಡುತ್ತದೆ, ಪಲ್ಲವಿ, ವಚನ 7.

   ಈ. ಸೇವೆಯ ಉಸ್ತುವಾರಿ ಪ್ರೀಸ್ಟ್ ಸಿಂಗ್ಸ್, ವಚನ 8–10 ಹಾಡು. ಇದು ಹಾಡಿನ ಎರಡನೇ ಚರಣ. ಈ ಚರಣವು **"ದೇವರ ಪದ"** (ವಚನ 10) ದೊಂದಿಗೆ ಕೊನೆಗೊಳ್ಳುತ್ತದೆ.

   ಉ. ಇಡೀ ಸಭೆಯು ಪ್ರತಿಕ್ರಿಯೆಯನ್ನು ಹಾಡುತ್ತದೆ, ಪಲ್ಲವಿ, ವಚನ 11.

5. ವಚನ 1–3 ರಲ್ಲಿನ ಪಠ್ಯವನ್ನು ಅಕ್ಷರಶಃವಾಗಿ ತೆಗೆದುಕೊಳ್ಳುವುದಾದರೆ ಕೀರ್ತನೆಗಾರನು ಭೂಕಂಪ ಮತ್ತು ಪ್ರವಾಹದಿಂದ ಭಯಭೀತನಾಗಿದ್ದನು. ಆದರೆ ಈ ವಚನಗಳನ್ನು ಅಲಂಕಾರಿಕವಾಗಿ ಸಹ ಅರ್ಥೈಸಿಕೊಳ್ಳಲು ಸಾಧ್ಯತೆಯಿದೆ. ಆ ರೀತಿಯಲ್ಲಾದರೆ ಅವರು ವೈರಿಗಳ ಆಕ್ರಮಣದ ಬಗ್ಗೆ ಭಯಪಟ್ಟಿರಬಹುದು.

6. ವಚನ 4–5 ರಲ್ಲಿ ಯೆರೂಸಲೇಮು ಈ ರೀತಿ ವರ್ಣಿಸಲ್ಪಟ್ಟಿದೆ:

   ಅ. ಏದೆನ್ ತೋಟ ಅಥವಾ ಪರಲೋಕದಂತೆ, ದೇಶ ಮತ್ತು ಅದರ ಜನರಿಗೆ ಜೀವಕೊಡಲು ಸಾಕಾದಷ್ಟು ನೀರು ಅಲ್ಲಿದೆ.

   ಆ. ದೇವನಗರವಾದ ಅಲ್ಲಿಯೇ ದೇವರು **"ವಾಸಿಸುತ್ತಾನೆ"**, ಇಲ್ಲಿಯೇ ದೇವರು ತನ್ನ ಜನರಿಗೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ ಮತ್ತು ಇಲ್ಲಿ ಅವರು ಆತನೊಂದಿಗೆ ಅನ್ಯೋನ್ಯತೆಯನ್ನು ಪಡೆಯಬಹುದು.

   ಇ. ಇದು ಒಂದು ಸುಭದ್ರ (ಸುರಕ್ಷತೆ) ಸ್ಥಳವಾಗಿದೆ. ಯಾಕೆಂದರೆ ಇದರಲ್ಲಿ ದೇವರಿದ್ದಾನೆ. ಇದು ಬಿದ್ದು ಹೋಗುವುದಿಲ್ಲ. ಹಾಗಾಗಿ ದೇವಜನರು ಇಲ್ಲಿ ಸುಭದ್ರವಾಗಿ ಮತ್ತು ಸುರಕ್ಷಿತವಾಗಿರಬಹುದಾಗಿದೆ.

ಈ. ಇದು ಬಹು ಕಷ್ಟದ ಸಮಯಗಳಲ್ಲಿ ಸಹ ದೇವಜನರು ತಮ್ಮ ಅಗತ್ಯತೆಗಳೊಂದಿಗೆ ಬಂದು ದೇವರನ್ನು ಸಂಧಿಸಬಹುದಾದ ಸ್ಥಳವಾಗಿದೆ.

7. ವಚನ 8–9 ರಲ್ಲಿ ದೇವರ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ದೇವರು ಕ್ರಿಯಾಶೀಲನಾಗಿದ್ದು, ಬಲವಾದ ರೀತಿಯಲ್ಲಿ ಕಾರ್ಯಮಾಡುತ್ತಾನೆ.

   ಆ. ದೇವರ ಬಲವಾದ ಮಾರ್ಗಗಳು ಜನಾಂಗಗಳನ್ನು ಕಳವಳಗೊಳಿಸುತ್ತವೆ. ಇದು ಎಲ್ಲಾ ಭಾಷಾಂತರಗಳಲ್ಲಿ ಕಂಡುಬರುವುದಿಲ್ಲ.

   ಇ. ದೇವರು ಎಲ್ಲಾ ಜನಾಂಗಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ.

   ಉ. ದೇವರು ಎಲ್ಲಾ ಯುದ್ಧಾಯುಧಗಳನ್ನು ಮರಿದು ಹಾಕಿ, ಶಾಂತಿಯನ್ನು ಸಾಧಿಸಬಲ್ಲವನಾಗಿದ್ದಾನೆ.

8. ವಚನ 10 ರಲ್ಲಿ ತನ್ನ ಬಗ್ಗೆ ದೇವರು ಈ ಸಂಗತಿಗಳನ್ನು ಹೇಳುತ್ತಾನೆ:

   ಅ. ದೇವರು ಎಲ್ಲವನ್ನೂ ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ, ಆತನಿಗೆ ವಿರೋಧವಾಗಿ ಯಾರು ಮಾತನಾಡುವರು? ಆತನು "ಸುಮ್ಮನಿರಿ" ಎನ್ನುವಾಗ ನಾವು ಕೇಳಲೇಬೇಕು.

   ಆ. ದೇವರು ನಿಜವಾಗಲು ದೇವರಾಗಿದ್ದಾನೆ. ಆತನಲ್ಲದೆ ಬೇರೆ ದೇವರಿಲ್ಲ.

   ಇ. ಒಂದು ದಿನ ಬರುತ್ತದೆ, ಆಗ ಎಲ್ಲಾ ಜನಾಂಗಗಳು, ಇಡೀ ಜಗತ್ತು ದೇವರ ಸಾರ್ವಭೌಮತೆಯನ್ನು ಅರಿತುಕೊಳ್ಳುವರು.

ಕೀರ್ತನೆ 46 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –

2. ವಚನ 8 "ಬನ್ನಿರಿ ... ನೋಡಿರಿ" ಎಂಬ ಆಹ್ವಾನದೊಂದಿಗೆ ಪ್ರಾರಂಭವಾಗುತ್ತದೆ:

   ಅ. ಕೀರ್ತನೆಗಾರನು ದೇವರ ವಿಜಯವನ್ನು ನೋಡಲು ದೇವಜನರನ್ನು ಆಹ್ವಾನಿಸುತ್ತಾನೆ.

   ಆ. ಆದರೆ ಆತನನ್ನು ಮತ್ತು ಆತನ ಸಾರ್ವಭೌಮತೆಯನ್ನು ತಿಳಿದುಕೊಳ್ಳಲು ಸಹ ಅವರು ಆಹ್ವಾನಿಸಲ್ಪಟ್ಟಿದ್ದಾರೆ.

3. ಕೀರ್ತನೆಗಾರನು ವಚನ 10 ರಲ್ಲಿ "ಬಿಡಿರಿ, ನಾನೇ ದೇವರು" ಎಂದು ದೇವರು ಹೇಳಿರುವುದನ್ನು ಹೇಳುತ್ತಾನೆ. ಆತನು ಯಾರಿಗೆ ಹೇಳುತ್ತಿದ್ದಾನೆಂಬುದನ್ನು ಸತ್ಯವೇದ ವಿಶ್ಲೇಷಕರು ಒಪ್ಪುವುದಿಲ್ಲ.

   ಅ. ದೇವರು ಯುದ್ಧನಿರತ ದೇಶ (ಜನಾಂಗ) ಅಥವಾ ಯೆರೂಸಲೇಮನ್ನು ಆಕ್ರಮಿಸುವ ವೈರಿರಾಷ್ಟ್ರಗಳನ್ನು ಸಂಬೋಧಿಸುತ್ತಿದ್ದಾನೆಂದು ಕೆಲವರು ಹೇಳುತ್ತಾರೆ.

   ಆ. ದೇವರು ಇಸ್ರಾಯೇಲ್ಯರನ್ನು ಸಂಬೋಧಿಸುತ್ತಿದ್ದಾನೆಂದು ಕೆಲವರು ಹೇಳುತ್ತಾರೆ. ಈ ಎರಡನೇ ವಾಕ್ಯಭಾಗವನ್ನು ನಾನು ಇಷ್ಟಪಡುತ್ತೇನೆ. ಕೀರ್ತನೆ 46 ದೇವಸ್ಥಾನದಲ್ಲಿ ಆರಾಧನೆಯ ವೇಳೆ ಉಪಯೋಗಿಸಲ್ಪಟ್ಟ ಪದ್ಯದಂತೆ ತೋರುತ್ತದೆ. ಹಾಗಾಗಿ ಇದು ಪ್ರಾಥಮಿಕವಾಗಿ ಆರಾಧಿಸುವ ಜನಸಮೂಹಕ್ಕೆ ಇರುವಾತನು, ಎಲ್ಲವನ್ನು ಮಾಡಲು ಶಕ್ತನಾಗಿರುವ "ಸರ್ವಶಕ್ತನು/ಸರ್ವಾಧಿಪತಿ" ಯಾದ ದೇವರ ಬಗ್ಗೆ ತಿಳಿಯಪಡಿಸುವುದಕ್ಕೆ ಹೆಚ್ಚು ಗಮನ ಕೊಡುತ್ತದೆ. ಆತನು ಅವರ ಆಶ್ರಯದುರ್ಗವು, ಬಲವು ಮತ್ತು ಇಕ್ಕಟ್ಟಿನಲ್ಲಿ ವಿಶೇಷ ಸಹಾಯಕನೂ ಆಗಿದ್ದಾನೆ (ವಚನ 1). ಆತನು ಇಸ್ರಾಯೇಲ್ ದೇಶ ಮತ್ತು ಅದರ ಪರಿಶುದ್ಧ ನಗರದ ಸಂರಕ್ಷಕನಾಗಿದ್ದಾನೆ (ವಚನ 5). ಆತನು ಎಲ್ಲಾ ಜನಾಂಗಗಳನ್ನು ನಿಯಂತ್ರಿಸುತ್ತಾನೆ ಹಾಗಾಗಿ ದೇವಜನರು ಸುಮ್ಮನಿರಬೇಕಿದೆ. ಚಿಂತಿಸುವುದನ್ನು ಬಿಟ್ಟು ಆತನ ಬಲ ಮತ್ತು ಸಾರ್ವಭೌಮತೆಯನ್ನು ತಿಳಿದುಕೊಳ್ಳಬೇಕಿದೆ.

4. ಈ ಕೀರ್ತನೆ ಯೆರೂಸಲೇಮಿನ ಜನರಿಗೆ ನೀಡುತ್ತದೆ ಎಂಬ ಭವಿಷ್ಯದ ಭರವಸೆ – ಮತ್ತು ಇಂದು ಅವರ ಜನರು ಯಾರು – ಅಂತಿಮ ಗೆಲವು ದೇವರಿಗೆ ಸೇರಿದೆ. ಈ ಜಗತ್ತಿನಲ್ಲಿ ನಾವು ಭೂಕಂಪಗಳು, ಪ್ರವಾಹಗಳು ಮತ್ತು ಇತರ ನೈಸರ್ಗಿಕ ವಿಪತ್ತುಗಳನ್ನು ಅನುಭವಿಸಬಹುದು. ಅಥವಾ ನಾವು ಎಲ್ಲಾ ರೀತಿಯ ಶತ್ರುಗಳು, ವೈಯಕ್ತಿಕ ಶತ್ರುಗಳು ಮತ್ತು ದೇವರ ರಾಜ್ಯದ ಶತ್ರುಗಳಿಂದ ನಿರಂತರ ದಾಳಿಗಳನ್ನು ಎದುರಿಸಬಹುದು. ಆದರೆ ಅಂತಿಮವಾಗಿ ಸರ್ವಶಕ್ತ ದೇವರು ಸರ್ವೋಚ್ಚ ಆಳ್ವಿಕೆ ಮಾಡುತ್ತಾನೆ. ಅಂತಿಮವಾಗಿ ಅವರನ್ನು ಸಾರ್ವತ್ರಿಕವಾಗಿ ಅಂಗೀಕರಿಸಲಾಗುತ್ತದೆ ಮತ್ತು ಉನ್ನತೀಕರಿಸಲಾಗುತ್ತದೆ. ದೇವರ ಜನರಂತೆ ನಾವು ಸಂತೋಷಪಡಬಹುದು ಎಂಬ ಭವಿಷ್ಯದ ಭರವಸೆ ಅದು.

5. ಈ ಕೀರ್ತನೆಯಲ್ಲಿನ ರೂಪಾಲಂಕಾರ ಮತ್ತು ಮಾನವೀಕರಣಗಳು:

ಅ. 1–3 ರ ವರೆಗಿನ ವಚನಗಳು ಅಲಂಕಾರಿಕವಾಗಿವೆ.

ಆ. ವಚನ 4 ರಲ್ಲಿನ ಯೆರೂಸಲೇಮಿನ ವರ್ಣನೆ ಸಹ ಅಲಂಕಾರಿಕವಾಗಿದೆ.

ಇ. ದೇವರು ಪರಿಶುದ್ಧ ಸ್ಥಳದಲ್ಲಿ ವಾಸಿಸುತ್ತಾನೆ. ದೇವರು ಅದರೊಳಗಿದ್ದಾನೆ (ವಚನ 4–5): ದೇವರನ್ನು ಪಟ್ಟಣದಲ್ಲಿ ವಾಸಿಸುವ ಒಬ್ಬ ವ್ಯಕ್ತಿಯೇನೋ ಎಂಬಂತೆ ವರ್ಣಿಸಲಾಗಿದೆ (ಮಾನವೀಕರಣ).

ಈ. ಆತನು ಗರ್ಜಿಸಲು (ವಚನ 6): ದೇವರನ್ನು ತನ್ನ ಧ್ವನಿಯನ್ನೆತ್ತಿ ಭೂಮಂಡಲಕ್ಕೆ ಮಾತಾಡುವ ವ್ಯಕ್ತಿಯೆಂಬಂತೆ ವರ್ಣಿಸಲಾಗಿದೆ.

ಉ. ಆಶ್ರಯದುರ್ಗವಾಗಿದ್ದಾನೆ (ವಚನ 7, 11): ಭದ್ರತೆ, ಸಂರಕ್ಷಣತೆ ಮತ್ತು ಬಲಕ್ಕಿರುವ ರೂಪಾಲಂಕಾರ.

ಊ. ಅವನು ಬಿಲ್ಲು ಮುರಿದು ಈಟಿಯನ್ನು ಹಂಚಿಕೊಳ್ಳುತ್ತಾನೆ (ವಚನ 9): ದೇವರನ್ನು ಬಲವಾದ ಯೋಧ (ಮಾನವೀಕರಣ) ಎಂದು ಚಿತ್ರಿಸಲಾಗಿದೆ. ಬಿಲ್ಲು ಮತ್ತು ಈಟಿ ಯುದ್ಧವನ್ನು ಪ್ರತಿನಿಧಿಸುತ್ತದೆ (ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ). ಇಡೀ ಅಭಿವ್ಯಕ್ತಿ ರೂಪಾಲಂಕಾರವಾಗಿದೆ: ದೇವರು ಮಾನವ ಯುದ್ಧಗಳನ್ನು ನಿಲ್ಲಿಸಿ ಶಾಂತಿಯನ್ನು ತರುತ್ತಾನೆ. 9ನೇ ವಚನದ ಎರಡನೇ ಭಾಗವು ವಚನದ ಮೊದಲ ಮೂರನೇಯ ಭಾಗಕ್ಕೆ ಸಮಾನಾರ್ಥಕವಾಗಿದೆ ಎಂಬುದನ್ನು ಗಮನಿಸಿ.

ಋ. ಅವನು ಗುರಾಣಿಗಳನ್ನು/ರಥಗಳನ್ನು ಬೆಂಕಿಯೊಂದಿಗೆ ಸುಡುತ್ತಾನೆ (ವಚನ9): ಹಿಂದಿನ ಬಿಂದುವನ್ನು ನೋಡಿ.

ಕೀರ್ತನೆ 51 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 51 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ದಾವೀದನ ಪಾಪದರಿಕೆ ಮತ್ತು ಕ್ಷಮಾಪಣೆಗಾಗಿ ಪ್ರಾರ್ಥನೆ, ವಚನ 1–12

   ಆ. ದಾವೀದನು ತನ್ನ ಪಾಪಗಳ ಕ್ಷಮಾಪಣೆಯ ನಂತರ ಆಗುವುದನ್ನು ನೋಡಲು ಅಪೇಕ್ಷಿಸುವುದು, ವಚನ 13–19

   ಎರಡು ಭಾಗಗಳ ರಚನೆಯು ಕೀರ್ತನೆಯ ದೊಡ್ಡ ಚಿತ್ರ ಮತ್ತು ಅದರ ವಿಷಯಗಳನ್ನು ತೋರಿಸುತ್ತದೆ. ಆದಾಗ್ಯೂ, ಹೆಚ್ಚಿನ ವ್ಯಾಖ್ಯಾನಕಾರರು ಅದನ್ನು ಸಣ್ಣ ಘಟಕಗಳಾಗಿ ವಿಂಗಡಿಸುತ್ತಾರೆ – ಆದರೆ ಇದನ್ನು ಹೇಗೆ ಮಾಡಬೇಕೆಂದು ಅವರು ಒಪ್ಪುವುದಿಲ್ಲ.

2. ದಾವೀದನು ಈ ಕೀರ್ತನೆಯುದ್ದಕ್ಕೂ ದೇವರನ್ನು ಸಂಬೋಧಿಸುತ್ತಾನೆ. ಹಾಗಾಗಿ ಇದನ್ನು ದಾವೀದನು ದೇವರಿಗೆ ಮಾಡುವ ಒಂದು ವೈಯಕ್ತಿಕ ಪ್ರಾರ್ಥನೆಯೆಂಬುದಾಗಿ ಅರ್ಥೈಸಿಕೊಳ್ಳಬಹುದು. ಆದರೆ ಈ ವೈಯಕ್ತಿಕ ಪ್ರಾರ್ಥನೆಯನ್ನು ಯೆರೂಸಲೇಮಿನ ದೇವಾಲಯದ ಆರಾಧನೆಯಲ್ಲಿ ಮತ್ತು ದೇವಜನರ ಅನುಭವ ಮತ್ತು ಮನೋಭಾವನೆಗಳನ್ನು ವ್ಯಕ್ತಪಡಿಸಲು ಕ್ರೈಸ್ತೀಯ ಸಭೆಯ ಸಂಪ್ರದಾಯದಲ್ಲಿ ಸಹ ಬಳಸಲಾಗುತ್ತಿತ್ತು.

3. ಈ ಕೀರ್ತನೆಯಲ್ಲಿನ ದಾವೀದನ ಮನವಿಗಳ ಪಟ್ಟಿ ಇಂತಿದೆ:

   ಅ. ದಾವೀದನು ತನ್ನನ್ನು ಕರುಣಿಸಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ, (ವಚನ 1).

   ಆ. ದಾವೀದನು ತನ್ನ ಪಾಪವನ್ನೆಲ್ಲಾ ಕ್ಷಮಿಸಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ, (ವಚನ 1).

   ಇ. ದಾವೀದನು ತನ್ನ ಪಾಪದಿಂದಾದ ಅಶುದ್ಧತ್ವವನ್ನು ತೆಗೆದುಹಾಕಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ, (ವಚನ 7, 9).

   ಈ. ದಾವೀದನು ಪುನಃ ತನ್ನನ್ನು ಸಂತೋಷಪಡಿಸಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ, (ವಚನ 8).

   ಉ. ದಾವೀದನು ತನ್ನನ್ನು ಸಂಪೂರ್ಣವಾಗಿ ನೂತನಪಡಿಸಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ, (ವಚನ 10, 11). ಆತನಿಗೆ ಒಂದು ನೂತನ ಹೃದಯದ ಅಗತ್ಯತೆಯಿದೆ.

   ಊ. ದಾವೀದನು ಯೆರೂಸಲೇಮ್ ಪಟ್ಟಣವನ್ನು ನಿಜವಾದ ಆರಾಧನೆಯ ಸ್ಥಳವನ್ನಾಗಿ ಮರುಸ್ಥಾಪಿಸಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ (ವಚನ 18–19). ಯೆರೂಸಲೇಮ್ ದೇವಾಲಯ ಆಗ ಕಟ್ಟಲ್ಪಟ್ಟಿರಲಿಲ್ಲ. ದಾವೀದನು ದೇವದರ್ಶನ ಗುಡಾರವನ್ನು ಸೂಚಿಸಿ ಹೇಳಿರಬಹುದು.

4. ದಾವೀದನು ವಚನ 3–8 ರಲ್ಲಿ ಪಾಪದ ಬಗ್ಗೆ ಈ ಸಂಗತಿಗಳನ್ನು ಪ್ರಕಟಪಡಿಸುತ್ತಾನೆ:

   ಅ. ದಾವೀದನು ಸ್ವತಃ ತನ್ನ ಪಾಪದ ಬಗ್ಗೆ ಜಾಗೃತಿಯುಳ್ಳವನಾಗಿದ್ದಾನೆ (ವಚನ 3).

   ಆ. ದಾವೀದನು ತನ್ನ ಪಾಪದ ಬಗ್ಗೆ ಆಳವಾಗಿ ಅರಿವುಳ್ಳವನಾಗಿದ್ದಾನೆ (ವಚನ 3).

   ಇ. ದಾವೀದನು ಪಾಪವು ದೇವರಿಗೆ ಕಡು ವಿರೋಧಿಯಾಗಿದೆಯೆಂಬುದನ್ನು ತಿಳಿದುಕೊಳ್ಳುತ್ತಾನೆ (ವಚನ 4).

   ಈ. ದಾವೀದನು ಪ್ರಾರಂಭದಿಂದಲೂ ಪಾಪವು ಮನುಷ್ಯ ಜೀವಿತದ ಭಾಗವಾಗಿದೆಯೆಂಬುದನ್ನು ಮನವರಿಕೆಮಾಡಿಕೊಳ್ಳುತ್ತಾನೆ (ವಚನ 5).

   ಉ. ದಾವೀದನಿಗೆ ಪಾಪಗಳು ಬಿದ್ದುಹೋದ (ಪಾಪಮಯ) ವ್ಯಕ್ತಿತ್ವದಿಂದ ಅಂದರೆ ಹೃದಯದಿಂದ ಹುಟ್ಟಿಕೊಳ್ಳುತ್ತವೆಂಬುದು ಗೊತ್ತು (ವಚನ 6).

   ಊ. ದಾವೀದನು ಜ್ಞಾನ ಮತ್ತು ನೀತಿವಂತಿಕೆಗಳು ದೇವರಿಂದ ಬರುತ್ತವೆಂಬುದನ್ನು ತಿಳಿದುಕೊಳ್ಳುತ್ತಾನೆ (ವಚನ 6) ಮತ್ತು ಕೇವಲ ದೇವರು ಮಾತ್ರ ಕ್ಷಮೆಯನ್ನು ಕೊಡುವವನಾಗಿದ್ದಾನೆ (ವಚನ 7).

   ಋ. ಕಡೆಯದಾಗಿ, ನಮ್ಮ ಪಾಪಗಳು ಕ್ಷಮಿಸಲ್ಪಡದಿದ್ದರೆ ನಮ್ಮ ಜೀವಿತದಲ್ಲಿ ನಿಜವಾದ ಸಂತೋಷವಿರಲು ಸಾಧ್ಯವಿಲ್ಲವೆಂದು ದಾವೀದನಿಗೆ ತಿಳಿದಿದೆ (ವಚನ 8).

5. ಕೀರ್ತನೆ 21:17 ಮತ್ತು 19 ರ ಪ್ರಕಾರ ತನ್ನ ಜನರು **"ದೈಹಿಕ"** ಯಜ್ಞಕ್ಕಿಂತ **"ಆತ್ಮೀಕ"** ಯಜ್ಞಗಳನ್ನು ಸಮರ್ಪಿಸಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಹಾಗಾಗಿ ನಾವು ಸಭೆಗೆ ಬಹಳಷ್ಟು ಹಣವನ್ನು ಕೊಡುವುದು, ಅಥವಾ ಅನೇಕ ಆರಾಧನೆಯ ಹಾಡುಗಳನ್ನು ಹಾಡುವುದಕ್ಕಿಂತ ದೇವರ ಮುಂದೆ ನಮ್ಮ ಹೃದಯಗಳು ಸರಿಯಾಗಿರುವುದು ಅತೀ ಪ್ರಾಮುಖ್ಯವಾಗಿದೆ. ಅದಕ್ಕಿಂತ ಮೊದಲನೇಯದಾಗಿ ನಾವು ನಮ್ಮ ಪಾಪಗಳನ್ನು ಆತನ ಮುಂದೆ ಒಪ್ಪಿಕೊಂಡು ಕ್ಷಮಾಪಣೆಯನ್ನು ಹೊಂದಿ, ಅನಂತರ ನಮ್ಮ ಹಣ ಕೊಡಬಹುದು ಮತ್ತು ಹಾಡನ್ನು ಹಾಡಬಹುದು.

ಕೀರ್ತನೆ 51 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಹಳೇ ಒಡಂಬಡಿಕೆಯ ಕಾಲದಲ್ಲಿ ಈ ಕೀರ್ತನೆಯನ್ನು ಎರಡು ರೀತಿಯಲ್ಲಿ ಉಪಯೋಗಿಸಲಾಗುತ್ತಿತ್ತು ಎಂದು ನಾನೆಣಿಸುತ್ತೇನೆ:

   ಅ. ಒಂದು ವೈಯಕ್ತಿಕ ಪ್ರಾರ್ಥನೆಯಾಗಿ: ಮೂಲತಃ ದಾವೀದನು ಈ ಕೀರ್ತನೆಯನ್ನು ಪಾಪಕ್ಕಾಗಿ ವೈಯಕ್ತಿಕ ಅರಿಕೆಯಾಗಿ ಮತ್ತು ಕ್ಷಮಾಪಣೆಗಾಗಿ ದೇವರಿಗೆ ಮಾಡುವ ಒಂದು ಪ್ರಾರ್ಥನೆಯಾಗಿ ಬರೆದನು. ಇತಿಹಾಸದುದ್ದಕ್ಕೂ, ಅನೇಕ ದೇವಭಕ್ತರು ದಾವೀದನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ ಮತ್ತು ಆತನ ಮಾತನ್ನು ತಮ್ಮ ಸ್ವಂತವೆಂಬಂತೆ ಉಪಯೋಗಿಸುತ್ತಾರೆ.

   ಆ. ದೇವಾಲಯದ ಆರಾಧನೆಯ ಭಾಗವಾಗಿ: ಹಳೇ ಒಡಂಬಡಿಕೆಯ ಕಾಲದಲ್ಲಿ ದೇವಾಲಯದಲ್ಲಿ ಆರಾಧನೆಯನ್ನು ಒಟ್ಟಾಗಿ ಮಾಡಲಾಗುತ್ತಿತ್ತು. ಆದರೆ ಅದರಲ್ಲಿ ಪಾಲ್ಗೊಳ್ಳುವ ಅನೇಕರು ಪಾಪ ಮಾಡಿದವರಾಗಿದ್ದು, ದೇವರ ಕ್ಷಮಾಪಣೆಯ ಅವಶ್ಯಕತೆಯಲ್ಲಿದ್ದವರಾಗಿದ್ದರು. ಹಾಗಾಗಿ ಅಂತಹ ಜನರು ಒಟ್ಟಾಗಿ ಮಾಡುವ ಆರಾಧನೆಯಲ್ಲಿ ಸಹ ಅವರು ಸುಲಭವಾಗಿ ದಾವೀದನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ಹಾಗೆ ವ್ಯಕ್ತಿಗತ ಸ್ತುತಿಸ್ತೋತ್ರ ಮತ್ತು ಪ್ರಲಾಪಗಳನ್ನು ದೇವಾಲಯದಲ್ಲಿ ಬಳಸಬಹುದಿತ್ತು. ದೇವಾಲಯದ ನಾಶನದ ನಂತರ ಈ ರೀತಿಯ ಪಠ್ಯಗಳನ್ನು ನಾವು ಈ ದಿನ ಹೊಂದಿರುವ ಕೀರ್ತನೆ ಪುಸ್ತಕಕ್ಕೆ ಸೇರಿಸಿ ತಿದ್ದುಪಡಿ ಮಾಡಲಾಯಿತು. ಈ ಅಂತಿಮ ಸಂಗ್ರಹವನ್ನು ಪ್ರಾಥಮಿಕವಾಗಿ ಮನೆಗಳಲ್ಲಿ ಮತ್ತು ಯೆಹೂದ್ಯರು ಸಭಾಮಂದಿರಗಳಲ್ಲಿ **"ಒಂದು ಪ್ರಾರ್ಥನೆಯ ಪುಸ್ತಕ"**ವಾಗಿ ಬಳಸಲಾಯಿತು.

2. 1–2 ನೇ ವಚನಗಳಲ್ಲಿನ ಶಬ್ದಕೋಶಗಳಲ್ಲಿ ಸಮಾನಾರ್ಥಕ ಪದಗಳೇ ತುಂಬಿವೆ:

   ಅ. ದೇವರ ಗುಣಲಕ್ಷಣವನ್ನು ವರ್ಣಿಸುವ ಸಮಾನಾರ್ಥಕ ಪದಗಳು: ಕರುಣೆ, ಪ್ರೀತಿ.

   ಆ. ದೇವರ ಕ್ಷಮಾಪಣೆಯನ್ನು ವರ್ಣಿಸುವ ಸಮಾನಾರ್ಥಕ ಪದಗಳು: ಆತನು ದ್ರೋಹವನ್ನು ಅಳಿಸುತ್ತಾನೆ, ನಮ್ಮ ಪಾಪವನ್ನು ತೊಳೆಯುತ್ತಾನೆ ಮತ್ತು ನಮ್ಮ ದೋಷವನ್ನು ಪರಿಹರಿಸುತ್ತಾನೆ.

3. **ಸತ್ಯವೇದವು** ಮತ್ತು **ಪವಿತ್ರ ಗ್ರಂಥ** ಎಂಬ ಎರಡು ಕನ್ನಡ ಭಾಷಾಂತರಗಳು 5ನೇ ವಚನವನ್ನು ವಿಭಿನ್ನವಾಗಿ ಭಾಷಾಂತರಿಸಿವೆ. **ಪವಿತ್ರ ಗ್ರಂಥ**ದಲ್ಲಿನ ದ್ವಿತೀಯಾರ್ಧವು ದಾರಿತಪ್ಪಿಸುವಂತಿರಬಹುದು. ಸತ್ಯವೇದವು (ಕೆಲವು ಪೂರ್ವ ತತ್ವಚಿಂತನೆಗಳಿಗೆ ವ್ಯತಿರಿಕ್ತವಾಗಿ) ಎಲ್ಲಾ ಮಾನವ ಲೈಂಗಿಕ ಚಟುವಟಿಕೆಗಳು ಪಾಪಪೂರ್ಣವೆಂದು ಕಲಿಸುವುದಿಲ್ಲ. ದಾವೀದನು ಹೇಳುತ್ತಿರುವ ಅಂಶವೆಂದರೆ ಪಾಪವು ಹುಟ್ಟಿನಿಂದ ಮರಣದವರೆಗೆ ಮಾನವ ಜೀವನದ ಭಾಗವಾಗಿದೆ. ದೇವರು ಮಾತ್ರ ನಮ್ಮ ಪಾಪವನ್ನು ನಿಭಾಯಿಸಬಹುದು (ಅದನ್ನು ಕ್ಷಮಿಸಿ, ಅದನ್ನು ಅಳಿಸಿಹಾಕಿ, ಅದರಿಂದ ನಮ್ಮನ್ನು ಶುದ್ಧೀಕರಿಸಿ).

4. ಈ ಕೀರ್ತನೆಯ ಮೊದಲ ಭಾಗ (ವಚನ 1–12) ಮತ್ತು ಅದರ ಎರಡನೇ ಭಾಗ (ವಚನ 13–19) ನಡುವೆ ತಾರ್ಕಿಕ ಸಂಪರ್ಕವಿದೆ. ದಾವೀದನು ವೈಯಕ್ತಿಕ ಟಿಪ್ಪಣಿಯೊಂದಿಗೆ ಪ್ರಾರಂಭಿಸುತ್ತಾನೆ, ದೇವರು ಅವನನ್ನು ಕ್ಷಮಿಸಲು ಮತ್ತು ಅವನನ್ನು ಪುನಃಸ್ಥಾಪಿಸಲು ಕೇಳುತ್ತಾನೆ. ಕೀರ್ತನೆಯ ಎರಡನೇ ಭಾಗದಲ್ಲಿ ದೇವರ ಕ್ಷಮೆ ಮತ್ತು ಪುನಃಸ್ಥಾಪನೆಯ ಕೆಲಸದ ನಾಲ್ಕು ಪರಿಣಾಮಗಳನ್ನು ನಾವು ಕಾಣಬಹುದು:

   ಅ. ಸಾಕ್ಷ್ಯ: ದಾವೀದನ ಜೀವನವು ತಪ್ಪೊಪ್ಪಿಕೊಳ್ಳದ ಪಾಪದ ದುಃಖದಿಂದ ಮೋಕ್ಷದ ಸಂತೋಷಕ್ಕೆ ತಿರುಗಿತು. ಈ ರೂಪಾಂತರವು ದೇವರ ಕರುಣೆ, ಪ್ರೀತಿ ಮತ್ತು ಕ್ಷಮೆಗೆ ಸಾಕ್ಷಿಯಾಗಿದೆ. ದೇವರ ಜನರು ದೇವರ ಕ್ಷಮೆಯನ್ನು ಪಡೆಯಲು ಮತ್ತು ದೇವರ ಕ್ಷಮೆಯಲ್ಲಿ ಬದುಕಲು ಎಷ್ಟು ಮಹತ್ವದ್ದಾಗಿದೆ ಎಂಬುದಕ್ಕೂ ಇದು ಸಾಕ್ಷಿಯಾಗಿದೆ.

   ಆ. ಸಾಕ್ಷಿ: ದಾವೀದನ ಬದಲಾದ ಜೀವನವು ದೇವರ ಜನರಿಗೆ ಅವನ ನೀತಿಯ ಬಗ್ಗೆ ಸಾಕ್ಷಿ ಹೇಳಲು ಮತ್ತು ಅವರಿಗೆ ದೇವರ ಮಾರ್ಗಗಳನ್ನು ಕಲಿಸಲು ಅವನಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ.

ಇ. ನಿಜವಾದ ಆರಾಧನೆ: ದಾವೀದನ ಬದಲಾದ ಜೀವನವು ದೇವರು ಯಾವ ರೀತಿಯ ಆರಾಧನೆಯನ್ನು ಬಯಸುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವನಿಗೆ ಸಹಾಯ ಮಾಡುತ್ತದೆ. ನಿಜವಾದ ಆರಾಧನೆಯು ರೂಪಾಂತರಗೊಂಡ ಹೃದಯಗಳಿಂದ ಮಾತ್ರ ಬರಬಹುದು (ಕೀರ್ತನೆ 39 ಅನ್ನು ಹೋಲಿಸಿ).

ಈ. ನಿಜವಾದ ಆರಾಧನೆಯು ಯೆರೂಸಲೇಮ್ ಅನ್ನು ಆಶೀರ್ವದಿಸುತ್ತದೆ: ಯೆರೂಸಲೇಮ್ ಗುಡಾರದ ತ್ಯಾಗದ ಆರಾಧನೆಯು ನಿಜವಾದ ಆರಾಧನೆಯ ಉತ್ಸಾಹದಲ್ಲಿ **"ನೀತಿಯ ತ್ಯಾಗಗಳನ್ನು"** ಒಳಗೊಂಡಿರುವಾಗ, ದೇವರು ಯೆರೂಸಲೇಮ್ ಅನ್ನು ಆಶೀರ್ವದಿಸುತ್ತಾನೆ. ಈ ಸತ್ಯವನ್ನು ಕ್ರೈಸ್ತ ಸಭೆಗೆ ಸಹ ಅನ್ವಯಿಸಬಹುದು (ಕೆಳಗಿನ ಅಂಶವನ್ನು ನೋಡಿ).

5. ಯೆರೂಸಲೇಮ್ ಬಗ್ಗೆ ದಾವೀದನ ಅಂತಿಮ ವಿನಂತಿ. ದೇವರು ಚೀಯೋನನ್ನು ಆಶೀರ್ವದಿಸಿ ಅದನ್ನು ನಿಜವಾದ ಆರಾಧನೆಯ ಪರಿಣಾಮವಾಗಿ ಸಮೃದ್ಧಗೊಳಿಸುತ್ತಾನೆ (ವಚನ 18–19, ಹಿಂದಿನ ಅಂಶವನ್ನು ನೋಡಿ). ಆಧುನಿಕ ದಕ್ಷಿಣ ಭಾರತದ ಸಭೆಯ ಅನ್ಯೋನ್ಯತೆಯ ಸಂದರ್ಭಕ್ಕೆ ಅನ್ವಯಿಸಬಹುದು: ವಿಶ್ವಾಸಿಗಳು ಯೇಸು ಕ್ರಿಸ್ತನಲ್ಲಿ ನಂಬಿಕೆಯ ಮೂಲಕ **"ರಕ್ತಪರಾಧದಿಂದ ರಕ್ಷಿಸಲ್ಪಟ್ಟ"** ಹೃದಯಗಳಿಂದ ದೇವರನ್ನು ಆರಾಧಿಸಿದಾಗ ಮತ್ತು ಆತನ ಕರುಣೆ, ಪ್ರೀತಿ, ಕ್ಷಮೆ ಮತ್ತು ನೀತಿಗಾಗಿ ಆತನನ್ನು ಸ್ತುತಿಸಿದಾಗ, ದೇವರು ನಮ್ಮ ಸಭೆ ಅನ್ಯೋನ್ಯತೆಗಳನ್ನು ಆಶೀರ್ವದಿಸುತ್ತಾನೆ ಮತ್ತು ನಮ್ಮ ಸಾಕ್ಷಿಯನ್ನು ಬಲಪಡಿಸುತ್ತಾನೆ.

ಕೀರ್ತನೆ 73 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 73 ಪೀಠಿಕೆ ಮತ್ತು ಮುಕ್ತಾಯವನ್ನು ಹೊಂದಿರುವ ಎರಡು ಮುಖ್ಯ ಅಂಶಗಳನ್ನು ಒಳಗೊಂಡಿದೆ:

   ಅ. ಪೀಠಿಕೆ: ಕೀರ್ತನೆಗಾರನ ನಂಬಿಕೆಯ ನುಡಿಗಳು, ವಚನ 1

   ಆ. ದುಷ್ಟರ ಅಭಿವೃದ್ಧಿಯೊಂದಿಗೆ ಕೀರ್ತನೆಗಾರನ ಸಮಸ್ಯೆ, ವಚನ 2–16

   ಇ. ಸಮಸ್ಯೆಗೆ ಕೀರ್ತನೆಗಾರನ ಪರಿಹಾರ, ವಚನ 17–27

   ಈ. ಮುಕ್ತಾಯ: ಕೀರ್ತನೆಗಾರನ ಸಮರ್ಪಣೆ (ಸಂಕಲ್ಪ), ವಚನ 28

2. ಮೊದಲ ವಚನದಲ್ಲಿ ಕೀರ್ತನೆಗಾರನು **"ಪ್ರಾರಂಭಿಕ"** ನಂಬಿಕೆಯ ಹೇಳಿಕೆಯನ್ನು ಹೇಳುತ್ತಾನೆ: ದೇವರು ನೀತಿವಂತರಿಗೆ ದಯಾಪರನು. ಆದರೆ ದುಷ್ಟರ ಅಭಿವೃದ್ಧಿಯ ಕುರಿತಾದ ಆತನ ಅನುಭವವು (ವಚನ 3–12) ಆತನ ನಂಬಿಕೆಗೆ ಸವಾಲಿಡುತ್ತದೆ (ವಚನ 2, 13–16).

3. ವಚನ 3–12 ರಲ್ಲಿ ದುಷ್ಟರು ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾರೆ:

   ಅ. ದುಷ್ಟರು ಸೌಭಾಗ್ಯದಿಂದಿದ್ದಾರೆ. ಯಾವ ಸಮಸ್ಯೆಯಿಲ್ಲದೆ ಸದಾ ಸುಖದಿಂದಿರುತ್ತಾರೆ (ವಚನ 2, 5, 12).

   ಆ. ದುಷ್ಟರಿಗೆ ರೋಗಬಾಧೆಯಿರುವುದಿಲ್ಲ, ಹಾಗಾಗಿ ಅವರು ದಷ್ಟಪುಷ್ಟರಾಗಿ, ನಿರಾತಂಕವಾಗಿ ಬೆಳೆಯುತ್ತಾರೆ (ವಚನ 4).

   ಇ. ದುಷ್ಟರು ಜೀವದಲ್ಲಿನ ಸೌಭಾಗ್ಯದ ನಿಮಿತ್ತ ಗರ್ವಿಷ್ಟರೂ ಸೊಕ್ಕಿನವರೂ ಹೆಮ್ಮೆಗಾರರೂ ಆಗುತ್ತಾರೆ (ವಚನ 6, 7, 8, 9).

   ಈ. ಅವರ ಪಾಪವು ಅವರನ್ನು ಪಾಪಿಷ್ಟರನ್ನಾಗಿ ಮಾಡುತ್ತದೆ (7, 8, 9).

   ಉ. ಅವರ ಸೌಭಾಗ್ಯ ಮತ್ತು ಅವರ ಜೀವನ ಶೈಲಿಯು ಅನೇಕರನ್ನು ಆಕರ್ಷಿಸುತ್ತದೆ, ಹಾಗಾಗಿ ಅನೇಕರು ಅವರ ಮಾತು ಕೇಳಿ ಅವರನ್ನು ಹಿಂಬಾಲಿಸುತ್ತಾರೆ (ವಚನ 10).

4. ಕೀರ್ತನೆಗಾರನು ದುಷ್ಟರನ್ನು ಗಮನಿಸಿದಾಗ, ತನ್ನ ಸ್ವಂತ ನೀತಿವಂತಿಕೆಯು ವ್ಯರ್ಥವೇ ಸರಿ ಎಂಬ ತೀರ್ಮಾನಕ್ಕೆ ಬರುತ್ತಾನೆ (ವಚನ 13).

5. ಕೀರ್ತನೆಗಾರನು ದುಷ್ಟರ ಪರಿಶೀಲನೆ ಮತ್ತು ತನ್ನ ಪರಿಶೀಲನೆಯಿಂದ ಆತನು ಮಾಡುವ ತೀರ್ಮಾನವು ಆತನ ಜೀವಿತದ ಪ್ರತಿಯೊಂದು ದಿನವನ್ನು ವೇದನೆಯನ್ನಾಗಿಸುತ್ತದೆ (ವಚನ 14).

6. ಆದರೆ ಕೀರ್ತನೆಗಾರನು ದೇವರ ಸಾನಿಧ್ಯಕ್ಕೆ ಬರುವಾಗ ಎಲ್ಲವೂ ಬದಲಾಗುತ್ತದೆ (ವಚನ 16–17). ಆತನ ಹಿಂದಿನ ತಿಳುವಳಿಕೆಯ ಕೊರತೆಯ ಸ್ಥಳವನ್ನು ಒಂದು ಹೊಸ ಅರಿವು ತುಂಬಿಕೊಳ್ಳುತ್ತದೆ. ಅಂದರೆ ಮನುಷ್ಯನ ಅಂತ್ಯವು ಆತನ ಪ್ರಸ್ತುತ ಸ್ಥಿತಿಗತಿಗಳಿಗಿಂತ ಬಹು ಪ್ರಾಮುಖ್ಯವಾಗಿದೆ.

7. ಕೀರ್ತನೆಗಾರನು ದೇವರ ಸನ್ನಿಧಿಗೆ ಬಂದ ನಂತರ ದೇವರು ಈಗಾಗಲೇ ದುಷ್ಟರಿಗೆ ನ್ಯಾಯತೀರ್ಪನ್ನು ಕೊಟ್ಟಿದ್ದಾನೆಂಬುದನ್ನು ತಿಳಿದುಕೊಳ್ಳುತ್ತಾನೆ (ವಚನ 18–20). ಅವರ ಜೀವನ ಮಾರ್ಗವು ಈಗಾಗಲೇ ಅಪಾಯಕರವಾಗಿದೆ. ಒಂದು ಕ್ಷಣದಲ್ಲಿ ಎಲ್ಲವೂ ಬದಲಾಗಬಹುದು. ಅವರು ಸತ್ತ ಮೇಲೆ ದೇವರು ಅವರನ್ನು ನೆನಪು ಮಾಡಿಕೊಳ್ಳುವುದೇ ಇಲ್ಲ.

8. ಕೀರ್ತನೆಗಾರನು ತನ್ನ ಹಿಂದಿನ ಮನೋಭಾವನೆಯನ್ನು ಬಹು ನಕಾರಾತ್ಮಕವಾಗಿ ಪರಾಮರ್ಶಿಸುತ್ತಾನೆ (ವಚನ 21–22): ಆತನು ವಿವೇಕಹೀನ ಪಶುವಿನಂತೆ ಇದ್ದನು.

9. ಕೀರ್ತನೆಗಾರನು ದೇವರು ಮತ್ತು ಆತನ ಮಕ್ಕಳ ನಡುವಿನ ಸಂಬಂಧವನ್ನು ಈ ರೀತಿಯಾಗಿ ವರ್ಣಿಸುತ್ತಾನೆ (ವಚನ 23–26):

   ಅ. ದೇವರ ಮಕ್ಕಳು ಯಾವಾಗಲೂ ಆತನೊಂದಿಗೆ ಇರುತ್ತಾರೆ. ದೇವರು ತನ್ನ ಮಕ್ಕಳ ಕೈಯನ್ನು ಹಿಡಿದೇ ಇರುತ್ತಾನೆ. ಆತನೇ ನಮ್ಮ ಬಲವಾಗಿದ್ದಾನೆ. ಆತನೇ ನಮ್ಮ ಪಾಲಾಗಿದ್ದಾನೆ ಮತ್ತು ನಮಗೆ ಎಲ್ಲವೂ ಆಗಿದ್ದಾನೆ.

ಆ. ದೇವರು ತನ್ನ ವಾಕ್ಯದ ಮೂಲಕ ತನ್ನ ಮಕ್ಕಳನ್ನು ಮಾರ್ಗದರ್ಶಿಸುತ್ತಾನೆ.

ಇ. ದೇವರು ತನ್ನ ಮಕ್ಕಳ ಭವಿಷ್ಯಕ್ಕಾಗಿ ಒಂದು ಮಹೋನ್ನತವಾದ ಉದ್ದೇಶವನ್ನಿಟ್ಟುಕೊಂಡಿದ್ದಾನೆ.

10. ಕೀರ್ತನೆಗಾರನು ಕೀರ್ತನೆ 73 ರ ಕೊನೆಯಲ್ಲಿ ಎರಡು ಪ್ರಮುಖ ದೈವಶಾಸ್ತ್ರೀಯ ಮತ್ತು ಪ್ರಾಯೋಗಿಕ ತೀರ್ಮಾನಗಳನ್ನು ಹೊರತರುತ್ತಾನೆ (ವಚನ 27–28):

ಅ. ದುಷ್ಟರಿಗೆ ಯಾವುದೇ ಭವಿಷ್ಯವಿಲ್ಲ. ದೇವರು ಅವರನ್ನು ನಾಶ ಮಾಡುತ್ತಾನೆ. ಅವರು ಹಾಳಾಗಿ ಹೋಗುವರು.

ಆ. ಕೀರ್ತನೆಗಾರನು ನೀತಿವಂತರ ಮಾರ್ಗವನ್ನು ಆರಿಸಿಕೊಳ್ಳುತ್ತಾನೆ.

11. ಕೀರ್ತನೆಗಾರನ ಅನುಭವದ ಪ್ರಾಯೋಗಿಕ ಪರಿಣಾಮವು ಪ್ರಕಟಿಸುವುದಾಗಿದೆ (ವಚನ 28). ದೇವರು ಯಾರು, ಆತನು ಏನನ್ನು ಮಾಡಬಲ್ಲನು ಮತ್ತು ತನ್ನ ಜನರಿಗಾಗಿ ಆತನ ಯೋಜನೆಗಳೇನು ಎಂಬುದನ್ನು ಆತನು ಜನರಿಗೆ ತಿಳಿಸುವನು.

ಕೀರ್ತನೆ 73 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಕೀರ್ತನೆ 73 ರಲ್ಲಿ ವಚನ 18 ರೊಂದಿಗೆ ಪ್ರಾರಂಭದಲ್ಲೇ ದೇವರನ್ನು ಸಂಬೋಧಿಸಲಾಗಿದೆ. ಹಾಗಾಗಿ ಖಂಡಿತವಾಗಿ ಈ ಕೀರ್ತನೆಯ ಎರಡನೇ ಭಾಗವು ಒಂದು ಪ್ರಾರ್ಥನೆಯಾಗಿದೆ. ಕೀರ್ತನೆಗಾರನು ದೇವಾಲಯದಲ್ಲಿ ದೇವರ ಸನ್ನಿಧಿಗೆ ಬರುವವರೆಗೆ ಪಠ್ಯವು (ವಾಕ್ಯಭಾಗವು) ಒಂದು ವೈಯಕ್ತಿಕ ಸಾಕ್ಷಿಯ ಗುಣಸ್ವಭಾವವನ್ನು ಒಳಗೊಂಡಿದೆ. ಹಾಗಾಗಿ ನಾನೆಣಿಸುತ್ತೇನೆ, ಕೀರ್ತನೆಯ ಮೊದಲರ್ಧದಲ್ಲಿ ಕೀರ್ತನೆಗಾರನು ದೇವಜನರೊಂದಿಗೆ ತನ್ನ ಅನುಭವವನ್ನು ಹಂಚಿಕೊಳ್ಳುತ್ತಾನೆ.

2. 15 ನೇ ವಚನದಲ್ಲಿ ಕೀರ್ತನೆಗಾರನು ಹೇಳುತ್ತಿರುವ ಅಂಶವೇನೆಂದರೆ ಆತನು ದೇವಜನರಿಗೆ ದೇವರ ನೀತಿವಂತಿಕೆಯ ಬಗೆಗಿನ ಸಂದೇಹಗಳನ್ನು ಹೇಳಿದ್ದರೆ ಅವರಿಗೆ ದ್ರೋಹ ಬಗೆಯುತ್ತಿದ್ದನು.

3. 20 ನೇ ವಚನದಲ್ಲಿನ ಉಪಮೆ: ಕನಸಿನಿಂದ ಎಚ್ಚರವಾದವನು, ಕನಸಿನಲ್ಲಿ ಸಂಭವಿಸಿದ ಸಂಗತಿಗಳು ನಿಜವಾದುದ್ದಲ್ಲ ಆದರೆ ಅವು ತನ್ನ ಕಲ್ಪನೆಗಳು ಮತ್ತು ಬಹುಬೇಗನೆ ಅವು ತನ್ನ ನೆನಪಿನಿಂದ ಮಾಯವಾಗುತ್ತವೆಂಬುದನ್ನು ಆತನು ತಿಳಿದುಕೊಳ್ಳುತ್ತಾನೆ. ಈ ರೀತಿಯಲ್ಲಿಯೇ ದೇವರು ದುಷ್ಟರ ಬಗ್ಗೆ ಯೋಚಿಸುತ್ತಾನೆ. ಆತನು ಅವರನ್ನು ನೆನಪಿನಲ್ಲಿ ಸಹ ಇಟ್ಟುಕೊಳ್ಳುವುದಿಲ್ಲ.

4. ವಚನ 24 ರಲ್ಲಿನ **"ತರುವಾಯ"** ಎಂಬ ಪದವು ಈ ಪ್ರಸ್ತುತ ಲೋಕದಲ್ಲಿನ ನಮ್ಮ ಜೀವನವು ಮುಗಿದ ನಂತರ ಏನಾಗುತ್ತದೆ ಎಂಬುದನ್ನು ಸೂಚಿಸುತ್ತದೆ. ಈ ಪ್ರಸ್ತುತ ಜೀವನದಲ್ಲಿ ನಮ್ಮ ಪರಿಸ್ಥಿತಿಗಳು ಏನೇ ಆಗಿರಬಹುದು (ಬಡತನ ಅಥವಾ ಸಿರಿತನ, ಆದರಣೆ ಅಥವಾ ಬಾಧೆ, ಆರೋಗ್ಯ ಅಥವಾ ಅನಾರೋಗ್ಯ), ಎರಡು ಸಂಗತಿಗಳ ಬಗ್ಗೆ ನಾವು ಭರವಸದಿಂದರಬಹುದು. ಅವೆಂದರೆ ಮೊದಲನೇಯದಾಗಿ ದೇವರು ನಮ್ಮೊಂದಿಗಿದ್ದು, ನಮ್ಮನ್ನು ನಡೆಸುತ್ತಾನೆ ಮತ್ತು ಮಾರ್ಗದರ್ಶಿಸುತ್ತಾನೆ (ವಚನ 23–24). ಎರಡನೇಯದಾಗಿ, ತರುವಾಯ ದೇವರು ನಮ್ಮನ್ನು ತನ್ನ ಮಹಿಮೆಗೆ ಸೇರಿಸಿಕೊಳ್ಳುತ್ತಾನೆ.

5. ಕೀರ್ತನೆ 73 ರಲ್ಲಿ ಬಿಂಬಿಸಲ್ಪಟ್ಟ ಕೀರ್ತನೆಗಾರನ **"ನಂಬಿಕೆಯ ಯಾತ್ರೆ"** ಯು 5 ಹಂತಗಳನ್ನು ಒಳಗೊಂಡಿದೆ:

ಅ. ಮೊದಲನೇ ಹಂತ: ಆತನು ದೇವರ ಒಳ್ಳೇತನ ಮತ್ತು ನೀತಿವಂತಿಕೆಯ ಕುರಿತಾದ ಸತ್ಯವನ್ನು ಬಲ್ಲವನಾಗಿದ್ದಾನೆ (ವಚನ 1).

ಆ. ಎರಡನೇ ಹಂತ: ಮನುಷ್ಯ ಜೀವನದ ಕುರಿತಾದ ಆತನ ಅವಲೋಕನವು ಆತನನ್ನು ಸಂದೇಹ ಮತ್ತು ಖಿನ್ನತೆಗೆ ನಡೆಸುತ್ತದೆ (ವಚನ 2–16).

ಇ. ಮೂರನೇ ಹಂತ: ಹೇಗೋ ಆತನು ದೇವಾಲಯದಲ್ಲಿ ದೇವರ ಸನ್ನಿಧಿಗೆ ಬರುತ್ತಾನೆ (ವಚನ 17).

ಈ. ನಾಲ್ಕನೇ ಹಂತ: ಅಲ್ಲಿ ಆತನು ದೇವರ ದೃಷ್ಟಿಕೋನದಿಂದ ಮನುಷ್ಯನ ಜೀವನ ಮತ್ತು ಮನುಷ್ಯನ ನಿತ್ಯತ್ವದ ನಿರ್ದಿಷ್ಟ ಸ್ಥಾನವನ್ನು ಕಾಣುತ್ತಾನೆ (ವಚನ 17–27).

ಉ. ಐದನೇ ಹಂತ: ಹಾಗಾಗಿ ದೇವರಿಗೆ ತನ್ನ ಜೀವಿತವನ್ನು ಸಮರ್ಪಿಸಿ, ಇತರರಿಗೆ ದೇವರ ಕುರಿತಾಗಿ ಸಾರುತ್ತಾನೆ (ವಚನ 28).

ಕೀರ್ತನೆ 84 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 84 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ಕೀರ್ತನೆಗಾರನು ಯೆಹೋವನ ಮಂದಿರಕ್ಕಾಗಿನ ತನ್ನ ಆಳವಾದ ಬಯಕೆಯನ್ನು ಅರಿಕೆ ಮಾಡುತ್ತಾನೆ, ವಚನ 1–4.

   ಆ. ಕೀರ್ತನೆಗಾರನು ಯೆರೂಸಲೇಮಿಗೆ ಯಾತ್ರೆ ಹೋಗುವುದರ ಭಾಗ್ಯ (ಆಶೀರ್ವಾದವನ್ನು) ತಿಳಿಸುತ್ತಾನೆ, ವಚನ 5–7.

   ಇ. ಕೀರ್ತನೆಗಾರನು ಅರಸನಿಗಾಗಿ ಪ್ರಾರ್ಥಿಸುತ್ತಾನೆ, ವಚನ 8–9.

   ಈ. ಕೀರ್ತನೆಗಾರನು ದೇವರು ಮತ್ತು ದೇವಾಲಯವನ್ನು ಆಶೀರ್ವಾದದ ಮೂಲಗಳೆಂಬುದಾಗಿ ತಿಳಿಸುತ್ತಾನೆ, ವಚನ 10–12.

2. **"ಧನ್ಯನು"** ಎಂಬ ಪದವು ಈ ಕೀರ್ತನೆಯಲ್ಲಿ 3 ಬಾರಿ ಬಳಸಲ್ಪಟ್ಟಿದೆ:

   ಅ. ವಚನ 4 ರಲ್ಲಿ: ದೇವಮಂದಿರದಲ್ಲಿ ಯಾವಾಗಲೂ ದೇವರನ್ನು ಆರಾಧಿಸುವವರು ಧನ್ಯರು.

   ಆ. ವಚನ 5 ರಲ್ಲಿ: ಯೆಹೋವನಲ್ಲಿ ಬಲವನ್ನು ಹೊಂದುವವರು ಧನ್ಯರು.

   ಇ. ವಚನ 12 ರಲ್ಲಿ: ಯೆಹೋವನಲ್ಲಿ ಭರವಸವಿಡುವವರು ಧನ್ಯರು.

3. ಕೀರ್ತನೆಗಾರನು ವಚನ 7 ರಲ್ಲಿ ಈ ಅಂಶವನ್ನು ತಿಳಿಸುತ್ತಾನೆ: ದೇವರ ಹತ್ತಿರಕ್ಕೆ ಎಷ್ಟಾಗಿ ಬರುತ್ತೇವೆಯೋ ಅಷ್ಟಾಗಿ ನಮ್ಮ ಬಲವು ಅತ್ಯಧಿಕವಾಗುತ್ತದೆ.

4. ಕೀರ್ತನೆಗಾರನು ವಚನ 9 ರಲ್ಲಿ ಅರಸನನ್ನು ಆಶೀರ್ವದಿಸಬೇಕೆಂದು ದೇವರನ್ನು ಪ್ರಾರ್ಥಿಸುತ್ತಾನೆ. ಆತನು ದೇವಜನರ ಸಂರಕ್ಷಕನೂ ಮತ್ತು ದೇವರ ಅಭಿಷಿಕ್ತನೂ ಆಗಿದ್ದಾನೆ.

5. ವಚನ 10 ರ ಮೊದಲ ಭಾಗದಲ್ಲಿ ಕೀರ್ತನೆಗಾರನು ಹೇಳುವ ಅಂಶವೇನೆಂದರೆ ದೇವರ ಆಲಯದಲ್ಲಿ ಆತನನ್ನು ಆರಾಧಿಸುವುದು ದೇವಜನರಿಗೆ ಒಳ್ಳೆಯದಾಗಿದೆ. ಬೇರೆ ಯಾವ ಕಡೆಗಿಂತಲೂ ದೇವರ ಸನ್ನಿಧಿಯಲ್ಲಿರುವುದು ಅತ್ಯುತ್ತಮವಾದುದ್ದಾಗಿದೆ.

ಕೀರ್ತನೆ 84 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. **"ದೇವರ ಆಲಯದಲ್ಲಿರಲು ಬಯಸುವುದು"** ಎಂಬ ಶೀರ್ಷಿಕೆಯು ಕೀರ್ತನೆ 84 ಕ್ಕೆ ಸೂಕ್ತವಾದದ್ದೆಂದು ನಾನೆಣಿಸುತ್ತೇನೆ. ಕೀರ್ತನೆಗಾರನು ದೇವಾಲಯದಲ್ಲಿ ದೇವರನ್ನು ಆರಾಧಿಸುವುದಕ್ಕಾಗಿ ಬಲವಾದ ಆಶೆಯನ್ನು ವ್ಯಕ್ತಪಡಿಸುತ್ತಾನೆ. ಅಲ್ಲಿಯೇ ಆತನು ಸುರಕ್ಷತತೆ ಮತ್ತು ಆಶೀರ್ವಾದವನ್ನು ಕಂಡುಕೊಳ್ಳುತ್ತಾನೆ.

2. ಕೀರ್ತನೆಗಾರನು ಈ ಕೀರ್ತನೆಯಲ್ಲಿ **"ದೇವರಿಗೆ"** ಅನೇಕ ಹೇಸರುಗಳನ್ನು ಬಳಸುತ್ತಾನೆ:

   ಅ. **"ಸೇನಾಧೀಶ್ವರನಾದ ಯೆಹೋವನೇ"** (ವಚನ 1, 3, 8, 11): ದೇವರು ಸೇನಾಧೀಶ್ವರನೂ, ಭೂಮಂಡಲದ ರಾಜನೂ ಆಗಿದ್ದಾನೆ. ಕೀರ್ತನೆಗಾರನು ದೇವರನ್ನು ಇದೇ ಹೆಸರಿನಿಂದ ಪ್ರಾರಂಭಿಸಿ ಇದೇ ಹೆಸರಿನಿಂದ ಮುಕ್ತಾಯಗೊಳಿಸುವುದನ್ನು ಗಮನಿಸಿ.

   ಆ. **"ಚೈತನ್ಯಸ್ವರೂಪನಾದ ದೇವರು"** (ವಚನ 2, 11): ದೇವರು ಈ ಲೋಕದಲ್ಲಿ ಮತ್ತು ತನ್ನ ಜನರ ಜೀವಿತಗಳಲ್ಲಿ ಕಾರ್ಯಮಾಡುತ್ತಿದ್ದಾನೆ.

   ಇ. **"ಯೆಹೋವ ದೇವರೇ, ನನ್ನ ಅರಸನೇ"** (ವಚನ 3): ಕೀರ್ತನೆಗಾರನು ತನ್ನ ವೈಯಕ್ತಿಕ ಜೀವನದಲ್ಲಿ ದೇವರ ಅರಸತ್ವವನ್ನು ಅರಿತುಕೊಳ್ಳುತ್ತಾನೆ.

ಈ. "ಯಾಕೋಬ್ಯರ ದೇವರೇ" (ವಚನ 8): ದೇವರು ಇಸ್ರಾಯೇಲ್ ಜನರ ಚರಿತ್ರೆಯಲ್ಲಿ ತನ್ನನ್ನು ಪ್ರಕಟಿಸಿಕೊಂಡನು. ಆತನು ಅವರನ್ನು ಬಿಡಿಸುವವನೂ ಮತ್ತು ಅವರ ವಿಮೋಚಕನೂ ಆಗಿದ್ದಾನೆ.

ಉ. "ನನ್ನ ದೇವರು" (ವಚನ 10): ಕೀರ್ತನೆಗಾರನು ದೇವರೊಂದಿಗೆ ಒಂದು ವೈಯಕ್ತಿಕವಾದ ಸಂಬಂಧವನ್ನು ಹೊಂದಿದ್ದಾನೆ. ಆತನು ದೇವಾಲಯದಲ್ಲಿ ದೇವರನ್ನು ಆರಾಧಿಸುವುದರ ಮೂಲಕ ಆತನನ್ನು ಅರಿತುಕೊಂಡಿದ್ದಾನೆ.

ಈ ಕೆಲವು ಕಾರಣಗಳಿಂದ ಕೀರ್ತನೆಗಾರನು ದೇವರಿಗೆ ಅನೇಕ ಹೆಸರುಗಳನ್ನು ಉಪಯೋಗಿಸುತ್ತಾನೆ ಎಂದು ನಾನು ಎಣಿಸುತ್ತೇನೆ.

ಅ. ದೇವರಿಗೆ ಹೆಚ್ಚು ಒತ್ತು ಕೊಡಲಾಗಿದೆ: ಆತನು ಆಶೀರ್ವಾದದ ಮೂಲವಾಗಿದ್ದಾನೆ. ದೇವಾಲಯದಲ್ಲಿ ಆತನು ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ.

ಆ. ದೇವರು ದೂರ ಇರುವ ದೇವರಲ್ಲ. ಮನುಷ್ಯನಿಗೆ ಸಿಕ್ಕದವನಲ್ಲ. ವಿಧವಿಧವಾದ ರೀತಿಯಲ್ಲಿ ಆತನು ತನ್ನನ್ನು ಪ್ರಕಟಿಸಿಕೊಂಡಿದ್ದಾನೆ ಮತ್ತು ಪ್ರಕಟಿಸಿಕೊಳ್ಳುತ್ತಿದ್ದಾನೆ. ವಿಭಿನ್ನವಾದ ಹೆಸರುಗಳು ಕೀರ್ತನೆಗಾರನಲ್ಲಿನ ದೇವರ ತಿಳುವಳಿಕೆಯನ್ನು ವ್ಯಕ್ತಪಡಿಸುತ್ತವೆ.

3. ಕೀರ್ತನೆಗಾರನು ದೇವಾಲಯದ ಬಗ್ಗೆ ಎರಡು ಪ್ರಮುಖ ಸತ್ಯಗಳನ್ನು ತಿಳಿಸಲು ಗುಬ್ಬಿ ಮತ್ತು ಪಾರಿವಾಳದ ಉದಾಹರಣೆಯನ್ನು ತೆಗೆದುಕೊಳ್ಳುತ್ತಾನೆ:

ಅ. ದೇವಾಲಯವು ಕೀರ್ತನೆಗಾರನ ಆತ್ಮೀಕ ಮನೆಯಾಗಿದೆ: ಗುಬ್ಬಿಯು ದೇವಾಲಯದಲ್ಲಿ ಮನೆಮಾಡಿಕೊಂಡಿದೆ. ಅದೇ ರೀತಿಯಲ್ಲಿ ದೇವಜನರು ಸಹ ದೇವಾಲಯದಲ್ಲಿ, ದೇವರ ಸನ್ನಿಧಿಯಲ್ಲಿ ವಾಸಿಸುವುದು ಅತ್ಯುತ್ತಮವಾಗಿದೆ. ನಾವು ಅಲ್ಲಿಗೇ ಮೀಸಲಾದವರಾಗಿದ್ದೇವೆ.

ಆ. ಕೀರ್ತನೆಗಾರನಿಗೆ ದೇವಾಲಯವು ಸುರಕ್ಷತತೆ ಮತ್ತು ಭದ್ರತೆಯನ್ನು ಕೊಡುವ ಒಂದು ಸ್ಥಳವಾಗಿದೆ: ಪಾರಿವಾಳವು ದೇವಾಲಯದ ಸಂಕೀರ್ಣದ ಒಳಗೆ ವೇದಿಯ ಬಳಿಯಲ್ಲಿಯೇ ಗೂಡನ್ನು ಕಟ್ಟಿಕೊಳ್ಳುತ್ತದೆ, ಯಾಕೆಂದರೆ ಗೂಡು ಕಟ್ಟಲು ಅದೊಂದು ಸುರಕ್ಷಿತವಾದ ಸ್ಥಳವಾಗಿದೆ. ಅದೇ ರೀತಿಯಲ್ಲಿ ದೇವಜನರಾದ ನಾವು ದೇವರ ಸಮೀಪದಲ್ಲಿರುವಾಗ ಸುರಕ್ಷಿತವಾಗಿರುತ್ತೇವೆ.

4. ಕೀರ್ತನೆಗಾರನು 10 ನೇ ವಚನದಲ್ಲಿ ಮಾಡುವ ಎರಡು ವಿರುದ್ಧ ಸಮಾನಾಂತರಗಳ ರೂಪದಲ್ಲಿ ಎರಡು ಹೋಲಿಕೆಗಳನ್ನು (ಮತ್ತು ಅದರ ಕಾವ್ಯಾತ್ಮಕ ರಚನೆ, ಇದು ಎಲ್ಲಾ ಅನುವಾದಗಳಲ್ಲಿ ಸ್ಪಷ್ಟವಾಗಿಲ್ಲದಿರಬಹುದು) ಈ ರೀತಿ ವಿವರಿಸಬಹುದು:

ಅ. ಮೊದಲ ಹೋಲಿಕೆ (ವಚನದ ಮೊದಲಾರ್ಧ): "ಒಂದು ದಿನ" ವನ್ನು "ಸಾವಿರ ದಿನಗಳು" ನೊಂದಿಗೆ ಹೋಲಿಸಲಾಗುತ್ತದೆ, ಕೆಲವು ದಿನಗಳಿಗಿಂತ ಹೆಚ್ಚಿನ ದಿನಗಳು ಉತ್ತಮವಾಗಿವೆ ಎಂಬ ಮೂಲ ಕಲ್ಪನೆಯೊಂದಿಗೆ ಕೀರ್ತನೆಗಾರನು "ದೇವಾಲಯದಲ್ಲಿ" ಮತ್ತು "ಬೇರೆಡೆ" ನಡುವೆ ಆಯ್ಕೆ ಮಾಡಬಹುದು. ಅವನು ದೇವಾಲಯವನ್ನು ಆರಿಸಿಕೊಳ್ಳುತ್ತಾನೆ.

ಆ. ಎರಡನೇ ಹೋಲಿಕೆ (ವಚನದ ದ್ವಿತೀಯಾರ್ಧ): "ದ್ವಾರಪಾಲಕನ ಜೀವನವನ್ನು" "ಗುಡಾರಗಳಲ್ಲಿ ವಾಸಿಸುವುದು" ರೊಂದಿಗೆ ಹೋಲಿಸಲಾಗುತ್ತದೆ, ಎರಡನೆಯ ಆಯ್ಕೆಯು ಮೊದಲನೆಯದಕ್ಕಿಂತ ಹೆಚ್ಚು ಎಂಬ ಮೂಲ ಕಲ್ಪನೆಯೊಂದಿಗೆ ಕೀರ್ತನೆಗಾರನು "ದೇವರ ನೀತಿವಂತ ಜನರು" ("ನನ್ನ ದೇವರ ಮನೆಯಲ್ಲಿ" ಎಂಬ ಪದಗುಚ್ಛದ ಮೂಲಕ ವ್ಯಕ್ತಪಡಿಸಲಾಗಿದೆ) ಮತ್ತು "ದುಷ್ಟರು" ನಡುವೆ ಆಯ್ಕೆ ಮಾಡಬಹುದು. ಅವನು ದೇವರ ನೀತಿವಂತ ಜನರನ್ನು ಆರಿಸಿಕೊಳ್ಳುತ್ತಾನೆ.

ಇ. ಆದರೆ ಈ ಎರಡೂ ಆಯ್ಕೆಗಳು ಮೂಲತಃ ಒಂದೇ ಆಗಿವೆ (ಆದ್ದರಿಂದ ಅವುಗಳನ್ನು "ಸಮಾನಾರ್ಥಕ ಸಮಾನಾಂತರತೆ" ಎಂದು ಅರ್ಥೈಸಿಕೊಳ್ಳಬಹುದು. ಅಥವಾ, ವಚನದ ದ್ವಿತೀಯಾರ್ಧವನ್ನು ಮೊದಲಾರ್ಧದ ವಿಸ್ತರಣೆಯಾಗಿ ನೋಡಲು ನಾವು ಬಯಸಿದರೆ, ನಾವು ಅದನ್ನು "ಸಂಯೋಜಿತ ಸಮಾನಾಂತರತೆ" ಎಂದು ಕರೆಯಬಹುದು): ಕೀರ್ತನೆಗಾರನ ಆಯ್ಕೆಯು ದೇವಾಲಯದಲ್ಲಿ ದೇವರ ನೀತಿವಂತ ಜನರೊಂದಿಗೆ ಇರುವುದು, ಲೋಕದ ಆದ್ಯತೆಯ ಆಯ್ಕೆಯು ಭಕ್ತಿಹೀನರ ಗುಡಾರಗಳಲ್ಲಿ ಆರಾಮದಾಯಕ ಜೀವನವಾಗಿದ್ದರೂ ಸಹ.

5. ಸದ್ಭಕ್ತನು ದೇವರಿಂದ ಕನಿಷ್ಟಪಕ್ಷ ಎರಡು ರೀತಿಯ ಶುಭವನ್ನು ಅಪೇಕ್ಷಿಸಬಹುದು (ವಚನ 11):

ಅ. ದೇವರು ಅವರ ಬೆಳಕು ಮತ್ತು ಜೀವದ ಮೂಲವಾಗಿರುವನು (ಅವರ ಸೂರ್ಯ).

ಆ. ದೇವರೇ ಅವರಿಗೆ ಸಹಾಯ ಮತ್ತು ಸಂರಕ್ಷಣೆಯಾಗಿರುವನು (ಅವರ ಗುರಾಣಿ).

ಇದು ಕೀರ್ತನೆಗಾರನ ಅನುಭವವಾಗಿದ್ದರೂ ಸಹ, ಈ ವಚನವನ್ನು **"ಮಾನವ ಅನುಭವದ ಖಾತೆ"** ಎಂದು ಅರ್ಥೈಸಿಕೊಳ್ಳದೆ **"ನಂಬಿಕೆಯ ದೃಢೀಕರಣ"** ಎಂದು ಅರ್ಥೈಸಿಕೊಳ್ಳಬೇಕು ಎಂದು ನಾನು ಭಾವಿಸುತ್ತೇನೆ. ದೇವರು ನೀತಿವಂತರಿಗೆ ಯಾವುದೇ ಒಳ್ಳೆಯದನ್ನು ತಡೆಹಿಡಿಯುವುದಿಲ್ಲ ಎಂಬ ಈ ವಚನದಲ್ಲಿನ ವ್ಯಾಪಕ ಹೇಳಿಕೆಯೇ ನನ್ನ ಕಾರಣ. ಇದು ನಮ್ಮ ದೈನಂದಿನ ಮಾನವ ಅನುಭವಗಳಾದ ಕಷ್ಟಗಳು ಮತ್ತು ಸಂಕಟಗಳಿಂದ ಹೆಚ್ಚಾಗಿ ವಿರೋಧಿಸಲ್ಪಡುವ ಒಂದು ವಿಶಿಷ್ಟವಾದ **"ಜ್ಞಾನ"** ದೃಷ್ಟಿಕೋನವಾಗಿದೆ. ಹೆಚ್ಚಿನ ಉದಾಹರಣೆಗಳಿಗಾಗಿ, ಕೀರ್ತನೆ 1 ಮತ್ತು ಕೀರ್ತನೆ 37 ರ ಅಧ್ಯಾಯಗಳನ್ನು ಮತ್ತು **ಇಬ್ರಿಯ ಜ್ಞಾನ ಮತ್ತು ಮಾನವನ ಅನುಭವ** ಎಂಬ ಅಧ್ಯಾಯವನ್ನು ನೋಡಿ.

6. ಈ ಕೆಳಕಂಡ ಕಾರಣಗಳಿಂದ ಭಾನುವಾರದ ಆರಾಧನೆಯ **"ಕೀರ್ತನೆ ಓದುವ"** ವಿಭಾಗದಲ್ಲಿ ಬಳಸಲು ಇದೊಂದು ಉತ್ತಮವಾದ ಸೂಕ್ತ ಕೀರ್ತನೆಯಾಗಿದೆ:

   ಅ. ಇದು ದೇವರ ಆಲಯದ ಕುರಿತಾಗಿದೆ: ಹೇಗೆ ದೇವಜನರು ಅಲ್ಲಿರಬೇಕೆಂದು ಹಂಬಲಿಸುವುದು, ಹೇಗೆ ದೇವಜನರು ದೇವಾಲಯದಲ್ಲಿ, ಆತನ ಸನ್ನಿಧಿಯಲ್ಲಿ ಆಶೀರ್ವಾದ ಹೊಂದುವುದರ ಕುರಿತಾಗಿದೆ.

   ಆ. ಇದು ದೇವರ ಮೇಲೆ ಹೆಚ್ಚಿನ ಗಮನ ಹರಿಸಿದೆ: ಆತನೇ ನಮ್ಮ ಆಶೀರ್ವಾದದ ಮೂಲವಾಗಿದ್ದಾನೆ. ಆತನೇ ನಮ್ಮ ರಾಜನೂ ಮತ್ತು ಒಡಂಬಡಿಕೆಯ ಕರ್ತನೂ ಆಗಿದ್ದಾನೆ. ಆತನು ಜೀವಿಸುವ ಮತ್ತು ಕಾರ್ಯ ಮಾಡುವ ದೇವರಾಗಿದ್ದಾನೆ.

   ಇ. ದೇವಜನರು ಸರಿಯಾದ ಆಯ್ಕೆಯನ್ನು ಮಾಡಲು ಇದು ದೇವಜನರಿಗೆ ಸವಾಲಿಡುತ್ತದೆ: ದುಷ್ಟ ಜನರೊಂದಿಗೆ ಇರುವುದರ ಬದಲು ದೇವಜನರೊಂದಿಗೆ ಇರಬೇಕೆಂದು ತಿಳಿಸುತ್ತದೆ. ನಮ್ಮ ಗಮನವನ್ನು ಅನಾವಶ್ಯಕ ಸಂಗತಿಗಳ ಮೇಲೆ ಇಡದೆ ದೇವರ ಸನ್ನಿಧಿಗೆ ಬಂದು, ಆತನ ಮೇಲೆ ಹೆಚ್ಚಿನ ಗಮನವಿಡಬೇಕೆಂದು ಹೇಳುತ್ತದೆ. ಇತರ ಸ್ಥಳಗಳಲ್ಲಿ ಕಾಲ ಕಳೆಯದೆ ಸಭೆಗೆ ಬಂದು ಆರಾಧನೆಯಲ್ಲಿ ಸಮಯ ಕಳೆಯಬೇಕೆಂದು ತಿಳಿಸುತ್ತದೆ.

   ಈ. ಇದನ್ನು **"ಕಂತುಗಳಲ್ಲಿ"** ಬಳಸಬಹುದು: ಸಭೆಯು ಪ್ರತೀ ಭಾನುವಾರ ಇಡೀ ಕೀರ್ತನೆಯನ್ನು ಓದಿದರೂ ಸಹ, ಸಭಾಪಾಲಕರ ಟಿಪ್ಪಣಿಗಳು ಪ್ರತೀ ಭಾನುವಾರ ಕೀರ್ತನೆಯ ಪ್ರತ್ಯೇಕ ಭಾಗದ ಮೇಲೆ ಕೇಂದ್ರೀಕರಿಸಬಹುದು.

ಕೀರ್ತನೆ 91 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 91 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ದೇವರು ನಮಗೆ ಆಶ್ರಯವಾಗಿದ್ದಾನೆ, ವಚನ 1

   ಆ. ದೇವರು ನಮಗೆ ಸಂರಕ್ಷಕನಾಗಿದ್ದಾನೆ, ವಚನ 3–13

   ಇ. ದೇವರು ತನ್ನ ರಕ್ಷಣೆ ಮತ್ತು ಸಂರಕ್ಷಣೆಯನ್ನು ವಾಗ್ದಾನ ಮಾಡುತ್ತಾನೆ, ವಚನ 14–16

2. ಮೊದಲ ವಚನವು ಸ್ವಲ್ಪ ಗೊಂದಲಮಯವಾಗಿದೆ ಯಾಕೆಂದರೆ ಎರಡೂ ಕ್ರಿಯಾಪದಗಳು (ಮೊರೆಹೊಕ್ಕಿರುವವನು ಮತ್ತು ಸುರಕ್ಷಿತನಾಗಿರುವನು) ಮತ್ತು ಎರಡು ನಾಮಪದಗಳು (ಮೊರೆ ಮತ್ತು ಆಶ್ರಯ) ಇಬ್ರಿಯ ಪಠ್ಯದಲ್ಲಿ ಸಮಾನಾರ್ಥಕಗಳಾಗಿವೆ. ಈ ವಚನದ ಎರಡು ಸಾಲುಗಳನ್ನು ನಾನು ಈ ರೀತಿ ಅರ್ಥೈಸಿಕೊಳ್ಳುವೆ:

   ಮೊದಲ ಸಾಲು ನಮಗೆ ಏನು ಮಾಡಬೇಕೆಂದು ಹೇಳುತ್ತದೆ (ಪರಾತ್ಪರನ ಮರೆ ಹೋಗುವುದು) ಮತ್ತು ಎರಡನೆಯ ಸಾಲು ಆ ರೀತಿ ಮೊರೆಹೊಕ್ಕಾಗ ಏನಾಗುತ್ತದೆಂಬುದನ್ನು ತಿಳಿಸುತ್ತದೆ (ಸುರಕ್ಷಿತನಾಗಿರುವನು). ಹಾಗಾಗಿ ಸಂಯೋಜಿತ ಸಮಾನಾಂತರತೆಗೆ ಇದೊಂದು ಉದಾಹರಣೆಯಾಗಿದೆ.

3. ಕೀರ್ತನೆಗಾರನು ವಚನ 1–2 ರಲ್ಲಿ ದೇವರಿಗೆ ಮೂರು ಹೆಸರುಗಳನ್ನು ಬಳಸುತ್ತಾನೆ:

   ಅ. ಪರಾತ್ಪರನು

   ಆ. ಸರ್ವಶಕ್ತನು

   ಇ. ಯೆಹೋವನು

   ಈ. ಅಲ್ಲದೆ "ನನ್ನ ದೇವರು" ಎನ್ನುವನು

4. ವಚನ 2 ರಲ್ಲಿ ಕಂಡುಬರುವ ರೂಪಾಲಂಕಾರಗಳು "ಶರಣನು" ಮತ್ತು "ದುರ್ಗವು": ಇವೆರಡೂ ಸಹ ದೇವರ ಸಂರಕ್ಷಣೆಯನ್ನು ಸೂಚಿಸುತ್ತವೆ. ಆದರೆ ಅವು ಆತನ ಸಂರಕ್ಷಣೆಯ ವಿಭಿನ್ನವಾದ ಅಂಶಗಳನ್ನು ತಿಳಿಸುತ್ತವೆ.

   ಅ. "ಶರಣನು" ಪದವು ದೇವರ ಕೋಮಲ ಮತ್ತು ಕಾಳಜಿಯುತವಾದ ಸಂರಕ್ಷಣೆಯನ್ನು ಸೂಚಿಸುತ್ತದೆ.

   ಆ. "ದುರ್ಗವು" ದೇವರ ಬಲಿಷ್ಠವಾದ ಸಂರಕ್ಷಣೆಯನ್ನು ಸೂಚಿಸುತ್ತದೆ.

5. ವಚನ 2 ಮತ್ತು 3 ರ ನಡುವೆ ನಡೆಯುವ ವ್ಯಾಕರಣ ಬದಲಾವಣೆಯು ಮೊದಲ ವ್ಯಕ್ತಿಯಿಂದ ಎರಡನೇಯ ವ್ಯಕ್ತಿಗೆ ಬದಲಾವಣೆಯಾಗಿದೆ.

   ಅ. 2 ನೇ ವಚನದಲ್ಲಿ ಕೀರ್ತನೆಗಾರನ ಸಾಕ್ಷ್ಯವು ನಮಗೆ ಸಿಗುತ್ತದೆ. ಆದ್ದರಿಂದ ಅವನು ಮೊದಲ ವ್ಯಕ್ತಿಯನ್ನು "ನಾನು, ನನ್ನ" ಎಂದು ಬಳಸುತ್ತಾನೆ.

   ಆ. 3 ನೇ ವಚನದಲ್ಲಿ ಕೀರ್ತನೆಗಾರನು ಸಹ–ಇಸ್ರಾಯೇಲ್ಯನಿಗೆ ನೀಡಿದ ಸಲಹೆಯನ್ನು ನಾವು ಕಾಣುತ್ತೇವೆ. ಆದ್ದರಿಂದ ಅವನು ಎರಡನೇ ವ್ಯಕ್ತಿಯನ್ನು ಬಳಸುತ್ತಾನೆ, "ನೀವು" (ಮತ್ತು ನಂತರ "ನಿಮ್ಮ").

6. ದೇವರು ವಚನ 3–6 ರಲ್ಲಿ ಈ ಬೆದರಿಕೆಗಳಿಗೆ (ಅಪಾಯ) ವಿರುದ್ಧವಾಗಿ ರಕ್ಷಣೆಯನ್ನು ಕೊಡುತ್ತಾನೆ:

   ಅ. ವೈರಿಗಳು: ಕೀರ್ತನೆಗಾರನು "ಬೇಟೆಗಾರನು" ಎಂಬ ರೂಪಾಲಂಕಾರವನ್ನು ಬಳಸುತ್ತಾನೆ. ಅನಂತರ "ಹಾರಿಬರುವ ಬಾಣ" ಎಂಬ ರೂಪಾಲಂಕಾರವನ್ನು ಬಳಸುತ್ತಾನೆ.

   ಆ. ಮರಣಕರ ವ್ಯಾಧಿ: ಆದರೆ ಅವನು "ರಾತ್ರಿಯ ಭಯ" (ಇದು ರೂಪಾಲಂಕಾರ) ಮತ್ತು "ಪ್ಲೇಗ್" ಎಂಬ ಸಮಾನಾರ್ಥಕ ಪದಗಳನ್ನು ಸಹ ಬಳಸುತ್ತಾನೆ.

7. ದೇವರು ವಚನ 11–13 ರಲ್ಲಿ ಈ ಅಪಾಯಗಳಿಂದ ರಕ್ಷಿಸುತ್ತಾನೆ:

   ಅ. ಅಪಾಯಕಾರಿ ಪ್ರಯಾಣಗಳು: ವಚನ 11 ರಲ್ಲಿ ಕೀರ್ತನೆಗಾರನು "ನೀನು ಹೋಗುವಲ್ಲೆಲ್ಲಾ" ಎಂಬ ಪದ ಬಳಸುತ್ತಾನೆ. ಅನಂತರ ವಚನ 12 ರಲ್ಲಿ ಪ್ರಯಾಣಿಕನಿಗೆ ದೇವದೂತರ ರಕ್ಷಣೆಯನ್ನು ವಿವರಿಸುತ್ತಾನೆ.

ಆ. ಅಪಾಯಕಾರಿ ಪ್ರಾಣಿಗಳು: "ಸಿಂಹ", "ಸರ್ಪ", "ಪ್ರಾಯದ ಸಿಂಹ" ಮತ್ತು "ಘಟಸರ್ಪ" ಇವನ್ನು ನಾಲ್ಕು ಬಗೆಯ ಅಪಾಯಗಳೆಂದು ತಿಳಿಯಬಾರದು. ಇವೆಲ್ಲವೂ ಒಂದೇ ರೀತಿಯ ಅಪಾಯವನ್ನು ಸೂಚಿಸುತ್ತವೆ. ಪ್ರಾಚೀನ ಇಸ್ರಾಯೇಲಿನಲ್ಲಿ ಜನರಿಗೆ ಕಾಡು ಪ್ರಾಣಿಗಳ ಕಾಟವಿತ್ತು.

8. ವಚನ 14–16 ರಲ್ಲಿ "ದೇವರೇ" ಮಾತನಾಡುತ್ತಿದ್ದಾನೆ.

9. ವಚನ 14–16 ರಲ್ಲಿನ ವಾಗ್ದಾನಗಳ ಪಟ್ಟಿ ಇಂತಿದೆ:

   ಅ. ಕರ್ತನು ರಕ್ಷಿಸುವನು

   ಆ. ಕರ್ತನು ಉದ್ಧರಿಸುವನು

   ಇ. ಕರ್ತನು ಸದುತ್ತರವನ್ನು ದಯಪಾಲಿಸುವನು

   ಈ. ಕರ್ತನು ಇಕ್ಕಟ್ಟಿನಲ್ಲೆಲ್ಲಾ ಹತ್ತಿರ ಇರುವನು

   ಉ. ಕರ್ತನು ಇಕ್ಕಟ್ಟಿನಿಂದ ತಪ್ಪಿಸುವನು

   ಊ. ಕರ್ತನು ಘನಪಡಿಸುವನು

   ಋ. ಕರ್ತನು ದೀರ್ಘಾಯುಷ್ಯದಿಂದ ತೃಪ್ತಿಪಡಿಸುವನು

   ಎ. ಕರ್ತನು ತನ್ನ ರಕ್ಷಣೆಯನ್ನು ತೋರಿಸುವನು

ಕೀರ್ತನೆ 91 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 3–6 ರ ಅಧ್ಯಯನ:

   ಅ. ರೂಪಾಲಂಕಾರಗಳು:

   - ಬೇಟೆಗಾರನ ಬಲೆ: ವೈರಿಗಳ ಬೆದರಿಕೆ
   - ತನ್ನ ರೆಕ್ಕೆಗಳಿಂದ ಹೊದಗಿಸುವನು: ಸಂರಕ್ಷಣೆ
   - ಆತನ ರೆಕ್ಕೆಗಳ ಮರೆ: ಸಂರಕ್ಷಣೆ
   - ಹಗಲಲ್ಲಿ ಹಾರಿ ಬರುವ ಬಾಣ: ವೈರಿಗಳ ಆಕ್ರಮಣ (ದಾಳಿ)

   ಆ. ಸಮಾನಾಂತರತೆ:

   - ವಚನ 3 ಒಂದು ಸಂಯೋಜಿತ ಸಮಾನಾಂತರತೆಯನ್ನು ಒಳಗೊಂಡಿದೆ.
   - ವಚನ 4 ಒಂದು ಸಮಾನಾರ್ಥಕ ಸಮಾನಾಂತರತೆಯನ್ನು ಒಳಗೊಂಡಿದೆ.
   - ವಚನ 5 ಮತ್ತು 6 ಸಹ ಒಂದು ಸಮಾನಾರ್ಥಕ ಸಮಾನಾಂತರತೆಯನ್ನು ಒಳಗೊಂಡಿದೆ.

2. ವಚನ 7–8 ಅನ್ನು ನಾನು ಈ ರೀತಿ ಅರ್ಥೈಸಿಕೊಳ್ಳುತ್ತೇನೆ: ಉಳಿದ ಜನರು ಅಂದರೆ ವಿಶೇಷವಾಗಿ ದುಷ್ಟರು ಅತಿಯಾದ ವೈರಿಗಳ ದಾಳಿಗೆ, ಭಯಂಕರವಾದ ಅಪಾಯ ಮತ್ತು ರೋಗಗಳಿಗೆ ತುತ್ತಾಗುವರು. ಆದರೆ ಇಂತಹ ಅಪಾಯಗಳು ನಿನಗೆ ಕೇಡನ್ನುಂಟುಮಾಡುವುದಿಲ್ಲ. ನಿನ್ನ ಸುತ್ತಲಿನ ಜನರು ಸಾಯುವುದನ್ನು ನೀನು ಕಾಣುವಿ, ಆದರೆ ದೇವರು ನಿನ್ನನ್ನು ಅವೆಲ್ಲವುಗಳಿಂದ ಕಾಪಾಡುವನು.

3. ವಚನ 14–16 ರಲ್ಲಿನ ಅಂಶ ದೈವಶಾಸ್ತ್ರವಾಗಿರುವಂತೆ ತೋರುತ್ತದೆ: ದೇವರಿಗೆ ಮೀಸಲಾಗಿರುವ ವ್ಯಕ್ತಿಗೆ ದೇವರು ಬಿಡುಗಡೆ, ಸಂರಕ್ಷಣೆ, ಸದುತ್ತರ, ಜೊತೆಗಿರುವುದು, ವಿಮೋಚನೆ, ಗೌರವ, ದೀರ್ಘಾಯುಷ್ಯ ಮತ್ತು ರಕ್ಷಣೆಯ ವಾಗ್ದಾನವನ್ನು ಮಾಡುತ್ತಾನೆ. ಇವೆಲ್ಲವೂ ಒಡಂಬಡಿಕೆಯ ಒಳಗೇ ಆಗುವಂತವುಗಳಾಗಿವೆ. ದೇವರ ವಾಗ್ದಾನಗಳು ಯಾರು ಬೇಕಾದರೂ ಮಾಡುವಂತಹ ಸಮಾನ್ಯವಾದ ವಾಗ್ದಾನಗಳಲ್ಲ. ಇಲ್ಲಿ ದೇವರ ವಾಗ್ದಾನಗಳು ಆತನ ಒಡಂಬಡಿಕೆಯ ಜನರಿಗಾಗಿ ಇರುವಂಥವುಗಳಾಗಿವೆ.

4. ವಚನ 1 ರ ಕುರಿತಾಗಿನ ನನ್ನ ತಿಳುವಳಿಕೆಯೇನೆಂದರೆ ಪ್ರಾಥಮಿಕವಾಗಿ ಇದೊಂದು "ನಂಬಿಕೆಯ ಹೇಳಿಕೆ"ಯಾಗಿದೆ ವಿನಃ "ವಾಸ್ತಾವಿಕ ಹೇಳಿಕೆ"ಯಲ್ಲ. ಇಂತಹ ಅಪಾಯಗಳಿಂದ ದೇವರು ರಕ್ಷಿಸುತ್ತಾನೆಂದು ಕೀರ್ತನೆಗಾರನು 4 ಅಪಾಯಗಳ ಬಗ್ಗೆ ಹೇಳುವುದನ್ನು ಗಮನಿಸುವಾಗ (ವೈರಿಗಳ ಆಕ್ರಮಣ, ಭಯಂಕರ ರೋಗ, ಭಯಂಕರ ಪ್ರಯಾಣ ಮತ್ತು ಅಪಾಯಕಾರಿ ಪ್ರಾಣಿಗಳು) ಕೆಲ ಸಮಯ ದೇವಜನರು ಸಹ ರಕ್ಷಿತರಾಗಿಲ್ಲವೆಂಬುದನ್ನು ನಮ್ಮ ಮನಃಸಾಕ್ಷಿ ಹೇಳುತ್ತದೆ. ಕೆಲಬಾರಿ ಸಂತರು (ದೈವಭಕ್ತರು) ದುಷ್ಟ ಜನರ ದಾಳಿಗೆ ಒಳಗಾಗಿದ್ದಾರೆ, ವಿಷಕಾರಿ ಹಾವುಗಳಿಂದ ಕಚ್ಚಿಸಿಕೊಂಡಿದ್ದಾರೆ, ಭಯಾನಕ ರೋಗಕ್ಕೆ ತುತ್ತಾಗಿದ್ದಾರೆ ಮತ್ತು ರಸ್ತೆ ಮತ್ತು ವಿಮಾನ ಅಪಘಾತಗಳಲ್ಲಿ ಸತ್ತಿದ್ದಾರೆ.

   ಬಹುಶಃ ನಾವು ಈ ರೀತಿಯ ಹಳೇ ಒಡಂಬಡಿಕೆಯ "ಜ್ಞಾನ ದೈವಶಾಸ್ತ್ರ"ವನ್ನು ಪೌಲನ ದೃಷ್ಟಿಕೋನದಿಂದ ಸಮೀಪಿಸಬೇಕು.

   ರೋಮಾ. 8:35–37 ರಲ್ಲಿ ಪೌಲನು ಬರೆಯುತ್ತಾನೆ:

   ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವುದೋ ವಸ್ತ್ರವಿಲ್ಲದಿರುವುದೋ ಗಂಡಾಂತರವೋ ಖಡ್ಗವೋ? (ಕೀರ್ತನೆ 44:22 ರಲ್ಲಿ) ಬರೆಯಲ್ಪಟ್ಟಂತೆ:

   ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ;

   ಜನರು ನಮ್ಮನ್ನು ಕೊಯ್ಗುರಿಗಳಂತೆ ಎಣಿಸಿದ್ದಾರೆ.

   ಕೀರ್ತನೆ 91:10 ರಲ್ಲಿ ನಾವು ಓದುತ್ತೇವೆ, "ಆಗ ನಿಮಗೆ ಯಾವುದೇ ಕೇಡು ಸಂಭವಿಸುವುದಿಲ್ಲ" ಮತ್ತು ಪೌಲನು, ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು" ಎಂದು ಹೇಳುತ್ತಾನೆ. ಆದ್ದರಿಂದ ಪೌಲನು ವಾಸ್ತವವಾಗಿ ನಮಗೆ ಹಾನಿಯಾಗುತ್ತದೆ ಎಂದು ಸೂಚಿಸುತ್ತಾನೆ. ಆದರೂ ಎರಡೂ ಭಾಗಗಳು ಪ್ರಾಯೋಗಿಕವಾಗಿ ಒಂದೇ ವಿಷಯವನ್ನು ಹೇಳುತ್ತವೆ. ಪೌಲನು ಹಿಂದಿನ ಕೀರ್ತನೆಯನ್ನು ಉಲ್ಲೇಖಿಸಿದ ನಂತರ ಏನಾಗುತ್ತದೆ ಎಂಬುದು ನಿರ್ಣಾಯಕ ವಿಷಯವಾಗಿದೆ, "ನಮ್ಮನ್ನು ಪ್ರೀತಿಸಿದಾತನ ಮೂಲಕ ನಾವು ಎಲ್ಲದರಲ್ಲೂ ಜಯಶಾಲಿಗಳಾಗಿದ್ದೇವೆ" (ರೋಮಾ. 8:37). "ಇವೆಲ್ಲವುಗಳಲ್ಲಿ" ಎಂದರೆ ನಾವು ಹಾನಿಕಾರಕ ವಿಷಯಗಳಿಂದ ರಕ್ಷಿಸಲ್ಪಟ್ಟಿಲ್ಲ ಎಂದರ್ಥ. ಆದ್ದರಿಂದ ನಮಗೆ ಸಂಭವಿಸುವ ಹಾನಿಕಾರಕ ವಿಷಯಗಳ ಹೊರತಾಗಿಯೂ ನಾವು ರಕ್ಷಿಸಲ್ಪಟ್ಟಿದ್ದೇವೆ.

   ಆದ್ದರಿಂದ ನಾವು ಕೀರ್ತನೆ 91:9–10 ರಲ್ಲಿ ಸಮಸ್ಯೆಗಳನ್ನು ಹೊಂದಿರುವಾಗ, ಮತ್ತು "ದೇವರ ಜನರು ಆತನನ್ನು ನಂಬಿ ವಿಧೇಯರಾದಾಗ ಮತ್ತು ಆತನಲ್ಲಿ ಆಶ್ರಯ ಪಡೆದಾಗಲೂ ಅವರಿಗೆ ಹಾನಿ ಸಂಭವಿಸುತ್ತದೆ" ಎಂದು ಪ್ರತಿಭಟಿಸಿದಾಗ, ಈ ವಚನಗಳ ಕುರಿತು ಸ್ಪರ್ಜನ್ ಅವರ ಹೇಳಿಕೆಯನ್ನು ನಾವು ಪರಿಗಣಿಸಬೇಕು, "ಕರ್ತನಿಗೆ ಪ್ರಿಯನಾದ ಮನುಷ್ಯನಿಗೆ ಯಾವುದೇ ಕೆಟ್ಟದ್ದು ಸಂಭವಿಸುವುದು ಅಸಾಧ್ಯ. ಏಕೆಂದರೆ ಅವನಿಗೆ ಕೆಟ್ಟದ್ದು ಅನಾರೋಗ್ಯವಲ್ಲ, ಆದರೆ ಅದು ನಿಗೂಢ ರೂಪದಲ್ಲಿ ಒಳ್ಳೆಯದು. ನಷ್ಟಗಳು ಅವನನ್ನು ಶ್ರೀಮಂತಗೊಳಿಸುತ್ತವೆ, ಅನಾರೋಗ್ಯವು ಅವನ ಔಷಧವಾಗಿರುತ್ತದೆ, ನಿಂದೆ ಅವನ ಗೌರವವಾಗಿರುತ್ತದೆ, ಸಾವು ಅವನ ಲಾಭವಾಗಿರುತ್ತದೆ. ಕಟ್ಟುನಿಟ್ಟಾದ ಅರ್ಥದಲ್ಲಿ ಯಾವುದೇ ಕೆಟ್ಟದ್ದು ಅವನಿಗೆ ಸಂಭವಿಸುವುದಿಲ್ಲ, ಏಕೆಂದರೆ ಎಲ್ಲವು ಒಳ್ಳೆಯದಕ್ಕಾಗಿ ತಳ್ಳಿಹಾಕಲ್ಪಡುತ್ತದೆ" (ವಿಲ್‌ಕಾಕ್ ಆಧರಿಸಿ).

5. –

6. –

7. ಇದೊಂದು "ಭರವಸೆಯ ಹಾಡು" ಎಂಬುದಾಗಿ ನಾನು ಪರಿಗಣಿಸುತ್ತೇನೆ. "ಭರವಸೆ ಮತ್ತು ನಂಬಿಕೆ" ಇವೆರಡೂ ಸಹ ಕ್ರೈಸ್ತೀಯ ಜೀವಿತದಲ್ಲಿ ಬೇರ್ಪಡಿಸಲಾಗದವುಗಳಾಗಿವೆ. ಯೇಸು ಕ್ರಿಸ್ತನಲ್ಲಿನ ನಂಬಿಕೆಯ ಪರಿಣಾಮವಾಗಿ, ವೈರಿಗಳ, ಅನಾರೋಗ್ಯ ಮತ್ತು ಎಲ್ಲಾ ಬಗೆಯ ಅಪಾಯಗಳ ನಡುವೆಯೂ ನಾವು ಪೂರ್ಣ ಜಯಶಾಲಿಗಳಾಗಿದ್ದೇವೆ (ರೋಮಾ.8:37).

ಕೀರ್ತನೆ 102 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 102 ಅನ್ನು ನಾವು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ಕೀರ್ತನೆಗಾರನು ದೇವರಿಗೆ ಮನವಿ ಮಾಡಿಕೊಳ್ಳುತ್ತಾನೆ, ವಚನ 1–2

   ಆ. ಕೀರ್ತನೆಗಾರನು ತನ್ನ ವ್ಯಥೆಯನ್ನು ವರ್ಣಿಸುವುದು, ವಚನ 3–11

   ಇ. ಕೀರ್ತನೆಗಾರನು ಯೆರೂಸಲೇಮಿನ ಮೇಲಿನ ದೇವರ ಕರುಣೆಯಲ್ಲಿ ತನ್ನ ಭರವಸೆಯನ್ನು ವ್ಯಕ್ತಪಡಿಸುವುದು, ವಚನ 12–17

   ಈ. ಕೀರ್ತನೆಗಾರನು ದೇವರ ಮಧ್ಯಪ್ರವೇಶವನ್ನು ದಾಖಲಿಸಲ್ಪಡಬೇಕೆಂದು, ಆ ಮೂಲಕ ಮುಂದಿನ ಸಂತತಿಯು ಆತನನ್ನು ಕೊಂಡಾಡುವರೆಂದು ಮನವಿ ಮಾಡಿಕೊಳ್ಳುತ್ತಾನೆ, ವಚನ 18–22

   ಉ. ಕೀರ್ತನೆಗಾರನು ಇಕ್ಕಟ್ಟಿನಲ್ಲಿ ಸಹ ದೇವರಲ್ಲಿ ತನ್ನ ಭರವಸೆಯನ್ನು ವ್ಯಕ್ತಪಡಿಸುವುದು, ವಚನ 23–28

2. 12 ನೇ ವಚನದಲ್ಲಿರುವ **"ಆದರೆ"** ಎಂಬ ಪದವು ಕೀರ್ತನೆಯಲ್ಲಿ ಒಂದು ಮಹತ್ವದ ತಿರುವು ನೀಡುತ್ತದೆ. ತನ್ನ ಕಾರ್ಯದ ಕಾವ್ಯಾತ್ಮಕವಾಗಿ ವರ್ಣಮಯ ವಿವರಣೆಯಿಂದ, ಕೀರ್ತನೆಗಾರನು ತನ್ನ ಪವಿತ್ರ ನಗರವಾದ ಯೆರೂಸಲೇಮ್‌ಗೆ ದೇವರು ತೋರಿಸಿದ ದಯೆಯ ನಂಬಿಗಸ್ತಿಕೆಯಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಲು ತಿರುಗುತ್ತಾನೆ.

3. ಇಬ್ರಿಯ ಶೀರ್ಷಿಕೆಯು ಕೀರ್ತನೆಯನ್ನು ಅತ್ಯುತ್ತಮವಾಗಿ ಸಾರಾಂಶಗೊಳಿಸುತ್ತದೆ:

   ಅ. ಇದೊಂದು ಪ್ರಾರ್ಥನೆಯಾಗಿದೆ:

   - ಯೆಹೋವನೇ ನನ್ನ ಪ್ರಾರ್ಥನೆಯನ್ನು ಕೇಳು (ವಚನ 1)
   - ಬೇಗನೇ ಸದುತ್ತರವನ್ನು ದಯಪಾಲಿಸು (ವಚನ 2)

   ಆ. ಇದು ಕಷ್ಟದಲ್ಲಿರುವ ವ್ಯಕ್ತಿಯಿಂದ ಬರೆಯಲ್ಪಟ್ಟಿದೆ:

   - ನನ್ನ ಕಷ್ಟದಲ್ಲಿ (ವಚನ 2)
   - ನನ್ನ ಪಾನದಲ್ಲಿ ಕಣ್ಣೀರು ಮಿಶ್ರವಾಯಿತು (ವಚನ 9)

   ಇ. ಕೀರ್ತನೆಗಾರನು ಬಳಲಿರುವನು:

   - ನನ್ನಲ್ಲಿ ಎಲುಬು ತೊಗಲು ಮಾತ್ರ ಉಳಿದಿರುತ್ತದೆ (ವಚನ 5)
   - ನಾನು ಬಾಡಿದ ಹುಲ್ಲಿನಂತಿದ್ದೇನೆ (ವಚನ 11)
   - ನನ್ನ ದೇವರೇ ಅರ್ಧಾಯುಷ್ಯದಲ್ಲಿಯೇ ನನ್ನನ್ನು ಒಯ್ಯಬೇಡ (ವಚನ 24)

   ಈ. ಕೀರ್ತನೆಗಾರನು ದೇವರ ಮುಂದೆ ತನ್ನ ಪ್ರಲಾಪವನ್ನು ಹೊಯ್ದುಕೊಳ್ಳುವುದು:

   - ನನ್ನ ಕೂಗು ನಿನಗೆ ಮುಟ್ಟಲಿ (ವಚನ 1)
   - ಬೇಗನೇ ಸದುತ್ತರವನ್ನು ದಯಪಾಲಿಸು (ವಚನ 2)

4. ಕೀರ್ತನೆಗಾರನು ದೇವರನ್ನು ಮತ್ತು ಇತರರನ್ನು ಕೀರ್ತನೆಯ ವಿವಿಧ ಭಾಗಗಳಲ್ಲಿ ಈ ರೀತಿಯಾಗಿ ಸಂಬೋಧಿಸುತ್ತಾನೆ:

   ಅ. ವಚನ 1–2 ರಲ್ಲಿ ದೇವರನ್ನು: ಯೆಹೋವನೇ, ನಿನಗೆ, ವಿಮುಖನಾಗಬೇಡ.

   ಆ. ದೇವಜನರ ಸಮೂಹ ವಚನ 3–23: ಕೀರ್ತನೆಗಾರನ ಸಾಕ್ಷಿ.

ಇ. ದೇವಜನರ ಸಮೂಹದ ಮೂಲಕ ದೇವರನ್ನು ವಚನ 24–28: ಕೀರ್ತನೆಗಾರನು ಈಗಲೂ ದೇವಜನರನ್ನು ಸಂಬೋಧಿಸುತ್ತಿದ್ದಾನೆ.

5. ಕೀರ್ತನೆಗಾರನು ದೇವರ ಸದುತ್ತರಗಳನ್ನು ಬರೆದಿಡಬೇಕೆಂದು ಬಯಸುತ್ತಾನೆ. ಯಾಕೆಂದರೆ, ಇದರಿಂದ ಮುಂದಿನ ಸಂತತಿಯು ನಮ್ಮ ದೇವರು ಪ್ರಾರ್ಥನೆಗೆ ಉತ್ತರಿಸುವ ದೇವರೆಂದು ತಿಳಿದುಕೊಳ್ಳುವರು. ಆಗ ಅವರು ದೇವರನ್ನು ಕೊಂಡಾಡುವರು (ವಚನ 18).

6. ದೇವರು ಯೆರೂಸಲೇಮ್ ಪಟ್ಟಣವನ್ನು ಕಟ್ಟಿಸುವುದರ ಮೂಲಕ ಕೀರ್ತನೆಗಾರನ ಪ್ರಾರ್ಥನೆಗೆ ಉತ್ತರಿಸುವನು ಮತ್ತು ಚೀಯೋನಿಗೆ ಕರುಣೆ ತೋರಿಸುವನು (ವಚನ 13–17).

7. ಯೆರೂಸಲೇಮ್ ಪಟ್ಟಣವು ತಿರುಗಿ ಕಟ್ಟಲ್ಪಟ್ಟಾಗ ಜನಾಂಗಗಳು ಮತ್ತು ಭೂರಾಜರು ದೇವರ ನಾಮಕ್ಕೆ ಭಯಪಡುವರು (ವಚನ 16–17).

8. ಕೀರ್ತನೆಗಾರನು ಜನಾಂಗಗಳೂ ಮತ್ತು ರಾಜ್ಯಗಳೂ ಯೆಹೋವನನ್ನು ಆರಾಧಿಸುವುದಕ್ಕೆ ಕೂಡಿ ಬರುವರು ಎಂದು ಹೇಳುತ್ತಾನೆ (ವಚನ 22). ಇದರ ಹಿನ್ನಲೆಯು ಬಾಬೆಲಿನ ಸೆರೆಯಿಂದ ಬಿಡುಗಡೆಯಾದಾಗ, ಯೆರೂಸಲೇಮಿಗೆ ತಿರುಗಿ ಬರುವಾಗ ಅವರು ದೇವರನ್ನು ಸ್ತುತಿಸಿ ಕೊಂಡಾಡುತ್ತಾರೆ (ವಚನ 20–21).

9. ಕೀರ್ತನೆಗಾರನು ವಚನ 24 ರಲ್ಲಿ ಪುನಃ ತನ್ನ ವೈಯಕ್ತಿಕ ಬಾಧೆಗೆ ಹಿಂದಿರುಗುತ್ತಾನೆ. ಇಲ್ಲಿ ಆತನು ತನ್ನನ್ನು ಬದುಕಲು ಬಿಡು, ಅರ್ಧಾಯುಷ್ಯದಲ್ಲಿ ಕೊಂಡೊಯ್ಯಬೇಡವೆಂದು ದೇವರಲ್ಲಿ ಬೇಡಿಕೊಳ್ಳುತ್ತಾನೆ.

10. ಕೀರ್ತನೆಯ ಅಂತ್ಯಕ್ಕನುಸಾರವಾಗಿ ದೇವಜನರ (ಸೇವಕರ) ಭವಿಷ್ಯವು ದೇವರ ಸನ್ನಿಧಿಯಲ್ಲಿ ಬಾಳುವ ನಿತ್ಯಜೀವವಾಗಿದೆ (ವಚನ 27–28).

ಕೀರ್ತನೆ 102 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಕೀರ್ತನೆಯು ಬಾಬೆಲಿನ ಸೆರೆಯ ಸಮಯದಲ್ಲಿ ಬರೆಯಲ್ಪಟ್ಟಿರಬಹುದು. ಯೆರೂಸಲೇಮ್ ಪಟ್ಟಣವು ನಾಶವಾಗಿದೆ, ಇನ್ನೂ ಸಹ ತಿರುಗಿ ಕಟ್ಟಿಲ್ಲ (ವಚನ 14, 16). ಯೆರೂಸಲೇಮು ಕ್ರಿ.ಪೂ. 587–586 ರಲ್ಲಿ ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನಿಂದ ನಾಶಗೊಳಿಸಲ್ಪಟ್ಟಿತು ಮತ್ತು ಅನಂತರ ಕ್ರಿ.ಪೂ. 538 ರಲ್ಲಿ ಸೆರೆಯಿಂದ ಹಿಂದಿರುಗಿ ಬಂದ ಯೆಹೂದ್ಯರಿಂದ ಪುನಃ ಕಟ್ಟಲ್ಪಟ್ಟಿತು. ಕ್ರಿ.ಪೂ. 516 ರಲ್ಲಿ ಯೆರೂಸಲೇಮ್ ದೇವಾಲಯವು ಪುನಃ ಪ್ರತಿಷ್ಠಾಪಿಸಲ್ಪಟ್ಟಿತು.

2. ಈ ಕೀರ್ತನೆಯ ವಿಭಿನ್ನ ಭಾಗಗಳು ಪರಸ್ಪರ ಹೇಗೆ ಹೊಂದಿಕೆಯಾಗುತ್ತವೆ ಎಂಬುದನ್ನು ನೋಡಲು ಆಧುನಿಕ ಓದುಗರಾದ ನಮಗೆ ಕಷ್ಟವೆನಿಸುತ್ತದೆ. ಕೀರ್ತನೆಗಾರನ ವೈಯಕ್ತಿಕ ವೇದನೆ (ವಚನ 3–11) ಮತ್ತು **"**ಎದ್ದು ಚೀಯೋನನ್ನು ಕರುಣಿಸು**"** (ವಚನ 13) ಎಂದು ಆತನು ದೇವರಿಗೆ ಮಾಡುವ ಪ್ರಾರ್ಥನೆಯ ನಡುವಿನ ಸಂಬಂಧವನ್ನು ನಾನು ಈ ರೀತಿ ಅರ್ಥೈಸಿಕೊಳ್ಳುತ್ತೇನೆ:

   ಕೀರ್ತನೆಗಾರನು ಒಬ್ಬ ಲೇವಿಯನಾಗಿದ್ದು, ಬಾಬೆಲಿನ ಸೆರೆಯ ಸಮಯದಲ್ಲಿ ಬಾಬೆಲಿನಲ್ಲಿ ವಾಸಿಸುತ್ತಿದ್ದನು. ಯೆರೂಸಲೇಮಿನ ಹಾಳಾದ ದೇವಾಲಯ ಮತ್ತು ಯೆರೂಸಲೇಮ್ ಪಟ್ಟಣದ ಕುರಿತಾದ ಆಲೋಚನೆಗಳು ಆತನಿಗೆ ವೇದನೆಯನ್ನುಂಟುಮಾಡಿದವು. ಬಾಬೆಲಿನಲ್ಲಿ ಸೆರೆಯಾಳಾಗಿರುವ ಆತನಿಗೆ ಯೆರೂಸಲೇಮಿಗೆ ಹಿಂತಿರುಗಲು ಅನುಮತಿಯಿರಲಿಲ್ಲ. ಬದಲಾಗಿ ಆತನಿಗೆ ಈ ವಿದೇಶಿ ನೆಲದಲ್ಲಿಯೇ ಸಾಯುವಂತೆ ಖಂಡನೆ ಹೇರಲಾಯಿತು. ಈ ಬಯಕೆ ಮತ್ತು ಸೆರೆಯಲ್ಲಿನ ಜೀವನದ ಪರಿಸ್ಥಿತಿಗಳು ಆತನನ್ನು ಶಾರೀರಿಕವಾಗಿ ಅನಾರೋಗ್ಯಕ್ಕೆ ತಳ್ಳಿರಬಹುದು (ವಚನ 3–11), ಕೆಲವೊಮ್ಮೆ ತಾನು ಸಾಯುತ್ತೇನೆಂಬುದಾಗಿ ಆತನು ಯೋಚಿಸುತ್ತಾನೆ (ವಚನ 23). ಹಾಗಾಗಿ ಯೆರೂಸಲೇಮನ್ನು ಪುನಃ ಸ್ಥಾಪಿಸು ಎಂಬ ಕೀರ್ತನೆಗಾರನ ಪ್ರಾರ್ಥನೆಯು, ಸ್ವತಃ ಆತನ ಮಾನಸಿಕ ಮತ್ತು ದೈಹಿಕ ಚೇತರಿಕೆಯೊಂದಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಯೆರೂಸಲೇಮು ಮತ್ತು ಅದರ ದೇವಾಲಯದ ನಾಶನದ ಪರಿಣಾಮವಾಗಿ ಆತನು ಬಾಧೆಪಟ್ಟನು. ದೇವರು ಚೀಯೋನಿಗೆ ಕೃಪೆ ತೋರಿಸಲು ಏಳುವಾಗ ಆತನೂ ಸಹ ಚೇತರಿಸಿಕೊಳ್ಳಬಹುದಾಗಿದೆ (ವಚನ 13). ಯೆರೂಸಲೇಮ್ ಮತ್ತು ಅದರ ದೇವಾಲಯವು ತಿರುಗಿ ಕಟ್ಟಲ್ಪಡುವಾಗ ದೇವರು ಮಹಿಮೆಯಲ್ಲಿ ಕಾಣಿಸಿಕೊಳ್ಳುತ್ತಾನೆ (ವಚನ 16).

3. ಈ ಕೀರ್ತನೆಯ ಕಾಲಾವಧಿಯು ಭೂಮಂಡಲದ ಸೃಷ್ಟಿಯಿಂದ **"**ನೂತನ ಭೂಮ್ಯಾಕಾಶಗಳ**"** ವರೆಗೂ ಸಾಗುತ್ತದೆ. ಇದರಲ್ಲಿ ಸುಮಾರು ನಾಲ್ಕು ಕಾಲಾವಧಿಯ ದೃಷ್ಟಿಕೋನವನ್ನು ಕಾಣಬಹುದು:

ಅ. ನಿತ್ಯತ್ವದ ದೃಷ್ಟಿಕೋನ: ದೇವರು ಸದಾ ಸಿಂಹಾಸನಾರೂಢನಾಗಿರುವನು (ವಚನ 12). ಆತನ ವರುಷಗಳು ತಲತಲಾಂತರಕ್ಕೂ ಇರುತ್ತವೆ (ವಚನ 24). ಆತನು ಶಾಶ್ವತವಾಗಿರುತ್ತಾನೆ (ವಚನ 26). ಆತನು ಏಕರೀತಿಯಾಗಿರುತ್ತಾನೆ ಮತ್ತು ಆತನ ವರುಷಗಳು ಮುಗಿದು ಹೋಗುವುದಿಲ್ಲ (ವಚನ 27).

ಆ. ಭೂತಕಾಲದ ದುಷ್ಟಿಕೋನ: ದೇವರು ಭೂಮ್ಯಾಕಾಶಗಳನ್ನು ಸೃಷ್ಟಿಸಿದನು: ಆದಿಯಲ್ಲಿ ದೇವರು ಭೂಮಿಗೆ ಅಸ್ತಿವಾರವನ್ನು ಹಾಕಿದ್ದಾನೆ. ಗಗನಮಂಡಲವೆಲ್ಲಾ ಆತನ ಕೈಕೆಲಸವಾಗಿದೆ (ವಚನ 25).

ಇ. ಪ್ರಸಕ್ತ ದೃಷ್ಟಿಕೋನ: ನಾವು ಕಷ್ಟದಲ್ಲಿರುವಾಗ ದೇವರು ವಿಮುಖನಾಗುವುದಿಲ್ಲ ಮತ್ತು ನಾವು ಪ್ರಾರ್ಥಿಸುವಾಗ ಆತನು ಉತ್ತರಿಸುತ್ತಾನೆ (ವಚನ 2). ತನ್ನ ಜನರನ್ನು ಕರುಣಿಸಿ, ತನ್ನ ಸಭೆಗೆ ಕೃಪೆಯನ್ನು ತೋರಿಸುತ್ತಾನೆ (ವಚನ 13). ನಮ್ಮ ಗೋಳಾಟವನ್ನು ಆತನು ಲಕ್ಷಿಸುತ್ತಾನೆ ಮತ್ತು ನಮ್ಮ ಬಾಧೆಯನ್ನು ನೋಡುತ್ತಾನೆ (ವಚನ 20).

ಈ. ಭವಿಷ್ಯದ ದೃಷ್ಟಿಕೋನ: ದೇವರು ಚೀಯೋನನ್ನು ತಿರುಗಿ ಕಟ್ಟುವನು (ವಚನ 16). ತನ್ನ ಜನರನ್ನು ಆತನು ಪುನರ್‌ಸ್ಥಾಪಿಸುತ್ತಾನೆ ಮತ್ತು ಜನಾಂಗಗಳಿಂದ ಸ್ತುತಿಸಲ್ಪಡುತ್ತಾನೆ (ವಚನ 21–22). ಮನುಷ್ಯನು ಹಳೇ ಬಟ್ಟೆ ತೆಗೆದಿಟ್ಟು ಹೊಸ ಬಟ್ಟೆ ಹಾಕುವಂತೆ ಪ್ರಸ್ತುತ ಭೂಮ್ಯಾಕಾಶಗಳನ್ನು "ನೂತನ ಭೂಮ್ಯಾಕಾಶಗಳಿಂದ" ಬದಲಿಸುತ್ತಾನೆ (ವಚನ 25–26, 2 ಪೇತ್ರ 3:13).

4. ಈ ಕೀರ್ತನೆಯು ಚಿತ್ರಣಗಳಿಂದ ತುಂಬಿದೆ. ಕೆಲವನ್ನು **ಪೀಠಿಕೆ ಮತ್ತು ಟಿಪ್ಪಣಿಗಳಲ್ಲಿ** ಉಲ್ಲೇಖಿಸಲಾಗಿದೆ. ಇನ್ನೂ ಕೆಲವು ಇಲ್ಲಿವೆ:

ಅ. ಚಿತ್ರಣ:

- ಉಪಮೆಗಳು: ನನ್ನ ಜೀವಮಾನವು ಹೊಗೆಯಂತೆ, ನನ್ನ ಎಲುಬು ಕೊಳ್ಳಿಯಂತೆ, ನನ್ನ ಹೃದಯವು ಬಾಡಿಹೋದ ಹುಲ್ಲಿನಂತೆ (ವಚನ 3) – ಇವೆಲ್ಲಾ ಕೀರ್ತನೆಗಾರನ ಜೀವನದಲ್ಲಿನ ಒಣಗಿದ, ನಿಂತಂತ ಮತ್ತು ಫಲವಿಲ್ಲದ ಅನುಭವಗಳ ಹೇಳಿಕೆಗಳಾಗಿವೆ.

- ರೂಪಾಲಂಕಾರಗಳು: ಸಿಂಹಾಸನಾರೂಢನಾಗಿರುವಿ (ವಚನ 12) – ದೇವರು ಅರಸನಂತೆ ಆಳುವುದು. ಅರ್ಧಾಯುಷ್ಯದಲ್ಲಿಯೇ ನನ್ನನ್ನು ಒಯ್ಯಬೇಡ (ವಚನ 24) – ಬೇಗನೇ ನನ್ನನ್ನು ಸಾಯಲು ಬಿಡಬೇಡ.

- ಮಾನವೀಕರಣ: ನೀನು ನನ್ನನ್ನು ಎತ್ತಿ ಒಗೆದುಬಿಟ್ಟಿದ್ದೀಯಲ್ಲಾ (ವಚನ 10), ಯೆಹೋವನೇ ನೀನಾದರೋ ಸದಾ ಸಿಂಹಾಸನಾರೂಢನಾಗಿರುವಿ (ವಚನ 12), ನೀನು ಎದ್ದು (ವಚನ 13), ನಿನ್ನ ಕೈ ಕೆಲಸ (ವಚನ 25) – ಈ ಎಲ್ಲಾ ಹೇಳಿಕೆಗಳಲ್ಲಿ ಮನುಷ್ಯನ ಕಾರ್ಯಗಳೊಂದಿಗೆ ದೇವರನ್ನು ಚಿತ್ರಿಸಲಾಗಿದೆ.

ಆ. ಇತರ ಪದ್ಯರೂಪಿ ಅಂಶಗಳು:

- ಅತಿಶಯೋಕ್ತಿ: ನನ್ನಲ್ಲಿ ಎಲುಬು ತೊಗಲು ಮಾತ್ರ ಉಳಿದಿರುತ್ತದೆ (ವಚನ 5), ಬೂದಿಯೇ ನನಗೆ ಆಹಾರವಾಯಿತು, ನನ್ನ ಪಾನದಲ್ಲಿ ಕಣ್ಣೀರು ಮಿಶ್ರವಾಯಿತು (ವಚನ 9) – ಆತನ ಜೀವಿತವು ದುಃಖ ಮತ್ತು ಶೋಕಮಯವಾಗಿದೆ.

- ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ (ಯಾವುದೋ ಒಂದು ಭಾಗದ ಭಾಗವು ಇಡೀ ವಸ್ತುವನ್ನು ಪ್ರತಿನಿಧಿಸುತ್ತದೆ): ನನ್ನ ಎಲುಬುಗಳು ... ನನ್ನ ಹೃದಯ ... (ವಚನ 3–4) – ಕೀರ್ತನೆಗಾರನ ಇಡೀ ವ್ಯಕ್ತಿಯನ್ನು ಪ್ರತಿನಿಧಿಸುತ್ತದೆ. ಅವಳ ಕಲ್ಲುಗಳು ಮತ್ತು ಅವಳ ಧೂಳು (ವಚನ 14) – ಇಡೀ ದೇವಾಲಯವನ್ನು ಪ್ರತಿನಿಧಿಸುತ್ತದೆ.

5. –

6. ಕೀರ್ತನೆ 102ರ ಸ್ವರ/ಭಾವವು ಕಷ್ಟ, ವೇದನೆ, ಬಾಧೆ ಮತ್ತು ಏಕಾಂಗಿತನದಿಂದ (ವಚನ 1–11) ಭರವಸೆ, ನಂಬಿಕೆ, ದೇವರಿಗಾಗಿನ ಗೌರವ ಮತ್ತು ಕೃತಜ್ಞತೆಯೆಡೆಗೆ ಸಾಗುತ್ತದೆ.

ಕೀರ್ತನೆ 103 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 103 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ಪೀಠಿಕೆ: ದೇವರನ್ನು ಸ್ತುತಿಸಿ ಕೊಂಡಾಡಲು ಕರೆ, ವಚನ 1–2

   - ದಾವೀದನಿಗಾಗಿ ದೇವರ ಪ್ರೀತಿ ಮತ್ತು ಕರುಣೆ, ವಚನ 3–5

   ಆ. ದೇವರ ನೀತಿವಂತಿಕೆಯ ಪ್ರಕಟಣೆ (ಘೋಷಣೆ), ವಚನ 6

   - ತನ್ನ ಪಾಪಮಯ ಮತ್ತು ಬಲಹೀನ ಜನರಿಗಾಗಿ ದೇವರ ಪ್ರೀತಿ ಮತ್ತು ಕನಿಕರ, ವಚನ 7–18

   ಇ. ದೇವರ ರಾಜ್ಯದ ಪ್ರಕಟಣೆ, ವಚನ 19

   ಈ. ತೀರ್ಮಾನ: ದೇವರನ್ನು ಸ್ತುತಿಸಲು ಕರೆ, ವಚನ 20–22

2. "ನನ್ನ ಮನವೇ ಯೆಹೋವನನ್ನು ಕೊಂಡಾಡು" (ವಚನ 1, 22) ಎಂಬ ಹೇಳಿಕೆಯಿಂದ ದಾವೀದನು ಈ ಕೀರ್ತನೆಯನ್ನು ಪ್ರಾರಂಭಿಸಿ ಮುಕ್ತಾಯಗೊಳಿಸುತ್ತಾನೆ. ಈ ಸಾಹಿತ್ಯದ ರಚನೆಯನ್ನು "ಆವರಣ" ಎನ್ನುವರು. ಒತ್ತಾಗಿ ಹೇಳಲು ಇದನ್ನು ಬಳಸಲಾಗುತ್ತದೆ.

3. ದಾವೀದನು ಕೀರ್ತನೆಯ ಮೊದಲ ಭಾಗದಲ್ಲಿ ತನ್ನನ್ನೇ ಸಂಬೋಧಿಸಿಕೊಳ್ಳುತ್ತಾನೆ (ವಚನ 1–5). ತನ್ನ ಕುರಿತಾಗಿ ಮೊದಲ ವಚನದಲ್ಲಿ ಆತನು ಎರಡು ಹೇಳಿಕೆಗಳನ್ನು ಬಳಸುತ್ತಾನೆ ("ನನ್ನ ಮನವೇ" ಮತ್ತು "ನನ್ನ ಸರ್ವೇಂದ್ರಿಯಗಳೇ"). ಹಾಗಾಗಿ ಈ ವಚನದಲ್ಲಿನ "ನಿನ್ನ" ಮತ್ತು "ನೀನು" ಎಂಬ ನಾಮಪದಗಳ ಬಗ್ಗೆ ನಾವು ಗೊಂದಲಕ್ಕೀಡಾಗಬಾರದು. ನಿಜವಾಗಲೂ ಅವು "ನನ್ನ" (ನನ್ನ ಅಪರಾಧ, ನನ್ನ ರೋಗ, ನನ್ನ ಜೀವ, ನನ್ನ ಆಶೆ, ನನ್ನ ಯೌವನ) ಮತ್ತು "ನನ್ನನ್ನು" (ಶೃಂಗರಿಸುತ್ತಾನೆ) ಎಂದರ್ಥವಾಗಿದೆ.

4. ದೇವರು ದಾವೀದನಿಗಾಗಿ ಇವನ್ನೆಲ್ಲಾ ಮಾಡಿದ್ದಾನೆ (ವಚನ 3–5):

   ಅ. ದೇವರು ದಾವೀದನ ಅಪರಾಧಗಳನ್ನು ಕ್ಷಮಿಸಿದ್ದಾನೆ.

   ಆ. ದೇವರು ದಾವೀದನನ್ನು ರೋಗದಿಂದ ವಾಸಿಮಾಡಿದ್ದಾನೆ.

   ಇ. ದೇವರು ದಾವೀದನನ್ನು ನಾಶದಿಂದ ತಪ್ಪಿಸಿದ್ದಾನೆ.

   ಈ. ದೇವರು ದಾವೀದನ ಮೇಲೆ ಪ್ರೀತಿ ಮತ್ತು ಕೃಪೆಗಳನ್ನು ಸುರಿಸಿದ್ದಾನೆ.

   ಉ. ದೇವರು ಆತನ ಅಗತ್ಯತೆಗಳನ್ನು ಪೂರೈಸಿದ್ದಾನೆ.

   ಊ. ದೇವರು ಆತನನ್ನು ಶಾರೀರಿಕವಾಗಿ (ದೈಹಿಕ), ಮಾನಸಿಕವಾಗಿ ಮತ್ತು ಆತ್ಮೀಕವಾಗಿ ಉಜ್ಜೀವಿಸಮಾಡಿದ್ದಾನೆ.

5. ದಾವೀದನು ವಚನ 6–19 ರಲ್ಲಿ ಯಾರಿಗೆ ಹೇಳುತ್ತಿದ್ದಾನೆಂಬುದು ಅಷ್ಟು ಸ್ಪಷ್ಟವಾಗಿಲ್ಲ. ಆದರೆ ಇದು ದೇವಜನರಿಗೆ ಎಂಬುದಾಗಿ ನಾವು ಊಹಿಸಿಕೊಳ್ಳಬಹುದು. ಬಹುಶಃ ಇದರ ಸನ್ನಿವೇಶವು ಒಂದು "ಆರಾಧನಾ ಕೂಟ"ವಾಗಿದೆ. ದೇವರು ಯಾರು ಮತ್ತು ಆತನು ನಮಗಾಗಿ (ಅವರಿಗಾಗಿ) ಏನೆಲ್ಲಾ ಮಾಡಿದ್ದಾನೆಂಬುದನ್ನು ದೇವಜನರಿಗೆ ತಿಳಿಸಲು (ನೆನಪಿಸಲು) ದಾವೀದನು ಬಯಸುತ್ತಾನೆ.

6. ದೇವರ ಆಳ್ವಿಕೆಯು ವಚನ 6 ಮತ್ತು 19 ರಲ್ಲಿ ಸಾರಾಂಶಗೊಂಡಿದೆ:

   ಅ. ದೇವರ ರಾಜ್ಯವು ಭೂಮ್ಯಾಕಾಶಗಳಲ್ಲಿನ ದೇವರ ಸಾರ್ವತ್ರಿಕ ಆಳ್ವಿಕೆಯಾಗಿದೆ (ವಚನ 19).

   ಆ. ದೇವರ ರಾಜ್ಯವು ಈ ಲೋಕದ ಸಾಮ್ರಾಜ್ಯಗಳಿಗಿಂತ (ನೀತಿ ಮತ್ತು ನ್ಯಾಯದ ವಿಚಾರದಲ್ಲಿ) ಸಂಪೂರ್ಣವಾಗಿ ವಿಭಿನ್ನವಾಗಿದೆ (ವಚನ 6). ದೇವರ ರಾಜ್ಯದಲ್ಲಿ ಯಾವುದೇ ದಬ್ಬಾಳಿಕೆ ಇಲ್ಲ.

7. ದಾವೀದನು ತನ್ನ ಪಾಪಮಯ ಜನರಿಗಾಗಿನ ದೇವರ ಕನಿಕರವನ್ನು ಈ ರೀತಿ ವರ್ಣಿಸುತ್ತಾನೆ (ವಚನ 7–12):

ಅ. ದೇವರು ಅವರಿಗೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ (ವಚನ 7). ಅವರನ್ನು ಐಗುಪ್ತದಲ್ಲಿ ಬಂಧನದಿಂದ ಬಿಡಿಸಿದಾಗ ಆತನು ತನ್ನ ಕರುಣೆ ಮತ್ತು ಬಲವನ್ನು ಅವರಿಗೆ ಪ್ರಕಟಿಸಿದನು. ಸೀನಾಯ್ ಬೆಟ್ಟದಲ್ಲಿ ಅವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಾಗ ಆತನು ಅವರಿಗೆ ತನ್ನ ಚಿತ್ತವನ್ನು ಪ್ರಕಟಪಡಿಸಿದನು.

ಆ. ದೇವರು ಅವರನ್ನು ಪ್ರೀತಿಸುತ್ತಾನೆ. ಹಾಗಾಗಿ ಅವರ ಮೇಲೆ ದೇವರಿಗೆ ಕನಿಕರ, ದಯೆಯಿದೆ ಮತ್ತು ಆತನು ಅವರಿಗೆ ಕೃಪೆ ತೋರಿಸುತ್ತಾನೆ. ಅವರು ತಮ್ಮ ಪಾಪಗಳ ನಿಮಿತ್ತ ದಂಡನೆ ಮತ್ತು ಶಿಕ್ಷೆಗೆ ಅರ್ಹರಾಗಿರುವಾಗಲೂ ಅವರೊಂದಿಗೆ ಆತನು ಸದಾ ಕೋಪಿಷ್ಟನಾಗಿರುವುದಿಲ್ಲ (ವಚನ 8, 11).

ಇ. ದೇವರ ಕನಿಕರವು ಆತನು ಅವರ ಪಾಪಗಳೊಂದಿಗೆ ವ್ಯವಹರಿಸುವ ರೀತಿಯಲ್ಲಿ ಸಹ ಪ್ರಕಟವಾಗಿದೆ. ಅವರ ಯೋಗ್ಯರೀತಿಯಲ್ಲಿ ಆತನು ಅವರನ್ನು ಶಿಕ್ಷಿಸುವುದಿಲ್ಲ. ಬದಲಾಗಿ ಆತನು ಅವರ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಅವರ ದ್ರೋಹಗಳನ್ನು ತೆಗೆದು ಹಾಕುತ್ತಾನೆ (ವಚನ 9–12).

8. ದಾವೀದನು ಬಲಹೀನರಿಗಾಗಿ ಮತ್ತು ನಶ್ವರ ಮನುಷ್ಯರಿಗಾಗಿ ದೇವರ ಕನಿಕರವನ್ನು ಈ ರೀತಿಯಾಗಿ ವರ್ಣಿಸುತ್ತಾನೆ (ವಚನ 13–18):

ಅ. ದಾವೀದನು ದೇವರನ್ನು, ಮಕ್ಕಳನ್ನು ಕನಿಕರಿಸುವ ತಂದೆಗೆ ಹೋಲಿಸುತ್ತಾನೆ (ವಚನ 13).

ಆ. ದೇವರು ನಮ್ಮ ಸೃಷ್ಟಿಕರ್ತನಾಗಿದ್ದು, ನಮ್ಮ ಪ್ರಕೃತಿಯನ್ನು ಬಲ್ಲವನಾಗಿದ್ದಾನೆ. ಹಾಗಾಗಿ ನಮ್ಮ ಇತಿಮಿತಿಗಳು ಆತನಿಗೆ ಗೊತ್ತು (ವಚನ 14–16) ಎಂದು ದಾವೀದನು ತನ್ನ ಸಹ ವಿಶ್ವಾಸಿಗೆ ಹೇಳುತ್ತಾನೆ.

9. ಎಲ್ಲಾ ಸೃಷ್ಟಿಯು ಯೆಹೋವನನ್ನು ಸ್ತುತಿಸಬೇಕು (ವಚನ 22). ಆದರೆ ದಾವೀದನು ವಿಶೇಷವಾಗಿ ಕೇವಲ ಜನರು ಮತ್ತು ದೇವದೂತರನ್ನು ಸೂಚಿಸುತ್ತಾನೆ:

ಅ. ಒಬ್ಬ ವ್ಯಕ್ತಿಗತ ವಿಶ್ವಾಸಿಯಾಗಿದ್ದರೆ ದಾವೀದನೇ ಆಗಿರಬಹುದು (ವಚನ 1, 22). ಆದರೆ ಒಬ್ಬ ವಿಶ್ವಾಸಿಯನ್ನು, ವಿಶ್ವಾಸಿಗಳ ಗುಂಪಿನ ಒಬ್ಬ ಪ್ರತಿನಿಧಿಯಾಗಿ ಸಹ ಕಾಣಬಹುದು.

ಆ. ದೇವದೂತರು (ವಚನ 20–21): ಅವರು ಪರಲೋಕ ಸೈನ್ಯವಾಗಿದ್ದು, ಆತನ ಶಬ್ಧಕ್ಕೆ ಕಿವಿಗೊಟ್ಟು, ಆತನ ಆಜ್ಞೆಗಳನ್ನು ನೆರವೇರಿಸುತ್ತಾರೆ.

ಇ. ದೇವರು ಸೃಷ್ಟಿಸಿದ್ದೆಲ್ಲವೂ "ಆತನ ಕೆಲಸಗಳಾಗಿವೆ" (ವಚನ 22). ಬಹುಶಃ ಇದು ದೇವಜನರನ್ನು ಒಳಗೊಂಡಿರುತ್ತದೆ.

ಕೀರ್ತನೆ 103 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಕೀರ್ತನೆಯು ಅಲಂಕಾರಿಕೆ ಭಾಷೆಯಲ್ಲಿ ಸಮೃದ್ಧವಾಗಿದೆ:

ಅ. ಉಪಮೆಗಳು:

- ವಚನ 11 ("ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ"): ತನ್ನ ಜನರಿಗಾಗಿನ ದೇವರ ಪ್ರೀತಿಯನ್ನು ಭೂಮಿ ಮತ್ತು ಆಕಾಶದ ನಡುವಿನ ಅಂತರಕ್ಕೆ ಹೋಲಿಸಲಾಗಿದೆ. ಖಂಡಿತವಾಗಿ ಈ ಅಂತರವು ಮನುಷ್ಯನ ತಿಳುವಳಿಕೆಗಿಂತಲೂ ಮಿಗಿಲಾದದ್ದಾಗಿದೆ. ದೇವಜನರಿಗಾಗಿನ ಆತನ ಪ್ರೀತಿಯು ನಮ್ಮ ತಿಳುವಳಿಕೆಯನ್ನು ಮೀರಿದ್ದಾಗಿದೆ.

- ವಚನ 12 ("ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ"): ದೇವಜನರ ಮತ್ತು ಅವರು ಹಿಂದೆ ಮಾಡಿರುವ ದ್ರೋಹಗಳ ನಡುವೆ ದೇವರು ಇಟ್ಟಿರುವ ಅಂತರವನ್ನು ಪೂರ್ವ ಮತ್ತು ಪಶ್ಚಿಮಗಳ ನಡುವಿನ ಅಂತರಕ್ಕೆ ಹೋಲಿಸಲಾಗಿದೆ. ಈ ಅಂತರವನ್ನು ಊಹಿಸಲು ಅಸಾಧ್ಯ.

- ವಚನ 13 ("ತಂದೆಯು ಮಗನನ್ನು ಕನಿಕರಿಸುವಂತೆ"): ತನ್ನ ಜನರಿಗಾಗಿ ದೇವರ ಕನಿಕರವನ್ನು ಮಕ್ಕಳ ಮೇಲಿನ ತಂದೆಯ ಕನಿಕರಕ್ಕೆ ಹೋಲಿಸಲಾಗಿದೆ. ದೇವರ ಕನಿಕರದ ಶ್ರೇಷ್ಠತೆಯನ್ನು ತಿಳಿಸಲು ದಾವೀದನು ಈ ಹೋಲಿಕೆಯನ್ನು ಬಳಸುತ್ತಾನೆ.

ಆ. ರೂಪಾಲಂಕಾರಗಳು:

- ವಚನ 4 (“ಗುಂಡಿ”): ಸಮಾಧಿ. ದಾವೀದನು ಸಮಾಧಿಗೆ ಹೋಗದಂತೆ ದೇವರು ಅವನ ಜೀವವನ್ನು ಉಳಿಸಿದನು.

- ವಚನ 4 (“ಪ್ರೀತಿಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವನು”): ದಾವೀದನ ತಲೆಯ ಮೇಲೆ ಕಿರೀಟದಂತೆ, ದೇವರು ತನ್ನ ಪ್ರೀತಿ ಮತ್ತು ಕೃಪೆಯನ್ನು ಆತನ ಮೇಲೆ ಇಡುವುದರ ಮೂಲಕ ಗೌರವಿಸುತ್ತಾನೆ.

ಇ. ಮಾನವೀಕರಣ:

- ವಚನ 13: ತನ್ನ ಮಕ್ಕಳನ್ನು ಕನಿಕರಿಸುವ ತಂದೆಯೋ ಎಂಬಂತೆ ದೇವರನ್ನು ಬಿಂಬಿಸಲಾಗಿದೆ.

- ವಚನ 19: ದೇವರನ್ನು ಆಳುತ್ತಿರುವ ಒಬ್ಬ ಬಲಿಷ್ಠ ಅರಸನೆಂಬಂತೆ ಬಿಂಬಿಸಲಾಗಿದೆ.

2. ಕೀರ್ತನೆ 103 ದೇವರ ಪ್ರೀತಿ ಮತ್ತು ಕನಿಕರಕ್ಕೆ ಒತ್ತು ಕೊಡುತ್ತದೆ. ಈ ಕೀರ್ತನೆಯಲ್ಲಿ ಎರಡು ಪದಗಳ ಹಿನ್ನಲೆಯಿಂದ ದೇವರ ಪ್ರೀತಿ ಮತ್ತು ಕನಿಕರದ ಬಗ್ಗೆ ಕನಿಷ್ಟ 3 ಅಂಶಗಳನ್ನು ಕಲಿಯಬಹುದು:

ಅ. ದೇವರ ಪ್ರೀತಿ ಮತ್ತು ಕನಿಕರವು ಆತನ ಗುಣಸ್ವಭಾವದಿಂದಲೇ ಬರುವುದಾಗಿದೆ (ವಚನ 8). ಒಡಂಬಡಿಕೆಯ ದೇವರು ತನ್ನ ಸ್ವಭಾವದಲ್ಲಿಯೇ ಕನಿಕರವೂ, ದಯೆಯೂ ಉಳ್ಳವನಾಗಿದ್ದು ತನ್ನ ಜನರನ್ನು ಪ್ರೀತಿಸುವವನಾಗಿದ್ದಾನೆ.

ಆ. ದೇವರ ಪ್ರೀತಿ ಮತ್ತು ಕನಿಕರವು, ಆತನು ತನಗೆ ಮೀಸಲಾದವರಿಗೆ ತಾನು ಅನುಗ್ರಹಿಸುವ ನಿತ್ಯಜೀವದಲ್ಲಿ ವ್ಯಕ್ತವಾಗುತ್ತದೆ (ವಚನ 4). ಇದನ್ನು ನಾಶ ಮತ್ತು ನಿತ್ಯಜೀವದ ತದ್ವಿರುದ್ಧತೆಯಲ್ಲಿ ಕಾಣಬಹುದಾಗಿದೆ.

ಇ. ತನ್ನ ಜನರಿಗಾಗಿನ ದೇವರ ಪ್ರೀತಿಗೆ ಯಾವುದೇ ಮಿತಿಯಿಲ್ಲ (ವಚನ 11). ಇದು ದಾವೀದನು ಬಳಸುವ ಉಪಮೆಯಲ್ಲಿ (ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ) ಸ್ಪಷ್ಟವಾಗಿ ಕಂಡುಬರುತ್ತದೆ.

ಈ. ಇದಲ್ಲದೆ, ದೇವರು ತನ್ನ ಜನರ ಮೇಲಿನ ಪ್ರೀತಿಯ ಸಮಯಕ್ಕೆ ಯಾವುದೇ ಮಿತಿಯಿಲ್ಲ (ವಚನ 17). ಈ ವಚನದಲ್ಲಿ ದಾವೀದನು ಬಳಸುವ ಅಭಿವ್ಯಕ್ತಿಯಿಂದ (“ಶಾಶ್ವತತೆಯಿಂದ ಶಾಶ್ವತವಾಗಿ”) ಇದು ಸ್ಪಷ್ಟವಾಗುತ್ತದೆ. ತನಗೆ ಸೇರಿದವರಿಗೆ ದೇವರ ಪ್ರೀತಿ ಮತ್ತು ಕರುಣೆ ಶಾಶ್ವತ.

ಉ. ದೇವರು ಈ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಯು (ಕೀರ್ತನೆಗಾರನು “ಆತನ ಮಕ್ಕಳು”, “ಆತನಿಗೆ ಭಯಪಡುವವರು”, “ಆತನನ್ನು ನಂಬಿ ಪಾಲಿಸುವವರು” ಮತ್ತು ಆತನ “ಆಜ್ಞೆಗಳನ್ನು ಪಾಲಿಸುವವರು” ಎಂಬ ಸಮಾನಾರ್ಥಕ ಅಭಿವ್ಯಕ್ತಿಗಳನ್ನು ಬಳಸುತ್ತಾನೆ) ದೇವರ ಪ್ರೀತಿ ಮತ್ತು ಕರುಣೆಯ ಸಂದರ್ಭವಾಗಿದೆ. ಇದು 11 ಮತ್ತು 13ನೇ ವಚನಗಳಿಂದ ಸ್ಪಷ್ಟವಾಗುತ್ತದೆ.

ಊ. ದೇವರ ಪ್ರೀತಿ ಮತ್ತು ಕರುಣೆಯನ್ನು ನೀತಿ ಮತ್ತು ನ್ಯಾಯದಿಂದ ಬೇರ್ಪಡಿಸಲು ಸಾಧ್ಯವಿಲ್ಲ (ವಚನ 17). ದೇವರು ನ್ಯಾಯವಂತ ಮತ್ತು ನೀತಿವಂತ ದೇವರು ಮತ್ತು ಆತನ ರಾಜ್ಯದಲ್ಲಿ ಈ ಲೋಕದಲ್ಲಿ ತುಳಿತಕ್ಕೊಳಗಾದವರೂ ಸಹ ನ್ಯಾಯವನ್ನು ಪಡೆಯುತ್ತಾರೆ (ವಚನ 6). ದೇವರ ಆಳ್ವಿಕೆ (ವಚನ 19) ನೀತಿವಂತ ಮತ್ತು ನ್ಯಾಯಯುತವಾಗಿರುತ್ತದೆ.

3. ನಾನು ಈ ಕೆಳಗಿನ ಪದ್ಯಗಳ ಕಾವ್ಯರಚನೆಯನ್ನು ಈ ರೀತಿ ವಿಶ್ಲೇಷಿಸಿದ್ದೇನೆ:

ಅ. ವಚನ 1: ಸಮಾನಾರ್ಥಕ ಸಮಾನಾಂತರತೆಯ ಉದಾಹರಣೆ (ಮೊದಲಾರ್ಧದಲ್ಲಿ “ದೇವರನ್ನು ಸ್ತುತಿಸು” ಮತ್ತು “ನನ್ನ ಮನವೇ” “ನನ್ನೊಳಗಿನ ಎಲ್ಲವೂ” ಮತ್ತು ದ್ವಿತೀಯಾರ್ಧದಲ್ಲಿ “ಅವನ ಪವಿತ್ರ ಹೆಸರು” ಗೆ ಸಮಾನಾರ್ಥಕವಾಗಿದೆ). ಇದರ ಜೊತೆಗೆ, ನಾವು ಆವರಣದ (ಪಠ್ಯದ ಅಡ್ಡಲಾಗಿ ಜೋಡಣೆ) ಉದಾಹರಣೆಯನ್ನು ಕಾಣುತ್ತೇವೆ. ಇದನ್ನು ಕನ್ನಡ ಭಾಷಾಂತರಗಳಲ್ಲಿ ನೋಡಲಾಗುವುದಿಲ್ಲ, ಆದರೆ ಇಂಗ್ಲೀಷ್ **ಎನ್ಐವಿ** ಮತ್ತು **ಇಎಸ್‌ವಿ** ಭಾಷಾಂತರಗಳಲ್ಲಿ ಸ್ಪಷ್ಟವಾಗಿದೆ.

ಆ.–

ಇ. ವಚನ 11–12: ಈ ಎರಡೂ ವಚನಗಳು ಒಂದೇ ರೀತಿಯಲ್ಲಿ ರಚನೆಯಾಗಿವೆ. ದೇವರು ತನ್ನ ಜನರಿಗೆ ಏನು ಮಾಡುತ್ತಾನೆ ಎಂಬುದು ಮಾನವ ತಿಳುವಳಿಕೆಯನ್ನು ಮೀರಿದೆ ಎಂದು ಘೋಷಿಸಲು ಅವುಗಳೆರಡೂ ರೂಪಕ ಹೋಲಿಕೆಯನ್ನು ಒಳಗೊಂಡಿವೆ. ಈ ಎರಡು ವಚನಗಳಲ್ಲಿ ದಾವೀದನ ಸಂಯೋಜಿತ ಹೇಳಿಕೆಗಳನ್ನು

"ಸಂಯೋಜಿತ" ಎಂದು ಅರ್ಥೈಸಿಕೊಳ್ಳಬಹುದು: ದೇವರು ತನ್ನ ಜನರ ಮೇಲಿನ ಪ್ರೀತಿಯನ್ನು ಅವರ ಅಪರಾಧಗಳನ್ನು ತೆಗೆದುಹಾಕುವ ಮೂಲಕ ತೋರಿಸುತ್ತಾನೆ.

ಈ. ವಚನಗಳು 20–21: ಈ ಎರಡು ವಚನಗಳು ಸಮಾನಾರ್ಥಕ ಪದಗಳಾಗಿವೆ. ಇವೆರಡೂ ಒಂದೇ ಆರಾಧಕರ ಗುಂಪನ್ನು ಉಲ್ಲೇಖಿಸುತ್ತವೆ – ದೇವದೂತರುಗಳು. ಆದ್ದರಿಂದ ವಚನ 20 ರಲ್ಲಿನ ಮೂರು ನುಡಿಗಟ್ಟುಗಳು ("ನೀವು ಆತನ ದೇವದೂತರೇ, ನೀವು ಪರಾಕ್ರಮಿಗಳು", "ಆತನ ಆಜ್ಞೆಯನ್ನು ಮಾಡುವವರು" ಮತ್ತು "ಆತನ ಮಾತನ್ನು ಪಾಲಿಸುವವರು") ವಚನ 21 ರಲ್ಲಿನ ಮೂರು ಅನುಗುಣವಾದ ನುಡಿಗಟ್ಟುಗಳಿಗೆ ಸಮಾನಾರ್ಥಕ ಪದಗಳಾಗಿವೆ ("ಆತನ ಆತಿಥೇಯ", "ನೀವು ಆತನ ಸೇವಕರು", ಮತ್ತು "ಆತನ ಚಿತ್ತವನ್ನು ಮಾಡುವವರು"). ಇದರ ಜೊತೆಗೆ, ದಾವೀದ ಪ್ರತೀ ವಚನದೊಳಗೆ ಸಮಾನಾರ್ಥಕ ಅಭಿವ್ಯಕ್ತಿಗಳನ್ನು ಬಳಸಿದ್ದಾನೆ: ವಚನ 20 ರಲ್ಲಿ, "ಆತನ ಆಜ್ಞೆಯನ್ನು ಮಾಡುವವರು" ಮತ್ತು "ಆತನ ಮಾತನ್ನು ಪಾಲಿಸುವವರು" ಎಂಬುದು ಸಮಾನಾರ್ಥಕ ಪದಗಳಾಗಿವೆ ಮತ್ತು ವಚನ 21 ರಲ್ಲಿ "ನೀವು ಆತನ ಸೇವಕರು" ಮತ್ತು "ಆತನ ಚಿತ್ತವನ್ನು ಮಾಡುವವರು" ಎಂಬುದು ಸಮಾನಾರ್ಥಕ ಪದಗಳಾಗಿವೆ. ಆದ್ದರಿಂದ ದೇವದೂತರು ಏನು ಮಾಡುತ್ತಾರೆ ಎಂಬುದರ ಈ ನಾಲ್ಕು ವಿವರಣೆಗಳು ಸಮಾನಾರ್ಥಕ ಪದಗಳಾಗಿವೆ – ದೇವದೂತರು ನಿಜವಾಗಿಯೂ ದೇವರನ್ನು ಸೇವಿಸುತ್ತಾರೆ!

4. ಈ ಕೀರ್ತನೆಯ ಸ್ವರ/ಭಾವವನ್ನು ತಿಳಿಸಲು ಈ ಹೇಳಿಕೆಯನ್ನು ಬಳಸುತ್ತೇನೆ: ಈ ಕೀರ್ತನೆಯು ಆರಾಧನಭರಿತ, ಆನಂದ ಮತ್ತು ಸಂತೋಷಭರಿತವಾಗಿದೆ. ದೇವರ ಪ್ರೀತಿ ಮತ್ತು ಕನಿಕರಕ್ಕಾಗಿ ಕೀರ್ತನೆಗಾರನು ತನ್ನ ಒಡಂಬಡಿಕೆಯ ಕರ್ತನಿಗೆ ಅಗಾಧವಾಗಿ ಕೃತಜ್ಞನಾಗಿದ್ದಿರಬಹುದು.

5. –

6. ಕೀರ್ತನೆ 103 ಭಾನುವಾರದ ಆರಾಧನೆಯ ಕೀರ್ತನೆ ಭಾಗದಲ್ಲಿ ಓದುವುದಕ್ಕೆ ಸೂಕ್ತವಾದ ಆಯ್ಕೆಯಾಗಿದೆ. ಇದಕ್ಕೆ ಕಾರಣ ಇಂತಿವೆ:

ಅ. ಇದು ಸಕಾರಾತ್ಮಕವಾದ ಮತ್ತು ಆರಾಧನಾಭರಿತವಾದ ಭಾವವನ್ನು ಒಳಗೊಂಡಿದೆ. ಇದು ಇಡೀ ಆರಾಧನೆಯನ್ನು ಉನ್ನತಕ್ಕೇರಿಸುತ್ತದೆ.

ಆ. ಇದು ದೇವರು ಮತ್ತು ತನ್ನ ಜನರಿಗಾಗಿ ಆತನು ಏನೆಲ್ಲಾ ಮಾಡಿದ್ದಾನೆಂಬುದರ ಬಗ್ಗೆ ಪ್ರಾಮುಖ್ಯ ಸಂಗತಿಗಳನ್ನು ಸಭೆಗೆ ಬೋಧಿಸುತ್ತಾನೆ.

ಇ. ಇದು ಒಂದು ಆರಾಧನೆಯ ಹಿನ್ನಲೆಯಲ್ಲಿ ದೇವಜನರಿಗಾಗಿ ಬರೆಯಲ್ಪಟ್ಟ ಒಂದು ಕೀರ್ತನೆಯಾಗಿದೆ. ಅಲ್ಲದೆ ಇದು ದೇವಜನರ ಕುರಿತಾದ ಕೀರ್ತನೆಯಾಗಿದೆ. ಮತ್ತು ಆರಾಧನಾ ಸೇವೆಯು ಒಂದು ಸಭೆ ತಮ್ಮ ದೇವರನ್ನು ಆಚರಿಸುವ ವಾರದ ಸಂದರ್ಭವಾಗಿದೆ – ನಾವು ಆತನನ್ನು ಆರಾಧಿಸುತ್ತೇವೆ, ಆತನು ಯಾರೆಂದು ಮತ್ತು ಆತನು ನಮಗಾಗಿ ಏನು ಮಾಡಿದ್ದಾನೆಂದು ನೆನಪಿಸಿಕೊಳ್ಳುತ್ತೇವೆ ಮತ್ತು ಈ ಜಗತ್ತಿನಲ್ಲಿ ದೇವರ ವಿಮೋಚನೆಗೊಂಡ ಜನರಾಗಿ ನಾವು ಯಾರೆಂದು ನಾವು ಪ್ರತಿಬಿಂಬಿಸುತ್ತೇವೆ.

ಈ. ಇದನ್ನು ಸತತ ಹಲವಾರು ಭಾನುವಾರಗಳಂದು ಬಳಸಬಹುದಾದ ರೀತಿಯಲ್ಲಿ ಬರೆಯಲಾಗಿದೆ, ಬಹುಶಃ ಈ ರೀತಿ:

- ಮೊದಲ ಭಾನುವಾರ: ಇಡೀ ಕೀರ್ತನೆಯನ್ನು ಓದಿ ಆದರೆ 1, 20–22ನೇ ವಚನಗಳ ಮೇಲೆ ಕೇಂದ್ರೀಕರಿಸಿ
- ಎರಡನೇ ಭಾನುವಾರ: ಇಡೀ ಕೀರ್ತನೆಯನ್ನು ಓದಿ ಆದರೆ 2–5ನೇ ವಚನಗಳ ಮೇಲೆ ಕೇಂದ್ರೀಕರಿಸಿ
- ಮೂರನೇ ಭಾನುವಾರ: ಇಡೀ ಕೀರ್ತನೆಯನ್ನು ಓದಿ ಆದರೆ 6, 19ನೇ ವಚನಗಳ ಮೇಲೆ ಕೇಂದ್ರೀಕರಿಸಿ
- ನಾಲ್ಕನೇ ಭಾನುವಾರ: ಇಡೀ ಕೀರ್ತನೆಯನ್ನು ಓದಿ ಆದರೆ 7–12ನೇ ವಚನಗಳ ಮೇಲೆ ಕೇಂದ್ರೀಕರಿಸಿ
- ಐದನೇ ಭಾನುವಾರ: ಇಡೀ ಕೀರ್ತನೆಯನ್ನು ಓದಿ ಆದರೆ 13–18ನೇ ವಚನಗಳ ಮೇಲೆ ಕೇಂದ್ರೀಕರಿಸಿ

ಕೀರ್ತನೆ 105 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 105 ಅನ್ನು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ದೇವರನ್ನು ಆರಾಧಿಸಲು ಮತ್ತು ಆತನು ಮಾಡಿದ ಉಪಕಾರಗಳನ್ನು ನೆನಪುಮಾಡಿಕೊಳ್ಳಲು ಕರೆ, ವಚನ 1–6

   ಆ. ಪಿತೃಗಳೊಂದಿಗೆ ದೇವರ ಒಡಂಬಡಿಕೆ, ವಚನ 7–15

   ಇ. ಯೋಸೇಫ, ವಚನ 16–23

   ಈ. ಐಗುಪ್ತದಲ್ಲಿ ಇಸ್ರಾಯೇಲ್ಯರು, ವಚನ 24–36

   ಉ. ವಿಮೋಚನಕಾಂಡ ಮತ್ತು ವಾಗ್ದಾತ್ತ ದೇಶ, ವಚನ 37–45

   ಊ. ದೇವರನ್ನು ಸ್ತುತಿಸಲು ಕೊನೆಯ ಪ್ರಬೋಧನೆ, ವಚನ 45

2. ಕೀರ್ತನೆಗಾರನು ಈ ಕೀರ್ತನೆಯಲ್ಲಿ **"ಅಬ್ರಹಾಮನ ವಂಶ"** ಮತ್ತು **"ಯಾಕೋಬನ ವಂಶ"**ದವರಾದ ಇಸ್ರಾಯೇಲ್ ಜನರನ್ನು ಸಂಬೋಧಿಸುತ್ತಾನೆ (ವಚನ 5). ಬಹುಶಃ ಈ ಕೀರ್ತನೆಯು, ಇಸ್ರಾಯೇಲಿನ ವಾರ್ಷಿಕ ಹಬ್ಬಗಳಲ್ಲಿ **"ಆರಾಧನೆಯ"** ಒಂದು ಭಾಗವಾಗಿ ಉಪಯೋಗಿಸಲ್ಪಟ್ಟಿರಬಹುದು.

3. ನನ್ನ ಸತ್ಯವೇದ ಭಾಷಾಂತರವು ವಚನ 1–5 ರವರಗೆ ಹತ್ತು ಆಜ್ಞೆಗಳನ್ನು ಒಳಗೊಂಡಿದೆ:

   ಅ. ವಚನ 1 ರಲ್ಲಿ ಮೂರು: **"ಕೃತಜ್ಞತಾಸ್ತುತಿ ಮಾಡಿರಿ"**, **"ನಾಮದ ಮಹತ್ವವನ್ನು ವರ್ಣಿಸಿರಿ"** ಮತ್ತು **"ಆತನ ಕೃತ್ಯಗಳನ್ನು ಪ್ರಸಿದ್ಧಪಡಿಸಿರಿ"**.

   ಆ. ವಚನ 2 ರಲ್ಲಿ ಎರಡು: **"ಕೀರ್ತಿಸಿರಿ"** ಮತ್ತು **"ಭಜಿಸಿರಿ"**

   ಇ. ವಚನ 3 ರಲ್ಲಿ ಎರಡು: **"ಹಿಗ್ಗಿರಿ"** ಮತ್ತು **"ಹರ್ಷಿಸಿರಿ"**

   ಈ. ವಚನ 4 ರಲ್ಲಿ ಎರಡು: **"ಆಶ್ರಯಿಸಿರಿ"** ಮತ್ತು **"ಅಪೇಕ್ಷಿಸಿರಿ"**

   ಉ. ವಚನ 6 ರಲ್ಲಿ ಒಂದು: **"ನೆನಪು ಮಾಡಿಕೊಳ್ಳಿರಿ"**

4. ವಚನ 6 ರಲ್ಲಿ ತಮ್ಮ ಜನರಿಗೆ ಈ ಹಿಂದೆ ದೇವರು ಮಾಡಿದ ಕಾರ್ಯಗಳನ್ನು ನೆನಪು ಮಾಡಿಕೊಳ್ಳಬೇಕೆಂದು ಇಸ್ರಾಯೇಲ್ಯರಿಗೆ ಹೇಳಲಾಗಿದೆ.

5. ಕೀರ್ತನೆಗಾರನು ವಚನ 5 ರಲ್ಲಿ ಇಸ್ರಾಯೇಲ್ಯರನ್ನು ವರ್ಣಿಸಲು ಎರಡು ಪದಗಳನ್ನು ಬಳಸುತ್ತಾನೆ:

   ಅ. ಅವರು ದೇವರ ಸೇವಕನಾದ ಅಬ್ರಹಾಮನ ಸಂತತಿ.

   ಆ. ಅವರು ಯಾಕೋಬನ ವಂಶದವರು.

6. ಕೀರ್ತನೆಗಾರನು ಐಗುಪ್ತದಲ್ಲಿ ಇಸ್ರಾಯೇಲ್ಯರ ಜೀವಿತದ ಬಗ್ಗೆ ಮೂರು ಸಂಗತಿಗಳನ್ನು ಒತ್ತಿ ಹೇಳುತ್ತಾನೆ (ವಚನ 23–25):

   ಅ. ಅವರು ಅಲ್ಲಿ ಪ್ರವಾಸಿಗಳಾಗಿದ್ದರು

   ಆ. ದೇವರು ಅವರನ್ನು ಬಹಳವಾಗಿ ವೃದ್ಧಿಮಾಡಿದನು

   ಇ. ದೇವರು ತನ್ನ ಜನರನ್ನು ಐಗುಪ್ತ್ಯರಿಗಿಂತ ಬಲಿಷ್ಠರಾಗಲು ಅವರನ್ನು ಸಂಖ್ಯೆಯಲ್ಲಿ ವೃದ್ಧಿಮಾಡಿದನು.

7. ಮೋಶೆ ಮತ್ತು ಆರೋನರು ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾರೆ (ವಚನ 26–27):

   ಅ. ಮೋಶೆಯು ದೇವರ ಸೇವಕ

   ಆ. ಆರೋನನು ದೇವರಿಂದ ಆರಿಸಲ್ಪಟ್ಟವನು

   ಇ. ಅವರಿಬ್ಬರು ಐಗುಪ್ತದಲ್ಲಿ ವಿವಿಧ ಮಹತ್ಕಾರ್ಯಗಳನ್ನೂ ಅದ್ಭುತಗಳನ್ನೂ ನಡೆಸಿದರು.

8. ಕೀರ್ತನೆಗಾರನು ವಚನ 28–36 ರಲ್ಲಿ ಈ ಕೆಳಕಂಡ ಐಗುಪ್ತದ ಬಾಧೆಗಳನ್ನು ತಿಳಿಸಿದ್ದಾನೆ (ಹೋಲಿಸಿ ವಿಮೋ.7–11):

   ಅ. ದೇಶದಲ್ಲಿ ಕತ್ತಲೆ (ವಿಮೋ. 10:21–29)

   ಆ. ನೀರು ರಕ್ತವಾದದ್ದು (ವಿಮೋ. 7:14–24)

   ಇ. ಕಪ್ಪೆಗಳು (ವಿಮೋ. 8:1–15)

   ಈ. ವಿವಿಧ ಹುಳು, ಹೇನುಗಳು (ವಿಮೋ. 8:16–32)

   ಉ. ಕಲ್ಮಳೆ ಮತ್ತು ಬೆಂಕಿಯುರಿ (ವಿಮೋ. 9:13–35)

   ಊ. ಮಿಡತೆ, ಜಿಟ್ಟೆಯುಳುಗಳು (ವಿಮೋ. 10:1–20)

   ಋ. ಪ್ರಥಮ ಫಲಗಳ ಸಂಹಾರ (ವಿಮೋ. 11:1–10)

   ಆದ್ದರಿಂದ ನಾವು ಕೀರ್ತನೆ 105 ಮತ್ತು ವಿಮೋಚನಕಾಂಡ ವೃತ್ತಾಂತದ ನಡುವೆ ಮೂರು ವ್ಯತ್ಯಾಸಗಳನ್ನು ಗಮನಿಸುತ್ತೇವೆ: ಕೀರ್ತನೆಗಾರನು ಒಂಬತ್ತನೇ ಬಾಧೆ (ಕತ್ತಲೆ) ಯೊಂದಿಗೆ ಪ್ರಾರಂಭಿಸಿದ್ದಾನೆ, ಎರಡು ಬಾಧೆಗಳನ್ನು (ಸೊಳ್ಳೆಗಳು ಮತ್ತು ನೊಣಗಳು) ಸಂಯೋಜಿಸಿದ್ದಾನೆ ಮತ್ತು ಎರಡು ಬಾಧೆಗಳನ್ನು (ಜಾನುವಾರುಗಳು, ವಿಮೋಚನಕಾಂಡ 9:1–7, ಮತ್ತು ಹುಣ್ಣುಗಳು, ವಿಮೋಚನಕಾಂಡ 9:8–12) ಬಿಟ್ಟಿದ್ದಾನೆ.

9. ಕೀರ್ತನೆಗಾರನು ಅರಣ್ಯದಲ್ಲಿನ ಈ ಘಟನೆಗಳನ್ನು ತಿಳಿಸಿದ್ದಾನೆ (ವಚನ 39–41):

   ಅ. ದೇವರು ಇಸ್ರಾಯೇಲ್ಯರ ಸಹಾಯಕ್ಕಾಗಿ ಮೋಡವನ್ನು, ಬೆಂಕಿಯನ್ನು ಕಳಿಸುತ್ತಾನೆ.

   ಆ. ದೇವರು ಇಸ್ರಾಯೇಲ್ಯರಿಗೆ ಆಹಾರ ಮತ್ತು ನೀರನ್ನು ಒದಗಿಸುತ್ತಾನೆ.

10. ಮುಕ್ತಾಯದ ವಚನಗಳನ್ನು ಇಸ್ರಾಯೇಲ್ಯರ ಬಗ್ಗೆ ನಾವು ಈ ಕೆಳಕಂಡ ಮಾಹಿತಿಗಳನ್ನು ಪಡೆದುಕೊಳ್ಳುತ್ತೇವೆ (ವಚನ 43–45):

    ಅ. ದೇವರು ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರಗೆ ಕರೆತಂದಾಗ ಅವರು ಉಲ್ಲಾಸ ಮತ್ತು ಉತ್ಸಾಹದಿಂದಿದ್ದರು.

    ಆ. ದೇವರು ಇಸ್ರಾಯೇಲ್ಯರನ್ನು ವಾಗ್ದಾತ್ತ ದೇಶಕ್ಕೆ ಕರತರುತ್ತಾನೆ (ಬರಮಾಡುತ್ತಾನೆ):

    - ಈ ರೀತಿಯಲ್ಲಿ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸುತ್ತಾನೆ.
    - ಇಸ್ರಾಯೇಲರಿಗಾಗಿನ ದೇವರ ಉದ್ದೇಶವು ಅವರು ಆತನ ಪರಿಶುದ್ಧ ಜನರಾಗಿ ವಾಗ್ದಾನದ ದೇಶದಲ್ಲಿ ವಾಸಿಸುವುದಾಗಿತ್ತು.

ಕೀರ್ತನೆ 105 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಕೀರ್ತನೆಯ ಸ್ವರ/ಭಾವವು ಸಕಾರಾತ್ಮಕವಾಗಿದೆ. ಕೇವಲ ದೇವರಷ್ಟೇ ಸಕಾರಾತ್ಮಕ ರೀತಿಯಲ್ಲಿ ವರ್ಣಿಸಲ್ಪಟ್ಟದ್ದಲ್ಲದೇ, ಇಸ್ರಾಯೇಲ್ಯರ ವರ್ಣನೆಯೂ ಸಹ ಸಕಾರಾತ್ಮಕವಾಗಿದೆ.

2. ಈ ಕೀರ್ತನೆಯಲ್ಲಿ **"ನೆನಪು ಮಾಡಿಕೊಳ್ಳಿರಿ"** ಎಂಬ ಪದವು ಈ ಕೀರ್ತನೆಯಲ್ಲಿ ಉಪಯೋಗಿಸಲ್ಪಟ್ಟಿದೆ (ನೋಡಿ, ವಚನ 5–6, 8, 42):

   ಅ. ದೇವರು ಮಾಡಿದ್ದೆಲ್ಲವನ್ನೂ ನೆನಪು ಮಾಡಿಕೊಳ್ಳಬೇಕೆಂದು ಇಸ್ರಾಯೇಲ್ಯರಿಗೆ ಹೇಳಲಾಗಿದೆ (ಆತನ ಅದ್ಭುತಗಳು, ಮಹತ್ಕಾರ್ಯಗಳು, ಆತನ ನೀತಿಯ ಕಾರ್ಯಗಳು). ಇವೆಲ್ಲವುಗಳ (ಈ ಸಂಗತಿಗಳ) ಜ್ಞಾಪಕವು ಅವರ ಕೃತಜ್ಞತಾಸ್ತುತಿಯನ್ನು ಉಂಟುಮಾಡುವುದು (ವಚನ 1–2). ಹಾಗಾಗಿ ಇಸ್ರಾಯೇಲ್ಯರಿಗೆ **"ನೆನಪು ಮಾಡಿಕೊಳ್ಳಿರಿ"** ಎಂದರೆ ದೇವರು ತಮಗಾಗಿ ಏನೆಲ್ಲಾ ಮಾಡಿದ್ದಾನೆಂಬುದನ್ನು ತಿಳಿದುಕೊಂಡು, ಆತನ ಮಹತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಿ, ಕೃತಜ್ಞತೆ ಸಲ್ಲಿಸುವುದಾಗಿದೆ.

   ಆ. ದೇವರು ತನ್ನ ಒಡಂಬಡಿಕೆಯನ್ನು (ವಚನ 8) ಮತ್ತು ತನ್ನ ಪವಿತ್ರ ವಾಗ್ದಾನವನ್ನು (ವಚನ 42) ನೆನಪಿಸಿಕೊಳ್ಳುತ್ತಾನೆ ಎಂದು ಹೇಳಲಾಗುತ್ತದೆ. ಇದರರ್ಥ ದೇವರು ನಂಬಿಗಸ್ತನಾಗಿದ್ದಾನೆ, ತನ್ನ ಒಡಂಬಡಿಕೆಯನ್ನು ಪಾಲಿಸುತ್ತಾನೆ ಮತ್ತು ತನ್ನ ವಾಗ್ದಾನಗಳನ್ನು ಪೂರೈಸುತ್ತಾನೆ.

3. ಈ ಕೀರ್ತನೆಯ ಮೊದಲ ಭಾಗದಲ್ಲಿ ಹಳೇ ಒಡಂಬಡಿಕೆಯ 4 ಜನಪ್ರಿಯ ವ್ಯಕ್ತಿಗಳ ಬಗ್ಗೆ ತಿಳಿಸಲಾಗಿದೆ (ವಚನ 8–23). ಅವರೆಂದರೆ ಇಸ್ರಾಯೇಲ್ ರಾಷ್ಟ್ರದ ಪಿತೃಗಳಾದ ಅಬ್ರಹಾಮ, ಇಸಾಕ, ಯಾಕೋಬ ಮತ್ತು ಯೋಸೇಫ. ಅವರೊಂದಿಗಿನ ದೇವರ ಒಡಂಬಡಿಕೆ, ಅವರಿಗೆ ಮಾಡಿದ ವಾಗ್ದಾನಗಳು ಮತ್ತು ಆತನ ಕಾರ್ಯಗಳು ಐಗುಪ್ತದಲ್ಲಿನ ದಾಸತ್ವದ ವಿಮೋಚನೆಯಿಂದ ವಾಗ್ದಾತ್ತ ದೇಶದಲ್ಲಿ ಅವರು ನೆಲೆಯಾಗುವುದರವರೆಗಿನ ಇಸ್ರಾಯೇಲ್ ದೇಶದ ಇತಿಹಾಸವನ್ನು ಸ್ಪಷ್ಟಪಡಿಸುತ್ತದೆ. ಈ ಇತಿಹಾಸವೇ ಈ ಕೀರ್ತನೆಯ ವಿಷಯ ವಸ್ತುವಾಗಿದೆ. ಇದನ್ನು ಅವರು ಸ್ಮರಿಸಿ ದೇವರನ್ನು ಮಹಿಮೆಪಡಿಸಬೇಕಿದೆ.

4. ಕೀರ್ತನೆಗಾರನು ಐಗುಪ್ತದ ಮೇಲೆ ಬಂದ ಹತ್ತು ಬಾಧೆಗಳನ್ನು **"ಕಲಸಿ"**ರುವಂತೆ ತೋರುತ್ತದೆ: ಅವುಗಳು ಕ್ರಮಬದ್ಧವಾಗಿಲ್ಲ, ಅವುಗಳಲ್ಲಿ ಎರಡು ಹಿಮ್ಮುಖ ಕ್ರಮದಲ್ಲಿ ಸಂಯೋಜಿಸಲ್ಪಟ್ಟಿವೆ ಮತ್ತು ಅವುಗಳಲ್ಲಿ ಎರಡು ಬಿಡಲಾಗಿದೆ. ಕೀರ್ತನೆಗಾರನು ತನ್ನ ವಿಷಯವನ್ನು (ಸ್ಪಷ್ಟವಾಗಿ ವಿಮೋಚನಕಾಂಡವನ್ನು ಆಧರಿಸಿ) ಈ ರೀತಿ ಏಕೆ ನಿರ್ವಹಿಸಿದನೆಂದು ನಮಗೆ ಖಚಿತವಾಗಿ ತಿಳಿದಿಲ್ಲ. ಐಗುಪ್ತದ ಮೇಲೆ ಬಂದ ಹತ್ತು ಬಾಧೆಗಳ ವೃತ್ತಾಂತವು ಎಲ್ಲಾ ಇಸ್ರಾಯೇಲ್ಯರಿಗೆ ಚಿರಪರಿಚಿತವಾಗಿತ್ತು ಏಕೆಂದರೆ ಅದನ್ನು ಪ್ರತಿ ವರ್ಷ ಪಸ್ಕದ ಊಟದ ಸಮಯದಲ್ಲಿ ಪ್ರತಿ ಕುಟುಂಬದಲ್ಲಿ ಪುನಃ ಹೇಳಲಾಗುತ್ತಿತ್ತು, ಆದ್ದರಿಂದ ಲೇಖಕನು ಯಾರಿಗೂ ತಪ್ಪು ಮಾಹಿತಿ ನೀಡಲು ಪ್ರಯತ್ನಿಸುತ್ತಿರಲಿಲ್ಲ. ಆದರೆ ಒಬ್ಬ ಕವಿ ಯಾವಾಗಲೂ ತನ್ನ ಉದ್ದೇಶಗಳಿಗೆ ಸರಿಹೊಂದುವ ರೀತಿಯಲ್ಲಿ ತನ್ನ ವಸ್ತುವನ್ನು ಬಳಸಲು ಮತ್ತು ಸಂಘಟಿಸಲು ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ. ಅವನು ಕೀರ್ತನೆ 105 ರಲ್ಲಿ ಹಾಗೆ ಮಾಡಲು ಎರಡು ಸಲಹೆಗಳು ಇಲ್ಲವೆ:

   ಅ. ಅವನು ತನ್ನ ಕಥೆಯನ್ನು ಎರಡು ಅತ್ಯಂತ ನಾಟಕೀಯ ಮತ್ತು ನಿರ್ಣಾಯಕ ಪಿಡುಗುಗಳೊಂದಿಗೆ ಪ್ರಾರಂಭಿಸಿ ಕೊನೆಗೊಳಿಸಲು ಬಯಸಿದನು. ಆದ್ದರಿಂದ ಅವನು ಭಯಾನಕ ಕತ್ತಲೆಯಿಂದ ಪ್ರಾರಂಭಿಸಿ ಅಂತಿಮ ವಿಪತ್ತಿನಿಂದ (ಚೊಚ್ಚಲ ಮಗುವಿನ ಸಾವು) ಕೊನೆಗೊಳಿಸಿದನು.

   ಆ. ಅವನು ಹತ್ತನೇ ಸಂಖ್ಯೆಯ ಬದಲು ಏಳು ಸಂಖ್ಯೆಯನ್ನು (ದೇವರ ಮಹತ್ಕಾರ್ಯಗಳ ಪೂರ್ಣತೆ ಮತ್ತು ಸಂಪೂರ್ಣತೆಯನ್ನು ಸಂಕೇತಿಸುವ) ಬಳಸಲು ಬಯಸಿದನು.

5. ಕೀರ್ತನೆ 105 ರಲ್ಲಿ ದೇವರು ಹೇಗೆ ಚಿತ್ರಿಸಲ್ಪಟ್ಟಿದ್ದಾನೆ ಎಂಬುದರ ಬಗ್ಗೆ ಕೆಲವು ಅವಲೋಕನಗಳು ಇಂತಿವೆ:

   ಅ. ತನ್ನ ಅದ್ಭುತ, ಮಹತ್ಕಾರ್ಯ ಮತ್ತು ನೀತಿಯ ಮೂಲಕ ಈ ಲೋಕದಲ್ಲಿ ಪ್ರಸನ್ನನಾಗಿದ್ದಾನೆ (ವಚನ 1, 5–6).

   ಆ. ದೇವರು ನೆನಪಿನಲ್ಲಿಟ್ಟುಕೊಳ್ಳುತ್ತಾನೆ (ವಚನ 8, 42): ಇದರರ್ಥ ದೇವರು ತನ್ನ ಒಡಂಬಡಿಕೆಗೆ ನಂಬಿಗಸ್ತನಾಗಿದ್ದಾನೆ (ಅದನ್ನು ಮರೆಯುವುದಿಲ್ಲ). ಅಲ್ಲದೆ ತನ್ನ ವಾಗ್ದಾನಗಳನ್ನೂ ಸಹ ತಪ್ಪದೇ ನೆರವೇರಿಸುವವನಾಗಿದ್ದಾನೆ ಎಂದು ಸಹ ಅರ್ಥೈಸುತ್ತದೆ.

   ಇ. ದೇವರು ಪ್ರಾಕೃತಿಕ ಘಟನೆಗಳನ್ನು ಸಹ ನಿಯಂತ್ರಿಸುವವನಾಗಿದ್ದಾನೆ (ವಚನ 16, 28–35): ಆತನು ಬರವನ್ನು (ಕ್ಷಾಮವನ್ನು) ಬರಮಾಡಿದನು, ಕತ್ತಲೆಯನ್ನು ಕಳುಹಿಸಿದನು. ಆತನು ನೀರನ್ನು ರಕ್ತವನ್ನಾಗಿ ಮಾಡಿದನು. ಆತನು ಹುಳು, ಹೇನು ಮತ್ತು ಮಿಡತೆಗಳನ್ನು ಕಳುಹಿಸಿದನು.

   ಈ. ದೇವರು ಈ ಲೋಕದ ಅರಸರ ಮತ್ತು ಅವರ ದೇಶಗಳ ಹಣೆಬರಹವನ್ನು ನಿಯಂತ್ರಿಸುತ್ತಾನೆ (ವಚನ 14, 19–20, 25): ಪಿತೃಗಳ ಅವಧಿಯಲ್ಲಿ ಆತನು ಅರಸರನ್ನು ಗದರಿಸಿದನು. ಅತನು ಐಗುಪ್ತ್ಯರ ಹೃದಯವನ್ನು ಮಾರ್ಪಡಿಸಿದನು.

   ಉ. ಆತನು ತನ್ನ ಜನರ ಹಣೆಬರಹವನ್ನು ನಿಯಂತ್ರಿಸುತ್ತಾನೆ (ವಚನ 17, 24, 37, 43–44): ಯೋಸೇಫನು ಐಗುಪ್ತಕ್ಕೆ ಬರಬೇಕೆಂದು ಆತನು ಯೋಜಿಸಿದ್ದನು. ಆತನು ಐಗುಪ್ತದಲ್ಲಿ ಇಸ್ರಾಯೇಲ್ಯರನ್ನು ಹೆಚ್ಚಿಸಿದನು. ಅವರನ್ನು ಐಗುಪ್ತದಿಂದ ಹೊರತಂದನು. ಅವರಿಗೆ ಸಂತೋಷವನ್ನುಂಟುಮಾಡಿದನು. ಅವರನ್ನು ವಾಗ್ದಾತ್ತ ದೇಶಕ್ಕೆ ಬರಮಾಡಿದನು.

   ಊ. ದೇವರು ತನ್ನ ಜನರನ್ನು ರಕ್ಷಿಸುತ್ತಾನೆ, ನಡೆಸುತ್ತಾನೆ ಮತ್ತು ಅವರಿಗೆ ಒದಗಿಸುತ್ತಾನೆ (ವಚನ 39–44).

   ಋ. ದೇವರು ತನ್ನ ಸೇವಕರನ್ನು ಕರೆದು, ಕಾಪಾಡಿ ತನ್ನ ಉದ್ದೇಶಗಳಿಗಾಗಿ ಅವರನ್ನು ಉಪಯೋಗಿಸುತ್ತಾನೆ (ವಚನ 14–15, 20–21, 26–27). ಆತನು ಪಿತೃಗಳನ್ನು ಅರಸರಿಂದ ಸಂರಕ್ಷಿಸಿದನು. ಯೋಸೇಫನನ್ನು ಆರಿಸಿಕೊಂಡು ತನ್ನ ಜನರನ್ನು ರಕ್ಷಿಸುವುದಕ್ಕಾಗಿ ಆತನನ್ನು ಉನ್ನತಸ್ಥಾನದಲ್ಲಿರಿಸಿದನು. ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಲು ಮೋಶೆ ಮತ್ತು ಆರೋನನನ್ನು ಕರೆದನು. ಅವರಿಗೆ ಅದ್ಭುತ ಮತ್ತು ಮಹತ್ಕಾರ್ಯಗಳನ್ನು ಮಾಡುವ ಅಧಿಕಾರವನ್ನು ಕೊಟ್ಟನು.

ಕೀರ್ತನೆ 110 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 110 ಅನ್ನು ರಚನೆ ಮಾಡಲು ಕ್ಲಿಷ್ಟಕರವಾಗಿದೆ. ನೀವು ಇದನ್ನು ರಚನೆ ಮಾಡುವ ರೀತಿಯು, ನೀವು ಇದನ್ನು ಅನುವಾದಿಸುವುದನ್ನು ಪ್ರತಿಬಿಂಬಿಸುತ್ತದೆ.

   ಅ. ಹೆಚ್ಚಿನ ವ್ಯಾಖ್ಯಾನಕಾರರು ಎರಡು ವಿಭಾಗಗಳ ವಿಭಜನೆಯನ್ನು ಸೂಚಿಸುತ್ತಾರೆ, ಈ ರೀತಿಯಾಗಿ:

   - ದಾವೀದನ ಒಡೆಯನು ಚೀಯೋನ್ ಪರ್ವತದಿಂದ ರಾಜನಾಗಿ ಆಳುವನೆಂದು ದೇವರು (ಕರ್ತನು) ಆಜ್ಞಾಪಿಸುತ್ತಾನೆ, ವಚನ 1–3
   - ಈ ಆಡಳಿತಗಾರನು ಮೆಲ್ಕಿಜೆದೇಕನಂತೆ ರಾಜ–ಯಾಜಕನಾಗಿರುತ್ತಾನೆ ಎಂದು ದೇವರು (ಕರ್ತನು) ಪ್ರಮಾಣವಚನದಿಂದ ವಾಗ್ದಾನ ಮಾಡುತ್ತಾನೆ, ವಚನ 4–7

   ಆ. ಆದರೆ (ವಿಲ್‌ಕಾಕ್ ಜೊತೆ) ನಾಲ್ಕು ವಿಭಾಗಗಳ ವಿಭಾಗವು ಕೀರ್ತನೆಯ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಇದು ನನ್ನ ಸಲಹೆ:

   - ಕೀರ್ತನೆಗಾರನ ಮೂಲಕ ಭವಿಷ್ಯದ ಅರಸನಿಗೆ ದೇವರ ಸಂದೇಶ, ವಚನ 1
   - ಭವಿಷ್ಯದ ಅರಸನಿಗೆ ದಾವೀದನ ಪ್ರವಾದನೆ, ವಚನ 2–3
   - ಕೀರ್ತನೆಗಾರನ (ದಾವೀದ) ಮೂಲಕ ಭವಿಷ್ಯದ ಯಾಜಕ–ಅರಸನಿಗೆ ದೇವರ ವಾಗ್ದಾನ, ವಚನ 4
   - ಭವಿಷ್ಯದ ಯಾಜಕ–ಅರಸನ ಬಗ್ಗೆ ದಾವೀದನ ಪ್ರವಾದನೆ, ವಚನ 5

2. ದೇವರಾದ ಯೆಹೋವನು ವಚನ 1 ರಲ್ಲಿ ಒಂದು ಸಂದೇಶವನ್ನು ಹೊಂದಿದ್ದು ಆತನದನ್ನು ಕೀರ್ತನೆಗಾರನು ಭವಿಷ್ಯದ ಅರಸನಿಗೆ ತಿಳಿಸಬೇಕೆಂದು ಬಯಸುತ್ತಾನೆ: ಆತನ ವೈರಿಗಳೆಲ್ಲರೂ ಸೇರಿಸಲ್ಪಡುವಾಗ ಆತನು ದೇವರೊಂದಿಗೆ ಕೂತಿರುವನು: ಮೊದಲ ಸರ್ವನಾಮವಾದ **"ನನ್ನ"** ಎಂಬ ಪದ ಭವಿಷ್ಯದ ಅರಸನನ್ನು ಸೂಚಿಸುತ್ತದೆ. ಎರಡನೇ ಸರ್ವನಾಮ **"ನನ್ನ"** ಎಂಬುದು ದೇವರನ್ನು ಸೂಚಿಸುತ್ತದೆ.

3. ದಾವೀದನು ವಚನ 2–3 ರಲ್ಲಿ ತನ್ನ ಒಡೆಯನಿಗೆ (ಭವಿಷ್ಯದ ಅರಸನಿಗೆ) ನಾಲ್ಕು ಸಂಗತಿಗಳನ್ನು ಹೇಳುತ್ತಾನೆ:

   ಅ. ಆತನ ಆಳ್ವಿಕೆಯು ಚೀಯೋನ್ ಬೆಟ್ಟದಿಂದ (ಯೆರೂಸಲೇಮ್) ಪ್ರಾರಂಭವಾಗಿ ವಿಸ್ತಾರಗೊಳ್ಳುವುದೆಂದು ದೇವರು ಭರವಸೆ ಕೊಡುತ್ತಾನೆ.

   ಆ. ತನ್ನ ವೈರಿಗಳ ಮಧ್ಯೆ ಆತನು ತನ್ನ ರಾಜ್ಯವನ್ನು ಆಳುವನು.

   ಇ. ವೈರಿಗಳೊಂದಿಗಿನ ಯುದ್ಧಗಳಲ್ಲಿ ಆತನ ಜನರು ಆತನೊಂದಿಗಿರುವರು.

   ಈ. ಆತನು ಪುನಶ್ಚೇತನಗೊಳ್ಳುವನು (ಯೌವನದ ಇಬ್ಬನಿಯನ್ನು ನೀಡಿದರೆ). ಆದರೆ 3 ನೇ ವಚನದ ದ್ವಿತೀಯಾರ್ಧದಲ್ಲಿರುವ ಇಬ್ರಿಯ ಪಠ್ಯವು ಅನುವಾದಕರು ಮತ್ತು ವ್ಯಾಖ್ಯಾನಕಾರರನ್ನು ಗೊಂದಲಗೊಳಿಸುತ್ತದೆ. ಗ್ರೀಕಿನ ಸೆಪ್ಟೂಜೆಂಟ್ ಸತ್ಯವೇದವು (ಈ ಪಠ್ಯವನ್ನು ಕೀರ್ತನೆ 2:7 ಗೆ ಸಮಾನಾಂತರವಾಗಿ ನೋಡುತ್ತದೆ) **"ಪವಿತ್ರ** ಪರ್ವತಗಳ ಮೇಲೆ ನಾನು ಯೌವನದ ಇಬ್ಬನಿಯಂತೆ ನಿಮಗೆ ಜನ್ಮ ನೀಡಿದ್ದೇನೆ" ಎಂಬಂತಹದ್ದನ್ನು ಹೊಂದಿದೆ.

   ಆದ್ದರಿಂದ ಈ ಎರಡು ವಚನಗಳಲ್ಲಿ, **"ನೀವು"** ಮತ್ತು **"ನಿಮ್ಮ"** ಎಂಬ ಸರ್ವನಾಮಗಳು ಭವಿಷ್ಯದ ರಾಜನನ್ನು ಉಲ್ಲೇಖಿಸುತ್ತವೆ.

4. ದೇವರು ವಚನ 4 ರಲ್ಲಿ ಭವಿಷ್ಯದ ಯಾಜಕ–ಅರಸನು ಸದಾಕಾಲವೂ ಆಳುವನು ಎಂಬುದಾಗಿ ಆಣೆಯಿಟ್ಟು ನುಡಿಯುತ್ತಾನೆ. ಆತನು ಮೆಲ್ಕಿಜೆದೇಕನಂತಹ ಯಾಜಕನಾಗಿರುವನು. ಹಾಗಾಗಿ **"ನೀನು"** ಎಂಬ ಸರ್ವನಾಮವು ಮುಂದಿನ ಅರಸನನ್ನು ಸೂಚಿಸುತ್ತದೆ.

5. ದಾವೀದನು ವಚನ 5–7 ರಲ್ಲಿ ಕರ್ತನ (ಯೆಹೋವನ) ಬಗ್ಗೆ 3 ಸಂಗತಿಗಳನ್ನು ಹೇಳುತ್ತಾನೆ.

ಅ. ಭವಿಷ್ಯದ ಅರಸನು ದೇವಜನರನ್ನು ರಕ್ಷಿಸುವನು.

ಆ. ಭವಿಷ್ಯದ ಅರಸನು ಜಯಿಸಲ್ಪಟ್ಟ ಜನಾಂಗಗಳ ನ್ಯಾಯ ತೀರಿಸುವನು.

ಇ. ಭವಿಷ್ಯದ ಅರಸನು ಜಯಶಾಲಿಯಾಗುವನು.

ಹಾಗಾಗಿ "ನಿನ್ನ" ಎಂಬ ಸರ್ವನಾಮವು ದೇವಜನರನ್ನು "ಆತನು/ತನ್ನ" ಎಂಬುದು ಭವಿಷ್ಯದ ಅರಸನನ್ನು ಸೂಚಿಸುತ್ತದೆ.

ಕೀರ್ತನೆ 110 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 4 ರಲ್ಲಿ ಮೆಲ್ಕಿಜೆದೇಕ ಮತ್ತು ಭವಿಷ್ಯದ ಅರಸನ ಬಗ್ಗೆ ಒಂದು ರೀತಿಯಲ್ಲಿ ಮಾತ್ರ ಹೋಲಿಕೆಯಿರುವುದೆಂದು ನಾನು ತಿಳಿದುಕೊಳ್ಳುತ್ತೇನೆ. ಆತನು ಮೆಲ್ಕಿಜೆದೇಕನ ತರಹದ ಯಾಜಕನಾಗಿರುವನು. ಭವಿಷ್ಯದ ಅರಸನು ಸದಾಕಾಲವೂ ಆಳುವನು. ಆದರೆ ಮೆಲ್ಕಿಜೆದೇಕನ ಬಗ್ಗೆ ಈ ಕೀರ್ತನೆ ಈ ರೀತಿ ಹೇಳುವುದಿಲ್ಲ. ಕ್ರಿಸ್ತನು ಮತ್ತು ಆತನ ಅರಸ–ಯಾಜಕತ್ವದ ನಿತ್ಯತ್ವದ ಸೇವೆಯ ರೀತಿಯಂತೆ ಮೆಲ್ಕಿಜೆದೇಕನು ಮತ್ತು ಆತನ ವಂಶಾವಳಿಯ ಬಗ್ಗೆ ಸತ್ಯವೇದದಲ್ಲಿ ದಾಖಲೆಗಳಿಲ್ಲ (ನೋಡಿ ಇಬ್ರಿಯ. 7:1–3).
2. 3ನೇ ವಚನದ ಎರಡನೇ ಭಾಗ ಮತ್ತು 7ನೇ ವಚನದ ಮೊದಲ ಭಾಗದ ನಡುವೆ ಒಂದು ರೀತಿಯ ಸಮಾನಾಂತರತೆಯಿರುವಂತೆ ತೋರುತ್ತದೆ. ದೇವರು ಭವಿಷ್ಯದ ರಾಜನೊಂದಿಗಿರುವನು, ದೇವರು ಆತನನ್ನು ಪುನಶ್ಚೇತನಗೊಳಿಸುವನು ಮತ್ತು ಆತನು ತನ್ನ ವೈರಿಗಳ ಮೇಲೆ ಜಯೋತ್ಸವ ಮಾಡಲು ಆತನಿಗೆ ಬಲವನ್ನು ಕೊಡುವನು.
3. ಈ ಕೀರ್ತನೆಯ ವಾಕ್ಯಭಾಗಕ್ಕೆ ಒಂದು ಪ್ರವಾದನೆಯ ಅಂಶವಿತ್ತೆಂಬುದನ್ನು ದಾವೀದನಿಗೆ ಮನವರಿಕೆಯಾಗಿರಬಹುದೆಂದು ನಾನೆಣಿಸುತ್ತೇನೆ. ತಾನು ಭವಿಷ್ಯದ ಮೆಸ್ಸೀಯನ ಬಗ್ಗೆ ಹೇಳುತ್ತಿರುವೆನೆಂಬುದನ್ನು ಆತನು ತಿಳಿದಿದ್ದರೆ ಆತನ ತಿಳುವಳಿಕೆಯನ್ನು ನಾವು "ಮೆಸ್ಸೀಯನದು" ಎಂಬುದಾಗಿ ಕರೆಯಬಹುದೇನೋ.

ಕೀರ್ತನೆ 111 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 111 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ಸ್ತೋತ್ರ, ವಚನ 1

   ಆ. ದೇವರನ್ನು ಯಾಕೆ ಸ್ತುತಿಸಬೇಕು, ವಚನ 2–9

   ಇ. ಜ್ಞಾನದ ಪ್ರಾರಂಭ, ವಚನ 10

2. ಕೀರ್ತನೆಗಾರನು ದೇವರನ್ನು ದೇವಜನರ ನೆರೆದ ಸಭೆಯಲ್ಲಿ ಸ್ತುತಿಸುತ್ತಾನೆ. ಆತನಿದನ್ನು **"ಯಥಾರ್ಥರ ಕೂಟ"** ಎಂದು ಕರೆಯುತ್ತಾನೆ (ವಚನ 1).

3. ಕೀರ್ತನೆಗಾರನು ಯಾರನ್ನು ಸಂಬೋಧಿಸುತ್ತಾನೆಂದು ಇದರಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಆದರೆ ದೇವರನ್ನು ಆರಾಧಿಸಲು ಅಥವಾ ಪ್ರಾರ್ಥಿಸಲು ಕೂಡಿಬಂದ ದೇವಜನರನ್ನು ಉದ್ದೇಶಿಸಿ ಹೇಳಿರಬಹುದೆಂದು ನಾವು ಊಹಿಸಬಹುದು (ಹೋಲಿಸಿ ವಚನ 1). ಅವರು ಯಥಾರ್ಥರಾಗಿದ್ದಾರೆ (ವಚನ 1), ದೇವರಿಗೆ ಭಯಪಟ್ಟು, ಆತನ ಕಟ್ಟಳೆಗಳನ್ನು ನಡೆಸುವವರಾಗಿದ್ದಾರೆ (ವಚನ 10). ಇದೊಂದು ಪ್ರಾರ್ಥನೆಯಲ್ಲ ಎಂಬುದನ್ನು ಗಮನಿಸಿ. ಇದರಲ್ಲಿ ಎಲ್ಲಿಯೂ ದೇವರನ್ನು ಸಂಬೋಧಿಸಿಲ್ಲ.

4. ದೇವರ ಕೃತ್ಯ (ವಚನ 2), ಆತನ ಕಾರ್ಯ (ವಚನ 3), ಆತನ ಅದ್ಭುತಕೃತ್ಯ (ವಚನ 4) ಮತ್ತು ಆತನ ಕೈಕೆಲಸಗಳಿಗಾಗಿ (ವಚನ 7) ದೇವರನ್ನು ಸ್ತುತಿಸಬೇಕೆಂದು ಕೀರ್ತನೆಗಾರನು ಕರೆಕೊಡುತ್ತಾನೆ.

   ಅ. ಕೀರ್ತನೆ 111 ರ ಪ್ರಕಾರ ಈ **"ಕೆಲಸ", "ಕಾರ್ಯ"** ಮತ್ತು **"ಅದ್ಭುತಕೃತ್ಯಗಳು"** ಇವಾಗಿವೆ:

   - ಆಹಾರವನ್ನು ಒದಗಿಸುವುದು (ವಚನ 5): ದೇವರ ಕೆಲಸ ಮತ್ತು ಕಾರ್ಯಗಳು ಆತನ ಒದಗಿಸುವಿಕೆಯನ್ನು ಒಳಗೊಂಡಿರುತ್ತವೆ. ಅವು ಕೇವಲ ಆಹಾರ ಮತ್ತು ಪಾನವಾಗಿರದೆ ಬಟ್ಟೆ, ಆಶ್ರಯ, ಆರೋಗ್ಯ, ಕುಟುಂಬ, ಸ್ನೇಹಿತರು ಮತ್ತು ದೈನಂದಿನ ಜೀವನದ ಉಳಿದ ಎಲ್ಲಾ ಆಶೀರ್ವಾದಗಳನ್ನು ಒಳಗೊಂಡಿರುತ್ತವೆ.

   - ಅನ್ಯಜನರಿಗೆ ಸಂಬಂದಿಸಿದ ಸ್ವಾಸ್ಥ್ಯವನ್ನು ಕೊಡುವುದು (ವಚನ 6): ನಿಮ್ಮ ಸಂತತಿಗೆ ಸ್ವಂತ ನೆಲವನ್ನು ಕೊಡುತ್ತೇನೆಂದು ಇಸ್ರಾಯೇಲ್ ಪಿತೃಗಳಿಗೆ ಮಾಡಿದ ವಾಗ್ದಾನವನ್ನು ದೇವರು ಕಾಯ್ದುಕೊಂಡನು. ಇಡೀ ವಾಗ್ದಾನ ಮಾಡಿದ ದೇಶವಾಯಿತು.

   - ವಿಮೋಚನೆಯನ್ನು ಕೊಡುವುದು (ವಚನ 9): ದೇವರು ಇಸ್ರಾಯೇಲ್ ಜನರನ್ನು ಐಗುಪ್ತದ ಬಂಧನದಿಂದ ವಿಮೋಚಿಸಿದನು. ಅಲ್ಲದೇ ದೇವರು ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ನಮಗೆ ಪಾಪವೆಂಬ ಬಂಧನದಿಂದ ರಕ್ಷಣೆ ಮತ್ತು ವಿಮೋಚನೆಯನ್ನುಂಟು ಮಾಡಿದ್ದಾನೆ.

   - ಒಡಂಬಡಿಕೆಯ ಸ್ಥಾಪನೆ (ವಚನ 9): ದೇವರು ಸೀನಾಯ್ ಬೆಟ್ಟದಲ್ಲಿ ಇಸ್ರಾಯೇಲ್ಯರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಅಲ್ಲಿ ಆತನು ಅವರು ಆತನಿಗೆ ಭಯಪಟ್ಟು, ಆತನ ಕಟ್ಟಳೆಗಳನ್ನು ಪಾಲಿಸುವುದಕ್ಕಾಗಿ ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟನು (ವಚನ 10). ಅದು **"ಹಳೇ ಒಡಂಬಡಿಕೆ"** ಯಾಗಿತ್ತು. ಆದರೆ ಯೇಸು ಕ್ರಿಸ್ತನು ನಮಗಾಗಿ ಸುರಿಸಲ್ಪಟ್ಟ ತನ್ನ ರಕ್ತದಲ್ಲಿ ಒಂದು ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದ್ದಾನೆ (ಲೂಕ 22:20).

   ಆ. ಈ **"ಕೆಲಸ, "ಕಾರ್ಯ"** ಮತ್ತು ಮಹತ್ಕಾರ್ಯಗಳ" ಗುಣಗಳನ್ನು ಕೀರ್ತನೆಗಾರನು ಈ ಪದಗಳಿಂದ ವಿವರಿಸುತ್ತಾನೆ:

   - ಅವು ಮಹತ್ತಾದವುಗಳು (ವಚನ 2)

   - ಅದು ಘನಮಾನಗಳುಳ್ಳದ್ದು (ವಚನ 3)

   - ಅವು ಜ್ಞಾಪಿಸುವಂತದ್ದು (ವಚನ 4)

- ಅವು ಸ್ಥಿರವಾಗಿವೆ ಮತ್ತು ನ್ಯಾಯವಾಗಿವೆ (ವಚನ 7)
- ಅವುಗಳಲ್ಲಿ ನಿತ್ಯನಿತ್ಯವೂ ಪ್ರಭಾವಬೀರುವಂತವು (ವಚನ 8, 9)

5. ವಚನ 10 ರ ಪ್ರಕಾರ ಜ್ಞಾನ ಮತ್ತು ತಿಳುವಳಿಕೆಯ ಮೂಲವು **"ದೇವರ ಭಯ"** ವಾಗಿದೆ. ಈ ಭಯವನ್ನು ವ್ಯಕ್ತಪಡಿಸುವ ಒಂದು ಬಗೆಯೆಂದರೆ ಆತನ ಕಟ್ಟಳೆಗಳನ್ನು ಪಾಲಿಸುವುದಾಗಿದೆ (ವಚನ 10).

ಕೀರ್ತನೆ 111 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –
2. ದೇವರ ಕೃತ್ಯ (ವಚನ 2), ಆತನ ಕಾರ್ಯ (ವಚನ 3), ಅದ್ಭುತಕೃತ್ಯ (ವಚನ 4) ಮತ್ತು ಆತನ ಕೈಕೆಲಸಗಳಿಗಾಗಿ ಆತನನ್ನು ಸ್ತುತಿಸಲು ಕರೆಗೊಡುತ್ತಾನೆ.

   ಅ. ಈ ಕೃತ್ಯ, ಕಾರ್ಯ ಮತ್ತು ಅದ್ಭುತಕೃತ್ಯಗಳ ಐತಿಹಾಸಿಕ ಹಿನ್ನಲೆಯು ಇಸ್ರಾಯೇಲ್ ಜನಾಂಗವಾಗಿದೆ. ಅವರು ಐಗುಪ್ತದಲ್ಲಿ ಬಂಧನದಲ್ಲಿದ್ದರು. ದೇವರು ತನ್ನ ಹಸ್ತಬಲದಿಂದ ಅದ್ಭುತವಾಗಿ ಅವರನ್ನು ಐಗುಪ್ತದಿಂದ ಹೊರತಂದನು. ಅವರೊಂದಿಗೆ ಸೀನಾಯ್ ಬೆಟ್ಟದಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡನು. ದೇವರು ಅದ್ಭುತವಾಗಿ ಅವರ ಅಗತ್ಯತೆಗಳನ್ನೆಲ್ಲಾ ಪೂರೈಸುತ್ತಾ, ಮರುಭೂಮಿಯ ಪ್ರಯಾಣದುದ್ದಕ್ಕೂ ತನ್ನ ದಯೆ ಕರುಣೆಯಿಂದ ಅವರನ್ನು ನಡೆಸುತ್ತಾ ಬಂದನು. ದೇವರು ನಂಬಿಗಸ್ತನಾಗಿ ವಾಗ್ದಾತ್ತ ದೇಶವನ್ನು ಅವರ ಕೈಗೆ ಕೊಟ್ಟನು.

   ಆ. ಈ ಕೃತ್ಯ, ಕಾರ್ಯ ಮತ್ತು ಅದ್ಭುತಕೃತ್ಯಗಳ ಆತ್ಮೀಕ ಹಿನ್ನಲೆಯು ಸೀನಾಯ್ ಒಡಂಬಡಿಕೆಯಾಗಿದೆ. ಈ ಕೀರ್ತನೆಯು ದೇವರ ಮಹತ್ಕಾರ್ಯ ಮತ್ತು ತನ್ನ ಒಡಂಬಡಿಕೆಯ ಜನರೊಂದಿಗಿನ ಆತನ ಕಾರ್ಯಗಳಿಗಾಗಿ ಆತನಿಗೆ ಮಾಡುವ ಒಂದು ಸ್ತೋತ್ರವಾಗಿದೆ (ವಚನ 1).

   ಇ. ಇಂದಿನ ದೇವಜನರಾದ ನಮಗೆ ಹಿಂದಿನ ಎರಡು ಅಂಶಗಳು ಈ ರೀತಿಯಾಗಿ ಅನ್ವಯಿಸಬಹುದು:

   - ನಮ್ಮ ಐತಿಹಾಸಿಕ ಹಿನ್ನಲೆ: ಪಾಪದ ಜೀವಿತದಲ್ಲಿನ ನಮ್ಮ ಹಿಂದಿನ ಬಂಧನ. ಯೇಸು ಕ್ರಿಸ್ತನು ನಮ್ಮನ್ನು ಈ ಹಳೇಯ ಪಾಪಮಯ ಜೀವಿತದಿಂದ ಬಿಡಿಸಿ ರಕ್ಷಿಸಿದನು. ದೇವರು ತನ್ನ ಪವಿತ್ರಾತ್ಮನ ಮೂಲಕ ನಮ್ಮನ್ನು ನಡೆಸುತ್ತಾ ಮತ್ತು ನಮ್ಮಲ್ಲಿ ಅಗತ್ಯತೆಗಳನ್ನು ಪೂರೈಸುತ್ತಾನೆ. ಯೇಸು ಕ್ರಿಸ್ತನು ಮಹಿಮೆಯಲ್ಲಿ ಹಿಂತಿರುಗಿ ಬರುವಾಗ ನಮ್ಮ ಸ್ವಾಸ್ತ್ಯವು ನಮಗೆ ಕೊಡಲ್ಪಡುತ್ತದೆ.
   - ನಮ್ಮ ಆತ್ಮೀಕ ಹಿನ್ನಲೆ: ಹೊಸ ಒಡಂಬಡಿಕೆಯ ವಾಕ್ಯಭಾಗಗಳಲ್ಲಿ ವಿವರಿಸಿದಂತೆ ಯೇಸುವಿನ ರಕ್ತದಲ್ಲಿನ ಹೊಸ ಒಡಂಬಡಿಕೆ.

ಕೀರ್ತನೆ 112 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 112 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ಹಲ್ಲೆಲೂಯ ಮತ್ತು ಕೀರ್ತನೆಯ ವಿಷಯ ವಸ್ತು: ದೇವರಲ್ಲಿ ಭಯಭಕ್ತಿಯುಳ್ಳವನು ಧನ್ಯನು, ವಚನ 1

   ಆ. ದೇವರಲ್ಲಿ ಭಯಭಕ್ತಿಯುಳ್ಳವನು ಹೇಗೆ ಆಶೀರ್ವದಿಸಲ್ಪಡುವನು ಎಂಬುದರ ಉದಾಹರಣೆ, ವಚನ 2–9

   ಇ. ದುಷ್ಟನು, ವಚನ 10

2. ಕೀರ್ತನೆಗಾರನು ಈ ಕೀರ್ತನೆಯಲ್ಲಿ ಯಾರನ್ನು ಸಂಬೋಧಿಸುತ್ತಿದ್ದಾನೆಂಬುದು ಸ್ಪಷ್ಟವಾಗಿಲ್ಲ. ಆದರೆ ಇದು ದೇವಜನರಾಗಿರಬಹುದು. ಅವರೇ **"ದೇವರಿಗೆ ಭಯಪಟ್ಟು ಆತನ ಆಜ್ಞೆಗಳಲ್ಲಿ ಆನಂದಪಡುವವರಾಗಿದ್ದಾರೆ"** (ವಚನ 2). ಈ ಕೀರ್ತನೆಯು ಒಡಂಬಡಿಕೆಗೆ ನಂಬಿಗಸ್ತರಾಗಿರುವವರ ನೈತಿಕ ಗುಣಲಕ್ಷಣ ಮತ್ತು ಅದರಿಂದ ಅವರಿಗೆ ಮತ್ತು ಇತರರಿಗೆ ಆಗುವ ಪ್ರಯೋಜನಕ್ಕೆ ಒತ್ತು ಕೊಡುತ್ತದೆ. ದೇವರನ್ನು ಇದರಲ್ಲಿ ಸಂಬೋಧಿಸಿಲ್ಲ. ಹಾಗಾಗಿ ಇದೊಂದು ಪ್ರಾರ್ಥನೆಯಲ್ಲ.

3. 1ನೇ ವಚನದ ಪದ್ಯರೂಪಿ ರಚನೆಯು ಸಮಾನಾರ್ಥಕ ಸಮಾನಾಂತರತೆ ಆಗಿರುವದರಿಂದ **"ಯೆಹೋವನ ಭಯ"** ಎಂಬ ಹೇಳಿಕೆಯನ್ನು ವಿವರಿಸಬಹುದೆಂದು ನಾವು ಹೇಳಬಹುದು. ಮೊದಲ ಸಾಲಿನಲ್ಲಿನ ಯೆಹೋವನ ಭಯದ ಅರ್ಥ ಮತ್ತು ಯೆಹೋವನ ಆಜ್ಞೆಗಳಲ್ಲಿ ಅತ್ಯಾನಂದ ಪಡುವವನೇ ಎಂಬ ಎರಡನೇ ಸಾಲಿನ ಅರ್ಥವೆರಡೂ ಸಹ ಒಂದೇ ಆಗಿದೆ. ಹಾಗಾಗಿ **"ಯೆಹೋವನಿಗೆ ಭಯಪಡುವುದೆಂದರೆ ದೇವರ ವಾಕ್ಯಗಳಲ್ಲಿ ಆನಂದಿಸುತ್ತಾ, ಸಂತೋಷದಿಂದ ಆತನ ಮಾರ್ಗದರ್ಶನವನ್ನು ಪಾಲಿಸುವುದಾಗಿದೆ".**

4. ದೇವಮನುಷ್ಯನು ಹೇಗೆ ಆಶೀರ್ವದಿಸಲ್ಪಡುವನು ಎಂಬ ಪಟ್ಟಿ ಇಂತಿದೆ (ವಚನ 2–9):

   ಅ. ಆತನ ವಂಶವು ಆಶೀರ್ವದಿಸಲ್ಪಡುವದು (ವಚನ 2).

   ಆ. ಆತನು ಪ್ರತಿಯೊಂದು ಪರಿಸ್ಥಿತಿಯಲ್ಲಿ ದೇವರಲ್ಲಿ ಭರವಸವಿಟ್ಟು ಒಂದು ಸ್ಥಿರವಾದ ಮತ್ತು ಆರಾಮದಾಯಕ ಜೀವನ ಜೀವಿಸುವನು (ವಚನ 3, 7, 9).

   ಇ. ಆತನ ನೀತಿ ಸದಾಕಾಲ ಫಲಿಸುವದು (ವಚನ 3).

   ಈ. ಕಷ್ಟದ ಸಮಯದಲ್ಲಿ ಸಹ ಆತನು ನಿರೀಕ್ಷೆಯಿಂದಿರುವನು (ವಚನ 4, 7, 8).

   ಉ. ಆತನ ಉದಾರತೆಯು ಆತನಿಗೆ ಒಳ್ಳೆಯ ಪ್ರತಿಫಲವನ್ನು ಕೊಡುವದು (ವಚನ 5).

   ಊ. ಆತನಿಗೆ ಉತ್ತಮವಾದ ವ್ಯಕ್ತಿತ್ವವಿರುವುದು. ಆತನು ದಯಾಳುವಾಗಿರುವನು (ವಚನ 5, 9).

   ಋ. ಆತನು ಸತ್ತಮೇಲೆ ಜನರು ಆತನನ್ನು ನೆನೆಸುವರು (ವಚನ 6, 9).

5. ದೇವರನ್ನು ನಂಬದವನು ದೇವರಲ್ಲಿ ಭಯಭಕ್ತಿಯುಳ್ಳವನ ಆಶೀರ್ವಾದಕ್ಕೆ ಕೋಪದಿಂದ ಪ್ರತಿಕ್ರಿಯಿಸುವನು (ವಚನ 10).

6. ಕೀರ್ತನೆಗಾರನು ದುಷ್ಟರ ಅಂತ್ಯವನ್ನು ಈ ರೀತಿ ಸಾರಾಂಶಗೊಳಿಸುವನು (ವಚನ 10):

   ಅ. ಅವರು ಲಯ ಹೊಂದುವರು. ಹಾಗಾಗಿ ಅವರಿಗೆ ಭವಿಷ್ಯವೇ ಇಲ್ಲ.

   ಆ. ಅವರ ನಿರೀಕ್ಷೆ ನೆರವೇರುವುದಿಲ್ಲ.

ಕೀರ್ತನೆ 112 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –

2. ಒಬ್ಬ ಹಿರಿಯ ನಂಬಿಗಸ್ತ ಸಹೋದರಿ ನಿಮ್ಮ ಬಳಿಗೆ ಸಮಾಲೋಚನೆಗೆಂದು ಬರುವಳು. ತಾನು ಕೀರ್ತನೆ 112 ವಾಗ್ದಾನ ಮಾಡುವಂತೆ ಆಶೀರ್ವದಿಸಲ್ಪಡದ ನಿಮಿತ್ತ ದೇವರು ತನ್ನ ಮಾತಿಗೆ ನಂಬಿಗಸ್ತನಲ್ಲವೆಂಬುದು ಆಕೆಯ ವಾದವಾಗಿದೆ. ನೀವು ಆಕೆಗೆ ಈ ರೀತಿಯಾಗಿ ಸಲಹೆ ಕೊಡಿರೆಂದು ನಾನು ನಿಮಗೆ ಹೇಳುತ್ತೇನೆ:

   ಅ. ಮೊದಲು ದೇವರು ಆಕೆಯನ್ನು ಹೇಗೆ ಆಶೀರ್ವದಿಸಿದನೆಂಬುದನ್ನು ಕೇಳಿರಿ. ಅವರು ಈ ರೀತಿ ಹೇಳಬಹುದು:

   - ದೇವರು ನಮಗೆ ಮನಶ್ಯಾಂತಿ ಕೊಟ್ಟಿದ್ದಾನೆ.
   - ದೇವರು ನನ್ನನ್ನು ಹಳೇ ಪಾಪದ ಜೀವಿತದಿಂದ ಬಿಡಿಸಿದನು.
   - ದೇವರು ತನಗಾಗಿ ಕಾಳಜಿವಹಿಸುತ್ತಾನೆಂದು ತಿಳಿದಿದೆ.
   - ದೇವರು ನನ್ನ ಜೀವನದಲ್ಲಿ ಮಧ್ಯಪ್ರವೇಶಿಸಿದನು. ಅನಾರೋಗ್ಯದಿಂದ ಸ್ವಸ್ಥಪಡಿಸಿದನು. ಪ್ರಾರ್ಥನೆಗೆ ಉತ್ತರಿಸಿದನು.
   - ದೇವರು ಸಭಾವಿಶ್ವಾಸಿಗಳ ಮಧ್ಯೆ ಅನ್ಯೋನ್ಯತೆ ಮತ್ತು ಸ್ನೇಹಿತರನ್ನು ಕೊಟ್ಟನು.

   ಆ. ಯೇಸುವು ಮಹಿಮೆಯಲ್ಲಿ ತಿರುಗಿ ಬರುವಾಗ **"ಆಶೀರ್ವದಿತ ನಿರೀಕ್ಷೆ"**ಯಿದೆಯೆಂದು ಆಕೆಗೆ ಜ್ಞಾಪಿಸಿರಿ. ಈ ಲೋಕದಲ್ಲಿ ನಾವು ಪ್ರವಾಸಿಗಳಾಗಿದ್ದೇವೆಂಬುದನ್ನು ಸಹ ಆಕೆಗೆ ನೆನಪಿಸಿರಿ. ಇದು ನಮ್ಮ ನಿಜವಾದ ಮನೆಯಲ್ಲವೆಂದು ಹೇಳಿರಿ.

   ಇ. ತರುವಾಯ ಅವರೊಂದಿಗೆ ಕೀರ್ತನೆ 112 ಅನ್ನು ಓದಿರಿ. ಈ ಕೀರ್ತನೆಯು ಒಂದು ನಂಬಿಕೆಯ ಹೇಳಿಕೆಯಾಗಿದೆ. ಇದನ್ನು ದೇವರು ನಮ್ಮಿಂದ ಬಯಸುತ್ತಾನೆ, ಇದು ದೇವರ ಯೋಜನೆಯಾಗಿದೆ. ಈ ರೀತಿ ನಾವು ಅನುಭವಿಸಲು ದೇವರು ಮಾಡುತ್ತಾನೆ. ಆದರೆ ನಾವಿನ್ನು ಪಾಪದ ಶಾಪದ ಅಡಿಯಲ್ಲಿನ ಲೋಕದಲ್ಲಿ ಬದುಕುತ್ತಿದ್ದೇವೆ. ಇದು ನಮ್ಮ ನಿಜವಾದ ಮನೆಯಲ್ಲ. ಈಗಾಗಲೇ ದೇವರ ಆಶೀರ್ವಾದವನ್ನು ಇಲ್ಲಿ ನಾವು ಅನುಭವಿಸಿದ್ದೇವೆ, ಅಲ್ಲದೆ ಮುಂದೆ ಇನ್ನೂ ಹೆಚ್ಚಿನ ಆಶೀರ್ವಾದವನ್ನು ಅಪೇಕ್ಷಿಸಬಹುದೆಂದು ಅವರಿಗೆ ಹೇಳಿರಿ.

   ಈ. ಪ್ರಾರ್ಥನೆಯೊಂದಿಗೆ ಮುಕ್ತಾಯಗೊಳಿಸಿರಿ. ದೇವರ ಆಶೀರ್ವಾದಗಳಿಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿ, ಮೊದಲು ಪ್ರಾರ್ಥಿಸಬೇಕೆಂದು ಅವರಿಗೆ ಹೇಳಿರಿ. ಅನಂತರ ನೀವು ಪ್ರಾರ್ಥಿಸಿರಿ. ದೇವರ ಒಳ್ಳೇತನ, ರಕ್ಷಣೆ, ಆತನ ಒದಗಿಸುವಿಕೆ, ಆತನ ನಡೆಸುವಿಕೆ ಮತ್ತು ಸಂರಕ್ಷಣೆ, ಆತನ ಆಶೀರ್ವಾದ, ನಮ್ಮ ಜೀವಿತಕ್ಕಾಗಿನ ಆತನ ಯೋಜನೆಗಳಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ. ಅಂತಿಮವಾಗಿ ಹಿರಿಯ ಸಹೋದರಿಯನ್ನು ಆಶೀರ್ವದಿಸಿರಿ.

ಕೀರ್ತನೆ 126 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 126 ಅನ್ನು ಈ ರೀತಿಯಾಗಿ ರಚಿಸಬಹುದಾಗಿದೆ:

   ಅ. ದೇವರು ಚೀಯೋನಿಗೆ ತಿರುಗಿ ಬರಮಾಡುವುದು, ವಚನ 1–3

   ಆ. ಕೀರ್ತನೆಗಾರನು ದೇವರನ್ನು ಚೀಯೋನಿಗೆ ತಿರುಗಿ ಬರಮಾಡಬೇಕೆಂದು ಕೇಳಿಕೊಳ್ಳುತ್ತಾನೆ, ವಚನ 4

   - ಪ್ರಾರ್ಥನೆ, ವಚನ 4
   - ಪ್ರಾರ್ಥನೆಗೆ ಉತ್ತರದ ಫಲಿತಾಂಶ, ವಚನ 5–6

2. ಕೀರ್ತನೆಗಾರನು ಈ ವ್ಯಕ್ತಿಗಳನ್ನು ಸಂಬೋಧಿಸಿದಂತೆ ಕಾಣುತ್ತದೆ:

   ಅ. ಬಹುಶಃ ಇಸ್ರಾಯೇಲ್ ಸಮೂಹವಾಗಿರಬಹುದು, ವಚನ 1–3

   ಆ. ದೇವರನ್ನು, ವಚನ 4. ಕೀರ್ತನೆಯ ಈ ಭಾಗವು ಒಂದು ಪ್ರಾರ್ಥನೆಯಾಗಿದೆ.

   ಇ. ಬಹುಶಃ ಇಸ್ರಾಯೇಲ್ ಸಮೂಹ, ವಚನ 5–6

3. ಕೀರ್ತನೆಗಾರನು ಹಿಂತಿರುಗುತ್ತಿರುವ ಇಸ್ರಾಯೇಲ್ಯರ ಭಾವನೆಗಳನ್ನು ಈ ರೀತಿಯಾಗಿ ವರ್ಣಿಸುತ್ತಾನೆ (ವಚನ 1–2):

   ಅ. ಇದೊಂದು ರೀತಿಯ ಕನಸಿನಂತಿತ್ತು. ಇದರರ್ಥ ಈ ರೀತಿ ಆಗುತ್ತಿದೆಯಾ ಎಂಬುದನ್ನು ನಂಬುವುದು ಅವರಿಗೆ ಕಷ್ಟಕರವಾಗಿತ್ತು.

   ಆ. ಅವರಿಗೆ ಅತೀವ ಸಂತೋಷವಾಯಿತು.

4. ಕೀರ್ತನೆಗಾರನು ದೇವರನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಮಧ್ಯಪ್ರವೇಶಿಸಬೇಕೆಂದು ಕೇಳಿಕೊಳ್ಳುತ್ತಾನೆ. ಸ್ವತಃ ಆತನೇ ಸೆರೆಯಿಂದ ತಿರುಗಿ ಬಂದ ಇಸ್ರಾಯೇಲ್ಯರಲ್ಲಿ ಒಬ್ಬನಾಗಿದ್ದನು. ಯಾಕೆಂದರೆ ಆತನು ಪುನಃ ತನ್ನನ್ನು ಸೆರೆಯಿಂದ ಬಿಡಿಸಬೇಕೆಂದು ಕೇಳುವುದಿಲ್ಲ.

5. ವಚನ 5–6 ಅನ್ನು ನಾನು ಈ ರೀತಿ ಹೇಳಬಹುದು: ಒಂದು ನೆಲವನ್ನು ಸಿದ್ಧಪಡಿಸಿ ಮತ್ತು ಅದರಲ್ಲಿ ಬಿತ್ತುವುದು ಕಷ್ಟದ ಕೆಲಸ. ಆದರೆ ಉತ್ತಮವಾದ ಬೆಳೆಯನ್ನು ಕೊಯ್ಯುವುದು ನಿಜವಾಗಲು ಒಂದು ಸಂತೋಷಕರವಾದ ಸಂಗತಿಯಾಗಿದೆ.

ಕೀರ್ತನೆ 126 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 4 ಇಡೀ 126 ನೇ ಕೀರ್ತನೆಯನ್ನು ಅರ್ಥೈಸಿಕೊಳ್ಳಲು ಇರುವ ಕೀಲಿಕೈಯಾಗಿದೆ, ಯಾಕೆಂದರೆ ಕೀರ್ತನೆಗಾರನು ಈ ಕೀರ್ತನೆಯನ್ನು ಬರೆಯಲು ಕಾರಣವಾಗಿರುವ ಒಂದು ಪ್ರಾರ್ಥನೆಯನ್ನು ಇದು ಒಳಗೊಂಡಿದೆ.

2. ವಚನ 4 ರಲ್ಲಿನ ಉಪಮೆ – "ದಕ್ಷಿಣ ದೇಶದ ಹಳ್ಳಗಳನ್ನೋ ಎಂಬಂತೆ" ದೇವರು ಮಳೆಯನ್ನು ಬರಮಾಡಿ ಒಣಗಿದ ತೊರೆಗಳನ್ನು ನೀರಿನಿಂದ ತುಂಬಿಸುತ್ತಾನೆ. ಅದೇ ರೀತಿ ಆತನು ಇಸ್ರಾಯೇಲ್ಯರ ದುಸ್ಥಿತಿಯನ್ನು ಬದಲಿಸುತ್ತಾನೆ.

3. ವಚನ 5–6 ವಚನ 4 ರಲ್ಲಿ ದೇವರು ಪ್ರಾರ್ಥನೆಗೆ ಉತ್ತರಿಸುವುದರ ಫಲಿತಾಂಶವನ್ನು ವರ್ಣಿಸುತ್ತವೆ. ಈ ರೀತಿ ಆಗುವಾಗ – ಕಣ್ಣೀರಿನ ಜಾಗವನ್ನು ಹರ್ಷಗೀತವು ಆಕ್ರಮಿಸುತ್ತದೆ. ಬಿತ್ತುವುದರ ಶ್ರಮದ ಸ್ಥಾನವನ್ನು ಉತ್ತಮ ಬೆಳೆಯು ಆವರಿಸುತ್ತದೆ.

4. ಮೇಲಿನ 4ನೇ ಪ್ರಶ್ನೆಗೆ ನನ್ನ ಉತ್ತರವನ್ನು ನೋಡಿರಿ. ಒಂದು ಹೆಚ್ಚುವರಿ ಟಿಪ್ಪಣಿ: ಇಬ್ರಿಯ ಪಠ್ಯವು 1 ನೇ ವಚನ ಮತ್ತು 4 ನೇ ವಚನದಲ್ಲಿ ಒಂದೇ ರೀತಿಯ ಅಭಿವ್ಯಕ್ತಿಯನ್ನು ಹೊಂದಿದೆ. ವಚನ 1 ರಲ್ಲಿ ಅದನ್ನು "ಸೆರೆಯಿಂದ ಬಿಡುಗಡೆ" ಎಂದು ಅನುವಾದಿಸುವುದು ಸ್ವೀಕಾರಾರ್ಹವಾಗಬಹುದು (ಅದು ಅನುವಾದಕ್ಕಿಂತ ಹೆಚ್ಚಾಗಿ ಪ್ಯಾರಪ್ರೇಸ್

ಆಗಿದ್ದರೂ ಸಹ). ಆದರೆ ವಚನ 4 ರಲ್ಲಿ ಹಾಗೆ ಮಾಡುವುದು ದಾರಿ ತಪ್ಪಿಸುವಂತಿದೆ. ನನ್ನ ಮುಂದಿನ ಟಿಪ್ಪಣಿ ನೋಡಿ.

5. ಕೀರ್ತನೆ 126 ಸಂದರ್ಭವು ಪ್ಯಾಲೆಸ್ತೇನಿನಲ್ಲಿ ಕ್ಷಾಮವನ್ನು ಎದುರಿಸುತ್ತಿರುವ ಸಮಯವಾಗಿದ್ದಿರಬಹುದು. ಉದಾ: ಬಿತ್ತುವ ಮತ್ತು ಕೊಯ್ಯುವ ಚಿತ್ರಣ (ವಚನ 5–6).

    - ಬತ್ತಿದ ಹೊಳೆಗಳಲ್ಲಿ ನೀರು (ವಚನ 4)
    - ಬಿತ್ತನೆ ಮತ್ತು ಕೊಯ್ಲು (ವಚನ 5–6)

6. ಕೀರ್ತನೆ 126 ಮೂರು ರೀತಿಯ ಕಾಲವನ್ನು ಒಳಗೊಂಡಿದೆ:

    ಅ. ಭೂತಕಾಲ: ಬಾಬೆಲಿನ ಸೆರೆಯಿಂದ ಹಿಂದಿರುಗಿದಾಗ ಆದ ಅನಿರೀಕ್ಷಿತ ಸಂತೋಷ (ವಚನ 1–3).

    ಆ. ವರ್ತಮಾನ ಕಾಲ: ಕೀರ್ತನೆಗಾರನು ಮತ್ತು ಆತನು ಸಹ ಇಸ್ರಾಯೇಲ್ಯರು ಅನುಭವಿಸುತ್ತಿರುವ ದುಃಖದ ಸಮಯ (ವಚನ 4).

    ಇ. ಭವಿಷ್ಯತ್ ಕಾಲ: ಕೀರ್ತನೆಗಾರನು ಮತ್ತು ಆತನು ಸಹ ಇಸ್ರಾಯೇಲ್ಯರು ಅನುಭವಿಸುತ್ತಿರುವ ಹರ್ಷ (ವಚನ 5–6).

ಕೀರ್ತನೆ 127 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 127 ಅನ್ನು ಈ ರೀತಿಯಾಗಿ ರಚಿಸಬಹುದು:

   ಅ. ಆಶ್ರಯ, ಸುರಕ್ಷಿತತೆ ಮತ್ತು ಒದಗಿಸುವಿಕೆಗಳಿಗಾಗಿ ದೇವರ ಮೇಲಿನ ನಮ್ಮ ಅವಲಂಬನೆ, ವಚನ 1–2

   ಆ. ಮಕ್ಕಳು ದೇವರ ವರ ಮತ್ತು ಆತನ ದಯೆಯ ಸಂಕೇತ, ವಚನ 3–5

2. ನಮ್ಮ ಮನೆ ಮತ್ತು ನಮ್ಮ ಕಾವಲು (ಭದ್ರತೆ) ಗಳೆರಡೂ, ತನ್ನ ಒಡಂಬಡಿಕೆಯ ಜನರ ಮೇಲಿನ ದೇವರ ಆಶೀರ್ವಾದಗಳಾಗಿವೆ ಎಂದು ಕೀರ್ತನೆಗಾರನು ಹೇಳುತ್ತಾನೆ (ವಚನ 1).

3. ಕೀರ್ತನೆಗಾರನು (ಸೊಲೊಮೋನನು) ದೇವರು ನಮ್ಮೊಂದಿಗೆ ಇಲ್ಲದಿದ್ದರೆ ನಮ್ಮ ಕುಟುಂಬದ ನಿರ್ವಹಣೆಗಾಗಿ ನಾವು ಪಡುವ ಪರಿಶ್ರಮಗಳೆಲ್ಲವೂ ವ್ಯರ್ಥವೆಂದು ಹೇಳುತ್ತಾನೆ (ವಚನ 2).

4. ಕೀರ್ತನೆಗಾರನು ವಚನ 3 ರಲ್ಲಿ ಮಕ್ಕಳ ಬಗ್ಗೆ 3 ಸಂಗತಿಗಳನ್ನು ಹೇಳುತ್ತಾನೆ:

   ಅ. ಮಕ್ಕಳು ದೇವರಿಂದ ಬಂದ ಬಹುಮಾನ

   ಆ. ನಮ್ಮ ಒಡಂಬಡಿಕೆಯ ದೇವರು ತನ್ನ ಜನರನ್ನು ಮಕ್ಕಳಿಂದ ಆಶೀರ್ವದಿಸುತ್ತಾನೆ.

   ಇ. ಮಕ್ಕಳು ಕೇವಲ ಬಹುಮಾನ ಮತ್ತು ಆಶೀರ್ವಾದವಷ್ಟೇ ಅಲ್ಲ, ಅವರು ಸ್ವಾಸ್ಥ್ಯ ಸಹ ಆಗಿದ್ದಾರೆ.

5. ಹೆಚ್ಚು ಮಕ್ಕಳನ್ನು ಪಡೆದಿರುವವನು ದೇವರಿಂದ ಆಶೀರ್ವದಿಸಲ್ಪಟ್ಟವನಾಗಿದ್ದಾನೆ.

ಕೀರ್ತನೆ 127 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಎರಡು ಕಾರಣಗಳಿಂದ 127ನೇ ಕೀರ್ತನೆಯನ್ನು **"ಜ್ಞಾನದ ಕೀರ್ತನೆಯನ್ನಾಗಿ"** ವರ್ಗೀಕರಿಸಬಹುದು:

   ಅ. ಇದು ಮನುಷ್ಯನ ಅನುಭವಕ್ಕಿಂತ **"ನಂಬಿಕೆಯ ಹೇಳಿಕೆ"**ಗಳನ್ನು ಒಳಗೊಂಡಿದೆ. ಉದಾ: ಕೆಲ ಭಯಭಕ್ತಿಯುಳ್ಳ ವಿಶ್ವಾಸಿಗಳು ಪ್ರವಾಹದ ನಿಮಿತ್ತ ಮನೆ ಮಕ್ಕಳಿಲ್ಲದೆ ಗುಡಿಸಲಿನಲ್ಲಿ ವಾಸ ಮಾಡುವಾಗ ಕೆಲ ಅವಿಶ್ವಾಸಿ ಜನರು ಒಳ್ಳೆಯ ಮನೆ, ಉತ್ತಮವಾದ ಕುಟುಂಬಗಳು ಮತ್ತು ಬೇಕಾದಷ್ಟು ಆಹಾರವನ್ನು ಹೊಂದಿದ್ದು ವೈರಿಗಳ ಭಯವಿಲ್ಲದೆ ಇರುವರೆಂದು ನಮ್ಮ ಮಾನುಷಿಕ ಅನುಭವವು ಹೇಳುತ್ತದೆ. ಬದಲಾಗಿ ದೇವಜನರು ಯಾವಾಗಲೂ ದೇವರನ್ನೇ ಆತುಕೊಳ್ಳಬೇಕೆಂಬುದು ಕೀರ್ತನೆಗಾರನ ಸಂದೇಶವಾಗಿದೆ. ಇದೊಂದು **"ಜ್ಞಾನದ"** ವಿಷಯ ವಸ್ತುವಾಗಿದೆ.

   ಆ. ಈ ಕೀರ್ತನೆಯ ವಿಷಯಾಂಶವು ಒಡಂಬಡಿಕೆಯೊಂದಿಗೆ, ಅದರ ಆಶೀರ್ವಾದ ಮತ್ತು ಶಾಪವಾಗಿವೆ (ಹೋಲಿಸಿ ಧರ್ಮೋ.27–28).

2. ವಚನ 1 ರ ವ್ಯಾಕರಣಾತ್ಮಕ ರಚನೆಯು ಒಂದು ಹೇಳಿಕೆಯೊಂದಿಗಿನ (ವ್ಯರ್ಥ) ಸಂಯೋಗದಲ್ಲಿ ಒಂದು ಷರತ್ತುಬದ್ಧವಾದ (ಕಾಯದಿದ್ದರೆ, ಕಟ್ಟದಿದ್ದರೆ) ಉಪವಾಕ್ಯವಾಗಿದೆ. ಈ ರೀತಿ ಮಾಡುವುದರಿಂದ ದೇವಜನರು ತಮ್ಮ ಒಡಂಬಡಿಕೆಯ ಕರ್ತನನ್ನೇ ಆತುಕೊಂಡವರಾಗಿದ್ದಾರೆಂಬುದನ್ನು ಕೀರ್ತನೆಗಾರನು ಒತ್ತಿ ಹೇಳುತ್ತಿದ್ದಾನೆ.

3. ವಚನ 1–2 ರಲ್ಲಿನ ದೈವಶಾಸ್ತ್ರ: ದೇವರು ನಮ್ಮೆಲ್ಲಾ ಆಶೀರ್ವಾದಗಳಿಗೆ ಮೂಲವಾಗಿದ್ದಾನೆ (ನಮ್ಮ ಮನೆ, ಭದ್ರತೆ, ನಮ್ಮ ಪೋಷಣೆ).

4. ಇದರರ್ಥ ನಮ್ಮ ಮನುಷ್ಯನ ಶ್ರಮವೆಲ್ಲಾ ವೆಚ್ಚದಾಯಕವೆಂದಲ್ಲ. ನಾವು ನಮ್ಮ ಮನೆಗಳನ್ನು ಕಟ್ಟಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಕಾವಲುಗಾರರು ನಮ್ಮ ಕೆಲಸದಲ್ಲಿ ಪ್ರಾಮಾಣಿಕರಾಗಿರಬೇಕೆಂದು ದೇವರು ಅಪೇಕ್ಷಿಸುತ್ತಾನೆ. ನಮ್ಮ ಕುಟುಂಬದ ನಿರ್ವಹಣೆಗಾಗಿ ನಾವು ದುಡಿಯಬೇಕೆಂದು ದೇವರು ಬಯಸುತ್ತಾನೆ. ಆದರೆ ಈ ರೀತಿ ಮಾಡುವಾಗ ನಮ್ಮ ಮನುಷ್ಯರ ಪ್ರಯತ್ನದ ಉತ್ತಮ ಫಲಿತಾಂಶವು ದೇವರಿಂದ ಬಂದ ಆಶೀರ್ವಾದವಾಗಿದೆಯೆಂದು ನಮಗೆ ತಿಳಿದಿದೆ.

5. ಕನ್ನಡದ **ಸತ್ಯವೇದವು** ಮತ್ತು **ಪವಿತ್ರ ಗ್ರಂಥ**ಗಳಲ್ಲಿ 2ನೇ ವಚನದ ಕೊನೆಯ ಭಾಗದ ಭಾಷಾಂತರವು ಅನುಭವವಿಲ್ಲದ ಒಬ್ಬ ಓದುಗನಿಗೆ ಒಂದು ದೈವಶಾಸ್ತ್ರೀಯ ಖೆಡ್ಡವಾಗಿದೆ. ಕನ್ನಡದ ಭಾಷಾಂತರವು ಹೇಳುವಂತೆ ತನ್ನ ಕುಟುಂಬದ ಪೋಷಣೆಗಾಗಿ ದೇವರಲ್ಲಿ ಭಯಭಕ್ತಿಯುಳ್ಳವನು ಬಹಳ ಸಮಯ ದುಡಿಯದೆ ಮಲಗಿಕೊಂಡಿರಬೇಕೆಂದು ಕೀರ್ತನೆಗಾರನು ಹೇಳುತ್ತಿಲ್ಲ. ಬದಲಾಗಿ ದೇವರು ತನಗೆ ಒದಗಿಸುವವನಾಗಿದ್ದಾನೆಂಬ ದೇವಮನುಷ್ಯನ ಭರವಸೆಯು ಆತನನ್ನು ಚಿಂತಾರಹಿತನನ್ನಾಗಿ ಮಾಡಿ ಮತ್ತು ಉತ್ತಮವಾಗಿ ನಿದ್ರೆ ಮಾಡುವಂತೆ ಸಹಾಯಿಸುತ್ತದೆಂಬುದು ಕೀರ್ತನೆಗಾರನು ಹೇಳುವ ಅಂಶವಾಗಿದೆ.

6. ವಚನ 4 ರಲ್ಲಿ ಕಂಡುಬರುವ ಉಪಮೆ: ತನ್ನ ಬತ್ತಳಿಕೆಯಲ್ಲಿ ಲಭ್ಯವಾಗಿರುವ ಬಾಣಗಳು ಯುದ್ಧವೀರನಿಗೆ ಬಹು ಉಪಯುಕ್ತವಾಗಿರುವಂತೆ, ಬೆಳೆದ ಮಕ್ಕಳು ದೇವಮನುಷ್ಯನಿಗೆ ಬಹು ಉಪಯುಕ್ತರಾಗಿದ್ದಾರೆ.

7. ವಚನ 5 ರಲ್ಲಿ ಮಕ್ಕಳ ಬಗ್ಗೆ ಕೀರ್ತನೆಗಾರನು ಹೇಳುತ್ತಿರುವ ಅಂಶವೇನೆಂದರೆ: ಬೆಳೆದ ಮಕ್ಕಳನ್ನು ಹೊಂದಿರುವವನು ಧನ್ಯನಾಗಿದ್ದಾನೆ. ಆತನು ಊರಭಾಗಲಲ್ಲಿ ವ್ಯಾಜ್ಯವಾಡುವಾಗ ಅಪಮಾನ ಹೊಂದುವುದಿಲ್ಲ, ಯಾಕೆ? ಯಾಕೆಂದರೆ ತನ್ನ ಬೆಳೆದ ಮಕ್ಕಳು ಕಟಕಟೆಯಲ್ಲಿ ಆತನ ನಿರ್ದೋಷತ್ವದ ಬಗ್ಗೆ ಸಾಕ್ಷೀಕರಿಸುತ್ತಾರೆ.

8. ವಾಕ್ಯಭಾಗಗಳು ಜನಸಾಮಾನ್ಯರಿಗಾಗಿನ ಜ್ಞಾನವಾಗಿರದೆ ಇರುವಾಗ ಹಳೇ ಒಡಂಬಡಿಕೆಯ ವಾಕ್ಯಭಾಗಗಳನ್ನು (ಕೀರ್ತನೆ 127 ಒಳಗೊಂಡು) ಒಡಂಬಡಿಕೆಯ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕಿದೆ (**ಇಬ್ರಿಯ ಜ್ಞಾನದ ಹಿನ್ನಲೆ** ಅಧ್ಯಾಯ ನೋಡಿರಿ). ಹೊಸ ಒಡಂಬಡಿಕೆಯಲ್ಲಿ ವರ್ಣಿಸಲ್ಪಟ್ಟಂತೆ ಕ್ರೈಸ್ತೀಯ ಸಭೆಯ ಹಿನ್ನಲೆಯು ದೇವರ ರಾಜ್ಯವಾಗಿದೆ. ಕೀರ್ತನೆ 127 ಎಲ್ಲಾ ಜನಸಾಮಾನ್ಯರಿಗಾಗಿ ಇರುವ ವಾಕ್ಯಭಾಗವಲ್ಲ. ಆದರೆ ಸಭೆಗಾಗಿ ಇರುವ ವಾಕ್ಯಭಾಗವಾಗಿದೆ (ಅಂದರೆ ಇಂದಿನ ದೇವಜನರಿಗಾಗಿ).

ಕೀರ್ತನೆ 130 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 130 ಅನ್ನು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ಕೀರ್ತನೆಗಾರನು ಕ್ಷಮಾಪಣೆಗಾಗಿ ದೇವರನ್ನು ಪ್ರಾರ್ಥಿಸುತ್ತಾನೆ, ವಚನ 1–4

   ಆ. ಕೀರ್ತನೆಗಾರನು ನಂಬಿಕೆಯಿಂದ ದೇವರ ಕ್ಷಮಾಪಣೆಗಾಗಿ ಕಾಯುತ್ತಾನೆ, ವಚನ 5–6

   ಇ. ಕೀರ್ತನೆಗಾರನು ದೇವರ ವಿಮೋಚನೆಯಲ್ಲಿ ನಿರೀಕ್ಷೆಯಿಡಬೇಕೆಂದು ಇಸ್ರಾಯೇಲ್ಯರಿಗೆ ಪ್ರಬೋಧಿಸುತ್ತಾನೆ, ವಚನ 7–8

2. ಕೀರ್ತನೆಗಾರನು ಕೀರ್ತನೆ 130 ರಲ್ಲಿ ಇವರನ್ನು ಸಂಬೋಧಿಸುತ್ತಾನೆ:

   ಅ. ತನ್ನ ಒಡಂಬಡಿಕೆಯ ಕರ್ತನಾದ ದೇವರು, ವಚನ 1–4. ಹಾಗಾಗಿ ಕೀರ್ತನೆಯ ಈ ಭಾಗವು ಒಂದು ಪ್ರಾರ್ಥನೆಯಾಗಿದೆ.

   ಆ. ದೇವರ ಒಡಂಬಡಿಕೆಯ ಜನರಾದ ಇಸ್ರಾಯೇಲ್ಯರು, ವಚನ 5–8. ಈ ಭಾಗವು ಸಾಕ್ಷಿ ಮತ್ತು ಉತ್ತೇಜನ (ಪ್ರಬೋಧನೆ) ವಾಗಿದೆ.

3. ಕೀರ್ತನೆಗಾರನು ವಚನ 1–2 ರಲ್ಲಿ ತನ್ನ ಮೊರೆಯನ್ನು ಕೇಳಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ.

4. ಕೀರ್ತನೆಗಾರನು ವಚನ 3 ರಲ್ಲಿ ಪಾಪದ ಗಂಭೀರತೆಯ ಬಗ್ಗೆ ಎರಡು ಅಂಶಗಳನ್ನು ತಿಳಿಸುತ್ತಾನೆಂದು ನಾನೆಣಿಸುತ್ತೇನೆ:

   ಅ. ಪಾಪವು ನಮ್ಮನ್ನು ದೇವರಿಂದ ಅಗಲಿಸುತ್ತದೆ.

   ಆ. ಪಾಪವು ನಮ್ಮ ಮೇಲೆ ದೇವರ ನ್ಯಾಯತೀರ್ಪನ್ನು ತಂದುಹಾಕುತ್ತದೆ.

5. ಕೀರ್ತನೆಗಾರನು ವಚನ 4 ರಲ್ಲಿ ಹೇಳುವ ಅಂಶವೇನೆಂದರೆ ಪಾಪಕ್ಷಮಾಪಣೆಯು ದೇವರ ಕುರಿತಾದ ನಮ್ಮ ತಿಳುವಳಿಕೆ ಮತ್ತು ದೇವರೊಂದಿಗಿನ ನಮ್ಮ ಸಂಬಂಧವನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ. ನಮ್ಮ ಪಾಪಗಳಿಗಾಗಿ ನಾವು ಕ್ಷಮಾಪಣೆಯನ್ನು ಹೊಂದಿದಾಗ ಮಾತ್ರ ನಾವು ಆತನಿಗೆ ಭಯಪಡಬಲ್ಲೆವು. ದೇವರಿಗೆ ಭಯಪಡುವುದೆಂದರೆ ಆತನನ್ನು ಗೌರವಿಸುವುದು, ಆತನನ್ನು ಆರಾಧಿಸುವುದು, ಆತನಲ್ಲಿ ಭರವಸವಿಡುವುದು ಮತ್ತು ಆತನನ್ನು ಸೇವಿಸುವುದಾಗಿದೆ.

6. ವಚನ 7–9 ರಲ್ಲಿ ಇಸ್ರಾಯೇಲ್ಯರಿಗಾಗಿ ಕೀರ್ತನೆಗಾರನ ಸಂದೇಶ:

   ಅ. ಅವರು ಒಡಂಬಡಿಕೆಯ ಕರ್ತನಲ್ಲಿಯೇ ತಮ್ಮ ನಿರೀಕ್ಷೆಯನ್ನಿಡಬೇಕು.

   ಆ. ದೇವರ ಪ್ರೀತಿಯು ಕೃಪಾಭರಿತವಾಗಿದೆ, ನಂಬಿಗಸ್ತಿಕೆಯಿಂದ ಕೂಡಿದೆ ಮತ್ತು ಬಿದ್ದುಹೋಗದಂತಾಗಿದೆ.

   ಇ. ದೇವರು ವಿಮೋಚನೆಯ ದೇವರಾಗಿದ್ದಾನೆ. ಆತನ ವಿಮೋಚನೆಯು ಸಂಪೂರ್ಣವಾದುದ್ದಾಗಿದೆ.

   ಈ. ದೇವರು ಇಸ್ರಾಯೇಲ್ಯರನ್ನು ಅವರ ಎಲ್ಲಾ ಪಾಪಗಳಿಂದ ವಿಮೋಚಿಸುತ್ತಾನೆ.

ಕೀರ್ತನೆ 130 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಕೀರ್ತನೆ 127 ಮತ್ತು 130ರ ನಡುವಿನ ಕೆಲವು ವ್ಯತ್ಯಾಸಗಳೆಂದರೆ:

   ಅ. ಕೀರ್ತನೆ 127 ಒಂದು ಜ್ಞಾನದ ಕೀರ್ತನೆಯಾಗಿದೆ. ಇದು ದೇವರ ಒಡಂಬಡಿಕೆಯ ಜನರಿಗೆ ಜೀವನದ ಕೆಲವು ಪ್ರಾಮುಖ್ಯ ಅಂಶಗಳನ್ನು ಕಲಿಸುತ್ತದೆ. ಹೆಚ್ಚಾಗಿ ಇದು ಆತ್ಮೀಕ ನಿಯಮ ಕುರಿತಾಗಿದೆ. ಇದು ನಂಬಿಕೆಯ ಹೇಳಿಕೆಗಳನ್ನು ಒಳಗೊಂಡಿದೆ.

ಕೀರ್ತನೆ 130 ಒಂದು ಪ್ರಲಾಪವಾಗಿದೆ. ಇದು ಹೆಚ್ಚಾಗಿ ವೈಯಕ್ತಿಕವಾದುದ್ದಾಗಿದೆ. ಇದು ಉನ್ನತವಾದ ಆತ್ಮೀಕ ಸತ್ಯಗಳನ್ನು ಒಳಗೊಂಡಿದ್ದಲ್ಲದೆ, ಆತ್ಮೀಕ ಅನುಭವಗಳನ್ನು ಪ್ರತಿಬಿಂಬಿಸುತ್ತದೆ.

ಆ. ಕೀರ್ತನೆ 127 ದೇವಜನರನ್ನು ಸಂಬೋಧಿಸುತ್ತದೆ. ಇದು ದೇವರಿಗೆ ಮಾಡುವ ಒಂದು ಪ್ರಾರ್ಥನೆಯಲ್ಲ. ಕೀರ್ತನೆ 130 ದೇವರಿಗೆ ಮಾಡುವ ಒಂದು ವೈಯಕ್ತಿಕವಾದ ಪ್ರಾರ್ಥನೆಯಾಗಿದೆ. ಇದರ ಎರಡನೇ ಭಾಗದಲ್ಲಿ ಕೀರ್ತನೆಗಾರನು ದೇವಜನರನ್ನು ಸಂಬೋಧಿಸುತ್ತಾನೆ.

ಇ. ಈ ಎರಡು ಕೀರ್ತನೆಗಳು ಭಾವ ಮತ್ತು ಸ್ವರದಲ್ಲಿ ವಿಭಿನ್ನವಾಗಿವೆ. ಕೀರ್ತನೆ 127 ಹೆಚ್ಚಾಗಿ ಬೌದ್ಧಿಕ ಮತ್ತು ತಾರ್ಕಿಕವಾಗಿದೆ. ಕೀರ್ತನೆ 130 ಹೆಚ್ಚಾಗಿ ಭಾವನಾತ್ಮಕ ಮತ್ತು ವೈಯಕ್ತಿಕವಾಗಿದೆ.

2. ವಚನ 1–2 ರಲ್ಲಿ ದೇವರನ್ನು ಎರಡು ರೀತಿಯಲ್ಲಿ ಸಂಬೋಧಿಸಲಾಗಿದೆ:

ಅ. ವಚನ 1 ರಲ್ಲಿ ಆತನ ಒಡಂಬಡಿಕೆಯ ಹೆಸರಾದ ಯೆಹೋವನೊಂದಿಗೆ

ಆ. ವಚನ 2 ರಲ್ಲಿ ಕರ್ತನೇ ಎಂಬ ಶೀರ್ಷಿಕೆಯೊಂದಿಗೆ

3. ಕೀರ್ತನೆ 130 ರಲ್ಲಿ ದೈವಶಾಸ್ತ್ರ:

ಅ. ದೇವರು ನಮ್ಮ ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಕೊಡುತ್ತಾನೆ.

ಆ. ಪಾಪವು ನಮ್ಮನ್ನು ದೇವರಿಂದ ದೂರ ಮಾಡುತ್ತದೆ.

ಇ. ಪಾಪವು ನಮ್ಮ ಮೇಲೆ ದೇವರ ನ್ಯಾಯತೀರ್ಪನ್ನು ತಂದು ಹಾಕುತ್ತದೆ.

ಈ. ದೇವರು ತನ್ನ ಪ್ರೀತಿಯ ನಿಮಿತ್ತ ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ಉ. ದೇವರ ವಿಮೋಚನೆಯು ಸಂಪೂರ್ಣವಾಗಿದೆ.

ಊ. ದೇವರು ತನ್ನ ಜನರನ್ನು ಅವರ ಸಕಲ ಪಾಪಗಳಿಂದ ವಿಮೋಚಿಸುತ್ತಾನೆ.

4. ವಚನ 6 ರಲ್ಲಿನ ಉಪಮೆ: ದೇವರ ಕ್ಷಮಾಪಣೆಗಾಗಿನ ತನ್ನ ಬಯಕೆಯನ್ನು ಕೀರ್ತನೆಗಾರನು ತನ್ನ ರಾತ್ರಿ ಪಾಳೆಯ ಯಾವಾಗ ಮುಗಿಯುತ್ತದೋ ಎಂದು ಮುನ್ನೋಡುವ ಕಾವಲುಗಾರನ ಬಯಕೆಯೊಂದಿಗೆ ಹೋಲಿಸುತ್ತಾನೆ.

5. ಭಾನುವಾರದ ಆರಾಧನೆಯ ಕೀರ್ತನೆಯ ಭಾಗದಲ್ಲಿ ಉಪಯೋಗಿಸಲು ಕೀರ್ತನೆ 130 ಒಂದು ಸೂಕ್ತವಾದ ಕೀರ್ತನೆಯಾಗಿದೆ:

ಅ. ಯೆಹೂದಿ ವಾರ್ಷಿಕ ಯಾತ್ರಾರ್ಥಿಗಳ ಹಬ್ಬದ ಸಮಯದಲ್ಲಿ ಯೆರೂಸಲೇಮಿನ ದೇವಾಲಯದಲ್ಲಿ ದೇವಜನರು ದೇವರನ್ನು ಆರಾಧಿಸುವ ಹಿನ್ನಲೆಯಲ್ಲಿ ಇದು ಬರೆಯಲ್ಪಟ್ಟಿದೆ. ಹಾಗಾಗಿ ಈ ಕೀರ್ತನೆಯ ಸಂದರ್ಭವು ಇಂದಿನ ಆಧುನಿಕ ಆರಾಧನೆಗೆ ಸಮಾನವಾಗಿದೆ.

ಆ. ಇದು ದೇವರ ಕ್ಷಮಾಪಣೆಯ ಪ್ರೀತಿಗಾಗಿ ದೇವಜನರು ಹೊಂದಿರುವ ನಿರೀಕ್ಷೆಯನ್ನು ವ್ಯಕ್ತಪಡಿಸುತ್ತದೆ. ಇಂದು ಸಭೆ ಸಹ ಇಟ್ಟುಕೊಳ್ಳಬೇಕಾದ ನಿರೀಕ್ಷೆ ಇದಾಗಿದೆ.

ಇ. ದೇವಜನರಿಗೆ ದೇವ ಕ್ಷಮಾಪಣೆಯ ಅಗತ್ಯತೆಯಿದೆ. ಹಾಗಾಗಿ ಪಾಪ ಮತ್ತು ದೇವರ ಕ್ಷಮೆಯ ವಿಷಯವನ್ನು ಪ್ರತೀ ಭಾನುವಾರದ ಆರಾಧನೆಯಲ್ಲಿ ಬಳಸಲೇಬೇಕು.

ಕೀರ್ತನೆ 137 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 137 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ಬಾಬೆಲಿನ ಸೆರೆಯವರು ಯೆರೂಸಲೇಮನ್ನು ನೆನಪಿಸುತ್ತಾರೆ, ವಚನ 1–3

   ಆ. ಬಾಬೆಲಿನ ಸೆರೆಯವರು ಯೆರೂಸಲೇಮನ್ನು ಮರೆತುಬಿಡಬಾರದೆಂದು ಮಾತು ಕೊಡುವುದು, ವಚನ 4–6

   ಇ. ಬಾಬೆಲಿನ ಸೆರೆಯವರು ದೇವರ ಬಳಿ ತಮ್ಮ ವೈರಿಗಳನ್ನು ಶಿಕ್ಷಿಸಬೇಕೆಂದು ಕೇಳಿಕೊಳ್ಳುವುದು, ವಚನ 7–9

2. ಈ ಕೀರ್ತನೆಯು ಬಾಬೆಲಿನ ಹಿನ್ನಲೆಯನ್ನು ಒಳಗೊಂಡಿದೆ. "ಬಾಬೆಲ್ ದೇಶದ ನದಿಗಳ ಬಳಿ ಅತ್ತೆವು" (ವಚನ 1) ಮತ್ತು "ಸೆರೆಯವರು ನಮಗೆ ಹಾಡನ್ನು ಹಾಡಿರಿ" ಎಂದು ಹೇಳುತ್ತಿದ್ದರು (ವಚನ 3).

3. ಕೀರ್ತನೆಯ ಪ್ರತೀ ಭಾಗದಲ್ಲಿ ಬೇರೆ ಬೇರೆಯವರನ್ನು ಸಂಬೋಧಿಸಲಾಗಿದೆ:

   ಅ. ಭಾಗ 1 (ವಚನ 1–3): ಯಾರಿಗೆ ಎಂಬುದು ಸ್ಪಷ್ಟವಾಗಿಲ್ಲ. ಆದರೆ ಇದು ದೇವಜನರನ್ನು ಸೂಚಿಸುತ್ತದೆ.

   ಆ. ಭಾಗ 2 (ವಚನ 4–6): ಸ್ಪಷ್ಟವಾಗಿ ಯೆರೂಸಲೇಮ್ ನಗರವನ್ನು ಸಂಬೋಧಿಸಲಾಗಿದೆ ("ಯೆರೂಸಲೇಮೇ").

   ಇ. ಭಾಗ 3 (ವಚನ 7–9): ಪ್ರಾರಂಭದಲ್ಲಿ ಕೀರ್ತನೆಗಾರನು ದೇವರನ್ನು ಪ್ರಾರ್ಥಿಸುತ್ತಾನೆ (ವಚನ 7). ಅನಂತರದಲ್ಲಿ ಆತನು ಬಾಬೆಲ್ ನಗರ ಸೂಚಿಸಿ ಹೇಳುತ್ತಾನೆ (ವಚನ 8–9).

4. ವಚನ 7 ರಲ್ಲಿ ಕ್ರಿ.ಪೂ. 587 ರಲ್ಲಿ ಯೆರೂಸಲೇಮು ಬಾಬೆಲಿನವರಿಂದ ಆಕ್ರಮಿಸಲ್ಪಟ್ಟು, ನಾಶಗೊಳಿಸಲ್ಪಟ್ಟಾಗ ಏದೋಮ್ಯರು ನುಡಿದ ಮಾತುಗಳಿಗಾಗಿ ಅವರನ್ನು ಶಿಕ್ಷಿಸಬೇಕೆಂದು ಕೀರ್ತನೆಗಾರನು ದೇವರನ್ನು ಬೇಡಿಕೊಳ್ಳುತ್ತಾನೆ.

5. ವಚನ 8 ರಲ್ಲಿ ಬಾಬೆಲ್ ನಾಶನಕ್ಕಾಗಿ ಇಡಲ್ಪಟ್ಟ ಪಟ್ಟಣವೆಂಬುದಾಗಿ ವರ್ಣಿಸಲ್ಪಟ್ಟಿದೆ. ದೇವರು ಕೊನೆಗೂ ತಮ್ಮ ಮೊರೆಯನ್ನು ಕೇಳಿ, ಬಾಬೆಲಿನ ಮೇಲೆ ತನ್ನ ನ್ಯಾಯತೀರ್ಪನ್ನು ತರುವನೆಂಬುದಾಗಿ ಸೆರೆಹೋದ ಇಸ್ರಾಯೇಲ್ಯರು ಮನವರಿಕೆ ಮಾಡಿಕೊಂಡರೆಂಬುದನ್ನು ಇದು ತೋರಿಸುತ್ತದೆ.

ಕೀರ್ತನೆ 137 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಕೀರ್ತನೆಯು ಬಾಬೆಲಿನ ಸೆರೆಯವೇಳೆ ಬರೆಯಲ್ಪಟ್ಟಿರಬೇಕು (ಇದು ಇಸ್ರಾಯೇಲ್ಯರ ಇತಿಹಾಸವಲ್ಲ, ಕ್ರಿ.ಪೂ. 587–586 ರಲ್ಲಿ ಯೆರೂಸಲೇಮಿನ ನಾಶನದಿಂದ ಪ್ರಾರಂಭವಾಗಿ ಕ್ರಿ.ಪೂ. 539 ರಲ್ಲಿ ಬಾಬೆಲಿನ ಮೇಲೆ ಪರ್ಷಿಯನ್ನರ ಆಕ್ರಮಣ ಮತ್ತು ಬಾಬೆಲಿನ ಪತನದೊಂದಿಗೆ ಮುಕ್ತಾಯವಾಗುತ್ತದೆ). ಇದು ಈ ಕೀರ್ತನೆಯ ಪಠ್ಯದಿಂದಲೇ ಸ್ಪಷ್ಟವಾಗುತ್ತದೆ. "ಯೆರೂಸಲೇಮಿನ ನಾಶನ ದಿನ" (ವಚನ 7), ಆದರೆ ಬಾಬೆಲ್ ಅದುವರೆಗೂ ಸೆರೆ ಹೋಗಿರಲಿಲ್ಲ (ವಚನ 8).

2. ತಮ್ಮ ವಿನೋದಕ್ಕಾಗಿ "ಚೀಯೋನಿನ ಗೀತವನ್ನು" ಹಾಡಿರಿ ಎಂಬ ಸೆರೆಹಿಡಿದವರ ಬಯಕೆಯನ್ನು ಇಸ್ರಾಯೇಲ್ಯರಿಂದ ಪೂರೈಸಲಾಗಲಿಲ್ಲ, ಯಾಕೆಂದರೆ ಅವರು ಯೆರೂಸಲೇಮಿನ ಪತನ ಮತ್ತು ಅದರ ದೇವಾಲಯದ ನಾಶನಕ್ಕಾಗಿ ಅವರು ಬಹಳವಾಗಿ ಶೋಕಿಸುತ್ತಿದ್ದರು.

3. ವಚನ 4 ರಲ್ಲಿ ಕಂಡುಬರುವ ವಾಕ್ಯದ ರಚನೆಯು ಒಂದು ಅಲಂಕಾರಿಕ ಪ್ರಶ್ನೆಯೆಂದು ನಾನೆಣಿಸುತ್ತೇನೆ. ಇದೊಂದು ನಿಜವಾದ ಪ್ರಶ್ನೆಯಲ್ಲ, ಯಾಕೆಂದರೆ ಇದಕ್ಕೆ ಯಾವುದೇ ಉತ್ತರವನ್ನು ನಿರೀಕ್ಷಿಸಲಾಗದು, ಬದಲಾಗಿ ಇದು ಪ್ರಶ್ನೆಯ ರೂಪದಲ್ಲಿರುವ ಒಂದು ಹೇಳಿಕೆಯಾಗಿದೆ.

4. ವಚನ 5 ರಲ್ಲಿ ಕಂಡುಬರುವ ಚಿತ್ರಣವನ್ನು ಆಶೀರ್ವಾದ ಮತ್ತು ಶಾಪದ ಹಿನ್ನಲೆಯಲ್ಲಿ "ಮರೆತುಬಿಡು" ಎಂಬ ಪದದ ಪಾತ್ರದ ಮೇಲೆ ವಿವರಿಸಬಹುದಾಗಿದೆ. ಕೀರ್ತನೆಗಾರನು ತಾನು ಯೆರೂಸಲೇಮನ್ನು ಮರೆತುಬಿಡುವುದಿಲ್ಲವೆಂದು ವಾಗ್ದಾನ ಮಾಡುತ್ತಾನೆ. ಆದರೆ ಒಂದು ವೇಳೆ ಆತನು ಪರಿಶುದ್ಧ ಪಟ್ಟಣವನ್ನು ಮರೆತುಬಿಟ್ಟರೆ, ಆತನ ಸಂಗೀತದ ಕಲೆಯು ಶಾಪಗ್ರಸ್ತವಾಗುತ್ತದೆ, ಆತನ ಬಲಗೈ ತಂತಿವಾದ್ಯವನ್ನು ನುಡಿಸುವುದನ್ನು ಮರೆತುಬಿಡುತ್ತದೆ.

5. ಈ ಕೀರ್ತನೆಯ ಸ್ವರ/ಭಾವವು ದುಃಖ, ಶೋಕ ಮತ್ತು ವಿರಹ/ಹಂಬಲದ ಭಾವನೆಗಳಿಂದ (ವಚನ 1–6) ಸಿಟ್ಟು ಮತ್ತು ಪ್ರತೀಕಾರದ ಭಾವನೆಗಳೆಡೆಗೆ (ವಚನ 7–9) ಸಾಗುತ್ತದೆ.

ಕೀರ್ತನೆ 138 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 138 ಅನ್ನು ಈ ರೀತಿ ರಚಿಸಬಹುದು:

   ಅ. ಕೀರ್ತನೆಗಾರನು ದೇವರಿಗೆ ತನ್ನ ಮೊರೆಗೆ ಸದುತ್ತರವನ್ನು ದಯಪಾಲಿಸಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತಾನೆ, ವಚನ 1–3

   ಆ. ಭೂರಾಜರೆಲ್ಲರೂ ದೇವರನ್ನು ಕೊಂಡಾಡುವರು, ವಚನ 4–6

   ಇ. ಕೀರ್ತನೆಗಾರನು ದೇವರು ತನ್ನ ಜೀವಿತವನ್ನು ನೋಡಿಕೊಳ್ಳುವನೆಂದು ನಂಬುತ್ತಾನೆ, ವಚನ 7–8

2. ಕೀರ್ತನೆಗಾರನು ಈ ಕೀರ್ತನೆಯುದ್ದಕ್ಕೂ ಒಡಂಬಡಿಕೆಯ ಕರ್ತನನ್ನು ಸಂಬೋಧಿಸುತ್ತಾನೆ. ಹೆಚ್ಚಾಗಿ ಎಲ್ಲಾ ವಚನಗಳೂ **"ನೀನು"** ಅಥವಾ **"ನಿನ್ನ"** ಎಂಬ ಸರ್ವನಾಮಗಳನ್ನು ಒಳಗೊಂಡಿವೆ. ವಚನ 5–6 ರಲ್ಲಿ ಆತನು ಆರಾಧನೆಗಾಗಿ ಸೇರಿದ ಇಸ್ರಾಯೇಲ್ಯರಿಗೆ ದೇವರ ಬಗ್ಗೆ ಸಾಕ್ಷೀಕರಿಸುತ್ತಾನೆ.

3. ಕೀರ್ತನೆಗಾರನು ವಚನ 1–2 ರಲ್ಲಿ ದೇವರ ಕೃಪೆ, ಸತ್ಯತೆ ಮತ್ತು ನಂಬಿಗಸ್ತಿಕೆಗಳಿಗಾಗಿ ಆತನನ್ನು ಸ್ತುತಿಸಿ ಕೊಂಡಾಡುತ್ತಾನೆ.

4. ಕೀರ್ತನೆಗಾರನು ತನ್ನ ಪ್ರಾರ್ಥನೆಗೆ ಕೊಟ್ಟ ಸದುತ್ತರದ ಮೂಲಕ ದೇವರ ಸ್ಥಿರವಾದ ಪ್ರೀತಿ ಮತ್ತು ನಂಬಿಗಸ್ತಿಕೆಯನ್ನು ಅನುಭವಿಸುತ್ತಾನೆ. ದೇವರ ಈ ಕಾರ್ಯವು ಆತನನ್ನು ಆತ್ಮೀಕವಾಗಿ ಬಲಪಡಿಸುತ್ತದೆ (ವಚನ 3).

5. ಭವಿಷ್ಯದಲ್ಲಿ ಭೂರಾಜರೆಲ್ಲರೂ ದೇವರ ಸ್ಥಿರವಾದ ಪ್ರೀತಿ ಮತ್ತು ನಂಬಿಕೆಯನ್ನು ಅರಿತುಕೊಂಡು, ಆತನನ್ನು ಸ್ತುತಿಸಿ ಹಾಡಿ ಹರಸುವರು (ವಚನ 4–5).

6. ದೇವರ ಮಹಿಮೆಯು, ಆತನು ತನ್ನ ಜನರೊಂದಿಗೆ ವ್ಯವಹರಿಸುವ ರೀತಿಯ ಮೂಲಕ ಪ್ರಕಟಿಸಲ್ಪಟ್ಟಿದೆ (ವಚನ 5–7):

   ಅ. ಆತನು ದೀನರನ್ನು ಲಕ್ಷಿಸುತ್ತಾನೆ. ಇದರರ್ಥ ಯಾರು ಆತನ ಮುಂದೆ ತಮ್ಮನ್ನು ತಗ್ಗಿಸಿಕೊಂಡು, ಆತನನ್ನು ತಮ್ಮ ರಕ್ಷಕನೂ ಒಡೆಯನೂ ಎಂಬುದಾಗಿ ಅರಿತುಕೊಳ್ಳುತ್ತಾರೋ ಅವರಿಗೆ ತನ್ನ ಪ್ರೀತಿ ಮತ್ತು ನಂಬಿಗಸ್ತಿಕೆಯನ್ನು ತೋರಿಸುತ್ತಾನೆ.

   ಆ. ಆದರೆ ಆತನು ಗರ್ವಿಷ್ಠರನ್ನು ಗುರುತು ಹಿಡಿದು, ಅವರೆಡೆಗೆ ಕೈಚಾಚಿ ಕೋಪದಿಂದ ಅವರೊಂದಿಗೆ ವ್ಯವಹರಿಸುತ್ತಾನೆ. ಅವರು ದೇವರಿಗೆ ಮತ್ತು ಆತನ ಸಾರ್ವಭೌಮತೆಗೆ ತಮ್ಮನ್ನು ಒಪ್ಪಿಸದವರಾಗಿದ್ದಾರೆ. ಅವರು ದೇವಜನರ ವಿರೋಧಿಗಳಾಗಿದ್ದಾರೆ.

7. ಕೀರ್ತನೆಗಾರನು ತನ್ನ ಜೀವಿತಕ್ಕಾಗಿನ ದೇವರ ಉದ್ದೇಶ ಮತ್ತು ಯೋಜನೆಗಳನ್ನು ದೇವರು ನೆರವೇರಿಸುವುದರಲ್ಲಿ ತನಗಾಗಿನ ದೇವರ ಕಾಳಜಿಯನ್ನು ಅನುಭವಿಸುತ್ತಾನೆ.

ಕೀರ್ತನೆ 138 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –

2. ಕೀರ್ತನೆ 138 ದೇವರಲ್ಲಿನ ಒಂದು ನಂಬಿಕೆ ಮತ್ತು ಭರವಸೆಯ ಕೀರ್ತನೆಯಾಗಿದೆ. ಇದು ಸ್ತುತಿ, ಕೊಂಡಾಟ, ಕೃತಜ್ಞತೆಗಳಿಂದ ತುಂಬಿದೆ.

3. ಕೀರ್ತನೆ 138 ರ ಕೆಲವು ಪದ್ಯರೂಪಿ ಲಕ್ಷಣಗಳು:

   ಅ. ರೂಪಾಲಂಕಾರ, ಮಾನವೀಕರಣಗಳಿಗಾಗಿ **ಪೀಠಿಕೆ ಮತ್ತು ಟಿಪ್ಪಣಿಗಳನ್ನು** ನೋಡಿರಿ.

   ಆ. ಪದ್ಯರೂಪಿ ರಚನೆಗಳು:

- ಈ ಕೀರ್ತನೆಯು ಸಂಯೋಜಿತ ಸಮಾನಾಂತರತೆಯ ಲಕ್ಷಣ ಹೊಂದಿದೆ. ಇದರರ್ಥ ವಚನದ ಎರಡನೇ ಭಾಗವು, ವಚನದ ಮೊದಲ ಭಾಗಕ್ಕೆ ಮಾಹಿತಿಗಳನ್ನು ಸೇರಿಸುತ್ತದೆ. ಇದಕ್ಕೆ ಉದಾಹರಣೆಗಳನ್ನು ವಚನ 1, 2, 3, 4 ಮತ್ತು 7 ರಲ್ಲಿ ಕಾಣಬಹುದು.
- ವಚನ 8 ರಲ್ಲಿ ಮಾತ್ರ ಸಮಾನಾರ್ಥಕ ಸಮಾನಾಂತರತೆ ಕಾಣಬಹುದು.
- ವಚನ 6 ವಿರೋಧಾತ್ಮಕ ಸಮಾನಾಂತರತೆ. ಇಲ್ಲಿ ದೀನರು ಮತ್ತು ಗವಿಷ್ಠರು ತದ್ವಿರುದ್ಧವಾಗಿದ್ದಾರೆ.

4. ಭಾನುವಾರದ ಆರಾಧನೆಯ ಕೀರ್ತನೆಯ ಭಾಗದಲ್ಲಿ ಓದಲು 138 ನೇ ಕೀರ್ತನೆ ಸೂಕ್ತವಾಗಿದೆ:

   ಅ. ಇದು ಆರಾಧನಾಭರಿತವಾಗಿದೆ ಮತ್ತು ಕೊಂಡಾಟ ಮತ್ತು ಕೃತಜ್ಞತೆಯಿಂದ ತುಂಬಿಕೊಂಡಿದೆ.

   ಆ. ಇದು ದೇವರ ಸಾರ್ವಭೌಮತೆಯನ್ನು ಗುರುತಿಸುತ್ತದೆ.

   ಇ. ಇದು ವಿಶ್ವಾಸಿಗಳಿಗೆ ದೇವರ ನಿರಂತರವಾದ ಪ್ರೀತಿ ಮತ್ತು ನಂಬಿಗಸ್ತಿಕೆಯನ್ನು ನೆನಪಿಸುತ್ತದೆ.

   ಈ. ಇದು ವಿಶ್ವಾಸಿಯೊಬ್ಬನ ವೈಯಕ್ತಿಕ ಅನುಭವವನ್ನು ಪ್ರತಿಬಿಂಬಿಸುತ್ತದೆ.

   ಉ. ಇದು ತನ್ನ ಜೀವಿತದಲ್ಲಿ ದೇವರ ಉದ್ದೇಶ ನೆರವೇರಬೇಕೆಂದು ಆಶಿಸುವ ವಿಶ್ವಾಸಿಯೊಬ್ಬನ ಬಯಕೆಯನ್ನು ವ್ಯಕ್ತಪಡಿಸುತ್ತದೆ.

ಕೀರ್ತನೆ 139 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 139 ಅನ್ನು **"ದೇವರ ನಾಲ್ಕು ಮುಖ್ಯ ಗುಣಗಳು"** ಎಂಬ ಸಾಲಿನೊಂದಿಗೆ ರಚನೆ ಮಾಡುತ್ತೇನೆ:

   ಅ. ದೇವರು ದಾವೀದನನ್ನು ಹೇಗೆ ಬಲ್ಲವನಾಗಿದ್ದಾನೆ, ವಚನ 1–6

   ಆ. ದೇವರು ದಾವೀದನನ್ನು ಹೇಗೆ ಸುತ್ತುವರೆದಿದ್ದಾನೆ, ವಚನ 7–12

   ಇ. ದೇವರು ದಾವೀದನನ್ನು ಹೇಗೆ ಸೃಷ್ಟಿಸಿದ್ದಾನೆ, ವಚನ 13–18

   ಈ. ದೇವರು ದಾವೀದನನ್ನು ಹೇಗೆ ಪರೀಕ್ಷಿಸುತ್ತಾನೆ, ವಚನ 19–24

2. ದಾವೀದನು ದೇವರು ತನ್ನನ್ನು ಎಷ್ಟು ಉತ್ತಮವಾಗಿ ಬಲ್ಲವನಾಗಿದ್ದಾನೆಂಬುದನ್ನು ತೋರಿಸಲು ವಚನ 1–4 ರಲ್ಲಿ ಈ ಪದಗಳನ್ನು ಮತ್ತು ಹೇಳಿಕೆಗಳನ್ನು ಉಪಯೋಗಿಸುತ್ತಾನೆ:

   ಅ. ದೇವರು ಆತನನ್ನು ಪರೀಕ್ಷಿಸಿದ್ದಾನೆ. ಇದರರ್ಥ ತನ್ನ ಬಗ್ಗೆ ಎಲ್ಲವನ್ನು ತಿಳಿದುಕೊಳ್ಳಲು ದೇವರು ಆತನನ್ನು ಪರೀಕ್ಷಿಸಿದ್ದಾನೆ.

   ಆ. ಆತನು ಕೂತುಕೊಳ್ಳುವುದು ಮತ್ತು ಏಳುವುದನ್ನೂ ಸಹ ದೇವರು ತಿಳಿದಿದ್ದಾನೆ. ಇದರರ್ಥ ದಾವೀದನು ಮಾಡುವ ಪ್ರತೀ ಸಂಗತಿಯ (ಕಾರ್ಯದ) ಅರಿವು ದೇವರಿಗೆ ಇದೆ.

   ಇ. ದೇವರು ದೂರದಿಂದಲೇ ಆತನ ಆಲೋಚನೆಗಳನ್ನು ಬಲ್ಲವನಾಗಿದ್ದಾನೆ.

   ಈ. ದೇವರು ದಾವೀದನು ನಡೆಯುವುದನ್ನು ಮತ್ತು ಮಲಗುವುದನ್ನು ಗ್ರಹಿಸಿಕೊಳ್ಳುತ್ತಾನೆ.

   ಉ. ದೇವರು ದಾವೀದನ ನಾಲಿಗೆಯ ಮೇಲಿನ ಪ್ರತಿಯೊಂದು ಮಾತನ್ನೂ ಸಹ ಬಲ್ಲವನಾಗಿದ್ದಾನೆ.

3. ದಾವೀದನು ದೇವರು ಎಲ್ಲಾಕಡೆ ಇದ್ದಾನೆಂಬುದನ್ನು ತೋರಿಸಲು ವಚನ 8–12 ರಲ್ಲಿ ಈ ಉದಾಹರಣೆಗಳನ್ನು ಬಳಸುತ್ತಾನೆ:

   ಅ. **"ಮೇಲಣ ಲೋಕಕ್ಕೆ ಏರಿ ಹೋದರೆ"** ಅಥವಾ **"ನಾನು ಪರಲೋಕಕ್ಕೆ ಹೋದರೆ"**: ದೇವರು ಆಕಾಶದಲ್ಲಿ (ಪರಲೋಕ) ದಲ್ಲಿದ್ದಾನೆ.

   ಆ. **"ಪಾತಾಳಕ್ಕೆ ಹೋಗಿ ಮಲಗಿಕೊಂಡರೆ"** ಅಥವಾ **"ಆಳದಲ್ಲಿ ನಾನು ಹೋಗಿ ಮಲಗಿಕೊಂಡರೆ"**: ದೇವರು ಆಳದಲ್ಲಿ ಸಹ ಇದ್ದಾನೆ.

   ಇ. **"ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋದರೆ"** ಅಥವಾ **"ನಾನು ಮುಂಜಾನೆಯ ರೆಕ್ಕೆಗಳನ್ನು ಕಟ್ಟಿಕೊಂಡರೆ"**: ದೇವರು ಪೂರ್ವದಲ್ಲಿ ಸಹ ಇದ್ದಾನೆ.

   ಈ. **"ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನೆಂದರೆ"** ಅಥವಾ ಸಮುದ್ರದ ತುದಿಯಲ್ಲಿ ವಾಸಮಾಡಿದರೆ": ದೇವರು ಪಶ್ಚಿಮದಲ್ಲಿ ಸಹ ಇದ್ದಾನೆ. ಮೆಡಿಟರೇನಿಯನ್ ಸಮುದ್ರ ಪಶ್ಚಿಮದಲ್ಲಿದೆ.

   ಉ. ಕಾರ್ಗತ್ತಲೆ: ಕಾರ್ಗತ್ತಲೆ ಸಹ ನಮ್ಮನ್ನು ದೇವರಿಂದ ಮರೆಮಾಡಲು ಸಾಧ್ಯವಿಲ್ಲ.

   ಗಮನಿಸಿ: ಈ ದುಷ್ಟಾಂತಗಳನ್ನು ತುಂಬಾ ಅಕ್ಷರಶಃ ಅರ್ಥೈಸಿಕೊಳ್ಳದಂತೆ ನಾವು ಜಾಗರೂಕರಾಗಿರಬೇಕು. ಕೆಳಗಿನ **ಆಲೋಚಿಸಿರಿ ಮತ್ತು ಚರ್ಚಿಸಿರಿ** 2–4 ಸಂಖ್ಯೆಗಳನ್ನು ಸಹ ನೋಡಿರಿ.

4. ದಾವೀದನು ದೇವರು ತನ್ನ ಸೃಷ್ಟಿಕರ್ತನಾಗಿದ್ದಾನೆಂಬುದನ್ನು ವರ್ಣಿಸಲು ವಚನ 13–15 ರಲ್ಲಿ ನಾಲ್ಕು ವಿಭಿನ್ನವಾದ ಹೇಳಿಕೆಗಳನ್ನು ಬಳಸುತ್ತಾನೆ:

   ಅ. ದೇವರು **"ತಾಯಿಯ ಗರ್ಭದಲ್ಲಿಯೇ ಆತನನ್ನು ರೂಪಿಸಿದ್ದಾನೆ".**

   ಆ. ದೇವರು ಆತನನ್ನು ಅದ್ಭುತವಾಗಿಯೂ, ವಿಚಿತ್ರವಾಗಿಯೂ ರಚಿಸಿದ್ದಾನೆ.

   ಇ. ದೇವರು ಆತನನ್ನು ಗುಪ್ತಸ್ಥಳದಲ್ಲಿ ಉಂಟುಮಾಡಿದ್ದಾನೆ.

ಈ. ದೇವರು ಆತನನ್ನು ಭೂಗರ್ಭದಲ್ಲಿ ರಚಿಸಿದ್ದಾನೆ.

5. ವಚನ 19 ರಲ್ಲಿ ದಾವೀದನು ತನ್ನ ವೈರಿಗಳನ್ನೆಲ್ಲಾ ಸಂಹರಿಸಬಿಡಬೇಕೆಂದು ಕೇಳಿಕೊಳ್ಳುತ್ತಾನೆ. ಇದಕ್ಕೆ ಕಾರಣ ಅವರು ದೇವರನ್ನು ದ್ವೇಷಿಸುತ್ತಾರೆ ಮತ್ತು ಆತನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತುತ್ತಾರೆ. ಹಾಗಾಗಿ ಅವರು ದೇವರ ವೈರಿಗಳಾಗಿದ್ದಾರೆ ಮತ್ತು ದೇವರ ವೈರಿಗಳೆಲ್ಲರೂ ಸಹ ದಾವೀದನ ವೈರಿಗಳಾಗಿದ್ದಾರೆ (ವಚನ 20–21).

6. ದಾವೀದನು ದೇವರಲ್ಲಿ ವಚನ 23–24 ರಲ್ಲಿ ಎರಡು ಸಂಗತಿಗಳನ್ನು ಬೇಡಿಕೊಳ್ಳುತ್ತಾನೆ:

   ಅ. ಮೊದಲನೇಯದಾಗಿ, ತನ್ನ ಹೃದಯವನ್ನು ಪರೀಕ್ಷಿಸಿ ಆಲೋಚನೆಗಳನ್ನು ಗೊತ್ತು ಮಾಡಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ.

   ಆ. ಎರಡನೇಯದಾಗಿ ತನ್ನನ್ನು ಸನಾತನ (ನೀತಿಯ) ಮಾರ್ಗದಲ್ಲಿ ನಡೆಸಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ.

ಕೀರ್ತನೆ 139 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ದಾವೀದನು ವಚನ 5 ರಲ್ಲಿ ತನ್ನ ಕುರಿತಾದ ದೇವರ ತಿಳುವಳಿಕೆಯನ್ನು ಸಾರಾಂಶಗೊಳಿಸುತ್ತಾನೆ. ಅನೇಕರಿಗೆ ಮನುಷ್ಯರ ಕುರಿತಾಗಿನ ದೇವರ ಈ ತಿಳುವಳಿಕೆಯು ಅತಿರೇಕವೆನಿಸುತ್ತದೆ:

   ಅ. ತನ್ನ ದೇಹ ಮತ್ತು ಮನಸ್ಸಿನ ಕುರಿತಾದ ದೇವರ ತಿಳುವಳಿಕೆಯಿಂದ ದಾವೀದನಿಗೆ ಆದರಣೆಯಾಗಿರಬಹುದೆಂದು ನಾನೆಣಿಸುತ್ತೇನೆ. ಹೆಚ್ಚಿನ ಆಧುನಿಕ ಜನರು ದೇವರ ಅಂತಹ ನಿಕಟವಾದ ತಿಳುವಳಿಕೆ ಮತ್ತು ತಮ್ಮ ಜೀವಿತಗಳಲ್ಲಿನ ಆತನ ನಿರಂತರವಾದ ಪ್ರಸನ್ನತೆಯಿಂದ ಭೀತರಾಗುತ್ತಾರೆ.

   ಆ. –

2. ಕೀರ್ತನೆಯ ಎರಡನೇ ಭಾಗವು (ವಚನ 7–12) ಎರಡು ಅಲಂಕಾರಿಕ ಪ್ರಶ್ನೆಗಳೊಂದಿಗೆ ಪ್ರಾರಂಭವಾಗುತ್ತದೆ. ನಾನಿದನ್ನು ಈ ರೀತಿ ಅರ್ಥೈಸಿಕೊಳ್ಳುತ್ತೇನೆ:

   ಅ. ಅವು ಸಮಾನಾರ್ಥಕ ಸಮಾನಾಂತರತೆಗೆ ಉದಾಹರಣೆಯನ್ನು ರೂಪಿಸುತ್ತವೆ (**"ಎಲ್ಲಿಗೆ ಹೋಗಲಿ"** ಮತ್ತು **"ಎಲ್ಲಿಗೆ ಓಡಲಿ"**, **"ಆತ್ಮಕ್ಕೆ"** ಮತ್ತು **"ಕಣ್ಣಿಗೆ"**).

   ಆ. ಇದರರ್ಥ ಒಂದೇ ಪ್ರಶ್ನೆಯು ಎರಡು ಭಾರಿ ವಿಭಿನ್ನವಾಗಿ ಪುನರಾವರ್ತನೆಗೊಂಡಿದೆ. ಹಾಗಾಗಿ ಇಲ್ಲಿ ಒಂದೇ ಪ್ರಶ್ನೆಯಿದೆ: **"ನಿನ್ನಿಂದ ಮರೆಯಾಗಿ ನಾನು ಎಲ್ಲಿಗೆ ಹೋಗಲಿ ದೇವರೇ?"**

   ಇ. ಈ ಪ್ರಶ್ನೆಯು ಅಲಂಕಾರಿಕವಾಗಿದೆ. ಹಾಗಾಗಿ ಪ್ರಶ್ನೆಯಂತೆ ಇಲ್ಲಿ ಕಾಣುವುದು ಪ್ರಶ್ನೆಯ ರೂಪದಲ್ಲಿರುವ ಒಂದು ಹೇಳಿಕೆಯಾಗಿದೆ. **"ದೇವರೇ ನಿನ್ನಿಂದ ದೂರ ಓಡಿ ಹೋಗಲು ನನ್ನಿಂದ ಸಾಧ್ಯವಿಲ್ಲ"** ಎಂಬುದಾಗಿ ನಾವು ಅರ್ಥೈಸಿಕೊಳ್ಳಬೇಕಿದೆ.

   ಈ. ಹಿಂದಿನ ಅಂಶಗಳು ನನ್ನ ವ್ಯಾಖ್ಯಾನದ ಮೇಲೆ ಪರಿಣಾಮ ಬೀರುತ್ತವೆ (ವಚನ 8–12) ನಂತರದ ಪದ್ಯಗಳ ಚಿತ್ರಣಗಳು, ಈ ರೀತಿ:

   - ಅವು ದಾವೀದನು ಈಗಾಗಲೇ ಹೇಳಿರುವ ಅಂಶವನ್ನು ವಿವರಿಸುತ್ತವೆ (ಈ ಪ್ರಸ್ತುತ ಜೀವನದಲ್ಲಿ ಒಬ್ಬ ವ್ಯಕ್ತಿಯು ದೇವರಿಂದ ಓಡಿಹೋಗಲು ಸಾಧ್ಯವಿಲ್ಲ).
   - ದೇವರು ಎಲ್ಲಿ ವಾಸಿಸುತ್ತಾನೆ ಮತ್ತು ದೇವರು ಎಲ್ಲಿ ವಾಸಿಸುವುದಿಲ್ಲ ಎಂಬುದರ ಕುರಿತು ದಾವೀದನು ದೈವಶಾಸ್ತ್ರವನ್ನು ಪ್ರಸ್ತುತಪಡಿಸುತ್ತಿಲ್ಲ.
   - ತನ್ನ ಓದುಗರು ಚಿತ್ರಗಳನ್ನು (ಮತ್ತು ವಿವರಣೆಗಳನ್ನು) ಅಕ್ಷರಶಃ ಅರ್ಥೈಸಿಕೊಳ್ಳುತ್ತಾರೆ ಎಂಬ ಉದ್ದೇಶದಿಂದ ದಾವೀದನು ಚಿತ್ರಣವನ್ನು ಬಳಸಲಿಲ್ಲ.
   - ಆದ್ದರಿಂದ ನಾವು ಈ ವಚನಗಳನ್ನು ತುಂಬಾ ಅಕ್ಷರಶಃ ಅರ್ಥೈಸದಂತೆ ಜಾಗರೂಕರಾಗಿರಬೇಕು.

3. ವಚನ 9 ರಲ್ಲಿನ ಚಿತ್ರಣವನ್ನು ಈ ರೀತಿ ವಿವರಿಸಬಹುದು:

ಅ. "ಅರುಣನ ರೆಕ್ಕೆ" ಇದೊಂದು ರೂಪಾಲಂಕಾರವಾಗಿದೆ. ಅರುಣೋದಯ (ಮುಂಜಾನೆಯ) ಒಂದು ರೆಕ್ಕೆಯುಳ್ಳ ಪಕ್ಷಿಯಂತೆ ಚಿತ್ರಿಸಲ್ಪಟ್ಟಿದೆ. ಬಹುಶಃ ಮುಂಜಾನೆಯ ವೇಳೆ ಎಷ್ಟು ಬೇಗನೆ ರಾತ್ರಿಯ ಕತ್ತಲು ಹಗಲಿನ ಬೆಳಕಾಗಿ ಮಾರ್ಪಡುತ್ತದೆಂಬುದನ್ನು ತಿಳಿಸಲು ಈ ರೀತಿ ಚಿತ್ರಿಸಿರಬಹುದು.

ಆ. "ಮುಂಜಾನೆಯ ರೆಕ್ಕೆಗಳ ಮೇಲೆ ಏರುವುದು" ಎಂಬುದು ಮತ್ತೊಂದು ರೂಪಾಲಂಕಾರ: ಇದರರ್ಥ ಸಾಧ್ಯವಾದಷ್ಟು ಪೂರ್ವಕ್ಕೆ ಪ್ರಯಾಣಿಸುವುದು, ಏಕೆಂದರೆ ಮುಂಜಾನೆ ಪೂರ್ವದಲ್ಲಿ ಕಂಡುಬರುತ್ತದೆ.

4. ವಚನ 11 ರಲ್ಲಿರುವುದು ಸಮಾನಾರ್ಥಕ ಸಮಾನಾಂತರತೆಯಾಗಿದೆ.

ಅ. "ಕಾರ್ಗತ್ತಲು" ಮತ್ತು "ಹಗಲು ಹೋಗಿ ಇರುಳಾಗುವುದು" ಇವೆರಡೂ ಒಂದೇ ಸಂಗತಿಯಾಗಿದೆ. ರಾತ್ರಿಯಲ್ಲಿ ಬೆಳಕು ಕತ್ತಲಾಗುತ್ತದೆ.

ಆ. "ಮರೆಮಾಡು" ಮತ್ತು "ಸುತ್ತುವರೆದಿರುವ" (ನೋಡಲಾಗದ ಯಾವುದನ್ನಾದರೂ ಕುರಿತು ಬಳಸಿದಾಗ) ಒಂದೇ ಫಲಿತಾಂಶವನ್ನು ನೀಡುತ್ತದೆ: ನಿಮ್ಮನ್ನು ನೋಡಲು ಸಾಧ್ಯವಿಲ್ಲ. ನೀವು ಮರೆಮಾಡಲ್ಪಟ್ಟಿದ್ದೀರಿ.

5. ವಚನ 13–18 ಅನ್ನು ಆಧರಿಸಿ ಎರಡು ಪ್ರಶ್ನೆಗಳಿಗೆ ಉತ್ತರಗಳು:

ಅ. "ಅಂತರಿಂದ್ರಿಯ" ಕ್ಕೆ ಇರುವ ಇಬ್ರಿಯ ಪದ "ಯಕೃತ್ತು" ಆಗಿದೆ. ಇದು ಅಖಂಡದಿಂದ ಖಂಡವನ್ನು ಸೂಚಿಸುವ ಎಂಬ ಒಂದು ಶಬ್ದಾಲಂಕಾರವಾಗಿದೆ. ಇದರರ್ಥ ವಸ್ತುವಿನ ಒಂದು ಭಾಗವು ಇಡೀ ವಸ್ತುವನ್ನು ಪ್ರತಿನಿಧಿಸುತ್ತದೆ. ಯಕೃತ್ತು ದೇಹದ ಒಂದು ಭಾಗವಾಗಿದೆ, ಹಾಗಾಗಿ ಇಲ್ಲಿ "ನನ್ನ ಅಂತರಿಂದ್ರಿಯ (ಯಕೃತ್ತು)" ಎಂದರೆ "ನನ್ನ ದೇಹ" ಎಂದಾಗುತ್ತದೆ. ಈ ವಚನವು ಸಮಾನಾರ್ಥಕ ಸಮಾನಾಂತರತೆಯನ್ನು ಒಳಗೊಂಡಿದೆ ಎಂಬುದನ್ನು ನಾವು ಗ್ರಹಿಸಿಕೊಳ್ಳುವಾಗ ಇದು ಸ್ಪಷ್ಟವಾಗಿ ಅರ್ಥವಾಗುತ್ತದೆ. "ನೀನು ನನ್ನ ಅಂತರಿಂದ್ರಿಯವನ್ನು ಉಂಟುಮಾಡಿದ್ದಿ" ಮತ್ತು "ತಾಯಿಯ ಗರ್ಭದಲ್ಲಿ ನನ್ನನ್ನು ರೂಪಿಸಿದ್ದಿ" ಎಂಬುದು ಒಂದೇ ಸಂಗತಿಯಾಗಿದೆ: ಅಂದರೆ "ದೇವರೇ ನೀನು ನನ್ನನ್ನು ಸೃಷ್ಟಿಸಿದ್ದಿ" ಎಂದಾಗಿದೆ.

ಆ. ವಚನ 15 ಅನ್ನು ಉತ್ತಮವಾಗಿ ಈ ರೀತಿ ಅರ್ಥೈಸಿಕೊಳ್ಳಬಹುದು:

- ಇದರ ಪದ್ಯರೂಪಿ ರಚನೆಯು ಸಮಾನಾರ್ಥಕ ಸಮಾನಾಂತರತೆಯನ್ನು ಒಳಗೊಂಡಿದೆ. ನಾನು ಹೇಗೆ ಸೃಷ್ಟಿಸಲ್ಪಟ್ಟಿದ್ದೇನೆಂಬ ಅರಿವು ದೇವರಿಗೆ ಇದೆ. ಈ ಸೃಷ್ಟಿಯನ್ನು ವರ್ಣಿಸುವ ಹೇಳಿಕೆಗಳು ಸಮಾನಾರ್ಥಕವಾಗಿವೆ. ಸಾಮಾನ್ಯಭಾಷೆಯಲ್ಲಿ ಈ ವಚನವನ್ನು ಈ ರೀತಿ ಹೇಳಬಹುದು: ಮನುಷ್ಯರಿಗೆ ಕಾಣಲಾಗದ್ದು, ದೇವರಿಂದ ಮರೆಯಾಗಿರಲಾರದು.

- ಇದರ ಚಿತ್ರಣವು ಎರಡು ಚಿತ್ರಗಳನ್ನು ಒಳಗೊಂಡಿದೆ: ಇವೆರಡೂ ಸಹ "ತಾಯಿಯ ಗರ್ಭದಲ್ಲಿ" ಎಂದರ್ಥವಾಗಿವೆ: "ಗುಪ್ತಸ್ಥಳದಲ್ಲಿ" ಮತ್ತು "ಭೂಗರ್ಭದಲ್ಲಿ".

6. ಈ ಕೀರ್ತನೆಯ ಮೊದಲ 3 ಭಾಗಗಳಲ್ಲಿ (ವಚನ 1–18) ಸ್ವರ/ಭಾವವು ದಾವೀದನಿಗಾಗಿನ ದೇವರ ಕಾಳಜಿ ಮತ್ತು ಆತನ ಬಗೆಗಿನ ದೇವರ ಜ್ಞಾನಕ್ಕಾಗಿ ಕೃತಜ್ಞತೆ ಸಲ್ಲಿಸುವುದಾಗಿದೆ. ಆದರೆ ಕೀರ್ತನೆಯ ಕೊನೆ ಭಾಗದಲ್ಲಿ ಸ್ವರ/ಭಾವವು ನಾಟಕೀಯವಾಗಿ ಬದಲಾಗುತ್ತದೆ (ವಚನ 19–22). ಇದು ದ್ವೇಷಮಯವಾಗಿ ಬದಲಾಗುತ್ತದೆ (ವಚನ 19–22). ಅನಂತರ ಪ್ರಾರ್ಥನೆಯ ಭಾಗವಾಗಿ ಮಾರ್ಪಡುತ್ತದೆ (ವಚನ 23–24).

7. ವಚನ 21 ರಲ್ಲಿ ನಾವು ಇನ್ನೆರಡು ಅಲಂಕಾರಿಕ ಪ್ರಶ್ನೆಗಳನ್ನು ಕಾಣುತ್ತೇವೆ:

ಅ. ಅವು ಸಮಾನಾರ್ಥಕವಾಗಿವೆ: ಇದರರ್ಥ "ದ್ವೇಷಿಸು" ಮತ್ತು "ಬೇಸರಗೊಳ್ಳು" ಅವೆರಡೂ ಸಮಾನಾರ್ಥಕ ಪದಗಳಾಗಿವೆ ಮತ್ತು "ನಿನ್ನನ್ನು ದ್ವೇಷಿಸುವವರು" ಮತ್ತು "ನಿನ್ನ ವಿರೋಧಿಗಳು" ಇವೆರಡೂ ಸಹ ಒಂದೇ ರೀತಿಯ ಜನರಾಗಿದ್ದಾರೆ.

ಆ. ಅವು ಅಲಂಕಾರಿಕವಾಗಿವೆ: ಇದರರ್ಥ ಇವು ಉತ್ತರಿಸಲು ಇರುವಂತಹ ನಿಜವಾದ ಪ್ರಶ್ನೆಗಳಲ್ಲ. ಬದಲಾಗಿ ಪ್ರಶ್ನೆಯ ರೂಪದಲ್ಲಿರುವ ಹೇಳಿಕೆಗಳಾಗಿವೆ.

8. ದಾವೀದನು ವಚನ 19–21 ರಲ್ಲಿ ಬಳಸುವ ಭಾಷೆಯು ತುಂಬ ಕಠಿಣ ಮತ್ತು ದ್ವೇಷಭರಿತವಾಗಿದೆ. ದಾವೀದನಂತಹ ದೇವರ ಮನುಷ್ಯನು ಇಂತಹ ಆಲೋಚನೆ ಮಾಡಲು ಹೇಗೆ ಸಾಧ್ಯ ಎಂದು ಕೆಲ ಆಧುನಿಕ ಓದುಗರು ಪ್ರಶ್ನಿಸುತ್ತಾರೆ. ಕೆಲ ಸಂಕ್ಷಿಪ್ತ ಟಿಪ್ಪಣಿಗಳು ಇಂತಿವೆ:

ಅ. ಬಹಳ ಭಕ್ತಿವಂತರೆಂದು ಕರೆಯಲ್ಪಡುವ ನಾವೆಲ್ಲರೂ ಸಹ ಈ ರೀತಿಯ ಭಾವನೆಗಳನ್ನು ಹೊಂದಿದವರಾಗಿದ್ದೇವೆ. ದಾವೀದನಿಗೂ ನಮಗೂ ಇರುವ ವ್ಯತ್ಯಾಸವೇನೆಂದರೆ ತನ್ನ ಭಾವನೆಗಳಲ್ಲಿ ಆತನು ನಮಗಿಂತ ಪ್ರಾಮಾಣಿಕನೂ ಮತ್ತು ತೆರೆದ ಮನಸ್ಸುಳ್ಳವನೂ ಆಗಿದ್ದಾನೆ.

ಆ. ಈ ಕೀರ್ತನೆಯು ಒಂದು ಪ್ರಾರ್ಥನೆಯಾಗಿದೆ. ಹಾಗಾಗಿ ಇಲ್ಲಿ ದಾವೀದನು ಹೇಳುತ್ತಿರುವದು ತನ್ನ ಮತ್ತು ದೇವರ ನಡುವೆಯಾಗಿದೆ.

ಇ. ದಾವೀದನು 22ನೇ ವಚನದೊಂದಿಗೆ ಮತ್ತು ಅವನ ದ್ವೇಷ ಮತ್ತು ಸೇಡಿನ ಮನೋಭಾವದೊಂದಿಗೆ ನಿಲ್ಲುವುದಿಲ್ಲ. ಇಲ್ಲ, ಅವನು ದೇವರನ್ನು ತನ್ನ ಹೃದಯವನ್ನು ಪರೀಕ್ಷಿಸಿ ಶಾಶ್ವತ ಮಾರ್ಗದಲ್ಲಿ ನಡೆಸುವಂತೆ ಕೇಳಿಕೊಳ್ಳುತ್ತಾನೆ (ವಚನ 23–24). ಇದು ನಮಗೆ ಒಂದು ಉತ್ತಮ ಉದಾಹರಣೆಯಾಗಿದೆ.

ಈ. ಕೀರ್ತನೆಗಳ ಪುಸ್ತಕದಲ್ಲಿ ಈ ರೀತಿಯ ಪದ್ಯದ ಕುರಿತು ಹೆಚ್ಚಿನ ಮಾಹಿತಿಗಾಗಿ **ಕೃತಜ್ಞತಾ ಕೀರ್ತನೆಗಳು** ಎಂಬ ಅಧ್ಯಾಯವನ್ನು ನೋಡಿ.

ಕೀರ್ತನೆ 143 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೀರ್ತನೆ 143 ಅನ್ನು ಈ ರೀತಿ ರಚಿಸಬಹುದು:

   ಅ. ಆರಂಭಿಕ ಪ್ರಾರ್ಥನೆ, ವಚನ 1

   ಆ. ಪ್ರಲಾಪ, ವಚನ 2–6

   ಇ. ನವೀಕೃತ ಪ್ರಾರ್ಥನೆ, ವಚನ 7

   ಈ. ಕೀರ್ತನೆಗಾರನು ತನ್ನ ಪ್ರಾರ್ಥನಾ ಮನವಿಗಳನ್ನು ಪಟ್ಟಿ ಮಾಡುವುದು, ವಚನ 8–12

2. ಕೀರ್ತನೆಗಾರನು ಈ ಕೀರ್ತನೆಯುದ್ದಕ್ಕೂ ತನ್ನ ಒಡಂಬಡಿಕೆಯ ಕರ್ತನನ್ನು ಸಂಬೋಧಿಸುತ್ತಾನೆ.

3. ಕೀರ್ತನೆಗಾರನು ವಚನ 1 ರಲ್ಲಿ ದೇವರೇ ನನ್ನ ಪ್ರಾರ್ಥನೆಯನ್ನು ಕೇಳೆಂದು ಬೇಡಿಕೊಳ್ಳುತ್ತಾನೆ.

4. ದಾವೀದನು ವಚನ 2 ರಲ್ಲಿ ದೇವರು ತನ್ನ ಪ್ರಾರ್ಥನೆಯನ್ನು ಯಾಕೆ ಕೇಳಬೇಕೆಂಬುದಕ್ಕೆ ಎರಡು ಕಾರಣಗಳನ್ನು ಕೊಡುತ್ತಾನೆ:

   ಅ. ದೇವರ ನಂಬಿಗಸ್ತಿಕೆ

   ಆ. ದೇವರ ನೀತಿವಂತಿಕೆ

5. ದಾವೀದನು ದೇವರ ಮುಂದೆ ಯಾವ ಮನುಷ್ಯನೂ ನೀತಿವಂತನಲ್ಲದ ಕಾರಣ ತನ್ನನ್ನು ನ್ಯಾಯವಿಚಾರಣೆಗೆ ಗುರಿಮಾಡಬೇಡ ಎಂದು ವಚನ 2ರಲ್ಲಿ ದೇವರನ್ನು ಕೇಳಿಕೊಳ್ಳುತ್ತಾನೆ.

6. ದಾವೀದನು ವಚನ 3–4 ರಲ್ಲಿ ತನ್ನ ಪರಿಸ್ಥಿತಿಯನ್ನು ಈ ರೀತಿಯಾಗಿ ವರ್ಣಿಸುತ್ತಾನೆ. ಈತನ ವೈರಿಯು ಈತನ ಜೀವನವನ್ನು ಸಂಪೂರ್ಣವಾಗಿ ಕುಂದಿಸಿಬಿಟ್ಟಿದ್ದಾನೆ. ಜೀವನದಲ್ಲಿ ಸಂತೋಷವೇ ಇಲ್ಲವಾಗಿದೆ. ಆತನು ಸತ್ತವರಂತೆ ಆಗಿದ್ದಾನೆ.

7. ದಾವೀದನು ವಚನ 7 ರಲ್ಲಿ ಕುಂದಿಹೋಗಿ ಹೆಚ್ಚುಕಡಿಮೆ ಸತ್ತವರಂತೆ ಆಗಿರುವ ನಿಮಿತ್ತ, ದೇವರು ತನಗೆ ವಿಮುಖನಾಗದೆ ಬೇಗನೇ ಸದುತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾನೆ.

8. ಕೀರ್ತನೆಗಾರನು ವಚನ 8–12 ರಲ್ಲಿ ದೇವರಲ್ಲಿ ಅನೇಕ ವಿಜ್ಞಾಪನೆಗಳನ್ನು ಮಾಡಿಕೊಳ್ಳುತ್ತಾನೆ:

   ಅ. ಆತನು ಪ್ರತಿದಿನವು ದೇವರ ಪ್ರೀತಿ ಮತ್ತು ನಂಬಿಗಸ್ತಿಕೆಯನ್ನು ಅನುಭವಿಸಬೇಕೆಂದು ಆಶಿಸುತ್ತಾನೆ.

   ಆ. ಆತನು ದೇವರಿಗೆ ಮೆಚ್ಚಿಕೆಯಾದ ಜೀವಿತವನ್ನು ಹೇಗೆ ಜೀವಿಸಬೇಕೆಂದು ತಿಳಿಯಲು ಅಪೇಕ್ಷಿಸುತ್ತಾನೆ.

   ಇ. ದೇವರು ತನ್ನನ್ನು ವೈರಿಗಳಿಂದ ರಕ್ಷಿಸಬೇಕೆಂದು ಬಯಸುತ್ತಾನೆ.

   ಈ. ಪ್ರತಿದಿನವೂ ದೇವರ ಮಾರ್ಗದರ್ಶನವನ್ನು ಅನುಭವಿಸಲು ಅಪೇಕ್ಷಿಸುತ್ತಾನೆ.

   ಉ. ದೇವರು ತನ್ನ ವೈರಿಗಳಿಗೆ ನ್ಯಾಯತೀರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ.

9. ದೇವರು ತನ್ನ ಪ್ರಾರ್ಥನೆಗೆ ಉತ್ತರಿಸಬೇಕೆಂಬುದಕ್ಕೆ ಕಾರಣಗಳು:

   ಅ. ದಾವೀದನು ದೇವರು ತನ್ನ ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಕೊಡುತ್ತಾನೆಂಬ ಭರವಸೆಯೊಂದಿಗೆ ದೇವರನ್ನು ಬೇಡುತ್ತಾನೆ (ವಚನ 8). ದೇವರು ತನ್ನ ಒಡಂಬಡಿಕೆಗೆ ನಂಬಿಗಸ್ತನಾಗಿದ್ದಾನೆಂಬುದು ದಾವೀದನಿಗೆ ಗೊತ್ತು.

   ಆ. ದಾವೀದನು ದೇವರ ಮೊರೆಹೊಕ್ಕಿದ್ದಾನೆ (ವಚನ 9). ತನ್ನ ಈ ಹಿಂದಿನ ಅನುಭವದಿಂದ ದೇವರಲ್ಲಿ ತಾನು ಸುರಕ್ಷಿತವಾಗಿದ್ದೇನೆಂಬುದನ್ನು ದಾವೀದನು ತಿಳಿದಿದ್ದಾನೆ.

   ಇ. ದೇವರು ದಾವೀದನ ದೇವರಾಗಿದ್ದಾನೆ (ವಚನ 10). ದಾವೀದನೊಂದಿಗೆ ಮತ್ತು ಆತನ ಕುಟಂಬದೊಂದಿಗೆ ಸದಾಕಾಲವೂ ಇರುತ್ತೇನೆಂದು ದೇವರು ಆತನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದಾನೆ.

ಈ. ದೇವರ ಹಸ್ತಕ್ಷೇಪವು ಇತರರಿಗೆ ಸಾಕ್ಷಿಯಾಗಲಿದೆ (ವಚನ 11). ದೇವರು ದಾವೀದನನ್ನು ಅವನ ಶತ್ರುಗಳಿಂದ ರಕ್ಷಿಸಿದ್ದಾನೆಂದು ಅವರು ನೋಡಿದಾಗ, ಅವರು ಇಸ್ರಾಯೇಲ್ಯರ ಕರ್ತನನ್ನು ಸ್ತುತಿಸುತ್ತಾರೆ.

ಉ. ದೇವರು ಒಳ್ಳೆಯವನು (ವಚನ 11). ಆದ್ದರಿಂದ ದಾವೀದನು ದೇವರು ತನ್ನನ್ನು ಸಮರ್ಥಿಸುತ್ತಾನೆಂದು ನಿರೀಕ್ಷಿಸಬಹುದು.

ಊ. ದೇವರು ಪ್ರೀತಿಯ ದೇವರು (ವಚನ 12). ಆದ್ದರಿಂದ ದಾವೀದನು ತನ್ನ ಶತ್ರುಗಳನ್ನು ಸೋಲಿಸಲು ದೇವರನ್ನು ನಂಬಬಹುದು.

ಋ. ದಾವೀದನು ದೇವರ ಸೇವಕ (ವಚನ 12). ಇದು ದಾವೀದ ಮತ್ತು ಅವನ ಕುಟುಂಬ ವಂಶಾವಳಿಯೊಂದಿಗೆ ದೇವರ ವಿಶೇಷ ಒಡಂಬಡಿಕೆಯ ಸಂಬಂಧದ ಮತ್ತೊಂದು ಉಲ್ಲೇಖವಾಗಿದೆ.

ಕೀರ್ತನೆ 143 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಕೀರ್ತನೆ 143 ಅನ್ನು ಒಂದು **"ವ್ಯಕ್ತಿಗತ ಪ್ರಲಾಪ"** ಎಂಬುದಾಗಿ ವರ್ಗೀಕರಿಸುವುದು ಸಮರ್ಪಕವೆನಿಸುತ್ತದೆ:

   ಅ. ಇದು ಒಬ್ಬ ವ್ಯಕ್ತಿಯ ಮಾತುಗಳನ್ನು ಒಳಗೊಂಡಿದೆ.

   ಆ. ಇದು ಬಹು ದುಃಖದಲ್ಲಿರುವ ವ್ಯಕ್ತಿಯೊಬ್ಬನ ಪ್ರಾರ್ಥನೆಯಾಗಿದೆ. ಕೀರ್ತನೆಗಾರನು ತನ್ನನ್ನು ವೈರಿಗಳಿಂದ ಬಿಡಿಸಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ.

2. ಕೀರ್ತನೆಗಾರನು ವಚನ 4–6 ರಲ್ಲಿ ಈ ರೀತಿಯಾಗಿ ಹೇಳುತ್ತಾನೆ:

   ಅ. ವಚನ 4 ರಲ್ಲಿ ದುಃಖಕರವಾದ ತನ್ನ ಪ್ರಸ್ತುತ ಸನ್ನಿವೇಶವನ್ನು ಆತನು ಸಾರಾಂಶಗೊಳಿಸುತ್ತಾನೆ.

   ಆ. ತನ್ನ ದುಃಖದಲ್ಲಿ ಆತನು ದೇವರು ಈ ಹಿಂದೆ ಏನು ಮಾಡಿದ್ದಾನೆ ಮತ್ತು ಆತನು ಏನನ್ನು ಮಾಡುತ್ತಾನೆ ಎಂಬುದನ್ನು ತಿಳಿದು ದೇವರನ್ನು ನೆನೆಸುತ್ತಾನೆ (ವಚನ 5).

   ಇ. ಆತನು ಈ ರೀತಿ ನೆನೆಸಿಕೊಂಡಾಗ ದೇವರಲ್ಲಿನ ಆತನ ನಂಬಿಕೆಯು ಚೈತನ್ಯಗೊಳ್ಳುತ್ತದೆ.

3. ಕೀರ್ತನೆ 143 ರಲ್ಲಿನ ಚಿತ್ರಣಗಳು:

   ಅ. ರೂಪಾಲಂಕಾರಗಳು:

   - ವಚನ 1 (**"ನನ್ನ ಬಿನ್ನಹಕ್ಕೆ ಕಿವಿಗೊಡು"**): ದೇವರು ತನ್ನ ಪ್ರಾರ್ಥನೆಯನ್ನು ಆಲಿಸಬೇಕೆಂದು ದಾವೀದನು ಕೇಳಿಕೊಳ್ಳುತ್ತಾನೆ. ಇದು ಮಾನವೀಕರಣಕ್ಕೆ ಒಂದು ಉದಾಹರಣೆಯಾಗಿದೆ.

   - ವಚನ 8 (**"ನಾನು ನಡೆಯತಕ್ಕ ಮಾರ್ಗ"**): **"ನಡೆ"** ಎಂಬುದು ಜೀವಿತಕ್ಕಾಗಿ ಇರುವ ಸತ್ಯವೇದದ ಒಂದು ಸಾಮಾನ್ಯ ರೂಪಾಲಂಕಾರವಾಗಿದೆ. ಕೀರ್ತನೆಗಾರನು ತಾನು ಹೇಗೆ ನಡೆಯಬೇಕೆಂಬುದನ್ನು ತಿಳಿಸಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ.

   ಆ. ಮಾನವೀಕರಣಗಳು:

   - ವಚನ 5 (**"ನಿನ್ನ ಕೈಕೆಲಸ"**): ದೇವರು ಮನುಷ್ಯನಂತೆ ಒಬ್ಬ ಕುಶಲಕರ್ಮಿಯೋ ಎಂಬಂತೆ ಚಿತ್ರಿಸಲಾಗಿದೆ.

   - ವಚನ 7 (ವಿಮುಖನಾದರೆ): ದೇವರನ್ನು ಮನುಷ್ಯನ ಮುಖವಿರುವವನಂತೆ ಚಿತ್ರಿಸಲಾಗಿದೆ.

   ಇ. ಉಪಮೆಗಳು:

   - ವಚನ 3 (**"ಸತ್ತವರಂತಿದ್ದೇನೆ"**): ದಾವೀದನು ತನ್ನ ಜೀವಿತವನ್ನು ಸತ್ತವರ ಪರಿಸ್ಥಿತಿಯೊಂದಿಗೆ ಹೋಲಿಸುತ್ತಾನೆ.

   - ವಚನ 6 (ಒಣನೆಲದ ಹಾಗೆ): ಒಣನೆಲವು ನೀರಿಗಾಗಿ ಹಾತೊರೆಯುವಂತೆ ದಾವೀದನು ದೇವರಿಗಾಗಿ ಹಾತೊರೆಯುತ್ತಾನೆ.

4. ಸಮಾನಾರ್ಥಕ ಸಮಾನಾಂತರತೆಗಳು:

ಅ. ವಚನ 4 ರಲ್ಲಿ: ವಚನದ ಎರಡು ಭಾಗಗಳಲ್ಲಿ ದಾವೀದನು ಒಂದೇ ಅಂಶವನ್ನು ಪುನರಾವರ್ತಿಸುತ್ತಾನೆ. "ಆತ್ಮ" ಮತ್ತು "ಮನಸ್ಸು" ಇವೆರಡೂ ಸಮಾನಾರ್ಥಕ ಪದಗಳಾಗಿವೆ.

ಆ. ವಚನ 10: ವಚನದ ಎರಡೂ ಭಾಗಗಳಲ್ಲಿನ ಅಂಶ ಒಂದೇ ಆಗಿದೆ. "ದೇವರು" ಮತ್ತು "ಶುಭಕಾರಿಯಾಗಿರುವ ನಿನ್ನ ಆತ್ಮ" ಇವೆರಡೂ ಸಮಾನಾರ್ಥಕ ಹೇಳಿಕೆಗಳಾಗಿವೆ.

ಇ. ವಚನ 11 ಮತ್ತು 12 ರಲ್ಲಿ (ಮೊದಲಾರ್ಧ): ದಾವೀದನು ಅದೇ ಆಲೋಚನೆಯನ್ನು ಮೂರು ಬಾರಿ ಪುನರಾವರ್ತಿಸುತ್ತಾನೆ. "ಕರ್ತನ ನಾಮದ ನಿಮಿತ್ತ", "ನಿನ್ನ ನೀತಿವಂತಿಕೆಯಲ್ಲಿ" ಮತ್ತು "ನಿನ್ನ ನಿಷ್ಫಲ ಪ್ರೀತಿಯಲ್ಲಿ" ಇವೆಲ್ಲವೂ ದೇವರ "ಸ್ಥಿರ ಪ್ರೀತಿ ಮತ್ತು ನಂಬಿಕೆ"ಯ ಪಾತ್ರವನ್ನು ಉಲ್ಲೇಖಿಸುತ್ತವೆ. "ನನ್ನ ಜೀವವನ್ನು ಕಾಪಾಡು", "ನನ್ನನ್ನು ತೊಂದರೆಯಿಂದ ಹೊರಗೆ ತರು" ಮತ್ತು "ನನ್ನ ಶತ್ರುಗಳನ್ನು ಮೌನಗೊಳಿಸು" ಇವು "ನನ್ನ ಶತ್ರುಗಳಿಂದ ನನ್ನನ್ನು ರಕ್ಷಿಸು" ಎಂದು ಹೇಳುವ ಮೂರು ಮಾರ್ಗಗಳಾಗಿವೆ.

5. ಸಂಯೋಜಿತ ಸಮಾನಾಂತರತೆಗಳು:

ಅ. ವಚನ 2 ರಲ್ಲಿ: ವಚನ 2 ಮೇಲಿನ ಟಿಪ್ಪಣಿ ನೋಡಿ.

ಆ. ವಚನ 8 ರಲ್ಲಿ:

- ಈ ವಚನದ ಎರಡು ಭಾಗಗಳು ದೈವಿಕ ಜೀವನದ ಎರಡು ಅಂಶಗಳನ್ನು ಪ್ರಸ್ತುತಪಡಿಸುತ್ತವೆ: ದೇವರು ಯಾರೆಂದು ತಿಳಿದುಕೊಳ್ಳುವುದು ಮತ್ತು ದೇವರ ಚಿತ್ತದ ಪ್ರಕಾರ ಬದುಕುವುದು. ಆದ್ದರಿಂದ ಅವು ಸಮಾನಾರ್ಥಕವಲ್ಲ, ಆದರೆ ಸಂಯೋಜಿತವಾಗಿವೆ.

- ಇದರ ಜೊತೆಗೆ, ಪ್ರತಿಯೊಂದು ಅರ್ಧವು ಸಂಯೋಜಿತ ಸಮಾನಾಂತರತೆಯನ್ನು ಸಹ ಒಳಗೊಂಡಿದೆ: ದಾವೀದನು ದೇವರು ತನ್ನ ಪ್ರಾರ್ಥನೆ ವಿನಂತಿಗಳಿಗೆ ಉತ್ತರಿಸಬೇಕೆಂದು ನಿರೀಕ್ಷಿಸಲು ಕಾರಣವೆಂದರೆ ದಾವೀದನು ಅವನ ಮೇಲಿನ ನಂಬಿಕೆ (ಮೊದಲಾರ್ಧ), ಇದನ್ನು "ನಿನಗಾಗಿ ನಾನು ನನ್ನ ಆತ್ಮವನ್ನು ಎತ್ತುತ್ತೇನೆ" (ದ್ವಿತೀಯಾರ್ಧ) ಎಂದು ಸಹ ವ್ಯಕ್ತಪಡಿಸಲಾಗಿದೆ. ಈ ಕಾರಣವನ್ನು ಎರಡು ಬಾರಿ ಉಲ್ಲೇಖಿಸಲಾಗಿದೆ ಎಂಬುದನ್ನು ಗಮನಿಸಿ, ಆದರೆ ವಿಭಿನ್ನ ಅಭಿವ್ಯಕ್ತಿಗಳೊಂದಿಗೆ (ಆದ್ದರಿಂದ ಇಲ್ಲಿ ನಾವು ಸಮಾನಾರ್ಥಕ ಸಮಾನಾಂತರತೆಯ ಉದಾಹರಣೆಯನ್ನು ಸಹ ಹೊಂದಿದ್ದೇವೆ).

ಇ. ವಚನ 12 ರಲ್ಲಿ (ದ್ವಿತೀಯಾರ್ಧ): ದಾವೀದನು ದೇವರು ತನ್ನ ಶತ್ರುಗಳನ್ನು ನಾಶಮಾಡಬೇಕೆಂದು ನಿರೀಕ್ಷಿಸಲು ಕಾರಣವೆಂದರೆ ದಾವೀದನು ದೇವರ "ಸೇವಕ". ಇದು ದಾವೀದನು ತನ್ನ ಒಡಂಬಡಿಕೆಯ ಪ್ರಭುವಿನೊಂದಿಗೆ ಹೊಂದಿದ್ದ ಸಂಬಂಧದ ಉಲ್ಲೇಖವಾಗಿದೆ.

ಕೀರ್ತನೆ 145 ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ವಿಷಯಾಂಶವನ್ನು ಆಧರಿಸಿ ಕೀರ್ತನೆ 145 ಅನ್ನು ಈ ರೀತಿ ರಚನೆ ಮಾಡಬಹುದು:

   ಅ. ಒಂದು ಯಾರು ಮಾತನಾಡುತ್ತಾರೆ ಎಂಬುದರ ಮೇಲೆ ಆಧಾರಿತವಾಗಿದೆ, ಈ ರೀತಿಯಾಗಿ:

   - ದಾವೀದನು ಸ್ವತಃ ವಚನ 1–3 ರಲ್ಲಿ **"ಮಾತನಾಡುತ್ತಾನೆ"**
   - ವಚನ 4–7 ರಲ್ಲಿ ಪೀಳಿಗೆಯಿಂದ ಪೀಳಿಗೆಗೆ **"ಮಾತನಾಡುತ್ತಾನೆ"**
   - ವಚನ 8–21 ರಲ್ಲಿ ಎಲ್ಲರೂ **"ಮಾತನಾಡುತ್ತಾರೆ** – ಆದರೆ ದಾವೀದನು, ಸಹಜವಾಗಿ ಇಡೀ ಕೀರ್ತನೆಯ ಲೇಖಕನಾಗಿದ್ದಾನೆ, ಆದ್ದರಿಂದ ಅವನು ತನ್ನ ಸ್ವಂತ ಮಾತುಗಳನ್ನು **"ಪೀಳಿಗೆಯಿಂದ ಪೀಳಿಗೆಗೆ"** ಮತ್ತು **"ಎಲ್ಲರಿಗೂ"** ಬಾಯಿಗೆ ಹಾಕುತ್ತಿದ್ದಾನೆ.

   ಆ. ಇನ್ನೊಂದು ರಚನೆಯು ವಿಷಯಗಳನ್ನು ಆಧರಿಸಿದೆ, ಈ ರೀತಿಯಾಗಿ:

   - ಪೀಠಿಕೆ, ವಚನ 1–2
   - ದೇವರು ಮಹೋನ್ನತನು, ವಚನ 3–7
   - ದೇವರು ದಯಾಮಯಿ, ವಚನ 8–13
   - ದೇವರು ನಂಬಿಗಸ್ತನು, ವಚನ 13–20
   - ಮುಕ್ತಾಯ, ವಚನ 21

2. ಈ ಕೀರ್ತನೆಯ ಒಂದು ಆಸಕ್ತಿದಾಯಕ ಲಕ್ಷಣವೇನೆಂದರೆ **"ಸ್ತುತಿಸುವುದಕ್ಕೆ"** ಇದು ಅನೇಕ ಸಮಾನಾರ್ಥಕಗಳನ್ನು ಬಳಸುತ್ತದೆ:

   - ಘನಪಡಿಸುವೆನು (ಇದರರ್ಥ ದೇವರು ಎಷ್ಟು ಮಹೋನ್ನತನೆಂದು ಹೇಳುವುದು), ವಚನ 1.
   - ಕೊಂಡಾಡು (ದೇವರ ಔದಾರ್ಯತೆಯನ್ನು ಹೇಳುವುದು), ವಚನ 2, 10, 21
   - ಕೀರ್ತಿಸು (ದೇವರ ಉನ್ನತತ್ವಕ್ಕಾಗಿ ಮಹಿಮೆ ಪಡಿಸುವುದು), ವಚನ 2, 21
   - ಹೊಗಳುವುದು, ವಚನ 4
   - ಧ್ಯಾನಿಸುವುದು (ಇದರರ್ಥ ದೇವರ ಬಗ್ಗೆ ಆಳವಾಗಿ ಯೋಚಿಸುವುದು), ವಚನ 5
   - ಪ್ರಸಿದ್ಧಿಪಡಿಸುವುದು, ವಚನ 6
   - ಪ್ರಕಟಪಡಿಸುವುದು, ವಚನ 7
   - ಹೊಗಳುವುದು, ವಚನ 7
   - ಕೃತಜ್ಞತೆ ಸಲ್ಲಿಸಿ, ವಚನ 10

   ದೇವರನ್ನು ಸಾಧ್ಯವಾದಷ್ಟು ಬಲವಾಗಿ ಮತ್ತು ಸುಂದರವಾಗಿ ಸ್ತುತಿಸುವ ಸಲುವಾಗಿ ತನ್ನೆಲ್ಲಾ ಕಾವ್ಯರೂಪಿ ಕಲೆಗಳನ್ನು ಬಳಸಬೇಕೆಂಬುದು ದಾವೀದನ ಆಸೆಯಾಗಿದ್ದಿರಬಹುದು. ಆ ಕಾರಣದಿಂದ ಆತನು ಅನೇಕ ಸಮಾನಾರ್ಥಕ ಹೇಳಿಕೆಗಳನ್ನು ಉಪಯೋಗಿಸುತ್ತಾನೆ. ನಿಜವಾಗಲೂ ದೇವರು ಈ ಎಲ್ಲಾ ಸ್ತುತಿಗಳಿಗೆ ಯೋಗ್ಯನೆಂಬುದಾಗಿ ಆತನು ಭಾವಿಸಿದನು.

3. ದಾವೀದನು ಈ ಸ್ತುತಿಯ **"ಶಾಶ್ವತವಾದ ಸ್ವಭಾವ"** (ಲಕ್ಷಣ) ವನ್ನು ವರ್ಣಿಸಲು ವಿಭಿನ್ನವಾದ ಪದಗಳನ್ನು ಬಳಸುತ್ತಾನೆ:

   ಅ. ಯುಗಯುಗಾಂತರ, ವಚನ 1, 2, 21

   ಆ. ವಂಶಪಾರಂಪರ್ಯ, ತಲತಲಾಂತರ, ವಚನ 4, 13

   ಇ. ಶಾಶ್ವತ, ವಚನ 13

4. ವಚನ 1–7 ರ ಪ್ರಕಾರ ದೇವರನ್ನು ಯಾಕೆ ಸ್ತುತಿಸಬೇಕೆಂಬುದಕ್ಕೆ ಕಾರಣಗಳ ಪಟ್ಟಿ ಇಂತಿದೆ:

   ಅ. ಆತನ ಅಗಾಧವಾದ ಮಹತ್ತಿಗಾಗಿ (ವಚನ 3)

   ಆ. ಆತನು ಮಾಡಿದ ಎಲ್ಲಾ ಸಂಗತಿಗಳಿಗಾಗಿ: ಆತನ ಮಹತ್ಕಾರ್ಯ, ಆತನ ಭಯಂಕರಕೃತ್ಯ ಮತ್ತು ಅದ್ಭುತಕಾರ್ಯಗಳಿಗಾಗಿ (ವಚನ 4, 5, 6).

   ಇ. ಆತನ ಮಹಾ ಪ್ರಭಾವಯುಕ್ತವಾದ ಮಹಿಮೆಗಾಗಿ (ವಚನ 5)

   ಈ. ಆತನ ಮಹೋಪಕಾರಕ್ಕಾಗಿ (ವಚನ 7)

   ಉ. ಆತನ ನೀತಿಗಾಗಿ (ವಚನ 7)

5. ಈ ಹಿಂದಿನ ಸಂತತಿಯ ಸ್ತುತಿಯು ಮೂರು ರೀತಿಯಲ್ಲಿ ದೇವರಿಗೆ ಪ್ರತಿಕ್ರಿಯಿಸುವಂತೆ ದಾವೀದನನ್ನು ಪ್ರೇರೇಪಿಸಿತು (ವಚನ 5–7, 21):

   ಅ. ದೇವರು ಮಾಡಿದ ಸಂಗತಿಗಳನ್ನು **ಧ್ಯಾನಿಸುವುದರ** ಮೂಲಕ ದಾವೀದನು ದೇವರಿಗೆ ಪ್ರತಿಕ್ರಿಯಿಸಿದನು (ವಚನ 5).

   ಆ. ದೇವರು ಮಾಡಿದ ಕಾರ್ಯಗಳನ್ನು **ಪ್ರಸಿದ್ಧಪಡಿಸುವುದರ** ಮೂಲಕ ದಾವೀದನು ದೇವರಿಗೆ ಪ್ರತಿಕ್ರಿಯಿಸಿದನು (ವಚನ 6).

   ಇ. ದೇವರು ಮಾಡಿದ ಕಾರ್ಯಗಳನ್ನು **ಹೊಗಳುವುದರ** ಮೂಲಕ ದಾವೀದನು ದೇವರಿಗೆ ಪ್ರತಿಕ್ರಿಯಿಸಿದನು (ವಚನ 7, 21).

6. ವಚನ 8–13 ರ ಪ್ರಕಾರ ರಾಜನಾದ (ಒಡೆಯ) ದೇವರು ಮತ್ತು ಆತನ ರಾಜ್ಯದ ಗುಣಲಕ್ಷಣಗಳ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ದೇವರು ದಯೆಯೂ, ಕನಿಕರವೂ ಉಳ್ಳವನು (ವಚನ 8, 9).

   ಆ. ದೇವರು ದೀರ್ಘಶಾಂತನೂ, ಪ್ರೀತಿಪೂರ್ಣನೂ ಆಗಿದ್ದಾನೆ (ವಚನ 8).

   ಇ. ದೇವರು ಸರ್ವೋಪಕಾರಿಯಾಗಿದ್ದಾನೆ (ವಚನ 9).

   ಈ. ಆತನ ರಾಜ್ಯವು ಮಹತ್ತಿನಿಂದಲೂ, ಮಹಾಪ್ರಭಾವದಿಂದಲೂ ತುಂಬಿದೆ (ವಚನ 11, 12).

   ಉ. ಆತನ ರಾಜ್ಯವು ಶಾಶ್ವತವಾಗಿದೆ (ವಚನ 13).

7. ವಚನ 13–20: ಸೃಷ್ಟಿಗಳು ಮತ್ತು ಜನರು ಮತ್ತು ದೇವರು ಹೇಗೆ ಅವರೊಂದಿಗೆ ಕಾರ್ಯಮಾಡುತ್ತಾನೆ ಎಂಬುದನ್ನು ಮುಂದಿನ ನಕಾಶೆಯಲ್ಲಿ ನೋಡಿರಿ.

ಸೃಷ್ಟಿ/ವ್ಯಕ್ತಿ	ಅವರೊಂದಿಗೆ ದೇವರ ಕಾರ್ಯ
ಆತನ ಸೃಷ್ಟಿ, ವಚನ 13	ದೇವರು ಅದನ್ನು ಕರುಣಿಸುತ್ತಾನೆ, ವಚನ 13
ಬಿದ್ದವರು, ಕುಗ್ಗಿದವರು, ವಚನ 14	ಎತ್ತುತ್ತಾನೆ ಮತ್ತು ಉದ್ಧರಿಸುತ್ತಾನೆ, ವಚನ 14
ಎಲ್ಲಾ ಜೀವಿಗಳು, ವಚನ 15	ತಕ್ಕ ಸಮಯದಲ್ಲಿ ಆಹಾರ ಕೊಡುವನು, ವಚನ 15
ಎಲ್ಲಾ ಜೀವಿಗಳು, ವಚನ 16	ಇಷ್ಟವನ್ನು ನೆರವೇರಿಸುತ್ತಾನೆ, ವಚನ 16
ಆತನ ಎಲ್ಲಾ ಸೃಷ್ಟಿ, ವಚನ 17	ಪ್ರೀತಿಯನ್ನು ತೋರಿಸುತ್ತಾನೆ, ವಚನ 17
ಯಥಾರ್ಥವಾಗಿ ಮೊರೆಯಿಡುವವರು, ವಚನ 18	ಹತ್ತಿರವಾಗಿದ್ದಾನೆ, ವಚನ 18
ಆತನಲ್ಲಿ ಭಯಭಕ್ತಿಯುಳ್ಳವರು, ವಚನ 19	ಇಷ್ಟವನ್ನು ನೆರವೇರಿಸುತ್ತಾನೆ, ವಚನ 19
ಆತನಿಗೆ ಭಯಪಡುವವರು, ವಚನ 19	ಅವರ ಕೂಗನ್ನು ಕೇಳಿ ರಕ್ಷಿಸುತ್ತಾನೆ, ವಚನ 19
ಆತನನ್ನು ಪ್ರೀತಿಸುವವರು, ವಚನ 20	ಅವರನ್ನು ಕಾಪಾಡುತ್ತಾನೆ, ವಚನ 20
ದುಷ್ಟರು, ವಚನ 20	ಅವರನ್ನು ಸಂಹರಿಸುತ್ತಾನೆ, ವಚನ 20

8. ದಾವೀದನು ಈ ಕೀರ್ತನೆಯನ್ನು ಮುಕ್ತಾಯಗೊಳಿಸುವಾಗ, ಆತನು ದೇವರನ್ನು ಸ್ತುತಿಸಿಕೊಂಡಾಡುವುದರ ಮೂಲಕ ದೇವರ ಗುಣ/ಲಕ್ಷಣವನ್ನು ಕೀರ್ತಿಸುತ್ತಾನೆ (ವಚನ 21).

ವಿಷಯಾಂಶಗಳು

ಯೋಬ

ಯೋಬ ಪುಸ್ತಕಕ್ಕೆ ಪೀಠಿಕೆ 3
ಯೋಬ ಅಧ್ಯಯನ 1: ಒಳ್ಳೆಯ ಮತ್ತು ಕೆಟ್ಟ ಸಮಯ 6
ಯೋಬ ಅಧ್ಯಯನ 2: "ಸುಮ್ಮನೆ ಏನೂ ಬರುವುದಿಲ್ಲ" 8
ಯೋಬ ಅಧ್ಯಯನ 3: "ನನಗೇ ಯಾಕೆ?" 11
ಯೋಬ ಅಧ್ಯಯನ 4: ಜ್ಞಾನಕ್ಕಾಗಿ ಮಾನವನ ಹುಡುಕಾಟ 13
ಯೋಬ ಅಧ್ಯಯನ 5: "ನಾನು ನಿರ್ದೋಷಿ" 15
ಯೋಬ ಅಧ್ಯಯನ 6: ದೇವರು ಮಾತನಾಡುವುದು 17
ಯೋಬನ ಅಧ್ಯಯನ 7: ಒಂದು ಹರ್ಷದ ಮುಕ್ತಾಯ ಮತ್ತು ಉತ್ತರಿಸಲ್ಪಡದ ಪ್ರಶ್ನೆಗಳು 19
ಯೋಬ: ಪರೀಕ್ಷಾ ಪ್ರಶ್ನೆಪತ್ರಿಕೆ 21

ಇಬ್ರಿಯ ಪದ್ಯ ಮತ್ತು ಜ್ಞಾನ

ಇಬ್ರಿಯ ಪದ್ಯಕ್ಕೆ ಪೀಠಿಕೆ 22
ಹಳೇ ಒಡಂಬಡಿಕೆಯಲ್ಲಿನ ಪದ್ಯರೂಪಿ ಪಠ್ಯಗಳು 24
ಚಿತ್ರಣ 27
ಸಮಾನಾಂತರತೆ 33
ಇಬ್ರಿಯ ಪದ್ಯದಲ್ಲಿನ ಇತರ ರೀತಿಯ ರಚನೆಗಳು 37
ಇಬ್ರಿಯ ಜ್ಞಾನದ ಅಸ್ತಿವಾರ 41
ಇಬ್ರಿಯ ಜ್ಞಾನದ ಪ್ರಸ್ತಾವನೆ 49
ಚಾರ್ಟ್: ಜ್ಞಾನ ಮತ್ತು ಒಡಂಬಡಿಕೆ 51
ಇಬ್ರಿಯ ಜ್ಞಾನ ಮತ್ತು ಮಾನವನ ಅನುಭವ 52

ಕೀರ್ತನೆಗಳು

ಕೀರ್ತನೆ 1 56
ಕೀರ್ತನೆ 2 58
ಕೀರ್ತನೆಗಳ ಪರಿಚಯ 61
ಕೀರ್ತನೆ 3 66
ಶಪಿಸುವ ಕೀರ್ತನೆಗಳು 69
ತಲೆಬರಹಗಳು ಮತ್ತು ಗ್ರಂಥಕರ್ತತ್ವ 71
ಕೀರ್ತನೆ 4 74
ಕೀರ್ತನೆಗಳ ದೈವಶಾಸ್ತ್ರೀಯ ಲಕ್ಷಣ 76

ಕೀರ್ತನೆ 6 78
ಕೀರ್ತನೆಗಳನ್ನು ವ್ಯಾಖ್ಯಾನಿಸುವುದು 81
ಕೀರ್ತನೆ 8 83
ಕೀರ್ತನೆ 16 86
ಕೀರ್ತನೆಯ ವಿಧಗಳು 88
ಕೀರ್ತನೆ 19 92
ಕೀರ್ತನೆ 23 95
ಕೀರ್ತನೆ 27 97
ಕೀರ್ತನೆ 32 100
ಕೀರ್ತನೆ 34 103
ಕೀರ್ತನೆ 37 106
ಪ್ರಮುಖ ದೈವಶಾಸ್ತ್ರೀಯ ವಿಷಯವಸ್ತುಗಳು 109
ಕೀರ್ತನೆ 38 120
ಕೀರ್ತನೆ 40 122
ಕೀರ್ತನೆಗಳು 42–43 126
ಕೀರ್ತನೆ 46 129
ಕೀರ್ತನೆ 51 132
ಕ್ರಿಸ್ತನನ್ನು ಕುರಿತು ಹೇಳುವ ಕೀರ್ತನೆಗಳು 135
ಕೀರ್ತನೆ 73 138
ಕೀರ್ತನೆ 84 141
ಕೀರ್ತನೆ 91 143
ಕೀರ್ತನೆ 102 146
ಕೀರ್ತನೆ 103 149
ಕೀರ್ತನೆ 105 152
ಕೀರ್ತನೆ 110 155
ಕೀರ್ತನೆ 111 158
ಕೀರ್ತನೆ 112 160
ಕೀರ್ತನೆ 126 162
ಕೀರ್ತನೆ 127 164
ಕೀರ್ತನೆ 130 166
ಕೀರ್ತನೆ 137 168
ಕೀರ್ತನೆ 138 170
ಕೀರ್ತನೆ 139 172

ಕೀರ್ತನೆ 143 175
ಕೀರ್ತನೆ 145 178
ಪರೀಕ್ಷಾ ಪತ್ರಿಕೆ: ಕೀರ್ತನೆಗಳು 181

ಯೋಬ ಉತ್ತರಗಳು

ಯೋಬ ಉತ್ತರಗಳು 1: ಒಳ್ಳೆಯ ಮತ್ತು ಕೆಟ್ಟ ಸಮಯ 182
ಯೋಬ ಉತ್ತರಗಳು 2: "ಸುಮ್ಮನೆ ಏನೂ ಬರುವುದಿಲ್ಲ" 185
ಯೋಬ ಉತ್ತರಗಳು 3: "ನನಗೇ ಯಾಕೆ?" 189
ಯೋಬ ಉತ್ತರಗಳು 4: ಜ್ಞಾನಕ್ಕಾಗಿ ಮನುಷ್ಯನ ಹುಡುಕಾಟ 192
ಯೋಬ ಉತ್ತರಗಳು 5: "ನಾನು ನಿರ್ಮಲನು" 195
ಯೋಬ ಉತ್ತರಗಳು 6: ದೇವರು ಮಾತನಾಡುತ್ತಾನೆ 198
ಯೋಬ ಉತ್ತರಗಳು 7: ಒಂದು ಸುತಸಮಯ ಅಂತ್ಯ ಮತ್ತು ಉತ್ತರಿಸಲಾರದ ಪ್ರಶ್ನೆಗಳು 203

ಇಬ್ರಿಯ ಪದ್ಯ ಮತ್ತು ಜ್ಞಾನ – ಉತ್ತರಗಳು

ಇಬ್ರಿಯ ಜ್ಞಾನದ ಸನ್ನಿವೇಶಗಳು – ಉತ್ತರಗಳು 206

ಕೀರ್ತನೆಗಳು – ಉತ್ತರಗಳು

ಕೀರ್ತನೆ 1 – ಉತ್ತರಗಳು 208
ಕೀರ್ತನೆ 2 – ಉತ್ತರಗಳು 211
ಕೀರ್ತನೆ 3 – ಉತ್ತರಗಳು 215
ಕೀರ್ತನೆ 4 – ಉತ್ತರಗಳು 217
ಕೀರ್ತನೆ 6 – ಉತ್ತರಗಳು 219
ಕೀರ್ತನೆ 8 – ಉತ್ತರಗಳು 221
ಕೀರ್ತನೆ 16 – ಉತ್ತರಗಳು 224
ಕೀರ್ತನೆ 19 – ಉತ್ತರಗಳು 226
ಕೀರ್ತನೆ 23 – ಉತ್ತರಗಳು 229
ಕೀರ್ತನೆ 27 – ಉತ್ತರಗಳು 232
ಕೀರ್ತನೆ 32 – ಉತ್ತರಗಳು 235
ಕೀರ್ತನೆ 34 – ಉತ್ತರಗಳು 239
ಕೀರ್ತನೆ 37 – ಉತ್ತರಗಳು 242
ಕೀರ್ತನೆ 38 – ಉತ್ತರಗಳು 246
ಕೀರ್ತನೆ 40 – ಉತ್ತರಗಳು 251
ಕೀರ್ತನೆ 42–43 – ಉತ್ತರಗಳು 255

ಕೀರ್ತನೆ 46 – ಉತ್ತರಗಳು 257
ಕೀರ್ತನೆ 51 – ಉತ್ತರಗಳು 260
ಕೀರ್ತನೆ 73 – ಉತ್ತರಗಳು 263
ಕೀರ್ತನೆ 84 – ಉತ್ತರಗಳು 265
ಕೀರ್ತನೆ 91 – ಉತ್ತರಗಳು 268
ಕೀರ್ತನೆ 102 – ಉತ್ತರಗಳು 271
ಕೀರ್ತನೆ 103 – ಉತ್ತರಗಳು 274
ಕೀರ್ತನೆ 105 – ಉತ್ತರಗಳು 278
ಕೀರ್ತನೆ 110 – ಉತ್ತರಗಳು 281
ಕೀರ್ತನೆ 111 – ಉತ್ತರಗಳು 283
ಕೀರ್ತನೆ 112 – ಉತ್ತರಗಳು 285
ಕೀರ್ತನೆ 126 – ಉತ್ತರಗಳು 287
ಕೀರ್ತನೆ 127 – ಉತ್ತರಗಳು 289
ಕೀರ್ತನೆ 130 – ಉತ್ತರಗಳು 291
ಕೀರ್ತನೆ 137 – ಉತ್ತರಗಳು 293
ಕೀರ್ತನೆ 138 – ಉತ್ತರಗಳು 295
ಕೀರ್ತನೆ 139 – ಉತ್ತರಗಳು 297
ಕೀರ್ತನೆ 143 – ಉತ್ತರಗಳು 301
ಕೀರ್ತನೆ 145 – ಉತ್ತರಗಳು 304